19-06-2017

ದಿನಾಂಕ: 19-06-2017-11.20 (06) AJ/SP

ಕರ್ನಾಟಕ ವಿಧಾನಸಭೆ
ಸೋಮವಾರ ದಿನಾಂಕ 19ನೇ ಜೂನ್ 2017
14ನೇ ವಿಧಾನಸಭೆ, 14ನೇ ಅಧಿವೇಶನ
ವಿಷಯಾನುಕ್ರಮಣಿಕೆ
(INDEX)

1.ಆರ್.ಎಸ್.ಎಸ್. ಮುಖಂಡರಾದ ಡಾ:ಕಲ್ಲಡ್ಕ ಪ್ರಭಾಕರ ಭಟ್‌ರ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)
ಶ್ರೀ ವಿ.ಸುನೀಲ್ ಕುಮಾರ್
ಶ್ರೀ ವಿಶ್ವೇಶ್ವರ ಹೆಗೆಡೆ ಕಾಗೇರಿ
ಶ್ರೀ ಕೆ.ಜಿ.ಬೋಪಯ್ಯ
ಶ್ರೀ ಎಸ್. ಅಂಗಾರ
ಶ್ರೀ ಬಿ.ರಮಾನಾಥ ರೈ (ಅರಣ್ಯ ಸಚಿವರು)
ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) (6-12)

2.ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆಗೆ ಮನವಿ.

ವಿಷಯ:ಬನ್ನೇರುಘಟ್ಟದ ಹತ್ತಿರ ಕೆಲವೊಂದು ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ.
ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)

3.ವರದಿಯನ್ನೊಪಿಸುವುದು.

ಡಾ:ಎ.ಬಿ.ಮಾಲಕರೆಡ್ಡಿ (ಅಧ್ಯಕ್ಷರು, ಸಾರ್ವಜನಿಕ ಉದ್ಯಮಗಳ ಸಮಿತಿ)
ವಿಷಯ:ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ 132ನೇ ವರದಿ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

4.ಪ್ರಶ್ನೋತ್ತರಗಳು.

ಅ.ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳ ಮಂಡನೆ.

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ದಿನಾಂಕ:16.06.2017ರ ಹತ್ತನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 168 ಪ್ರಶ್ನೆಗಳ ಪೈಕಿ 141 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು. (ಅನುಬಂಧ-1)

5.ವಿತ್ತೀಯ ಕಾರ್ಯಕಲಾಪಗಳು.

2017-18ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ.

ಶ್ರೀ ಎನ್.ಹೆಚ್.ಕೋನರೆಡ್ಡಿ
ಶ್ರೀ ಕೆ.ಎಸ್.ಪುಟ್ಟಣ್ಣಯ್ಯ
ಶ್ರೀ ಸಿದ್ದು ಬಿ ನ್ಯಾಮಗೌಡ
ಶ್ರೀ ಲಕ್ಷ್ಮಣ ಸಂಗಪ್ಪ ಸವದಿ
ಶ್ರೀ ಗುರುಪಾಟೀಲ್ ಶಿರವಾಳ
ಶ್ರೀ ಅಶೋಕ್ ಖೇಣಿ
ಶ್ರೀ ಬಿ.ಆರ್.ಯಾವಗಲ್
ಡಾ: ಎಸ್.ಶಿವರಾಜ್ ಪಾಟೀಲ್
ಶ್ರೀ ಬಿ.ಆರ್.ಪಾಟೀಲ್
ಡಾ: ಸಿ.ಎನ್.ಅಶ್ವತ್ಥನಾರಾಯಣ (11-36)

6.ಶಾಸನ ರಚನೆ.

ವಿಧೇಯಕಗಳನ್ನು ಮಂಡಿಸಲು ಅನುಮತಿ ಕೋರಿಕೆ

ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ) ವಿಧೇಯಕ, 2017

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
(ಸಮಾಜ ಕಲ್ಯಾಣ ಸಚಿವರ ಪರವಾಗಿ)
(ವಿಧೇಯಕವನ್ನು ಮಂಡಿಸಲಾಯಿತು)

(ಅನುಬಂಧ-2)

ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕ, 2017

ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)
(ವಿಧೇಯಕವನ್ನು ಮಂಡಿಸಲಾಯಿತು)

(ಅನುಬಂಧ-3)

7.ವಿತ್ತೀಯ ಕಾರ್ಯಕಲಾಪಗಳು.

2017-18ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ.

ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)
ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು)
ಶ್ರೀ ಡಿ.ಕೆ.ಶಿವಕುಮಾರ್ (ಇಂಧನ ಸಚಿವರು)

8.ಅನುಬಂಧಗಳು-3.

****

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕರ್ನಾಟಕ ವಿಧಾನಸಭೆ

ಸೋಮವಾರ, ದಿನಾಂಕ 19ನೇ ಜೂನ್ 2017 ರಂದು

ಸದನವು ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 23 ನಿಮಿಷಕ್ಕೆ

ಸಮಾವೇಶಗೊಂಡಿತು

ಮಾನ್ಯ ಅಧ್ಯಕ್ಷರಾದ ಶ್ರೀ ಕೆ.ಬಿ.ಕೋಳಿವಾಡ್ ರವರು

ಪೀಠದಲ್ಲಿ ಉಪಸ್ಥಿತರಿದ್ದರು

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

19-06-2017

(ಸದನವು ಬೆಳಿಗ್ಗೆ 11 ಗಂಟೆ 23 ನಿಮಿಷಕ್ಕೆ ಸಮಾವೇಶಗೊಂಡಾಗ, ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ರಮಾನಾಥ್ ರೈ ಅವರು Assembly ಯಲ್ಲಿ ಗೊಂದಲ ಮಾಡಿಕೊಳ್ಳುತ್ತಿದ್ದರು. ಹೊರಗಡೆ ನಿನ್ನೆಯಿಂದಲೂ ರಮಾನಾಥ್ ರೈ ಅವರ ನಡವಳಿಕೆ ಯಾವ ರೀತಿಯಿದೆ ಎನ್ನುವುದನ್ನು ಟಿ.ವಿ. ಮಾಧ್ಯಮದಲ್ಲಿ ತೋರಿಸುತ್ತಿದ್ದಾರೆ ಮತ್ತು ಇಂದಿನ ದಿನಪತ್ರಿಕೆಗಳಲ್ಲಿ ಬೆಳಿಗ್ಗೆ ವರದಿ ಪ್ರಕಟವಾಗಿದೆ. ಇವರು ಏನು ಮಾತನಾಡಿದ್ದಾರೆ ಎನ್ನುವುದು record ಆಗಿದೆ. ಆರ್.ಎಸ್.ಎಸ್. ಮುಖಂಡರಾದಂತಹ ಡಾ. ಕಲ್ಲಡ್ಕ ಪ್ರಭಾಕರ ಭಟ್ ಅವರ ಬಗ್ಗೆ, ಒಬ್ಬ ಸಚಿವರಾಗಿ ಯಾವ ರೀತಿ ಹೇಳುತ್ತಾರೆಂದರೆ, ಕಲ್ಲಡ್ಕ ಪ್ರಭಾಕರ ಭಟ್ ಅವರ ವಿರುದ್ಧ Section 307 ಕೇಸ್ ಜಡಿದು ಒಳಗೆ ಹಾಕಿ ಎಂದು ಹೇಳುತ್ತಾರೆ. ಈ ಮಾತನ್ನು ಹೇಳುವುದಕ್ಕೆ ಇವರ್ಯಾರು? ಇವರಿಗೆ ಆ case ಹಾಕುವುದಕ್ಕೆ ಹಕ್ಕಿದೆಯೇ? ಎಸ್.ಪಿ. ಅವರನ್ನು ಮುಂದೆ ಕೂರಿಸಿಕೊಂಡು, ಅವರ ಹತ್ತಿರ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು : ಅವರು ಆ ರೀತಿ ಹೇಳಿದ್ದಾರೆಂದು record ಆಗಿದೆಯೇ?

ಶ್ರೀ ಜಗದೀಶ್ ಶೆಟ್ಟರ್ : Record ಆಗಿದೆ, ಸಿ.ಡಿ. ಇದೆ. ಎಲ್ಲಾ ಕಡೆ whatsapp ನಲ್ಲಿ ಸುದ್ದಿ viral ಆಗಿದೆ. ಒಬ್ಬ ಸಚಿವರಾಗಿ ಪೊಲೀಸರ investigation ನಲ್ಲಿ intervene ಮಾಡುತ್ತಾರೆಂದರೆ ಮಂತ್ರಿಗಳಾಗಿ ಮುಂದುವರೆಯುವುದಕ್ಕೆ ನೈತಿಕತೆ ಏನಿದೆ? ಪ್ರಭಾಕರ ಭಟ್ ಅವರ ವಿರುದ್ಧ case ಹಾಕಿ ಎಂದು ಎಸ್.ಪಿ. ಅವರಿಗೆ direction ಕೊಡುತ್ತಾರೆ. ಅವರು ಏನು ಭಾಷಣ ಏನು ಮಾಡುತ್ತಾರೋ ಮಾಡಲಿ, case ಹಾಕಿ ಒಳಗೆ ಹಾಕಿ. ಅವರ ಹೇಗೆ ಹೊರಗೆ ಬರುತ್ತಾರೆ?

ಅಧ್ಯಕ್ಷರು : ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರೋ ಅಥವಾ . . . .

19-06-2017

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಯಾವ ರೀತಿ ಹೇಳಿದ್ದಾರೆನ್ನುವುದನ್ನು ಹೇಳುತ್ತೇನೆ. ಸೆಕ್ಷನ್ 307 ರನ್ವಯ ಕೇಸ್ ಹಾಕಿ. ಪ್ರಭಾಕರ ಭಟ್ ಒಬ್ಬ ಪುಕ್ಕಲ ಅವನನ್ನು ಅರೆಸ್ಟ್ ಮಾಡಿದರೆ, ಯಾರೂ ಏನೂ ಮಾಡುವುದಿಲ್ಲ. ನಾನು ಪ್ರಮಾಣ ಪೂರ್ವಕವಾಗಿ ಹೇಳುತ್ತೇನೆ. ಆರ್.ಎಸ್.ಎಸ್. ನ ಒಬ್ಬ ಪ್ರಮುಖ ನಾಯಕರನ್ನು ಏಕವಚನದಲ್ಲಿ ಅವನು ಭಾಷಣ ಮಾಡಿದರೆ, ನೀವು ಅವನ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಸೆಕ್ಷನ್ 307 ಕೇಸ್ ಮಾಡಿ ಅವನು ಹೊರಗೆ ಬಂದರೆ, ಹೇಳಿದ ಹಾಗೆ ಕೇಳುತ್ತೇನೆ. ಅವನು ಅಷ್ಟು ದೊಡ್ಡ ಜನ ಅಲ್ಲ ಎಂದು ಹೇಳುತ್ತಾರೆ. ಹಿರಿಯ ಆರ್.ಎಸ್.ಎಸ್. ಮುಖಂಡ ಡಾ. ಕಲ್ಲಡ್ಕ ಪ್ರಭಾಕರ್ ಭಟ್ ಅವರನ್ನು ಕುರಿತಂತೆ, ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರು ರಮಾನಾಥ್ ರೈ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೂಷಣ್ ಬೊರಸೆ ಅವರನ್ನು ತಮ್ಮ ಸ್ವಕ್ಷೇತ್ರ ಬಂಟ್ವಾಳಕ್ಕೆ ಕರೆಸಿ, ಮಾತುಕತೆ ನಡೆಸಿದ ತುಣುಕು ಇದು. ರಮಾನಾಥ್ ರೈ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂಬ ಆಗ್ರಹ ಮತ್ತೊಂದು ಕಡೆ ನಡೆಯುತ್ತಿದೆ. ಈ ರೀತಿ open ಆಗಿ ವಯಸ್ಸಾದವರು, widower ಆಗಿದ್ದಂತಹವರು ಯಾರೂ ಗಲಾಟೆ ಮಾಡುವುದಿಲ್ಲ. ನಾನು ಸತ್ಯವನ್ನೇ ಹೇಳುತ್ತೇನೆ. ಇದು ಮಂಡ್ಯ ಅಲ್ಲ ಇಂಡಿಯಾ. ನನಗೆ ಇಲ್ಲಿ ಎಲ್ಲವೂ ಗೊತ್ತುಂಟು. ಆದರೆ ನಿಮಗೆ ಅಂದರೆ ಎಸ್.ಪಿ. ಅವರು ಹೇಳಿರುವುದು. ನಿಮಗೆ ಎಲ್ಲವೂ ಗೊತ್ತುಂಟು. ಇಲ್ಲಿಯ ಪರಿಚಯವಾಗುವುದಿಲ್ಲ. ನಾನು ಕೆಲವು ಬಾರಿ ನಿಮ್ಮಲ್ಲಿ ಹೇಳಿದ್ದೇನೆ. ನೀವು ಮಂಡ್ಯದಿಂದ ಬಂದಿದ್ದೀರಿ. ಅಲ್ಲಿಯ ವಿಚಾರವೇ ಬೇರೆ, ಇಲ್ಲಿಯ ವಿಚಾರವೇ ಬೇರೆ. ನೇತ್ರಾವತಿ ಹೋರಾಟವನ್ನೂ ಮಾಡುತ್ತೇನೆ. ಇದು ಮಾಡುತ್ತೇನೆ ಎನ್ನುತ್ತೀರಿ. ಆದರೆ ಪ್ರಭಾಕರ್ ಭಟ್ ಅವರನ್ನು ಅರೆಸ್ಟ್ ಮಾಡಿ. ಅವರನ್ನು ಅರೆಸ್ಟ್ ಮಾಡಿದರೆ ಯಾರೂ ಏನೂ ಮಾಡುವುದಿಲ್ಲ. ನಾನೇ ಅವನನ್ನು ಈ ಹಿಂದೆ ಬಿ.ಸಿ. ರೋಡ್‌ನಲ್ಲಿ ಚುನಾವಣೆ ಸಂದರ್ಭದಲ್ಲಿ ಓಡಿಸಿದ್ದೇನೆ. ಆಗ ಅವರ ಜೊತೆ ಇರುವವರು ನಾನಲ್ಲ ನಾನಲ್ಲ ಎಂದು ಅವರ ಓಡಿ ಹೋದರು. ನಿಜಲಿಂಗಪ್ಪನವರೇ ಇದಕ್ಕೆ ಸಾಕ್ಷಿ. ಕೆಲವು ಹುಡುಗರಿಗೆ ಇದೆಲ್ಲಾ ನಮಗೆ ಗೊತ್ತಿಲ್ಲ ಎಂದು ಹೇಳಿದರು. ನಾನು ಮೊದಲು ಎಂ.ಎಲ್.ಎ. ಆದ ಸಂದರ್ಭದಲ್ಲಿ ಬಿ.ಸಿ. ರೋಡ್ ನಲ್ಲಿ 10 ಪೊಲೀಸರು ಮಾತ್ರ ಇದ್ದರು. ಶಾಲಿನಿ ಗೋಯಲ್ ಎನ್ನುವ ಪೋಲಿಸರಿದ್ದರು ಎಂದು ಹೇಳಿ ಈ ವಿಡಿಯೋ ಕೊನೆಗೊಳ್ಳುತ್ತದೆ.

19-06-2017

ಅಧ್ಯಕ್ಷರು : ಮಾನ್ಯ ಗೃಹ ಸಚಿವರ ಕಡೆಯಿಂದ ಉತ್ತರ ಕೊಡಿಸುತ್ತೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸಚಿವರ ಸ್ಥಾನದಲ್ಲಿ ಇರುವುದಕ್ಕೆ ಅವರು ಉಪಯೋಗವಿಲ್ಲ, ಜವಾಬ್ದಾರಿಯಿಲ್ಲ.

(ಗೊಂದಲ)

ಶ್ರೀ ವಿ. ಸುನಿಲ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಕಲ್ಲಡ್ಕದ ಗಲಾಟೆಗೆ ಸಂಬಂಧಪಟ್ಟಂತೆ investigation . . . .

(ಗೊಂದಲ)

ಅಧ್ಯಕ್ಷರು : ಇದರ ಬಗ್ಗೆ ಗಮನ ಸೆಳೆದಿದ್ದೀರಲ್ಲಾ?

(ಗೊಂದಲ)

ಶ್ರೀ ವಿ.ಸುನಿಲ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಕಲ್ಲಡ್ಕದಲ್ಲಿ ಕಳೆದ ವಾರ ನಡೆದಂತಹ ಘಟನೆಗಳ ಹಿನ್ನೆಲೆಯಲ್ಲಿ ತನಿಖೆ ನಡೆಯುತ್ತಿದೆ.

(ಗೊಂದಲ)

ಅಧ್ಯಕ್ಷರು : ಆಯಿತು. ಮೊದಲು ಇದರ ಬಗ್ಗೆ ಏನು ಹೇಳುತ್ತಾರೆನ್ನುವುದನ್ನು ಕೇಳೋಣ. ನೀವು ಗಮನಕ್ಕೆ ತಂದಿದ್ದೀರಿ, ಓದಿದ್ದೀರಿ.

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಕೆ.ಜಿ. ಬೋಪಯ್ಯ : ಅವರೇ ಈ ರೀತಿಯ ಪ್ರಚೋದನಕಾರಿ ಹೇಳಿಕೆಗಳನ್ನು ನೀಡುತ್ತಿರುವುದರಿಂದ ಅವರೇ ನೇರವಾಗಿ ಹೊಣೆ ಹೊತ್ತೂಳ್ಳಬೇಕಾಗುತ್ತದೆ. ಮಂತ್ರಿ ಎನ್ನುವುದನ್ನು ಮರೆತಿದ್ದಾರೆ.

(ಗೊಂದಲ)

ಶ್ರೀ ವಿ. ಸುನಿಲ್ ಕುಮಾರ್ : ಪೊಲೀಸ್ ಇಲಾಖೆ ಯಾವ ರೀತಿಯ ತನಿಖೆಗಳನ್ನು ಮಾಡಿದರೂ ಸಿದ್ದರಿದ್ದೇವೆ. ತನಿಖೆ ಹೀಗೆ ಆಗಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವರು ತನ್ನ ಕಾರ್ಯಕರ್ತರನ್ನು ಐ.ಬಿ. ಯಲ್ಲಿ ಕೂರಿಸಿಕೊಂಡು ಮಾತನಾಡುತ್ತಾರೆಂದರೆ ಯಾವ ನೈತಿಕತೆ ಇದೆ? ಪ್ರಭಾಕರ ಭಟ್ಟರ ಸಾಮಾಜಿಕ ನೈತಿಕತೆಯ ಯೋಗ್ಯತೆ ಇವರಿಗಿಲ್ಲ. ತಕ್ಷಣ ರಾಜೀನಾಮೆ ಕೊಡಬೇಕು ಮಾನ್ಯ ಅಧ್ಯಕ್ಷರೆ.

(ಗೊಂದಲ)

ಅಧ್ಯಕ್ಷರು : ನಿಮ್ಮ ಲೀಡರ್ ಎಲ್ಲಾ ವಿಚಾರಗಳನ್ನು ಹೇಳಿದ್ದಾರಲ್ಲವೇ?

(ಗೊಂದಲ)

ಶ್ರೀ ವಿ. ಸುನಿಲ್ ಕುಮಾರ್ : ಬೇಕಾಬಿಟ್ಟಿ ತನಿಖೆಗಳನ್ನು ಮಾಡಿಯೆಂದು ಸಚಿವರೊಬ್ಬರು ಹೇಳಿರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗುತ್ತಿರುವಂತಹ ಘಟನೆಗಳಿಗೆ ಇವರೇ ಕಾರಣ. ಬೇರೆ ಯಾರೂ ಅಲ್ಲ. ಪೊಲೀಸ್ ಇಲಾಖೆಯನ್ನು ಹೇಗೆ ಬೇಕಾದರೂ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಯಾವ ಕಾರಣಕ್ಕೆ ಸೆಕ್ಷನ್ 307ರನ್ವಯ ಕೇಸು ದಾಖಲಿಸಿದ್ದಾರೆ? ತನಿಖೆಗಳನ್ನು ದಿಕ್ಕು ತಪ್ಪಿಸುವಂತಹ ಕೆಲಸವನ್ನು ಸ್ವತ: ಜಿಲ್ಲಾ ಉಸ್ತುವಾರಿ ಸಚಿವರೇ ಮಾಡುತ್ತಿದ್ದಾರೆ. ಟಿ.ವಿ.ಗಳಲ್ಲಿ ರೆಕಾರ್ಡ್ ಆಗಿದೆ.

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಜಗದೀಶ್ ಶೆಟ್ಟರ್ : ಕಲ್ಲಡ್ಕ ಪ್ರಭಾಕರ ಭಟ್ ಒಬ್ಬ ಪುಕ್ಕಲ ಅವನನ್ನು ಅರೆಸ್ಟ್ ಮಾಡಿದರೆ, ಯಾರೂ ಏನೂ ಮಾಡುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಈಗಾಗಲೇ ಓದಿದ್ದೀರಿ, ಎಲ್ಲಾ ವಿಷಯವನ್ನು ಹೇಳಿದ್ದೀರಿ.

(ಗೊಂದಲ)

ಶ್ರೀ ವಿ. ಸುನಿಲ್ ಕುಮಾರ್ : ಸೆಕ್ಷನ್ 307ರನ್ವಯ ಕೇಸ್ ದಾಖಲಿಸಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವರು ಹೇಗೆ ಹೇಳುತ್ತಾರೆ? ಇದು ಪೊಲೀಸ್ ಇಲಾಖೆಯನ್ನು ದುರುಪಯೋಗ ಮಾಡುವಂತಹ ಪ್ರಯತ್ನ.

(ಗೊಂದಲ)

ಅಧ್ಯಕ್ಷರು : ನಿಮ್ಮ ನಾಯಕರು ಹೇಳಿದ್ದಾರಲ್ಲವೇ?

(ಗೊಂದಲ)

ಶ್ರೀ ವಿ. ಸುನಿಲ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನಾನು ಆ ಜಿಲ್ಲೆಗೆ ಸಂಬಂಧಪಟ್ಟಂತಹನಾಗಿ ರುತ್ತೇನೆ. ಇವತ್ತು ಈ ರೀತಿ ಘಟನೆಗಳು ಸಂಭವಿಸುವುದಕ್ಕೆ ಜಿಲ್ಲಾ ಉಸ್ತುವಾರಿ ಸಚಿವರೇ ಕಾರಣ. ಅವರು ಈ ರೀತಿ ಪರೋಕ್ಷವಾಗಿ ಕುಮ್ಮಕ್ಕನ್ನು ಕೊಟ್ಟಿರುವಂತಹ ಪರಿಣಾಮವಾಗಿ ಆ ರೀತಿಯಾದಂತಹ ಘಟನೆಗಳು ನಡೆಯುತ್ತಿವೆ. ನಿನ್ನೆ ಉಲ್ಲಾಳದಲ್ಲಿ ಕಾರ್ಯಕರ್ತರ ಮೇಲೆ ಹಲ್ಲೆ ಆಗಿದೆ. ------ ಉದ್ದೇಶಪೂರ್ವಕವಾಗಿ ಪುಡಿ ಮಾಡಿರುವಂತಹ ಪ್ರಯತ್ನ ಸರ್ಕಾರದಿಂದ ಕಡೆಯಿಂದ ಆಗುವಂತಹದ್ದಾಗಿದೆ. ನಮ್ಮೆಲ್ಲರ ಕಾರ್ಯಕರ್ತರ ಹತ್ಯೆಯಾಗುತ್ತಿರುವುದಕ್ಕೆ ಸರ್ಕಾರವೇ ಕಾರಣ. ಪ್ರಭಾಕರ ಭಟ್ಟರಿಗೂ ಮತ್ತು ಕಲ್ಲಡ್ಕದ ಘಟನೆಗೆ ಏನು ಸಂಬಂಧ? ಉಸ್ತುವಾರಿ ಸಚಿವರು ಏಕೆ ಈ ರೀತಿ ಮಾಡುತ್ತಿದ್ದಾರೆ?

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

(ಗೊಂದಲ)

ಶ್ರೀ ಕೆ. ಅಭಯಚಂದ್ರ ಜೈನ್ : ಕಲ್ಲಡ್ಕ ಪ್ರಭಾಕರ್ ಭಟ್ಟರ ಅವರ ದಬ್ಬಾಳಿಕೆಯ ಪ್ರಯತ್ನ . . . .

(ಗೊಂದಲ)

ಅಧ್ಯಕ್ಷರು : Additional ಆಗಿ ಏನು ಹೇಳುತ್ತೀರಾ? ಅವರು ಹೇಳಿರುವುದನ್ನೇ ಹೇಳುತ್ತಿರುವುದು.

(ಗೊಂದಲ)

ಶ್ರೀ ವಿ. ಸುನಿಲ್ ಕುಮಾರ್ : ದಯಮಾಡಿ ಸರ್ಕಾರ ತಕ್ಷಣವೇ ಸಚಿವರು ಏಕೆ ಆ ರೀತಿ ಮಾಡಿದ್ದಾರೆ ಮತ್ತು ಪೊಲೀಸ್ ಇಲಾಖೆಯನ್ನು ದುರುಪಯೋಗ ಏಕೆ ಮಾಡಿಕೊಳ್ಳುತ್ತಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಒಂದು ಕ್ಷಣ ಅವರು ಆ ಚೇರ್‌ನಲ್ಲಿ ಕುಳಿತುಕೊಳ್ಳುವ ಯೋಗ್ಯತೆ ಇಲ್ಲ. ಬೇಕಾಬಿಟ್ಟಿ ಮಾಡುವುದಕ್ಕೆ ಸಾಧ್ಯವಿಲ್ಲ. ಪ್ರಭಾಕರ್ ಭಟ್ಟರನ್ನು ರೋಡಿನಿಂದ ಓಡಿಸುತ್ತೇನೆಂದು ಹೇಳಿರುವುದರ ಅರ್ಥವೇನು? ಯಾರು ಏನು ಬೇಕಾದರೂ ಮಾಡುವುದಕ್ಕೆ ಸಾಧ್ಯವಿದೆಯೇ?

ಅಧ್ಯಕ್ಷರು : ಆಯಿತು. ಮೊದಲು ಕುಳಿತುಕೊಳ್ಳಿ. ನಿಮ್ಮ ನಾಯಕರು ಹೇಳಿದ್ದಾರಲ್ಲವೇ? ಗಮನಕ್ಕೆ ತಂದಿರುತ್ತಾರೆ.

ಶ್ರೀ ವಿ. ಸುನಿಲ್ ಕುಮಾರ್ : ಕಲ್ಲಡ್ಕದಲ್ಲಿ ಅಲ್ಲ, ಇಡೀ ರಾಜ್ಯದಲ್ಲಿ ಭಾಷಣ ಮಾಡುವುದಕ್ಕೆ ಪ್ರಭಾಕರ ಭಟ್ಟರನ್ನು ಕರೆದುಕೊಂಡು ಬಂದಿದ್ದೇವೆ. ಇವರು ಅವರನ್ನು ಏಕೆ ಓಡಿಸಬೇಕು? ಅಲ್ಲಿ ಭಾಷಣ ಮಾಡಲಿಕ್ಕಿಲ್ಲ, ಇಲ್ಲಿ ಭಾಷಣ ಮಾಡಲಿಕ್ಕಿಲ್ಲ ಎನ್ನುವುದಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಯಾರು? ಎಲ್ಲಿ ಬೇಕಾದರೂ ಭಾಷಣ ಮಾಡುತ್ತೇವೆ. ಇದನ್ನು ಕೇಳುವುದಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಯಾರು? ಜಿಲ್ಲಾ ಉಸ್ತುವಾರಿ ಸಚಿವರಾದವರು ಕಾರ್ಯಕರ್ತರನ್ನು, ಎಸ್.ಪಿ. ಅವರನ್ನು ಕೂರಿಸಿಕೊಂಡು direction ಏಕೆ ಕೊಡಬೇಕು?

19-06-2017

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಸಮಾಜದಲ್ಲಿ ಅಶಾಂತಿ ನಿರ್ಮಾಣ ಮಾಡುವ ಕೆಲಸವನ್ನು ಸ್ವತ: ಸಚಿವರೇ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ನಿಮ್ಮ ನಾಯಕರು ಅವರಿಗೆ ಹೇಳುವುದಕ್ಕಾಗಲಿಲ್ಲವೇ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ ಹೇಳಿದರು. ನಮಗೊಂದು ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ದಿನಪತ್ರಿಕೆಯಲ್ಲಿ ಬಂದಂತಹ ವಿಷಯವನ್ನು ನಿಮ್ಮ ನಾಯಕರು ಓದಿದ್ದಾರೆ. ಎಲ್ಲಾ ವಿಷಯವನ್ನು ಹೇಳಿದ್ದಾರೆ.

(ಗೊಂದಲ)

ಶ್ರೀ ವಿ. ಸುನಿಲ್ ಕುಮಾರ್ : ಈ ರೀತಿ ಮಾಡಿರುವುದರಿಂದ ಅಲ್ಲಿ ಪ್ರತಿಭಟನೆಗಳು ನಡೆಯುತ್ತವೆ. ಇದನ್ನು ನಾನು ಖಂಡಿಸುತ್ತೇನೆ. ಏರಿಳಿತವನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಅಲ್ಪಸಂಖ್ಯಾತರು, ಮಹಿಳೆಯರೆಂದು ಹೇಳಿ ಹಿಂದೂಗಳನ್ನು ಏಕೆ target ಮಾಡುತ್ತೀರಿ? ಹಿಂದೂ ಮುಖಂಡರನ್ನು target ಮಾಡುವುದರಲ್ಲಿ ಅರ್ಥವೇನಿದೆ?

(ಗೊಂದಲ)

(ಮುಂದು . . .)

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ವಿ.ಸ.: 19.06.2017.11.30.(07).GM.SSD

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ರಮಾನಾಥ ರೈರವರ ಈ ಒಂದು ಹೇಳಿಕೆಯನ್ನು ನಾನು ಖಂಡಿಸುತ್ತಿದ್ದೇನೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:ಮಾನ್ಯ ಅಧ್ಯಕ್ಷರೆ, ಒಂದು ಸಮುದಾಯವನ್ನು ಬೆತ್ತಿ ಕಟ್ಟುವಂಥ ಕೆಲಸ ನಡೆಯುತ್ತಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಪ್ರಭಾಕರ ಭಟ್ಟರ ಬಗ್ಗೆ ರಮಾನಾಥ ರೈರವರು ಏನು ಹೇಳಿದ್ದಾರೆ, ಅದನ್ನು ನಾನು ಖಂಡಿಸುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ಈ ರೀತಿಯಾದರೆ ಸದನವನ್ನು ಹೇಗೆ ನಡೆಸಬೇಕು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾನು ಖಂಡಿಸುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ಆಯಿತು, ನೀವು ಖಂಡಿಸಿರಿ. ನೀವು ಖಂಡಿಸುವುದನ್ನು ನಾನು ಬೇಡ ಎಂದು ಹೇಳುವುದಿಲ್ಲ. ನೀವು ಖಂಡಿಸಿರಿ. ಆದರೆ, ಎಲ್ಲರೂ ಎದ್ದು ನಿಂತುಕೊಂಡು ಈ ರೀತಿ ಮಾತನಾಡಿದರೆ ಏನಿದು ಸದನವೆ? ಶಿಸ್ತು ಎಲ್ಲಿದೆ? ಇದು ಸದನದ ಶಿಸ್ತು ಆಗುತ್ತದೆಯೇ? I can't understand. Please sit down.

(ಗೊಂದಲ)

ಶ್ರೀ ವಿ.ಸುನೀಲ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಗೃಹ ಸಚಿವರನ್ನು ಕರೆಸಿ ಈಗಲೇ ಹೇಳಿಕೆ ನೀಡಿಸಿ.

(ಗೊಂದಲ)

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಅಧ್ಯಕ್ಷರು: Please Sit down. I can't understand. Please sit down. ಆಯಿತು, ಮಾತನಾಡಿ ನಾನು ಅವಕಾಶ ಕೊಡುತ್ತೇನೆ. ದಯವಿಟ್ಟು ನಿಂತಿರುವವರೆಲ್ಲರೂ ಕುಳಿತುಕೊಳ್ಳಿ. ಇದು ಸದನದ ಶಿಸ್ತೇ ಎಂದು ನಾನು ಕೇಳುತ್ತಿದ್ದೇನೆ. ನಿಮಗೆ ಅವಕಾಶ ಕೊಟ್ಟಾಗ ಮಾತನಾಡಿ. ಯಾರು ಬೇಡ ಎಂದು ಹೇಳುತ್ತಾರೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಹೇಳಲು ಬಯಸುತ್ತೇನೆ. ಒಬ್ಬ ಜವಾಬ್ದಾರಿಯುತ ಸ್ಥಾನದಲ್ಲಿರುವಂಥ ಸಚಿವರಾದ ರಮಾನಾಥ ರೈರವರು ಇಲ್ಲಿ ಹಲವಾರು ವಿಚಾರಗಳು ಚರ್ಚೆಯಾದಾಗ ಯಾವ ರೀತಿ ನಡೆದುಕೊಳ್ಳುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ದಕ್ಷಿಣ ಕನ್ನಡದ ಮಂಗಳೂರು ಜಿಲ್ಲೆಯು ವರ್ಗ ಸಂಘರ್ಷ, ಮತ್ತೊಂದು ವಿಚಾರದಲ್ಲಿ ಬಹಳಷ್ಟು ಸಂಘರ್ಷಗಳನ್ನು ಎದುರಿಸುತ್ತಿದೆ. ಅದಕ್ಕೆ ಯಾರು ಕಾರಣೀಭೂತರು ಏನು ಎನ್ನುವುದು. . . .

(ಗೊಂದಲ)

ಶ್ರೀ ಕೆ.ಅಭಯಚಂದ್ರ ಜೈನ್: ಎಂ.ಪಿ.ಯವರನ್ನು ಕೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಆಮೇಲೆ, ನೀವು ಏನು ಬೇಕಾದರೂ ಮಾತನಾಡಿ.

(ಗೊಂದಲ)

ಶ್ರೀ ವಿ.ಸುನೀಲ್‌ಕುಮಾರ್: ಇದಕ್ಕೆ ನೀವೇ ಕಾರಣ. ಈ ರೀತಿ ಆಗುವುದಕ್ಕೆ ನೀವೇ ಕಾರಣ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಾಂತಿ ಕದಡುವುದಕ್ಕೆ ರಮಾನಾಥ ರೈರವರೇ ಕಾರಣ. ಪೊಲೀಸ್ ಇಲಾಖೆಯನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಅಭಯಚಂದ್ರ ಜೈನ್: ನಮಗೆಲ್ಲಾ ಗೊತ್ತಿದೆ. ಸುಮ್ಮನೆ ಸರ್ಕಾರದ ವಿರುದ್ಧ ಮಾತನಾಡುತ್ತಿದ್ದಾರೆ. ಇವರ ಬಂಡವಾಳ ನಮಗೂ ಗೊತ್ತಿದೆ.

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಜಗದೀಶ್ ಶೆಟ್ಟರ್: ಏಕೆ ಮಧ್ಯೆ ಮಧ್ಯೆ ಮಾತನಾಡುತ್ತೀರಿ. ನೀವು ಕುಳಿತುಕೊಳ್ಳಿ. ಆಮೇಲೆ ಮಾತನಾಡಿ.

(ಗೊಂದಲ)

ಅಧ್ಯಕ್ಷರು: ಕುಳಿತುಕೊಳ್ಳಿ. ಇವರು ಏನು ಹೇಳುತ್ತಾರೆ ನೋಡೋಣ. ಆಮೇಲೆ ಸರ್ಕಾರದವರು ಉತ್ತರ ಕೊಡುತ್ತಾರೆ. ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲವೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇವತ್ತು ಜವಾಬ್ದಾರಿ ಸ್ಥಾನದಲ್ಲಿರುವಂಥ ಸಚಿವರು, ನಾನು ಮೊನ್ನೆ ದಿವಸ ಯೂನಿವರ್ಸಿಟಿ ಬಗ್ಗೆ ಮಾನ್ಯ ರಾಯರೆಡ್ಡಿಯವರು statement ಕೊಟ್ಟಿರುವ ಬಗ್ಗೆ ಹೇಳಿದ್ದೇನೆ. ಈ ರೀತಿ ಜವಾಬ್ದಾರಿ ಸ್ಥಾನದಲ್ಲಿರುವವರು ಯೂನಿವರ್ಸಿಟಿ ಮುಚ್ಚಿ ಹೋಗುತ್ತದೆ ಎನ್ನುವಂತೆ ಮಾತನಾಡುವುದಕ್ಕೆ ಹೊರಟರೆ ಸಮಾಜದಲ್ಲಿ ಯಾವ ರೀತಿ ಪರಿಣಾಮ ಬೀರಬಹುದು ಎಂದು ನಾವು ಯೋಚನೆ ಮಾಡಬೇಕಾಗುತ್ತದೆ. ಇವತ್ತು ಒಬ್ಬ ಸಚಿವರೇ, ಒಬ್ಬ ಆರ್.ಎಸ್.ಎಸ್ ಮುಖಂಡರ ಬಗ್ಗೆ ನೀವು 307 ಕೇಸ್ ಹಾಕಿ, ಅರೆಸ್ಟ್ ಮಾಡಿ ಎಂದು ಹೇಳಿ ಅವರನ್ನು instigate ಮಾಡುವ ರೀತಿ ಏನಿದೆಯಲ್ಲವೆ, ಅವರು speech ಮಾಡುವುದಕ್ಕೆ ನಿಂತರೆ, ಆ speechನಲ್ಲಿ ಏನಿದೆಯೋ, ಇಲ್ಲವೋ ಎನ್ನುವುದರ ಬಗ್ಗೆ ತಿಳಿಯದೆ, ಅವರ ಮೇಲೆ 307 ಕೇಸ್ ಹಾಕಿ ಎಂದು ಹೇಳಿ ಈ ರೀತಿ instruction ಕೊಡುತ್ತಾರೆಯಲ್ಲವೆ, it is intervention in the proper investigation by the Police Department. ಹಾಗಾದರೆ, ಯಾವ ಕೇಸ್, ಯಾವ ರೀತಿ, ಇದ್ಯಾವುದೂ ಇಲ್ಲದೆ ಇವತ್ತು ಪ್ರಭಾಕರ್ ಭಟ್ಟರ ಮೇಲೆ 307 ಕೇಸ್ ಹಾಕಿ arrest ಮಾಡಿ ಎಂದರೆ attempt to murder case ಹಾಕಿ, ಒಳಗೆ ಹೋದರೆ ಅವರಿಗೆ ಬೇಲ್ ಸಿಗಬಾರದು. ಒಳಗೆ ಹಾಕಿ, ಅವರಿಗೆ ಬೇಲ್ ಸಿಗುವುದಿಲ್ಲ, ಅವರು ಹೇಗೆ ಹೊರಗೆ ಬರುತ್ತಾರೆ ಎನ್ನುವುದನ್ನು ನಾನು ನೋಡಿಕೊಳ್ಳುತ್ತೇನೆ ಎಂದು ಹೇಳುವ instigation ನೋಡಿದರೆ, ನನಗೆ ಅನಿಸಿದ ಮಟ್ಟಿಗೆ ಒಬ್ಬ ಜವಾಬ್ದಾರಿ ಸಚಿವರ ಬಾಯಲ್ಲಿ ಈ ರೀತಿ ಹೇಳಿಕೆಗಳು ಬರಬಾರದು. ರಾಜ್ಯದಲ್ಲಿ ಬೇರೆ ಬೇರೆ ಕಡೆ ಈ ರೀತಿ ನಡೆಯುತ್ತಿದೆ.

ಕೆಲವು ಕಡೆ ಆರ್.ಎಸ್.ಎಸ್. ಕಾರ್ಯಕರ್ತರ ಹತ್ಯೆಯಾಗಿದೆ. ಬಿಜೆಪಿ ಕಾರ್ಯಕರ್ತರ ಹತ್ಯೆಯಾಗಿದೆ. Murders ಆಗಿದೆ, ಅದನ್ನು investigation ಮಾಡುವುದನ್ನು ಬಿಟ್ಟು ಅಲ್ಲಿದ್ದಂಥ ಆರೋಪಿಗಳು ಯಾರು ಎನ್ನುವುದನ್ನು ಬಿಟ್ಟು, ಪ್ರಭಾಕರ್ ಭಟ್‌ರಂಥ ಹಿರಿಯರ ಬಗ್ಗೆ ಈ ರೀತಿಯಾದ ಹೇಳಿಕೆ ಕೊಡುವ ಮುಖಾಂತರ ಇನ್ನೂ ಸ್ವಲ್ಪ ಈ ಸಮಾಜದ ವ್ಯವಸ್ಥೆಯಲ್ಲಿ instigate ಮಾಡುವುದಕ್ಕೆ ಒಬ್ಬ ಸಚಿವರೇ ಚಾಲೂ ಮಾಡಿದ್ದಾರೆ. ಈ instigation ನಿಂದ ಇವತ್ತು ಪ್ರಭಾಕರ ಭಟ್ಟರ ಬಗ್ಗೆ ಅಭಿಮಾನ ಇದ್ದಂಥವರು ಯಾವ ರೀತಿ ನಡೆದುಕೊಳ್ಳಬಹುದು ಎನ್ನುವುದನ್ನು ನೀವು ಅರ್ಥ ಮಾಡಿಕೊಳ್ಳಿ. ಈ ರೀತಿಯಾಗಿ ಒಬ್ಬ ಸಚಿವರೇ ಪ್ರಚೋದನೆ ಮಾಡುವುದಕ್ಕೆ ಹೊರಟರೆ ಪರಿಸ್ಥಿತಿ ಎಲ್ಲಿಗೆ ಬರುತ್ತದೆ? ಒಬ್ಬ ಜವಾಬ್ದಾರಿ ಸಚಿವನಾಗಿ ರಮಾನಾಥ ರೈರವರು ಈ ರೀತಿ ಹೇಳಿಕೆ ನೀಡುವುದು ಸರಿಯಲ್ಲ. ಮೊಟ್ಟಮೊದಲಿಗೆ ಇದನ್ನು ನಾನು ಖಂಡಿಸುತ್ತಿದ್ದೇನೆ. ಹಾಗಾದರೆ, ನಾನು ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರಿಗೆ ಕೇಳುತ್ತಿದ್ದೇನೆ, ಒಬ್ಬ ಇಂಥ ಮಂತ್ರಿಯನ್ನಿಟ್ಟುಕೊಂಡು ನೀವು ಹೇಗೆ Cabinetನ್ನು ನಡೆಸುತ್ತೀರಿ? ಒಬ್ಬರನ್ನು instigate ಮಾಡುವುದಕ್ಕಾಗಿ ಪೊಲೀಸ್‌ರನ್ನು ಬಳಸಿಕೊಳ್ಳುತ್ತೀರಿ. ನಮ್ಮದು ಪ್ರಾತಿಬರ್ಶಕ ಸರ್ಕಾರ. ಪ್ರಾಮಾಣಿಕವಾಗಿ ನಡೆಸುತ್ತೇವೆ ಎಂದು ನೀವು ಹೇಳುತ್ತೀರಿ. ಯಾವುದೇ investigation ಆದಾಗ ಪೊಲೀಸ್‌ನವರಿಗೆ ನಾವು ಸಂಪೂರ್ಣವಾದ independence, freedom ಕೊಟ್ಟಿದ್ದೇವೆ. ಅವರು ಯಾವುದೇ ರೀತಿಯಾದ investigation ಮಾಡುವಾಗ ನಾವು ಯಾವುದೇ ರೀತಿ intervene ಮಾಡುವುದಿಲ್ಲವೆಂದು ಒಂದು ಕಡೆ ಮುಖ್ಯಮಂತ್ರಿಗಳು ಹಾಗೂ ಗೃಹಸಚಿವರು ಹೇಳಿಕೆ ನೀಡುತ್ತೀರಿ. ಆದರೆ, ನಿಮ್ಮ ಸಚಿವರು S.P.ಯವರನ್ನು ಐ.ಬಿ.ಯಲ್ಲಿ ಕೂರಿಸಿಕೊಂಡು ಅವರಿಗೆ ನೇರವಾಗಿ instigation ಮಾಡುತ್ತೀರಿ. ಪ್ರಚೋದನೆ ಮಾಡಿ ಇಂಥವರನ್ನು arrest ಮಾಡಿ ಎಂದು ಹೇಳಿದರೆ ಇದು ಪೊಲೀಸ್ ಡಿಪಾರ್ಟ್‌ಮೆಂಟ್‌ನ enquiryಯಲ್ಲಿ ಇದು intervention. ಅಷ್ಟೇ ಅಲ್ಲದೆ, ಇಂಥವರನ್ನು arrest ಮಾಡಿ ಎಂದು ಹೇಳಿದರೆ, ನೀವು ಒಬ್ಬ ಸಚಿವನಾಗಿ ನಿಮ್ಮ ಕಾರ್ಯವನ್ನು ಮರೆತಿದ್ದೀರಿ ಎನ್ನುವಂಥ ಮಾತನ್ನು ಹೇಳಬೇಕಾಗುತ್ತದೆ. ಹೀಗಾಗಿ ನೀವು ಕಾನೂನು ರೀತ್ಯಾ ಆ ಸಚಿವಸಂಪುಟದಲ್ಲಿ ಮುಂದುವರೆಯುವುದಕ್ಕೆ ಆಗುವುದಿಲ್ಲ. ಮೊದಲು ನೀವು ರಾಜೀನಾಮೆ

ಕೊಡಬೇಕು ಅಥವಾ ಸಿದ್ದರಾಮಯ್ಯನವರು ಅವರನ್ನು ತಮ್ಮ ಸಚಿವಸಂಪುಟದಿಂದ drop ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಇನ್ನೊಂದು ವಿಚಾರ, ಕಲ್ಲಡ್ಕದಲ್ಲಿ ಇತ್ತೀಚೆಗೆ ಕೆಲವೊಂದು communal clashes & tension ಆದವು, ಆ ಸಂದರ್ಭದಲ್ಲಿ ಅದಕ್ಕೆ ಏನು ಕಾರಣ ಎನ್ನುವುದರ ಬಗ್ಗೆ SP ಒಂದು statement ಕೊಟ್ಟಿದ್ದು, ಅದು ಇವತ್ತಿನ Times of India ಪತ್ರಿಕೆಯಲ್ಲಿ ಬಂದಿದೆ. Kalladka communal violence incited by youths addicted to drugs, says SP. ಇಲ್ಲಿ ಏನು ಹೇಳುತ್ತಾರೆಂದರೆ, 'At a peace meeting on Friday, Dakshina Kannada Superintendent of Police Bhushan Gulabrao Borase told TOI, "Primary investigation has revealed that the violence at Kalladka was fuelled by youngsters, under the influence of narcotic substances such as marijuana (ganja). Besides Mangaluru, drug abuse is rampant in Bantwal taluk. The violence at Kalladka was because of youngsters who went berserk after getting high." He added that these youths, under the influence of drugs, got into a spat, which erupted into a violent incident on May 26th. The clash left around five people injured. This flared up, and resulted in the violence, Borase added.' Violence ಕಾರಣವೆಂದು SP investigation ಮಾಡಿ ಈ ರೀತಿ ಹೇಳಿಕೆ ಒಂದು ಕಡೆ ಕೊಡುತ್ತಾರೆ. ಆದರೆ, ಇದಕ್ಕೆಲ್ಲಾ ಕಾರಣ ಪ್ರಭಾಕರ ಭಟ್ಟರು, ಅದಕ್ಕಾಗಿ ಅವರನ್ನು arrest ಮಾಡಿ 307 ಕೇಸ್ ಹಾಕಿ ರಮಾನಾಥರೈರವರು ಎಂದು ಹೇಳುತ್ತಾರೆ. ಎಂದರೆ ಇಲ್ಲೇ prima-facie, SP ಮತ್ತು ರಮಾನಾಥ ರೈರವರ statementನ್ನು ನೋಡಿದರೆ,

19-06-2017

ದಕ್ಷಿಣ ಕನ್ನಡ ಮಂಗಳೂರು coastal beltದಲ್ಲಿ ಇಲ್ಲಿಯವರೆಗೂ ಏನು communal clashes ಎಲ್ಲವೂ ಆಗುತ್ತಿದೆ ಅವು ಬಹುಶ: ಇಂಥ ರಮಾನಾಥ ರೈ ರವರ instigation ನಿಂದ ಆಗುತ್ತಿದೆ.

ಶ್ರೀ ಮೊಹಿಯುದ್ದೀನ್ ಬಾವಾ: ದಯವಿಟ್ಟು, ಪ್ರಭಾಕರ ಭಟ್ಟರ ರಾಷ್ಟ್ರ ರಾಜಕಾರಣದ ವಿವರಗಳನ್ನು ತರಿಸಿ. ಇವರಿಂದ ಹೇಳಿಸಿ. ಅವರು ಏನೆಲ್ಲಾ ಮಾಡಿದ್ದಾರೆ ಎನ್ನುವುದು ತಿಳಿಯುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಹೊಲಸು ರಾಜಕಾರಣದ ಸಲುವಾಗಿ instigate ಮಾಡಿ ಒಂದು ಒಪ್ಪಂದವನ್ನು create ಮಾಡುವುದು, violence ಮಾಡುವುದರ ಮುಖಾಂತರ ಹೇಳಿಕೆಗಳನ್ನು ನೀಡುವುದು. ಇನ್ನು 7-8 ತಿಂಗಳುಗಳಲ್ಲಿ ಚುನಾವಣೆ ಬರುತ್ತಿದೆ. ಚುನಾವಣೆ ಸಂದರ್ಭದಲ್ಲಿ ಈ ರೀತಿ ಕೋಮು ಗಲಭೆಯನ್ನು ಮಾಡಿ, ಕೋಮು ಗಲಭೆಯನ್ನು ಮಾಡಿಸಿ, instigate ಮಾಡಿ, ಪೊಲೀಸರ ಮುಖಾಂತರ arrest ಮಾಡಿಸುವುದು ಮತ್ತು harassment ಮಾಡಿಸುವುದು, ಹಿಂದೂ ಕಾರ್ಯಕರ್ತರನ್ನು ಮತ್ತು ಆರ್.ಎಸ್.ಎಸ್ ಕಾರ್ಯಕರ್ತರನ್ನು arrest ಮಾಡಿಸುವುದು, ಇವೆಲ್ಲವನ್ನು ಮಾಡುವುದರ ಮುಖಾಂತರ ಕೆಲವನ್ನು clash ಮಾಡುವುದಕ್ಕೆ, ಇವತ್ತು ರಮಾನಾಥ ರೈರವರಂಥವರೇ instigate ಮಾಡುತ್ತಾರೆ. ಅದಕ್ಕಾಗಿ ನಾನು ಇವತ್ತು ಹೇಳುತ್ತಿದ್ದೇನೆ ರಮಾನಾಥ ರೈರವರು ತಕ್ಷಣವೇ ರಾಜೀನಾಮೆ ಕೊಡಬೇಕು ಮತ್ತು ಇದನ್ನು ನಾನು ಖಂಡಿಸುತ್ತೇನೆ. ಈ statementನಿಂದ ಅವರಿಗೆ ನಾಚಿಕೆಯಾಗಬೇಕು ಮತ್ತು ತಕ್ಷಣವೇ ಅವರು ರಾಜೀನಾಮೆ ಕೊಡಬೇಕು.

(ಗೊಂದಲ)

ಶ್ರೀ ಮೊಹಿಯುದ್ದೀನ್ ಬಾವಾ: ಸಮುದಾಯದ ವಿರುದ್ಧ ಪ್ರಚೋದನಕಾರಿ ಭಾಷಣ ಮಾಡುವ ಮುಖಾಂತರ. . . . . .

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

19-06-2017

ಅಧ್ಯಕ್ಷರು: ಕಾಗೇರಿಯವರೆ ನೀವು ಮಾತನಾಡಿ. ನೋಡಿ, ಎಲ್ಲರೂ ಎದ್ದು ಹೇಳಬೇಕಾದ ಅವಶ್ಯಕತೆಯಿಲ್ಲ. ಅವಕಾಶ ಕೊಡುತ್ತೇನೆ. ಎರಡು ನಿಮಿಷ ಏನು ಹೇಳಬೇಕಾಗಿದೆಯೋ ಅದನ್ನು ಹೇಳಿ. ನಿಮ್ಮ ನಾಯಕರು ಯಾವ ಅಂಶಗಳನ್ನು ಹೇಳಿಲ್ಲವೋ ಅದನ್ನು ನೀವು ಹೇಳಿ ಸಾಕು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಈ ಸಮಾಜದಲ್ಲಿ ಯಾವತ್ತು ಸಹ ಜವಾಬ್ದಾರಿಯುತವಾದ ಸ್ಥಾನದಲ್ಲಿರುವವರು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು ಎನ್ನುವುದು ನಮಗೆಲ್ಲರಿಗೂ ಗೊತ್ತಿರುವಂಥ ನಿಯಮಗಳು. ಈಗ ರಮಾನಾಥ ರೈರವರ ಈ ಒಂದು ಹೇಳಿಕೆಯಿಂದ ಇಡೀ ರಾಜ್ಯದಲ್ಲಿ ಹೇಗೆ ಅಶಾಂತಿಯನ್ನು ಮೂಡಿಸುವಂಥ ಸ್ಥಿತಿ ನಿರ್ಮಾಣವಾಗುತ್ತಿದೆ ಎನ್ನುವುದಕ್ಕೆ ಇದೊಂದು ಸ್ಪಷ್ಟ ಉದಾಹರಣೆ. ಇದನ್ನು ಹೇಗೆ ಮುಖ್ಯಮಂತ್ರಿಗಳು ಒಪ್ಪಿಕೊಳ್ಳುವುದಕ್ಕೆ ಸಾಧ್ಯ? ರಮಾನಾಥ ರೈರವರು ಮೊದಲನೆ ಬಾರಿಗೆ ಈ ರೀತಿ ನಡೆದುಕೊಳ್ಳುತ್ತಿಲ್ಲ. ಯಾವಾಗಲೂ ಇದೇ ರೀತಿ ಮಾತನಾಡುತ್ತಿದ್ದಾರೆ. ಮೊನ್ನೆ ನಮ್ಮ ನಾಯಕರಾದ ಜಗದೀಶ್ ಶೆಟ್ಟರ್‌ರವರು ಮಾತನಾಡುವಾಗ ಹೇಳಿದರು. ಅಲ್ಲಿ ಜಿಲ್ಲೆಯಲ್ಲಿ ಅವರು ಮಾತನಾಡುವುದು, ನಡೆದುಕೊಳ್ಳುವುದನ್ನು ನೋಡಿದರೆ, ಇವತ್ತು ಕಾನೂನು ಬಾಹಿರವಾದ ಚಟುವಟಿಕೆಗಳು ಮತ್ತು ಗಾಂಜಾ ಇತ್ಯಾದಿ ಡ್ರಗ್ ಆಕ್ಟಿವಿಟಿ ಬಂಟ್ವಾಳದಲ್ಲಿ ಏತಕ್ಕಾಗಿ ಜಾಸ್ತಿಯಾಗಿದೆಯೆಂದರೆ ಮಾನ್ಯ ಸಚಿವರ . . . .

(ಗೊಂದಲ)

ಅಧ್ಯಕ್ಷರು: ಸರ್ಕಾರದವರು ಉತ್ತರ ಕೊಡುತ್ತಾರೆ. ನೀವು ಕುಳಿತುಕೊಳ್ಳಿ. ನೀವು ಪದೇ ಪದೇ ಎದ್ದು ನಿಂತು ಮಾತನಾಡಿದರೆ ಏನಿದು? ಆಯಿತು, ಸರ್ಕಾರಕ್ಕೆ ಎಲ್ಲವೂ ಗೊತ್ತಿದೆ. ಸರ್ಕಾರ ಉತ್ತರ ಕೊಡುತ್ತಾರೆ. ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಬಂಟ್ವಾಳದಲ್ಲಿ ಈ ರೀತಿ ಡ್ರಗ್ ರಾಕೆಟ್ ಏತಕ್ಕಾಗಿ ಬೆಳೆದಿದೆಯೆಂದರೆ ಸಚಿವರ ಈ ರೀತಿಯ ವರ್ತನೆಯಿಂದಾಗಿ, ಅಲ್ಲಿ ಯಾರು ಕಾನೂನು ಬಾಹಿರವಾದ ಚಟುವಟಿಕೆ ಮಾಡುತ್ತಾರೋ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದು ಹೇಳುವುದನ್ನು ಬಿಟ್ಟು,

19-06-2017

(ಗೊಂದಲ)

ಶ್ರೀ ಮೊಹಿಯುದ್ದೀನ್ ಬಾವಾ: ಸ್ವಾಮಿ, ಒಂದು ಪಂಚಾಯತಿ ಅಧ್ಯಕ್ಷರನ್ನು ಕರೆದು ಕೊಲೆ ಮಾಡುವಂಥ ಸ್ಥಿತಿ ಬಂದಿದೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸಮಾಜದಲ್ಲಿ ಸಾಮರಸ್ಯವನ್ನು ಮೂಡಿಸುವುದಕ್ಕೆ ಪ್ರಯತ್ನ ಮಾಡುತ್ತಿರುವ, ಸಮಾಜದಲ್ಲಿ ಎಲ್ಲರೂ ಒಂದು ಬಂಧುತ್ವ ಭಾವದಿಂದ ಒಳ್ಳೆ ರೀತಿಯಲ್ಲಿರಬೇಕೆಂದು ಸಾರುತ್ತಿರುವ ಪ್ರಭಾಕರ್ ಭಟ್‌ರು ಆರ್.ಎಸ್.ಎಸ್. ಮೂಲಕ ಉತ್ತಮ ಚಟುವಟಿಕೆ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಆಯಿತು, ಇದನ್ನೆಲ್ಲಾ ನಿಮ್ಮ ನಾಯಕರು ಹೇಳಿದ್ದಾರೆ. ಭಾಷಣ ಮಾಡುವುದು ಬೇಡ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅದಕ್ಕೆ ತದ್ವಿರುದ್ಧವಾಗಿ ಸಮಾಜದಲ್ಲಿ ಅಶಾಂತಿಯನ್ನು ಮೂಡಿಸುವ ಪ್ರಯತ್ನ ಆಗುವುದನ್ನು ಖಂಡಿಸಬೇಕು. ಮುಖ್ಯಮಂತ್ರಿಗಳು ತಕ್ಷಣ ಅವರನ್ನು drop ಮಾಡಬೇಕು.

(ಗೊಂದಲ)

ಅಧ್ಯಕ್ಷರು: ಆಯಿತು, ಇದನ್ನು ನಿಮ್ಮ ನಾಯಕರು ಹೇಳಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರನ್ನು ಸಂಪುಟದಿಂದ ಕೈಬಿಟ್ಟು, ಈ ರೀತಿ ಅಶಾಂತಿ ನಿರ್ಮಾಣ ಮಾಡುತ್ತಿರುವ ಪ್ರಯತ್ನಕ್ಕೆ ಈ ಸದನವೂ ಛೀಮಾರಿ ಹಾಕಬೇಕು. ಅವರು ಮುಂದೆ ಈ ರೀತಿ ಮಾಡಬಾರದು.

(ಗೊಂದಲ)

ಅಧ್ಯಕ್ಷರು: ಕೆ.ಜಿ.ಬೋಪಯ್ಯನವರೆ, ಇವರು ಹೇಳದೆ ಇರುವಂಥ ವಿಚಾರ ಏನಾದರೂ ಹೇಳುವುದಿದ್ದರೆ ನೀವು ಹೇಳಿ.

19-06-2017

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಬಹುಶ: ನಿನ್ನೆ ಬಂಟ್ವಾಳದಲ್ಲಿ ನಮ್ಮ ಸಚಿವರು ಪೊಲೀಸ್ ಇಲಾಖೆಯ ಉನ್ನತಾಧಿಕಾರಿಯನ್ನು ಕರೆಸಿ ಹೇಳಿರುವಂಥದ್ದು ಏನು ಎನ್ನುವ ವಿಚಾರ ಈ ಸದನದ ಗಮನಕ್ಕೆ ಬಂದಿದೆ. ಪತ್ರಿಕೆಗಳಲ್ಲಿಯೂ ವರದಿಯಾಗಿದೆ. ಇದನ್ನು ನೋಡಿದಾಗ ಅವರೇನು ಡಾ:ಪ್ರಭಾಕರ ಭಟ್‌ರ ವಿರುದ್ಧ 307 ಕೇಸ್ ಹಾಕಬೇಕೆಂದು ಹೇಳಿದ್ದಾರೆ, ಈ ಎಲ್ಲಾ ಹೇಳಿಕೆಗಳಿಂದ ಸನ್ಮಾನ್ಯ ಅರಣ್ಯ ಮಂತ್ರಿಗಳಿಗೆ ಅವರ ಜವಾಬ್ದಾರಿ ತಿಳಿದಿಲ್ಲ ಎನ್ನುವುದು ಗೊತ್ತಾಗುತ್ತದೆ. ಒಬ್ಬರು ನೇರವಾಗಿ ಪೊಲೀಸ್ ತನಿಖೆಯಲ್ಲಿ involve ಆಗುವುದು ಮಾತ್ರವಲ್ಲ, ಈ ಹೇಳಿಕೆಗಳಿಂದ ಸಮಾಜದಲ್ಲಿ ಅಶಾಂತಿ ಮೂಡುವುದಕ್ಕೆ ಕಾರಣವಾಗುತ್ತದೆ. He is liable for 153 (a) IPC ಪ್ರಕಾರ ಅವರ ಮೇಲೆ ಮೊಕದ್ದಮೆ ಹಾಕಬೇಕು. ಪ್ರಭಾಕರ ಕಲ್ಲಡ್ಕರವರು complaint ಕೊಟ್ಟಿದ್ದಾರೆ.

(ಮುಂದುವರೆದಿದೆ)

19.06.2017 / 11.40 (08) MPL-SSD

ಶ್ರೀ ಕೆ.ಜಿ.ಬೋಪಯ್ಯ (ಮುಂದು.) : Complaint ಕೊಟ್ಟಿದ್ದಾರೆ. Criminal breach, instigation ಮಾಡುತ್ತಿದ್ದಾರೆ. ಅದರ ಮೇಲೆ ಮೊಕದ್ದಮೆ ಹಾಕಬೇಕು. ಮುಖ್ಯಮಂತ್ರಿಗಳು ರಾಜ್ಯದಲ್ಲಿ ಏನಾದರೂ ಕಾನೂನು ಸುವ್ಯವಸ್ಥೆ ಇರಬೇಕೆನ್ನುವುದಾದರೆ ರಮಾನಾಥ ರೈ ಅವರನ್ನು ತಕ್ಷಣ ಸಚಿವ ಸಂಪಟದಿಂದ ಕೈ ಬಿಡಬೇಕೆನ್ನುವ ಒತ್ತಾಯವನ್ನು ಮಾಡುತ್ತೇನೆ.

ಅಧ್ಯಕ್ಷರು : ಮತ್ತೇನಾದರೂ ಹೇಳುವುದು ಇದೆಯೆ? ಅವರು ಮೂವರು ಹೇಳಿದ್ದನ್ನು ಬಿಟ್ಟು ಹೇಳಿ.

(ಗೊಂದಲ)

ಶ್ರೀ ವಿ.ಸುನೀಲ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಕಲ್ಲಡ್ಕದಲ್ಲಿ ಕಳೆದ ವಾರ ನಡೆದ ಘಟನೆಗಳ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ಬೇರೆ ಬೇರೆ ಹಂತಗಳಲ್ಲಿ ತನಿಖೆ ಮಾಡುತ್ತಿದೆ. ಆ ಗಲಾಟೆಗೆ

ಸಂಬಂಧಿಸಿದಂತೆ ಯಾವುದೇ ರೀತಿಯಾದ ತನಿಖೆ ಮಾಡುವುದನ್ನು ಸ್ವಾಗತಿಸುತ್ತೇವೆ. ಯಾವುದೇ ಹಂತದಲ್ಲಿ ಯಾವುದೇ ರೀತಿಯಾದ ತನಿಖೆಯನ್ನು ಇಲಾಖೆ ಮಾಡಲಿ. ಆದರೆ ಜಿಲ್ಲಾ ಉಸ್ತುವಾರಿ ಸಚಿವರು ತನ್ನ ಪಕ್ಷದ ಕಾರ್ಯಕರ್ತರವನ್ನು ಐ.ಬಿ.ಯಲ್ಲಿ ಕೂರಿಸಿಕೊಂಡು, ಎಸ್.ಪಿ ಯವರನ್ನು ಕೂರಿಸಿಕೊಂಡು ತನಿಖೆ ಇದೇ ರೀತಿ ಆಗಬೇಕು. ಇಂತಹವರ ಮೇಲೆ ಮೊಕದ್ದಮೆಗಳನ್ನು ಹಾಕಬೇಕೆನ್ನುವುದು ತನಿಖೆಯನ್ನು ದಿಕ್ಕು ತಪ್ಪಿಸುವ ಪ್ರಯತ್ನ. ಉದ್ದೇಶಪೂರ್ವಕವಾಗಿ ಹಿಂದೂ ಸಂಘಟನೆಗಳನ್ನು target ಮಾಡುವಂತಹ ಪ್ರಯತ್ನವನ್ನು ಸ್ವತ: ಜಿಲ್ಲಾ ಉಸ್ತುವಾರಿ ಸಚಿವರೇ ಮಾಡುತ್ತಿರುವುದನ್ನು ಯಾವುದೇ ಕಾರಣಕ್ಕೂ ಜಿಲ್ಲೆಯ ಜನರು ಸಹಿಸಲು ಸಾಧ್ಯವಿಲ್ಲ. ಹಾಗಾಗಿ ನಾನು ಆಗಲೇ ಹೇಳಿದಂತಹ ಎಲ್ಲಾ ಸಂಗತಿಗಳನ್ನು ಮತ್ತೊಮ್ಮೆ ಉಲ್ಲೇಖಿಸಿ ಜಿಲ್ಲೆಯಲ್ಲಿ ಈ ರೀತಿ ಶಾಂತಿಯನ್ನು ಕದಡುವ ಪ್ರಯತ್ನ ಸ್ವತ: ಜಿಲ್ಲಾ ಉಸ್ತುವಾರಿ ಸಚಿವರಿಂದ ಆಗುತ್ತಿದೆ ಎನ್ನುವುದು ಮತ್ತೆ ಮತ್ತೆ ಸ್ಪಷ್ಟವಾಗುತ್ತಿದೆ.

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಇವರು ಮಾತನಾಡಿದ ಮೇಲೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು: ಅವಕಾಶ ಕೊಡುತ್ತೇನೆ.

ಶ್ರೀ ವಿ.ಸುನೀಲ್ ಕುಮಾರ್ : ಇವರನ್ನು ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ಮುಂದುವರೆಸಿದರೆ ತನಿಖೆಗಳು ನಿಷ್ಪಕ್ಷಪಾತವಾಗಿ ನಡೆಸಲು ಸಾಧ್ಯವಿಲ್ಲ. ಹಾಗಾಗಿ ಅಲ್ಪಸಂಖ್ಯಾತರನ್ನು ಓಲೈಸುವಂತಹ ಭರದಲ್ಲಿ ಹಿಂದೂ ಸಂಘಟನೆಗಳನ್ನು target ಮಾಡುವುದು ಸರಿಯಲ್ಲ. ಹಾಗಾಗಿ ಅವರು ತಕ್ಷಣ ಅವರ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡಬೇಕು. ತನಿಖೆಗಳು ನಿಷ್ಪಕ್ಷಪಾತವಾಗಿ ನಡೆಯಬೇಕೆಂದರೆ ಒಂದು ನಿಮಿಷವೂ ಕೂಡಾ ಜಿಲ್ಲಾ ಉಸ್ತುವಾರಿ ಸಚಿವರಾಗಿ ಅವರು ಮುಂದುವರೆಯಬಾರದು ಎಂಬ ಆಗ್ರಹವನ್ನು ಮುಖ್ಯಮಂತ್ರಿಗಳಲ್ಲಿ ಮಾಡುತ್ತೇನೆ.

(ಗೊಂದಲ)

ಶ್ರೀ ಬಿ.ಎ. ಮೊಹಿಯುದ್ದೀನ್ ಬಾವಾ : ನಮಗೂ ಅವಕಾಶ ಕೊಡಿ.

19-06-2017

ಶ್ರೀ ಜೆ.ಆರ್.ಲೋಬೋ : ನಾವು ಜಿಲ್ಲೆಯವರು ಇದ್ದೇವೆ ಸರ್. ನಮಗೂ ಅವಕಾಶ ಕೊಡಬೇಕು.

ಅಧ್ಯಕ್ಷರು : ಆಯಿತು ನಿಮಗೂ ಕೊಡುತ್ತೇನೆ ಕುಳಿತುಕೊಳ್ಳಿ. ಅವರದು ಮುಗಿಯಲಿ.

(ಗೊಂದಲ)

ಶ್ರೀ ಎಸ್.ಅಂಗಾರ : ಮಾನ್ಯ ಅಧ್ಯಕ್ಷರೆ, ನಾನು ಇಷ್ಟರವರೆಗೆ ಯಾವುದರ ಬಗ್ಗೆಯೂ ಪ್ರಸ್ತಾಪ ಮಾಡಿಲ್ಲ. ಏಕೆಂದರೆ ಇದು ಬಂಟ್ವಾಳದ ಸಮಸ್ಯೆ ಮಾತ್ರವಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ನಮ್ಮ ಸೂಳ್ಯದಲ್ಲಿ ಕೂಡಾ ಯಾವುದೇ ಘಟನೆಗಳು ಆಗಲಿಲ್ಲ.

ಅಧ್ಯಕ್ಷರು : ಈ Incident ಬಗ್ಗೆ ಅಷ್ಟೇ ಮಾತನಾಡಿ.

ಶ್ರೀ ಎಸ್.ಅಂಗಾರ : ಈ ಘಟನೆಯ ಬಗ್ಗೆಯೇ ಮಾತನಾಡುತ್ತೇನೆ ಸರ್. ಎಲ್ಲಾ ಕಡೆಯಲ್ಲಿಯೂ ಈ ರೀತಿ ಇಲಾಖಾಧಿಕಾರಿಗಳಿಗೆ ಫೋನ್ ಮಾಡಿ ಆಯಾಳತದಲ್ಲಿ ಹಸ್ತಕ್ಷೇಪ ಮಾಡುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಇದೇ ರೀತಿ ತನ್ನ ಕ್ಷೇತ್ರದಲ್ಲಿಯೂ ನಡೆದಿದೆ. ಇವತ್ತು ನಾನು ಹೇಳುವುದು. ಬೇರೆ ಬೇರೆ ಜನರು ಸಮರ್ಥನೆ ಮಾಡುತ್ತೇವೆ. ಒಬ್ಬರು ಸಚಿವರಾದವರು ಇಲಾಖೆಗಳು ಪ್ರತ್ಯೇಕವಾಗಿ ತನ್ನ ಕಾರ್ಯವನ್ನು ನಿರ್ವಹಿಸುವ ಸಮಯದಲ್ಲಿ ಅದು ಹೀಗೆ ಇರಬೇಕು, ಹಾಗೆಯೇ ಇರಬೇಕು ಎಂದು ಹೇಳಿದರೆ ಅದನ್ನು ಸಮರ್ಥಿಸಿದರೆ ನಾವು ಏನು ಹೇಳಬೇಕು ಎಂದು ಗೊತ್ತಾಗುವುದಿಲ್ಲ. ಅದಕ್ಕಾಗಿ ಇಷ್ಟೇ ಹೇಳುವಂತಹದು. ಒಟ್ಟು ಇಲಾಖೆಗಳಲ್ಲಿ ಏನೇ enquiry ಮಾಡಲಿ. ಆದರೆ ಮಿನಿಸ್ಟರ್ ಈ ರೀತಿ ಹೇಳುವಂತಹದು ಭಾರಿ ಖಂಡನೀಯ ಎನ್ನುವ ಮಾತನ್ನು ಹೇಳಲಿಚ್ಛಿಸುತ್ತೇನೆ.

ಅಧ್ಯಕ್ಷರು : ಸರ್ಕಾರದ ವತಿಯಿಂದ ಉತ್ತರವೋ? ಅಥವಾ ಅವರು ಹೇಳಿದ್ದಕ್ಕೆ ತಾವು ಉತ್ತರ ಕೊಡುತ್ತೀರೋ?

ಶ್ರೀ ವಿ.ಸುನೀಲ್ ಕುಮಾರ್ : ಅವರಿಂದ ಉತ್ತರದ ಪ್ರಶ್ನೆನೇ ಇಲ್ಲ ಸರ್. ಗೃಹ ಇಲಾಖೆಯಿಂದ ಉತ್ತರ ಬೇಕು.

19-06-2017

ಅಧ್ಯಕ್ಷರು : ಅದನ್ನು decide ಮಾಡುವವನು ನಾನು. ನೀವು ಎದ್ದು ನಿಂತು ಹೇಳಿದರೆ.

(ಗೊಂದಲ)

ಅಧ್ಯಕ್ಷರು : ಸರ್ಕಾರ ಬೇರೆ ಉತ್ತರ ಕೊಡುತ್ತದೆಯೋ ಅಥವಾ ನೀವೇ ಕೊಡುವುದನ್ನೇ ಉತ್ತರ ಎಂದು ತಿಳಿದುಕೊಳ್ಳೋಣವೆ?

ಶ್ರೀ ಬಿ.ಎ.ಮೊಹಿದ್ದೀನ್ ಬಾವಾ : ನಮ್ಮದೊಂದು ಪ್ರಶ್ನೆ ಇದೆ ಸರ್ ದಯವಿಟ್ಟು.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ಅವರು ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಕೆಲವೊಂದು ಅವರ ಮೇಲೆ ಆಪಾದನೆ ಮಾಡಿದ್ದಾರೆ ಅದಕ್ಕೆ ಅವರು ಉತ್ತರ ಹೇಳುತ್ತಾರೆ. ಗೃಹ ಸಚಿವರ ಗಮನಕ್ಕೆ ತಂದು ಅದಕ್ಕೆ ಸರ್ಕಾರ ಉತ್ತರ ಕೊಡುತ್ತದೆ. In the mean time, ಅವರ ಮೇಲೆ ಏನು ಆಪಾದನೆ ಮಾಡಿದ್ದಾರೆ, ಅವರಿಗೆ reply ಮಾಡುವುದಕ್ಕೆ opportunity ಕೊಡಬೇಕು. To that extent ಅವರು reply ಮಾಡಲಿ.

ಅಧ್ಯಕ್ಷರು : ಆಯಿತು. ಈಗ ರಮಾನಾಥ ರೈ ಯವರು. ನಡುವೆ ನಡುವೆ ಎದ್ದು ನಿಂತು ಯಾರೂ ಮಾತನಾಡಬೇಡಿ. ಅವರು ಉತ್ತರ ಕೊಡುತ್ತಾರೆ. ಆಮೇಲೆ ಸರ್ಕಾರ ಉತ್ತರ ಕೊಡುತ್ತದೆ.

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಥಮ ವಿನಂತಿ ಏನೆಂದರೆ, video ದಲ್ಲಿ ಏನಿದೆ ಎಂಬುದನ್ನು ಮೊದಲು ತಾವು ಗಮನಿಸಬೇಕು. ಇನ್ನೊಂದು ಪ್ರಶ್ನೆ. ನಮ್ಮ ಜಿಲ್ಲೆಯಲ್ಲಿ ನಡೆಯುವಂತಹ ಕೋಮು ಘರ್ಷಣೆಗಳು. ನನ್ನ ಕ್ಷೇತ್ರದಲ್ಲಿ ಜಲೀಲ್ ಕರೋಪಾಡಿ ಎಂಬ ಒಬ್ಬ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ. ಎಲ್ಲಾ ಜಾತಿ, ಧರ್ಮ, ಭಾಷಿಗರ ಜೊತೆ ಪ್ರೀತಿ ವಿಶ್ವಾಸ ಇಟ್ಟುಕೊಂಡಿದ್ದ ಒಂದು ಹುಡುಗ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

(ಗೊಂದಲ)

ಶ್ರೀ ಬಿ.ರಮಾನಾಥ ರೈ : ದಯಮಾಡಿ ತಮ್ಮಲ್ಲಿ ಕೇಳುತ್ತೇನೆ. ಮಧ್ಯದಲ್ಲಿ ಯಾರೂ ಮಾತನಾಡಬಾರದು.

ಅಧ್ಯಕ್ಷರು : I don't allow anybody. You talk.

ಶ್ರೀ ಬಿ.ರಮಾನಾಥ ರೈ : ಒಬ್ಬ ಹುಡುಗ ಅವನು ಉಪಾಧ್ಯಕ್ಷನಾಗಿದ್ದ. ಹಾಡುಹಗಲೇ ಅವನ ಕೊಠಡಿಗೆ ನುಗ್ಗಿ ಅವನನ್ನು ಕೊಲೆ ಮಾಡಲಾಯಿತು. ಅದರಲ್ಲಿ ಸಂಘ ಪರಿವಾರದವರಿದ್ದಾರೆ.

(ಗೊಂದಲ)

ಶ್ರೀ ವಿ.ಸುನೀಲ್ ಕುಮಾರ್ : ಸಂಘ ಪರಿವಾರ ಎಂದರೆ ಹೇಗೆ ಆಗುತ್ತದೆ ಸರ್? ಮಾನ್ಯ ಅಧ್ಯಕ್ಷರೆ ಹಾಗಾದರೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : No, No.

(ಗೊಂದಲ)

ಅಧ್ಯಕ್ಷರು : Please sit down.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅವರು ವ್ಯಕ್ತಿಗಳ ಹೆಸರನ್ನು ಬೇಕಾದರೆ ತೆಗೆದುಕೊಳ್ಳಲಿ.

(ಗೊಂದಲ)

ಅಧ್ಯಕ್ಷರು : Please sit down.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

(ಗೊಂದಲ)

ಶ್ರೀ ಆರ್.ರೋಷನ್ ಬೇಗ್ : ಅಧ್ಯಕ್ಷರು ನಿಂತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷ ತಡೆಯಿರಿ. ನೀವುಗಳು ಮಾತನಾಡುವಾಗ ನಾನು ಯಾರನ್ನೂ ಮಾತನಾಡಲು ಬಿಡಲಿಲ್ಲ. ನೀವು ನಿಮಗೆ ತಿಳಿದದ್ದೆಲ್ಲವನ್ನೂ ಹೇಳಿದ್ದೀರಿ. ಅವರು ಏನು ಹೇಳುತ್ತಾರೋ ಹೇಳಲಿ. ಆಮೇಲೆ ಸರ್ಕಾರ ಸರಿಯಾದ ಉತ್ತರ ಕೊಡುತ್ತದೆ. ನಡುವೆ ನಡುವೆ ಎದ್ದರೆ ಹೇಗೆ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಹಾಗಲ್ಲ ಅಧ್ಯಕ್ಷರೆ, . . .

(ಗೊಂದಲ)

ಶ್ರೀ ವಿ.ಸುನೀಲ್ ಕುಮಾರ್ : ಅವರು ಹೇಳಿದ್ದನ್ನು ವಾಪಸ್ಸು ತೆಗೆದುಕೊಳ್ಳಲಿ ಇದು ಸಾಧ್ಯವೇ ಇಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಒಂದು ಸಂಘಟನೆಯ ಹೆಸರನ್ನು ಏಕೆ ತೆಗೆದುಕೊಳ್ಳಬೇಕು ಅವರು.

(ಗೊಂದಲ)

ಅಧ್ಯಕ್ಷರು : ನೀವು ಕುಳಿತುಕೊಳ್ಳಿ.

(ಗೊಂದಲ)

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ವಿ.ಸುನೀಲ್ ಕುಮಾರ್ : ಸಂಘ ಪರಿವಾರದವರಿದ್ದಾರೆಂದರೆ ಹೇಗಾಗುತ್ತದೆ ಹೇಳಿ ನೀವು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಯಾರು ಕೊಲೆ ಮಾಡಿದ್ದಾರೋ ಅವರ ಹೆಸರು ಹೇಳಲಿ.

(ಗೊಂದಲ)

ಅಧ್ಯಕ್ಷರು : I am standing here.

(ಗೊಂದಲ)

ಅಧ್ಯಕ್ಷರು : ತಾವು ಎಲ್ಲಿಯವರೆಗೆ ಮಾತನಾಡಿದಿರಿ, ನಾನು ಯಾರಿಗೂ ಮಾತನಾಡಲು allow ಮಾಡಲಿಲ್ಲ. ಅವರು ಏನು ಹೇಳುತ್ತಾರೋ ಹೇಳಲಿ ಎಂದು ಹೇಳಿದೆ. ತಾವೆಲ್ಲವನ್ನೂ ಹೇಳಿದ್ದೀರಿ. ನೀವು ಹೇಳುವುದು ಮುಗಿಯಿತು ಎಂದ ಮೇಲೆ concerned minister ಉತ್ತರ ಕೊಡುತ್ತಿದ್ದಾರೆ. ಅವರು ಏನು ಹೇಳುತ್ತಾರೋ ಹೇಳಲಿ. ಆಮೇಲೆ ಬೇಕಾದರೆ ನೀವು ಮತ್ತೆ ಮಾತನಾಡುವಿರಂತೆ.

(ಗೊಂದಲ)

ಅಧ್ಯಕ್ಷರು : ಶೆಟ್ಟರ್‌ರವರೆ ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ ಒಂದೇ ಒಂದು ವಿಷಯ. ಸಂಘ ಪರಿವಾರ ಎಂದು ದಾಖಲೆಗೆ ಹೋಗುತ್ತದೆ. ಏನು ಬೇಕಾದರೂ ಮಾತನಾಡಬಹುದೇನು? ನಾವು ಯಾವುದನ್ನೂ ದಾರಿ ಬಿಟ್ಟು ಮಾತನಾಡಲಿಲ್ಲ. ನಾನು ಕಾಂಗ್ರೆಸ್ ಪಕ್ಷ ಎಂದು ಹೇಳಲಿಲ್ಲ. ನಾವು ರಮಾನಾಥ ರೈ ಎಂದು

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಸ್ಪಷ್ಟವಾಗಿ ಹೇಳಿದ್ದೇವೆ. ಕೊಲೆ ಮಾಡಿದ ವ್ಯಕ್ತಿಯ ಹೆಸರು ಹೇಳಲಿ. ಸಂಘ ಪರಿವಾರ ಎಂದು ಹೇಳುತ್ತಾರೆ. ಸರಿಯಲ್ಲ ಇದು.

(ಗೊಂದಲ)

ಶ್ರೀ ವಿ.ಸುನೀಲ್ ಕುಮಾರ್ : ಯಾವ ತನಿಖೆಯಲ್ಲಿ ಸಾಬೀತಾಗಿದೆ ಹೇಳಿ.

(ಗೊಂದಲ)

ಅಧ್ಯಕ್ಷರು : ಆಯಿತು ಒಂದು ನಿಮಿಷ ಕುಳಿತುಕೊಳ್ಳಿ. ನೋಡಿ ಇದು ಶೂನ್ಯ ವೇಳೆ. Concerned Minister is giving some statement. Whether it is right or not, I don't know. ನಿಮಗೆ ಅವಕಾಶ ಕೊಟ್ಟಿದ್ದೇನೆ. ಅವರಿಗೂ ಅವಕಾಶ ಕೊಟ್ಟಿದ್ದೇನೆ. ನೀವೇನಾದರೂ ಮತ್ತೆ ಹೇಳಬೇಕೆಂದರೆ ಹೇಳಿ ನಾನು ಬೇಡವೆಂದು ಹೇಳುವುದಿಲ್ಲ. ನಿಮಗೆ ಅವಕಾಶ ಕೊಡುತ್ತೇನೆ. ಆಮೇಲೆ ಸರ್ಕಾರ ವಿವರವಾದ ಉತ್ತರವನ್ನು ನಂತರ ಕೊಡುತ್ತದೆ. ನಡುವೆ ನಡುವೆ ಎದ್ದು ಎದ್ದು ಮಾತನಾಡುವುದು ಬೇಡ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಾನು ಸ್ಪಷ್ಟೀಕರಣ ಹೇಳುವಂತಹದು. ರಮಾನಾಥ ರೈ ಯವರು ಎಲ್ಲಾ ರೀತಿ ನಾವು ಇವತ್ತೇನು ಮಾತನಾಡಿದ್ದೇನೆ, ರಮಾನಾಥ ರೈ ಯವರ ಹೆಸರನ್ನು ನೇರವಾಗಿ ಹೇಳಿದ್ದೇವೆ. ಅದರ ಬಗ್ಗೆ ಉತ್ತರ ಕೊಡಲಿ. ಆದರೆ ಯಾವುದೋ ಒಂದು murder case ನಲ್ಲಿ ಇಂತಹ ವ್ಯಕ್ತಿ murder ಮಾಡಿದ್ದಾನೆಂದು ಹೇಳಲಿ. ಆದರೆ ಇಡೀ ಸಂಘ ಪರಿವಾರದ ಹೆಸರನ್ನು ಹೇಳುತ್ತಾರಲ್ಲ, ನಾಳೆ ಅದು ದಾಖಲೆಗೆ ಹೋಗುತ್ತದೆಯಲ್ಲ ಇದಕ್ಕೆ ಯಾರು reply ಕೊಡುವವರು? ಅದನ್ನು ಹೇಳಲಿ ಅವರು. ಅದನ್ನು ನಾವು objection ಮಾಡುತ್ತೇವೆ ಅಷ್ಟೆ. ಉತ್ತರ ಹೇಳಲಿ.

(ಗೊಂದಲ)

19-06-2017

ಅಧ್ಯಕ್ಷರು : ಒಂದು ನಿಮಿಷ. Please sit down. ಕಾಗೇರಿಯವರೆ ಕುಳಿತುಕೊಳ್ಳಿ. ರಮಾನಾಥ ರೈ ಯವರು statement ಕೊಡುತ್ತಿದ್ದಾರೆ ಕೊಡಲಿ. ನಿಮ್ಮದು ಏನಾದರೂ ಇದ್ದರೆ ನಿಮಗೆ ನಂತರ ಅವಕಾಶ ಕೊಡುತ್ತೇನೆ ಆಮೇಲೆ ಹೇಳಿ. ಮಧ್ಯೆ ಎದ್ದು ನಿಂತು ಮಾತನಾಡುವುದು ಬೇಡ. ಅವರು ಮಾತನಾಡಿದ ಮೇಲೆ ನೀವೇನಾದರೂ ಹೇಳುವುದು ಇದ್ದರೆ ಹೇಳಿ. ಅವರು ಮುಗಿಯುವವರೆಗೂ ಯಾರೂ ಮಧ್ಯದಲ್ಲಿ ಎದ್ದು ಮಾತನಾಡತಕ್ಕದ್ದಲ್ಲ. ಅವರು ಮಾತನಾಡಿದ ಮೇಲೆ ನೀವೇನಾದರೂ ಹೇಳುವುದಿದ್ದರೆ ಅವಕಾಶ ಕೊಡುತ್ತೇನೆ. ಆಯಿತೇನು? ರಮಾನಾಥ ರೈ ಯವರೆ ಮಾತನಾಡಿ.

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಕೆಲವರು ಸಂಘ ಪರಿವಾರದವರು ಅಂದರೆ ವ್ಯಕ್ತಿಗಳಿದ್ದರು. ಅವರು ಅರೆಸ್ಟ್ ಕೂಡಾ ಆಗಿದ್ದಾರೆ. ಅದು ನಿರ್ದಿಷ್ಟವಾಗಿ ಇಂತಹ ಸಂಘಟನೆಗೆ ಸೇರಿದವರೆಂದು ಜನಜನಿತವಾಗಿ ಗೊತ್ತಿರುವಂತಹ ವಿಚಾರ. ಇನ್ನು ಅವರ ಪಿತೂರಿದಾರರೂ ಇದ್ದಾರೆ. ಅವರ ಬಗ್ಗೆಯೂ ಕೂಡಾ ಕ್ರಮ ಕೈಗೊಳ್ಳುವಂತಹ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಇದರ ಜೊತೆಯಲ್ಲಿ ಬಂಟ್ವಾಳದ ಕಲ್ಲಡ್ಕ. ಕಲ್ಲಡ್ಕ ನಿರಂತರವಾಗಿ ಗಲಾಟೆಯಾಗುವ ಪ್ರದೇಶ. ಬಹಳ ನೋವಾಗುತ್ತದೆ. ನನ್ನ ಕ್ಷೇತ್ರ ಅದು. ಮೊನ್ನೆ ರಂಜಾನ್ ಹಬ್ಬದ ಪ್ರಾರಂಭದ ದಿನ. ಮಿಥುನ್ ಎಂಬ ಒಬ್ಬ ವ್ಯಕ್ತಿ. ಅವನು ಎರಡು ಕೊಲೆ ಕೇಸಿನಲ್ಲಿ ಶಾಮೀಲಾಗಿದ್ದಾನೆ. ಒಂದು ನಜೀರ್ ಕೇಸಿನಲ್ಲಿ. ಮತ್ತು ಹರೀಶ್ ಎಂಬುವವನನ್ನು ಮುಸ್ಲಿಂ ಎಂದು ತಪ್ಪಾಗಿ ತಿಳಿದು ಅವನನ್ನು ಕೊಲೆ ಮಾಡಿದ್ದಾನೆ. ಮತ್ತೆ ಹಿಂದೂ ಒಬ್ಬನಿಗೆ ಗಲಾಟೆ ಮಾಡಿ ಜೈಲು ಸೇರಿ ಕೆಲವು ತಿಂಗಳುಗಳ ಕಾಲ ಜೈಲಿನಲ್ಲಿದ್ದ. ಅವನನ್ನು ಬಿಟ್ಟು 8 ದಿವಸಗಳಾಗಿವೆ.

(ಮುಂದು. . . .)

19.06.2017/9/11.50/BR/VR

ಶ್ರೀ ಬಿ.ರಮಾನಾಥ ರೈ : (ಮುಂದುವರೆದುದು)

19-06-2017

ಹಿಂದೂ ಒಬ್ಬನಿಗೆ ಗಲಾಟೆ ಮಾಡಿ ಜೈಲು ಸೇರಿ ಕೆಲವು ತಿಂಗಳು ಜೈಲಿನಲ್ಲಿದ್ದ. ಅವನು ಬಿಟ್ಟು ಎಂಟು ದಿವಸ ಆಗಿದೆ. ಎಂಟು ದಿವಸ ಆದಾಗ ಇವರು ಮಸೀದಿಯಿಂದ ಹೊರಗೆ ಬರುವಾಗ ಅವನಿಗೆ ಚೂರಿ ಹಾಕಿದರು. ಸಣ್ಣ ಹುಡುಗ, ವಯಸ್ಸು ಹದಿನೆಂಟು ಅಥವಾ ಇಪ್ಪತ್ತು ಇರಬಹುದು. ಅವನಿಗೆ ಚೂರಿ ಹಾಕಿದ್ದಾರೆ. ಮಿಥುನ್ ಎಂದು ಹೇಳಿ, ಪ್ರತಿ ಪ್ರಕರಣದಲ್ಲಿ ಅವನ ಮೇಲೆ ಕ್ರಿಮಿನಲ್ ಕೇಸ್ ಆಗುತ್ತದೆ. ಅದಕ್ಕೆ ವಕಾಲತ್ತು ಮಾಡುವುದು ಕಲ್ಲಡ್ಕದಿಂದ ನಿರ್ದಿಷ್ಟವಾದ ವ್ಯಕ್ತಿ. ಅವರನ್ನು ಒಟ್ಟಿಗೆ ಇಟ್ಟುಕೊಂಡು ಸಾಕುವುದು, ಸಲಹುವುದು ಎಲ್ಲವೂ ಕೂಡ ನಿರ್ದಿಷ್ಟವಾಗಿ ಕಲ್ಲಡ್ಕದಿಂದ ಮಾಡುತ್ತಾರೆ. ವಿವಿದ್ ಶೆಟ್ಟಿ ಎಂದು ಇನ್ನೊಬ್ಬ ಕೊಲೆ ಮಾಡಿದವನಿದ್ದಾನೆ, ಅವನು ಕೂಡ ಅವರ ಜೊತೆ. ನಾನು ಸಾರ್ವಜನಿಕ ಬದುಕಿನಲ್ಲಿ ಸುಮಾರು ವರ್ಷದಿಂದ ಇದ್ದೇನೆ. ನಾನು ಯಾವುದೇ ಒಬ್ಬ ಕೊಲೆ ಮಾಡಿದವನಿಗೆ ಸಹಕಾರ ಮಾಡಿದ್ದೇನೆ ಎಂದು ಹೇಳಿದರೆ ನಾನು ರಾಜಕೀಯದಿಂದ ನಿವೃತ್ತಿ ಯಾಗುತ್ತೇನೆ. ನಾವು ಮತೀಯ ಸಂಘಟನೆ, ಅದು ಬಹು ಸಂಖ್ಯಾತ ಮತೀಯ ಸಂಘಟನೆ ಇರಬಹುದು, ಅಲ್ಪ ಸಂಖ್ಯಾತ ಮತೀಯ ಸಂಘಟನೆ ಇರಬಹುದು, ಎರಡೂ ಸಂಘಟನೆಯನ್ನು ನಾನು ವಿರೋಧ ಮಾಡುತ್ತೇನೆ. ಸಾಮಾಜಿಕ ಜಾಲತಾಣವನ್ನು ನೋಡಿ. ಕಲ್ಲಡ್ಕದ ಘಟನೆಯಾದಾಗ ಅಲ್ಲಿ ಒಂದು ಮುಸ್ಲಿಂ ಮತೀಯ ಸಂಘಟನೆ ನನ್ನ ಮೇಲೆ ಸಿಕ್ಕಾಪಟ್ಟೆ ಟೀಕೆಯನ್ನು ಮಾಡಿದರು, ಬಹುಸಂಖ್ಯಾತ ಮತೀಯ ಸಂಘಟನೆ ಟೀಕೆ ಮಾಡಿದರು. ನನಗೆ ಸಂತೋಷ, ಏಕೆಂದು ಹೇಳಿದರೆ, ಎರಡೂ ಮತೀಯ ಸಂಘಟನೆಗಳು ನನ್ನ ಮೇಲೆ ಮಾತನಾಡುತ್ತಾರೆ. ಆದರೆ, ನನ್ನ secularism ಎಷ್ಟು ಬಲಿಷ್ಠವಾಗಿದೆ ಎನ್ನುವ ಹೆಮ್ಮೆ ನನಗಿದೆ. ಎರಡೂ ಮತೀಯವಾದಿ ಸಂಘಟನೆಗಳು ನನ್ನ ಮೇಲೆ ಮುಗಿ ಬೀಳುತ್ತಾರೆ ಎಂದರೆ, ಇದಕ್ಕೆ ಕಾರಣಗಳು ರಮಾನಾಥ ರೈ ಎಂದು ಆ ಮತೀಯ ಸಂಘಟನೆ ಹೇಳುವುದು, ಕಾರಣ ಇವರು ಎಂದು ಹೇಳಿ ಬಹುಮತೀಯ ಸಂಘಟನೆ ಹೇಳುವುದು. ನಾನು IBಯಲ್ಲಿ ಮೊನ್ನೆ ನಡೆದ ಘಟನೆಯನ್ನು ಹೇಳುತ್ತೇನೆ. ಇದೆಲ್ಲ ಸಾಮಾನ್ಯವಾಗಿ ಜಿಲ್ಲೆಯಲ್ಲಿ ನಡೆಯುತ್ತಿರುತ್ತದೆ. ನಾನು ಎಲ್ಲಾ ಜಾತಿ, ಎಲ್ಲಾ ಭಾಷೆ, ಎಲ್ಲಾ ಧರ್ಮದವರನ್ನು ಪ್ರೀತಿ ಮಾಡುವ ದೊಡ್ಡ ವ್ಯಕ್ತಿ. ನಾನು ಮನುಷ್ಯನನ್ನು ದ್ವೇಷ ಮಾಡುವುದೇ ಇಲ್ಲ. ಮನುಷ್ಯ ದ್ವೇಷಿ, ಅವರು ದೇವರನ್ನು ಕೂಡ ದ್ವೇಷ ಮಾಡುತ್ತಾನೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ನಾನು ಎಲ್ಲರನ್ನು,

19-06-2017

ಸಕಲ ಜೀವರಾಶಿಗಳನ್ನು ಪ್ರೀತಿ ಮಾಡುವವರು. ಬಸವಣ್ಣ ಹೇಳಿದ ಹಾಗೆ ಈ ಭೂಮಿಯಲ್ಲಿರುವ ಸಕಲ ಜೀವರಾಶಿಗಳನ್ನು ಪ್ರೀತಿ ಮಾಡುವ ಜನ. ನಾನು ಯಾರನ್ನೂ ದ್ವೇಷ ಮಾಡುವ ವ್ಯಕ್ತಿಯಲ್ಲ. ನನಗೆ ಚುನಾವಣೆಯಲ್ಲಿ ಎರಡೂ ಮತೀಯ ಸಂಘಟನೆಗಳವರು ಪ್ರಬಲವಾಗಿ ವಿರೋಧ ಮಾಡುತ್ತಾರೆ. ಎರಡೂ ಮತೀಯ ಸಂಘಟನೆಗಳನ್ನು ಎದುರಿಸಿಕೊಂಡು ನಾನು ನನ್ನ ಕ್ಷೇತ್ರದಲ್ಲಿ ಆರು ಸಾರಿ ಗೆದ್ದಿದ್ದೇನೆ. ಮೊನ್ನೆ ನಡೆದ ಜಿಲ್ಲಾ ಪಂಚಾಯತ್ ಚುನಾವಣೆ ಇರಬಹುದು, ನನಗೆ ಸೀಟು ಬಂದಿದೆ. APMC ಚುನಾವಣೆಯಲ್ಲಿ ನನಗೆ ಸೀಟು ಬಂದಿದೆ. PLD ಬ್ಯಾಂಕ್ ಚುನಾವಣೆಯಲ್ಲಿ ನನಗೆ ಸಂಪೂರ್ಣ 13 ಸೀಟು ಬಂದಿದೆ. ನಾನು ತಾಲ್ಲೂಕು ಪಂಚಾಯಿತಿಯ 19 ಸೀಟು ಕಾಂಗ್ರೆಸ್, 5 ಸೀಟು BJP ಬಂದಿದೆ. ನನ್ನನ್ನು ಒಳ್ಳೆಯ ಗುಣ ಇರುವುದರಿಂದ ಜನ ನನ್ನನ್ನು ಬಿಟ್ಟು ಹಾಕಿಲ್ಲ. ಈ ಪ್ರಭಾಕರ ಭಟ್ಟರ ಊರಲ್ಲಿಯೂ ಸಹ. ಪ್ರಭಾಕರ ಭಟ್ಟರಂತಹ ದೊಡ್ಡ ವ್ಯಕ್ತಿ ಇದ್ದಾರೆ ನಿಮಗೆ, ದೈವೀ ಸಂಭೂತರು. ಅವರ ಊರಲ್ಲಿಯೂ ಸಹ . . . ನಾನು ಜನರ ಬೆಂಬಲದಿಂದ ಇರುವ ಮನುಷ್ಯ. ನಾನು ಮೊನ್ನೆ IB ಯಲ್ಲಿದ್ದೆ. ಕಲ್ಲಡ್ಕಕದ ಮಸೀದಿಯ ಸದಸ್ಯರು, ಕಮಿಟಿಯವರು ಬಂದರು. ಮತ್ತೆ ಬೇರೆ ಜನರೂ ಕೂಡ ಬಂದರು. ಅವರು ಕೆಲ ಅಮಾಯಕರಿಗೆ ತೊಂದರೆಯಾಗುತ್ತದೆ, ಅವರನ್ನು ತಂದೆಯರನ್ನು ಕರೆದು ಕೂರಿಸುತ್ತಾರೆ, ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಲಿ, ಯಾರೇ ತಪ್ಪು ಮಾಡಿದರೂ ನಾನು ಮಾತನಾಡುವುದಿಲ್ಲವೆಂದು ಹೇಳಿದರು. ಅದಕ್ಕೆ ನಾನು SP ಯವರಿಗೆ phone ಮಾಡಿ, ನಾನು ಇಲ್ಲೇ ಇದ್ದೇನೆ ಬರುತ್ತೇನೆ ಬರೆದು ಹೇಳಿದೆ. ನಾನು ಸತ್ಯವನ್ನು ಹೇಳುತ್ತೇನೆ. ನಾನು ಒಂದು ವಿಚಾರವನ್ನೂ ಸಹ ಸುಳ್ಳು ಹೇಳುವುದಿಲ್ಲ. ನಾನು ಬರುತ್ತೇನೆಂದು ಹೇಳಿ, ಈ ಹುಡುಗರನ್ನು ಹೊರಗೆ ಕಳುಹಿಸಿ, ನಾನು ಅವರಲ್ಲಿ ಮಾತನಾಡಿದೆ. ತಪ್ಪಿತಸ್ಥರು ಯಾರಿದ್ದಾರೆ, ಯಾವುದೇ ಧರ್ಮದವರಾಗಲೀ, ಅವರಿಗೆ ಶಿಕ್ಷೆ ಕೊಡಿ. ನಮ್ಮ ಜಿಲ್ಲೆಯಲ್ಲಿ ಸಾಮಾಜಿಕ ಸಾಮರಸ್ಯವನ್ನು ಉಳಿಸುವ ಕೆಲಸವನ್ನು ನಾವು ಮಾಡಬೇಕಾಗಿದೆ. ನಮ್ಮ ಕರ್ತವ್ಯ ಅದು. ಪೊಲೀಸ್ ಆಗಿ ನಿಮ್ಮ ಕರ್ತವ್ಯವೂ ಇದೆ, ನಮ್ಮ ಕರ್ತವ್ಯವೂ ಇದೆ. ಆದುದರಿಂದ ಯಾರ ತಂದೆಯರನ್ನು ಕರೆದುಕೊಂಡು ಬರುವುದು, ಪಾಪ ಅವರಿಗೆ ಮಕ್ಕಳು ಏನು ಮಾಡುತ್ತಾರೆಂದು ಗೊತ್ತಿರುವುದಿಲ್ಲ. ಕೆಲವು ಸಾರಿ ತಂದೆ ಕಾಂಗ್ರೆಸ್ ಇರುತ್ತಾನೆ, ಮಗ ಬಿ.ಜೆ.ಪಿ. ಇರುತ್ತಾನೆ. ಕೆಲವು ಸಾರಿ ತಂದೆ ಬಿ.ಜೆ.ಪಿ. ಇರುತ್ತಾನೆ, ಮಗ ಕಾಂಗ್ರೆಸ್ ಇರುತ್ತಾನೆ. ಅದು ಹುಡುಗರ

ಮನೋಭಾವ. ತಂದೆ ಕಾಂಗ್ರೆಸ್ ಇರುತ್ತಾನೆ, ಮಗ SDPI ಇರುತ್ತಾನೆ. ನಮ್ಮ video recordನಲ್ಲಿ ಎಲ್ಲಾ ಬಂದಿದೆ. ಇದು ನಾನು ಸೃಷ್ಟಿ ಮಾತನಾಡುವ ವಿಚಾರ ಅಲ್ಲ. ವೀಡಿಯೋದಲ್ಲಿ ಪೂರ್ತಿ ಇದೆ. ವೀಡಿಯೋವನ್ನು ಆರಂಭದಿಂದ ನೋಡಬೇಕು. ನಾವು ಸಾಮರಸ್ಯವನ್ನು ಉಳಿಸುವ ಕೆಲಸವನ್ನು ನಾವು ಮಾಡಬೇಕು. ನಮ್ಮ SPಗೆ ನಾನು ಯಾವುದೇ ವ್ಯಕ್ತಿಗೆ ನಿರ್ದೇಶನವನ್ನು ಕೊಟ್ಟಿಲ್ಲ. ಈ ಜಿಲ್ಲೆಯಲ್ಲಿ ನಿರಂತರವಾಗಿ ಪ್ರಚೋದನಕಾರಿ ಭಾಷಣವನ್ನು ಮಾಡುತ್ತಾರೆ. ಈ ಜಿಲ್ಲೆಗೆ ಕಾರಣ, ಪ್ರಚೋದನಕಾರಿ ಭಾಷಣಗಳು. ಅವರ ಭಾಷಣಗಳ ಶೈಲಿಯನ್ನು ನೋಡಬೇಕು, ಮೊನ್ನೆ ಮಾತನಾಡಿದ್ದಾರೆ, ಈಗ ನಾನು ಮಾತನಾಡಿರುವುದು ತಪ್ಪು ಎಂದಾದರೆ, ನರ ಸತ್ತ ಎಸ್.ಪಿ ಇದ್ದಾನೆ ಎಂದು ಹೇಳಿದ್ದಾರೆ. ಅದು ಬೇಕಾಗಿಲ್ಲ. ನರ ಸತ್ತ ಪೊಲೀಸ್ ಎಸ್‌ಪಿ ಇದ್ದಾನೆಂದು ಹೇಳಿದರು. ಮೊನ್ನೆ ಒಂದು ಉಳ್ಳಾಲದಲ್ಲಿ ಘರ್ಷಣೆ ನಡೆಯಿತು. ಒಬ್ಬ ಕುಟುಂಬದಲ್ಲಿ ಒಂದು murder ಆಗಿತ್ತು. Arrest ಮಾಡದಿದ್ದರೆ ಜಿಲ್ಲೆಗೆ ಬೆಂಕಿ ಇಡುತ್ತೇವೆಂದು ಒಬ್ಬ MP ಮಾತನಾಡಿದ್ದಾರೆ. ಕಡೆಯಲ್ಲಿ ನೋಡಿದರೆ, ಅವರ ಕುಟುಂಬ ಸದಸ್ಯರೇ murder ಮಾಡಿದ್ದರು. ಯಾವ ಮುಸ್ಲಿಂರೂ ಮಾಡಿಲ್ಲ, ಅವರ ಕುಟುಂಬ ಸದಸ್ಯರೇ ಮಾಡಿದ್ದರು. ಜಿಲ್ಲೆಗೆ ಬೆಂಕಿ ಇಡುವ ಮಾತನಾಡಿದರು. ಈಗ ರಾಜ್ಯಕ್ಕೆ ಬೆಂಕಿ ಇಡುವ ಮಾತನಾಡಿದ್ದಾರೆ. ಅದು ಪ್ರಚೋದನೆ ಅಲ್ಲವೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಅಧ್ಯಕ್ಷರೆ, ಇವರು ಹೀಗೆ ಬೆಂಕಿ ಬಗ್ಗೆ ಮಾತನಾಡುತ್ತಿರುವುದು ಸರಿಯಲ್ಲ. ರಮಾನಾಥ ರೈರವರ statement ಇದೆ. ನಮ್ಮ ಬಳಿ ದಾಖಲೆ ಇದೆ.

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ ಕುಳಿತುಕೊಳ್ಳಿ. ನಾನು ಎಲ್ಲರಿಗೂ ಮಾತನಾಡಲು ಅವಕಾಶ ಕೊಡುತ್ತೇನೆ.

(ಗೊಂದಲ)

19-06-2017

ಶ್ರೀ ಜಗದೀಶ್ ಶೆಟ್ಟರ್: ನೀವು ದಾಖಲೆಗಳನ್ನು ಇಟ್ಟು ಮಾತನಾಡಿ. ಅವರು ಎಂಪಿ ಬಗ್ಗೆ ಹೇಳಿದ್ದು ಸರಿಯಲ್ಲ. MP ಬಗ್ಗೆ ಹೇಳಿದರು. MP ಯವರು ಜಿಲ್ಲೆಗೆ ಬೆಂಕಿ ಇಟ್ಟರು ಎಂದರೆ ದಾಖಲೆ ಎಲ್ಲಿದೆ.

(ಗೊಂದಲ)

ಅಧ್ಯಕ್ಷರು: ನಾನು ಅವರಿಗೆ ಹೇಳುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ. Please ಕುಳಿತುಕೊಳ್ಳಿ. ರಮಾನಾಥ್ ರೈ ಜೀ, ನೀವು ಈ ಒಂದು incident ಆಗಿದೆಯಲ್ಲಾ, ಇದರ ಬಗ್ಗೆ limit ಆಗಿ ಏನು ಹೇಳಬೇಕೋ ಹೇಳಿ. ಬೇರೆ ವಿಷಯ ತೆಗೆಯಬೇಡಿ.

ಶ್ರೀ ಬಿ.ರಮಾನಾಥ ರೈ: ಅಷ್ಟೇ ಮಾತನಾಡುತ್ತೇನೆ. ಅಲ್ಲಿ ಮಾತನಾಡಿರತಕ್ಕ ವಿಚಾರ ಅಷ್ಟೇ ಮಾತನಾಡುತ್ತೇನೆ.

ಅಧ್ಯಕ್ಷರು: O.K. ಮಾತನಾಡಿ. ಈ incident ವಿಷಯಕ್ಕೆ ಸಂಬಂಧಪಟ್ಟಂತೆ ಏನಿದೆಯೋ ಅಷ್ಟನ್ನೇ ಮಾತನಾಡಿ.

ಶ್ರೀ ಬಿ.ರಮಾನಾಥ ರೈ: ನಾನು ವೀಡಿಯೋ ಬಗ್ಗೆಯೇ ಮಾತನಾಡುತ್ತೇನೆ. ನಾನು ಪೊಲೀಸರಿಗೆ ಹೇಳತಕ್ಕಂಥದ್ದು, ನೋಡಿ, ಬಡಪಾಯಿಗಳು ಇರುತ್ತಾರೆ, ಯಾರೋ ಅಮಾಯಕರಿರುತ್ತಾರೆ, ಅವರಿಗೆಲ್ಲಾ ತೊಂದರೆ ಕೊಡಲು ಹೋಗಬೇಡಿ. ಅವರ ತಂದೆಯವರನ್ನು ಕರೆಸುವುದನ್ನು ಕಡಿಮೆ ಮಾಡಿ. ಯಾರು ತಪ್ಪು ಮಾಡಿದ್ದಾರೆ, ಅವರ ವಿಡಿಯೋ ಕ್ಯಾಸೆಟ್ ಎಲ್ಲವೂ ಇದೆ. ಯಾರು ತಪ್ಪು ಮಾಡಿದ್ದಾರೆ, ಎರಡೂ ಧರ್ಮದವರೂ ಇರಬಹುದು, ಅವರನ್ನು ನೀವು ಅರೆಸ್ಟ್ ಮಾಡಿ ಎಂದು ಹೇಳಿದೆ. ಆಗ ನಾನು ಒಂದು ಮಾತು ಹೇಳಿದೆ. ಹಾಗಿದ್ದರೆ, ಜಿಲ್ಲೆಯಲ್ಲಿ ಕೋಮು ಘರ್ಷಣೆಗಳು ಆಗುವುದಕ್ಕೆ ಕಾರಣಗಳು ಏನು? ಪ್ರಚೋದನಕಾರಿ ಭಾಷಣ. ಪ್ರಭಾಕರ ಭಟ್ಟರು ಎಲ್ಲಾ ಕಡೆ ಹೋಗಿ ಪ್ರಚೋದನಕಾರಿ ಭಾಷಣ ಮಾಡುತ್ತಾರೆ. ಅಂಥವರ ಮೇಲೆ ಕೇಸ್ ಮಾಡಿ. ಈ ಅಮಾಯಕರಿಗೆ ತೊಂದರೆ ಕೊಡುವವರ ಮೇಲೆ ಕೇಸ್ ಮಾಡಿ. ಇದು ನನ್ನ ವೀಡಿಯೋದಲ್ಲಿ ಇದೆ. ನಿರ್ದಿಷ್ಟವಾಗಿ ಕಲ್ಲಡ್ಕ ಪ್ರಕರಣಕ್ಕೆ ಸಂಬಂಧಪಟ್ಟಂತೆ 307 ಹಾಕಬೇಕು ಎಂದು ಹೇಳುವ ಅರ್ಥದಲ್ಲಿ ನೀವು ಮಾತನಾಡುತ್ತೀರಿ. ನಾನು generalize ಆಗಿ ಮಾತನಾಡಿದ್ದೇನೆ. ಮತೀಯ ಸಂಘಟನೆಗಳು, ಮುಸ್ಲಿಂ ಮತೀಯ ಸಂಘಟನೆಗಳನ್ನು ಸಹ ನಾನು

ಟೀಕೆ ಮಾಡುತ್ತೇನೆ. ನಾನು ಈ ಸದನದಲ್ಲಿ ಒಂದು ಮಾತನ್ನು ಹೇಳುತ್ತೇನೆ. ನಾನು ಯಾವುದೇ ಜಾತಿ ಇರಬಹುದು, ನಾನು ಯಾವುದೇ ಧರ್ಮ ಇರಬಹುದು, ಯಾವುದೇ ಭಾಷೆ ಇರಬಹುದು, ಒಂದು ಚಿಕ್ಕ ವ್ಯತ್ಯಾಸ ಮಾಡಿದರೆ, ನಾನು ರಾಜಕೀಯದಿಂದ ಹೊರಗೆ ಬರುತ್ತೇನೆ. ನಾನು ಎಲ್ಲರನ್ನೂ ಸಮಾನರನ್ನಾಗಿ ಕಾಣುತ್ತೇನೆ. ನಾನು ಧರ್ಮದ ಹೆಸರಿನಲ್ಲಿ ಯಾವುದೇ ಮನುಷ್ಯನನ್ನು ದ್ವೇಷ ಮಾಡುವುದಿಲ್ಲ. ನಾವು ಈ ಭೂಮಿಗೆ ಅರ್ಜಿ ಹಾಕಿ ಹುಟ್ಟಿದವರಲ್ಲ. ದೇವರು ನಮಗೆ ಜನ್ಮ ಕೊಟ್ಟಿದ್ದಾನೆ. ಅದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ನಾವು ನೇರವಾಗಿ ಆ ಪ್ರಕರಣದ ಮೇಲೆ ಹೇಳಿಲ್ಲ, general ಆಗಿ ಹೇಳುವಂಥದ್ದನ್ನು ಹೇಳಿದ್ದೇನೆ. ಕೆಲವು ವಿಚಾರಗಳನ್ನು ನಾನು ಹೇಳಿದ್ದೇನೆ. ಅದು ಸಾಮರಸ್ಯವಾಗಿ ಉಳಿಯಬೇಕು. ಪ್ರಚೋದನಕಾರಿಯಾಗಿ ಯಾರು ಮಾತನಾಡುತ್ತಾರೆಯೋ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿ. ಸುಮ್ಮನೆ ಪಾಪದವರು, ನಿರಪರಾಧಿಗಳು, ಅಮಾಯಕರು ಯಾರಿರುತ್ತಾರೆಯೋ ಅವರಿಗೆ ತೊಂದರೆ ಮಾಡಬೇಡಿ, ಅವರ ಮನೆಯವರನ್ನು ಕರೆದು ಕೂರಿಸುವುದು ಮಾಡಬೇಡಿ. ಯಾರಿಗೂ ಹೆದರುವ ಅವಶ್ಯಕತೆ ಇಲ್ಲ ಎನ್ನುವ ಮಾತನ್ನು ನಾನು ಹೇಳಿದ್ದೇನೆ, ಹೊರತು ಬೇರೆ ಯಾವುದನ್ನೂ ಹೇಳಿಲ್ಲ.

(ಮು.ವ

)

19-06-2017/12-00/10/HRV/VR

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):-ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸಚಿವರು ಏನು ಹೇಳುತ್ತಿದ್ದಾರೆಂದರೆ, ಪ್ರಭಾಕರ ಭಟ್ಟರ ಬಗ್ಗೆ ನಾನು ಆ ರೀತಿ ಹೇಳಿಲ್ಲ, ಅವರು ಪ್ರಚೋದನಕಾರಿ ಭಾಷಣ ಮಾಡಿದ್ದರು ಎನ್ನುತ್ತಾರೆ. ಯಾವಾಗ ಮಾಡಿದ್ದರು, ಏನು ಮಾಡಿದ್ದರು ಎನ್ನುವ ಬಗ್ಗೆ ಅವರು ಹೇಳಲಿ. ಅದನ್ನು ಬಿಟ್ಟು ಸುಮ್ಮನೆ ಈ ರೀತಿ ಹೇಳುವುದು ಸರಿಯಲ್ಲ. ಮೊನ್ನೆ 26ನೇ ತಾರೀಖು ಅಲ್ಲಿ ಗಲಭೆಯಾಗಿದೆ. ಆ ಗಲಭೆಗೆ ಕಾರಣವೇನು ಎನ್ನುವ ಬಗ್ಗೆ ಈಗಾಗಲೇ ಅಲ್ಲಿಯ ಎಸ್.ಪಿ. ಯವರು ಒಂದು ಸ್ಟೇಟ್‌ಮೆಂಟ್‌ನ್ನು ಕೂಡ ಕೊಟ್ಟಿದ್ದಾರೆ. ಅದನ್ನು ಬಿಟ್ಟು ಇದೇ ಸಂದರ್ಭದಲ್ಲಿ ನಿನ್ನೆ, ಮೊನ್ನೆ ಅವರು ಈ ರೀತಿಯಲ್ಲಿ ಮಾತನಾಡಿ, 26 ನೇ ತಾರೀಖಿನ ಗಲಭೆಯ ಹಿನ್ನಲೆಯಲ್ಲಿ

19-06-2017

ಇವತ್ತು ಪ್ರಭಾಕರ ಭಟ್ಟರು ಪ್ರಚೋದನಕಾರಿ ಭಾಷಣ ಮಾಡಿದ್ದಾರೆ, ಅವರ ಮೇಲೆ 307 ಕೇಸ್ ಹಾಕಿ ಎಂದು ಹೇಳುತ್ತಾರೆಂದರೆ, ಇವತ್ತು ಇಲ್ಲಿ ಬಂದು ನಾನು ಜನರಲ್ ಆಗಿ ಹೇಳಿದೆ ಎಂದು ಹೇಳುತ್ತಿದ್ದಾರೆ. ಅವರ ಮಾತನ್ನು ಹಿಂತೆಗೆದುಕೊಳ್ಳಲಿ, ಈ ರೀತಿ ಹೇಳಿಲ್ಲವೆಂದು ಸ್ಪಷ್ಟವಾಗಿ ಹೇಳಲಿ. ಪ್ರಭಾಕರ ಭಟ್ಟರ ಬಗ್ಗೆ ಈ ರೀತಿ ಹೇಳಿಲ್ಲವೆಂದು ಅವರು ಸ್ಪಷ್ಟವಾಗಿ ಹೇಳಲಿ. ಅವರು ಮಾತನಾಡಿರುವುದನ್ನು ಹಿಂತೆಗೆದುಕೊಳ್ಳಬೇಕು ಮತ್ತು ಕ್ಷಮಾಪಣೆ ಕೇಳಬೇಕು. ಸುಮ್ಮನೆ ಹೀಗೆ ಜನರಲ್ ಆಗಿ ಮಾತನಾಡಿದ್ದೇನೆ, ಅವರು ಪ್ರಚೋದನಕಾರಿ ಹೇಳಿಕೆಗಳನ್ನು ಕೊಡುತ್ತಿದ್ದರು, ಅದಕ್ಕಾಗಿ ನೀವು ಕೇಸ್ ಹಾಕಿ ಎಂದು ಹೇಳಿದೆ ಎಂದು ಈ ರೀತಿ ಸಬೂಬು ಹೇಳುವಂಥದ್ದಲ್ಲ. ಒಬ್ಬ ಜವಾಬ್ದಾರಿ ಮಂತ್ರಿ ಹೇಳುವಂಥದ್ದಲ್ಲ. ಮಾನ್ಯ ಅಧ್ಯಕ್ಷರೆ, ಅವರು ಮಾತನಾಡಿರುವ ವಿಡಿಯೋ ಇದೆ ಮತ್ತು ಇವತ್ತಿನ ಪತ್ರಿಕೆಗಳಲ್ಲಿ ಬಂದಿದೆ. ನಾನು ಕೂಡ ನಿನ್ನೆ ಆ ಸಿ.ಡಿ. ಕ್ಲಿಪಿಂಗ್ಸ್‌ಗಳನ್ನು ನೋಡಿದ್ದೇನೆ. ವಿಡಿಯೋದಲ್ಲಿ ಅವರು ಮಾತನಾಡಿರುವುದನ್ನೆಲ್ಲವನ್ನು ನೋಡಿದ್ದೇನೆ. ಜವಾಬ್ದಾರಿಯುತ ಸಚಿವರು ಈ ರೀತಿಯಲ್ಲಿ ಇದರ ಬಗ್ಗೆ ನಾನು ಜನರಲ್ ಆಗಿ ಮಾತನಾಡಿದೆ ಎಂದು ಹೇಳಿ ಎಲ್ಲವನ್ನೂ ಮಾತನಾಡಿ ಮುಗಿಸಿದ ಮೇಲೆ ಈ ರೀತಿ ಸಬೂಬು ಹೇಳುವಂಥದ್ದು ಸರಿಯಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನೇರವಾಗಿ ಎಸ್.ಪಿ. ಯವರನ್ನು ಕೂರಿಸಿಕೊಂಡು ಅವರ ಮೇಲೆ 307 ಕೇಸ್ ಬುಕ್ ಮಾಡಿ ಎಂದು ಹೇಳಿದ್ದಾರೆ.

ಅಧ್ಯಕ್ಷರು:-ಕಾಗೇರಿಯವರೆ, ಮಾನ್ಯ ಸಚಿವರು ಈಗಾಗಲೇ ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-ಅವರ ಸ್ಪಷ್ಟೀಕರಣ ತಪ್ಪಿನಿಂದ ಕೂಡಿದೆ. ನಾವು ಪತ್ರಿಕೆಯಲ್ಲಿ ಬಂದಿರುವುದನ್ನು, ವಿಡಿಯೋದಲ್ಲಿರುವುದನ್ನು ನೋಡಿದ್ದೇವೆ, ಅದರಲ್ಲಿ ಎಸ್.ಪಿ.ಯವರನ್ನು ಕೂರಿಸಿಕೊಂಡು ಅವರ ಮೇಲೆ 307 ಕೇಸ್ ಬುಕ್ ಮಾಡಿ ಎಂದು ಎಸ್.ಪಿ.ಯವರಿಗೆ ನಿರ್ದೇಶನ ಕೊಡುವಂಥ, ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಅಧಿಕಾರಿಗಳ ಮೇಲೆ ಒತ್ತಡ ತರುವಂಥ ನೇರ ಪ್ರಯತ್ನವಿದು. ಇಂಥವರನ್ನು ಮಾನ್ಯ ಮುಖ್ಯಮಂತ್ರಿಗಳು ಹೇಗೆ ಅಧಿಕಾರದಲ್ಲಿ ಮುಂದುವರೆಸುವುದಕ್ಕೆ ಸಾಧ್ಯವಿದೆ.

ಅಧ್ಯಕ್ಷರು:-ಇದಕ್ಕೆ ಸಂಬಂಧಿಸಿದಂತೆ ಏನಾದರೂ ರೆಕಾರ್ಡ್ಸ್ ಇದೆಯೆ, ಸಿ.ಡಿ. ಇದೆಯೆ,

19-06-2017

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-ಎಲ್ಲವೂ ಇದೆ.

ಅಧ್ಯಕ್ಷರು:-ಸಿ.ಡಿ. ಯಿದ್ದರೆ ಅದನ್ನು ಕಳುಹಿಸಿಕೊಡಿ. ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:-ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಎಲ್ಲ ಮಾಹಿತಿಯನ್ನು ತರಿಸಿಕೊಳ್ಳಲಿ. ಇದರ ಬಗ್ಗೆ ಗೃಹ ಸಚಿವರು ಸ್ಪಷ್ಟವಾಗಿ ಉತ್ತರವನ್ನು ಸದನದಲ್ಲಿ ಕೊಡಲಿ.

ಅಧ್ಯಕ್ಷರು:-ಕೊಡಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:-ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರೇನು ಈಗ ಸ್ಪಷ್ಟೀಕರಣ ಕೊಟ್ಟಿದ್ದಾರಲ್ಲ ಅದರಲ್ಲಿ ಅರ್ಥವಿಲ್ಲ. ಆದುದರಿಂದ ಆ ಸಿ.ಡಿ. ಯನ್ನು ತರಿಸಿ.

ಅಧ್ಯಕ್ಷರು:-ನೋಡಿ, ಅವರು concerned minister, ಅವರಿಗೆ ಅವಕಾಶವನ್ನು ಕೊಡಲೇಬೇಕು.

ಶ್ರೀ ಜಗದೀಶ್ ಶೆಟ್ಟರ್:-ನೀವು ಅವರಿಗೆ ಅವಕಾಶವನ್ನು ಕೊಟ್ಟಿರುವುದರ ಬಗ್ಗೆ ನಮ್ಮ ತಕರಾರೇನೂ ಇಲ್ಲ. ನೀವು ಅವರಿಗೆ ಅವಕಾಶ ಕೊಟ್ಟಿದ್ದೀರಿ. ಅವರು ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ. ಆದರೆ ಅವರ ಸ್ಪಷ್ಟೀಕರಣದಲ್ಲಿ ಇವತ್ತು ಪ್ರಭಾಕರ್ ಶೆಟ್ಟರ ಬಗ್ಗೆ ಅವರು ನೇರವಾಗಿ ಮಾತನಾಡಿದ್ದು ಈ ರೀತಿ ಅವರು ಪ್ರಚೋದನಕಾರಿ ಹೇಳಿಕೆ ಎಂದು ಹೇಳುತ್ತಾರೆ. ಆದರೆ ಯಾವ ಹೇಳಿಕೆ ಎನ್ನುವುದನ್ನು ಮಾನ್ಯ ಸಚಿವರು ಹೇಳಲಿ. ಯಾವಾಗ ಅವರು ಪ್ರಚೋದನಕಾರಿ ಹೇಳಿಕೆಯನ್ನು ಕೊಟ್ಟಿದ್ದರೋ ಆ ಸಂದರ್ಭದಲ್ಲಿಯೇ ಕೇಸ್ ಹಾಕಬೇಕು. ಮಾನ್ಯ ಅಧ್ಯಕ್ಷರೆ, ಸಿ.ಡಿ.ಯನ್ನು ಬೇಕಾದರೆ ನಿಮಗೂ ಕಳುಹಿಸಿಕೊಡುತ್ತೇವೆ.

ಅಧ್ಯಕ್ಷರು:-ಕಳುಹಿಸಿಕೊಡಿ.

ಶ್ರೀ ಜಗದೀಶ್ ಶೆಟ್ಟರ್:-ನೀವು ಸಿ.ಡಿ. ಯನ್ನು examine ಮಾಡಿ. ಮಾನ್ಯ ಗೃಹ ಸಚಿವರಿದ ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು:-ಕೊಡಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:-ಈ ವಿಚಾರದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುವುದೇನೆಂದರೆ, ಮಾನ್ಯ ಸಿದ್ದರಾಮಯ್ಯನವರೆ, ರಮಾನಾಥ ರೈರವರು ಕೊಟ್ಟಿರುವ ಈ ರೀತಿಯ

ಹೇಳಿಕೆಗಳನ್ನು ನೀವು ನೋಡಿದರೆ ಅವರು ನಿಜವಾಗಿ ಸಚಿವ ಸ್ಥಾನದಲ್ಲಿ ಮುಂದುವರೆಯುವುದಕ್ಕೆ ಆಗುವುದಿಲ್ಲ, ಅಂಥ ವ್ಯಕ್ತಿಗಳನ್ನು ನೀವು ದಯವಿಟ್ಟು ಕೈಬಿಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ ಮತ್ತು ಮಾನ್ಯ ಗೃಹ ಸಚಿವರು ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-ಮಾನ್ಯ ಅಧ್ಯಕ್ಷರೆ, ಪ್ರಚೋದನಕಾರಿ ಭಾಷಣವನ್ನು ಯಾವುದೇ ಸಮಾಜದವರು, ಯಾರೇ ಮಾಡಿದ್ದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನು ಎನ್ನುವುದು ಇದೆ. ಹೀಗಿದ್ದರೂ ಕೂಡ ಅಧಿಕಾರಿಯನ್ನು ಕರೆಸಿ ನೀವು ಹೀಗೇ ಮಾಡಿ ಎಂದು direction ಕೊಡುವುದು ಸರಿಯಲ್ಲ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:-ನಾನು ಆ ರೀತಿ ನಿರ್ದೇಶನವನ್ನು ಕೊಟ್ಟಿಲ್ಲ.

ಅಧ್ಯಕ್ಷರು:-ರಮಾನಾಥ ರೈರವರೆ, ಒಂದು ನಿಮಿಷ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:-ಸುಮ್ಮನೆ ಇವರು ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ನನ್ನ ಹೆಸರನ್ನು ಬಳಸುವುದು, ಸಚಿವರು ಮಾಡುತ್ತಾರೆ, ಸಚಿವರು ಮಾಡುತ್ತಾರೆ, ಸಚಿವರು ಮಾಡುತ್ತಾರೆಂದು ಹೇಳುವುದು. ಇವರು ಎರಡೆರಡು ಕೊಲೆ ಮಾಡಿದವರನ್ನು ಮನೆಯಲ್ಲಿಟ್ಟುಕೊಳ್ಳುತ್ತಾರೆ.

ಅಧ್ಯಕ್ಷರು:-ರಮಾನಾಥ ರೈರವರೆ, please ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):-ಮಾನ್ಯ ಅಧ್ಯಕ್ಷರೆ, ಇವರು ಈ ರೀತಿ ಹೇಳುವುದು ಸರಿಯಲ್ಲ. ಎರಡೆರಡು ಕೊಲೆ ಮಾಡಿದವರನ್ನು ಮನೆಯಲ್ಲಿಟ್ಟುಕೊಳ್ಳುತ್ತಾರೆಂದು ಮಾನ್ಯ ಸಚಿವರು ಹೇಳುತ್ತಾರೆ. ಹಾಗಾದರೆ ನಿಮ್ಮ ಪೋಲಿಸ್‌ನವರು ಏನು ಮಾಡುತ್ತಿದ್ದರು. It is your failure. ಈ ರೀತಿ ಬೇಜವಾಬ್ದಾರಿಯಿಂದ ಇವರು ಹೇಳುತ್ತಾರೆ. ಎರಡೆರಡು ಕೊಲೆ ಮಾಡಿದವರನ್ನು ಪ್ರಭಾಕರಭಟ್ಟರು ಮನೆಯಲ್ಲಿಟ್ಟುಕೊಳ್ಳುತ್ತಾರೆಂದು ಹೇಳುತ್ತಾರೆ. ಹಾಗಾದರೆ ಅಲ್ಲಿಯ ಎಸ್.ಪಿ. ಏನು ಮಾಡುತ್ತಿದ್ದರು, ಅಲ್ಲಿಯ ಪೋಲಿಸ್‌ನವರು ಏನು ಮಾಡುತ್ತಿದ್ದರು.

(ಗೊಂದಲ)

19-06-2017

ಶ್ರೀ ಬಿ. ರಮಾನಾಥ ರೈ:-ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು:-ರಮಾನಾಥ ರೈ, ನೀವು ಕುಳಿತುಕೊಳ್ಳಿ. ನಿಮಗೆ ಆಮೇಲೆ ಅವಕಾಶ ಕೊಡುತ್ತೇನೆ. ನಾನು ಈಗ ಎದ್ದು ನಿಂತುಕೊಂಡಿದ್ದೇನೆ. ನೀವು ಕುಳಿತುಕೊಳ್ಳಿ. ನಾನು ಎದ್ದು ನಿಂತಾಗ ಎಲ್ಲರೂ ಕುಳಿತುಕೊಳ್ಳಬೇಕು ತಾನೆ.

ಶ್ರೀ ಬಿ. ರಮಾನಾಥ ರೈ:-ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ,

ಶ್ರೀ ವಿ. ಸುನೀಲ್‌ಕುಮಾರ್:-ನೋಡಿ ಅಧ್ಯಕ್ಷರೆ, ನಿಮಗೇ ಈ ರೀತಿ ಅಗೌರವ ತೋರಿಸುತ್ತಾರೆ. ಇನ್ನು ಜಿಲ್ಲೆಯಲ್ಲಿ ಹೇಗೆ ಆಡಳಿತ ನಡೆಯುತ್ತದೆ ಹೇಳಿ.

ಅಧ್ಯಕ್ಷರು:-ಮಾನ್ಯ ಸಚಿವರೆ, ನಾನು ಎದ್ದು ನಿಂತಿದ್ದೇನೆ. ನಿಮಗೆ ಕುಳಿತುಕೊಳ್ಳಬೇಕು ಎನ್ನುವುದು ಗೊತ್ತಿಲ್ಲವೆ. ನಾನು ಎದ್ದು ನಿಂತಾಗ ಎಲ್ಲರೂ ಕುಳಿತುಕೊಳ್ಳಬೇಕು ಎಂದು ನಿಯಮವಿದೆಯಲ್ಲವೆ.

ಶ್ರೀ ಬಿ. ರಮಾನಾಥ ರೈ:-ವಕಾಲತ್ತನ್ನು ಅವರೇ ಮಾಡುತ್ತಾರೆ.

ಅಧ್ಯಕ್ಷರು:-ರಮಾನಾಥ ರೈರವರೆ, ನಾನು ಎದ್ದು ನಿಂತಿರುವಾಗ ನೀವು ಈ ರೀತಿ ಎದ್ದು ನಿಂತು ಮಾತನಾಡುವುದು ಸರಿಯಲ್ಲ. ತಾವು ಕುಳಿತುಕೊಳ್ಳಿ.

ಶ್ರೀ ಕೆ.ಜಿ. ಬೋಪಯ್ಯ:-ಮಾನ್ಯ ಸಚಿವರೆ, ತಾವು ಹೇಳುವುದೇನು, ಯಾವುದಾದರೂ ಕೇಸ್‌ನ್ನು ತೆಗೆದುಕೊಳ್ಳಬಾರದೆ?

ಅಧ್ಯಕ್ಷರು:-ಮಾನ್ಯ ಬೋಪಯ್ಯನವರೆ, ತಾವು ಸಭಾಧ್ಯಕ್ಷರಾಗಿ ಕೆಲಸ ಮಾಡಿದವರು. ತಮಗೆ ನಿಯಮ ತಿಳಿದಿದೆ. ನಾನು ನಿಂತಿರುವಾಗ ಎಲ್ಲರೂ ಕುಳಿತುಕೊಳ್ಳಬೇಕು ಎನ್ನುವ ನಿಯಮವಿದೆ. ನೀವು ಕೂಡ ಹೀಗೆ ಎದ್ದು ನಿಂತರೆ ಹೇಗೆ ಹೇಳಿ. ಸದನ ನಡೆಯಬೇಕೋ ಬೇಡವೋ ಹೇಳಿ. ನಾನು ಈಗ ನಿಂತಿದ್ದೇನೆ. ಮಾನ್ಯ ಸಚಿವರಿಗೂ ಕೂಡ ಈಗ ತಾನೆ ಹೇಳಿದ್ದೇನೆ. ನಾನು ಎದ್ದು ನಿಂತಾಗ ಬೇರೆಯವರು ಎದ್ದು ನಿಂತುಕೊಳ್ಳಬಾರದೆಂದು. ಅದೇ ರೀತಿ ನಿಮಗೂ ಹೇಳುತ್ತಿದ್ದೇನೆ. ಈಗ ಯಾರೂ ಏನೂ ಮಾತನಾಡಬೇಡಿ. ವಿರೋಧ ಪಕ್ಷದ ನಾಯಕರೆ ಈಗ ತಾವು ಏನು ಹೇಳಬೇಕೆಂದಿದ್ದಿರೋ ಅವೆಲ್ಲವನ್ನು ಕೂಡ ಹೇಳಿದ್ದೀರಿ. ಈಗ ಯಾವುದು ಇನ್ನೂ ಉಳಿದಿಲ್ಲ. ಸಂಬಂಧ ಪಟ್ಟಂಥ ಸಚಿವರು ತಮ್ಮದೇ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಆದಂಥ ಹೇಳಿಕೆಯನ್ನು ಕೊಟ್ಟಿದ್ದಾರೆ. ಈಗ ನೀವೇನು ಕಳುಹಿಸಿಕೊಡುತ್ತೀರೋ ಅದನ್ನೆಲ್ಲವನ್ನು ನನಗೆ ಕಳುಹಿಸಿಕೊಡಿ. ನಾನು ಸರ್ಕಾರಕ್ಕೆ ಅವೆಲ್ಲವನ್ನು ಕಳುಹಿಸಿಕೊಡುತ್ತೇನೆ. ಸರ್ಕಾರದವರು ಏನು ಉತ್ತರ ಕೊಡುತ್ತಾರೋ ಅದೆಲ್ಲವನ್ನು ತರಿಸಿಕೊಂಡು ಎಲ್ಲದಕ್ಕೂ ವಿವರಣೆಯನ್ನು ಕೊಡಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):-ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಪತ್ರಿಕೆಯಲ್ಲಿ ಬಂದಿರುವುದು ಮತ್ತು ಸಿ.ಡಿ. ಬಗ್ಗೆ ಹೀಗೆ ಎಲ್ಲ ಮಾಹಿತಿಗಳು ಕೂಡ ಪೋಲಿಸ್‌ನವರಿಗೆ ಸಿಕ್ಕಿರುತ್ತದೆ. ಅಲ್ಲಿಯ ಎಸ್.ಪಿ. ಯವರಿಂದ ಇದರ ಬಗ್ಗೆ ರಿಪೋರ್ಟ್ ತೆಗೆದುಕೊಳ್ಳಲಿ. ರಮಾನಾಥ ರೈರವರ ಸ್ಟೇಟ್‌ಮೆಂಟ್‌ನ್ನು ಕೂಡ ತೆಗೆದುಕೊಳ್ಳಲಿ. ಇಂದು ನಾವೇನು ಈ ವಿಚಾರದಲ್ಲಿ ಕೆಲವೊಂದು ಸಂಶಯಗಳನ್ನು ರಮಾನಾಥ ರೈರವರ ಹೇಳಿಕೆ ಮೇಲೆ ಹೇಳಿದ್ದೇವೆ, ಇವೆಲ್ಲದರ ಬಗ್ಗೆ ಸರಿಯಾದಂಥ ಮಾಹಿತಿಯನ್ನು ತೆಗೆದುಕೊಂಡು ಇವತ್ತು ಮಧ್ಯಾಹ್ನ ಗೃಹ ಸಚಿವರು ಉತ್ತರವನ್ನು ಕೊಡಬೇಕು. ತಾವು ದಯವಿಟ್ಟು ಗೃಹ ಸಚಿವರಿಂದ ಇವತ್ತು ಮಧ್ಯಾಹ್ನ ಉತ್ತರವನ್ನು ಕೊಡಿಸಬೇಕು.

ಅಧ್ಯಕ್ಷರು:-ಕೊಡಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:-ಗೃಹ ಸಚಿವರು ಉತ್ತರವನ್ನು ಕೊಟ್ಟರೆ ಆಗ ಇದರ ಬಗ್ಗೆ ನಮಗೂ ಕೂಡ clarity ಸಿಗುತ್ತದೆ. ಅದನ್ನು ಬಿಟ್ಟು ಸುಮ್ಮನೆ ಅವರೊಂದು ಹೇಳುವುದು, ಮತ್ತೊಂದು ಹೇಳುವುದು ಸರಿಯಲ್ಲ. ಮೊದಲು ನಮಗೆ ಗೃಹ ಸಚಿವರಿಂದ ಉತ್ತರ ಕೊಡಿಸಿ.

ಅಧ್ಯಕ್ಷರು:-ಕೊಡಿಸುತ್ತೇನೆ ಎಂದು ಹೇಳಿದೆನಲ್ಲ. ಉತ್ತರ ಕೊಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-ಮಾನ್ಯ ಅಧ್ಯಕ್ಷರೆ, ತಾವು ಉತ್ತರವನ್ನು ಕೊಡಿಸುತ್ತೇನೆ ಎಂದು ಹೇಳಿದಿರಿ. ನಿಮಗೆ ಧನ್ಯವಾದಗಳನ್ನು ಹೇಳುತ್ತೇವೆ. ಆದರೆ ಸರ್ಕಾರದ ಪರವಾಗಿ ಯಾರೂ ಇಲ್ಲಿ ಹೇಳುತ್ತಿಲ್ಲವಲ್ಲ. ಅವರೆಲ್ಲರೂ ಸುಮ್ಮನೆ ಕುಳಿತಿರುವುದು ನೋಡಿದರೆ ಯಾರೂ ಕೂಡ ಸರ್ಕಾರದ ಪರವಾಗಿ ಜವಾಬ್ದಾರಿಯನ್ನು ತೆಗೆದುಕೊಂಡು ಹೇಳುತ್ತಿಲ್ಲವಲ್ಲ ಎನಿಸುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ(ಬೃಹತ್ ಕೈಗಾರಿಕೆ ಮತ್ತು ಸಚಿವರು):-ರಮಾನಾಥ ರೈರವರು ಸ್ಪಷ್ಟೀಕರಣವನ್ನು ಕೊಡಬೇಕಾಗುತ್ತದೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಗೃಹ ಸಚಿವರ ಜೊತೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಸಂಪರ್ಕ ಸಾಧಿಸಿ ಅವರ ಕಡೆಯಿಂದ ಮಾಹಿತಿ ತಂದು ಸದನಕ್ಕೆ ಉತ್ತರ ಕೊಡುತ್ತೇನೆಂದು ಮೊದಲೇ ಹೇಳಿದ್ದೇನೆ.

ಅಧ್ಯಕ್ಷರು:-ಆಯಿತು ಬಿಡಿ. ಈಗ ಬೇಡಿಕೆಗಳ ಮೇಲೆ ಮಾತನಾಡುವವರು ಇನ್ನು ಮೂರ್ನಾಲ್ಕು ಸದಸ್ಯರಿದ್ದಾರೆ. ಅದನ್ನು ತೆಗೆದುಕೊಳ್ಳೋಣ. ಕೋನರೆಡ್ಡಿಯವರು ಮಾತನಾಡಲಿ.

ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆಗೆ ಮನವಿ

ವಿಷಯ: ಬನ್ನೇರುಘಟ್ಟದ ಹತ್ತಿರ ಕೆಲವೊಂದು ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿರುವ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್:-ಮಾನ್ಯ ಅಧ್ಯಕ್ಷರೆ, ಕೋನರೆಡ್ಡಿಯವರು ಮಾತನಾಡಲಿ, ನನ್ನದೇನೂ ಅಭ್ಯಂತರವಿಲ್ಲ. ಆದರೆ ನಾನೊಂದು ಸ್ಪಷ್ಟೀಕರಣವನ್ನು ತಮ್ಮಿಂದ ಕೇಳಬಯಸುತ್ತೇನೆ. ಇವತ್ತು ಒಂದು ವಿಚಾರವಾಗಿ ನಾನು ತಮಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆ. ನಿಲುವಳಿ ಸೂಚನೆಯಲ್ಲಿದ್ದ ವಿಷಯವೇನೆಂದರೆ, ಬನ್ನೇರುಘಟ್ಟದ ಹತ್ತಿರ ಕೆಲವೊಂದು ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿರುವ ಬಗ್ಗೆ ಹೇಳಿದ್ದೆ. ನೀವು reject ಮಾಡಿ ಕಳುಹಿಸಿದ್ದೀರಿ. ನೀವು reject ಮಾಡಿ ಕಳುಹಿಸಿರುವುದರಲ್ಲಿ ನೀವು ಕಾರಣವೇನೆಂದು ಹೇಳಿದ್ದೀರೆಂದರೆ, ಈಗಾಗಲೇ ಕೆರೆಗಳ ಒತ್ತುವರಿ ಬಗ್ಗೆ ಅಧ್ಯಕ್ಷರಾದ ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸದನ ಸಮಿತಿಯಿದೆ ಎಂದಿದ್ದೀರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೆರೆ ಒತ್ತುವರಿ ಬಗ್ಗೆ investigation ನಡೆಯುತ್ತಿದೆ ಮತ್ತು ಅದರ ಬಗ್ಗೆ ಒಂದು ವರದಿಯನ್ನು ಕೊಡುವ ಕೆಲಸ ನಡೆಯುತ್ತಿದೆ. ಅದು different, ಆದರೆ ನಾನು ನಿಮಗೆ ಕೊಟ್ಟ ನಿಲುವಳಿ ಸೂಚನೆಯಲ್ಲಿರುವ ವಿಚಾರದ ಬಗ್ಗೆ ಹೇಳುವುದಾದರೆ, ಇವತ್ತೇನು DLF ಎನ್ನುವ ಸಂಸ್ಥೆಯೇನಿದೆ ಅವರು ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ನಾನು ಕೆರೆ ಬಗ್ಗೆ ಮಾತನಾಡಿಲ್ಲ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಅಧ್ಯಕ್ಷರು:-ಜಗದೀಶ್ ಶೆಟ್ಟರ್‌ರವರೆ, ಒಂದು ನಿಮಿಷ ಇರಿ, ನಿಲುವಳಿ ಸೂಚನೆ ಮೊದಲು ಬರುತ್ತದೋ ಅಥವಾ ಶೂನ್ಯ ವೇಳೆ ಮೊದಲು ಬರುತ್ತದೋ ತಾವೇ ಹೇಳಿ. ಹಾಗಾದರೆ ಇದನ್ನೇ ತಾವು ಶೂನ್ಯವೇಳೆಯಲ್ಲಿ ಮೊದಲು ಪ್ರಸ್ತಾಪ ಮಾಡಬಹುದಿತ್ತಲ್ಲವೆ?

ಶ್ರೀ ಜಗದೀಶ್ ಶೆಟ್ಟರ್:-ಪ್ರಶ್ನೋತ್ತರ ಕಲಾಪವಿದ್ದಿದ್ದರೆ ಪ್ರಶ್ನೋತ್ತರವಾದ ನಂತರ ನಾನು ಶೂನ್ಯವೇಳೆಯಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೆ. ಆದರೆ ನಾನು ತಮಗೆ ಕಳುಹಿಸಿರುವ ನಿಲುವಳಿ ಸೂಚನೆಯನ್ನು reject ಮಾಡಿ ಕಳುಹಿಸಿದ್ದೀರಿ. ನಾನು ಏನು ಹೇಳುತ್ತೇನೆಂದರೆ, ಕಳೆದ ಬಾರಿ ಕೂಡ ನಾನು request ಮಾಡಿಕೊಂಡಿದ್ದೇನೆ, ನಿಲುವಳಿ ಸೂಚನೆಯನ್ನು accept ಮಾಡುವುದು ಅಥವಾ ಬಿಡುವುದು ಅದು ತಮಗೆ ಬಿಟ್ಟ ವಿಚಾರ. ಆದರೆ ನಾವು ತಮ್ಮನ್ನು convince ಮಾಡುವಂಥ ಪ್ರಯತ್ನವನ್ನು ಮಾಡುತ್ತೇವೆ. ಆದರೆ ಈಗಾಗಲೇ ನಾವು ಕಳುಹಿಸಿರುವ ನಿಲುವಳಿ ಸೂಚನೆಯನ್ನು reject ಮಾಡಿ ಕಳುಹಿಸಿದ್ದೀರಿ. ನಾನು ಏನು ಹೇಳುತ್ತೇನೆಂದರೆ ಇವತ್ತು DLF ಎನ್ನುವ ಒಂದು ಸಂಸ್ಥೆ ಸುಮಾರು 60 ಎಕರೆ ಜಮೀನನ್ನು ರೈತರ ಕಡೆಯಿಂದ ಖರೀದಿ ಮಾಡಿ ಒಂದು ದೊಡ್ಡದೊಂದು ಸಮುಚ್ಚಯವನ್ನು ಕಟ್ಟಿದೆ. ಅದರ ಜೊತೆಗೆ ಸುಮಾರು 14 ರಿಂದ 15 ಎಕರೆ ಬನ್ನೇರುಘಟ್ಟದ ಬಳಿ ಸರ್ಕಾರದ ಭೂಮಿಯನ್ನು ಅತಿಕ್ರಮಣ ಮಾಡಿಕೊಂಡು ಬಹಳ ದೊಡ್ಡದಾದ ಸಮುಚ್ಚಯವನ್ನು ಕಟ್ಟಿಸಿದೆ. ಸರ್ಕಾರದ ಭೂಮಿಗೆ ಅತಿಕ್ರಮಣ ಮಾಡುವಂಥದ್ದು ಕಾನೂನು ಬಾಹಿರವಾಗುತ್ತದೆ. ಇದರ ಬಗ್ಗೆ ನಾನು ಸರ್ವೆ ನಂಬರ್ ಹಾಕಿ ಎಲ್ಲದರ ಬಗ್ಗೆಯೂ detail ಕೊಟ್ಟಿದ್ದೇನೆ. ತಾವೇನು ಇದರ ಬಗ್ಗೆ interpretation ಮಾಡಿದ್ದೀರೆಂದರೆ, ಇದು ಕೆರೆಗಳ ವಿಚಾರಕ್ಕೆ ಸಂಬಂಧಪಟ್ಟಿದ್ದು ಎಂದು ತಾವು ಹೇಳಿದ್ದೀರಿ. ಆದರೆ ಅದು ಆ ರೀತಿಯಲ್ಲ. ಅದು ಬೇರೆ ಬೇರೆ ತುಂಡು ತೋಪು, ಗೋಮಾಳ ಜಮೀನು, ಹೀಗೆ ಇವನ್ನೆಲ್ಲವನ್ನು ಆ ಸಂಸ್ಥೆಯವರು ಅತಿಕ್ರಮಣ ಮಾಡಿದ್ದಾರೆ. ನಿಮ್ಮ ಸದನ ಸಮಿತಿಯ ವ್ಯಾಪ್ತಿಗೆ ಬರುವ ವಿಷಯಕ್ಕೂ ಮತ್ತು ಈ ವಿಷಯಕ್ಕೂ ಸಂಬಂಧವಿಲ್ಲ. ಅದಕ್ಕಾಗಿ ನನ್ನ ವಿನಂತಿಯೇನೆಂದರೆ,

19-06-2017

ಅಧ್ಯಕ್ಷರು:-ಈ ವಿಷಯಗಳ ಬಗ್ಗೆಯೂ ನಿಮಗೆ ಹೇಗೆ ಮನವಿಗಳು ಬಂದಿವೆಯೋ ಅದೇ ರೀತಿ ನನಗೂ ಬಂದಿದೆ. ಅವುಗಳನ್ನು ಪರಿಶೀಲನೆ ಮಾಡಲು ಸಂಬಂಧಪಟ್ಟ ಅಧಿಕಾರಿಳಿಗೆ ಈಗಾಗಲೇ ಕಳುಹಿಸಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್:-ನಾನು ಕೆರೆಗಳ ಬಗ್ಗೆ ಹೇಳುತ್ತಿಲ್ಲ. ಆದರೆ ನಾನು ಕೊಟ್ಟಿರುವ ನಿಲುವಳಿ ಸೂಚನೆಯನ್ನು ತಾವು reject ಮಾಡಿರುವುದಕ್ಕೆ ಕಾರಣಗಳನ್ನೇನು ಕೊಟ್ಟಿದ್ದೀರಲ್ಲ ಅದರ ಬಗ್ಗೆ ಹೇಳುತ್ತಿದ್ದೇನೆ, ಅದರಲ್ಲಿ ತಾವೇನು ಹೇಳಿದ್ದೀರೆಂದರೆ, ಕೆರೆಗಳ ಒತ್ತುವರಿ ಬಗ್ಗೆ ನನ್ನ ಅಧ್ಯಕ್ಷತೆಯಲ್ಲಿ ಒಂದು ಸದನ ಸಮಿತಿಯಿದೆ. ಅದಕ್ಕಾಗಿ ಅಲ್ಲಿ ಇದನ್ನು consider ಮಾಡುತ್ತೇನೆಂದು ಹೇಳಿದ್ದೀರಿ. ನಾನು ಆ ವ್ಯಾಪ್ತಿಯೊಳಗೆ ಈ subject ಬರುವುದಿಲ್ಲವೆನ್ನುವುದನ್ನು ಅಷ್ಟೇ ನಾನು interpretation ಮಾಡುತ್ತಿದ್ದೇನೆ. ಅದಕ್ಕಾಗಿ ನನ್ನ ಒಂದು ವಿನಂತಿಯೆಂದರೆ, ಇದನ್ನು reconsider ಮಾಡಿ ಇದನ್ನು ರೂಲ್ 69 ಅಥವಾ ಬೇರೆ ಯಾವುದೇ ರೂಪದಲ್ಲಿ ತೆಗೆದುಕೊಂಡು ನಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ನಾನು ಅದರ ಬಗ್ಗೆ ಚರ್ಚೆ ಮಾಡುತ್ತೇನೆ. ಏಕೆಂದರೆ ಬಹಳ ದೊಡ್ಡ ಪ್ರಮಾಣದಲ್ಲಿ ಅತಿಕ್ರಮಣವಾಗಿದೆ. ಸಾವಿರಾರು ಕೋಟಿ ರೂ.ಗಳ ನಷ್ಟ ಸರ್ಕಾರಕ್ಕೆ ಆಗುತ್ತದೆ. ದಯವಿಟ್ಟು ಆ ಸರ್ಕಾರದ ಭೂಮಿಯನ್ನು ಸರ್ಕಾರ ವಾಪಸ್ ತೆಗೆದುಕೊಂಡರೆ ಸರ್ಕಾರಕ್ಕೆ ಲಾಭವಾಗುತ್ತದೆ. ಈ ರೀತಿ ಅಕ್ರಮ ಮಾಡುವಂಥವರಿಗೆ scope ಕೊಡಬಾರದು. ಈ DLF ಸಂಸ್ಥೆ ಅತಿಕ್ರಮಣ ಮಾಡಿದೆ. ಸರ್ಕಾರಿ ಭೂಮಿಯನ್ನು ಅತಿಕ್ರಮಣ ಮಾಡಿದೆ. ಇದರಿಂದ ಸರ್ಕಾರಕ್ಕೆ ಸಾವಿರಾರು ಕೋಟಿ ರೂ.ಗಳ ನಷ್ಟವಾಗಿದೆ. ಅದಕ್ಕಾಗಿ ತಾವು ಈಗಾಗಲೇ ಏನು ನಿಲುವಳಿ ಸೂಚನೆಯನ್ನು reject ಮಾಡಿದ್ದೀರಲ್ಲ ಅದನ್ನು reconsider ಮಾಡಿ ರೂಲ್ 69 ರಡಿಯಲ್ಲಿ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಅಧ್ಯಕ್ಷರು:-ಇದರ ಬಗ್ಗೆ ನಾನು ನೋಡುತ್ತೇನೆ.

(ಮುಂದು)

D 19.06.2017/12.10/11/HBU-PS

19-06-2017

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮಾನ್ಯ ಅಧ್ಯಕ್ಷರೆ, ನಮಗೆ ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೀರಾ?

ಅಧ್ಯಕ್ಷರು : ಕೊಡುತ್ತೇನೆ. ಈಗ ವರದಿಯನ್ನೊಪ್ಪಿಸುವುದು. ಡಾ: ಎ.ಬಿ. ಮಾಲಕರೆಡ್ಡಿಯವರು ವರದಿಯನ್ನೊಪ್ಪಿಸಿ.

ವರದಿಯನ್ನೊಪ್ಪಿಸುವುದು

ಡಾ: ಎ.ಬಿ. ಮಾಲಕರೆಡ್ಡಿ(ಅಧ್ಯಕ್ಷರು, ಸಾರ್ವಜನಿಕ ಉದ್ಯಮಗಳ ಸಮಿತಿ) ಮಾನ್ಯ ಅಧ್ಯಕ್ಷರೆ,ವಿಧಾನಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ 132ನೇ ವರದಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನು ಒಪ್ಪಿಸಲಾಯಿತು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳ ಮಂಡನೆ

ಶ್ರೀ ಟಿ.ಬಿ. ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 16.06.2017ರ ಹತ್ತನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 168 ಪ್ರಶ್ನೆಗಳ ಪೈಕಿ 141 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಅನುಬಂಧ-1)

ಅಧ್ಯಕ್ಷರು : ಮಂಡಿಸಲಾಯಿತು. ಈಗ ಎನ್.ಹೆಚ್. ಕೋನರೆಡ್ಡಿಯವರು ಬೇಡಿಕೆ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿ.

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಇವತ್ತು ಸದನದಲ್ಲಿ ಬೇಡಿಕೆ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡುತ್ತಿದ್ದೀರಿ, ಬಹಳ ಸಂತೋಷ. ಏಕೆಂದರೆ ಬಹಳಷ್ಟು ಸದಸ್ಯರಿಗೆ ಬೇಡಿಕೆ ಮೇಲೆ ಮಾತನಾಡುವುದಕ್ಕೆ ಅವಕಾಶವಾಗುತ್ತದೆ. ನಾನು 179(ಸಿ) ನಲ್ಲಿ ಒಂದು ಪ್ರಸ್ತಾವನೆಯನ್ನು ತಮಗೆ ಕೊಟ್ಟಿದ್ದೇನೆ. ಅದಕ್ಕೆ ತಾವು ಅವಕಾಶ ಕೊಡುತ್ತೇನೆಂದು ಹೇಳಿದ್ದಿರಿ.

ಅಧ್ಯಕ್ಷರು : ಅದು ಯಾವುದು?

ಶ್ರೀ ಕೆ.ಎನ್. ರಾಜಣ್ಣ : 179(ಸಿ) ನಲ್ಲಿ ಒಂದು cut motion ಕೊಟ್ಟಿದ್ದೇನೆ ನೋಡಿ.

ಅಧ್ಯಕ್ಷರು : Cut motion ಯಾವಾಗ ಬರುತ್ತದೆ, ಬೇಡಿಕೆಗಳ ಮೇಲಿನ ಚರ್ಚೆ ಮುಗಿದು ಸರ್ಕಾರ ಉತ್ತರ ಕೊಡುವುದಕ್ಕಿಂತ ಪೂರ್ವದಲ್ಲಿ ಅವಕಾಶ ಬರುತ್ತದೆ, ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಅದು ಸರ್ಕಾರದ ಗಮನಕ್ಕೆ ಇರಲಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ಆಯಿತು, ತಾವು cut motion ಕೊಟ್ಟಿರುವುದು ನನಗೆ ಗೊತ್ತಿದೆ.

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತಂದಿದ್ದೇನೆ.

ಅಧ್ಯಕ್ಷರು : ಆಯಿತು. ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಗಲಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ರಾಜಣ್ಣನವರೆ, ನಾವು ನಿಮ್ಮ cut motion ಗೆ support ಮಾಡುತ್ತೇವೆ.

ಅಧ್ಯಕ್ಷರು : ನೋಡೋಣ.

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, cut motionಗೆ ಸಂಪೂರ್ಣವಾಗಿ ಸದನದ ಎಲ್ಲಾ ಸದಸ್ಯರ ಬೆಂಬಲ ಇದೆ. ನೋಡೋಣ ಅಲ್ಲ, ಮಾನ್ಯ ಜಗದೀಶ್ ಶೆಟ್ಟರ್ ಒಪ್ಪಿಕೊಂಡ ಮೇಲೆ ಎಲ್ಲಾ ಒಪ್ಪಿಕೊಂಡ ಹಾಗೆ ಆಯಿತು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಅಧ್ಯಕ್ಷರು : ರಾಜಣ್ಣನವರೆ ನಿಮಗೆ ಅವಕಾಶ ಕೊಡುತ್ತೇನೆ. ಬೇಡಿಕೆಗಳ ಮೇಲೆ ಚರ್ಚೆ ಮುಗಿದ ನಂತರ ಸರ್ಕಾರ ಉತ್ತರ ಕೊಡುವುದಕ್ಕಿಂತ ಮೊದಲು ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಕೆ.ಎನ್. ರಾಜಣ್ಣ : O.K. sir, thank you.

2017-18ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ ಹಾಗೂ ಸರ್ಕಾರದ ಉತ್ತರ

ಶ್ರೀ ಎನ್.ಹೆಚ್. ಕೋನರೆಡ್ಡಿ(ನವಲಗುಂದ) : ಮಾನ್ಯ ಅಧ್ಯಕ್ಷರೆ, ಇಲಾಖಾವಾರು ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಿಶೇಷವಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮೊದಲನೆಯದಾಗಿ ಕೃಷಿ ಇಲಾಖೆ ಮೇಲೆ ಚರ್ಚೆ ಪ್ರಾರಂಭ ಮಾಡುತ್ತೇನೆ. ಇಡೀ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಬರಗಾಲದಿಂದ ತತ್ತರಿಸಿ 3,000 ಕ್ಕಿಂತ ಹೆಚ್ಚಿನ ರೈತರು ಸಾಲವನ್ನು ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡರು. ಮಾನ್ಯ ಮುಖ್ಯಮಂತ್ರಿಗಳು ಈ ವರ್ಷ ಯಾವ ರೀತಿ ಬಜೆಟ್ ಮಂಡನೆ ಮಾಡುತ್ತಾರೆಂದು ಬಹಳ ಗಮನವನ್ನು ಹರಿಸಿ ಓದುತ್ತಿದ್ದೆ. ನನ್ನ ಕೈಯಲ್ಲಿ ಬಜೆಟ್ ಪುಸ್ತಕ ಸಿಕ್ಕಿತು. ಮಾನ್ಯ ಮುಖ್ಯಮಂತ್ರಿಗಳು ಹೋರಾಟ ಮಾಡಿ ಮುಖ್ಯಮಂತ್ರಿಗಳಾದವರು. ನನಗೆ ಅವರ ಬಗ್ಗೆ ಅಪಾರವಾದಂಥ ಗೌರವ ಕೂಡ ಇದೆ. ಅವರು ಬಜೆಟ್ ಮಂಡನೆ ಮಾಡುವಂಥ ಸಂದರ್ಭದಲ್ಲಿ ನಾನು ಓದಿಕೊಳ್ಳುತ್ತಾ ಹೋದಾಗ ಬಜೆಟ್ ಪುಸ್ತಕದಲ್ಲಿ ರೈತರ ಸಾಲ ಮನ್ನಾ ಇಲ್ಲವೆನ್ನುವ ವಿಷಯವನ್ನು ಓದಿದೆ. ಈ ಬಾರಿ ರಾಜ್ಯದ ಜನರೆಲ್ಲ ಚಹಾ ಅಂಗಡಿ ಮೇಲೆ, ಕಟ್ಟೆ ಮೇಲೆ ಕುಳಿತುಕೊಂಡು, ಬಸ್‌ನಲ್ಲಿ ಕೂಡ ಮಾತನಾಡುತ್ತಾ, ಮಾನ್ಯ ಸಿದ್ದರಾಮಯ್ಯನವರು ಈ ಸಾರಿ ಏನಾದರೂ ಮಾಡಿ ಸಾಲವನ್ನು ಮನ್ನಾ ಮಾಡುತ್ತಾರೆಂದು ನಿರೀಕ್ಷೆಯನ್ನಿಟ್ಟಿದ್ದರು. ಆದರೆ ಆ ಬಜೆಟ್ ಪುಸ್ತಕ ಓದಿದಾಗ ರೈತರ ಸಾಲ ಮನ್ನಾ ಬಗ್ಗೆ ಯಾವುದೂ ವಿಷಯ ಇರಲಿಲ್ಲ. First time ಮಾನ್ಯ ಸಿದ್ದರಾಮಯ್ಯನವರು 12 ಬಜೆಟ್ ಮಂಡಿಸಿದ್ದಾರೆ. ನಮ್ಮ ಉತ್ತರ ಕರ್ನಾಟಕದ ಭಾಷೆಯಲ್ಲಿ ಹೇಳುವುದಾದರೆ ಒಂದು ಡಜನ್ ಬಜೆಟ್ ಮಂಡನೆ ಮಾಡುವಂಥ ಅವಕಾಶ ಅವರಿಗೆ ಸಿಕ್ಕಿದೆ. ಹಾಗಾಗಿ ಅವರು ಮಾಡುತ್ತಾರೆನ್ನುವ ನಿರೀಕ್ಷೆ ಕೂಡ ಇತ್ತು. ಈ ರಾಜ್ಯದಲ್ಲಿರುವ ರೈತರಿಗೆ ಇನ್ನೂ ಕೂಡ

ನಿರೀಕ್ಷೆ ಇದೆ. ತಾವು ರೈತರ ಸಾಲ ಮನ್ನಾ ಮಾಡಬೇಕೆಂದು ಹಕ್ಕೊತ್ತಾಯದ ಮೂಲಕ ಹೇಳಬಯಸುತ್ತೇನೆ.

ಅಧ್ಯಕ್ಷರು : ಕೋನರೆಡ್ಡಿಯವರೆ ಒಂದು ನಿಮಿಷ, ಇವತ್ತು ನಿಜ ಹೇಳಬೇಕೆಂದರೆ ಬೇಡಿಕೆಯ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ ಇತ್ತು. ಆದರೂ ಸಹ ಸದಸ್ಯರ ಇಚ್ಛೆ ಮೇರೆಗೆ ಸ್ವಲ್ಪ ಸಮಯ ಕೊಟ್ಟಿದ್ದೇನೆ. ಹಾಗಾಗಿ ತಾವುಗಳು ಮಾತನಾಡುವಾಗ ಸಮಯವನ್ನು ಗಮನದಲ್ಲಿಟ್ಟುಕೊಂಡು ಮಾತನಾಡಿ.

ಶ್ರೀ ಎನ್.ಹೆಚ್. ಕೋನರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡಿದ್ದರು. ಕೇಂದ್ರ ಸರ್ಕಾರದ ಆರ್ಥಿಕ ಸಚಿವಲಾದಂಥ ಮಾನ್ಯ ಅರುಣ್ ಜೇಟ್ಲಿಯವರು ಒಂದು ಹೇಳಿಕೆ ಕೊಟ್ಟು, ಕೇಂದ್ರ ಸರ್ಕಾರ ಸಾಲ ಮನ್ನಾ ಮಾಡುವುದಕ್ಕೆ ನಾವೇನು ಸಹಾಯ ಮಾಡುವುದಿಲ್ಲವೆಂದು ಸ್ಪಷ್ಟನೆ ಕೊಟ್ಟರು. ಈ ಕಡೆ ಭಾರತೀಯ ಜನತಾ ಪಕ್ಷದ ಎಲ್ಲಾ ಮುಖಂಡರು ಕೂಡ ಮಾನ್ಯ ಸಿದ್ದರಾಮಯ್ಯನವರ ಕಿವಿ ಹಿಂಡಿ ಸಾಲ ಮನ್ನಾ ಮಾಡುತ್ತೇವೆಂದು ಹೇಳಿ ಹೋರಾಟವನ್ನು ಪ್ರಾರಂಭ ಮಾಡಿದ್ದಾರೆ. ನಾನು ಒಂದು ವಿಚಾರ ಕೇಳುವಂಥಾದ್ದೇನೆಂದರೆ ಇವರು ಸಾಲ ಮನ್ನಾ ಮಾಡಬೇಕೋ ಅಥವಾ ಅವರು ಸಾಲ ಮನ್ನಾ ಮಾಡಬೇಕೋ? ನನಗೆ ತಿಳಿದ ಮಟ್ಟಿಗೆ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ತೆಗೆದುಕೊಂಡಿರುವಂಥ ಸಾಲವನ್ನು ಕೇಂದ್ರ ಸರ್ಕಾರ ಮನ್ನಾ ಮಾಡಬೇಕೆನ್ನುವುದು ನನ್ನ ಭಾವನೆ. ಆದರೆ ಅವರು ಆ ಜವಾಬ್ದಾರಿ ತೆಗೆದುಕೊಳ್ಳದಿದ್ದಾಗ ಆಟೋಮ್ಯಾಟಿಕ್ ಆಗಿ ಆ ಜವಾಬ್ದಾರಿ ರಾಜ್ಯ ಸರ್ಕಾರಕ್ಕೆ ಬರುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡುವುದೇನೆಂದರೆ ಕೇಂದ್ರ ಸರ್ಕಾರಕ್ಕೆ ಒಂದು ನಿಯೋಗ ಹೋಗಿ. ಅವರು ಏನು ಹೇಳುತ್ತಾರೆಂದು ನೋಡಿ ತಾವು ಒಂದು ಅಂತಿಮ ತೀರ್ಮಾನ ತೆಗೆದುಕೊಂಡು, ಈಗ ಉತ್ತರ ಹೇಳುವಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಕೊಡಲಿ, ಬಿಡಲಿ ನಾನು ರೈತರ ಸಾಲ ಮನ್ನಾ ಮಾಡುತ್ತೇನೆ ಎನ್ನುವ ತೀರ್ಮಾನ ಮಾಡಬೇಕೆಂದು ತಮಗೆ ಒತ್ತಾಯ ಮಾಡುತ್ತೇನೆ. ಅದರ ಜೊತೆಗೆ ಇವತ್ತು ಬರಗಾಲ ಏನಿದೆ ಎರಡು ಸಲ ಮಳೆ ಬಂದಿದ್ದಕ್ಕೆ ಮೇವು ಕೊಡುವುದನ್ನು ಬಂದ್ ಮಾಡಿದರು. ಗೋಶಾಲೆಯನ್ನು ಬಂದ್ ಮಾಡುವಂಥ ತೀರ್ಮಾನ ಮಾಡಿದರು. ಬರಗಾಲ ಪರಿಸ್ಥಿತಿಯನ್ನು

ನಿರ್ವಹಣೆ ಮಾಡುವಂಥ ಕಂದಾಯ ಸಚಿವರು ಎಲ್ಲಾ ಕಡೆ ಬಂದಾಗ ಯಾವುದೇ ಗೋಶಾಲೆಯನ್ನು ಬಂದ್ ಮಾಡಬಾರದು ಎಂದು ಹೇಳಿದರು. ಇವತ್ತು ಎರಡು ಬಾರಿ ಸಿಟಿಯಲ್ಲಿ ಮಳೆಯಾಗಿರುವುದಕ್ಕೆ ಉತ್ತರ ಕರ್ನಾಟದಕ ಎಲ್ಲಾ ಜಿಲ್ಲೆಗಳಲ್ಲಿ ಮಳೆಯಾಗಿದೆ ಎಂದು ತಿಳಿದುಕೊಳ್ಳುವುದು ಬೇಡ. ದಯವಿಟ್ಟು ಗೋಶಾಲೆ ಮತ್ತು ಮೇವು ಕೊಡುವುದನ್ನು ನಿಲ್ಲಿಸಬಾರದು. ಮಳೆಯಾಗಿ ಬೆಳೆ ಬೆಳೆದನಂತರ ನಮ್ಮಗೆ ಮೇವು ಬರುವುದು. ಮಳೆಯಾದ ತಕ್ಷಣ ಗೋಶಾಲೆ ಬಂದ್ ಮಾಡಿದರೆ ಹೇಗೆ? ಮೇವು ಬ್ಯಾಂಕ್ ಹೇಗೆ ಬಂದ್ ಮಾಡಬೇಕೆನ್ನುವುದನ್ನುವುದರ ಬಗ್ಗೆ ಗಂಭೀರವಾಗಿ ಪರಿಗಣನೆ ಮಾಡಬೇಕೆಂದು ಹೇಳುತ್ತೇನೆ.

ಮಾನ್ಯ ಕೃಷಿ ಸಚಿವರು ಇಲ್ಲಿ ಕುಳಿತಿದ್ದಾರೆ. ಕೃಷಿ ಹೊಂಡದ ಬಗ್ಗೆ ಹೇಳುವುದಾದರೆ ಇಡೀ ರಾಜ್ಯದಲ್ಲಿ ಏನು ಕೃಷಿ ಹೊಂಡಗಳನ್ನು ಮಾಡಿದ್ದೇವೆ, ಅದರಲ್ಲಿ ಅತೀ ಹೆಚ್ಚು ಕೃಷಿ ಹೊಂಡ ಮಾಡಿರುವುದು ನನ್ನ ಕ್ಷೇತ್ರ ಇರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ನನ್ನ ಕ್ಷೇತ್ರದಲ್ಲಿ 3,400 ಕ್ಕೂ ಹೆಚ್ಚು ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಿದ್ದೇವೆ. ಮೊನ್ನೆ ಒಂದೇ ಒಂದು ಬಾರಿ ಮಳೆಯಾಯಿತು. ಆಗ 800 ಕ್ಕಿಂತ ಹೆಚ್ಚು ಕೃಷಿ ಹೊಂಡಗಳು ತುಂಬಿದವು. ಆ ತುಂಬಿದ ಕೃಷಿ ಹೊಂಡಗಳನ್ನು ನೋಡಿದಾಗ ಎಷ್ಟು ಖುಷಿಯಾಯಿತು ಎಂದರೆ, ಸರ್ಕಾರ ಒಳ್ಳೆಯ ಕೆಲಸ ಮಾಡಿದಾಗ ಒಳ್ಳೆಯದು ಮಾಡಿದ್ದೀರೆಂದು ಹೇಳುವುದು ನಮ್ಮ ಕರ್ತವ್ಯ. ಹಾಗಾಗಿ ಒಳ್ಳೆಯ ಕೆಲಸ ಮಾಡಿರುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಕೃಷಿ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದರ ಜೊತೆಯಲ್ಲಿ ಕೃಷಿ ಇಲಾಖೆಯಲ್ಲಿ ಹೆಚ್ಚು ಒತ್ತು ಕೊಟ್ಟು ರೈತರಿಗೆ ಸಮಯಕ್ಕೆ ಸರಿಯಾಗಿ ಬೆಳೆ ಬೀಜಗಳನ್ನು ಒದಗಿಸತಕ್ಕಂಥ ಕೆಲಸವನ್ನು ಮಾಡಬೇಕು. ಅದೇ ರೀತಿ ತೋಟಗಾರಿಕೆ ಇಲಾಖೆ ಮತ್ತು ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆ ಜಾರಿಯಾಗಿದೆ. ಅದರ ಸಾಧಕ-ಬಾಧಕಗಳ ಬಗ್ಗೆ ಉತ್ತರ ಕೊಡುವಂಥ ಸಮಯದಲ್ಲಿ ಉತ್ತರವನ್ನು ನೀಡಬೇಕು. ಕೆಲವು ಕಡೆ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಚೆನ್ನಾಗಿದೆ. ಇನ್ನು ಕೆಲವು ಕಡೆ ತೊಂದರೆಯಾಗಿದೆ ಎನ್ನುವ ಭಾವನೆ ಇಡೀ ರಾಜ್ಯದಲ್ಲಿ ಬಂದಿದೆ. ಅದಕ್ಕೆ ನಾನು ವಿಶೇಷವಾಗಿ ತಮ್ಮ ಗಮನ ಸೆಳೆಯುವುದು ಏನೆಂದರೆ ನನ್ನ ಕ್ಷೇತ್ರ ಹುಬ್ಬಳ್ಳಿ ತಾಲ್ಲೂಕಿನ ಕೋಲ್ಹಾರ. ಸಿರಗುಪ್ಪ ಹೋಬಳಿಯಲ್ಲಿ 2014-15ರ ಬೆಳೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ವಿಮೆ ಇವತ್ತಿನವರೆಗೂ ಬರಲಿಲ್ಲ. ಅದೇ ರೀತಿ ಕೋಳಿವಾಡ ಮತ್ತು ಧಾರವಾಡದ ಕುಂದಗೋಳ ತಾಲ್ಲೂಕಿನ ಸವೆಸಿಯಲ್ಲಿ ವಿಜಯ ಬ್ಯಾಂಕಿಗೆ ಹಾಕಿದಂಥ ಬೆಳೆ ವಿಮೆ ಅಕೌಂಟ್‌ಗೆ ತುಂಬಿಲ್ಲವೆಂದು ಬೆಳೆ ವಿಮೆ ಬಂದಿಲ್ಲ. ಇವತ್ತು ಕೇಂದ್ರ ಸರ್ಕಾರ ಎಲ್ಲಾ clear ಮಾಡಿದೆ. ಮಾನ್ಯ ಎಂ.ಪಿ. ಯವರಾದ ಪ್ರಹ್ಲಾದ ಜೋಷಿಯವರು ಅದನ್ನು clear ಮಾಡಿಸುತ್ತೇವೆಂದು ಹೇಳಿ ಬಂದಿದ್ದರಂತೆ. ಅದಕ್ಕೆ High Level Committee meeting ಮಾಡಿ ತೀರ್ಮಾನ ಮಾಡಬೇಕೆಂದು ಇದೆ. ಅದಕ್ಕೆ ಈ ಮೀಟಿಂಗ್ ಮಾಡಿ ರೈತರಿಗೆ ಬೆಳೆ ವಿಮೆ ಬರುವಂತೆ ಮಾಡಬೇಕು. ಜೊತೆಗೆ ತಾವು ವಿಶೇಷವಾಗಿ ಕೃಷಿ ಹೊಂಡ ಯೋಜನೆಯನ್ನು ಜಾರಿ ಮಾಡಿದ್ದೀರಿ, ಅದರಿಂದ ರೈತರಿಗೆ ಒಳ್ಳೆಯದಾಗುತ್ತಿದೆ ಎನ್ನುವ ವಿಚಾರವನ್ನು ಹೇಳುತ್ತೇನೆ. ಅದರ ಜೊತೆಗೆ ತಾವು ಕೃಷಿ ಯಂತ್ರ ಜಾರಿ ಮಾಡಿದಿರಿ, ಆ ಎಲ್ಲಾ ವಿಚಾರಗಳು ಒಳ್ಳೆಯದು ಎನ್ನುವುದರ ಜೊತೆಗೆ NRHMನಲ್ಲಿ ಹಿಂದೆ ಟ್ರಾಕ್ಟರ್‌ಗಳಿಗೆ ಸಬ್ಸಿಡಿ ಕೊಡುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ಸಣ್ಣ ಟ್ರ್ಯಾಕ್ಟರ್‌ಗಳಿಗೆ ಸಬ್ಸಿಡಿ ಕೊಡುತ್ತೀರಿ. ಆ ಸಣ್ಣ ಟ್ರ್ಯಾಕ್ಟರ್‌ಗಳನ್ನು ತೆಗೆದುಕೊಂಡರೆ ನಮ್ಮಲ್ಲಿ ಏನೂ ಉಪಯೋಗವಾಗುವುದಿಲ್ಲ. ನಮ್ಮ ಕಡೆ ಏನಿದ್ದರೂ 25 ಹೆಚ್‌ಪಿ ಮೇಲಿದ್ದರೆ ಒಳ್ಳೆಯದು. ಅದನ್ನು ತಾವು ತೋಟಗಾರಿಕೆ ಇಲಾಖೆಯಿಂದ ಕೊಡುತ್ತೀರೋ, ಯಾವ ಇಲಾಖೆಯಿಂದ ಕೊಡುತ್ತೀರೋ, ಬೇಗ ಕೊಟ್ಟರೆ ಒಳ್ಳೆಯದು.

ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಲ್ಲಿ ಕೆಲವು ಬೆಳೆಗಳನ್ನು ಬಿಟ್ಟಿದ್ದು, ಆ ಯೋಜನೆಯಲ್ಲಿ ಸೇರಿಸಿಲ್ಲ. ಅದಕ್ಕೆ ರೈತರು ಬೆಳೆ ವಿಮೆಗೆ ಹಾಕಿದರೂ ಕೂಡ ಬೆಳೆ ವಿಮೆ ಅವರಿಗೆ ಬರುವುದಿಲ್ಲ. ಅದರ ಬಗ್ಗೆ ವಿಶೇಷವಾದ ಗಮನವನ್ನು ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಶುಸಂಗೋಪನಾ ಇಲಾಖೆಯ ಬಗ್ಗೆ ಹೇಳುವುದಾದರೆ ಇತ್ತೀಚೆಗೆ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವುದು, ಹಸುಗಳನ್ನು ಕೊಡುವಂಥ ಹೊಸ ಯೋಜನೆಗಳನ್ನು ತಂದಿದ್ದೀರಿ.

ಶ್ರೀ ಪಿ.ಟಿ. ಪರಮೇಶ್ವರ ನಾಯಕ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಫಸಲ್ ಭೀಮಾ ಯೋಜನೆಯ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯುತ್ತಿದ್ದರು, ನನ್ನ ಕ್ಷೇತ್ರದಲ್ಲಿ 1,750 ಜನ ನಾರ್ಮ್ಸ್ ಪ್ರಕಾರ ಏನು ಮಾಡಬೇಕಾಗಿತ್ತು, ಮಾಡಿದಾಗ್ಯೂ ಸಹ ಕೇವಲ 500 ಜನ ಕವರ್ ಆಗಿದ್ದು. ಈ ಯೋಜನೆಗೆ ಸಂಬಂಧಪಟ್ಟಂತೆ ನನ್ನ ಕ್ಷೇತ್ರದಲ್ಲಿ ಕೆಳಹಂತದಲ್ಲಿ ಅಧಿಕಾರಿಗಳ ಮಟ್ಟದಲ್ಲಿ ಸಣ್ಣಪುಟ್ಟ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಲೋಪವಾಗಿರಬಹುದು ಎನ್ನುವ ವಿಷಯವನ್ನು ಹಿರಿಯ ಅಧಿಕಾರಿಗಳು ತಿಳಿಸುತ್ತಿದ್ದಾರೆ. ಆ ವಿಷಯವನ್ನು ಮಾನ್ಯ ಕೃಷಿ ಸಚಿವರಿಗೆ ದೂರವಾಣಿ ಮುಖಾಂತರ ಮಾತನಾಡಿ ಅವರ ಗಮನಕ್ಕೆ ತಂದಿದ್ದೇನೆ. ಮಾನ್ಯ ಕೋನರೆಡ್ಡಿಯವರು ಏನು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ಮಾನ್ಯ ಕಂದಾಯ ಸಚಿವರು ಮತ್ತು ಕೃಷಿ ಸಚಿವರು ಗಮನ ಹರಿಸಿ ಆ ನ್ಯೂನತೆಯನ್ನು ಸರಿಪಡಿಸುವಂಥ ಕೆಲಸವನ್ನು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಎನ್.ಹೆಚ್. ಕೋನರೆಡ್ಡಿ : ಮಾನ್ಯ ಅಧ್ಯಕ್ಷರೆ, ಎತ್ತು ಮತ್ತು ಹಸು ಅಪಘಾತದಲ್ಲಿ ಅಸುನೀಗಿದರೆ ಹತ್ತು ಸಾವಿರ, ಕುರಿ ಅಸುನೀಗಿದರೆ 2,500 ಯಿಂದ 5,000 ರೂಪಾಯಿಯವರೆಗೆ ಪಶುಸಂಗೋಪನಾ ಇಲಾಖೆಯಿಂದ ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ. ಆ ಸೌಲಭ್ಯವನ್ನು ಎಲ್ಲಾ ಪ್ರಾಣಿಗಳಿಗೆ ವಿಸ್ತರಿಸಬೇಕೆಂದು ವಿನಂತಿ ಮಾಡುತ್ತೇನೆ.

(ಮುಂದು)

19.06.17 - 12.20 - (12) - RD-PS

ಶ್ರೀ ಎನ್.ಹೆಚ್.ಕೋನರೆಡ್ಡಿ: ಮುಂದು.. .. .

ಇನ್ನು ಸಹಕಾರ ಇಲಾಖೆಯಿಂದ ರೈತರಿಗೆ ಶೂನ್ಯ ಬಡ್ಡಿಯಲ್ಲಿ 2 ಲಕ್ಷ ರೂ.ಗಳಿಂದ 3 ಲಕ್ಷ ರೂ.ಗಳವರೆಗೆ ಮಿತಿಯನ್ನು ಹೆಚ್ಚಳ ಮಾಡಿದ್ದೀರಿ. ಅದೇ ರೀತಿಯಾಗಿ "ಯಶಸ್ವಿನಿ ಯೋಜನೆ" ಬಹಳ ಮಹತ್ವದ್ದಾಗಿದ್ದು, ಈ ಯಶಸ್ವಿನಿ ಯೋಜನೆ ಬಗ್ಗೆ ಇತ್ತೀಚೆಗೆ ಸರ್ಕಾರ ಒಂದು ಆದೇಶವನ್ನು ಹೊರಡಿಸಿದೆ. ಅದು ಕೆಲವು ಆಸ್ಪತ್ರೆಗಳಿಗೆ ಮಾತ್ರ ಸೀಮಿತಗೊಂಡಿರುವಂಥದ್ದು. ಆ ರೀತಿ ಮಾಡಬಾರದು, ಮೊದಲ್ಯುಗದ ಯೋಜನೆ ಯಾವ ರೀತಿ ಇತ್ತೊ, ಅದೇ ರೀತಿಯಾಗಿ ಇರಬೇಕು, ಅದನ್ನು ಬದಲಾವಣೆ ಮಾಡಬಾರದು. ಅದಕ್ಕೆ ಸಂಬಂಧಪಟ್ಟವರು ಅದರ ಬಗ್ಗೆ ವಿಶೇಷ ಗಮನಹರಿಸಬೇಕು. ಈಗ ಯಶಸ್ವಿನಿ ಯೋಜನೆ ಕಾರ್ಡ್‌ಗಳನ್ನು ಮಾಡಿಸಬೇಕಾದರೆ, ಎಲ್ಲಾ ಸಹಕಾರ ಸಂಘಗಳಲ್ಲಿ ಮಾಡಿಸಬೇಕಾದರೆ, ರೈತರು ಅದನ್ನು ಹೇಗೆ ಮಾಡಬೇಕೆಂದು ವಿಚಾರ ಮಾಡುತ್ತಿದ್ದಾರೆ. ಅದರ ಬಗ್ಗೆ ವಿಶೇಷವಾಗಿ ಗಮನಹರಿಸಬೇಕೆಂದು ಹೇಳುತ್ತೇನೆ. ಮೊನ್ನೆ ನಾನು ಮತ್ತು ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕುಳಿತು ಮಾತನಾಡುವಾಗ ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಸಹಕಾರ ಇಲಾಖೆಯಲ್ಲಿ ರೈತರ 90% ಲೋನ್ ಅನ್ನು ತುಂಬಿದ್ದಾರೆ. ಅದಕ್ಕೆ ಕೇಂದ್ರಸರ್ಕಾರದಿಂದ ಜಮಾ ಆಗಿರುವುದಕ್ಕೆ ಸಬ್ಸಿಡಿ ಹಣವನ್ನು ಕೊಡಬೇಕಾಗಿದೆ. ಆ ಹಣ ಇನ್ನೂ ರೈತರಿಗೆ ಹೋಗಿಲ್ಲವೆಂದು ಹೇಳಿದರು. ಅದಕ್ಕೆ ಸರ್ಕಾರ ಸ್ಪಷ್ಟೀಕರಣ ಕೊಡಬೇಕು. ನಿಮಗೆ ಸಹಕಾರ ಇಲಾಖೆಯಿಂದ ಹಣ ಜಮಾ ಆಗಿದೆಯೋ, ಇಲ್ಲವೋ? ಅವತ್ತು ಟಿ.ವಿ.ಯಲ್ಲಿ ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರೊಂದಿಗೆ tug of war ಬರೆದಿತ್ತು. ನಾನು ಜಮಾ ಆಗಿಲ್ಲವೆಂದು, ಅವರು ಸಹ ಆಗಿಲ್ಲವೆಂದು ಹೇಳಿದರು, ಇಲ್ಲ ಹಣ ಕೇಂದ್ರಸರ್ಕಾರದಿಂದ ಬಂದು ಜಮಾ ಆಗಿದೆಯೆಂದು ಹೇಳಿದರು. ನಾನು ಸೊಸೈಟಿಗೆ ಹಣ ಬಂದು ಜಮಾ ಆಗಿಲ್ಲವೆಂದು ವಾದ ಮಾಡಿದ್ದೆ. ಅದರ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ನಮ್ಮ ಹಳ್ಳಿಗಳಲ್ಲಿ ವ್ಯವಸಾಯ ಸಹಕಾರಗಳಿದ್ದವು, ಅವುಗಳ ಕಟ್ಟಡಕ್ಕೆ ಹಣ ಕೊಡದೇ ಪ್ರಾರಂಭ ಮಾಡಿದ್ದೆವು. ತಾವು ಈ ಸಾರಿ ಆ ಕಟ್ಟಡಗಳಿಗೆ ಹಣ ಕೊಡಬೇಕು. ಒಂದು ಜಿಲ್ಲೆಗೆ 25-30 ಕಟ್ಟಡಗಳಿಗೆ ಕೊಡುವಂಥ ಪ್ರಯತ್ನ ಮಾಡಬೇಕೆಂದು ಸಹಕಾರ ಇಲಾಖೆಗೆ ಒತ್ತಾಯ ಮಾಡುತ್ತೇನೆ. ಈಗಾಗಲೇ ರೈತರಿಂದ ಖರೀದಿ ಮಾಡಿರುವಂಥ ಉಳ್ಳಾಗಡ್ಡಿಗೆ ಹಣ ಬಂದಿದೆ, ಆದರೆ transport ಮಾಡಿದಂಥವರಿಗೆ ಇನ್ನೂ ಹಣ ಮುಟ್ಟಿಲ್ಲ. ಅದಕ್ಕೆ ಡಿ.ಸಿ.ಯವರನ್ನು ಕೇಳಿದರೆ, ಸರ್ಕಾರದಿಂದ ಹಣ ಬಂದಿಲ್ಲವೆಂದು ಹೇಳುತ್ತಾರೆ. ಒಬ್ಬರು transport ಮಾಡಿದಂಥವರು ಎಲ್ಲಿಯವರೆಗೂ wait ಮಾಡಬೇಕು? ತಾವು ವಿಶೇಷವಾಗಿ ಆ ಹಣವನ್ನು ಬಿಡುಗಡೆ ಮಾಡುವ ಪ್ರಯತ್ನ ಮಾಡಬೇಕು. ಇನ್ನು ನಮ್ಮ ಕೇತ್ರದಲ್ಲಿ ಕೆ.ಸಿ.ಸಿ.ಬ್ಯಾಂಕ್‌ನಲ್ಲಿ ಸಾಲ ಕೇಳಬೇಕೆಂದರೆ, ಅಲ್ಲಿ ಹಣವಿಲ್ಲ. ತಾವು 2 ರಿಂದ 3 ಲಕ್ಷ ರೂ.ಗಳವರೆಗಿನ ಸಾಲಕ್ಕೆ ಶೂನ್ಯ ಬಡ್ಡಿ ಎಂದು ಹೇಳಿದ್ದೀರಿ. ಆದರೆ ಸರ್ಕಾರಕ್ಕೆ ಬರುವಂಥ ಕೆ.ಸಿ.ಸಿ.ಬ್ಯಾಂಕ್‌ಗೆ ಹಣವನ್ನು ಕೊಡದೇ ಹೋದರೆ, ನಾವು ಏನು ಮಾಡಲು ಸಾಧ್ಯವಿದೆ? ಅದಕ್ಕೆ ಸರ್ಕಾರದಿಂದ ಕೊಡುವ ಹಣ ಎಷ್ಟು ಬಾಕಿ ಇದೆ, ಅದನ್ನು ಕೆ.ಸಿ.ಸಿ.ಬ್ಯಾಂಕ್‌ಗೆ ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಮಗೆ ಸಂಬಂಧಪಟ್ಟಂಥ ನೀರಾವರಿಗೆ ಇಲಾಖೆ ಬಗ್ಗೆ ಹೇಳುವುದಾದರೆ, ಅದು ಕೃಷ್ಣಾ ಇರಬಹುದು, ಕಾವೇರಿ ಇರಬಹುದು, ಮತ್ತೆ ನಮ್ಮ ಉತ್ತರ ಕನ್ನಡದಲ್ಲಿರುವಂಥ ಮಲಪ್ರಭಾ ಯೋಜನೆ ಇರಬಹುದು. ತಾವು ಸಹ ಮಹದಾಯಿ ಕಳಸಾ ಬಂಡೂರಿ

ಯೋಜನೆ ವಿಷಯವಾಗಿ ಬಹಳ ವಿಶೇಷವಾದಂಥ ಜವಾಬ್ದಾರಿಯನ್ನು ತೆಗೆದುಕೊಂಡು, ಬೆಳಗಾಂ ಅಧಿವೇಶನದಲ್ಲಿ ಸಾಕಷ್ಟು ಚರ್ಚೆಯನ್ನು ಮಾಡಿದ್ದೇವೆ. ಇಲ್ಲಿ ಪ್ರಮುಖವಾಗಿ 200 ಟಿ.ಎಂ.ಸಿ. ನೀರು ಇದ್ದು, ನಮ್ಮ ರಾಜ್ಯದ ಪಾಲು 45 ಟಿ.ಎಂ.ಸಿ.ಯಿಂದ 52 ಟಿ.ಎಂ.ಸಿ. ಇದ್ದು, ನಾವು interimನಲ್ಲಿ 7.56 ಟಿ.ಎಂ.ಸಿ. ನೀರನ್ನು ಕೇಳುತ್ತಿದ್ದೇವೆ. ತಾವು ಬಹಳ ವಿಚಾರ ಮಾಡಿ, ಮೂರು ರಾಜ್ಯಗಳ ಮುಖ್ಯಮಂತ್ರಿಯಗಳನ್ನು ಕೂಡಿಸುವಂಥ ಸಂದರ್ಭ ಬಂದರೆ, ನಾನೇ ಗೋವಾಕ್ಕೆ ಬರುತ್ತೇನೆಂದರೆ ಹೇಳಿದ್ದೀರಿ. ಗೋವಾ election ಮುಗಿದ ಮೇಲೆ ಮಾಡುತ್ತೇವೆಂದು ಈ ಭಾಗದವರು ಹೇಳಿದ್ದರು. ನಾನು ಮಾನ್ಯ ಜಗದೀಶ್ ಶೆಟ್ಟರಿಗೆ ಮತ್ತು ಮಾನ್ಯ ಪ್ರಹ್ಲಾದ ಜೋಶಿಯವರಿಗೆ ವಿನಂತಿ ಮಾಡಿದ್ದೆ. ನಾನು ಅವರಿಗೆ ಗೋವಾ election ಮುಗಿಯಿತು, ದಯವಿಟ್ಟು ಸಭೆ ಮಾಡಬೇಕೆಂದು ಹೇಳಿದೆ. ಆದರೆ ಸನ್ಮಾನ್ಯ ಪರಿಕರ್‌ರವರು ಮುಖ್ಯಮಂತ್ರಿಯಾದ ನಂತರ 2002ರಲ್ಲಿ ಮಾನ್ಯ ವಾಜಪೇಯಿಯವರು ಪ್ರಧಾನಮಂತ್ರಿಯಾಗಿದ್ದಾಗ, ಅದಕ್ಕೆ ಅನುಮತಿ ಏನು ಕೊಟ್ಟಿದ್ದರು. ಅದಕ್ಕೆ ಇವರೇ ತಡೆಯಾಜ್ಞೆ ಮಾಡಿಸಿದರು. ಈಗ ಅವರು ಮತ್ತೆ ಮುಖ್ಯಮಂತ್ರಿಯಾದ ಮೇಲೆ, ಈ ಭಾಗದಲ್ಲಿ ಯಾರು ಮಾತನಾಡುತ್ತಿಲ್ಲ. ಅದಕ್ಕೆ ನಾನು ಅವರಿಗೆ ಕೈಮುಗಿದು ಪ್ರಾರ್ಥನೆ ಮಾಡುವುದೇನೆಂದರೆ, ಈ ಹೋರಾಟ ಪ್ರಾರಂಭವಾಗಿ 680 ದಿವಸಗಳಾಯಿತು. ಇಲ್ಲಿಯವರೆಗೂ ಅದರ ಬಗ್ಗೆ ಯಾರು ಗಮನ ಕೊಡುತ್ತಿಲ್ಲ. ಈ ಭಾಗದಿಂದ ಒತ್ತಾಯ ಮಾಡಿದರೆ ಮಾತ್ರ ಕೇಂದ್ರಸರ್ಕಾರ ನೋಡಲು ಸಾಧ್ಯವಿದೆ. ಮತ್ತೆ ರಾಜ್ಯ ಸರ್ಕಾರವೂ ಸಹಿತ, ಅದಕ್ಕೆ ಪೂರಕವಾಗಿ ಎಲ್ಲಾ ಕೆಲಸವನ್ನು ಮಾಡಬೇಕೆಂದು, ನಾನು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇನ್ನು ನನ್ನ ಕ್ಷೇತ್ರದಲ್ಲಿ ಒಂದು ಪೊಲೀಸ್ ಘಟನೆಯಾಯಿತು. ಮಾನ್ಯ ಕೆ.ಜೆ.ಜಾರ್ಜ್‌ರವರು ಗೃಹ ಸಚಿವರಾಗಿದ್ದಾಗ, ನಾವೆಲ್ಲರೂ ಅವರೊಂದಿಗೆ ಕೂಡಿ ಚರ್ಚೆ ಮಾಡಿ ಬಗೆಹರಿಸುತ್ತಿದ್ದೆವು. ಈಗ ಮಾನ್ಯ ಪರಮೇಶ್ವರ್‌ರವರಿಗೂ ಅದರ ಬಗ್ಗೆ ಗಮನ ಸೆಳೆದೆವು. ಅಲ್ಲಿ ಲಾಠಿ ಚಾರ್ಜ್ ಆಗಿ, ಅದರಲ್ಲಿ ಗಾಯಗೊಂಡು 10 ಜನರು ನಿಧನರಾದರು. ಅವರ ಹೆಸರುಗಳು ಏನೆಂದರೆ, ಒಬ್ಬ ನವಲಗುಂದ ರೈತ ಚಿತ್ತರಂಜನ್ ಕಲ್ಲನರ್ ಎಂದು, ಅವರಿಗೆ ಒಂದು ಲಕ್ಷ ರೂ.ಗಳ ಪರಿಹಾರವನ್ನು ಕೊಟ್ಟರು. ಅದೇ ರೀತಿ ದೇವಪ್ಪ ಪಲ್ಲೇದ, ಧರ್ಮಣ್ಣ ತಹಶೀಲ್ದಾರ್ ಎಂದು, ಒಬ್ಬರಿಗೆ 15 ಲಕ್ಷ ರೂ. ಗಳನ್ನು ಕೊಟ್ಟಿದ್ದಾರೆ. ಅವರಿಗೆ 15 ಲಕ್ಷ ರೂ.ಗಳನ್ನು ಘೋಷಣೆ ಮಾಡಿದ್ದು, ಅದರಲ್ಲಿ ಇನ್ನೂ

ಎರಡೂವರೆ ಲಕ್ಷ ರೂ.ಗಳು ಕೊಡುವಂಥದ್ದು ಬಾಕಿ ಇದೆ. ಅದೇ ರೀತಿಯಾಗಿ ರಾಮಪ್ಪ ತಳವಾರ್ ಎಂದು ಕುಂದಗೋಳದವರು, ಬೈಲಹೊಂಗಲದ ಕೋಮಲ್ ಕುಮಾರ್ ಪೂಜಾರ್ ಎಂದು, ರೋಣ ತಾಲ್ಲೂಕಿನ ಶಿವಯ್ಯ ಪೂಜಾರಿ, ನವಲಗುಂದದ ಹನುಮಂತ ಹುಡೇದ ಮತ್ತು ಅದೇ ಸಂದರ್ಭದಲ್ಲಿ ನವಲಗುಂದ ತಾಲ್ಲೂಕಿನ ಯಮಲೂರು ಗ್ರಾಮದ ಶಿವಾಜಿ ಮಾಂಹಿತೆ, ಅಳಗವಾಡಿ ಗ್ರಾಮದ ಕಲ್ಲಪ್ಪ ವಾಳವಾಡೆ ಮತ್ತು ರಾಚಯ್ಯ ಕಲ್ಲಯ್ಯ ಹೊರಗಿನಮಠ್ ಎನ್ನುವವರು, ಪೊಲೀಸರ ಲಾಠಿ ಚಾರ್ಜ್‌ನಿಂದ ಏನು ತೊಂದರೆಯಾಗಿದೆ. .. ..

ಅಧ್ಯಕ್ಷರು: ಮಾನ್ಯ ಕೋನರೆಡ್ಡಿಯವರೆ, ...

ಶ್ರೀ ಎನ್.ಹೆಚ್.ಕೋನರೆಡ್ಡಿ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ಇದು ಬಹಳ ಗಂಭೀರ ವಾಗಿರುವಂಥದ್ದು.

ಅಧ್ಯಕ್ಷರು: ತಾವು ಬೇಡಿಕೆಯ ಮೇಲೆ ಮಾತನಾಡಿ. ತಾವು ಯಾವುದೋ incident ತೆಗೆದುಕೊಂಡು ಮಾತನಾಡುತ್ತೀರಿ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಮಾನ್ಯ ಅಧ್ಯಕ್ಷರೆ, ಇದು incident ಅಲ್ಲ, ನಾನು ಇಲಾಖಾವಾರು ಮೇಲೆ ಚರ್ಚೆ ಮಾಡುತ್ತಿದ್ದೇನೆ. ಈಗ ಏನೂ ಸಂಬಂಧವಿಲ್ಲದೇ ಇರುವ ಮಾನ್ಯ ರಮಾನಾಥ ರೈರವರಿಗೆ, ಇವರಿಗೆ ಇಷ್ಟು ಸಮಯ ಕೊಟ್ಟು, ಅರ್ಧ ದಿವಸ ಹಾಳಾಯಿತು. ಇವತ್ತು ನನಗೆ ಮೊದಲು ಮಾತನಾಡಲು ಅವಕಾಶವಿತ್ತು, ತಾವು ನನಗೆ ಅವಕಾಶ ಮಾಡಿ ಕೊಟ್ಟಿದ್ದೀರಿ.

ಅಧ್ಯಕ್ಷರು: ತಾವು ಪದೇ ಪದೇ ಹೇಳಿದ್ದಿರಲ್ಲಾ, ಆಯಿತು. ತಾವು ಬೇಗ ಮಾತನಾಡಿ ಮುಗಿಸಿ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಮಾನ್ಯ ಅಧ್ಯಕ್ಷರೆ, ಈ 10 ಜನರಿಗೆ 15 ಲಕ್ಷ ರೂ.ಗಳ ಪರಿಹಾರವನ್ನು ಕೊಡಲೇಬೇಕೆಂದು ಹೇಳಿ, ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ನಾನು ಮಾನ್ಯ ಗೃಹ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಇವತ್ತು ಇಲ್ಲಿ ಮಾನ್ಯ ರಮಾನಾಥ ರೈರವರ ಪ್ರಕರಣ ಏನು ಚರ್ಚೆಯಾಯಿತು. ಅದು ಚರ್ಚೆಯಾದಂಥ ಸಂದರ್ಭದಲ್ಲಿ ಗೃಹ ಸಚಿವರು ಯಾರೆಂಬ ಪ್ರಶ್ನೆ ಈ ರಾಜ್ಯದಲ್ಲಿ ಬಂದಿದೆ. ಅವರು ಇನ್ನೂ ಎರಡು-ಮೂರು ದಿವಸಗಳಲ್ಲಿ ಹೋಗುತ್ತಾರೆಂಬ ಭಾವನೆಯಿಂದ, ಅವರಿಗೆ ಅಧಿಕಾರಿಗಳು ಯಾರು ಸ್ಪಂದನೆ ಮಾಡುತ್ತಿಲ್ಲ. ನಾನು ಈಗ ಅವರು ಎದುರಿಗೆ ಇದ್ದಿದ್ದರೆ ಹೇಳಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಬಿಡುತ್ತಿದ್ದೆ. ನನ್ನ ಕ್ಷೇತ್ರದಲ್ಲಿ ಒಂದು ಸಣ್ಣ ವಿಚಾರ ನಡೆದಿದ್ದು, ಒಬ್ಬರು teacher ರೋಣದವರೆಂದು ತಿಳಿದುಕೊಂಡು ಮೊನ್ನೆ ಅವರನ್ನು ತೆಗೆದು ಹಾಕಿದ್ದಾರೆ. ಅದಕ್ಕೆ ಗೃಹ ಸಚಿವರು ಎಸ್.ಪಿ.ಯವರಿಗೆ ಆದೇಶ ಮಾಡಿದರೂ ಕೂಡ, ಅವರು ಇನ್ನು ನಾಲ್ಕು ದಿವಸಗಳು ಮುಂದಕ್ಕೆ ಹಾಕಿ ಬಿಡಿ. ಅವರಿಗೆ ಅಧಿಕಾರ ಹೋಗಿ ಬಿಡುತ್ತದೆಂದು ಹೇಳುತ್ತಾರೆ. ಈ ರೀತಿ ನಡೆದುಕೊಳ್ಳುವಂಥ ಅಧಿಕಾರಿಗಳ ಕ್ರಮ ಏನಿದೆ, ಸಚಿವರು ಆದೇಶ ಏನು ಮಾಡಿರುತ್ತಾರೆ. ಅದನ್ನು ಕಾನೂನು ಬದ್ಧವಾಗಿ implement ಮಾಡದೇ ಇದ್ದರೆ, ಇಲ್ಲಿ ಮಾನ್ಯ ಗೃಹ ಸಚಿವರು ನಾಲ್ಕು ದಿವಸಗಳಿಗೆ ಹೋಗುತ್ತಾರೆಂಬ ಬಗ್ಗೆ ಚರ್ಚೆಯಾಗುತ್ತದೆಂದರೆ, ಮತ್ತೆ ಇಲ್ಲಿ ಯಾವ ರೀತಿ ಮಾಡಲು ಸಾಧ್ಯವಿದೆ? ಆ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಕೇಳಬಯಸುತ್ತೇನೆ. ದಯವಿಟ್ಟು ಆ ರೀತಿ ಆಗಬಾರದು. ಇನ್ನು ನೀರಾವರಿ ವಿಷಯದಲ್ಲಿ ಮಲಪ್ರಭಾ ಬಲದಂಡೆ ವಿಷಯವಾಗಿ, ಕೆನಾಲ್ ಪೂರ್ತಿ ಹಾಳಾಗಿ ಹೋಗಿದೆ, ಯಾವುದೇ ರೀತಿಯಲ್ಲಿ ಅಭಿವೃದ್ಧಿ ಇಲ್ಲ. ನಾನು ಮಾನ್ಯ ಸಚಿವರ ಗಮನ ಸೆಳೆದಿದ್ದು, 20 ದಿವಸಗಳಲ್ಲಿ ಮಾಡುತ್ತೇನೆಂದು ಹೇಳಿದ್ದಾರೆ. ಆದರೂ fast ಆಗಿ ಕಾಮಗಾರಿಯನ್ನು ಮಾಡುತ್ತಿಲ್ಲ. ತಾವು 20 ದಿವಸಗಳಲ್ಲಿ ಟೆಂಡರ್ ಕರೆಯುವಂಥ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಇದರಿಂದ 40% ನೀರು ಉಳಿಯುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಕೋನರೆಡ್ಡಿಯವರೆ, ತಾವು ಒಂದು ನಿಮಿಷ yield ಆಗಿ, ಮಾನ್ಯ ಅಧ್ಯಕ್ಷರೆ, ನೀರಾವರಿ ಯೋಜನೆಗಳ canal maintenance ಇರಬಹುದು, dam maintenance ಇರಬಹುದು, ಅದನ್ನು ಮೊದಲು ಇಲಾಖಾವತಿಯಿಂದ ಮಾಡುತ್ತಿದ್ದರು. ಮಾನ್ಯ ಹೆಚ್.ಕೆ.ಪಾಟೀಲ್‌ರವರು ಈ ರಾಜ್ಯದ ನೀರಾವರಿ ಮಂತ್ರಿಯಾದ ಮೇಲೆ, ನೀರು ಬಳಕೆದಾರರ ಸಹಕಾರಿ ಸಂಘವೆಂದು ಮಾಡಿದರು. ಅದನ್ನು ಮಾಡಿದಾಗಿನಿಂದ ಯಾವ canal maintenance ಇಲ್ಲ. ಅದು ಬರೀ ನಾಮಕಾವಸ್ತೆಗೆ ನೀರು ಬಳಕೆದಾರರ ಸಹಕಾರಿ ಸಂಘಗಳಾಗಿವೆ. ಮೊದಲು ಸರ್ಕಾರದಲ್ಲಿ ನೀರಾವರಿ ಇಲಾಖೆಯವರು ಯಾವ ರೀತಿ ನಿಭಾಯಿಸುತ್ತಿದ್ದರು. ಆ ರೀತಿ maintenance ಮಾಡಿದರೆ, ನಾವು ಹತ್ತಾರು ಸಾವಿರ ಕೋಟಿ ರೂ.ಗಳನ್ನು invest ಮಾಡಿದಂಥ ಯೋಜನೆಗಳು ಉಳಿಯುತ್ತದೆ, ಇಲ್ಲದಿದ್ದರೆ ಆ

ಯೋಜನೆ ಲಾಭ ಸಿಗುವುದಿಲ್ಲ ಮತ್ತು ಯಾವ ರೈತರಿಗೂ ನೀರು ಸಿಗುವುದಿಲ್ಲ. ಈಗಾಗಲೇ ಬಹಳಷ್ಟು ಹಾಳಾಗಿ ಹೋಗಿವೆ, ಏಕೆಂದರೆ, canal network ಹತ್ತಾರು ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡಿ, ಆ ಕೆಲಸವನ್ನು ಮಾಡಿರುವಂಥದ್ದು. ಇವತ್ತು ಅದ್ಯಾವುದು maintenance ಇಲ್ಲ, ಗಿಡಗಂಟೆಗಳು ಬೆಳೆದು ಹೋಗಿದೆ, ಗೇಟ್‌ಗಳು ಮುರಿದು ಹೋಗಿವೆ, ಎಸ್ಕೇಪ್‌ಗಳು ಹಾಳಾಗಿ ಹೋಗಿದೆ, ಅದಕ್ಕೆ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಇದೇ ಅಧಿವೇಶನದಲ್ಲಿ, ಆ ಸಹಕಾರ ಸಂಘಗಳನ್ನು ರದ್ದು ಮಾಡುವುದಕ್ಕೆ ಒಂದು Bill move ಮಾಡಿ, amendment ತೆಗೆದುಕೊಂಡು ಬಂದು, ಕೂಡಲೇ, ಅದನ್ನು ಸರ್ಕಾರ ವಹಿಸಿಕೊಳ್ಳಬೇಕು. ಇಲಾಖೆಯ ಅಧಿಕಾರಿಗಳ ಮುಖಾಂತರ canal maintenance ಆಗಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಕೋನರೆಡ್ಡಿಯವರೆ, ಮಾನ್ಯ ಗೋವಿಂದ ಎಂ. ಕಾರಜೋಳರವರು ಏನು ಹೇಳುತ್ತಾರೆಂದರೆ, ಈ ಸಹಕಾರಿ ಸಂಘಗಳೆಲ್ಲಾ defunct ಆಗಿ ಬಿಟ್ಟಿದೆ. ಅದರ ಬಗ್ಗೆ ಸರ್ಕಾರ ನೋಡಿ, ಅದಕ್ಕೆ ಏನಾದರೂ ಮಾಡಿ, ಅದನ್ನು Minor Irrigationಗಾದರೂ ಕೊಡಿ ಅಥವಾ Major Irrigationಗಾದರೂ ಕೊಡಿ, canal maintenance ಇಲ್ಲವೇ ಇಲ್ಲ. ತಾವು ಅದರ ಬಗ್ಗೆ ನೋಡಿ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಅದು Major Irrigationನವರದ್ದಾದರೆ ಅದನ್ನು ಅವರೇ ಮಾಡಲಿ, Minor Irrigationನವರದ್ದಾದರೆ ಅವರು ಮಾಡಲಿ.

ಅಧ್ಯಕ್ಷರು: ತಾವು ಹೇಳುವುದು ಸರಿ ಇದೆ. ಸರ್ಕಾರ ಅದನ್ನು ನೋಡುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ: ನಾನು ಮಾನ್ಯ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನೀರಾವರಿಯಂಥ ಒಂದು ಇಲಾಖೆ ದೊಡ್ಡ ಇಲಾಖೆಯಾಗಿದ್ದು, ಇದಕ್ಕೆ ಹೆಚ್ಚು ಹಣ ಕೊಡುವಂಥದ್ದು ಮತ್ತು ಹೆಚ್ಚು ಜನರಿಗೆ ಸಂಬಂಧಪಟ್ಟಿರುವಂಥದ್ದು. ಅದರ ಬಗ್ಗೆ ಯಾರಾದರೂ ಅರ್ಧ ಗಂಟೆ, ಮುಕ್ಕಾಲು ಗಂಟೆ, ಒಂದು ಗಂಟೆ ಕಾಲ ಮಾತನಾಡಿದರೆ, ಅದಕ್ಕೆ

ಸಂಬಂಧಪಟ್ಟ ಮಂತ್ರಿಯವರು ಇದ್ದಾರೆ, ಆ ಬಗ್ಗೆ ಸಮಗ್ರವಾಗಿ ಉತ್ತರವನ್ನು ಕೊಡುತ್ತಾರೆ. ಅದನ್ನು ಬಿಟ್ಟು ಐದು ನಿಮಿಷ, ಎರಡು ನಿಮಿಷ ಎಂದರೆ ಅದು ಚರ್ಚೆ ಎಂದು ಆಗುತ್ತದೆಯೇ?

ಶ್ರೀ ಎನ್.ಹೆಚ್.ಕೋನರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತು ಮಾನ್ಯ ಗೋವಿಂದ ಕಾರಜೋಳರವರು ಹೇಳಿದಂಥ ವಿಷಯ ನಿಜವಾಗಿದೆ. ಈಗ ಏನಾಗಿದೆಯೆಂದ್ದರೆ, ಸರ್ಕಾರದವರು ರಿಪೇರಿ ಮಾಡುವ ಹಾಗೆ ಇಲ್ಲ, ಸೊಸೈಟಿ ಹತ್ತಿರವೂ ಹಣವಿಲ್ಲದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅದು ಯಾವ ಇಲಾಖೆಯಿಂದ ಪ್ರಾರಂಭವಾಗಿದೆಯೋ, ಅದು Major Irrigationನಿಂದ ಪ್ರಾರಂಭವಾಗಿದ್ದರೆ, ಅವರೇ ಮುಂದುವರೆಸಬೇಕೆಂಬ ತೀರ್ಮಾನ ತೆಗೆದುಕೊಳ್ಳಬೇಕೆಂಬ ಒಳ್ಳೆಯ ಸೂಚನೆಯನ್ನು ಹೇಳಿದ್ದಾರೆ. ಇನ್ನು ಸಣ್ಣ ನೀರಾವರಿ ಇಲಾಖೆಯಿಂದ ಸರ್ಕಾರ ಆಯವ್ಯಯದಲ್ಲಿ ಘೋಷಣೆ ಮಾಡಿತ್ತು. ತಾಲ್ಲೂಕಿಗೆ ಒಂದು ಕೆರೆ ಎಂದು 193 ಕೆರೆಗಳನ್ನು ಮಾಡುತ್ತೇವೆಂದು ಹೇಳಿತ್ತು. ಅದನ್ನು ಒಂದು ವರ್ಷ ಮಾಡಿದರು, ನಂತರ ನಿಲ್ಲಿಸಿಬಿಟ್ಟರು. ನಾನು ಏನು ಹೇಳುತ್ತೇನೆಂದರೆ, ಬಜೆಟ್‌ನಲ್ಲಿ ಏನು ಬಂದಿರುತ್ತದೆ, ಅದನ್ನು ಪ್ರತಿ ವರ್ಷ implement ಮಾಡುವಂಥ ಪ್ರಯತ್ನವನ್ನು ಸರ್ಕಾರ ಮಾಡಬೇಕೆಂದು ಹೇಳುತ್ತೇನೆ. ಈ ಸಾರಿ ಕೆರೆ ಸಂಜೀವಿನಿ ಯೋಜನೆ ಎಂದು ಜಾರಿ ಮಾಡಿದರು. ಆ ಯೋಜನೆಯನ್ನು ಈ ಸಲ ಸಣ್ಣ ನೀರಾವರಿ ಬಿಟ್ಟು, ಈಗ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಮಾಡುತ್ತಿದ್ದೀರಿ. ಅದಕ್ಕೆ ಹಣವನ್ನು ಇನ್ನೂ ಹೆಚ್ಚಿಗೆ ಬೇಗ ಕೊಟ್ಟರೆ, ಬರಗಾಲ ಇದ್ದಂಥ ಸಂದರ್ಭದಲ್ಲಿ, ಕೆರೆಗಳಲ್ಲಿ ನೀರು ಇಲ್ಲದೇ ಇರುವಂಥ ಸಂದರ್ಭದಲ್ಲಿ ಅದನ್ನು ಮಾಡುವ ಪ್ರಯತ್ನವನ್ನು ಮಾಡಬಹುದು. ಇದರ ಜೊತೆಗೆ ಅರಣ್ಯ ಇಲಾಖೆಯ ಸಚಿವರು ಈಗ ಹೊರಗೆ ಹೋದರೆಂದು ಕಾಣುತ್ತದೆ. ನಾನು ಅವರಿಗೆ ವಿನಂತಿ ಮಾಡುವುದೇನೆಂದರೆ, Social Forest ಇಲಾಖೆ ಇದೆ. ಇದು ಕರ್ನಾಟಕ ರಾಜ್ಯದಲ್ಲಿ ಜೀವಂತವಾಗಿ ಇದೆಯೋ, ಇಲ್ಲವೋ? ಇಲ್ಲಿ ವರ್ಷಕ್ಕೆ ಒಂದು ಲಕ್ಷ ಗಿಡಗಳನ್ನು ಹಾಕುತ್ತೇವೆಂದು ಹೇಳುತ್ತಾರೆ. ಆದರೆ ನೋಡುವುದಕ್ಕೆ ಒಂದು ಗಿಡವೂ ಇಲ್ಲ. ನನ್ನ ಕ್ಷೇತ್ರದಲ್ಲಿ 500 ಕಿ.ಮೀ. ಹೊಸ ರಸ್ತೆಯನ್ನು ನಿರ್ಮಾಣ ಮಾಡಿದ್ದೇವೆ. ನಾನು ನಿನ್ನೆ Social Forest DFOಗೆ phone ಮಾಡಿದೆ. ನಿಮಗೆ NREG ಯೋಜನೆಯಿಂದ ಹಣ ಕೊಡುತ್ತೇವೆ, ನೀವು ಆ ಕೆಲಸ ಮಾಡಬೇಕೆಂದು ಹೇಳಿದರೆ, ಅವರು ಸರ್ಕಾರದಿಂದ ನಮಗೆ

19-06-2017

ಇನ್ನೂ ನಿರ್ದೇಶನ ಬಂದಿಲ್ಲವೆಂದು ಹೇಳುತ್ತಾರೆ. ಮತ್ತೆ ಈಗ ಮಳೆಗಾಲದಲ್ಲಿ ಗಿಡವನ್ನು ನೆಡಬೇಕು, ಮಳೆಗಾಲದ ನಂತರ ಗಿಡ ನೆಡುವುದಕ್ಕೆ ಆಗುವುದಿಲ್ಲ. ದಯವಿಟ್ಟು ಅರಣ್ಯ ಇಲಾಖೆಯ ಮಂತ್ರಿಯವರು ವಿಶೇಷ ಗಮನ ಕೊಟ್ಟು ಮಾಡಬೇಕೆಂದು ಹೇಳುತ್ತೇನೆ. ಇನ್ನು ಕಳಸಾ ಬಂಡೂರಿ ಯೋಜನೆಯನ್ನು ಜಾರಿ ಮಾಡಬೇಕಾಗಿದೆ, ಅದಕ್ಕೆ ಪರ್ಯಾಯ ಭೂಮಿ ಕೊಡಬೇಕೆಂದು ಇದೆ.

ಮುಂದು.. ..

19-06-2017-12-30-13-MS-VG.

ಶ್ರೀ ಎನ್.ಹೆಚ್.ಕೋನರೆಡ್ಡಿ: (ಮುಂದು)

ನಾನು ಮೊನ್ನೆ ವಿಸಿಟ್ ಮಾಡಿದಾಗ ಈ ಬಗ್ಗೆ ಬೆಳಗಾಂ ಅಧಿವೇಶನದಲ್ಲಿಯೂ ಕೂಡ ಮಾತನಾಡಿದ್ದೇನೆ. Substitute land ತೆಗೆದುಕೊಳ್ಳಬೇಕೆಂದು ಇದೆ. ಕೇಂದ್ರಸರ್ಕಾರವು ಅನುಮತಿಯನ್ನು ಕೊಡಬೇಕಾದರೆ substitute land ಕೊಡಬೇಕೆಂದು ಇದೆ. ಆ ಕಳಸ-ಬಂಡೂರಿ ಯೋಜನೆಯ ಹತ್ತಿರ 500 ಕಿ.ಮೀ ಇದೆ. Forest departmentಗೆ Supreme Courtನಿಂದ decision ಆಗಿದೆ ಅದರ ಪ್ರಕಾರ ಖರೀದಿ ಮಾಡಬೇಕೆಂಬ ತೀರ್ಮಾನಕ್ಕೆ ಮಾನ್ಯ ಅರಣ್ಯ ಸಚಿವರು ಮಾಡಬೇಕು. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಒಪ್ಪಿಕೊಂಡಿದ್ದಾರೆನ್ನುವಂತಹ ಮಾತನ್ನು ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಯಲ್ಲಿ Forest Departmentನವರು ಗಿಡಗಂಟೆ ಇಲ್ಲ ಎನ್ನುವ ಕಾರಣಕ್ಕಾಗಿ ಮಳೆ ಬರುತ್ತಿಲ್ಲ. ಗಿಡ ಬೆಳೆಸುವುದಕ್ಕಾಗಿ ಬಹಳ ಗಮನವನ್ನು ಕೊಡಬೇಕಾಗಿದೆ. ಶಾಸಕರಾದ ನಾವುಗಳು ಹಾಗೂ ಪಂಚಾಯಿತಿಯವರು ಎಲ್ಲರೂ ಕೂಡಿಕೊಂಡು ಗಿಡ ಬೆಳೆಸುವಂತೆ ವ್ಯವಸ್ಥೆ ಮಾಡಿದರೆ ಮಳೆ ಬರುವುದಕ್ಕೆ ಸಾಧ್ಯವಾಗುತ್ತದೆ. ನಾನು ಮೊನ್ನೆ ಇಂತಹ ಬರಗಾಲವನ್ನು ಎದುರಿಸುವುದಕ್ಕಾಗಿ ಮೋಡ ಬಿತ್ತನೆಯನ್ನು ಮಾಡಬೇಕೆಂದು calling attentionನಲ್ಲಿ ಕೇಳಿದ್ದೆ. ಮೋಡ ಬಿತ್ತನೆ ಕಾರ್ಯಕ್ರಮಕ್ಕೆ ಸರ್ಕಾರದ ಆದೇಶವಾಗಿದ್ದು ಇದಕ್ಕಾಗಿ ಬಜೆಟ್‌ನಲ್ಲಿ 30 ಕೋಟಿ ರೂಪಾಯಿಗಳನ್ನು reserve ಇಟ್ಟಿದ್ದೇವೆ, ಅದಕ್ಕಾಗಿ ತಾಂತ್ರಿಕ್ ಬಿಡ್ ಇಟ್ಟಿದ್ದು ದಿನಾಂಕ:17.06.2017ಕ್ಕೆ tender final ಆಗುತ್ತದೆ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಈ ಟೆಂಡರ್

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಆಗುವಷ್ಟರೊಳಗೆ ಮೇಲೆ ನಮಗೆ ಮೋಡ ಸಿಗಬೇಕಲ್ಲವೆ, ಯಾವಾಗ ನೀರು ನಿಲ್ಲುತ್ತದೆ ಆಗ ಮೋಡ ಬಿತ್ತನೆ ಆದರೆ ಇದು ಸಾಧ್ಯವಾಗುತ್ತದೆ. ಅದಕ್ಕಾಗಿ ಹೊಸದಾಗಿ technology ಅನ್ನು use ಮಾಡಿ ಮೋಡ ಬಿತ್ತನೆ ಕಾರ್ಯಕ್ರಮವನ್ನು ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇನ್ನು ಶಿಕ್ಷಣ ಇಲಾಖೆಯ ಬಗ್ಗೆ ವಿಶೇಷವಾಗಿ ಹೇಳಬೇಕೆಂದರೆ, ಶಿಕ್ಷಣ ಇಲಾಖೆಯ ಸಚಿವರು ಈಗ ಹೊರಗೆ ಹೋದರೆಂದು ಕಾಣುತ್ತಿದೆ. ಒಬ್ಬ ಎಂಎಲ್ಎ ಆಗಿ ಒಂದು ಶಾಲಾ ಕಟ್ಟಡವನ್ನು ಕಟ್ಟುವುದಕ್ಕೆ ಮುಡ್ಡಿಲ್ಲ. ಇದು ಎಲ್ಲಾ ಎಂಎಲ್ಎಗಳಿಗೂ ಇರುವಂತಹ ವ್ಯವಸ್ಥೆಯಾಗಿದೆ. ಪ್ರಾಥಮಿಕ ಶಾಲೆಯನ್ನು ಕಟ್ಟುವುದಕ್ಕೆ ತಯಾರಿಲ್ಲ, ಹೈಸ್ಕೂಲ್ ಕಟ್ಟುವುದಕ್ಕೆ ರೂಮು ಇಲ್ಲ. ಒಂದು ರೂಮ್ ಅನ್ನು ಕಟ್ಟುವುದಕ್ಕೆ ಅವಕಾಶವಿಲ್ಲದಾಗಿದೆ. ಈ ಹಿಂದೆ RMSA ಯೋಜನೆಗೆ ಕೇಂದ್ರಸರ್ಕಾರದಿಂದ ಹಣ ಬರುತ್ತಿತ್ತು. ಸರ್ವಶಿಕ್ಷಣ ಅಭಿಯಾನದಿಂದಲೂ ಸಹ ಹಣ ಬರುತ್ತಿತ್ತು. ಈ ಸರ್ಕಾರದ ಬಂದ ಮೇಲೆ ಆ ಯೋಜನೆಗಳನ್ನು ಬಂದ್ ಮಾಡಿದರು. Alternative ಆಗಿ ತರಹ ರಾಜ್ಯಸರ್ಕಾರವು ಒಂದು ಯೋಜನೆ ಮಾಡಬೇಕು. ಇಲ್ಲಾ IIT ಉದ್ಘಾಟನೆಗೆ ಬಂದಾಗ ನಾವು ಕೇಂದ್ರದಿಂದ Education Minister ಬಂದಾಗ ಅವರ ಗಮನ ಸೆಳೆದಿದ್ದೆವು. RMSA ಮತ್ತು SSA ಅನ್ನು ಮುಂದುವರೆಸಬೇಕೆಂದು ಹೇಳಿದೆವು. ಅದಕ್ಕಾಗಿ ರಾಜ್ಯ ಸರ್ಕಾರದಿಂದ ಈ ಸಂಬಂಧ ಪ್ರಸ್ತಾವನೆಯನ್ನು ಕಳುಹಿಸಿ ಇದಕ್ಕೆ ಕೇಂದ್ರ ಸರ್ಕಾರದಿಂದಲಾದರೂ ಹಣವನ್ನು ಕೊಡಿ ಅಥವಾ ರಾಜ್ಯ ಸರ್ಕಾರದಿಂದಲಾದರೂ ಹಣವನ್ನು ಕೊಡಿ ಎಲ್ಲಾ ಶಾಲಾಕಟ್ಟಡಗಳಿಗೆ ಮೂಲಭೂತ ಸೌಕರ್ಯವನ್ನು ಕೊಡವುದಕ್ಕೆ ವಿಶೇಷ ಗಮನವನ್ನು ಕೊಡಬೇಕೆಂದು ಹೇಳಿ ನಾನು ಶಿಕ್ಷಣ ಸಚಿವರ ಗಮನ ಸೆಳೆಯುತ್ತಿದ್ದೇನೆ. 1994-95ರಿಂದ ಹಿಂದೆ ಇದ್ದಂತಹ ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ, ಉಪ ಮುಖ್ಯಮಂತ್ರಿಯಾಗಿ ಯಡಿಯೂರಪ್ಪನವರು ಇದ್ದರು. ಶಿಕ್ಷಣ ಮಂತ್ರಿಯಾಗಿ ಬಸವರಾಜ ಹೊರಟ್ಟಿಯವರು ಇದ್ದರು. ಆಗ ಅವರುಗಳು ಎಲ್ಲವನ್ನು ಅನುದಾನಕ್ಕೆ ಒಳಪಡಿಸಿದ್ದರು. 1994-95ರ ನಂತರ ಆದ ವ್ಯವಸ್ಥೆಯಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರವು ಕೂಡ 5 ವರ್ಷಗಳ ಕಾಲ ಅವರು ಏನೂ ಮಾಡಲಿಲ್ಲ. ಇವತ್ತಿನ ಸರ್ಕಾರವು ಮಾಡಲಿಲ್ಲ. ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳು ಇವೆ. ಅಲ್ಲಿ ಶಿಕ್ಷಕರು 10 ವರ್ಷಗಳ ಕಾಲ ಕೆಲಸವನ್ನು ಮಾಡಿದ್ದಾರೆ.

ಅಂತಹ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವಂತಹ ವ್ಯವಸ್ಥೆಯನ್ನು ಜಾರಿ ಮಾಡಬೇಕು ಇದರ ಜೊತೆಗೆ ಶಿಕ್ಷಣ ಇಲಾಖೆಗೆ ಮೂಲಭೂತ ಸೌಕರ್ಯವನ್ನು ಕೊಡಬೇಕು. ನಾವು ಇವತ್ತಿನದಿವಸ ಕನ್ನಡ ಶಾಲೆಗಳು ಬಂದ್ ಆಗುತ್ತಿದ್ದು ಈ ಬಗ್ಗೆ ಏನು ಮಾಡಬೇಕೆಂದು ಚರ್ಚೆ ಮಾಡುತ್ತಿದ್ದೇವೆ. ನಾವು ಯಾರೂ ಎಂಎಲ್ಎ ಮಕ್ಕಳೂ ಅಲ್ಲಿ admission ಮಾಡುವುದೇ ಇಲ್ಲ. ಯಾವ ನೌಕರದಾರನು ಅವನ ಮಕ್ಕಳನ್ನು ಅಲ್ಲಿ admission ಮಾಡುವುದಿಲ್ಲ. ಈ ರೀತಿ ಆದರೆ ಕನ್ನಡ ಶಾಲೆಗಳು ಎಲ್ಲಿ ಉಳಿಯುತ್ತದೆ. ನಾವೆಲ್ಲರೂ ಕನ್ನಡ ಶಾಲೆಯಲ್ಲಿ ಕಲಿತು ಎಂಎಲ್ಎ ಆಗಿ ಇಲ್ಲಿಗೆ ಅಧಿವೇಶನಕ್ಕೆ ಬಂದಿದ್ದೇವಲ್ಲಾ. ಮಂತ್ರಿಗಳ ಮಕ್ಕಳು, ಮುಖ್ಯಮಂತ್ರಿಗಳ ಮಕ್ಕಳು, ನೌಕರರ ಮಕ್ಕಳು compulsory ಆಗಿ ಕನ್ನಡ ಶಾಲೆಗೆ ತಮ್ಮ ಮಕ್ಕಳನ್ನು ಕಡ್ಡಾಯವಾಗಿ ಸೇರಿಸಬೇಕೆಂದು ಈ ಬಗ್ಗೆ ಸರ್ಕಾರದಿಂದ ಒಂದು ಆದೇಶವನ್ನು ಹೊರಡಿಸುವುದರ ಜೊತೆಗೆ ತವರ increment cut ಮಾಡುತ್ತೇನೆಂದು ಹೇಳಬೇಕು. ಈ ರೀತಿ ಮಾಡಿದಾಗ ಮಾತ್ರ ಕನ್ನಡ ಶಾಲೆಗಳು ಉಳಿಯುತ್ತವೆ, ಇಲ್ಲದೆ ಇದ್ದರೆ ಇದು ಸಾಧ್ಯವಿಲ್ಲ. ಏಕೆಂದರೆ ನಾನು ಸಹ ನನ್ನ ಮಕ್ಕಳನ್ನು ಕನ್ನಡ ಶಾಲೆಗೆ ಹಾಕಲಿಲ್ಲ. ಈ ರೀತಿ ಮಾಡಿದಾಗ ಉಳಿಕೆಯವರ ಪರಿಸ್ಥಿತಿ ಏನು. ಈ ಬಗ್ಗೆ ಸರ್ಕಾರವು ಸುತ್ತೋಲೆಯನ್ನು ಹೊರಡಿಸಬೇಕು. ಇನ್ನು ಅಲ್ಪಸಂಖ್ಯಾತರ ಇಲಾಖೆಯ ಬಗ್ಗೆ ಹೇಳುವುದಾದರೆ, ನಾನು ವಿಶೇಷವಾಗಿ ಶಾದಿಮಹಲ್‌ಗೆ ಸರ್ಕಾರವು ದುಡ್ಡು ಕೊಡುವುದರ ಬಗ್ಗೆ ಸರ್ಕಾರದ ಗಮನಕ್ಕೆ ತರುತ್ತಿದ್ದೆ. ಅರಕಳಿಯಾಗಿರುವಂತಹದ್ದನ್ನು ಕೂಡ complete ಮಾಡುವಂತಹ ವ್ಯವಸ್ಥೆ ಮಾಡಿದರು. ಈಗಿರುವ ಶಿಕ್ಷಣ ಸಚಿವರು active ಆಗಿ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಕಟ್ಟಡದ ಬಗ್ಗೆ ಗಮನ ಹರಿಸುತ್ತಿಲ್ಲ. ಕಟ್ಟಡವನ್ನು ಕಟ್ಟುವುದಕ್ಕೆ ಅನುದಾನವನ್ನು ಕೊಡಬೇಕೆಂದು ಕೇಳುತ್ತೇನೆ. ಇನ್ನು ಉನ್ನತ ಶಿಕ್ಷಣ ಇಲಾಖೆಯ ಬಗ್ಗೆ ಹೇಳುವುದಾದರೆ, 170 ಹೊಸ ಕಾಲೇಜನ್ನು ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿ ನವಲಗುಂದ ಮತ್ತು ಅಣ್ಣಿಗೇರಿ ಎಂದು ಇದೆ. ಒಂದೊಂದು ಕಟ್ಟಡಕ್ಕೆ ತಲಾ 10 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆ ಕಟ್ಟಡಗಳಿಗೆ ಅನುದಾನ ಇನ್ನು ಬಿಡುಗಡೆಯಾಗುತ್ತಿಲ್ಲ. ಸರ್ಕಾರವು ಈ ಕಡೆಗೆ ಗಮನಹರಿಸಬೇಕೆಂದು ಕೇಳುತ್ತೇನೆ. ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಹೇಳುವುದಾದರೆ, ಮಾನ್ಯ ಅಧ್ಯಕ್ಷರೆ, ನಾನು ಇನ್ನು 5 ನಿಮಿಷದಲ್ಲಿ ಮುಗಿಸುತ್ತೇನೆ. ಮಾನ್ಯ

19-06-2017

ಮಹದೇವಪ್ಪನವರು ಇಲ್ಲಿಯೇ ಇದ್ದಾರೆ. ಅಣ್ಣಾ ನಿನ್ನ ಬಗ್ಗೆಯೆ ನನಗೆ ವಿಶೇಷ ಪ್ರೀತಿ ಇತ್ತು. ನೀನು ಆ party ಮೇಲೆ ತಾರತಮ್ಯ ಮಾಡಿಬಿಟ್ಟಿದ್ದೀಯಾ. ನಿಮ್ಮ ಪಾರ್ಟಿಯವರಿಗೆ 15 ಕೋಟಿ, ನನಗೆ 8 ಕೋಟಿ, ಬಿಜೆಪಿಯವರಿಗೆ 8 ಕೋಟಿ ಕೊಡಲಾಗಿದೆ, ನನ್ನನ್ನು ಏತಕ್ಕಾಗಿ ಬಿಜೆಪಿಯವರ ಜೊತೆಯಲ್ಲಿ ತೂಗಿದ್ದೀಯಾ? ನನ್ನನ್ನು ವಿಶೇಷವಾಗಿ ನಿನ್ನ ಜೊತೆಯಲ್ಲಿ ತೂಗಬೇಕಾಗಿತ್ತು. ಏನು Appendix-C ಮಾಡಿದ್ದೀಯಲ್ಲಾ. ಅದನ್ನು ದಯವಿಟ್ಟು ಸ್ವಲ್ಪ change ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಡಾ:ಹೆಚ್.ಸಿ.ಮಹದೇವಪ್ಪ (ಲೋಕೋಪಯೋಗಿ ಸಚಿವರು): ತಾರತಮ್ಯ ಮಾಡುವುದಿಲ್ಲ ಕೊಡುತ್ತೇನೆ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಇನ್ನು ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಬೇರೆ ರಾಜ್ಯದಲ್ಲಿ CRF ನಲ್ಲಿ ಬಂದಂತಹ ಹಣವನ್ನು ಟೆಂಡರ್ ಕರೆದು ಕೆಲಸ ಪ್ರಾರಂಭ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿಯೂ ಬೇಗನೆ ಟೆಂಡರ್ ಕರೆದು ಪ್ರಾರಂಭ ಮಾಡುವಂತಹ ವ್ಯವಸ್ಥೆ ತಾವು ಮಾಡಬೇಕು. KRDCLನಿಂದ ದೊಡ್ಡ ನಿರ್ಧಾರವನ್ನು ನೀವು ಮಾಡಿ. ಆ ನಿರ್ಧಾರಕ್ಕೆ bridges ಕಾಮಗಾರಿಯನ್ನು ಪ್ರಾರಂಭ ಮಾಡುವ ವ್ಯವಸ್ಥೆ ಮಾಡಬೇಕು. ಅದು ಕೂಡ ತಡವಾಗುತ್ತಿದ್ದು ಅದಕ್ಕಾಗಿ ವಿಶೇಷ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನೀವು Appendix-C ಮಾಡಿ ಮೂರು ಸಲ ಆಯಿತು. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು 5 ವರ್ಷಗಳಾಗುತ್ತಾ ಬಂದಿದೆ. ಅವು 5 ಆಗಬೇಕಲ್ಲವೇ? ಪ್ರತಿವರ್ಷ Appendix-C ಏತಕ್ಕೆ ಇರುತ್ತಿತ್ತು. ಎಲ್ಲಾ ಯೋಜನೆ ಬೇರೆ ರೀತಿ ಆಗಬಾರದು ಎಂದು ನಾನು ಒತ್ತಾಯ ಮಾಡುವುದಕ್ಕೆ ಹೇಳಬಯಸುತ್ತಿದ್ದೇನೆ. RDPR ಇಲಾಖೆಯ ಬಗ್ಗೆ ಹೇಳುವುದಾದರೆ 460 ಹೊಸ ಪಂಚಾಯಿತಿಗಳನ್ನು ಮಾಡಿ ಕೆಲವು ವಿವಿಧ ವ್ಯವಸ್ಥೆಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇಷ್ಟಕ್ಕೆ ಗ್ರಾಮೀಣಾಭಿವೃದ್ಧಿ ಆಗುವುದಕ್ಕೆ ಸಾಧ್ಯವಿಲ್ಲ. ಬಹಳಷ್ಟು ಜನರು ಎಲ್ಲಾ ಕಡೆಯಲ್ಲಿ concrete ರಸ್ತೆಯೆ ಬೇಕೆನ್ನುವಂತಹ ಪರಿಸ್ಥಿತಿ ಗ್ರಾಮದಲ್ಲಿ ತಯಾರಾಗಿದೆ. ಅದಕ್ಕಾಗಿ ವಿಶೇಷವಾಗಿ ಗ್ರಾಮಮಟ್ಟದಲ್ಲಿ ಕಾಂಕ್ರೀಟ್ ರಸ್ತೆಯನ್ನು ಮಾಡಬೇಕು. ನಮ್ಮ ಹೊಲ ನಮ್ಮ ರಸ್ತೆ 4ನೆಯ ಹಂತ ಈಗ ಪ್ರಾರಂಭವಾಗಿದೆ. 5ನೇ ಹಂತ ಪ್ರಾರಂಭ ಮಾಡುವುದಕ್ಕೆ ಸರ್ಕಾರ ಕ್ರಿಯಾ ಯೋಜನೆ ರೆಡಿ

ಮಾಡಬೇಕು. ಈಗ ಎರಡು ಸಲ ಆಯಿತು. 5 ವರ್ಷದಲ್ಲಿ 30 ಕಿ.ಮಿ.ಗಳ ಕಾಮಗಾರಿ 5 ಆಗಬೇಕಾಗಿತ್ತು. ಅದು ಕೇವಲ ಎರಡು ಆಯಿತು. ಅದಕ್ಕಾಗಿ ಪ್ರತಿ ಕ್ಷೇತ್ರಕ್ಕೆ 60-60 ಕಿ.ಮಿ ಕೊಡುವಂತಹ ವ್ಯವಸ್ಥೆ ಆಗಬೇಕು. ಪ್ರವಾಸೋದ್ಯಮ ಇಲಾಖೆಯ ಬಗ್ಗೆ ಹೇಳುವುದಾದರೆ, ಅಲ್ಲಿ ಯಲ್ಲಮ್ಮನಗುಡ್ಡ ಇದೆ, ನವಲಗುಂದದಲ್ಲಿ ನಾಗಲಿಂಗಪ್ಪನ ಮಠ ಇದೆ, ಯಮನೂರಿನಲ್ಲಿ ದೊಡ್ಡ ಜಾತ್ರೆ ನಡೆಯುತ್ತಿದೆ. ಪ್ರವಾಸೋದ್ಯಮ ಇಲಾಖೆಯ ಕಡೆಯಿಂದ ಹಣವೇ ಬರುವುದಿಲ್ಲ. ಅದಕ್ಕಾಗಿ ಉತ್ತರ ಕರ್ನಾಟಕದ ಪ್ರಸಿದ್ಧ ದೇವಸ್ಥಾನಗಳು ಇವೆ ಅವುಗಳಿಗೆಲ್ಲಾ ಕೊಡುವಂತಹ ವ್ಯವಸ್ಥೆ ಮಾಡಬೇಕು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಕೋನರೆಡ್ಡಿಯವರೆ, ಯಮನೂರು ಎನ್ನುವ ಹೆಸರು ಏತಕ್ಕಾಗಿ ಬಂತು ಎಂದು ಹೇಳಿ ಏಕೆಂದರೆ ಅದು ನಮಗೆ ಗೊತ್ತಿಲ್ಲ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಯಮನೂರು ಎಂದು ಏತಕ್ಕಾಗಿ ಕರೆಯುತ್ತಾರೆಂದರೆ ಚಾಂಗ್‌ದೇವ್ ದೇವಸ್ಥಾನ ಅಲ್ಲಿದೆ. ಅಲ್ಲಿಗೆ ಮೂರು ಲಕ್ಷ ಜನ ಭಕ್ತಾದಿಗಳು ಬರುತ್ತಾರೆ. ಅದಕ್ಕೆ ಅಲ್ಲಿ ಒಂದು ವಿಶೇಷ ಇದೆ. ಮೊನ್ನೆ ಅಲ್ಲಿ ಲಾಠಿ ಚಾರ್ಜ್ ಆಯಿತು ಅದಕ್ಕೆ ವಿಶೇಷ ಇದೆ ಎಂದು ಅನ್ನುವುದಕ್ಕೆ ಹೋಗಬೇಡಿ. ಅಲ್ಲಿ ಹೋರಾಟದ ಕಿಚ್ಚಿರುವಂತಹ ಊರಾಗಿದೆ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಯಮನೂರು ಎನ್ನುವಂತಹ ಹೆಸರು ಏತಕ್ಕಾಗಿ ಬಂತು? ಯಮ ಎಂದರೆ ನಮಗೆ ಪಾಶಿ ಹಾಕಿಕೊಂಡು ಕರೆದುಕೊಂಡು ಹೋಗುವವ ಅಂದುಕೊಂಡಿದ್ದೇವೆ. ಆ ಊರಿಗೆ ಏತಕ್ಕಾಗಿ ಹೆಸರು ಬಂತೆಂದು ಕೇಳುತ್ತಿದ್ದೇನೆ. ಅದರ ಹಿನ್ನೆಲೆ ಹೇಳಿ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಅಲ್ಲಿ ಹಿಂದೂ ಮುಸ್ಲಿಮ್ ಒಂದು ಭಾವೈಕ್ಯತೆಯ ದೇವಸ್ಥಾನವಾಗಿದೆ.

ಅಧ್ಯಕ್ಷರು: ನಿಮಗೆ ಗೊತ್ತಿರುವುದನ್ನು ಹೇಳಿಬಿಡಿ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಅದು ಒಂದು ಭಾವೈಕ್ಯತೆಯ ಕ್ಷೇತ್ರವಾಗಿದೆ. ಇನ್ನು ವಸತಿ ಇಲಾಖೆಯ ಬಗ್ಗೆ ಹೇಳೋಣ ಅಂದರೆ ಸಚಿವರಾದ ಕೃಷ್ಣಪ್ಪನವರು ಇಲ್ಲ. ಇವರು ವಸತಿ ಸಚಿವರಾದ ಮೇಲೆ ಸ್ವಲ್ಪ active ಆಗಿ ಕೆಲಸ ಮಾಡುತ್ತಿದ್ದಾರೆ. ಸರ್ಕಾರದ ವತಿಯಿಂದ ಹೊಸ ಆಶ್ರಯ ಯೋಜನೆಗೆಂದು ಜಮೀನು ಖರೀದಿ ಮಾಡಿದ್ದಾರೆ. ಅದಕ್ಕೆ ಗುರಿ fix ಮಾಡಬೇಕಾದಾಗ ಪ್ರತಿ ಸಲ

ಎಷ್ಟು ಕೊಡಬೇಕೋ ಅಷ್ಟನ್ನು ಕೊಟ್ಟುಬಿಡುತ್ತೇವೆ. ಇಡೀ ರಾಜ್ಯದಲ್ಲಿ ಹೊಸದಾಗಿ ಏನು ಖರೀದಿ ಮಾಡಿದ್ದೀರಿ. ಆ ಎಲ್ಲಕ್ಕೂ ಕೂಡ ಒಂದೇ ಸಾರಿ complete ಆಗಿ ಮನೆ ಕೊಡತಕ್ಕಂಥಹದ್ದು ಆಗಬೇಕು. ವಸತಿಗೆ ಸಂಬಂದಪಟ್ಟಂತೆ ನಿಗದಿ ಮಾಡುತ್ತೇವಲ್ಲಾ SC/ST ಇಷ್ಟು ಎಂದು ತಾವು ನಿಗದಿ ಮಾಡುತ್ತೀರಿ. ಆಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವವರಿಗೆ ಅಲ್ಲಿ ಫಲಾನುಭವಿಗಳು ಇಲ್ಲದೇ ಇದ್ದರೆ ಜನರಲ್‌ನವರಿಗೆ ಕೊಡುವಂತಹ ಒಂದು ಆದೇಶವು ಆಗಬೇಕಾಗಿದೆ. ಮತ್ತು ಜನರಲ್‌ನವರಿಗೆ ಗುರಿ ಹೆಚ್ಚಾಗಬೇಕೆನ್ನುವಂತಹ ತೀರ್ಮಾನವನ್ನು ಸರ್ಕಾರವು ತೆಗೆದುಕೊಳ್ಳಬೇಕಾಗಿದೆ. ಏನು ತಾವು ಆಶ್ರಯ ಯೋಜನೆಗೆ ನೂತನವಾಗಿ ಖರೀದಿ ಮಾಡಿದ್ದೀರಿ. ಅಲ್ಲಿ ಮೂಲಭೂತ ಸೌಕರ್ಯ ಕೊಡುವುದಕ್ಕೆ ಬೇಗನೆ ಸರ್ಕಾರವು ನಿರ್ಣಯವನ್ನು ಮಾಡಬೇಕಾಗಿದೆ. ಅಲ್ಲಿ 50% ಮನೆಯನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಈ ಬಗ್ಗೆ ಸುತ್ತೋಲೆಯನ್ನು ಹೇಗೆ ಹೊರಡಿಸುತ್ತಾರೋ ನನಗಂತೂ ಗೊತ್ತಿಲ್ಲ. ಅಲ್ಲಿ ರೋಡ್ ಇಲ್ಲದೆ ಇದ್ದರೆ ಮನೆಯನ್ನು ಹೇಗೇ ಕಟ್ಟಬೇಕು. ಮೂಲಭೂತ ಸೌಕರ್ಯ ಇಲ್ಲದೆ ಇದ್ದರೆ ಮನೆಯನ್ನು ಹೇಗೆ ಕಟ್ಟುವುದಕ್ಕೆ ಸಾಧ್ಯ. ಇಂತಹ ಗಂಭೀರವಾದಂತಹ ವಿಚಾರವನ್ನು ಸರ್ಕಾರವು ಯೋಚನೆ ಮಾಡಬೇಕು. ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಸಚಿವರನ್ನು ವಿನಂತಿ ಮಾಡುತ್ತೇನೆ. ತಾಲ್ಲೂಕಿಗೆ ಒಂದು ಕ್ರೀಡಾಂಗಣವು ಕಡ್ಡಾಯವಾಗಿ ಆಗಲೇಬೇಕೆಂದು ತೀರ್ಮಾನ ಮಾಡಬೇಕು. ಕ್ರೀಡಾಂಗಣವನ್ನು ಮಾಡಬೇಕಾದರೆ ಯಾರಾದರೂ ಭೂಮಿಯನ್ನು ದಾನ ಕೊಡಬೇಕೆಂದು ಕ್ರೀಡಾ ಇಲಾಖೆಯವರು ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ನಿಮಗೆ 5 ಎಕರೆ ಭೂಮಿಯನ್ನು ಯಾರು ದಾನ ಕೊಡುತ್ತಾರೆ? ಭೂಮಿ ಖರೀದಿ ಮಾಡುವ ಬಗ್ಗೆ ಕ್ರೀಡಾ ಸಚಿವರೆ ಏನಾದರೂ ತೀರ್ಮಾನ ತೆಗೆದುಕೊಂಡರೆ ಮಾತ್ರ ತಾಲ್ಲೂಕಿಗೆ ಒಂದು ಕ್ರೀಡಾಂಗಣ ಆಗುವುದಕ್ಕೆ ಸಾಧ್ಯವಾತ್ತದೆ. ಇನ್ನು ನಗರಾಭಿವೃದ್ಧಿ ಇಲಾಖೆಯ ಬಗ್ಗೆ ಹೇಳುವುದಾದರೆ, ಮುಖ್ಯಮಂತ್ರಿಗಳು ಹೋದರೂ ಎಂದು ಕಾಣುತ್ತಿದೆ. ಸನ್ಮಾನ್ಯ ಖಂಡ್ರೆಯವರು active ಆಗಿ ಕೆಲಸ ಮಾಡುತ್ತಿದ್ದಾರೆ. SFC ಅನುದಾನ ಬಿಡುಗಡೆ ಮಾಡುವ ಅಧಿಕಾರ ಮಾನ್ಯ ಮುಖ್ಯಮಂತ್ರಿಗಳಿಗೆ ಇದೆ. ಕೆಲವು ಕ್ಷೇತ್ರಕ್ಕೆ ಅನುದಾನವನ್ನು ಬಿಡುಗಡೆ ಮಾಡುತ್ತಾರೆ ಕೆಲವು ಕ್ಷೇತ್ರಕ್ಕೆ ಅನುದಾನ ಬಿಡುಗಡೆ ಮಾಡುವುದಿಲ್ಲ. ಇಡೀ ರಾಜ್ಯದಲ್ಲಿ ಎಲ್ಲರಿಗೂ ಸರಿಸಮಾನವಾಗಿ ಎಲ್ಲಾ ನಗರಗಳು ನಮ್ಮದು ಎಂದು

ಮಾಡಬೇಕು. ಅದು ಬೇರೆ ರೀತಿಯಲ್ಲಿ ಆಗಬಾರದು. ನವಲಗುಂದ ಮತ್ತು ನರಗುಂದಕ್ಕೆ ಹೆಚ್ಚು ಅನುದಾನವನ್ನು ಬಿಡುಗಡೆ ಮಾಡಬೇಕು. ಇದು ಬಹಳ ಹಿಂದುಳಿದ ಪ್ರದೇಶವಾಗಿದೆ. ತಲಾ 10 ಕೋಟಿಯ ತರಹ ಅನುದಾನ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ. ಇಡೀ ವ್ಯವಸ್ಥೆ ಏನು ನಡೆದಿದೆ ನಾವೆಲ್ಲರೂ ಕೂಡ ಚರ್ಚೆ ಮಾಡಿದ್ದೇವೆ. ಎಲ್ಲರೂ ಕೂಡ ರಾಜಕಾರಣದ ಬಗ್ಗೆ ಚರ್ಚೆ ಮಾಡುತ್ತೇವೆ. ರೈತರ ಸಾಲ ಮನ್ನಾ ಮಾಡಿ ಎಂದು ಇವರು ಅನ್ನುತ್ತಾರೆ ಮತ್ತು ನಾವು ಸಹಾ ಹೇಳುತ್ತೇವೆ. ರೈತರ ಸಾಲ ಮನ್ನಾವನ್ನು ಯಾರು, ಯಾವಾಗ ಮಾಡುತ್ತೀರಿ.

(ಮುಂದು)

19-06-2017 : 12-40[14] kkd:vg 1

ಶ್ರೀ ಎನ್.ಹೆಚ್. ಕೋನರೆಡ್ಡಿ (ಮುಂದು)

ಈ ಸದನ ಮುಗಿಯುವುದರೊಳಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವ ಸಂದರ್ಭದಲ್ಲಿ, ಕೇಂದ್ರ ಸರ್ಕಾರ ಕೊಡುತ್ತಾರೋ, ಬಿಡುತ್ತಾರೋ ಗೊತ್ತಿಲ್ಲ. ಆದರೆ, ತಾವು ನಾನು ರೈತರಿಗೆ ಸಹಾಯ ಮಾಡಲಿಕ್ಕೆ ನಾನು ವ್ಯವಸ್ಥೆ ಮಾಡುತ್ತೇನೆಂದು ಹೇಳಿ, ದಿಟ್ಟತನದಿಂದ ರೈತರ ಸಾಲ ಮನ್ನಾ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಿಗೆ ಒತ್ತಾಯ ಮಾಡುವುದರ ಜೊತೆಗೆ, ತಾವು ಏನು ಅವಕಾಶವನ್ನು ಕೊಟ್ಟಿರಿ, ಅಂಥ ಅವಕಾಶಕ್ಕೆ ನಾನು ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: Next ಪುಟ್ಟಣ್ಣಯ್ಯನವರು ಮಾತನಾಡಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಡುತ್ತೀರಾ?

ಅಧ್ಯಕ್ಷರು: ಕೊಡುತ್ತೇನೆ. ಮೊದಲು ಪುಟ್ಟಣ್ಣಯ್ಯನವರು ಮಾತನಾಡಿ ಮುಗಿಯಲಿ. ಆಮೇಲೆ ತಮಗೆ ಅವಕಾಶ ಕೊಡುತ್ತೇನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ): ಮಾನ್ಯ ಅಧ್ಯಕ್ಷರೆ, ಕಳೆದ 68 ವರ್ಷಗಳಿಂದ ನಾವು ರೈತರ ಸುದ್ದಿ ಮಾತನಾಡುತ್ತಲೇ ಇದ್ದೇವೆ. ರೈತರ ಸುದ್ದಿ ಮಾತನಾಡುತ್ತಾ, ಮಾತನಾಡುತ್ತಾ, ರೈತರ ಆತ್ಮಹತ್ಯೆ ಜಾಸ್ತಿಯಾಗುತ್ತಿದೆ. ಮಾತನಾಡದೇ ಇದ್ದರೆ ಆತ್ಮಹತ್ಯೆ ನಿಲ್ಲಬಹುದೇನೋ ಎಂದು ನಾನು ಯೋಚನೆ ಮಾಡುತ್ತಿದ್ದೇನೆ. ರಾಷ್ಟ್ರಕವಿ ಕುವೆಂಪುರವರು, ಇಡೀ ಭಾರತದ ರೈತರ ಬಗ್ಗೆ ಒಬ್ಬ ಕವಿಯಾಗಿ ಬಹಳ ದೊಡ್ಡ ಆಲೋಚನೆ ಮಾಡಿ ಹೇಳಿದ್ದಾರೆ.

"ಹಸಿರೇ ಹುಟ್ಟು ಹಸಿರೇ ಬದುಕು
ಹಸಿರು ಮೊದಲನೋಟ
ಹೂವಿನ ಕಂಪನ ಹಸಿರಾಗಿ
ಗಾಳಿಯ ತಂಪಿನ ಹಸಿರಾಗಿ
ಹಕ್ಕಿಯ ಕೊರಳ ಇಂಚರ ಹಸಿರಾಗಿ
ಇಳೆಯ ಉಸುರುವ ಉಸಿರು ಹಸಿರಾಗಿ
ಸಕಲೇಂದ್ರಿಯಗಳನ್ನು ವ್ಯಾಪಿಸುತ್ತವೆ
ಬರಬರುತ್ತಾ ಒಡಲು ಹಸಿರಾಗಿ
ಹರಿಯುವ ನೆತ್ತರು ಹಸಿರಾಗಿ
ಆತ್ಮವು ಹಸಿರಾಗುತ್ತದೆ"

ಎನ್ನುತ್ತಾರೆ ಕನ್ನಡ ನೆಲದ ವಿಶ್ವಮಾನವ, ರಾಷ್ಟ್ರಕವಿ ಕುವೆಂಪುರವರು. ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಬಹಳ ವರ್ಷಗಳಿಂದ ವಿಧಾನಸೌಧದಲ್ಲಿ ನಾನಾ ಮಂತ್ರಿ ಮತ್ತು ಇನ್ನಿತರ ಕೆಲಸ ಮಾಡಿದ್ದೀರಿ. ಕೃಷಿಗೆ ಏಕೆ ರಕ್ಷಣೆ ಮಾಡಲಿಕ್ಕೆ ಆಗುತ್ತಿಲ್ಲ? ಮಾನ್ಯ ಕೃಷ್ಣ ಬೈರೇಗೌಡರು ಜಗತ್ತಿನ ಎಲ್ಲ ದೇಶಗಳನ್ನು ನೋಡಿ ಬಂದಿದ್ದೀರಿ. ಇನ್ನೂ young blood ಇದೆ. GST ಒಳ್ಳೆಯ ಹೆಸರನ್ನೂ ತೆಗೆದುಕೊಂಡು ಬಂದಿದ್ದೀರಿ. ನೀವು ಕೃಷಿ ಮಂತ್ರಿ ಆಗಿದ್ದೀರಿ. ಕೃಷಿಯನ್ನು ರಕ್ಷಣೆ ಮಾಡಲಿಕ್ಕೆ ಏಕೆ ಆಗುತ್ತಿಲ್ಲ? ತಾವು 5080 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಗುಣಾತ್ಮಕವಾದ ಬೀಜ ಕೊಡುತ್ತೇವೆಂದು ಹೇಳುತ್ತೀರಿ, ಮಣ್ಣಿನ ರಕ್ಷಣೆ ಮಾಡುತ್ತೇವೆನ್ನುತ್ತೀರಿ, ಕೃಷಿ ಹೊಂಡ, ಕೃಷಿ ಭಾಗ್ಯ ಮತ್ತು ರೈತರಿಗೆ ಮೂಲಭೂತ ಸೌಕರ್ಯಗಳನ್ನು ಎಲ್ಲ ಕೊಡುತ್ತೀರಿ. ಆದರೂ ಏಕೆ ಆತ್ಮಹತ್ಯೆ ಮಾಡಿಕೊಂಡರು? ಸರ್ಕಾರಗಳು ಆಲೋಚನೆ ಮಾಡಬೇಕು. ಒಬ್ಬ psychiatrist, ಇನ್ನೊಬ್ಬರು ಕೃಷಿ scientist, ಮತ್ತೊಬ್ಬರು economists, ಈ ತರಹ 7-8 ಜನರ ಒಂದು ಸಮಿತಿ ಮಾಡಿ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೈತರನ್ನು ರಕ್ಷಣೆ ಮಾಡಲಿಕ್ಕೆ ಹೊಸ ದಿಕ್ಕಿನತ್ತ ಏಕೆ ಸಾಗುತ್ತಿಲ್ಲ? ಕೃಷಿಗೆ ಆದಾಯ ಖಾತ್ರಿ ಯೋಜನೆ ಏಕೆ ಕೊಡುತ್ತಿಲ್ಲ? ಕೃಷಿ ಆಯೋಗ ರಚನೆಯಾಗಿ 4 ವರ್ಷಗಳಾಯಿತು. ಸರ್ಕಾರ ಕಮ್ಮರಡಿ ಪ್ರಕಾಶ್ ನೇತೃತ್ವದಲ್ಲಿ ಆಯೋಗ ರಚನೆ ಮಾಡಿ 4 ವರ್ಷಗಳಾಯಿತು. 4 ವರ್ಷಗಳಿಂದ ಒಂದೂ ವರದಿ ಸಹ ಬಂದಿಲ್ಲ. ಕೃಷಿಯನ್ನು ರಕ್ಷಣೆ ಮಾಡಲಿಕ್ಕೆ ಯಾವ ನೀತಿಯೂ ಸೃಷ್ಟಿಯಾಗಿಲ್ಲ. ಅಥವಾ ಬರಗಾಲ ಮತ್ತು ಬೆಲೆ ನೀತಿ ರಕ್ಷಣೆ ಮಾಡಲಿಕ್ಕೆ ಸರ್ಕಾರ ಯಾವುದೇ ಸಂಪನ್ಮೂಲ ಕ್ರೂಢೀಕರಿಸಿಲ್ಲ. ಮತ್ತೆ ಕೃಷಿಯನ್ನು ಹೇಗೆ ರಕ್ಷಣೆ ಮಾಡುತ್ತೀರಿ? ರೈತರು ಏಕೆ ಗುಳೆ ಹೋಗುತ್ತಿದ್ದಾರೆ? ಕೃಷಿಯಿಂದ ಏಕೆ ವಿಮುಖರಾಗುತ್ತಿದ್ದಾರೆ? Cost of living, cost of cultivation ಬಗ್ಗೆ ಯಾವುದೇ ಆಲೋಚನೆ ಏಕೆ ಆಗುತ್ತಿಲ್ಲ? ಈಗ ಏನಾಗಿದೆ ಎಂದರೆ, 4ನೇ ವರ್ಷ ಮುಗಿಯಿತು, 5ನೇ ವರ್ಷ ಭಾಷಣಕ್ಕೋಸ್ಕರ ಕೃಷಿ ಮಾಡಿಕೊಂಡಿದ್ದೇವೆ. 'ಹಿಂಗಾರು ಮತ್ತು ಮುಂಗಾರು ಈ ಎರಡರಿಂದ ಆಗಿರತಕ್ಕಂಥ ನಷ್ಟ 32 ಸಾವಿರ ಕೋಟಿ ರೂಪಾಯಿಗಳು, ಕೇಂದ್ರ ಸರ್ಕಾರ ಬರಗಾಲ ಪರಿಹಾರಕ್ಕೆ 2 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದೆ' ಎಂದು ಇಲ್ಲಿ ಸರ್ಕಾರವೇ ಹೇಳಿದೆ. ದಯವಿಟ್ಟು ಮಧ್ಯದಲ್ಲಿ ಅವರವರೇ ಯಾರೂ ಜೋರಾಗಿ ಮಾತನಾಡಿಕೊಳ್ಳಬೇಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ಆತ್ಮಹತ್ಯೆ ಮಾಡಿಕೊಳ್ಳುವ ಸಮಯದಲ್ಲಾದರೂ ಸ್ವಲ್ಪ ಶಾಂತಿ ಇರಲಿ ಎಂದು ಅಷ್ಟೆ. ಯಾವ ಕಾರಣಕ್ಕೋಸ್ಕರ 30 ಸಾವಿರ ಕೋಟಿ ಸಾಲ ಇದ್ದರೂ ಯಾರು ರಕ್ಷಣೆ ಮಾಡಬೇಕು? 11 ಸಾವಿರ ಕೋಟಿ ರೂಪಾಯಿಗಳ ಸಾಲ ಕೊಟ್ಟಿದ್ದೇವೆಂದು ರಾಜ್ಯ ಸರ್ಕಾರ ಹೇಳುತ್ತದೆ. ಕೇಂದ್ರ ಸರ್ಕಾರ National Bank ನಲ್ಲಿ 36 ಸಾವಿರ ಕೋಟಿಯಿಂದ 40 ಸಾವಿರ ಕೋಟಿ ರೂಪಾಯಿಗಳ ಸಾಲ ಕೊಟ್ಟಿದ್ದೇವೆಂದು ಹೇಳುತ್ತಾರೆ. ಈಗ ಇಡೀ ಕರ್ನಾಟಕದ 160 ತಾಲ್ಲೂಕುಗಳಲ್ಲಿ ವ್ಯವಸಾಯ ಚಟುವಟಿಕೆ ಆರಂಭಿಸಬೇಕಲ್ಲ. 135 ಲಕ್ಷ ಟನ್ ಆಹಾರವನ್ನು ಉತ್ಪಾದನೆ ಮಾಡಬೇಕಲ್ಲ. ಕೃಷಿಗೆ ಯಾರು ಸಾಲ ಕೊಡುವುದು? ಆಹಾರ ಉತ್ಪಾದನೆ 40 ರಿಂದ 45% ವ್ಯವಸಾಯ ಮಾಡುವುದಕ್ಕೆ, ನಾಟಿ ಮಾಡುವುದಕ್ಕೆ, ಬಿತ್ತನೆ ಮಾಡುವುದಕ್ಕೆ ಯಾವುದೇ ಹಳ್ಳಿಯಲ್ಲಿ ಹಣವಿಲ್ಲ. ನಾನು ಒಂದು ವಾರದಿಂದೀಚೆಗೆ 16 ಶವಸಂಸ್ಕಾರ ಮಾಡಿದ್ದೇನೆ. 16 ಶವಸಂಸ್ಕಾರಕ್ಕೆ ಹಣ ಇಲ್ಲ. ಸರ್ಕಾರ 5 ಸಾವಿರ ರೂಪಾಯಿಗಳೆಂದು declare ಮಾಡಿದರೆ ಅದನ್ನೂ ಸಹಿತ

ಕೊಡುವುದಕ್ಕೆ ತಹಶೀಲ್ದಾರರ ಹತ್ತಿರ ಹಣವಿರಲಿಲ್ಲ. ಕೊನೆಗೆ ನಮ್ಮಲ್ಲಿ ಯಾರೋ ಒಳ್ಳೆಯ ತಹಶೀಲ್ದಾರರೆಂದು ತೋರುತ್ತದೆ. 10-15 ಜನರಿಗೆ ಅವರ ಸಂಬಳ ಹಣದಿಂದಲೇ ಕೊಟ್ಟುಬಿಟ್ಟಿದ್ದಾರೆ. ಇದು ಸತ್ಯವಾದ ಮಾತು. ಅತ್ಯಂತ ದು:ಖವಾಗುತ್ತದೆ. ಬರೀ ರೈತರಲ್ಲ, ಒಬ್ಬ ಕೂಲಿ ಮಾಡುವವನು ಮೊನ್ನೆ ಎರಡು ಸಣ್ಣ ಮಕ್ಕಳನ್ನು ಬಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಯಾವ ಕಾರಣಕ್ಕಾಗಿ ಆ ತರಹ ಆತ್ಮಹತ್ಯೆ ಏಕೆ ಆಗುತ್ತಿದೆ? ಈಗಾಗಲೇ CBI report ಮಾಡಿ ರವಿ ಆತ್ಮಹತ್ಯೆ ಬಗ್ಗೆ ಎಲ್ಲರೂ ದು:ಖ ಪಟ್ಟೆವು. ಆದರೆ, ಇದಕ್ಕೆ ಏಕೆ ಯಾವುದಾದರೊಂದು ವರದಿ ತರಿಸಿಕೊಳ್ಳಲಿಕ್ಕೆ ಆಗುತ್ತಿಲ್ಲ? ಮೋದಿ, ಗೋಹತ್ಯೆ ಕೆ ಬಾರೆ ಮೇ ಚರ್ಚಾ ಕರ್ತೆತೆ. ಏಕ್ ಕಿಸಾನ್ ಕಾ ಹತ್ಯಾ ಕಾ ಬಾರೆಮೇ ಅಭಿ ತಕ್ ಕ್ಯೊ ಚರ್ಚಾ ನಹೀ ಕಿಯಾ? ಏ ಬಿ ಹತ್ಯಾ ಯಾ ನಾ? ಏ ಬಿ ಸಬ್ ಕಾ responsibility ಹೈ. ಸ್ವಾಭೀಮಾನ ಮತ್ತು ಸ್ವಾವಲಂಬಿಗಳಾಗಿದ್ದೇವೆ. 270 ಲಕ್ಷ ಟನ್ ಆಹಾರವನ್ನು ಉತ್ಪಾದನೆ ಮಾಡಿದ್ದೇವೆ. ಈ ದೇಶದ ಆತ್ಮಗೌರವವನ್ನು ಕಾಪಾಡಿದ್ದೀರಿ ಎಂದು ಮೋದಿಯವರು ರೈತರಿಗೆ ಒಳ್ಳೆಯ ಎರಡು ಮಾತುಗಳನ್ನು ಆಡಿದ್ದಾರೆ. ಆದರೆ ರಕ್ಷಣೆ ಮಾಡುವುದಕ್ಕೆ ಏಕೆ ಮಾಡಲಿಲ್ಲ? ಇದು ಬಿಜೆಪಿ, ಕಾಂಗ್ರೆಸ್, ದಳ ಪಕ್ಷಗಳ ಪ್ರಶ್ನೆ ಅಲ್ಲ. ಮಾಡಲಿಕ್ಕೆ ಏಕೆ ಆಗಲಿಲ್ಲ? 68 ವರ್ಷವಾದರೂ ಏಕೆ ಒಂದು ಕೆ.ಜಿ. ಬೀನ್ಸ್ ಬೆಲೆಯನ್ನು ನಿಗದಿ ಮಾಡುವುದಕ್ಕೆ ಏಕೆ ಆಗಲಿಲ್ಲ? ನಾನು 100 ರೂ. fix ಮಾಡಿ ಎಂದು ಹೇಳಲಿಲ್ಲ. ಕೊನೆಯ ಪಕ್ಷ minimum 20 ರೂ.ಗಿಂತ ಕಡಿಮೆ ಆಗದ ಹಾಗೆ ಒಂದು ಕೆ.ಜಿ. ತರಕಾರಿಗೆ ಬೆಲೆ ನಿಗದಿ ಮಾಡುವುದನ್ನು ನೋಡಿಕೊಳ್ಳುವುದಕ್ಕೆ ಏಕೆ ಆಗಲಿಲ್ಲ? ಈಗ Agriculture planning ಎಲ್ಲಿದೆ? Cropping pattern ಎಲ್ಲಿದೆ? ಒಂದು ಎಕರೆ ಭೂಮಿಯಲ್ಲಿ ಯಾವ ತರಹ ವ್ಯವಸಾಯ ಮಾಡಬೇಕು, ಬಹು ಬೆಳೆ ಪದ್ಧತಿ, ಕೃಷಿ ಅಭಿಯಾನ ಆರಂಭವಾಗಿದೆ. ಮೊನ್ನೆ ಉದ್ಘಾಟನೆಯನ್ನು ನಾವೆಲ್ಲ ಹೋಗಿ ಮಾಡಿ ಬಂದೆವು. ಹೌದು, ಎಲ್ಲವನ್ನು ಕೃಷಿ ಅಭಿಯಾನವನ್ನು ಮಾಡುತ್ತಿದ್ದೇವೆ. ಆದರೆ, ಬೆಲೆ ನಿಗದಿ ಮಾಡುವ market ಯಾರ ಕೈಯಲ್ಲಿದೆ? ನಿಮ್ಮನ್ನು (ರಾಜ್ಯಸರ್ಕಾರ) ಕೇಳಿದರೆ ಕೇಂದ್ರ ಸರ್ಕಾರದ ಮೇಲೆ ಹೇಳುತ್ತೀರಿ. ಸಾಲ ಮನ್ನಾ ಮಾಡುವುದು ಅದು ರಾಜ್ಯಕ್ಕೆ ಸೇರಿದ್ದು ಎಂದು ಕೇಂದ್ರ ಸರ್ಕಾರ ಹೇಳುತ್ತದೆ. ಮತ್ತೆ ಯಾವ ತರಹ ರೈತರಿಗೆ ಸಹಾಯ ಮಾಡುವುದು? Central Agriculture Price

Commission ಎಂದು ಮಾಡಿದ್ದೇವೆ. ಬೆಲೆ ನಿಗದಿ ಮಾಡತಕ್ಕಂಥ ಯಾವುದಾದರೂ ಮಾನದಂಡ ಇದೆಯೇ? ಯಾವುದೇ ಮಾನದಂಡ ಇಲ್ಲದೆ ರೈತರನ್ನು ಹೇಗೆ ರಕ್ಷಣೆ ಮಾಡುತ್ತೀರಿ? ಭಿಕ್ಷೆ ಬೇಡುತ್ತಿದ್ದಂಥ ದೇಶಕ್ಕೆ ಅನ್ನವನ್ನು ಕೊಟ್ಟಂಥ ರೈತರಿಗೆ ಏಕೆ ರಕ್ಷಣೆ ಮಾಡುವುದಕ್ಕಾಗುತ್ತಿಲ್ಲ? ಸನ್ಮಾನ್ಯ ಮುಖ್ಯಮಂತ್ರಿಗಳು 'ನಾನು ಗದ್ದೆ ಊಳುತ್ತಿದ್ದೆ, ನಾನು ದನ ಮೇಯಿಸುತ್ತಿದ್ದೆ' ಎಂದು ಹೇಳುತ್ತಾರೆ. ಸರಿ, ಅಲ್ಲಿಂದ ಬಂದಿದ್ದೀರಿ. ಬರಗಾಲದಲ್ಲಿ ರೈತರ ಸಮಗ್ರ ರಕ್ಷಣೆ ಮಾಡುವುದಕ್ಕೆ 25 ಸಾವಿರ ಕೋಟಿ ರೂಪಾಯಿಗಳನ್ನು ವಿಶೇಷ ತೆರಿಗೆ ಮೂಲಕ ಏಕೆ ವಸೂಲಿ ಮಾಡಬಾರದು? ಏಕೆ ಬರೀ ಭತ್ತ ಬೆಳೆಯುವವನೇ ರೈತನೇ? ಆರೂವರೆ ಕೋಟಿ ಜನರು ಊಟ ಮಾಡುತ್ತೀರಲ್ಲ, ನಿಮಗೆ ಊಟ computer ನಿಂದ ಬೀಳುತ್ತದೆಯೇ? ಯಾರ್ಯಾರು ಊಟ ಮಾಡುತ್ತೀರಿ, ಆ ಊಟ ಮಾಡುವವರ ಬಾಯಿಗೂ ಕೂಡ ಜವಾಬ್ದಾರಿ ಇರಬೇಕು. ರೈತರ ಸಾವಿಗೆ ಇಡೀ ರಾಜ್ಯ ದು:ಖ ಪಡಬೇಕಾಗುತ್ತದೆ. ಒಂದು ಸಾರಿ ದೇಶದ ಆಹಾರ ಭದ್ರತೆ ಕುಸಿದರೆ ಸರ್ವನಾಶವಾಗುತ್ತೀರಿ. ಸನ್ಮಾನ್ಯ ಕೃಷಿ ಮಂತ್ರಿಗಳೇ, ಒಂದನ್ನಾದರೂ ತಮ್ಮ ನೇತೃತ್ವದಲ್ಲಿ agricultural loss, agriculture investment ಈ ಎರಡೂ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಪುಸ್ತಕ ಬರೆಸುತ್ತೀರಾ? ದಯವಿಟ್ಟು ಬರೆಸಬೇಕು. ಈ ವಿಜ್ಞಾನಿಗಳು ಬರೆಯುವುದಲ್ಲ. ಬಸವಣ್ಣನ university ಯ ವಿಜ್ಞಾನಿಗಳು ಶಿಕ್ಷಣದ ಮೂಲಕ ಬಂದಿರತಕ್ಕಂಥ ಆರ್ಥಿಕ ತಜ್ಞರು, ಸೇರಿ ಏನಾದರೊಂದು ಪುಸ್ತಕ ಬರೆದರೆ ಆಗ ಅದಕ್ಕೆ ಏನಾದರೊಂದು ಮಾನದಂಡವಾದರೂ ನಿಗದಿ ಮಾಡತಕ್ಕಂಥ ಪರಿಸ್ಥಿತಿ ಸೃಷ್ಟಿಯಾಗುತ್ತದೆ.

(ಈ ಹಂತದಲ್ಲಿ ಪ್ಯಾನೆಲ್ ಸದಸ್ಯರಾದ ಶ್ರೀ ಕಿಮ್ಮನೆ ರತ್ನಾಕರ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಇಲ್ಲದಿದ್ದರೆ, ಏನಾಗುತ್ತದೆಂದರೆ, ಕೃಷಿ ಬರೀ ಊಟ ಮಾಡುವುದಕ್ಕೋಸ್ಕರ ಎಂದು ತಾವು ಹೇಳುತ್ತಿರುವುದು?

(ಮುಂದು)

ವಿಸ:19-06-2017 12-50 (15) ಎಂಕೆಕೆ:ಸಿಪಿ

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ(ಮುಂದು)

ಪ್ರತ್ಯಕ್ಷ, ಪರೋಕ್ಷವಾಗಿ ಕೃಷಿಯಿಂದ ಬೊಕ್ಕಸಕ್ಕೆ ಯಾವ್ಯಾವ ತರಹ ತೆರಿಗೆ ಬರುತ್ತದೆಂದು ನಾವು ಎಲ್ಲಿ ಬರದಿದ್ದೇವೆ? Service Tax (ಸೇವಾ ತೆರಿಗೆ) ಎಂದರೆ ಯಾವುದು ಅದು? ಬೇರೆ ಕ್ಷೇತ್ರದಿಂದ Service Tax 87% ಬರುತ್ತದೆ. ರೈತರು ಯಾವುದೆಲ್ಲ Service Tax ಕೊಡುವುದು? ಹೋಟೆಲ್ ಉದ್ಯಮ ಯಾರಿಂದಾಗುತ್ತದೆ? ಇಡೀ ಕರ್ನಾಟಕದ ಹೋಟೆಲ್ ಉದ್ಯಮ, biggest industry, ಇಡೀ ಭಾರತದ ಹೋಟೆಲ್ ನಡೆಯುವುದು ಯಾವುದರ ಮೇಲೆ? Coffee, Tea stall ಗಳು ನಡೆಯುವುದು ಯಾವುದರ ಮೇಲೆ? ಬೇಕರಿ ಉದ್ಯಮ ನಡೆಯುವುದು ಯಾವುದರ ಮೇಲೆ? ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು, ಕೇವಲ ಬಿಯರ್, ಬ್ರಾಂದಿ ಮಾರುವುದರಲ್ಲಿ 5 ವರ್ಷಗಳಿಗೆ 90 ಸಾವಿರ ಕೋಟಿ ಹಣ ಬರುತ್ತದೆಂದು ಹೇಳುತ್ತಾರೆ. ಆ ಹಣ ಯಾರದು? ಮತ್ತೆ ಯಾರಿಗಾಗಿ ಹಣ? ಇಡೀ ಬಟ್ಟೆ ಉದ್ಯಮ ಯಾವುದರ ಮೇಲೆ ನಿಂತಿದೆ? Garments ಉದ್ಯಮ ಯಾವುದರ ಮೇಲೆ ನಿಂತಿದೆ? ಇಡೀ ಜ್ಯೂಸ್ ಅಂಗಡಿಗಳು ಯಾವುದರ ಮೇಲೆ ನಿಂತಿವೆ? ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ, ಈ ದೇಶದಲ್ಲೇಕೆ ರೈತರನ್ನು ರಕ್ಷಣೆ ಮಾಡುವುದಕ್ಕಾಗುತ್ತಿಲ್ಲ. 29 ರಾಜ್ಯಗಳ ಮುಖ್ಯಮಂತ್ರಿಗಳೇಕೆ ಒಂದು ಆಲೋಚನೆ ಮಾಡಿ, ರೈತರ ರಕ್ಷಣೆ ಮಾಡುವುದಕ್ಕೆ ಆಗುತ್ತಿಲ್ಲ? ರೈತರು ಹಳ್ಳಿಯಿಂದ ನಗರಕ್ಕೆ ಗುಳೆ ಹೋಗುತ್ತಿದ್ದಾರೆ. ಈಗ ಕೃಷಿ ಬಗ್ಗೆ ಯಾರಿಗೂ ಇಷ್ಟವಿಲ್ಲ. ವೃದ್ಧಾಶ್ರಮಗಳಾಗುತ್ತಿವೆ. ಹಳ್ಳಿಯಲ್ಲಿ ವಯಸ್ಸಾದವರು ಮಾತ್ರ ಉಳಿದುಕೊಳ್ಳತಕ್ಕಂಥ ಪರಿಸ್ಥಿತಿ ಇದೆ. ಈಗ ನಾನು ಹೋಟೆಲ್‌ಗೆ ಹೋಗಿದ್ದೆ. ಅಲ್ಲಿ 6 ಜನ ಹುಡುಗರು ಸಿಕ್ಕಿದ್ದರು. 3, 4, 5 ಎಕರೆ ಹೊಲ ಇರುವವರೆಲ್ಲ ತಟ್ಟೆ, ಲೋಟ ತೊಳೆಯುತ್ತಿದ್ದಾರೆ, ದೋಸೆ ಕೊಡುತ್ತಿದ್ದಾರೆ, supply ಮಾಡುತ್ತಿದ್ದಾರೆ. ಅಮೆರಿಕಾದಲ್ಲಿ ಆ ತರಹ ಹೋಟೆಲ್‌ನಲ್ಲಿ supply ಮಾಡುವವರು, 5 ಜನರಿಗೆ supply ಮಾಡಿದರೆ 10 dollar ಕೊಡುತ್ತಾರೆ. ಅಂದರೆ, 700 ರೂಪಾಯಿ ಆಯಿತು. ಇಲ್ಲಿ tips ಎಂದರೆ, 50 ಪೈಸೆ, ನಾಲ್ಕಾಣೆ, ಒಂದು ರೂಪಾಯಿ, ಒಂದೂ ಕಾಲು ರೂಪಾಯಿ ಕೊಡುತ್ತಾರೆ. ಇಲ್ಲಿ supplier ಗೂ ಒಂದು ನೀತಿ ಇಲ್ಲ. ಇವರು ಅಸಂಘಟಿತ ಕಾರ್ಮಿಕರು. ಇವರು ರೈತರ ಮಕ್ಕಳು. 3-3 ಎಕರೆ ಇರುವವರೆಲ್ಲರೂ ಎಂಜಲು ಲೋಟ

ತೊಳೆಯುತ್ತಿದ್ದಾರೆ. ಹಾಗಾದರೆ, ಯಾರು ರಕ್ಷಣೆ ಮಾಡಬೇಕು? ಬೀಡಿ ಅಂಗಡಿ, ತಂಬಾಕಿನಿಂದ ಎಷ್ಟು ಉದ್ಯೋಗ ಸಿಗುತ್ತಿದೆ? ಬೀಡಾ ಅಂಗಡಿ, 500 ರಿಂದ 1 ಸಾವಿರ ಬೀಡ ಎಲ್ಲಿಂದ ಬರುತ್ತದೆ? ವೀಳ್ಯೆದೆಲೆ computer ನಿಂದ ಬರುತ್ತದೆಯೇ? Computer ನಿಂದ ಅಡಿಕೆ ಉದುರುತ್ತದೆಯೇ? ಎಷ್ಟು ಬೀಡಾ ಅಂಗಡಿಗಳಿವೆ? ಉದಾಹರಣೆಗೆ, ಮಾಂಸದ ಉದ್ಯಮವಿದೆ. ಕೋಳಿ ಮತ್ತು ಹಾಲು ಉತ್ಪಾದನೆಗೆ, ಇವತ್ತು ನಾವು ಮಾಂಸ ತಿನ್ನುತ್ತಿದ್ದೇವಲ್ಲ, ಆ ಉತ್ಪಾದನೆ ಯಾವುದರಿಂದಾಗುತ್ತದೆ? 25 ಲಕ್ಷ ಎಕರೆಯಲ್ಲಿ ಗೊಂಜೋಳ ಬೆಳೆಯುತ್ತಾರೆ. ಆ ಗೊಂಜೋಳಕ್ಕೆ rate fix ಮಾಡುವುದಕ್ಕಾಗುತ್ತಿಲ್ಲ. ಖುಷ್ಕಿ ಪ್ರದೇಶದ ಸಮಗ್ರ ರೈತರ ಉತ್ಪಾದನೆಯ ಸಂಪೂರ್ಣ ಚಿಂತನೆ ಮಾಡಿರತಕ್ಕಂಥ ಕೃಷಿ ಇಲಾಖೆಗಳು, ಕೃಷಿ ವಿಜ್ಞಾನಿಗಳು ಯಾವ ತರಹದ ಕೆಲಸ ಮಾಡಿದ್ದಾರೆ? ಇಡೀ 70% ಈ ರಾಜ್ಯದ ಬೊಕ್ಕಸಕ್ಕೆ ಹಣ ಕೊಡುವುದಾಗಲಿ, ಈ ರಾಜ್ಯದ ಅಭಿವೃದ್ಧಿಯಲ್ಲಿ ಮಳೆಯಾಧಾರಿತ ಪ್ರದೇಶದ ರೈತರು ಸಂಪೂರ್ಣ ಕಾರಣ. ಮಾಂಸ ಉತ್ಪಾದನೆ, ಮಾಂಸದಿಂದ ಎಷ್ಟು ಹೋಟೆಲ್‌ಗಳು ನಡೆಯುತ್ತವೆ ಗೊತ್ತೇ? ಕೋಳಿ, ಕುರಿ, ಹಂದಿ ಮಾಂಸ, ಎಲ್ಲಾ ಮಾಂಸಗಳಿಂದ ಯಾವ ತರಹ ಹೋಟೆಲ್‌ಗಳು ನಡೆಯುತ್ತವೆ? ಇದಕ್ಕೆ raw materials ಕೊಡುವವರು ಯಾರು? ಗೊಂಜೋಳದ ಬೆಲೆ ನೀತಿ ಎಲ್ಲಿದೆ? 100 by products ಇವೆ. ಕಬ್ಬಿನಲ್ಲಿ 47 by products ಇವೆ. ನಮಗೆ ಯಾರಿಗೂ ಗೊತ್ತಿಲ್ಲ. ಕಬ್ಬು ಒಂದರಲ್ಲೇ 47 by products ಇವೆ. ಇಷ್ಟು ದೊಡ್ಡ ಉದ್ಯಮವಿದೆ. ಹತ್ತಿ, ಕಬ್ಬು ಎರಡರಿಂದಲೇ ಸುಮಾರು 45 ಕೋಟಿ ಉದ್ಯೋಗವನ್ನು ಈ ದೇಶದಲ್ಲಿ ಸೃಷ್ಟಿ ಮಾಡತಕ್ಕಂಥ ರೈತರಿಗೆ, ಕಬ್ಬಿಗಾಗಲಿ, ಜೋಳಕ್ಕಾಗಲಿ ಬೆಲೆ ನೀತಿ . . . . Parliament ನಲ್ಲಿ ಕುಳಿತು MSP, SMP, FRP ಎಂದು ಒಂದು ತರಹ ಶೋಕಿಯಿಂದ ಭಾಷಣ ಮಾಡಿದ ಹಾಗೆ. University ಗಳ ವರದಿ ಇವೆ. ಯಾವುದೇ ವರದಿಯನ್ನು ತರಿಸಿಕೊಳ್ಳುವುದಿಲ್ಲ. Cost of cultivation, cost of living ನೋಡಿ. 9ನೇ ವೇತನ ಆಯೋಗಕ್ಕೆ ಒತ್ತಾಯ ಮಾಡುತ್ತಾರೆ. 7, 8ನೇ ವೇತನ ಆಯೋಗ ಎನ್ನುತ್ತಾರೆ. ಆದರೆ, ಕೃಷಿಗೆ ಏಕೆ ವೇತನ ಆಯೋಗ ಮಾಡುವುದಕ್ಕಾಗಲಿಲ್ಲ? ಕೃಷಿಯನ್ನು ಒಂದು ಉದ್ಯಮ ಎಂದು

ಏಕೆ ಘೋಷಣೆ ಮಾಡಲಿಲ್ಲ? ಶ್ರಮವನ್ನೇಕೆ ಜ್ಞಾನವೆಂದು ಘೋಷಣೆ ಮಾಡಲಿಲ್ಲ? ನಾನು ಮೊನ್ನೆ ಅಮೆರಿಕಾಗೆ ಹೋಗಿದ್ದೆ. ಅಲ್ಲಿ ಡಾಂಬರು ಹಾಕುವವನಿಗೆ 120 ಡಾಲರ್ ಸಂಬಳವಿದೆ. Engineer, ಬರೆಯುತ್ತಾನಲ್ಲ ಅವನಿಗೆ 80 ಡಾಲರ್ ಸಂಬಳವಿದೆ. ಅಲ್ಲೊಂದು board ಹಾಕಿದ್ದರು. ಡಾಂಬರು ಕೆಲಸ ಮಾಡುವವನಿಗೇನಾದರೂ ಒಂದು ಸಣ್ಣ ಗಾಯವಾದರೆ, 15 ಸಾವಿರ ಡಾಲರ್ ದಂಡ ಕೊಡಬೇಕು. ನೋಡಿ, ಶ್ರಮ ಮಾಡುವವನಿಗೆ, ಬದುಕು ಎಷ್ಟು ದೊಡ್ಡದಿದೆ. ಶ್ರಮ ಮಾಡುವವನು ಸಾಯುತ್ತಾನೆಂದರೆ, ಯಾರಿಗೂ ಕಣ್ಣೀರೂ ಇಲ್ಲ, ಭಯವೂ ಇಲ್ಲ. ಅವನು ಹುಟ್ಟಿರುವುದೇ ಸಾಯುವುದಕ್ಕೆ ಎಂಬ ತೀರ್ಮಾನಕ್ಕೆ ಬಂದಿದ್ದಾನೆ. ನಾವೂ ರೈತರ ಮಕ್ಕಳೇ. ಇಲ್ಲಿರುವ 175 ಜನ MLA ಗಳು ರೈತರ ಮಕ್ಕಳೇ. ಎಲ್ಲರೂ ರೈತರ ಪರವಾಗಿ ಮಾತನಾಡುತ್ತಿದ್ದೇವೆ. ಏನಾಯಿತು? ಏನೂ ಮಾಡುವುದಕ್ಕಾಗದೇ, ಕೈ ಎತ್ತಿ ಕುಳಿತುಕೊಳ್ಳುವುದಾಗಿದೆ. ಇನ್ನು, ಹೆಣ್ಣುಮಕ್ಕಳಿಗೆ ಎಷ್ಟು ಉದ್ಯೋಗ ಸಿಕ್ಕಿದೆ ನೋಡಿ. Garments ಉದ್ಯಮದಲ್ಲಿ ಸುಮಾರು 25 ರಿಂದ 30 ಲಕ್ಷ ಹೆಣ್ಣುಮಕ್ಕಳಿಗೆ ಉದ್ಯೋಗ ಸಿಕ್ಕಿದೆ. ಅದು ಯಾರಿಂದ? ಹತ್ತಿ ಬೆಳೆಯತಕ್ಕಂಥ ರೈತರಿಂದ ಉದ್ಯಮ ಸೃಷ್ಟಿಯಾಗಿದೆ. ದಯವಿಟ್ಟು, ಸರ್ಕಾರಗಳು ಸಾಲ ಮನ್ನಾ ಎನ್ನುತ್ತವೆ. ಕೋನರೆಡ್ಡಿಯವರು ಸಾಲ ಮನ್ನಾ ಎಂದು ಹೇಳಿದರು. ಸಾಲ ಕಟ್ಟುವುದಿಲ್ಲವಲ್ಲ, ಮನ್ನಾ ಆಗಿಯೇ ಆಗುತ್ತದೆ, ಅದು ಬೇರೆ ಪ್ರಶ್ನೆ. ಸಾಲ ಕಟ್ಟಲಿಲ್ಲವೆಂದರೆ, automatic ಆಗಿ ಮನ್ನಾ ಆಗುತ್ತದೆ. ಜೈಲಿನಲ್ಲಿಟ್ಟರೂ ಅವರೂ ಊಟ ಕೊಡಬೇಕಲ್ಲವೇ? ನಿಮಗೆ ಗೊತ್ತೇ?

ಶ್ರೀ ಎನ್.ಹೆಚ್. ಕೋನರೆಡ್ಡಿ: Bank notice ಗೆ ಹೆದರಿ ಸತ್ತಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ನಮ್ಮನ್ನೇನಾದರೂ ಜೈಲಿಗೆ ಹಾಕಿದರೆ ದಿವಸಕ್ಕೆ 120 ರೂಪಾಯಿಗಳ ಭತ್ಯೆಯನ್ನು ಬ್ಯಾಂಕ್‌ನವರೇ ಕಟ್ಟಿಕೊಡಬೇಕು. ಪ್ರತಿ ದಿವಸ ಊಟ ಮಾಡುವುದು, ಮಲಗುವುದು. ಕೋರ್ಟ್‌ನಲ್ಲಿ ಕರೆದು, ಏನಪ್ಪ, ಊಟ ಮಾಡುತ್ತಲೇ ಇದ್ದೀಯ, ಮಲಗುತ್ತಲೇ ಇದ್ದೀಯ, ಸಾಲ ಕಟ್ಟುತ್ತೀಯ ಎಂದು ಕೇಳಿದರೆ, ಆಗುವುದಿಲ್ಲವೆನ್ನುತ್ತಾನೆ. ಇವನು ಊಟ ಮಾಡುತ್ತಲೇ ಇದ್ದರೆ ನಾನು ಎಲ್ಲಿಂದ ಹಣ ಕಟ್ಟಲಿ? ಅದೂ ಹೋಯಿತು, ಇದೂ ಹೋಯಿತು

19-06-2017

ಸಾರ್, ವಾಪಸ್ ಕಳುಹಿಸಿಬಿಡಿ ಎನ್ನುತ್ತಾನೆ. ಯಾವಾಗ ವಾಪಸ್ ಕಳುಹಿಸುತ್ತೇವೆ ಎನ್ನುತ್ತಾರೆ, automatic ಆಗಿ ಸಾಲ ಮನ್ನಾ ಆಗುತ್ತದೆ. ಈಗಾಗಲೇ ಎಲ್ಲ ತಿಳಿದುಕೊಂಡಿದ್ದೇವೆ, ನಾವು ಜೈಲಿಗೆ ಹೋಗಲು ರೆಡಿಯಾಗುತ್ತಿದ್ದೇವೆ. ಮಾನ್ಯ ಕೃಷಿ ಮಂತ್ರಿಯವರೆ, ಮೊನ್ನೆ Bankers meeting ಆಯಿತು. ಕಮರಡಿ ಪ್ರಕಾಶ್ ಮತ್ತು ನಾವೆಲ್ಲ ಇದ್ದೆವು. ತಾವು ಬರುವುದಕ್ಕಾಗಲಿಲ್ಲವೆನಿಸುತ್ತದೆ. ಎಲ್ಲ ಮೀಟಿಂಗ್ ಮಾಡಿದ್ದೇವೆ. ಹೊಸ ಸಾಲ ಕೊಡುತ್ತಿದ್ದಾರೆ. ಈಗ ಮಂಡ್ಯದಲ್ಲಿ meeting ಮಾಡಿದ್ದೇವೆ. 2400 ಕೋಟಿ ರೂಪಾಯಿಗಳ ಹೊಸ ಸಾಲ ಕೊಡುತ್ತಾರೆ. ಹಾಗಿದ್ದರೂ re-phase ಮಾಡಬೇಡಿ, ಕೇಂದ್ರಸರ್ಕಾರದ ಸಾಲಮನ್ನಾ ಆದರೆ, ಸುಸ್ತಿ ಇದ್ದರೆ ಮಾತ್ರ ಮನ್ನಾ ಆಗುವುದು, ಎಲ್ಲಿಂದಲಾದರೂ ತಂದು ಕಟ್ಟಿದರೆ ಮನ್ನಾ ಆಗುವುದಿಲ್ಲವೆಂದು ಹೇಳಿದ್ದೇವೆ. ಅದ್ಕಕ್ಕೊಂದು letter ಅನ್ನೂ ಕೊಟ್ಟಿದ್ದೇವೆ. ದಯವಿಟ್ಟು, ತಾವು ಕರೆದು ಮಾತನಾಡಿ. ಸ್ವಲ್ಪ ಹೊಸ ಸಾಲ ಕೊಡಿಸುವುದರಲ್ಲಿ ಕರ್ನಾಟಕದ ರೈತರ ರಕ್ಷಣೆ ಮಾಡಿ. ಈಗ ಮಂಡ್ಯದಲ್ಲಿ 2400 ಕೋಟಿ ರೂಪಾಯಿ ಹೊಸ ಸಾಲ ಕೊಡುತ್ತಾರೆ. ಇಲ್ಲಿರುವ ಎಲ್ಲ ಶಾಸಕರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಕಾನೂನು ಇದೆ, ಬರಗಾಲ ಬಂದರೆ, ರಾಷ್ಟ್ರೀಕೃತ ಬ್ಯಾಂಕ್‌ಗಳು ಸಂಪೂರ್ಣ ಸಾಲ ಇರತಕ್ಕಂಥದ್ದನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಿ, ಹೊಸ ಸಾಲವನ್ನು ಕೊಟ್ಟು, ಕೃಷಿಗೆ ಬೇಕಾದಂಥ ಎಲ್ಲ ಮೂಲಭೂತಸೌಕರ್ಯಗಳಿಗೆ ಸಾಲವನ್ನು ಕೊಟ್ಟು, ಅವನ ಜೀವನ ನಡೆಸಲು ಜಾನುವಾರುಗಳನ್ನು ರಕ್ಷಣೆ ಮಾಡಲು ಯಾವುದೇ ತೊಂದರೆ ಇಲ್ಲದೆ ಹೊಸ ಹೊಸ ಸಾಲವನ್ನು ಕೊಟ್ಟು, ಆ ರೈತರನ್ನು ರಕ್ಷಣೆ ಮಾಡಬೇಕು. ಉದಾಹರಣೆಗೆ, ಒಂದು ಎಕರೆ ಕಬ್ಬಿಗೆ ಸಾಲ ಕೊಡುತ್ತಾರೆ. ಆ ಸಾಲದಲ್ಲಿ ನಾನು ಕಬ್ಬು ನೆಡುತ್ತೇನೆ. ಕಬ್ಬು ನೆಟ್ಟ ನಂತರ ಆ ಬೆಳೆ ಬರಬೇಕಾದರೆ ಒಂದೂ ಕಾಲು ವರ್ಷ ಬೇಕು. ಅಲ್ಲಿಯವರೆಗೆ ನಮ್ಮ ಹೆಂಡತಿ ಮಕ್ಕಳ ಗತಿ ಏನು? ಅದಕ್ಕೆ 40 ಸಾವಿರ ರೂಪಾಯಿ ಕೊಡಬೇಕು. ಬ್ಯಾಂಕ್‌ನವರು ಎಲ್ಲ ಕಡೆ board ಹಾಕಬೇಕು, ಮಾಡಬೇಕು. ನಮ್ಮ ಹಣಕಾಸು ಮಂತ್ರಿಯವರು ಮತ್ತು ಕಾನೂನು ಮಂತ್ರಿಯವರು ದಯವಿಟ್ಟು ಗಮನಿಸಬೇಕು. ರೈತರಿಗೆ ಸಾಲವನ್ನು ಕೊಡಿಸಿ. ಸುಮ್ಮನೆ ಏಕೆ ಕುಳಿತಿರುತ್ತೀರಿ? Apex Bank,

ತಿದ್ದುಪಡಿಯಾಗದ /Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

NABARD ನವರನ್ನೆಲ್ಲ ಕರೆದು ಮಾತನಾಡಿಸಿ. ಸರ್ಕಾರದವರು ಮಾತನಾಡಿದರೆ ಅದಕ್ಕೊಂದು weight ಜಾಸ್ತಿ. ಹೊಸ ಸಾಲ ಕೊಡುತ್ತಿದ್ದಾರೆ, ಎಲ್ಲರಿಗೂ ಹೊಸ ಸಾಲ ಕೊಡಿಸಿ. Ready ಇದ್ದಾರೆ. ಸಾಲ ಕೊಡದಿದ್ದರೆ ಆಹಾರ ಭದ್ರತೆ ಮುಗಿಯುತ್ತದೆ. ನೀವು ಸಾಲವನ್ನು ನಮಗೆ ನಾವು ಬದುಕಲಿ ಎಂದು ಕೊಡುತ್ತಿಲ್ಲ. ನಮ್ಮನ್ನು ಬದುಕಲಿ ಎಂದು ಯಾವತ್ತು ಸಾಲ ಕೊಟ್ಟಿದ್ದೀರಿ? ಹಾಲು ಕುಡಿಯುವವರೆಲ್ಲ ಸೇರಿ ಎಮ್ಮೆಯನ್ನು ಊರಿಗೆ ಕಳುಹಿಸಿದ್ದೀರಿ. ಎಮ್ಮೆ ಸಾಲ, ಆಧಾರಿಯ ಬರುವುದರಿಂದ ನಾವೆಲ್ಲ ಏಕೆ ತೆಗೆದುಕೊಳ್ಳಬಾರದಾಗಿತ್ತು? ಆದಾಯವೆಲ್ಲ ಗೊತ್ತು. ನಾವ್ಯಾರೂ ತೊಪ್ಪೆ(ಸಗಣಿ) ಮುಟ್ಟುವುದಿಲ್ಲ. 5 ಜೊತೆ ಎತ್ತು, 12 ಎಮ್ಮೆ, 4 ಹಸುಗಳಿದ್ದವು. ಈಗ ಒಂದೂ ಇಲ್ಲ. ಈಗ ನಾನೊಬ್ಬನೇ ಉಳಿದುಕೊಂಡಿರುವವನು. ಈಗ ತೊಪ್ಪೆ ಮುಟ್ಟುವವರು ಯಾರು? ಯಾರು ಮುಟ್ಟುತ್ತಾರೆ? ನನ್ನ ಹೆಂಡತಿ ತೊಪ್ಪೆಯನ್ನು ಮುಟ್ಟುತ್ತಾಳೆಯೇ? ತೊಪ್ಪೆ ಮುಟ್ಟು ಎಂದ ಕೂಡಲೇ divorce ಗೆ ಅರ್ಜಿ ಹಾಕುತ್ತಾಳೆ. ತೊಪ್ಪೆ ಮುಟ್ಟುವವರು ಯಾರೂ ಇಲ್ಲ. ಯಾವ ಸಾಹೇಬರ ಹೆಂಡತಿಯೂ ತೊಪ್ಪೆ ಮುಟ್ಟುವವರು ಇಲ್ಲ. ನಮ್ಮ ಕಡೆ ತೊಪ್ಪೆ ಎನ್ನುತ್ತಾರೆ, ನಿಮ್ಮ ಕಡೆ ಸಗಣಿ ಎನ್ನುತ್ತಾರೆ. ಆ ಸಗಣಿ ಮುಟ್ಟುವವರು ಯಾರಿದ್ದಾರೆ? ಯಾವ ಸಾಹೇಬರೂ ಸಗಣಿ ಮುಟ್ಟುವುದಿಲ್ಲ. ನನ್ನ ಹೆಂಡತಿಯೇ ಸಗಣಿ ಮುಟ್ಟುವುದಿಲ್ಲ. ನಮ್ಮ ಅವ್ವ ಸ್ವಲ್ಪ ಸಗಣಿ ಮುಟ್ಟುತ್ತಿದ್ದಳು. ನಂತರ, ನಾನು ಸಗಣಿ ಮುಟ್ಟುತ್ತಿದ್ದೆ. ನನ್ನ ಸೊಸೆ ಅಮೆರಿಕಾದಲ್ಲಿದ್ದಾಳೆ. ಅವಳಿಗೆ ನೋಡಿಕೋ ಇದು ತೊಪ್ಪೆ ಎಂದು parcel ಮಾಡಿ ಕಳುಹಿಸಬೇಕು.

(ಮುಂದು)

ವಿಸ-19-06-2017-(16)-1-00-ಎಸ್ಸೆಂಕೆ-ಸಿಪಿ

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಮುಂದು.,

ಯಾರು ಮುಟ್ಟುತ್ತಾರೆ? ಅಲ್ಲಿ 400ml. ಹಾಲು ಹಿಡಿದುಕೊಂಡಿರುತ್ತಾರೆ, ಅರ್ಧ ಲೀಟರ್ ಹಾಲು ಬಿಡುತ್ತಾರೆ. ಅದಕ್ಕೆ ನಾವು ಒಂದೂವರೆ ರೂಪಾಯಿ ಜಾಸ್ತಿ ಕೊಟ್ಟಿದ್ದೇವೆ, ಎರಡು ರೂಪಾಯಿ ಜಾಸ್ತಿ ಕೊಟ್ಟಿದ್ದೇವೆ, ಈ ಸರ್ಕಾರ ಬಂದರೆ ಐದು ರೂಪಾಯಿ ಕೊಡುತ್ತದೆ ಎಂದು ಮಾತನಾಡುತ್ತೇವೆ.

ವೈಜ್ಞಾನಿಕವಾದ ಬೆಲೆ ನಿಗದಿ ಮಾಡಿ. ಹಾಲು ಕುಡಿಯುವುದು ಏಕೆ? ಒಂದು ಕ್ವಾರ್ಟರ್ ವಿಸ್ಕಿಗೆ ಎಂಬತ್ತು ರೂಪಾಯಿ ಮಾಡಿದಿರಿ. ಅದನ್ನು ಕುಡಿದರೆ ಏನಾಗುತ್ತದೆ, ಕಿಕ್ ಬರಬಹುದು, ಇದನ್ನು ಕುಡಿದರೆ? ಎಷ್ಟು? 180ml. ಗೆ 80 ರೂಪಾಯಿಯೇ?

(ಗೊಂದಲ)

ಶ್ರೀ ಪಿ.ಟಿ.ಪರಮೇಶ್ವರ ನಾಯಕ್: ಖಂಡಿತವಾಗಿಯೂ ನನಗೆ ಅದರ ರೇಟ್ ಗೊತ್ತಿಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ನಿಮಗೆ ಗೊತ್ತಿದೆ.

(ಗೊಂದಲ)

ಶ್ರೀ ಪಿ.ಟಿ.ಪರಮೇಶ್ವರ ನಾಯಕ್ : ನೀವೇ 180ml. ಗೆ 80 ರೂಪಾಯಿ fix ಮಾಡುತ್ತೀರಿ ಎಂದು ಹೇಳಿದಿರಿ.

ಶ್ರೀ ಕೆ.ಷಡಕ್ಷರಿ : ಯಾವ brand?

(ಗೊಂದಲ)

ಶ್ರೀ ಪಿ.ಟಿ.ಪರಮೇಶ್ವರ ನಾಯಕ್ : ಖಂಡಿತವಾಗಿಯೂ ನನಗೆ ಗೊತ್ತಿಲ್ಲ. ಅವರು ಹೇಳಿದ್ದನ್ನು ನಾನು ಹೇಳಿದೆ.

ಶ್ರೀ ಕೆ.ಷಡಕ್ಷರಿ : ಕರಾರುವಾಕ್ಕಾಗಿ ಹೇಳಿದಿರಿ, ಗೊತ್ತಿಲ್ಲದೆ ಹೇಗೆ ಹೇಳುತ್ತೀರಿ?

(ಗೊಂದಲ)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಮಾನ್ಯ ಛೇರ್ಮನ್‌ರವರೆ, ಜಗತ್ತಿನ ಯಾವ ಎಣ್ಣೆಯನ್ನಾದರೂ ಕುಡಿಯಿರಿ, ನಾನು ಅಮೇರಿಕ ದೇಶಕ್ಕೆ ಹೋದಾಗ 7-8 ಕಡೆ ಕುಡಿದಿದ್ದೇನೆ. ಒಂದು ಬಾಟಲಿಗೆ 10 ರಿಂದ 15 ಸಾವಿರ ರೂಪಾಯಿ ಬೆಲೆ ಇರುವ ಎಣ್ಣೆ ಕುಡಿದಿದ್ದೇನೆ. ಏನೂ ಕುಡಿದರೂ ತಲೆ ತಿರುಗುವುದು ಬಿಟ್ಟರೆ ಬೇರೆ ಏನೂ ಆಗುವುದಿಲ್ಲ. ಈ ದೇಶದಲ್ಲಿ ಆಮೇರಿಕ ಎಣ್ಣೆ ಕುಡಿಯಿರಿ ನಮ್ಮ ಊರಿನ ಶರಾಬು ಕುಡಿಯಿರಿ, ಎರಡು ಕಿಕ್ ಏರುತ್ತದೆ. ತಲೆ ತಿರುಗುವುದು ಬಿಟ್ಟರೆ ಇನ್ನೇನೂ ಆಗಲಿಕ್ಕಿಲ್ಲ. ಸುಮ್ಮನೆ, ನಾವು ಅಮೇರಿಕ ವಿಸ್ಕಿ ಕುಡಿದಿದ್ದೇನೆಂದು ಹೆಸರಿಗೆ ಹಾಗೆ ಹೇಳಿಕೊಂಡು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕುಡಿಯುತ್ತೇವೆ. ಆಮೇರಿಕ ವಿಸ್ಕಿ ಕುಡಿದರೂ, ಶರಾಬು ಕುಡಿದರೂ ಬೆಳಿಗ್ಗೆ ಉಚ್ಚೆಯಾಗಿ ಹೊರಟು ಹೋಗುತ್ತದೆ. ಸುಮ್ಮನೆ ಹೆಸರಿಗೆ ಹಾಗೆ ಹೇಳುವುದು.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಪುಟ್ಟಣ್ಣಯ್ಯನವರೆ, ಒಂದು ನಿಮಿಷ. ನೀವು ಆಮೇರಿಕಕ್ಕೆ ಹೋದ್ದಾಗ 4-5 ಟೇಸ್ಟ್ ಮಾಡಿದಿರಿ. ಬಹಳ ಜನ ಬಹಳ ಬಹಳ ಟೇಸ್ಟ್ ಮಾಡಿದ್ದಾರೆ, ಅವರ ಅನುಭವಗಳನ್ನು ಕೇಳಬೇಕಲ್ಲವೆ? ಅದಕ್ಕೆ ನನಗೆ ಗೊತ್ತಿಲ್ಲ. First time ಪುಟ್ಟಣ್ಣಯ್ಯನವರು ಬಾಯಿ ಬಿಚ್ಚಿ ಅವರೇ ಹೇಳಿದ್ದಾರೆ. ಬೇರೆಯವರ ಅನುಭವಗಳನ್ನು ಕೇಳಿದರೆ ನಮಗೂ ಸಹ ಇದರ ಮರ್ಮ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಕರ್ನಾಟಕದಲ್ಲಿ ಒಂದು ದಿವಸಕ್ಕೆ ಖಾಸಗಿ ಮತ್ತು ಸರ್ಕಾರಿ dairyಯಲ್ಲಿ 1 ಕೋಟಿ ಲೀಟರ್ ಹಾಲು ತಯಾರಿಸುತ್ತಾರೆ. 1 ಕೋಟಿ ಲೀಟರ್‌ಗೆ ಸುಮಾರು 25 ಕೋಟಿ ಆದರೆ ಒಂದು ತಿಂಗಳಿಗೆ 750 ಕೋಟಿಯಾಗುತ್ತದೆ. ಅಂದರೆ ವರ್ಷಕ್ಕೆ ಸರಿ ಸುಮಾರು ಒಂಬತ್ತು ಸಾವಿರ ದಿಂದ ಒಂಬತ್ತೂವರೆ ಸಾವಿರ ಕೋಟಿ ಆಗುತ್ತದೆ. ಇಡೀ ಕರ್ನಾಟಕದ ದನವನ್ನು ಸಾಕಲಿಕ್ಕೆ ಎಷ್ಟು ಬೇಕು? ದಿವಸಕ್ಕೆ ನೂರು ಕೋಟಿ ಬೇಕು. ಹತ್ತಿ ಬೀಜ, ಕಳ್ಳೆ ಹೊಟ್ಟು, ಹುಲ್ಲು, ನೆಲ್ಲು ಹುಲ್ಲು, ದಿವಸಕ್ಕೆ ಮೂವತ್ತಾರು ಸಾವಿರ ಕೋಟಿ ಬೇಕು. ಮಾನವ ಶಕ್ತಿ ಎಷ್ಟು ಬೇಕು? ಇಂದು ಯಾವ ಸ್ಥಿತಿಯಲ್ಲಿ ಇದ್ದೇವೆ ಎಂದು ನಾನೊಂದು ಸತ್ಯ ಹೇಳುತ್ತೇನೆ, ಹೊಟ್ಟೆ ಉರಿಯುತ್ತದೆ. ನಮ್ಮೂರು ತಾಯಿ ಹರಕಲು ಸೀರೆ ಉಟ್ಟುಕೊಂಡು 400 ml. ಹಾಲಿಗೆ ನಿಂತಿದ್ದಾಳೆ. ಅದಕ್ಕೆ ಬೆಲೆ ನಿಗದಿ ಮಾಡುವುದಕ್ಕೆ ಹಿಂದೆ ಮುಂದೆ ನೋಡುತ್ತೀರಿ. ಕಾನೂನು ಮಂತ್ರಿಗಳೇ, ದಯವಿಟ್ಟು ಇದಕ್ಕೆ ಏನಾದರೊಂದು ತಿದ್ದುಪಡಿ ಮಾಡಿ ನಿಮ್ಮ ಸರ್ಕಾರಕ್ಕೆ ಒಂದು ಒಳ್ಳೆಯ ಹೆಸರು ಬರುತ್ತದೆ. ಎಮ್ಮೆ ಪುಗ್ಸಟ್ಟೆ ಕೊಡಿ, ಎಮ್ಮೆ ಸಾಕುವವರಿಗೆ ವರ್ಷಕ್ಕೆ 50 ಸಾವಿರ ಬೋನಸ್ ಕೊಡಿ. ಎಮ್ಮೆ ಸಾಲ ಎಂದು ಏಕೆ ಹೇಳುತ್ತೀರಿ? Free ಆಗಿ ಎಮ್ಮೆ ಕೊಡಿ. ಅದನ್ನು ಸಾಕುವಂತವರಿಗೆ ವರ್ಷಕ್ಕೆ 50 ಸಾವಿರ ರೂಪಾಯಿಗಳನ್ನು ಬೋನಸ್ ರೂಪದಲ್ಲಿ ಕೊಡಿ. ಕುರಿಗೂ ಕೂಡಿ ಅದಕ್ಕೂ ಕೊಡಿ ಯಾರು

ಬೇಡ ಎನ್ನುತ್ತಾರೆ. ತಾವು ದಯವಿಟ್ಟು ಯೋಚಿಸಿ, ಸಾಲದ ನೀತಿ ಹೀಗೆ ಇರಬೇಕು. ಒಂದು ಎಕರೆಗೆ 10 ಗುಂಟೆ ರೇಷ್ಮೆ, 10 ಗುಂಟೆ ತರಕಾರಿ, 10 ಗುಂಟೆ ಕಬ್ಬು, 10 ಗುಂಟೆ ದನದ ಹುಲ್ಲು. ಒಂದು ವರ್ಷಕ್ಕೆ ಆರು ಲಕ್ಷ ಆದಾಯ ಬರತಕ್ಕಂಥ economic ಆಗಿ plan ಮಾಡಿ. Agricultural scientist ಎಲ್ಲಾ ಒಂದು ಕಡೆ ಕುಳಿತು ಮಾತನಾಡಬೇಕು. ಏನಾಗಿದೆ ಎಂದರೆ, ಏನೋ ಒಂದು ತರಹ ನಾವು ಶೋಕಿಗೆ ಭಾಷಣ ಮಾಡಿ, ನಾವು ಮಾತನಾಡಿದ್ದು recordಗೆ ಹೋಗಿ, TV ಯಲ್ಲಿ ಬಂದರೆ, ಪುಟ್ಟಣ್ಣಯ್ಯ ರೈತರ ಸುದ್ದಿ ಮಾತನಾಡುತ್ತಿದ್ದರು ಪರವಾಗಿಲ್ಲ ಎನ್ನುವ ಹಾಗೆ ಆಗಿದೆ. ಜಾಗತೀಕರಣ, ಉದಾರೀಕರಣಕ್ಕೆ ಪಹಿ ಹಾಕಿದ ಮೇಲೆ ಇಷ್ಟೊಂದು ಆತ್ಮಹತ್ಯೆಯಾಗುತ್ತಿದೆ. ಯಾರೂ ಇದರ ಬಗ್ಗೆ ಕೇಳುತ್ತಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಮೌನವಾಗಿವೆ. ಏನೋ ಅಕ್ಕಿ, ರಾಗಿ ಕೊಡುತ್ತಿದ್ದೇವೆ. 1960ನೇ ಇಸವಿಯಲ್ಲಿ ಒಂದು ಟನ್ ಕಬ್ಬು 40/- ರೂಪಾಯಿ, ಒಂದು ಕ್ವಿಂಟಾಲ್ ಭತ್ತ 30/- ರೂಪಾಯಿ, ಒಂದು ತೆಂಗಿನ ಕಾಯಿ 30 ಪೈಸೆ. ಇವತ್ತು ಎಷ್ಟು ಜಾಸ್ತಿಯಾಗಿದೆ? ಸರಕಾರಿ ನೌಕರರಿಗೆ ಹೆಚ್ಚು ವೇತನ ಕೊಡಬೇಡಿ ಎಂದು ನಾನು ಹೇಳುತ್ತಿಲ್ಲ. ಒಬ್ಬ ಸಾಮಾನ್ಯ clerk ಗೆ 300 ಪಟ್ಟು ಜಾಸ್ತಿಯಾಯಿತು. ನಮ್ಮದೆಷ್ಟು ಜಾಸ್ತಿಯಾಯಿತು 30 ಪಟ್ಟು ಜಾಸ್ತಿಯಾಯಿತು. ಎಲ್ಲಾ ಪದಾರ್ಥಗಳು 30, 60, 70 ಪಟ್ಟು ಜಾಸ್ತಿಯಾದರೆ ಹೇಗೆ ಜೀವನ ಮಾಡುವುದು? ಹೇಗೆ ಬದುಕಬೇಕು? ಹಿಡುವಳಿಯಾಧಾರದ ಮೇಲೆ ಇವರು ಕೃಷಿ ನೀತಿಯನ್ನು ಮಾಡುತ್ತಾರೆಯೆ? ಯಾವತ್ತಾದರೂ ಈ ಬಗ್ಗೆ ಯೋಚಿಸಿದ್ದಾರೆಯೆ? ಇವರಿಗೆ ಹಿಡುವಳಿ ಎಂದರೆ ಗೊತ್ತಿಲ್ಲ. ಈಗಾಗಲೇ ಕನ್ನಡವೇ ಮರೆತು ಹೋಗುತ್ತಿದೆ. ಹಿಡುವಳಿ ಎಂದರೆ ಗೊತ್ತಿಲ್ಲ, ತೆನೆ ಒಕ್ಕಲು ಎಂದರೆ ಗೊತ್ತಿಲ್ಲ, ಹುಲ್ಲು ಒಕ್ಕಲು ಎಂದರೆ ಗೊತ್ತಿಲ್ಲ. ಕನ್ನಡ ನಾಡಿನಲ್ಲಿ ಕನ್ನಡವೇ ಮಾಯವಾಗುತ್ತದೆ. ಆ ಸ್ಥಿತಿಗೆ ಬಂದಿದೆ?

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ : ಅದನ್ನು ಉಳಿಸುವ ಸಲುವಾಗಿಯೇ ಭಯಂಕರ ಸಂಘಟನೆಗಳು ಊರಿಗೊಂದು ಕೇರಿಗೊಂದು ಹೋರಾಟ ಮಾಡುತ್ತಿವೆ.

19-06-2017

ಶ್ರೀ ಕೆ.ಎ.ಪುಟ್ಟಣ್ಣಯ್ಯ : ಆದರೆ, ನಮ್ಮ ಜವಾಬ್ದಾರಿ ಏನು? ತಾವು ಕೂಡ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಯಾಗಿದ್ದಿರಿ. ಸಿರಿಗನ್ನಡಂ ಗೆಲ್ಗೆ ಎಂದು ಹೇಳುತ್ತೀರಿ. ನಮ್ಮೂರಿನಲ್ಲಿ ವರ್ಷಕ್ಕೊಂದು ಸಾರಿ ಗಂಡ ಹೀಗೆ ಬದುಕಿದ್ದಾನೆ, ನನ್ನ ಗಂಡ ಇನ್ನೂ ಬದುಕಿದ್ದಾನೆಂದು ಮುತ್ತೈದೆ ಪೂಜೆ ಮಾಡುತ್ತಾರೆ. ಕನ್ನಡ ರಾಜ್ಯೋತ್ಸವ ಕೂಡ ಅದೇ ರೀತಿ ಆಗಿದೆ. ಕನ್ನಡ ಬದುಕಿದೆ, ಕನ್ನಡ ಬದುಕಿದೆ, ಎಂದು ಆಚರಿಸುವುದು, ಇಲ್ಲಿ ನನ್ನ ಗಂಡ ಬದುಕಿದ್ದಾನೆ ಗಂಡ ಬದುಕಿದ್ದಾನೆಂದು ಮುತ್ತೈದೆ ಪೂಜೆ ಮಾಡುವುದು. ಆ ತರಹ ಆಗಿದೆ. ರೈತರನ್ನು ರಕ್ಷಣೆ ಮಾಡುವುದು ಹೇಗೆ? ಬರೀ ಮಣ್ಣಿನ ಸಂರಕ್ಷಣೆ ಮಾಡಿದರೆ ಮುಗಿಯಿತೇ? ಸರ್ಕಾರ ಏನಾದರೊಂದು ಹೊಸ ದಿಕ್ಕಿನತ್ತ ಸಾಗಬೇಕು. 25 ಸಾವಿರ ಕೋಟಿ ರೂಪಾಯಿಗಳ ವಿಶೇಷ ಕಾರ್ಯಕ್ರಮ ಮಾಡಿ ಇಡೀ ಸಮಗ್ರ ರೈತರನ್ನು ಸಂರಕ್ಷಣೆ ಮಾಡುವಂಥದ್ದನ್ನು ಮಾಡಿ. ಅಲ್ಪಸಂಖ್ಯಾತರಿಗೆ ಹಿಂದುಳಿದವರಿಗೆ ಮಾಡಿದಿರಿ, ಯಾರು ಮಾಡಿಲ್ಲ ಎನ್ನುತ್ತಾರೆ? ಒಂದು ಕ್ರಾಂತಿಕಾರಿ ಮಹತ್ತರವಾದ ಬದಲಾವಣೆ ಮಾಡಿ. ಏಕೆ ಮಾಡಬಾರದು? ಹಳ್ಳಿ ಖಾಲಿಯಾಗುತ್ತಿದೆ. ನಮ್ಮ ತಲೆಮಾರಿಗೆ ಏನು ಮಾಡುತ್ತೀರಿ? ಮುಂದಿನ ತಲೆಮಾರಿಗೆ ಏನು ಕೊಡುತ್ತೀರಿ? ಎಲ್ಲಾ ಬೆಂಗಳೂರಿಗೆ ಕೂಡಿ ಹಾಕಿಕೊಳ್ಳುತ್ತಿದ್ದೀರಿ. ಬೆಂಗಳೂರು ತಿಮಿಂಗಿಲ ಇದ್ದ ಹಾಗೆ. ಸುತ್ತ ಮುತ್ತಲಿನ ಹಳ್ಳಿಗಳನ್ನು ನುಂಗಿಕೊಂಡು ಹೋಗುತ್ತಿದೆ. ತಿಮಿಂಗಿಲಕ್ಕೆ ನೀವು ಪೋಷಣೆ ಮಾಡುತ್ತಿದ್ದಿರಿ. ಸಾಗರದಲ್ಲಿ ಕಸ ಎತ್ತುವುದಕ್ಕೆ ಆಗುತ್ತಿಲ್ಲ. ಆದರೆ, ರೈತರ ರಕ್ಷಣೆ ಮಾಡುವುದಕ್ಕೆ ನಿಮ್ಮ ಯಾರ ಕೈಯ್ಯಲ್ಲೂ ಏಕೆ ಆಗುತ್ತಿಲ್ಲ. ಐವತ್ತು ಸಾವಿರ ಜನ ಸತ್ತರಲ್ಲ, ಈ ಸರ್ಕಾರ ಆ ಸರ್ಕಾರ ಎಂದಲ್ಲ, ಇಷ್ಟು ಜನ ರೈತರು ಸತ್ತರೂ ಒಂದು ದೊಡ್ಡ ಸಮಿತಿ ಏಕೆ ರಚಿಸಿಲ್ಲ? ಕಾನೂನು ಮಂತ್ರಿಗಳೇ, ತಾವು ಹಳ್ಳಿಯಿಂದ ಬಂದಿದ್ದೀರಿ, ಅದರಲ್ಲೂ ಖುಷ್ಕಿ ಪ್ರದೇಶದಿಂದ ಬಂದಿದ್ದೀರಿ. 18 ಜಿಲ್ಲೆಯ ಖುಷ್ಕಿ ಪ್ರದೇಶದ ತೆಂಗು ಬೆಳೆಗಾರರು ಏನು ಮಾಡಬೇಕು? 900 ಕೋಟಿ ತೆಂಗಿನ ಮರಗಳು. ಈ ರಾಜ್ಯದ 25 ರಿಂದ 30 ಸಾವಿರ ಕೋಟಿ ರೂಪಾಯಿಗಳ ಉತ್ಪಾದನೆ ಮಾಡತಕ್ಕಂಥ ತೆಂಗಿನ ಮರಗಳು. ಕೊಬ್ಬರಿ ಎಣ್ಣೆ ಉತ್ಪಾದನೆ, ಹೋಟೆಲ್ ಉದ್ಯಮ, ಇಷ್ಟು ದೊಡ್ಡದಾಗಿರುವ ತೆಂಗಿಗೆ ಎಷ್ಟು ಬೆಲೆ ಕೊಡುತ್ತೀರಿ ಗೊತ್ತೆ? ಈಗ 2 ರಿಂದ 3 ಕೋಟಿ ತೆಂಗಿನ ಮರಗಳು ಒಣಗಿವೆ ಎಲ್ಲಿಂದ ತಂದು ದುಡ್ಡು ಕೊಡುತ್ತೀರಿ? ಅಷ್ಟಕ್ಕೆ ಹಣ ಕೊಡುತ್ತೀರಾ? ಒಂದು

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತೆಂಗಿನ ಮರ ಬದುಕಿದ್ದರೆ 5 ಸಾವಿರ ರೂಪಾಯಿ ಬರುತ್ತಿತ್ತು. 50 ಸಾವಿರ ಆಯಿತು, 3 ಕೋಟಿ ತೆಂಗಿನ ಮರಗಳಿಗೆ ಎಷ್ಟು ಆಯಿತು? ಒಂದೂವರೆ ಲಕ್ಷ ಕೋಟಿ ಆಯಿತು. ನೀವು ಇಷ್ಟು ಹಣವನ್ನು ಕೊಡುತ್ತೀರಾ? ನನಗೆ ಒಬ್ಬ Hair Cutting Saloon ನಲ್ಲಿ ನಿಮಗೆ ಗಣಿತ ಚೆನ್ನಾಗಿ ಬರುತ್ತದೆಯೇ ಎಂದು ಕೇಳಿದ.

ಛೇರ್ಮನ್ : ಪುಟ್ಟಣ್ಣಯ್ಯನವರೇ, conclude ಮಾಡುತ್ತೀರಾ? ಸ್ವಲ್ಪ ಬೇಗ ಮುಗಿಸಿ. ಇನ್ನು ನಾಲ್ಕೈದು ಜನ ಮಾತನಾಡುವವರು ಇದ್ದಾರೆ. ಮಧ್ಯಾಹ್ನದ ಮೇಲೆ ಸರ್ಕಾರದ ಕಡೆಯಿಂದ ಉತ್ತರವಿದೆ. ಬೇಗ ಮುಗಿಸಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಎರಡು ಇಲಾಖೆಗಳ ಬಗ್ಗೆ ಹೇಳುತ್ತೇನೆ. ನಾನು Hair Cutting Saloon ಗೆ ಹೋಗಿದ್ದೆ. ಚೆನ್ನಾಗಿ ಲೆಕ್ಕ ಹಾಕುತ್ತೀರಾ ಎಂದು ಕೇಳಿದ. ಇಷ್ಟು ಕೂದಲು ಕತ್ತರಿಸಿ ಕೊಟ್ಟು ಲೆಕ್ಕ ಹಾಕಿ ಎಂದ. ಹಾಗೆಯೇ ನಾವು ತೆಂಗಿನ ಕಾಯಿ ಲೆಕ್ಕ ಹಾಕಿ ಕೊಟ್ಟರೆ ನೀವು ಹಣ ಕೊಡುತ್ತೀರಾ? ಎಲ್ಲಿಂದ ಹಣ ತರುತ್ತೀರಿ? ಗೋರಕ್ ಸಿಂಗ್ ವರದಿ ಬಂದ ಮೇಲೆ 226 ಕೋಟಿ ರೂಪಾಯಿಗಳು ಎಂದರೆ ನೀವು ಎಲ್ಲಿಂದ ತಂದು ಕೊಡುತ್ತೀರಿ? ಮತ್ತೆ ನೀವು ಹೇಗೆ ರೈತರನ್ನು ರಕ್ಷಣೆ ಮಾಡುತ್ತೀರಿ? ನೀವೇ ತೆಂಗು ಬೆಳೆಯುವ ಪ್ರದೇಶದಿಂದ ಬಂದಿರತಕ್ಕಂಥವರು. ಇಡೀ ತೆಂಗಿನ ಮರಗಳಿಗೆ ರೋಗ ಆವರಿಸಿದೆ, ಮಳೆಯೇ ಇಲ್ಲ. ಈ ಸಾರಿ ಬರಸ್ ತೆಂಗು, ನೀರಾವರಿ ತೆಂಗು ಎರಡು ತರಹ. ಬರಸ್ ತೆಂಗು ಸುಮ್ಮಾರಾಗಿ ಉಳಿದಿದೆ, ನೀರಾವರಿ ತೆಂಗು ಪೂರ್ತಿ ಹಾಳಾಗಿ ಹೋಗಿದೆ. ಇದರಿಂದಾಗಿ ತಾವು ಗಂಭೀರವಾಗಿ ಆಲೋಚಿಸಬೇಕು. ಈಗ reliance market. ತಾವೆಲ್ಲಾ ಬಹಳ ಜನ ನಾಗರೀಕರು ಅಲ್ಲಿಗೆ ಹೊದಾಗ, ಅವರೊಂದು ನಿಮಗೆ ತಳ್ಳುವ ಗಾಡಿಯನ್ನು ಕೊಡುತ್ತಾನೆ, ಇಲ್ಲೊಂದು ಡಬ್ಬ ಇಲ್ಲೊಂದು ಡಬ್ಬ ಹಾಕಿಕೊಂಡು ತೆಗೆದುಕೊಂಡು ಬರುತ್ತೀರಲ್ಲ, ಅದರ ಬೆಲೆ ನಿಯಂತ್ರಣ ಮಾಡುವುದು ಯಾರು? ನಿಮ್ಮ ಹತ್ತಿರ ಕೊಬ್ಬರಿ 90/- ರೂಪಾಯಿಕ್ಕೆ ತಂದು ಇಲ್ಲಿ ಅದನ್ನೇ 210/- ರೂಪಾಯಿಗೆ ಮಾರುತ್ತಾರೆ. Consumer ಕೋ ರಕ್ಷಣ್ ಕರ್ನೆ ಕೆಲೀಯೇ ನಯಾ ನೀತಿ ಕ್ರಾಂತಿ ಬಿ ಬನರಾಹೈ ಇಸೆ ಕೈಸಿ ರಕ್ಷಣ ಕರ್ತೆ ಹೈ? ಬೋಲೋನಾ ಮಹಾರಾಜ್? ಯಾವ ರೀತಿಯಾಗಿ ರಕ್ಷಣೆ ಮಾಡುತ್ತೀರಿ? ಹೇಗೆ ಮಾಡುತ್ತೀರಿ? 110 ರೂಪಾಯಿ ಲಾಭ. ಒಬ್ಬ

reliance ರವರಿಗೆ 1 ಕೆ.ಜಿ.ಗೆ 110 ರೂಪಾಯಿ ಲಾಭ. ಅದಕ್ಕೆ ಆಧುನಿಕ ಮಾರ್ಕೆಟ್ ಜಾಗತೀಕರಣ. ಆಮೇಲೆ ನಗದು ವಹಿವಾಟು ಬೇಡ ಬರೀ ಕಾರ್ಡು.

(ಮುಂದು)

19.06.2017 1.10(17) ಕೆಎಸ್:ಹೆಚ್ಎಸ್

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- (ಮುಂದು)

ನಮ್ಮ ಸಂತೆಗಳಲ್ಲಿ ಸುಮಾರು 30 ಸಾವಿರ ಜನ ಸೇರಬಹುದು. ಅಲ್ಲಿ ನಗದು ವಹಿವಾಟು ನಿಲ್ಲಿಸಿದರೆ ನಮ್ಮ ಸಂತೆಗಳು ನಡೆಯುವುದಾದರೂ ಹೇಗೆ? ಶ್ರೀಮಂತರ ಮಾರ್ಕೆಟ್‌ಗಳನ್ನು ಈ ರೀತಿ ಮಾಡಿದ್ದೀರಿ. ಬಡವರ ಮಾರ್ಕೆಟ್‌ಗಳನ್ನು ಆ ರೀತಿ ಮಾಡಿದ್ದೀರಿ. ಮೈಸೂರು ನಗರದ ಮಾರ್ಕೆಟ್‌ನಲ್ಲಿ ಒಂದು ದಿವಸಕ್ಕೆ 30 ಲಕ್ಷ ಕೆ.ಜಿ. ತರಕಾರಿ ಮಾರಾಟ ಆಗುತ್ತದೆ. ಮತ್ತೆ ಒಂದು ದಿವಸಕ್ಕೆ 4.5 ಕೋಟಿ ರೂಪಾಯಿಗಳಷ್ಟು ತರಕಾರಿ ನಷ್ಟವಾಗುತ್ತಿದೆ. ಆದ್ದರಿಂದ, 1 ಸಾವಿರ ಹಾಪ್‌ಕಾಮ್ಸ್ ಅನ್ನು ಪ್ರಾರಂಭ ಮಾಡಿ. ಎಲ್ಲಾ ತರಕಾರಿಗಳಿಗೆ ಒಂದು minimum rate ಅನ್ನು ನಿಗದಿ ಮಾಡಿ ಹಾಪ್‌ಕಾಮ್ಸ್ ನಿಂದ ನೇರವಾಗಿ ಎಲ್ಲಾ ಸರ್ಕಾರಿ ಹಾಸ್ಟೆಲ್‌ಗಳಿಗೆ ತರಕಾರಿಗಳನ್ನು ಸರಬರಾಜು ಮಾಡಿಸತಕ್ಕಂಥ ಕೆಲಸ ಮಾಡಿಸಿ. ಇವತ್ತಿನದಿವಸ ಶಾಲಾ ಮಕ್ಕಳಿಗೆ ಬಿಸಿ ಊಟ ಕೊಡುತ್ತಿದ್ದೇವೆ. ಆದ್ದರಿಂದ, ಇಲ್ಲಿಗೂ ಸಹ ತರಕಾರಿಗಳನ್ನು ಹಾಪ್‌ಕಾಮ್ಸ್‌ನಿಂದ ಕೊಡಿಸಿ. ಈ ಬಗ್ಗೆ ಒಂದು ದೊಡ್ಡ mobile movement ರೀತಿಯಲ್ಲಿ ಸಾವಿರಾರು ವಾಹನಗಳನ್ನು ಮಾಡಿ ತಾಜಾ ತರಕಾರಿಗಳನ್ನು ಮೈಸೂರು ಮತ್ತು ಬೆಂಗಳೂರು ನಗರದಲ್ಲಿ ಮಾರಾಟ ಮಾಡಿಸಿ. ರಾತ್ರಿ 12.00 ಗಂಟೆಯಲ್ಲಿ ತರಕಾರಿಗಳನ್ನು ತೆಗೆದುಕೊಂಡು ಮಾರ್ಕೆಟ್‌ಗೆ ಬರುತ್ತಾರೆ. ಯಾವುದಾದರೊಂದು ವಾಹನ ಮಾಡಿ ಅವರನ್ನು ಮಾರ್ಕೆಟ್‌ಗೆ ಕರೆದುಕೊಂಡು ಬರುತ್ತೀರಾ? ಹಾಪ್‌ಕಾಮ್ಸ್ ಮೂಲಕ No loss, No profit ಮೇಲೆ ಆ ರೈತರನ್ನು ಕರೆದುಕೊಂಡು ಹೋಗುತ್ತೀರಾ? ರಾಜಸ್ತಾನ ಮತ್ತು ಇತರೇ ರಾಜ್ಯಗಳಲ್ಲಿ ಮಾರುಕಟ್ಟೆಗೆ ತರಕಾರಿ ತರುವವನಿಗೆ ಒಳ್ಳೆಯ ಊಟ ಕೊಟ್ಟು ಅವರ ಸಮಗ್ರ ಆರೋಗ್ಯ ರಕ್ಷಣೆ ಮಾಡಿ ಗುಣಾತ್ಮಕವಾಗಿ ವಿಶ್ರಾಂತಿಗೃಹದ ಸೌಲಭ್ಯವನ್ನು ಒದಗಿಸಿಕೊಡುತ್ತಿದ್ದಾರೆ. ಆದರೆ ನೀವು ಏನು ಮಾಡುತ್ತಿದ್ದೀರಾ? ಯಾವ ಮಾರ್ಕೆಟ್‌ನಲ್ಲಿ ಈ ರೀತಿಯಾದ ವ್ಯವಸ್ಥೆ ಇದೆ ಹೇಳಿ? ಇವತ್ತಿನದಿವಸ

ಆತನಿಗೆ ಉಚಿತವಾಗಿ ಊಟವನ್ನು ಎಲ್ಲಿ ಕೊಡುತ್ತಾರೆ? Vegetable movement ಎಲ್ಲಿದೆ? ಈ ನಾಡಿನಲ್ಲಿ ಪೌಷ್ಟಿಕಾಂಶವನ್ನು ಕೊಡತಕ್ಕಂಥವರು ಎಲ್ಲಿದ್ದಾರೆ? ದಯವಿಟ್ಟು ಈ ಬಗ್ಗೆ ಆಲೋಚನೆ ಮಾಡಿ. ಇವತ್ತಿನದಿವಸ 63% ಜನರಿಗೆ ಸಕ್ಕರೆ ಖಾಯಿಲೆ, 53% ಜನರಿಗೆ cardiac ಖಾಯಿಲೆ ಇರುವ ಜನರಿದ್ದಾರೆ. ಬೆಳಿಗ್ಗೆಯಿಂದ ಸಂಜೆಯವರೆಗೆ ಸಾವಿರಾರು ಜನರಿಗೆ ಕಿಡ್ನಿ ಫೇಲೂರ್ ಆಗುತ್ತಿದೆ. ಹಾಗೆಯೇ ಇವತ್ತಿನದಿವಸ ಎಲ್ಲಾ ಹಳ್ಳಿಗಳಲ್ಲಿರುವ ಜನರು ಕ್ಯಾನ್ಸರ್ ಖಾಯಿಲೆಯಿಂದ ನರಳುತ್ತಿದ್ದಾರೆ. ಇವತ್ತಿನದಿವಸ ಎಲ್ಲಾ ಇಲಾಖೆಗಳ ಮಂತ್ರಿಗಳು co-ordination ಮಾಡಿಕೊಂಡು ಇನ್ನು 15 ವರ್ಷಗಳಲ್ಲಿ ಕರ್ನಾಟಕ ರಾಜ್ಯವನ್ನು ವಿಷಮುಕ್ತ ಕರ್ನಾಟಕ ರಾಜ್ಯ ಮಾಡುತ್ತೇವೆಂಬ ಬಗ್ಗೆ ಒಂದು ಪ್ಲಾನ್ ಮಾಡಿ. Agriculture and Horticulture, Rural Development, Education and Health Departments ಸೇರಿಕೊಂಡು co-ordination ಮಾಡಿಕೊಂಡು ನಿಮ್ಮ ಆಡಳಿತ ಹೊಸ ದಿಕ್ಕಿನ ಕಡೆಗೆ ಸಾಗುವಂಥ ಕೆಲಸ ಮಾಡಿ. ಯಾವುದೋ ಕಾಲದ ಪದ್ದತಿಯನ್ನು ಇಟ್ಟುಕೊಂಡು ಇನ್ನೂ ಕುಟುಕುತ್ತಿದ್ದೇವೆ. ವಿಷಮುಕ್ತ ಆಹಾರವನ್ನು ನೀವು ಹೇಗೆ ಮಾಡುತ್ತೀರಿ? ಇವತ್ತಿನ ದಿವಸ ತಾಯಿ ಗರ್ಭದಿಂದ ಹೊರ ಬರುವ ಮಗುವಿಗೆ ಕಿಡ್ನಿ ಇರುವುದಿಲ್ಲ. ಇವತ್ತಿನ ಊಟ, ಅಶುದ್ಧ ನೀರು ಇವೆಲ್ಲದಕ್ಕೂ ಕಾರಣವಾಗಿದೆ. 9,300 ಶುದ್ಧ ಕುಡಿಯುವ ನೀರಿನ ಘಟಕವನ್ನು ಪ್ರಾರಂಭ ಮಾಡಿ ನೀವು ಒಂದು ಕ್ರಾಂತಿಕಾರಿಯಾದ ಬದಲಾವಣೆ ಮಾಡಿದ್ದೀರಿ. ಇದರಿಂದ 50% ಖಾಯಿಲೆ ಕಡಿಮೆ ಆಗುತ್ತದೆ. ಈ ಬಗ್ಗೆ declare a war. ಇದು ನಿಜಕ್ಕೂ ತುಂಬಾ ಚೆನ್ನಾಗಿರುವ ಕೆಲಸ ಆಗಿದೆ. ಯಾರು ಚೆನ್ನಾಗಿ ಆಟ ಆಡುತ್ತಾರೆಯೋ ಮತ್ತು ದೇಹವನ್ನು ಯಾರು ಚೆನ್ನಾಗಿ ಇಟ್ಟುಕೊಂಡಿರುತ್ತಾರೆಯೋ ಅಂಥವರಿಗೆ 15 ಗ್ರೇಸ್ ಮಾರ್ಕ್ಸ್ ಕೊಡತಕ್ಕಂಥ ಒಂದು ಸಣ್ಣ ಕಾನೂನನ್ನು ಮಾಡಿ. ಈ ರೀತಿ ಮಾಡಿದರೆ ಇಡೀ ಕರ್ನಾಟಕ ರಾಜ್ಯದಲ್ಲಿರುವ ಎಲ್ಲರ health perfect ಆಗುತ್ತದೆ. ಮೊದಲು ನಿಮ್ಮ ಮಗನ ಮೇಲೆ ಇದನ್ನು ಪ್ರಯೋಗ ಮಾಡಿ. ಒಂದು ಮಗುವಿಗೆ 5 ರೂಪಾಯಿ ಕೊಟ್ಟು ಬಿಸ್ಕತ್ ತೆಗೆದುಕೊಂಡು ಬಾ ಎಂದು ಹೇಳಿ ಆತ ಹೋಗುವ ಟೈಂ ಅನ್ನು ಬರೆದುಕೊಳ್ಳಿ. ಅದೇ ಮಗುವಿಗೆ ಮತ್ತೊಂದು ಸಾರಿ 5 ರೂಪಾಯಿ ಕೊಡುವುದರ ಜೊತೆಗೆ 2

19-06-2017

ರೂಪಾಯಿ ಹೆಚ್ಚಿಗೆ ಕೊಟ್ಟು 2 ರೂಪಾಯಿಯನ್ನು ನೀನು ಇಟ್ಟುಕೊಂಡು 5 ರೂಪಾಯಿಗೆ ಬಿಸ್ಕತ್ ತೆಗೆದುಕೊಂಡು ಬಾ ಎಂದು ಹೇಳಿ. ಆಗ ಆತ ಎಷ್ಟು fast ಆಗಿ ಹೋಗಿ ತರುತ್ತಾನೆ ನೋಡಿ. ಇವತ್ತಿನದಿವಸ ಡಾಕ್ಟರ್‌ಗಳು ಪ್ರತಿಯೊಂದಕ್ಕೂ injection ಮತ್ತು ಮಾತ್ರೆಗಳನ್ನು ಕೊಡುತ್ತಿದ್ದಾರಷ್ಟೆ. ಉಚ್ಚೆ ಹುಯ್ಯುವುದಕ್ಕೆ ಒಂದು ಮಾತ್ರೆ, ಕಕ್ಕಸು ಹೋಗುವುದಕ್ಕೆ ಒಂದು ಮಾತ್ರೆ, ಹೆಂಡತಿಯ ಹತ್ತಿರ ಮಲಗಿಕೊಳ್ಳುವುದಕ್ಕೆ ಒಂದು ಮಾತ್ರೆ. Stress ತಡೆದುಕೊಳ್ಳುವುದಕ್ಕೆ ಒಂದು ಮಾತ್ರೆ, ಮಲಗಿ ಕೊಳ್ಳುವುದಕ್ಕೆ ಒಂದು ಮಾತ್ರೆ, ಇಲ್ಲಿ ಭಾಷಣ ಮಾಡುವುದಕ್ಕೆ ಒಂದು ಮಾತ್ರೆ, ನಡೆಯುವುದಕ್ಕೆ ಒಂದು ಮಾತ್ರೆ ಕೊಡುತ್ತಾರೆ. ಇವತ್ತಿನದಿವಸ ಯಾವುದಕ್ಕೆ ಮಾತ್ರೆ ಇಲ್ಲ ಹೇಳಿ? ಎಲ್ಲದಕ್ಕೂ ಒಂದೊಂದು ಮಾತ್ರೆ ಇದೆ. ಆದ್ದರಿಂದ, ಇವತ್ತಿನ ದಿವಸ ಕತ್ತಿಗೆ ಮಾತ್ರೆಗಳ ಹಾರ ನೇತಾಕಿಕೊಂಡು ಒಂದೊಂದು ಮಾತ್ರೆಯನ್ನು ಕಿತ್ತುಕೊಂಡು ಬಾಯಿಗೆ ಹಾಕಿಕೊಳ್ಳಬಹುದು. ಎಲ್ಲಾ ಮಾತ್ರೆಯ ಒಂದು ಸೆಟ್ ಮಾಡಿಸಿ ಕತ್ತಿಗೆ ತಾಳಿ ಕಟ್ಟಿಕೊಳ್ಳುವ ರೀತಿಯಲ್ಲಿ ಕತ್ತಿಗೆ ಹಾಕಿಕೊಂಡು ಬೇಕಾದಾಗ ಮಾತ್ರೆಯನ್ನು ಕಿತ್ತುಕೊಂಡು ಬಾಯಿಯೊಳಕ್ಕೆ ಹಾಕಿಕೊಳ್ಳಬಹುದು. Tablets box ಅನ್ನು ಹೇಗಿದ್ದರೂ ಮಾಡಿದ್ದೀರಿ. ಆದ್ದರಿಂದ, ಈ ಬಗ್ಗೆ ದಯವಿಟ್ಟು ಆಲೋಚನೆ ಮಾಡಿ. ಈ ಸಾರಿ ಕ್ಯಾಬಿನೆಟ್‌ನಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳಿ.

ಛೇರ್ಮನ್:- ಮಾನ್ಯ ಪುಟ್ಟಣ್ಣಯ್ಯನವರೆ, ಬೇಗ ಮುಗಿಸುತ್ತೀರಾ? ಮಾತನಾಡಲಿಕ್ಕೆ ಇನ್ನು ನಾಲ್ಕು ಜನ ಇದ್ದಾರೆ. ಮಧ್ಯಾಹ್ನದ ಮೇಲೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- 15 ನಿಮಿಷ ಆದ ನಂತರ ಊಟಕ್ಕೆ ಬಿಡುತ್ತೀರಿ. ಊಟ ಮಾಡಿಕೊಂಡು ಬಂದು ಪುನ: ಸಭೆ ಸೇರಿದ ನಂತರ ಉಳಿದವರು ಮಾತನಾಡಲಿ.

ಛೇರ್ಮನ್:- ಊಟಕ್ಕೆ ಬಿಡುವಷ್ಟರೊಳಗೆ 3 ಜನ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಇನ್ನೊಂದು ಇಲಾಖೆ ಬಗ್ಗೆ ಮಾತನಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್:- ಇನ್ನು ಮೂರು ಜನ ಮಾತನಾಡಬೇಕಾಗಿದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಅವರು ಕೂಡ ಮಾತನಾಡಲಿ.

19-06-2017

ಛೇರ್ಮನ್:- ಮಧ್ಯಾಹ್ನ 3.00 ಗಂಟೆಗೆ ಸರ್ಕಾರದ ಕಡೆಯಿಂದ ಕೆಲವು ಸಚಿವರು ಉತ್ತರ ಕೊಡುತ್ತಾರೆ. ಅಷ್ಟರೊಳಗೆ ಚರ್ಚೆ ಮುಗಿಯಬೇಕು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಮಾನ್ಯ ಛೇರ್ಮನ್‌ರವರೆ, ಒಂದು ಹೊಸ ದಿಕ್ಕಿನ ಹತ್ತಿರ ಸಾಗೋಣ. ತಾವೂ ಕೂಡ ಶಿಕ್ಷಣ ಇಲಾಖೆಯ ಸಚಿವರಾಗಿ ಕೆಲಸ ಮಾಡಿದ್ದೀರಿ. ನಾನು ಈಗ ಶಿಕ್ಷಣ ಇಲಾಖೆ ಬಗ್ಗೆ ಒಂದು ನಿಮಿಷ ಮಾತನಾಡುತ್ತೇನೆ. ದಲಿತ ಸಂಘರ್ಷ ಸಮಿತಿಯಲ್ಲಿ ಒಂದು ಹಾಡು ಹೇಳುತ್ತಾರೆ. ಅದೇನೆಂದರೆ,

ಕಟ್ಟುತ್ತೇವಾ ನಾವು ಕಟ್ಟುತ್ತೇವಾ ಕಟ್ಟೇ ಕಟ್ಟುತ್ತೇವಾ
ಒಡೆದ ಮನಸುಗಳ ಕಂಡ ಕನಸುಗಳ ಕಟ್ಟೇ ಕಟ್ಟುತ್ತೇವಾ
ಗೋಳಿಲ್ಲದ ಗುಂಡಿಲ್ಲದ ನಾಡ ಕಟ್ಟುತ್ತೇವಾ
ನೂರು ಮನಸ್ಸಿನ ಕೋಟಿ ಮನಸ್ಸಿನ ಹಾಡ ಬರೆಯುತ್ತೇವಾ

ಇದನ್ನು ಮಾನ್ಯ ಸಿದ್ದಲಿಂಗಯ್ಯನವರು ಎಷ್ಟು ಚೆನ್ನಾಗಿ ಬರೆದಿದ್ದಾರೆ. ಇತ್ತೀಚಿನ ಶಿಕ್ಷಣದ ಬಗ್ಗೆ ಹೇಳುವುದಾದರೆ,

ಮುಚ್ಚುತ್ತೇವಾ ನಾವು ಮುಚ್ಚುತ್ತೇವಾ
ಕನ್ನಡ ಶಾಲೆ ಮುಚ್ಚುತ್ತೇವಾ
ತೆಗೆಯುತ್ತೇವಾ ನಾವು ತೆಗೆಯುತ್ತೇವಾ
ಖಾಸಗಿ ಶಾಲೆ ತೆಗೆಯುತ್ತೇವಾ

ಮೊದಲು ಆ ರೀತಿ ಇದ್ದದ್ದು ಈಗ ಈ ರೀತಿಯಾಗಿದೆ. ಇವತ್ತಿನದಿವಸ ಶಿಕ್ಷಣವನ್ನು ಯಾವ ರೀತಿಯಾಗಿ ಕೊಡುತ್ತಿದ್ದಾರೆಂದರೆ, ನಮ್ಮ ಶಾಲೆಯಲ್ಲಿ ಜಾಗ ಇಲ್ಲ ನಮ್ಮ ಶಾಲೆಗಳು ಸರಿಯಿಲ್ಲ ನಮ್ಮ ಸರ್ಕಾರ ಕೂಡ ಸರಿಯಾಗಿ ಇಲ್ಲವೆಂದು ಹೇಳಿ ಸರ್ಕಾರದವರು ಆರ್.ಟಿ.ಇ. ಅಡಿಯಲ್ಲಿ 16,000 ರೂಪಾಯಿ ಕೊಟ್ಟು ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸುತ್ತಿದ್ದೀರಿ. ಇದು ಹೇಗೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಮೊದಲು ಇದನ್ನು ರದ್ದು ಮಾಡಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಸರ್ಕಾರಿ ಶಾಲೆಯಲ್ಲಿ ಓದತಕ್ಕಂಥ ಮಕ್ಕಳಿಗೆ ಸರ್ಕಾರಿ ಕೆಲಸದಲ್ಲಿ 30% ನೀಡಲಾಗುತ್ತದೆ ಎಂದು ಹೇಳಿ. ಆಗ ನಮ್ಮ ಊರಿನ ಶಾಲೆಗಳಲ್ಲಿ ಮಕ್ಕಳು ಹೇಗೆ ಸೇರಿಕೊಳ್ಳುವುದಿಲ್ಲವೋ ನೋಡೋಣ. ಇವತ್ತಿನದಿವಸ ಅಸಮಾನ ಶಿಕ್ಷಣದ ಕಾರಣ ಮಕ್ಕಳು ಗುಳೆ ಹೋಗುತ್ತಿದ್ದಾರೆ. National ರೌಡಿ,

International ರೌಡಿ, State ರೌಡಿ ಎಂದು educationalನಲ್ಲಿ International and National levelನಲ್ಲಿ ನೀಡುತ್ತಿದ್ದಾರೆ. ಇವತ್ತಿನದಿವಸ 8 ತರಹದ ಶಿಕ್ಷಣ ಇದೆಯಂತೆ, ಇದು ನಿಜಕ್ಕೂ ಭಯಂಕರವಾಗಿದೆ. ಈ ರೀತಿ ಶಿಕ್ಷಣ ನೀಡಿದರೆ ಆತ ತನ್ನ ಅಪ್ಪನನ್ನು ಸಹ ಸರಿಯಾಗಿ ಮಾತನಾಡಿಸುವುದಿಲ್ಲ. Hay, hello, How are you? Fine, Coming now, Bye, bye ಎಂದು ಹೋಗುತ್ತಾ ಇರುತ್ತಾನೆ. ನನ್ನ ಮಗ ಅಮೆರಿಕಾ ದೇಶದಲ್ಲಿ ಓದುತ್ತಾನೆ. ವರ್ಷಕ್ಕೆ ಒಂದು ದಿವಸ ಫೋನ್ ಮಾಡಿ Hello ಅಪ್ಪ ಚನ್ನಾಗಿದ್ದೀಯಾ ಎಂದು ಕೇಳುತ್ತಾನೆ. ಅಪ್ಪಾನೂ ಇಲ್ಲ, ತುಪ್ಪಾನೂ ಇಲ್ಲ. ಆತನ ಮಕ್ಕಳು ನನ್ನನ್ನು Oh, old man ಎಂದು ಕರೆಯುತ್ತಾರೆ. ನಾನು Hello ಅಂದರೆ, Oh, old man, how are you? ಎನ್ನುತ್ತಾನೆ. ನಿನ್ನ ಬಾಯಿಗೆ ಹಿಟ್ಟಾಕ್ಕ ಸುಮ್ಮನೆ ಇರು ಎಂದು ಹೇಳುತ್ತೇನೆ. ನನ್ನನ್ನೇ old man ಎಂದು ಕರೆಯುತ್ತಾನೆ. ನಾವು gold man ಆಗಿದ್ದೇವೆ. ಅವರೆಲ್ಲರನ್ನು ಹುಟ್ಟಿಸಿ ಅಲ್ಲಿಗೆ ಕಳುಹಿಸಿರುವುದರಿಂದ ನಾವು gold man ಆಗಿದ್ದೇವೆ. ಆದರೆ, ಮಕ್ಕಳು ನನ್ನನ್ನು old man ಎಂದು ಕರೆಯುತ್ತಾರೆ. ಇದು ಯಾವ education ಎಂದು ನನಗೆ ಅರ್ಥ ವಾಗುತ್ತಿಲ್ಲ. ಅಲ್ಲಿ ಆತನಿಗೆ ಕನ್ನಡ ಹೇಳಿಕೊಟ್ಟಿಲ್ಲ. ಅಮೆರಿಕಾದಲ್ಲಿ What is the use for that Kannada I say? Why? Daddy you talk Kannada, I don't talk Kannada. No use. I am learning Latin ಎನ್ನುತ್ತಾನೆ. ಎಲ್ಲಾ ಮಕ್ಕಳನ್ನು ಯಾವ ಸ್ಥಿತಿಗೆ ತಂದಿದ್ದೇವೆ ನೋಡಿ. ನಾವು ನೀವು ಹೋಗಿ ಏನಾದರೊಂದು ಕೆಲಸ ಮಾಡೋಣ ಬನ್ನಿ. ಇಂಗ್ಲೀಷ್ ಕಾನ್ವೆಂಟ್‌ನಲ್ಲಿ ಓದುವ ಮಕ್ಕಳಿಗೆ ಹಾಲು ಎಲ್ಲಿಂದ ಬರುತ್ತದೆ ಎಂದು ಗೊತ್ತಿಲ್ಲ. ಹಾಲು ಡೈರಿಯಿಂದ ಬರುತ್ತದೆ ಎಂದು ಹೇಳುತ್ತಾರೆ. ಎಮ್ಮೆಯಿಂದ ಹಾಲು ಕರೆಯುತ್ತೇವೆಂದು ಆ ಹುಡುಗರಿಗೆ ಗೊತ್ತಿಲ್ಲ. ಹಾಲು ಎಲ್ಲಿಂದ ಬರುತ್ತದೆ ಎಂದರೆ, ಪ್ಯಾಕೆಟ್ ಹಿಡಿದುಕೊಂಡು ಕರೆಯುತ್ತಾರೆಂದು ಮಕ್ಕಳು ತಿಳಿದುಕೊಂಡಿದ್ದಾರೆ. ಭತ್ತ, ರಾಗಿ ಹೇಗೆ ಬೆಳೆಯುತ್ತಾರೆಂದು ಗೊತ್ತಿಲ್ಲ. ಹೋಟೆಲ್‌ಗೆ ಹೋಗಿ ನೋಡಿದಾಗ ಇವತ್ತಿನ ವಿದ್ಯಾವಂತರು ಅರ್ಧ ಅನ್ನವನ್ನು ಬಿಸಾಕಿರುತ್ತಾರೆ. ಅವರೆಲ್ಲರನ್ನು ಕರೆದುಕೊಂಡು ಹೋಗಿ ಜೈಲಿಗೆ ಹಾಕಬೇಕು. ಅಮೆರಿಕಾ ದೇಶಕ್ಕೆ ಹೋಗಿದ್ದಾಗ ಅಲ್ಲಿನ

19-06-2017

ಹೋಟೆಲ್‌ನಲ್ಲಿ ನಾನು ಸ್ವಲ್ಪ ಊಟವನ್ನು ಬಿಟ್ಟೆ. ಆಗ ಒಂದು ಕವರ್ ಅನ್ನು ಕೊಟ್ಟು ಅದನ್ನು ತುಂಬಿಕೊಂಡು ಹೋಗಿ ಎಂದು ಹೇಳಿದರು. ನಾನು ಅದನ್ನು ಕವರ್‌ನಲ್ಲಿ ತುಂಬಿಕೊಂಡು ಬಂದು ಅದನ್ನು ತಂಗಳು ಪೆಟ್ಟಿಗೆಯಲ್ಲಿ ಇಟ್ಟುಕೊಂಡು ಮೂರು ದಿವಸ ಅದನ್ನು ಉಂಡೆ. ಆದ್ದರಿಂದ, ಇಲ್ಲೊಂದು ಕವರ್ ಕೊಡುವಂಥ ಕೆಲಸ ಮಾಡಿ. ಯಾರು ಅನ್ನ ಬಿಡುತ್ತಾನೆಯೋ ಆತ ಅದನ್ನು ಕವರ್‌ನಲ್ಲಿ ತುಂಬಿಕೊಂಡು ಹೋಗಲಿ. ಕಾರಣ ಏನೆಂಬುದರ ಬಗ್ಗೆ ನಾವೆಲ್ಲರೂ ಯೋಚನೆ ಮಾಡಬೇಕಾಗುತ್ತದೆ. ಅನ್ನವನ್ನು ಬೀದಿಯಲ್ಲಿ ಬಿಸಾಕಿದರೆ ಬ್ಯಾಕ್ಟೀರಿಯಾಗಳು ಹೆಚ್ಚಾಗಿ ಮನುಷ್ಯರಿಗೆ ಖಾಯಿಲೆ ಜಾಸ್ತಿ ಬರುತ್ತದೆ ಎಂದು ಡಾಕ್ಟರ್‌ಗಳಿಗೆ ಗೊತ್ತು. ಈ ಉದ್ದೇಶದಿಂದ ಬೀದಿಯಲ್ಲಿ ಬಿಸಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಸುಮಾರು 400 ಕೋಟಿ ರೂಪಾಯಿಗಳಷ್ಟು ಆಹಾರ ಪದಾರ್ಥಗಳನ್ನು ಬಿಸಾಕುತ್ತಿದ್ದಾರೆ. ತಿರುಪತಿ ಮತ್ತು ಇದು ಒಂದೇ ಆಗಿದೆ. ಅಂದರೆ, ತಿರುಪತಿಯಲ್ಲಿ ಕೂದಲು ಮಾರಿದ್ದಕ್ಕೆ 400 ಕೋಟಿ ರೂಪಾಯಿ ಒಂದು ವರ್ಷಕ್ಕೆ ಸಿಕ್ಕಿತಂತೆ. ನಾವು ತಲೆ ಬೋಳಿಸಿಕೊಂಡು ಇಲ್ಲಿಗೆ ಬರುತ್ತೇವೆ. ನಾವು ಬೋಳಿಸಿಕೊಂಡ ಕೂದಲನ್ನು ಅವರು ಮಾರಾಟ ಮಾಡಿ 400 ಕೋಟಿ ಮಾಡಿಕೊಂಡಿದ್ದಾರೆ. ಇವತ್ತಿನದಿವಸ ಶಿಕ್ಷಣಕ್ಕೆ 18 ಸಾವಿರ ಚಿಲ್ಲರೆ ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೀರಿ. ಆದರೆ, ಮೂಲಭೂತ ಸೌಕರ್ಯ ಎಲ್ಲಿದೆ? ಯಾವ ಸ್ಕೂಲ್ ಚೆನ್ನಾಗಿದೆ? ಯಾವ ಶಾಲಾ ಕಟ್ಟಡ ಮಾದರಿಯಾಗಿದೆ ಹೇಳಿ? ಇಲ್ಲೊಂದು ರೂಮ್ ಕಟ್ಟಿದ್ದರೆ ಅಲ್ಲೊಂದು ರೂಮ್ ಕಟ್ಟಿದ್ದೀರಿ. LKG, UKG ಶಾಲೆಗಳನ್ನು ಮಾಡಿ. ಒಂದು ವರ್ಷದಲ್ಲಿ declare a war. ಅಂದರೆ, ಇತರೇ ಎಲ್ಲಾ ಕೆಲಸ ನಿಲ್ಲಿಸಿ ಸುಮಾರು 10,000 ಕೋಟಿ ರೂಪಾಯಿ ಖರ್ಚು ಮಾಡಿ ಗುಣಾತ್ಮಕವಾದ ಶಾಲೆಗಳನ್ನು ಪ್ರಾರಂಭ ಮಾಡಿ. ಶಿಕ್ಷಣ ಎಂಬುದು Constitutional rights, ಮೂಲ ಭೂತ ಹಕ್ಕು, ಶಿಕ್ಷಣದಿಂದ ದೊಡ್ಡ ಕ್ರಾಂತಿ, ಶಿಕ್ಷಣದಿಂದ ಬದಲಾವಣೆ ಎಂದು ನೀವೇ ಹೇಳುತ್ತೀರಿ. ಆದರೆ, ಶಿಕ್ಷಣದಿಂದ ಬದಲಾವಣೆ ಎಲ್ಲಿದೆ ಸ್ವಾಮಿ?

(ಮುಂದು)

19-06-2017-1-20-18-MS-HS.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: (ಮುಂದು)

19-06-2017

ನಮ್ಮ ಊರಿನಲ್ಲಿ ಬಿ.ಎ ಓದುತ್ತಿದ್ದಾನೆ ಸ್ವಾಮಿ, ತಾವಂತು ಹೆಚ್ಚು ಓದಿದ್ದೀರಿ. ನಾನಂತು ಹೆಚ್ಚು ಓದಿಲ್ಲ. ಬಿಎ ಮತ್ತು ಎಂ.ಎ. ಓದಿರುವ ಹುಡುಗರು ಏನು ಮಾಡುತ್ತಾರೆ? ತಾವು ಏತಕ್ಕೋಸ್ಕರ ಡಿಗ್ರಿ ಕಾಲೇಜನ್ನು ತೆಗೆದಿದ್ದೀರಿ? ಯಾವ ತರಹ ತಾವು skilled labour ಅನ್ನು ತಯಾರು ಮಾಡುತ್ತೀರಿ? ಅಮೇರಿಕಾದಲ್ಲಿ 18 ವರ್ಷ ಆದ ತಕ್ಷಣ ಮಗ ಮನೆಯನ್ನು ಬಿಟ್ಟು ಹೊರಟು ಹೋಗುತ್ತಾನೆ. ಇಲ್ಲಿ ಬಿ.ಎ ಓದಿದ ನಂತರ ಮನೆಗೆ ಬಂದು ಅವರ ಅಪ್ಪನಿಗೆ ಭಾರವಾಗಿದ್ದಾನೆ. ಅವನು ಗಿದ್ದೆಗೂ ಹೋಗುವುದಿಲ್ಲ. ಯಾವುದಾದರೊಂದು skilled labour create ಮಾಡುವಂತಹ ಒಂದು education system ಬಗ್ಗೆ ಯಾವತ್ತಾದರೂ ಚರ್ಚೆ ಮಾಡಿದ್ದೀರಾ? ಏತಕ್ಕಾಗಿ ಮಾಡಿಲ್ಲ? ತಾವು ಶಿಕ್ಷಣ ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. Education, B.A., M.A., B.Com, M.Com., ಮಾಡಿಕೊಂಡು ಬಂದಿದ್ದೇವೆ. ಆದರೆ ಪಿಯುಸಿ ಓದಿದ್ದಂತ ಹುಡುಗರು ಯಾವ skill ಮೇಲೆ ಕೆಲಸ ಮಾಡುತ್ತಾರೆ ಸ್ವಾಮಿ? ಮೂಲಭೂತ ಶಿಕ್ಷಣದ ಬಗ್ಗೆ ಸರಿಯಾದ ಆಲೋಚನೆಯನ್ನು ಮಾಡಬೇಕು. ಖಾಸಗಿ ಶಿಕ್ಷಣ ಸಂಸ್ಥೆಯು ಬೆಳೆಯುತ್ತಿದೆ. ಸುಮ್ಮನೆ ಎಲ್ಲಾ ಜನರು ನಿಷ್ಕ್ರಿಯರಾಗುತ್ತಿದ್ದಾರೆ. ಈ ಬಗ್ಗೆ ಹುನ್ನಾರ ನಡೆಯುತ್ತಿದೆ. ಬಡವರ ಮಕ್ಕಳು ಓದದೆ ಇರುವಂತಹ ಕಾಲ ಬರಬಹುದು.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಆದ್ದರಿಂದ ದಯವಿಟ್ಟು ಶಿಕ್ಷಣದ ಬಗ್ಗೆ ಎಷ್ಟು ಶಾಲೆಯನ್ನು ಮುಚ್ಚಿದ್ದೀರೆಂಬ ಬಗ್ಗೆ ತಾವು ಹೇಳಬೇಕು. ಇನ್ನು ಎಷ್ಟು ಮುಚ್ಚುವ ಸ್ಥಿತಿಯಲ್ಲಿದೆ, ಇಲ್ಲಿ ಎಲ್ಲರೂ ಆಡಳಿತ ಪಕ್ಷ ಮತ್ತು ವಿರೋಧಪಕ್ಷಕ್ಕೆ ಅಲ್ಲ. ಈ ಬಗ್ಗೆ ಎಲ್ಲರೂ ಒಟ್ಟಿಗೆ serious discussion ಮಾಡಬೇಕಾಗಿದೆ. ಶಿಕ್ಷಣಕ್ಕೆ ಹೊಸ ನೀತಿ ಮಾಡಬೇಕೆಂಬ ಬಗ್ಗೆ ಆಲೋಚನೆಯನ್ನು ಮಾಡಬೇಕು.

ಅಧ್ಯಕ್ಷರು: ಪುಟ್ಟಣ್ಣಯ್ಯನವರೆ ತಾವು ಇನ್ನು ಎಷ್ಟು ಮಾತನಾಡುತ್ತೀರಿ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಇನ್ನು 5-10 ನಿಮಿಷ ಮಾತನಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ದೊರೆಸ್ವಾಮಿಯವರು ಸ್ವಾತಂತ್ರ್ಯ ಪಾರ್ಕ್‌ನಲ್ಲಿ ನಾಳೆ ಜೈಲು ತುಂಬುವ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ಅವರು ಇಲ್ಲಿಗೆ ಬಂದು ನಾಲ್ಕು ದಿವಸವಾಯಿತು. "ಉಳುವವನೆ ಭೂಮಿಯ

ಒಡೆಯ, ವಾಸಿಸುವವನೆ ನೆಲದ ಒಡೆಯ" ಎಂದು ಹೇಳಿ ಈಗಾಗಲೇ ಈ ಬಗ್ಗೆ ಕಂದಾಯ ಸಚಿವರು ಮಾತನಾಡಿ ಅವರ ಜೊತೆಯಲ್ಲಿ ಚರ್ಚೆ ಮಾಡಿ ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. Merits & demerits ಎರಡನ್ನೂ ಸೇರಿಸಿ ಮಾತನಾಡಿ ಒಂದು ವರದಿಯನ್ನು ತರಿಸಿ. ನ್ಯಾಯ ಕೊಡಿಸುತ್ತಿದ್ದೇನೆ, ಒಂದು ಒಳ್ಳೆಯ ಚಳುವಳಿ ಮಾಡುತ್ತಿದ್ದೀರೆಂದು ಅವರು ಹೇಳಿ ಬಂದಿದ್ದಾರೆ. ಅವರು ಜೈಲಿಗೆ ಹೋದರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಇವತ್ತೇ ತಕ್ಷಣ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಹೊರೆಸ್ವಾಮಿಯವರಿಗೆ ಇನ್ನು ಸ್ವಲ್ಪ ದಿನದಲ್ಲಿ 100 ವರ್ಷವಾಗುತ್ತಿದೆ. ಹಿಂದೆ ಬೆಳಗಾಂ ಅಧಿವೇಶನ ನಡೆಯುವಾಗಲೂ ಬಂದು ಕುಳಿತುಕೊಂಡು ಹೋರಾಟ ಮಾಡಿದ್ದರು. ಭೂಮಿ ಹಕ್ಕು ಕೊಡಬೇಕು, ಬಹಳಷ್ಟು ಜನ ಭೂರಹಿತರು ಇದ್ದಾರೆ ಅವರೆಲ್ಲರಿಗೂ ನೆಲೆ ಕೊಡಬೇಕೆಂದು ಪ್ರಾಮಾಣಿಕವಾಗಿ ಹೋರಾಟ ಮಾಡುತ್ತಿದ್ದಾರೆ. ಅವರು ಮೊನ್ನೆಯಿಂದಲೂ ಬಂದು ಅಲ್ಲಿ ಕುಳಿತುಕೊಂಡಿದ್ದಾರೆ. ಅದಕ್ಕಾಗಿ ಸರ್ಕಾರವು ಸ್ಪಂದಿಸಬೇಕಾಗಿದೆ. ಕಾಗೋಡು ತಿಮ್ಮಪ್ಪನವರು ಬೆಳಗಾಂ ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ಹೋಗಿ ಭೇಟಿಯಾಗಿ ಅವರಿಗೆ ಇದನ್ನು ಆದಷ್ಟು ಬೇಗನೇ ಈಡೇರಿಸುತ್ತೇನೆಂದು assurance ಕೊಟ್ಟು ಬಂದಿದ್ದರು. ಆದರೆ ಅಲ್ಲಿಂದ ಇಲ್ಲಿಯವರೆವಿಗೂ ಏನೂ progress ಆಗಿರುವುದಿಲ್ಲ. ಅಲ್ಲಿ ಅವರು ಬಂದು ಕುಳಿತುಕೊಂಡಿದ್ದಾರೆ. ಸರ್ಕಾರದ ಕಡೆಯಿಂದ ಯಾರಾದರೂ ಕಾಗೋಡು ತಿಮ್ಮಪ್ಪನವರಾಗಲಿ ಅಥವಾ ಮತ್ತೊಬ್ಬರಾಗಲಿ ಅಲ್ಲಿಗೆ ಹೋಗಿ immediately ಬೇಡಿಕೆಯ ಬಗ್ಗೆ response ಕೊಡುವಂತಹದ್ದು ಆದಷ್ಟುಬೇಗನೆ ಈಡೇರಿಸುವಂತಹ ಕೆಲಸ ಸರ್ಕಾರದ ಕಡೆಯಿಂದ ಆಗಬೇಕಾಗಿದೆ. ಅಂತಹ ಹಿರಿಯರು ಸತ್ಯಾಗ್ರಹ ಮಾಡುತ್ತಾ, ಹೋರಾಟ ಮಾಡುತ್ತಾ ಕುಳಿತುಕೊಂಡಿದ್ದಾರೆ. ಅದಕ್ಕಾಗಿ ಸರ್ಕಾರವು ಸ್ಪಂದನೆ ಮಾಡಬೇಕು.

ಅಧ್ಯಕ್ಷರು: ಈ ಬಗ್ಗೆ ಸರ್ಕಾರದವರು ವಿಚಾರ ಮಾಡಿ.

ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ಸಣ್ಣ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ಇದೇ ವಿಚಾರದ ಬಗ್ಗೆ ಬೆಳಗಾಂನಲ್ಲಿಯೂ ಮಂಡಿಸಿ ಅವರು ಹೋರಾಟ

ಮಾಡಿದ್ದರು. ಆಗಲೂ ಕೂಡ ನಾನು ಮತ್ತು ಕಾಗೋಡು ತಿಮ್ಮಪ್ಪನವರು ಭೇಟಿ ಮಾಡಿ ಕೆಲವು ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದೆವು. ಮತ್ತೆ ಇವತ್ತು ಅಲ್ಲಿಗೆ ಹೋಗಿ ಚರ್ಚೆ ಮಾಡುತ್ತೇವೆ.

ಅಧ್ಯಕ್ಷರು: ಅಲ್ಲಿಗೆ ಹೋಗಿ ಚರ್ಚೆ ಮಾಡಿ.

ಶ್ರೀ ಜಗದೀಶ್ ಶೆಟ್ಟರ್: ಅಲ್ಲಿಗೆ ಹೋಗಿ ಇದನ್ನು ಆದಷ್ಟು ಬೇಗನೆ ಮಾಡುತ್ತೇವೆಂದು ಹೇಳಿ. ಅವರಿಗೆ ಇನ್ನೇನು 100 ವರ್ಷಕ್ಕೆ ಆಗುತ್ತಿದೆ.

ಶ್ರೀ ಟಿ.ಬಿ.ಜಯಚಂದ್ರ: ನಾವು ಅಲ್ಲಿಗೆ ಹೋಗಿ ಬರುತ್ತೇವೆ.

ಅಧ್ಯಕ್ಷರು: O.K. ಪುಟ್ಟಣ್ಣಯ್ಯನವರೆ ಮುಗಿಯಿತೆ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಇಲ್ಲ. ಇನ್ನು 5 ನಿಮಿಷ ಮಾತನಾಡುತ್ತೇನೆ. ನಾನು ನಿಯಮ 69ರ ಅಡಿಯಲ್ಲಿ ಮಾತನಾಡಬೇಕೆಂದು ಇದ್ದೆ, ಈಗ ಇಲ್ಲಿಯೇ ಆ ವಿಚಾರದ ಬಗ್ಗೆ ಮಾತನಾಡುತ್ತೇನೆ. ಮಾನ್ಯ ಕಾನೂನು ಸಚಿವರೆ, ಇದೇ ಸದನದಲ್ಲಿ ತಾವು ಹೇಳಿದ್ದೀರಿ. ರಾಜ್ಯದಲ್ಲಿ ಅಕ್ರಮವಾಗಿ ನಡೆಯುತ್ತಿರುವಂತಹ ಬೇಬಿ ಬೆಟ್ಟದಲ್ಲಿ 1000 ಚಿಲ್ಲರೆ ಎಕರೆ ಜಾಗ ಇದೆ. ಈ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಿ CODಗೆ refer ಮಾಡುತ್ತೇನೆಂದು ತಾವು ಹೇಳಿದ್ದೀರಿ. ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಇದು ಲೋಕಾಯುಕ್ತಕ್ಕೆ ಹೋಗುತ್ತಿದೆ. ಇದು 2500 ಕೋಟಿ ಹಗರಣವಾಗಿದೆ. ಈ ಬಗ್ಗೆ ಮಾಹಿತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ಸರ್ಕಾರಕ್ಕೆ ಸುಮಾರು 900ರಿಂದ 1000 ಕೋಟಿ ರೂಪಾಯಿಗಳ ತೆರಿಗೆ ವಂಚನೆಯಾಗುತ್ತಿದೆ. ಏತಕ್ಕಾಗಿ Mines & Minerals ಬಗ್ಗೆ ನಿಮಗೆ ಇಷ್ಟೊಂದು negligence ಇದೆ? ಪ್ರಾಕೃತಿಕ ಸಂಪತ್ತು ಲೂಟಿಯಾಗುತ್ತಿದೆ. ಸರ್ಕಾರದ ಬೊಕ್ಕಸಕ್ಕೆ ಹಣ ಇಲ್ಲ. ರಾಜಕೀಯ ದಂದೆ ನಡೆಯುತ್ತಿದೆ. ಸರ್ಕಾರಿ ಅಧಿಕಾರಿಗಳ ಭ್ರಷ್ಟಾಚಾರ. ಅಮೃತಮಹಲ್ ಕಾವಲ್ ಸರ್ವೆ ನಂಬರ್ ಸುಮಾರು 1487 ಎಕರೆ ಅರಣ್ಯ ಎಂದು ಘೋಷಿಸಿದ್ದಾರೆ. ಈ ಬಗ್ಗೆ ತಮಗೆ ಹೆಚ್ಚು ಗೊತ್ತಿದೆ. ಚಿನಕುರಳಿ ಗ್ರಾಮದ ಸರ್ವೆ ನಂ: ಒಂದರಲ್ಲಿಯೇ ಸುಮಾರು 220 ಎಕರೆ ಅರಣ್ಯವೆಂದು notification ಆಗಿದೆ. ಹೊನ್ನಗಾನಹಳ್ಳಿ ಗ್ರಾಮದ ಸರ್ವೆ ನಂಬರ್‌ನಲ್ಲಿ 256.26 ಎಕರೆ ಅರಣ್ಯ ಎಂದು ಘೋಷಣೆಯಾಗಿದೆ. ಅಲ್ಲಿ ಯಾವುದೇ ಪರವಾನಗಿ ಇಲ್ಲದೆ ಸುಮಾರು 32 ಕ್ರಷರ್ಸ್‌ಗಳು ಈ ಕೆಲಸ ಮಾಡುತ್ತಿವೆ. ನಾನು ಕಳೆದ ಎರಡು ವರ್ಷದಿಂದ ಈ ಸಂಬಂಧ ಮನವಿ

ಮಾಡಿಕೊಂಡಿದ್ದೇನೆ. ಇಲ್ಲಿ ಸರ್ಕಾರ ಇದೆಯಾ ಅಥವಾ ಇಲ್ಲವಾ? ಗೊತ್ತಾಗುತ್ತಿಲ್ಲ. ಅಮೃತಮಹಲ್ ಕಾವಲ್ ಪ್ರದೇಶವನ್ನು ಅರಣ್ಯಪ್ರದೇಶ ಎಂದು ಘೋಷಣೆ ಮಾಡದೆಯೆ.....

ಶ್ರೀ ಕೆ.ಎಸ್.ಮಂಜುನಾಥಗೌಡ: ಮಾನ್ಯ ಸದಸ್ಯರು 32 ಕ್ರಷರ್ಸ್ ಬಗ್ಗೆ ಹೇಳುತ್ತಿದ್ದರು. ಇದನ್ನು ಲೀಸ್‌ಗೆ ಕೊಡುತ್ತಾರೆ. ಇದು ದೆಹಲಿ, ಬಾಂಬೆ, ಆಂಧ್ರಪ್ರದೇಶದವರಿಗೆ ಇದು ಮಾರಾಟವಾಗುತ್ತಿದೆ. ನನಗೆ ನೀವು ಲೀಸ್ ಕೊಡುತ್ತೀರಿ, ಅದು ಒಂದು ತಿಂಗಳು ಅಥವಾ ಎರಡು ತಿಂಗಳಿಗೆ ಬೇರೆ ದೇಶದಿಂದ ಬಂಡವಾಳಶಾಹಿಗಳಿಗೆ ಕ್ರಷರ್ಸ್ ಮಾರಾಟವಾಗುತ್ತಿದೆ. ಚಿಕ್ಕಬಳ್ಳಾಪುರದಲ್ಲಿ ಸುಮಾರು 170 ಕ್ರಷರ್ಸ್ ನಾವು ಯಾರಿಗೆ ಲೀಸ್ ಕೊಟ್ಟಿದ್ದೇವೆ. ಅದನ್ನು ಯಾರು ನಡೆಸುತ್ತಿದ್ದಾರೆ, ಸರ್ಕಾರವು ಮಾರಾಟ ಮಾಡುವುದಕ್ಕೆ permission ಕೊಡುತ್ತಾರೆಯೇ, ಇದನ್ನು ಕೊಟ್ಟಿರುವವರು ಯಾರು? Books ಇವರು ಏನು ಮಾಡುತ್ತಾರೆಂದರೆ, ಒಂದು Private Limited Company ಎಂದು ಮಾಡುತ್ತಾರೆ. ಅದರಲ್ಲಿ ಅವರನ್ನು Director ಆಗಿ ಸೇರಿಸಿಕೊಳ್ಳುತ್ತಾರೆ. ಆಮೇಲೆ ಎರಡು ತಿಂಗಳಾದ ಮೇಲೆ ನಾನು resign ಮಾಡುತ್ತೇನೆ. ಆಮೇಲೆ ಆ ಬಂಡೆ ಅವರದಾಗುತ್ತದೆ. ಈ ಎಲ್ಲಾ ಕ್ರಷರ್ಸ್ ನಡೆಯುತ್ತಿರುವುದು ನಮ್ಮ private entrepreneurs ಎಂದು ಏನು ಹೇಳುತ್ತೇವೆ ಅವರು localನವರಲ್ಲ. ನಮಗೆ ನೀವು ಲೀಸ್ ಕೊಡುತ್ತೀರಿ ಅಷ್ಟೆ. ನಮಗೆ ನೀವು royalty ಕಟ್ಟಿ ಎಂದು ಲೀಸ್ ಕೊಡುತ್ತೀರಿ. ನಮಗೆ ಇಲ್ಲಿ 1 ರಿಂದ 2 ಲಕ್ಷ ಮಾತ್ರ ಖರ್ಚಾಗುತ್ತದೆ. ಒಂದೊಂದು ಎಕರೆಗೆ ನಾವು 60 ರಿಂದ 70 ಲಕ್ಷಕ್ಕೆ ಮಾರಿಕೊಳ್ಳುತ್ತಿದ್ದೇವೆ. ಒಬ್ಬೊಬ್ಬರು 40 ರಿಂದ 50 ಎಕರೆ ಲೀಸ್‌ಗೆ ತೆಗೆದುಕೊಂಡು ಆಮೇಲೆ ಮಾರಿಕೊಳ್ಳುತ್ತಿದ್ದೇವೆ. ಇದಕ್ಕೆ ಕಡಿವಾಣವೇ ಇಲ್ಲ. ಸುಮಾರು 20 ವರ್ಷದಿಂದ ಇದೇ ತರಹ ಮಾಡಿಕೊಂಡು ಬರುತ್ತಿದ್ದಾರೆ. ಬೆಂಗಳೂರು ಸುತ್ತಮುತ್ತ ಇದರ ವ್ಯಾಪ್ತಿ ಇದ್ದು ಇದಕ್ಕೆ demand ಜಾಸ್ತಿ ಇದೆ. Transportation charges ಕಡಿಮೆ ಇರುತ್ತದೆ. ಹಾಗಾಗಿ ಅತಿ ಹೆಚ್ಚು ವ್ಯಾಪಾರವಾಗುತ್ತಿದೆ. ಸನ್ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ಹೇಳುತ್ತಿರುವುದು ಸರಿ ಇದೆ. ಬೆಂಗಳೂರು ಸುತ್ತಮುತ್ತ ದೊಡ್ಡ ಆಲದ ಮರದ ಹತ್ತಿರ, ಚಿಕ್ಕಬಳ್ಳಾಪುರ, ಕೋಲಾರ, ಈ ಕಡೆ ಕಡಿವಾಣವೇ ಇಲ್ಲದಾಗಿದೆ.

19-06-2017

ಶ್ರೀ ಬಿ.ಸುರೇಶಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ಕ್ರಷರ್ಸ್ ಬಗ್ಗೆ ಹೇಳಿದರು. ಅವರಿಗೆ correct ಆಗಿ ಹೇಳುವುದಕ್ಕೆ ಬರಲಿಲ್ಲ. ಇಲ್ಲಿ major ಮಾಫಿಯಾ ಇರುವುದು ಏನೆಂದರೆ, Pollution Control Board ನಿಯಮಗಳನ್ನು ಯಾರೊಬ್ಬರು ಕೂಡ ಅದನ್ನು 1% ಕೂಡ implement ಮಾಡಿರುವುದಿಲ್ಲ. Environmental rules ಇದೆ, ಅದನ್ನು ಕೂಡ implementation ಮಾಡುವುದಿಲ್ಲ. ತುಮಕೂರು ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ವಿಶೇಷವಾಗಿ ಸುಮಾರು 250 ಕ್ರಷರ್ಸ್‌ಗಳಿವೆ. ಇದೊಂದು ದೊಡ್ಡ ಮಾಫಿಯಾ ಆಗಿದೆ. ಅವರಿಗೆ ಇಷ್ಟು ಚದರಡಿ ಭೂಮಿ ಎಂದು ಕೊಟ್ಟಿರುತ್ತಾರೆ. ಆ ಬಂಡೆಗಳನ್ನು ಅದರ 100 ಪಟ್ಟು misuse ಮಾಡಿರುತ್ತಾರೆ. ಒಬ್ಬ 60 ಕೋಟಿ royaltyಯನ್ನು ಕಟ್ಟಬೇಕೆಂದು ತನಿಖೆಗೆ ಹಾಕಿದ್ದೇನೆ. ಅಲ್ಲಿ ಎರಡು ಕೆರೆ ಇದ್ದು ಎರಡು ಕೆರೆಗಳು ಕಲುಷಿತವಾಗಿಬಿಟ್ಟಿದೆ. Pollution Control Boardನವರು ಹೇಳಿರುವಂತಹ ಒಂದು ಮಾನದಂಡವನ್ನು ಆತ implement ಮಾಡಿರುವುದಿಲ್ಲ. ಸರ್ಕಾರಕ್ಕೆ ಈತನು 60 ಕೋಟಿ royaltyಯನ್ನು ಕೊಡಬೇಕಾಗಿದೆ. ಕಡೆಗೆ ಅಲ್ಲಿ ಜಲ್ಲಿ ಕ್ರಷರ್ಸ್ ಹೊಡೆಯಬೇಕಾದರೆ ಅವನು Commercial Tax ನಲ್ಲಿ billing ಹಾಕಬೇಕು. ಅದು ಕೂಡ ಒಂದು ಪೈಸೆಯನ್ನು ಕಟ್ಟಿಲ್ಲ. ಪರಿಸರ ಇಲಾಖೆ ಮತ್ತು ಗಣಿ ಇಲಾಖೆ ಎರಡೂ ಇಲಾಖೆಯ ಮಾಫಿಯಾಗಳೇ ಅಧಿಕಾರಿಗಳು. ಮೇಲೆ ನೋಡಿದರೆ ಚೆನ್ನಾಗಿದೆ, Principal Secretary, Secretary levelನಲ್ಲಿ ಅಧಿಕಾರಿಗಳೂ strong ಆಗಿದ್ದಾರೆ. ಆದರೆ ಕೆಳಗಡೆ ಬಂದರೆ Deputy Director ಮತ್ತು ಅವರ ಕೆಳಗಡೆ ಇರುವಂತಹ ಅಧಿಕಾರಿಗಳು ಅವರ ಜೊತೆಯಲ್ಲಿ ಶಾಮೀಲಾಗಿಬಿಡುತ್ತಿದ್ದಾರೆ. ಅವರುಗಳು ಶಾಮೀಲಾಗಿರುವುದರಿಂದ ಇದೊಂದು ದೊಡ್ಡ ಮಾಫಿಯಾ ಆಗಿದೆ. ಪುಟ್ಟಣ್ಣಯ್ಯನವರು ಹೇಳಿದಹಾಗೆ ಇದಕ್ಕೆ ಈ ಬಗ್ಗೆ ಚರ್ಚೆ ಮಾಡುವುದಕ್ಕಾಗಿ 2 ಗಂಟೆಗಳ ಕಾಲಾವಕಾಶ ಕೊಡಬೇಕು.

ಅಧ್ಯಕ್ಷರು: ನೀವು ಅವಕಾಶ ಕೊಡಿ ಎಂದು ಕೇಳಿದರೆ ಕೊಡಬೇಕೋ ಅಥವಾ ನಾನೇ ಕೊಡುವುದಕ್ಕೆ ಆಗುತ್ತದೆಯೇ? ಮಾನ್ಯ ಪುಟ್ಟಣ್ಣಯ್ಯನವರೆ ತಾವು conclude ಮಾಡಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಬಿ.ಸುರೇಶ್‌ಗೌಡ: ಗಣಿ ಮಾಫಿಯಾಗಳನ್ನು ನೀವು ಪೋಷಣೆ ಮಾಡುವುದಕ್ಕೆ ಅವಕಾಶ ಕೊಡದೆ ಕಾನೂನು ಪ್ರಕಾರ Pollution Control Board ಮತ್ತು Environmental rules ಪ್ರಕಾರ ಎಲ್ಲಿ violation ಆಗಿದೆ ಅವರಿಗೆ ಶಿಕ್ಷೆ ಆಗುವುದರ ಜೊತೆಗೆ ಜೈಲಿಗೆ ಕಳುಹಿಸಬೇಕು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಇದು ಸಾಮಾನ್ಯ ಹಗರಣವಲ್ಲ. ಸರ್ಕಾರವು ಏತಕ್ಕಾಗಿ ಇಷ್ಟೊಂದು ಬೇಜವಾಬ್ದಾರಿತನದಲ್ಲಿದೆ ಎಂದು ನನಗೆ ಗೊತ್ತಾಗುತ್ತಿಲ್ಲ. ಇಷ್ಟು ನಿಷ್ಕ್ರಿಯೆ ಏತಕ್ಕಾಗಿ ಆಗುತ್ತಿದ್ದೀರಿ? ಈ ಬಗ್ಗೆ ನಾನು ಸುಮಾರು ಒಂದೂವರೆ ವರ್ಷದಿಂದ ಚರ್ಚೆ ಮಾಡುತ್ತಿದ್ದೇನೆ. ಒಬ್ಬ ಒಂದು ಕ್ರಷರ್‌ಗೆ ಪರವಾನಗಿ ಪಡೆದು ನಾಲ್ಕು ಕ್ರಷರ್‌ಗಳನ್ನು ನಡೆಸುತ್ತಿದ್ದಾನೆ.

ಶ್ರೀ ಬಿ.ಸುರೇಶ್‌ಗೌಡ: ಸರ್ಕಾರವು ಮರಳು ಮಾಫಿಯಾವನ್ನು ನಿಲ್ಲಿಸಿದ ಮೇಲೆ M-Sand ಬಂದ ಮೇಲಂತೂ ದೊಡ್ಡ ಮಾಫಿಯಾ ಆಗಿದೆ. ಸೀಮೆಂಟ್ ಚೀಲ ಮೊದಲು ಬರುತ್ತಿತ್ತು. ಆ ತರಹ ಮರಳು ಚೀಲಗಳು ಪ್ಯಾಕಿಂಗ್ ಆಗಿ ಈಗ ನಡೆಸುತ್ತಿದ್ದಾರೆ.

(ಮುಂದು)

ವಿಸ.19.06.2017/1.30/19/ಎನ್.ಸಿ.ಕೆ/ಎಸ್.ಪಿ(ವಿಆರ್)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಸಭಾಧ್ಯಕ್ಷರೆ, ನೂರಾರು pages ಇವೆ. ಅದನ್ನು ಈಗ ಕಳುಹಿಸಿಕೊಡುತ್ತೇನೆ. ನಾನು ಇದರ ಬಗ್ಗೆ explain ಮಾಡುವುದಿಲ್ಲ. ನಾನು ಇದರ ಬಗ್ಗೆ ನಾಲ್ಕನೇ ಸಾರಿ ಚರ್ಚೆ ಮಾಡುತ್ತಿದ್ದೇನೆ. ಸರ್ಕಾರ ಮೌನವಾಗಿದೆ, COD ಗೆ ಒತ್ತಾಯ ಮಾಡಿ ಬರೆದಿದ್ದರೂ.. COD ಗೆ ಬರೆದಿದ್ದಾರೆ. ಆದರೂ ಏಕೆ ಮಾಡಲಿಲ್ಲ?

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ಪುಟ್ಟಣ್ಣಯ್ಯನವರು ಸದನದ ಬಾವಿಯ ಬಳಿ ಬಂದು ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು: ಆಯಿತು, ನಿಮಗೆ ನಾನು ಸರಿಯಾದ ಉತ್ತರವನ್ನು ಕೊಡಿಸುತ್ತೇನೆ ಬಿಡಿ.

19-06-2017

ಶ್ರೀ ಎನ್.ಹೆಚ್.ಕೋನರೆಡ್ಡಿ: ಇಲ್ಲಿ ಮರಳಿನ ಬಗ್ಗೆ ಚರ್ಚೆ ಮಾಡಿ, ಮಾಡಿ ಒಂದು trip ಮರಳು ಸಿಗದಂಥ ಪರಿಸ್ಥಿತಿ ಆಗಿಬಿಟ್ಟಿದೆ.

ಅಧ್ಯಕ್ಷರು: ಆಯಿತು ಪುಟ್ಟಣ್ಣಯ್ಯನವರೇ ನಿಮಗೆ ಎಲ್ಲ ಹೇಳುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಗಣಿ ಮಾಲೀಕರ ಜೊತೆ ಪುಟ್ಟಣ್ಣಯ್ಯ ಶಾಮೀಲ್ಲಾಗಿ ಮೌನವಾಗಿದ್ದಾನೆ. ಹಣ ಪಡೆದಿದ್ದಾನೆ. Wagonಗಟ್ಟಲೆ, ಲೋಡ್‌ಗಟ್ಟಲೆ ಬಂದು ಬಿದ್ದಿದೆ. So ನಾನು ಮೂರು ಸಾರಿ ಚರ್ಚೆ ಮಾಡಿದ್ದೇನೆ. ಏನೂ ಮಾಡದೇ ಇದ್ದರೆ ನಿಮಗೆ royalty ಬೇಡವೆಂದರೆ ಏನರ್ಥ? ಅಲ್ಲಿ 1000 vehicles ಹೋಗುತ್ತವೆ. ಕಂದಾಯ ಇಲಾಖೆ, ಭೂವಿಜ್ಞಾನ ಇಲಾಖೆ, ಅರಣ್ಯ ಇಲಾಖೆ ಎಲ್ಲರೂ ಶಾಮೀಲಾಗಿದ್ದಾರೆ. ಒಂದು ವರದಿಯಲ್ಲಿ 9 crushersಗೆ ಮಾತ್ರ ಎಂದು ಕೊಟ್ಟಿದ್ದಾರೆ. ಅಲ್ಲಿ ನಡೆಯುತ್ತಿರುವುದು 32. ಜಿಲ್ಲಾ ಮಟ್ಟದ ಭೂವಿಜ್ಞಾನದವರು 9 crushers ಎಂದು. ಎಷ್ಟು ಸುಳ್ಳು ಮಾಹಿತಿ ಕೊಟ್ಟಿದ್ದಾನೆ. ಶ್ರೀ ನಾಗಭೂಷಣಂ ಎಂದು ಅವನ ಹೆಸರು. ಏಕೆ? ಇದರ ಹಿಂದೆ ಏನಿರಬಹುದು? COD ಗೆ ಮಾನ್ಯ ಮುಖ್ಯಮಂತ್ರಿ ಪತ್ರ ಬರೆದಿದ್ದಾರೆ. ಗೃಹ ಮಂತ್ರಿ ಪತ್ರ ಬರೆದಿದ್ದಾರೆ. ತಾವು ವರದಿ ತರಿಸಿಕೊಂಡು COD ಗೆ refer ಮಾಡುತ್ತೀರಿ ಎಂದು ಹೇಳಿದ್ದೀರಿ. ಎಷ್ಟು ವರ್ಷವಾಯಿತು? ಒಂದು ವರ್ಷವಾಯಿತು ಏಕೆ? ಇದರ ಇಡೀ ಇತಿಹಾಸ ಕಳುಹಿಸಿಕೊಡುತ್ತೇನೆ. 2,500-00 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಗರಣ 5 ಎಕರೆಗೆ ಪರವಾನಗಿ ಪಡೆದಿದ್ದು 50 ಎಕರೆ ಕಲ್ಲು ಹೊಡೆಯುತ್ತಿದ್ದಾರೆ. ಪಾಪ ಕನ್ನಂಬಾಡಿ ಕಟ್ಟೆ ಕಟ್ಟಲಿಕ್ಕೆ ಬಂದಿದ್ದರು. ಅಷ್ಟು ಸಾರಿ ವಿನಂತಿಸಿದ್ದೇನೆ. ಇಡೀ ಕನ್ನಂಬಾಡಿ ಕಟ್ಟೆ ಕಟ್ಟಿದಂಥ ಕಾವೇರಿಪುರದಲ್ಲಿ ಬೋವಿ ಜನಾಂಗದವರು ಇದ್ದಾರೆ. ಅವರ ದೇಹವನ್ನು ನೀವೇನಾದರೂ operation ಮಾಡಿ ತೆಗೆದರೆ ಇಷ್ಟಿಷ್ಟು ಕಬ್ಬಿಣ ಸಿಗುತ್ತದೆ. ಅವರಿಗೆ 10-10 ಗುಂಟೆ ಕೊಟ್ಟಿಲ್ಲ. ಕಾವೇರಿಪುರದಲ್ಲಿರುವಂಥ ಕನ್ನಂಬಾಡಿ ಕಟ್ಟೆ ಕಟ್ಟಿದಂಥ ವಂಶ ಅವರದು. ಬೀದಿ ಭಿಕಾರಿಗಳಾಗಿದ್ದಾರೆ. ಯಾವ ಮೌಲ್ಯಗಳ ಮೇಲೆ ಸರ್ಕಾರ ನಡೆಯುತ್ತಿದೆ. ದಲಿತರನ್ನು ಹೇಗೆ ರಕ್ಷಣೆ ಮಾಡುತ್ತೀರಿ?

19-06-2017

ಶ್ರೀ ಎನ್.ಎಚ್.ಕೋನರೆಡ್ಡಿ: Legal ಆಗಿ ಒಂದೇನಾದರೂ ಒಂದು ತೀರ್ಮಾನ ಮಾಡಿ ಸರ್. ರೈತರ ಸಮಸ್ಯೆ, ಎಲ್ಲ ಸಮಸ್ಯೆ ಹೀಗಾದರೆ ಹೇಗೆ? One trip ಮರಳು ಸಿಗುವುದಿಲ್ಲ. ರೈತರಿಗೆ ಮಾತ್ರ ಬೇಕಾದ ಹಾಗೆ. Illegally ಬೇಕಾದ್ದನ್ನು ಮಾಡಬಹುದು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಇದು ಬಹಳ ದೊಡ್ಡ ಅವಮಾನ. ನಮಗೂ ಅವಮಾನ, ಸರ್ಕಾರಕ್ಕೂ ಅವಮಾನ.

ಶ್ರೀ ಬಿ.ಸುರೇಶ್‌ಗೌಡ: ನೀವು ತೆಗೆದು ನೋಡಿ, ನಮ್ಮ ಸರ್ಕಾರಗಳು ಇದ್ದಾಗ ಈ ರೀತಿ ಇರಲಿಲ್ಲ. ನಿಮ್ಮ ಕಾಂಗ್ರೆಸ್ ಸರ್ಕಾರ ಬಂದ ಮೇಲೆ maximum ತುಮಕೂರು ಜಿಲ್ಲೆಯಲ್ಲಿ ಗಣಿಗಳ ಮಾಫಿಯಾಗಳಾಗಿವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಸರ್ ನಮಗೆ ಗೊತ್ತಿಲ್ಲ. COD.. ನೀವು ಮಾಡುತ್ತೇವೆ ಎಂದು ಹೇಳಿ ನಾನು ಕುಳಿತುಕೊಳ್ಳುತ್ತೇನೆ. ಇಲ್ಲದಿದ್ದರೆ ನಾನು ಇಲ್ಲಿ ಕುಳಿತುಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಪುಟ್ಟಣ್ಣಯ್ಯನವರೇ ಈ ವಿಷಯವನ್ನು ಎರಡು ಮೂರು ಸಾರಿ ಪ್ರಸ್ತಾಪ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಅಧಿಕಾರಿಗಳ ಒಂದು ಸಭೆಯನ್ನು ಸಹ ಮಾಡಿದ್ದೇನೆ. ಇದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕು ಮತ್ತು CID enquiry ಸಹ ಮಾಡಬೇಕು ಎನ್ನುವುದರ ಬಗ್ಗೆ ಚರ್ಚೆಯನ್ನು ಸಹ ಮಾಡಿದ್ದೇವೆ. ಆದರೆ ಈಗ latest ಆಗಿ ಏನಾಗಿದೆ ಎನ್ನುವ ಬಗ್ಗೆ ಮಾಹಿತಿಯನ್ನು ತರಿಸಿ ತಮಗೆ ಉತ್ತರವನ್ನು ಕೊಡುತ್ತೇನೆ. ಅಲ್ಲಿ ಈಗ ರಾಜಧನ ನಷ್ಟವಾಗುತ್ತಿದೆ ಅಲ್ಲಿ ಇಲ್ಲದ ಅವ್ಯವಹಾರ ನಡೆಯುತ್ತಿದೆ ಎಂಬ ವಿಚಾರ ಇರುವುದರಿಂದ ಅದರ ಕಡೆ ಗಮನ ಹರಿಸಿ ನಾನು ಇವತ್ತೇ ಉತ್ತರವನ್ನು ಕೊಡುತ್ತೇನೆ.

ಶ್ರೀ ಎನ್.ಹೆಚ್.ಕೋನರೆಡ್ಡಿ: Legal ಆಗಿ pass ತೆಗೆದುಕೊಂಡು ಬಂದರೆ ಮೂರು case ಕೊಡುತ್ತಾರೆ. Illegal ಇದ್ದರೆ ಬೇಕಾದಷ್ಟು trip ಬರಬಹುದು.

ಶ್ರೀ ಕೆ.ಎಸ್.ಮಂಜುನಾಥಗೌಡ: ಅಧ್ಯಕ್ಷರೆ, ಮಾನ್ಯ ಸಚಿವರ ಗಮನಕ್ಕೆ ತರುವುದು, crushers ಏನು allot ಮಾಡುತ್ತೇವೆಲ್ಲಾ ಆ ಕಮಿಟಿಯಲ್ಲಿ ಶಾಸಕರು ಇರುವುದಿಲ್ಲ. ಏನಾದರೂ

blast ಮಾಡಿದರೆ ತೊಂದರೆ ಆದರೆ ಜನ ನಮ್ಮ ಹತ್ತಿರ ಬರುತ್ತಾರೆ. ನಮ್ಮ ಗಮನಕ್ಕೆ ಬರದೆ District ನಲ್ಲಿ ಒಂದು ಕಮಿಟಿ ಇಟ್ಟುಕೊಂಡು ಅವರೇ ಕೊಟ್ಟುಬಿಡುತ್ತಾರೆ. Crushers ಹಾಕಬಹುದು, ಬಂಡೆ ಹಾಕಬಹುದು ಅಲ್ಲಿ ರಸ್ತೆಗಳೆಲ್ಲ ಕಿತ್ತುಹೋಗಿ ಇಡೀ heavy tonnage trucks ಹೋಗುತ್ತವೆ. ನಮ್ಮ ರಸ್ತೆಗಳಿಗೆ ಅದನ್ನು ತಡೆದುಕೊಳ್ಳುವ capacity ಕೂಡ ಇರುವುದಿಲ್ಲ. ನಮ್ಮ ಗಮನಕ್ಕೆ ಬರದೆ ನಾವು ಆ ಕಮಿಟಿಯಲ್ಲಿಯೂ ಇರದೆ ಈ crushers ಬೇಕಾಬಿಟ್ಟಿ ಮಾರಿಕೊಂಡು, ಬೇಕಾಬಿಟ್ಟಿ ಕೊಡುತ್ತಿದ್ದಾರೆ. ಆ ಕಮಿಟಿಯೊಳಗೆ permanent ಆಗಿ ಜನಪ್ರತಿನಿಧಿಗಳು ಇರಲೇಬೇಕು. ಇಲ್ಲದಿದ್ದರೆ ತೊಂದರೆಯಾಗುತ್ತದೆ.

ಅಧ್ಯಕ್ಷರು: ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. District level ನಲ್ಲಿ ಒಂದು ಕಮಿಟಿ ಮಾಡಿದ್ದೀರಿ. ವಿಶೇಷವಾಗಿ sand, crushers ಎಲ್ಲಾ. ಜಿಲ್ಲಾಧಿಕಾರಿ ಅಧ್ಯಕ್ಷರು ಇರುತ್ತಾರೆ. ಜನಪ್ರತಿನಿಧಿಗಳು ಯಾರೂ ಇರುವುದಿಲ್ಲ. ಅವರು ಜನಪ್ರತಿನಿಧಿಗಳ ಮಾತು ಸಹ ಕೇಳುವುದಿಲ್ಲ. ಮನಸ್ಸಿಗೆ ಬಂದಂತೆ ಮಾಡುತ್ತಾರೆ. ಎಲ್ಲಾ ಕಡೆ ಇವತ್ತು ಮರಳು ಸಿಗದಂಥ ಪರಿಸ್ಥಿತಿ ಆಗಿದೆ. ಅದಕ್ಕೆ consider ಮಾಡಿ ಜನಪ್ರತಿನಿಧಿಗಳು ಅದರಲ್ಲಿದ್ದರೆ ತಪ್ಪೇನಿದೆ? ಎಲ್ಲಾ ಪಾರ್ಟಿಯವರು ಇರುತ್ತಾರೆ, ಏಕೆ ಮಾಡಬಾರದು? ವಿಚಾರ ಮಾಡಿ ನೋಡಿ.

ಶ್ರೀ ಬಿ.ಸುರೇಶ್‌ಗೌಡ: ಮಾನ್ಯ ಅಧ್ಯಕ್ಷರೆ, ಅದು ಶಾಸನವಾಗಿದೆ. ಇಲ್ಲಿ ನಾವು discuss ಮಾಡಿದಾಗ ಜನಪ್ರತಿನಿಧಿಗಳು ಇರಬೇಕೆಂದು ನಾನು ಮಾತನಾಡಿದೆ. ಇಲ್ಲಿ ಇದ್ದವರೆಲ್ಲಾ ಬೇಡ ಎಂದು ಹೇಳಿದರು. ಅದನ್ನು ಪುನಃ ಪರಿಶೀಲನೆ ಮಾಡಬೇಕೆಂದು ವಿನಂತಿ.

ಅಧ್ಯಕ್ಷರು: ಎಲ್ಲ ಜನಪ್ರತಿನಿಧಿಗಳು ಅದರಲ್ಲಿ ಇರಬೇಕೆಂದು ಸರ್ಕಾರಕ್ಕೆ ನಾನು ಸಹ ನಿಮ್ಮೆಲ್ಲರ ಪರವಾಗಿ ಒತ್ತಾಯ ಮಾಡುತ್ತೇನೆ, ನೋಡೋಣ.

ಶ್ರೀ ವಿಶ್ವನಾಥ ಚಂದ್ರಶೇಖರ್ ಮಾಮನಿ: ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿ ಕುರುಬಗಟ್ಟಿ ಮತ್ತು ಸಪ್ತಗಿರಿ ಎಂಬ ಒಂದು ರಸ್ತೆ ಇದೆ. 6.ಕಿ.ಮೀ.ನಷ್ಟು ರಸ್ತೆ ರಿಪೇರಿ ಮಾಡಬೇಕಾದರೆ ಸುಮಾರು

6.00 ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡಿದರೂ ರಿಪೇರಿ ಆಗುವುದಿಲ್ಲ. 40 ಟನ್-50 ಟನ್ ತಂದು ಮರಳು ಹಾಕುತ್ತಾರೆ. ಎಲ್ಲಿಂದ ರಸ್ತೆ ರಿಪೇರಿ ಆಗುತ್ತದೆ ಅಷ್ಟು ಕಷ್ಟವಾಗಿದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಈಗ ವಿಶೇಷವಾಗಿ mines and minerals ಬಗ್ಗೆ ಒಂದು ಗಂಟೆಯವರೆಗೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಿ. ಕೊನೆಯದಾಗಿ ಎರಡು ಮಾತುಗಳನ್ನು ಹೇಳುತ್ತೇನೆ. ತಾವು Minor Irrigation ಮಂತ್ರಿಯಾಗಿದ್ದೀರಿ ತಮ್ಮಲ್ಲಿ ನಾವು ಕೇಳಿದ್ದೇವೆ. ಇಡೀ ಕರ್ನಾಟಕದ ಎಲ್ಲ ಕೆರೆಗಳ ಹೂಳು ಎತ್ತಿಸುವುದಕ್ಕೆ ಒಂದು plan ಮಾಡಿ. ಇಟಾಚಿ ಬಾಡಿಗೆಗೆ ತೆಗೆದುಕೊಂಡು ಅವರು ಎತ್ತುವುದಕ್ಕೆ ಏನಾದರೂ ಮಾಡಿ ಅವಕಾಶ ಮಾಡಿಸಿ ಕೊಡಿ. ಬಾಡಿಗೆಗೆ ಕೊಡಿಸಿ ಸಾಕು. So ವಿಳಂಬವಾಗುತ್ತಿದೆ. ಆಗಲಿ, ನಾನೇ ಉದಾಹರಣೆಗೆ ಎರಡು ಕೆರೆಗಳಲ್ಲಿ ಹೂಳು ತೆಗೆಸಿದ್ದೇನೆ. 20.00 ಲಕ್ಷ ರೂಪಾಯಿಗಳು ಖರ್ಚಾಗಿದೆ. 48,000 ಟಿಪ್ಪರ್‌ಗಳಿಗೆ ಡೀಸೆಲ್ ಹಾಕಿಸಿ ತುಂಬಿಸಿ ಕಳುಹಿಸಿದ್ದೇವೆ. ನೀವು ಅದನ್ನೇನಾದರೂ contract ಮಾಡಿದರೆ ಎರಡು ಕೋಟಿ ರೂಪಾಯಿಗಳು ಬರುತ್ತದೆ. ಸ್ವಲ್ಪ ನೀವು ಯಾವುದಾದರೂ ಒಂದು sample ತೆಗೆದುಕೊಂಡು ಮಾಡಿ. ಅಂತರ್ಜಲದ ಬಗ್ಗೆ ತಮ್ಮಲ್ಲಿ ವಿನಂತಿ ಮಾಡುತ್ತೇವೆ. 72 ಲಕ್ಷ ಎಕರೆ ಪಂಪ್‌ಸೆಟ್‌ಗೆ ಪರವಾನಗಿ ಕೊಟ್ಟಿದ್ದೇವೆ. ಯಾವುದೇ water planning ಇಲ್ಲ. ಕೃಷಿ ಹೊಂಡ ಅನ್ನೋದು ಈಗ ತಯಾರು ಮಾಡಿದ್ದೀರಿ. ಯಾವುದದು? ಗೋಕಟ್ಟೆ concept ಅಷ್ಟೇ ಅದು. 365 lift irrigation ಏನಾಗಿದೆ?

ಶ್ರೀ ಬಿ.ಸುರೇಶ್‌ಗೌಡ: ಕೃಷಿ ಹೊಂಡದಲ್ಲಿ ಎಷ್ಟು ಜನ ಸತ್ತಿದ್ದಾರೆ ಗೊತ್ತೇ. ಗ್ರಾಮೀಣ ಪ್ರದೇಶದಲ್ಲಿ ಕೃಷಿ ಹೊಂಡ ಸಾಯುವ ಹೊಂಡ ಆಗಿದೆ.

ಅಧ್ಯಕ್ಷರು: conclude ಮಾಡಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಎರಡು ನಿಮಿಷ, ಅದರ ಮೇಲೆ ಮಾತನಾಡುವುದಿಲ್ಲ. Minor irrigation is a major irrigation ಎಂದು declare ಮಾಡಬೇಕು. ಇಲ್ಲದಿದ್ದರೆ ಈ ವರ್ಷ ಬಂದಾಗ ಇನ್ನೊಂದು ವರ್ಷ ಏನಾದರೂ problem ಬಂದರೆ ವಿಧಾನಸೌಧದಿಂದ ನೀರು ಬಿಡುವುದಕ್ಕೆ ಸಾಧ್ಯವಿಲ್ಲ. ಒಟ್ಟಿಗೆ ಜನರೆಲ್ಲ ಸೇರಿ ಒಟ್ಟಿಗೇ ಹೋಗಿಬಿಡಿ ಎಂದು

ನಮಗೆ ನೀರು ಬಿಟ್ಟುಬಿಡುತ್ತಾರೆ. ಆದ್ದರಿಂದ ತಾವು ದಯವಿಟ್ಟು ಆವತ್ತಿನ ದಿನ ಹೇಳಿದಿರಿ, ಹೊಸ ಕೆರೆಗೆ plan ಇಲ್ಲ. 42 ಸಾವಿರ ಕೆರೆಗಳಲ್ಲಿ 28 ಸಾವಿರ ಕೆರೆಗಳು ಉಳಿದುಕೊಂಡಿವೆ. 38 ಸಾವಿರ ಜಿಲ್ಲಾ ಪಂಚಾಯಿತಿಗಳದ್ದು ಇದೆ ಎಂದು ಹೇಳಿದಿರಿ. ಏಕೆ ಹೂಳೆತ್ತಿಸಬಾರದು? ಕೆರೆ ಸಂಜೀವಿನಿ ಎಂದು ಮಾಡಿದ್ದೀರಿ. ಎಲ್ಲಾ ಕಡೆ ಮರಳು slab ಇದೆ, ನೀವು ಏಕೆ identify ಮಾಡಲಿಲ್ಲ? Royalty fix ಮಾಡಿ ಮಾರಿ. ಅದರಿಂದ ಬಂದ ಹಣದಲ್ಲಿ ಸಮಗ್ರ ಕೆರೆಗಳನ್ನು ರಕ್ಷಣೆಮಾಡಿ. ಸರ್ ತಮ್ಮ ಹತ್ತಿರ ವಿನಂತಿ.. ಒಂದು ಪಂಚಾಯಿತಿಗೆ ಎಷ್ಟು ನೀರು ಬೇಕು ಎಂದು ಮೋಡಿಕೊಂಡು ಬರಲಿಕ್ಕೆ ನಿಮ್ಮ ಇಂಜಿನಿಯರ್‌ಗೆ ಹೇಳಿ. ಕೃಷಿ ಇಲಾಖೆ, minor irrigation ಇಬ್ಬರೂ ಒಂದಾಗಿ ಆಡಳಿತ ಮಾಡದಿದ್ದರೆ ಹೇಗೆ? ಒಂದು ಪಂಚಾಯಿತಿಗೆ 1000 ಗಿಡಗಳನ್ನು ನೆಡಿಸಬೇಕು. ನೀರು ಇಷ್ಟು ಸಂಗ್ರಹ ಮಾಡಬೇಕೆಂದು ಏಕೆ plan ಮಾಡಬಾರದು?

ಅಧ್ಯಕ್ಷರು: ಓಕೆ, ಪುಟ್ಟಣ್ಣಯ್ಯ conclude ಮಾಡಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಸನ್ಮಾನ್ಯ ಸಭಾಧ್ಯಕ್ಷರೆ, ಇಷ್ಟು ಸಮಯ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ದಯವಾಡಿ ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಬೇಕೆಂದು ಸರ್ಕಾರದಲ್ಲಿ ವಿನಂತಿಸುತ್ತೇನೆ.

ಅಧ್ಯಕ್ಷರು: ಸಿದ್ದು ನ್ಯಾಮಗೌಡ ಐದು ನಿಮಿಷ ಮಾತನಾಡಿ.

ಶ್ರೀ ಸಿದ್ದು ಬಿ.ನ್ಯಾಮಗೌಡ(ಜಮಖಂಡಿ): ಅಧ್ಯಕ್ಷರೆ, ಇಲಾಖಾವಾರು ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. ವಿಶೇಷವಾಗಿ ಬಹಳಷ್ಟು ಶಾಸಕರು ಬರಗಾಲದ ಬಗ್ಗೆ, ಕೃಷಿ ಬಗ್ಗೆ, ನೀರಾವರಿ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಆದರೆ ನಾನು ಮೂಲಭೂತ ಸೌಕರ್ಯ ಬಗ್ಗೆ ಒಂದಿಷ್ಟು ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು: ಸ್ವಲ್ಪ brief ಆಗಿ ಮಾತನಾಡಿ.

ಶ್ರೀ ಸಿದ್ದು ಬಿ.ನ್ಯಾಮಗೌಡ: ಇವತ್ತು ಸುಮಾರು 15-20 ವರ್ಷಗಳಿಂದ ನಮ್ಮ ಹುಬ್ಬಳ್ಳಿಯಿಂದ ಬೆಂಗಳೂರಿಗೆ ಬರಬೇಕಾದರೆ ನಮ್ಮ ರಸ್ತೆ ಅಷ್ಟು ಸರಿಯಿರಲಿಲ್ಲ. ಆ ಸಂದರ್ಭದಲ್ಲಿ ಕನಿಷ್ಠ ಪಕ್ಷ ಹುಬ್ಬಳ್ಳಿ

ಬಿಟ್ಟು ಬೆಂಗಳೂರು ತಲುಪುವಾಗ 1-2 accident ಸಾಮಾನ್ಯವಾಗಿ ಆಗುತ್ತಿತ್ತು. ಆ road double lane, four lane ಮಾಡಿರಬೇಕು, ಈಗ six lane ಮಾಡುತ್ತಿದ್ದಾರೆ. ಆದ್ದರಿಂದ ಸಾಕಷ್ಟು ಅನಾಹುತಗಳು ತಪ್ಪಿವೆ.

(ಮುಂದು)

19.06.2017 / 1.40 (20)/ JB-SP (VR)

ಶ್ರೀ ಸಿದ್ದು ಬಿ.ನ್ಯಾಮಗೌಡ (ಮುಂದು . . .): ಅದರಿಂದ ಸಾಕಷ್ಟು ಅನಾಹುತಗಳು ತಪ್ಪಿವೆ. ಅದೇ ರೀತಿಯಾಗಿ ಇವತ್ತು ನಮ್ಮ ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಬೆಳಗಾಂ ಜಿಲ್ಲೆಯಿರಬಹುದು, ಬಿಜಾಪುರ ಜಿಲ್ಲೆಯಿರಬಹುದು, ಬಾಗಲಕೋಟೆ ಜಿಲ್ಲೆಯಿರಬಹುದು, ಕೊಪ್ಪಳ ಜಿಲ್ಲೆಯಿರಬಹುದು, ಧಾರವಾಡ ಜಿಲ್ಲೆಯಿರಬಹುದು, ಈ ಎಲ್ಲಾ ಜನರು ಬೆಂಗಳೂರು ತಲುಪಬೇಕಾದರೆ ಸಾಧಾರಣವಾಗಿ ಹೆಚ್ಚು-ಕಡಿಮೆ ನಮ್ಮ ಜಮಖಂಡಿಯಾಗಲಿ, ಇಂಡಿಯಾಗಲಿ, ಅಥಣಿಯಾಗಲಿ, ಸುಮಾರು 600-700 ಕಿ.ಮೀ. ದೂರವಾಗುತ್ತದೆ. ಸುಮಾರು 12-13 ತಾಸುಗಳ ಕಾಲ ಪ್ರವಾಸ ಮಾಡಿ ನಾವು ಇಲ್ಲಿಗೆ ಬರಬೇಕಾಗುತ್ತದೆ. ಇದು ಬಹಳ simple ಇದೆ. ಈಗ ರೈಲ್ವೆ ಲೇನ್ ಬಗ್ಗೆ ಸಾಕಷ್ಟು ಮುಂಚಿತವಾಗಿ ಕೂಡ ನಾನು 2-3 ಬಾರಿ ಮಾತನಾಡಿದ್ದೇನೆ. ಆದರೂ ಕೂಡ ಎಷ್ಟೋ ಪ್ರಯೋಜನವಾಗಬೇಕಾಗಿತ್ತು, ಆಗಿಲ್ಲ. ಕುಡುಚಿ-ಬಾಗಲಕೋಟೆಕ್ಕೆ ಹೊಸ ಲೇನ್ 2010-11ರ central budget ನಲ್ಲಿ ಮಂಜೂರಾಗಿದೆ. ಸುಮಾರು ನಾವು 7 ವರ್ಷಗಳನ್ನು ಕಳೆದಿದ್ದೇವೆ. ಆದರೆ, ಕಳೆದರೂ ಕೂಡ ಇನ್ನೂ ಭೂಸ್ವಾಧೀನ ಕಾರ್ಯಕ್ರಮ ನಮ್ಮಲ್ಲಿ ಪೂರ್ಣವಾಗಿಲ್ಲ. ಆದ್ದರಿಂದ, ಬಹಳಷ್ಟು ಕಾರ್ಯ ವಿಳಂಬವಾಗುತ್ತಿದೆ. ಕೇವಲ ಇಲ್ಲಿಯವರೆಗೆ 33 ಕಿ.ಮೀ. ಲೇನ್ ಮಾಡಿದ್ದಾರೆ. ಇನ್ನೂ 149 ರಲ್ಲಿ 33 ಕಿ.ಮೀ. ಹೋಗಿ ಉಳಿದದ್ದು ಹಾಗೆಯೇ ಇದೆ. ಈಗ ಭೂಸ್ವಾಧೀನ ಕಾರ್ಯಕ್ರಮವನ್ನು ನಮ್ಮ ಜಮಖಂಡಿ ACಯವರು ಪ್ರಾರಂಭ ಮಾಡಿದ್ದಾರೆ. 265 ಎಕರೆಗೆ ಎಲ್ಲಾ ರೆಡಿಯಾಗಿದೆ, ಅದಕ್ಕೆ ಸರ್ಕಾರದಿಂದ ದುಡ್ಡು ಕೊಟ್ಟಿಲ್ಲ. ಹಣ ಬಿಡುಗಡೆ ಮಾಡಿದರೆ ಇನ್ನೂ 265 ಎಕರೆ ಅವರಿಗೆ ಭೂಸ್ವಾಧೀನವಾಗುತ್ತದೆ. ಹೆಚ್ಚು-ಕಡಿಮೆ ಬಾಗಲಕೋಟೆ ಜಿಲ್ಲೆಯಲ್ಲಿ 1897 ಎಕರೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಭೂಸ್ವಾಧೀನವಾಗಬೇಕು. ಬೆಳಗಾಂ ಜಿಲ್ಲೆಯಲ್ಲಿ 526 ಎಕರೆ ಇದೆ. ಬೆಳಗಾಂ ಜಿಲ್ಲೆಯಲ್ಲಿ ಒಂದು ಎಕರೆ ಕೂಡ ಭೂಸ್ವಾಧೀನವಾಗಿಲ್ಲ. ಈಗಾಗಲೇ 7 ವರ್ಷಗಳಾಯಿತು, ಒಂದು ಎಕರೆಯನ್ನು ಕೂಡ ಅವರು ಭೂಸ್ವಾಧೀನ ಮಾಡಿಕೊಟ್ಟಿಲ್ಲ. ಹಾಗಾಗಿ ಲೇನ್ ಆಗಬೇಕಾದರೆ ಇನ್ನೂ 4-5 ವರ್ಷಗಳು ಮುಂದಕ್ಕೆ ಹೋಗುವ ಸಂಭವವಿದೆ. ಆದ್ದರಿಂದ, ಆ ಕಂದಾಯ ಇಲಾಖೆಯವರು ಬೆಳಗಾಂ ಜಿಲ್ಲೆಯ Collector ರವರು ಈ ಕುರಿತು ಸ್ವಲ್ಪ ಗಮನಹರಿಸಿ ಆದಷ್ಟು ಬೇಗ ಭೂಸ್ವಾಧೀನ ಮಾಡಿಕೊಟ್ಟರೆ ಈ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದೇ ರೀತಿಯಾಗಿ ನಮ್ಮ ಬಾಗಲಕೋಟೆ ಜಿಲ್ಲೆಯಲ್ಲಿ ಕೂಡ ಹಣಕಾಸಿನ ನೆರವು ಬೇಕಾಗಿದೆ. ಇಲ್ಲಿಯವರೆಗೆ ಸಾಧಾರಣವಾಗಿ ಹೆಚ್ಚು-ಕಡಿಮೆ Central Government 122 ಕೋಟಿ ರೂಪಾಯಿಗಳ ಹಣ ಬಿಡುಗಡೆ ಮಾಡಿದೆ. ನಮ್ಮ ಕರ್ನಾಟಕ ಸರ್ಕಾರ ಬಾಗಲಕೋಟೆ ಜಿಲ್ಲೆಗೆ ರೂ.70 ಕೋಟಿಗಳನ್ನು ಕೊಟ್ಟಿದೆ, ಮತ್ತೆ ಬೆಳಗಾಂ ಜಿಲ್ಲೆಗೆ ರೂ.23 ಕೋಟಿಗಳನ್ನು ಕೊಟ್ಟಿದೆ ಹಾಗೂ ಚಿಕ್ಕೋಡಿ ವಿಭಾಗಕ್ಕೆ ರೂ.15 ಕೋಟಿ ಕೊಟ್ಟಿದೆ. ಹೆಚ್ಚು ಕಡಿಮೆ ಇನ್ನೂ ದುಡ್ಡಿನ ಅವಶ್ಯಕತೆಯಿದೆ. ಅದನ್ನು ಕೊಟ್ಟು ಆದಷ್ಟುಬೇಗ ಈ ಲೇನ್‌ಅನ್ನು ಮಾಡಬೇಕು. ಇದರ ಜೊತೆಗೆ ಇವತ್ತು ಬೆಳಗಾಂನಿಂದ ಧಾರವಾಡಕ್ಕೆ ಹೋಗಬೇಕಾದರೆ ನಮಗೆ 55 ಕಿ.ಮೀ by road National Highwayವರೆಗೆ ಹೋಗುತ್ತದೆ. ಆದರೆ, ಬೆಳಗಾಂ ಹೋಗುವಾಗ ರೈಲ್ವೆನವರು ಲೋಂಡಾಕ್ಕೆ ತೆಗೆದುಕೊಂಡು ಹೋಗುತ್ತಾರೆ, ಲೋಂಡಾದಿಂದ ಮತ್ತೆ ಹುಬ್ಬಳ್ಳಿಗೆ ಬರುತ್ತದೆ. ಹಾಗಾಗಿ 122 ಕಿ.ಮೀ. ಆಗುತ್ತದೆ. 55 ಕಿ.ಮೀ. by road ತೆಗೆದುಕೊಳ್ಳುತ್ತದೆ, ರೈಲ್ವೆ ಉಪಯೋಗ ಮಾಡಿದರೆ 122 ಕಿ.ಮೀ. ಆಗುತ್ತದೆ. ಅಲ್ಲಿ ಸಾಧಾರಣ ಹೆಚ್ಚು ಕಡಿಮೆ 70 ಕಿ.ಮೀ. ದೂರವಾಗುತ್ತದೆ. ಆ 70 ಕಿ.ಮೀ. ದೂರ ನಾವು ಸಂಚಾರ ಮಾಡಬೇಕಾದರೆ ಸಾಧಾರಣ ಹೆಚ್ಚು-ಕಡಿಮೆ ಒಂದೂವರೆ ಗಂಟೆ- ಎರಡು ಗಂಟೆಯಾಗುತ್ತದೆ. ಇದನ್ನು shortcut ಮಾಡಬೇಕು. ಅದೇ ರೀತಿಯಾಗಿ ಮುಂದೆ ದಾವಣಗೆರೆಯಿಂದ ತುಮಕೂರಿನವರೆಗೆ ರೋಡ್ ಮಾಡಬೇಕು. ಈಗ ಅದು ಕೂಡ ರೈಲ್ವೆ ಬಜೆಟ್‌ನಲ್ಲಿ ಬರೆದಿದೆ. ಆದರೆ, ರೈಲ್ವೆ ಬಜೆಟ್‌ನಲ್ಲಿ ಬಂದರೂ ಕೂಡ ಇಲ್ಲಿಯವರೆಗೆ 109 ಎಕರೆಗೆ ಮಾತ್ರ ಭೂಸ್ವಾಧೀನ ಆಗಿದೆ, ಬಹಳ slow ನಡೆದಿದೆ. ಈಗ ಮಾನ್ಯ ಅಧ್ಯಕ್ಷರೆ, ತಾವೇ ರಾಣಿಬೆನ್ನೂರಿನಿಂದ ಬೆಂಗಳೂರಿಗೆ ಬರಬೇಕಾದರೆ ರೈಲ್ವೆ ಮೂಲಕ ಬಂದರೆ ಏನಾಗುತ್ತದೆ? ರಾಣಿಬೆನ್ನೂರಿನಿಂದ

ದಾವಣಗೆರೆ, ದಾವಣಗೆರೆಯಿಂದ ಚಿತ್ರದುರ್ಗ, ಚಿತ್ರದುರ್ಗದಿಂದ ತುಮಕೂರಿಗೆ ಬರಬೇಕು. ದಾವಣಗೆರೆಯಿಂದ ನೀವು ಸೀದಾ ಅರಸೀಕೆರೆಗೆ ಹೋಗುತ್ತೀರಿ, ಅರಸೀಕೆರೆಯಿಂದ ಮತ್ತೆ ತುಮಕೂರಿಗೆ ಬರುತ್ತೀರಿ. ವಿನಾಕಾರಣ ಅಲ್ಲಿಗೆ ಹೋಗುವ ಅವಶ್ಯಕತೆ ಬರುವುದಿಲ್ಲ. ಅರಸೀಕೆರೆ ಹಾಗೂ ತುಮಕೂರಿಗೆ ಹೋಗುವ ಅವಶ್ಯಕತೆ ಬರುವುದಿಲ್ಲ. ಆದರೆ, ನಾವು ರೈಲ್ವೆ ಇಲಾಖೆಗೆ ಹಣ ಪಾವತಿಸಿ ಪ್ರಯಾಣ ಮಾಡುತ್ತೇವೆ. ದುಡ್ಡು ಲಾಸ್ ಆಗುವುದರ ಜೊತೆಗೆ ಟೈಮ್ ಸಹ waste ಆಗುತ್ತದೆ. ಅದಕ್ಕೋಸ್ಕರ ಸುಮಾರು ಹುಬ್ಬಳ್ಳಿ ನಗರವನ್ನು ಬೆಳೆಸಬೇಕೆನ್ನುವ ದೆಸೆಯಿಂದ, industries ಬೆಳೆಸಬೇಕೆಂದು ನಮ್ಮ ಸರ್ಕಾರ ಬಹಳಷ್ಟು ವಿಚಾರಗಳನ್ನು ಇಟ್ಟುಕೊಂಡಿದ್ದರೂ ಸಹ ಏನು ಪ್ರವಾಸ ಮಾಡುವ distance ಇದೆ, ಅದನ್ನು ಕಡಿಮೆ ಮಾಡುವುದಕ್ಕೆ ಇಲ್ಲಿಯವರೆಗೆ ಪ್ರಯತ್ನ ಮಾಡಿಲ್ಲ. ಹಾಗಾಗಿ ಆ ಲೇನ್‌ಅನ್ನು ಆದಷ್ಟುಬೇಗ ಒಂದು ವರ್ಷದೊಳಗೆ ಮಾಡಿಕೊಡಿ. ಭೂಸ್ವಾಧೀನ ಮಾಡಿಕೊಟ್ಟರೆ ಆ ಲೇನ್‌ಅನ್ನು ಮಾಡುವುದಕ್ಕೆ ಸುಲಭವಾಗುತ್ತದೆ. ಅದರಿಂದ ನಮಗೆ ಎರಡು ತಾಸು ಸಮಯ ಉಳಿತಾಯವಾಗುವುದರ ಜೊತೆಗೆ ದುಡ್ಡು ಸಹ ಉಳಿಯುತ್ತದೆ. ಮತ್ತೆ ಬೆಳಗಾಂನಿಂದ ಧಾರವಾಡ ಲೇನ್ ಸರಿ ಮಾಡಿಕೊಟ್ಟರೆ ಈ ಭಾಗದಲ್ಲಿ ಬರುವಂತಹ ಸುಮಾರು 7-8 ಜಿಲ್ಲೆಗಳವರಿಗೆ, ಅದೂ ಕೂಡ ಅಲ್ಲಿ 80 ಕಿ.ಮೀ. ದೂರವಾಗುತ್ತದೆ, ಹೆಚ್ಚು-ಕಡಿಮೆ 150 ಕಿ.ಮೀ. distance ನಮಗೆ ಕಡಿಮೆಯಾಗುತ್ತದೆ. ನಮ್ಮ ಹಣದ ಖರ್ಚು ಕಡಿಮೆಯಾಗುವುದರ ಜೊತೆಗೆ ಸಮಯವೂ ಸಹ ಉಳಿತಾಯವಾಗುತ್ತದೆ. ಅದಕ್ಕೋಸ್ಕರ ಇದು ಬಹಳ ಮಹತ್ವದ್ದು, ಆದರೆ ಸರ್ಕಾರ ಇದರ ಕಡೆಗೆ ಲಕ್ಷ್ಯ ಕೊಟ್ಟಿಲ್ಲ, ಬಹಳ ವಿಳಂಬವಾಗಿದೆ. ಇದಕ್ಕೆ ನಮ್ಮ ಕರ್ನಾಟಕ ಸರ್ಕಾರದಲ್ಲಿ ಮಾನ್ಯ ಯಡಿಯೂರಪ್ಪನವರನ್ನು ನಾವು ನೆನಪಿಸಿಕೊಳ್ಳಬೇಕು. ಮಾನ್ಯ ಯಡಿಯೂರಪ್ಪನವರು ಇದ್ದಾಗ ನಾವು ಅವರ ಹತ್ತಿರ ಹೋಗಿದ್ದೇವೆ, ಇದಕ್ಕೆ ಒಂದಿಷ್ಟು ಬಜೆಟ್‌ನಲ್ಲಿ ಸಹಾಯ ಮಾಡಬೇಕೆಂದು ಹೇಳಿದಾಗ ಮಾನ್ಯ ಯಡಿಯೂರಪ್ಪನವರು ಪತ್ರ ಕೊಟ್ಟರು, 50% ನಾವು ಕರ್ನಾಟಕದವರು ದುಡ್ಡು ಕೊಡುತ್ತೇವೆ ಮತ್ತು ಜಮೀನು ಕೊಡುತ್ತೇವೆ, ಅವರಿಗೆ ಮಾಡುವುದಕ್ಕೆ ಹೇಳಿದರು. ನಾವು ಆ ಲೆಟರ್‌ಅನ್ನು ಮಾನ್ಯ ಮುನಿಯಪ್ಪನವರಿಗೆ ಕೊಟ್ಟು ಮಮತಾ ಬ್ಯಾನರ್ಜಿಯವರಿಗೂ ಸಹ ಲೆಟರ್‌ಅನ್ನು ಕೊಟ್ಟಾಗ 2010-11ನೇ ಸಾಲಿನ ಬಜೆಟ್‌ನಲ್ಲಿ ಈ ಎಲ್ಲಾ ಲೇನ್‌ಗಳನ್ನು ಸೇರಿಸಿಕೊಂಡರು, ಸರ್ವೆ ಮಾಡುವುದಕ್ಕೆ

ಶುರುವಾಯಿತು. ಸರ್ವೆ ಮಾಡುವುದಕ್ಕೆ ಇವೆಲ್ಲಾ ಅನುಕೂಲಗಳಿವೆ ಸರ್ ಎಂದು ಹೇಳಿದರೂ ಕೂಡ ಭೂಸ್ವಾಧೀನ ಕಾರ್ಯಕ್ರಮ ವಿಳಂಬವಾಗಿರುವುದರಿಂದ ಈ ಲೇನ್ ಆಗುತ್ತಿಲ್ಲ. ಅದೇ ರೀತಿಯಾಗಿ ನಾವು ಜಮಖಂಡಿಗೆ ಬಾಗಲಕೋಟೆಯಿಂದ ಗದಗಕ್ಕೆ ಬರುತ್ತೇವೆ, ಗದಗದಿಂದ ಮತ್ತೆ ಹುಬ್ಬಳ್ಳಿಗೆ ಬರಬೇಕು, ಗದಗದಿಂದ ಹಾವೇರಿಗೆ ಹೋದರೆ ಸರಿಯಾಗುತ್ತಿತ್ತು. ಆದರೆ, ಗದಗ್‌ದಿಂದ ಮತ್ತೆ ಹುಬ್ಬಳ್ಳಿಗೆ ಬರಬೇಕು, ಹುಬ್ಬಳ್ಳಿಯಿಂದ ಮತ್ತೆ ಹಾವೇರಿಗೆ ಹೋಗುತ್ತೇವೆ. ಇಲ್ಲಿ ಸುಮಾರು 40-45 ಕಿ.ಮೀ. ದೂರವನ್ನು ವಿನಾಕಾರಣ ಸುತ್ತುತ್ತೇವೆ. ಅದಕ್ಕೋಸ್ಕರ ಗದಗ್‌ನಿಂದ ಹಾವೇರಿಗೆ ಲೇನ್ ಮಾಡಿದರೆ, ಅದು ಸುಮಾರು 97 ಕಿ.ಮೀ. ಲೇನ್‌ಯಿದೆ. ಆ 97 ಕಿ.ಮೀ. ಲೇನ್‌ಅನ್ನು ನಾವು ಹಾಕಿದರೆ ನಮಗೆ ಸುಮಾರು ಎರಡು ತಾಸು ಟೈಮ್ ಉಳಿಯುತ್ತದೆ. ಹಾಗಾಗಿ ಇವೆರಡೂ ಲೇನ್‌ಗಳನ್ನು ಸರಿ ಮಾಡಿಸಿದರೆ ಹೆಚ್ಚು-ಕಡಿಮೆ 300-330 ಕಿ.ಮೀ. ನಷ್ಟು ಹೊಸ ಲೇನ್ ಮಾಡಬೇಕಾಗುತ್ತದೆ. ರೂ.2,000 ಕೋಟಿಗಳನ್ನು ಸ್ವಲ್ಪ ಹೆಚ್ಚು-ಕಡಿಮೆ ಖರ್ಚು ಮಾಡಿದರೆ ನಮಗೆ ಈ ಉತ್ತರ ಕರ್ನಾಟಕದ ಸುಮಾರು 7-8 ಜಿಲ್ಲೆಗಳ ಜನರಿಗೆ ಬಹಳಷ್ಟು ಪ್ರಯಾಣದಲ್ಲಿ ಅನುಕೂಲವಾಗುವುದರ ಜೊತೆಗೆ ಸಮಯ ಉಳಿಯುತ್ತದೆ. ಸುಮಾರು 10-12 ತಾಸುಗಳ ಕಾಲ ನಾವು ರೈಲ್ವೆ ಉಪಯೋಗ ಮಾಡಿ ಬರಬೇಕು. ಇದೆಲ್ಲಾ ಆದರೆ ಹುಬ್ಬಳ್ಳಿಯಿಂದ ಇಲ್ಲಿಗೆ ಕೇವಲ ನಾಲ್ಕೂವರೆ- ಐದು ತಾಸುಗಳಲ್ಲಿ ಬರಬಹುದು.

ಅಧ್ಯಕ್ಷರು: ಗದಗ್ to ಶಿವಮೊಗ್ಗ via ಹಾವೇರಿ district ಆದರೆ ಬಹಳ ಅನುಕೂಲ.

ಶ್ರೀ ಸಿದ್ದು ಬಿ.ನ್ಯಾಮಗೌಡ: ಹೌದು. ಗದಗದಿಂದ ಹಾವೇರಿ ಮತ್ತೆ ಹಾವೇರಿಯಿಂದ ಮುಂದೆ ರಾಣಿಬೆನ್ನೂರು, ತುಮಕೂರು ಹೀಗೆ ಬಂದುಬಿಡುತ್ತೇವೆ. ಈ ಎರಡೂ ಲೇನ್‌ಗಳನ್ನು ಸರಿಮಾಡಿಕೊಟ್ಟರೆ ಹೆಚ್ಚು ಕಡಿಮೆ ಬಹಳಷ್ಟು ಅನುಕೂಲವಾಗುತ್ತದೆ. Industries ಬೆಳೆಯುವುದಕ್ಕೆ ಅನುಕೂಲವಾಗುವುದರ ಜೊತೆಗೆ ಪ್ರವಾಸಿಗರಿಗೆ ಅನುಕೂಲವಾಗುತ್ತದೆ. ಅದಕ್ಕೋಸ್ಕರ ಸರ್ಕಾರ ಇದರ ಕಡೆಗೆ ಹೆಚ್ಚಿನ ಗಮನ ಕೊಟ್ಟು ಈ ಎರಡೂ ಯೋಜನೆಗಳನ್ನು ತರಬೇಕು ಹಾಗೂ ಕುಡುಚಿ-ಬಾಗಲಕೋಟೆ ಲೇನ್‌ಅನ್ನು ಕೂಡ ತರಬೇಕು ಎನ್ನುವ ದಿಸೆಯಿಂದ ನಾನು ಸರ್ಕಾರಕ್ಕೆ ಈ ಮೂಲಕ ಒತ್ತಾಯ ಮಾಡುತ್ತೇನೆ.

19-06-2017

ಅದರ ಜೊತೆಗೆ ಇವತ್ತು ನೀರಾವರಿ ಬಗ್ಗೆ ಬಹಳಷ್ಟು ಜನರು ಮಾತನಾಡಿದ್ದಾರೆ. ನಮ್ಮಲ್ಲಿ ಪ್ರತಿ ವರ್ಷ ಬಹಳಷ್ಟು ತೊಂದರೆಯಿದೆ. ಕೃಷ್ಣಾ ನದಿ ಮಾರ್ಚ್‌ನಿಂದ ಜೂನ್‌ವರೆಗೆ dry ಆಗುತ್ತದೆ. Dry ಆದ ಬಳಿಕ ನಾವು ಸಹಜವಾಗಿ ಮಹಾರಾಷ್ಟ್ರಕ್ಕೆ ಹೋಗುತ್ತೇವೆ. ಕೊಯಿನಾದಿಂದ ನೀರು ಬಿಡಿಸಿಕೊಂಡು ಬರುವುದಕ್ಕೆ ಹೋಗುತ್ತೇವೆ. ನಮ್ಮ ಸರ್ಕಾರ ಸಹ ಫೋನ್ ಮಾಡಿ ಹೇಳುತ್ತಾರೆ, ಮ್ಯಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡುತ್ತಾರೆ, ದುಡ್ಡು ಕೊಡುತ್ತೇವೆಂದು ಹೇಳುತ್ತಾರೆ, ನೀರು ಕೊಡುತ್ತೇವೆಂದು ಹೇಳುತ್ತಾರೆ, ಪ್ರತಿ ವರ್ಷ ಇಷ್ಟೆಲ್ಲಾ ಚರ್ಚೆಯಾಗುತ್ತದೆ. ಪ್ರತಿ ವರ್ಷ ಮಾರ್ಚ್ ಬಂದ ಬಳಿಕ ನಾವು ಕೇಳುವುದು ಸ್ವಾಭಾವಿಕವಾಗಿದೆ. ಆದ್ದರಿಂದ, ಇದು ಆಗಬಾರದು. ಇದಕ್ಕೆ ಏನಾದರೂ ಒಂದು permanent ವ್ಯವಸ್ಥೆಯಾಗಬೇಕೆಂಬ ದಿಸೆಯಲ್ಲಿ ನಮ್ಮ ಸರ್ಕಾರ ಚಿಂತನೆ ಮಾಡಬೇಕು. ಮಹಾರಾಷ್ಟ್ರ ಸರ್ಕಾರದ ಜತ್ ತಾಲ್ಲೂಕಿನಲ್ಲಿ ಮತ್ತು ಸೊಲ್ಲಾಪುರ್ ಜಿಲ್ಲೆಯಲ್ಲಿ ಕೂಡ ಕುಡಿಯುವ ನೀರಿಗೆ ತೊಂದರೆಯಿದೆ. ಅವರು ಏನು ಹೇಳುತ್ತಾರೆ, ನಮಗೆ ನೀವು ನೀರನ್ನು ಎಷ್ಟು ಕೊಡುತ್ತೀರಿ, ಅಷ್ಟೇ ನೀರನ್ನು ನಾವು ನಿಮಗೆ ಕೊಡುತ್ತೇವೆಂದು ಹೇಳುತ್ತಾರೆ. ಈ ವರ್ಷ ನಮಗೆ ಒಂದು ಬಾರಿಗೆ ಎರಡು ಟಿ.ಎಂ.ಸಿ. ಒಂದು ಬಾರಿಗೆ ಮೂರು ಟಿ.ಎಂ.ಸಿ. ರೀತಿಯಲ್ಲಿ ಕೊಟ್ಟು ಒಟ್ಟಾರೆ 5 ಟಿ.ಎಂ.ಸಿ. ನೀರನ್ನು ನಮಗೆ ಬಿಟ್ಟಿದ್ದಾರೆ. ಆದರೆ, ಈ ವರ್ಷ ಅದಕ್ಕೆ ಚಾರ್ಜ್ ಮಾಡಿಲ್ಲ. ಹೋದ ವರ್ಷ ಎರಡು ಟಿಎಂಸಿ ನೀರು ಕೊಟ್ಟಿದ್ದಾರೆ. ಈ ವರ್ಷ ಹಾಗೂ ಹೋದ ವರ್ಷ ಚಾರ್ಜ್ ಮಾಡಿಲ್ಲ. ಅವರು ಏನು ಹೇಳಿದ್ದಾರೆಂದರೆ, ಇಂತಿಷ್ಟು ನೀರನ್ನು ನಮ್ಮ ಮಹಾರಾಷ್ಟ್ರಕ್ಕೆ ಕೊಡಿ. ಮುಂಚೆ ಒಂದು ಟಿಎಂಸಿ ನೀರನ್ನು ಕೊಟ್ಟರೂ ಸಹ ರೂ.3 ಕೋಟಿಗಳ ಹಣವನ್ನು ಚಾರ್ಜ್ ಮಾಡುತ್ತಿದ್ದರು. ಸುಮಾರು ಪ್ರತಿ ವರ್ಷ ಇಲ್ಲಿಯವರೆಗೆ ನಾವು 7 ಸಲ ಮಹಾರಾಷ್ಟ್ರದಿಂದ ನೀರು ಬಿಡಿಸಿಕೊಂಡಿದ್ದೇವೆ. ನಮ್ಮ ಸರ್ಕಾರ ಈ 7 ವರ್ಷಗಳಲ್ಲಿ ರೂ.25 ಕೋಟಿಗಳನ್ನು ಕೊಟ್ಟಿದೆ. ಈಗ ಎರಡು ವರ್ಷಗಳಲ್ಲಿ ಅವರು ದುಡ್ಡು ತೆಗೆದುಕೊಂಡಿಲ್ಲ. ಅವರೂ ನಮಗೆ ನೀರು ಬೇಕೆಂದು ಹೇಳುತ್ತಾರೆ. ಹಾಗಾಗಿ ಅವರಿಗೂ ನೀರಿನ ಅವಶ್ಯಕತೆಯಿದೆ, ನಮಗೂ ಸಹ ನೀರಿನ ಅವಶ್ಯಕತೆಯಿದೆ. ನಾವು ಮತ್ತು ಮಹಾರಾಷ್ಟ್ರ ಸರ್ಕಾರ ಸೇರಿಕೊಂಡು ಚರ್ಚೆ ಮಾಡಿ ಇದಕ್ಕೆ ಒಂದು permanent ವ್ಯವಸ್ಥೆ ಮಾಡಬೇಕು. ಒಂದು ಪ್ರಪೋಸಲ್ ಏನಿದೆ ಎಂದರೆ, ಏನು ನಮ್ಮ ಜಮಖಂಡಿಯಲ್ಲಿ ಚಿಕ್ಕಪಡಸಲಗಿ ಬ್ಯಾರೇಜ್ ಎಂದು

ಹೇಳುತ್ತೀರಿ, ಈ ಕೆರೆ ತುಂಬುವ ಯೋಜನೆಯಡಿಯಲ್ಲಿ ಬಹಳ ದೊಡ್ಡ ಪೈಪ್‌ಲೈನ್‌ಯಿದೆ. ಅದೇ ರೀತಿಯಾಗಿ ಒಂದು ತುಬುಚಿ-ಬಬಲೇಶ್ವರ ಏತನೀರಾವರಿ ಯೋಜನೆ ಪ್ರಾರಂಭವಾಗುವ ಹಂತದಲ್ಲಿದೆ. ಸುಮಾರು 50-60% ಕೆಲಸ ನಡೆದಿದೆ. ಅಲ್ಲಿಂದ ನೀರನ್ನು ಎತ್ತಿ ಮಹಾರಾಷ್ಟ್ರದ ಸಮೀಪವಿರುವ ಜತ್ ತಾಲ್ಲೂಕಿಗೆ ಕೊಟ್ಟರೆ, ನಾವು ಅಲ್ಲಿ ಒಂದು ಪಾಯಿಂಟ್ ಮಾಡಿ ಸಂಪ್ ಮಾಡಿ ಅಲ್ಲಿಗೆ ನೀರು ಕೊಟ್ಟರೆ ಅವರು ಮಹಾರಾಷ್ಟ್ರದವರು ನೀರನ್ನು ಲಿಫ್ಟ್ ಮಾಡಿಕೊಂಡು ಜತ್ ತಾಲ್ಲೂಕಿಗೆ ಆ ನೀರನ್ನು ಉಪಯೋಗ ಮಾಡಿಕೊಳ್ಳುತ್ತಾರೆ. ಬಾರ್ಡರ್‌ನಲ್ಲಿ ಇರುವಂತಹ ಜತ್ ತಾಲ್ಲೂಕಿನಲ್ಲಿ ಸುಮಾರು 40-50 ಹಳ್ಳಿಗಳಲ್ಲಿ ಕನ್ನಡಿಗರಿದ್ದಾರೆ. ಆ ಕನ್ನಡಿಗರೆಲ್ಲರೂ ಒಂದು ಬಾರಿ 2-3 ತಿಂಗಳುಗಳ ಹಿಂದೆ strike ಮಾಡಿದ್ದರು. ಏನೆಂದರೆ, ಮಹಾರಾಷ್ಟ್ರದಲ್ಲಿರುವ ನಮ್ಮ 40-50 ಹಳ್ಳಿಗಳಿಗೆ ನೀರಿನ ವ್ಯವಸ್ಥೆಯನ್ನು ನೀವು ಮಾಡುತ್ತಿಲ್ಲ. ಅದಕ್ಕೋಸ್ಕರ ಈ 40-50 ಹಳ್ಳಿಗಳನ್ನು ಕರ್ನಾಟಕಕ್ಕೆ ಸೇರಿಸಿ ಎಂದು ಅವರು ಹೋರಾಟ ಮಾಡಿದ್ದರು. ಹೀಗಾಗಿ ಈ ಎಲ್ಲಾ ಹಳ್ಳಿಗಳಿಗೆ ಈ ನೀರಿನಿಂದ ಅನುಕೂಲವಾಗುತ್ತದೆ. ನಾವು ಕೊಯಿನಾ ದಿಂದ ನೀರನ್ನು ನಿಮ್ಮ ಕೃಷ್ಣೆ ನದಿಗೆ ಬಿಡುತ್ತೇವೆ. ಆ ಬಿಟ್ಟಂತಹ ನೀರನ್ನು ನಮಗೆ ಲಿಫ್ಟ್ ಮಾಡಿ ನೀವು ಜತ್ ತಾಲ್ಲೂಕಿಗೆ ಕೊಡಿ ಎಂದು ಕೇಳಿದ್ದಾರೆ. ಈ ರೀತಿಯಾಗಿ ನಮ್ಮ ಇಂಜಿನಿಯರ್ಸ್ ಮತ್ತು ಕಾರ್ಯದರ್ಶಿಗಳು ಸೇರಿ ಮಹಾರಾಷ್ಟ್ರದ ಇಂಜಿನಿಯರ್ಸ್ ಮತ್ತು Irrigation Department Secretaryಯವರ ಜೊತಗೆ ಚರ್ಚೆ ಮಾಡಿ ಏನಾದರೂ ಒಂದು ಒಪ್ಪಂದ ಮಾಡಿಕೊಂಡರೆ ಈ ಸಮಸ್ಯೆ ಜಂದೆರಡು ವರ್ಷಗಳಲ್ಲಿ solve ಆಗಬಹುದು. ಏಕೆಂದರೆ, ಇದು ಬಹಳ ಮಹತ್ವವಾದಂತಹ ವಿಷಯ. ನಮ್ಮ UKP ಯಲ್ಲಿ ಏನು ಆಲಮಟ್ಟಿ ಯೋಜನೆಯಿದೆ, ಇದರ ಎರಡನೆಯ ಹಂತ ಈಗಾಗಲೇ ಮುಗಿದಿದೆ. ಮೂರನೇ ಹಂತದ ಕೆಲಸ ಪ್ರಾರಂಭವಾಗುವುದರಲ್ಲಿದೆ. ಮೂರನೇ ಹಂತದಲ್ಲಿ ಸುಮಾರು ಮತ್ತೆ 76 ಸಾವಿರ ಎಕರೆ ಭೂಮಿ ಉಳಿಯುತ್ತದೆ. ಇಲ್ಲಿಯವರೆಗೆ, ಸುಮಾರು ಒಟ್ಟಾರೆ 2 ಲಕ್ಷ 40 ಸಾವಿರ ಎಕರೆ ಭೂಮಿ ನಮ್ಮದು ಮುಳುಗಿದೆ. 2 ಲಕ್ಷ 40 ಸಾವಿರ ಎಕರೆ ಇರುವುದು ಇನ್ನೂ 4-5 ವರ್ಷಗಳಲ್ಲಿ ಇನ್ನೂ 76 ಸಾವಿರ ಎಕರೆ ಹೋಗುತ್ತದೆ. ಬಹಳ ಫಲವತ್ತಾದ ಜಮೀನು ಅದು. Developed ಜಮೀನು ಅದು. ಅಲ್ಲಿ ಕಬ್ಬು, ಹಣ್ಣು-ಹಂಪಲು ಈ ರೀತಿ ಸಾಕಷ್ಟು ಬೆಳೆ ಬೆಳೆಯುತ್ತಾರೆ. ಅದೆಲ್ಲಾ ಭೂಮಿ ಇನ್ನೂ 4 ವರ್ಷಗಳಲ್ಲಿ ಮುಳುಗಿ ಹೋಗುತ್ತದೆ. ಮುಳುಗಿ

ಹೋಗುವ ಪೂರ್ವದಲ್ಲಿ ರೈತರಿಗೆ ಒಂದಿಷ್ಟಾದರೂ ಅನುಕೂಲವಾಗಲಿ ಎಂದು ನೀರಿನ ವ್ಯವಸ್ಥೆ ಮಾಡಿಕೊಡುವಂತಹ ಅವಶ್ಯಕತೆ ಬಹಳ ಇದೆ.

(ಮುಂದು . . .)

ವಿಸ:19-06-2017 1-50 (21) ಎಂಕೆಕೆ:ಎಸ್ಎಸ್‌ಡಿ

ಶ್ರೀ ಸಿದ್ದು ಬಿ. ನ್ಯಾಮಗೌಡ(ಮುಂದು)

ಬಹಳ ಫಲವತ್ತಾದ ಜಮೀನು, developed ಜಮೀನಿದೆ. ಅಲ್ಲಿ ಕಬ್ಬಿನ ಬೆಳೆ, ಹಣ್ಣು ಹಂಪಲು ಈ ರೀತಿ ಸಾಕಷ್ಟು ಬೆಳೆ ಬೆಳೆಯುತ್ತಾರೆ. ಅವೆಲ್ಲ ಭೂಮಿ 4 ವರ್ಷಗಳಲ್ಲಿ ಮುಳುಗಿ ಹೋಗುತ್ತವೆ. ಅವು ಮುಳುಗಿಹೋಗುವ ಪೂರ್ವದಲ್ಲಿ ಸ್ವಲ್ಪವಾದರೂ ರೈತರಿಗೆ ಅನುಕೂಲವಾಗಲಿ ಎಂದು ತಿಳಿದುಕೊಂಡು ನೀರಿನ ವ್ಯವಸ್ಥೆ ಮಾಡಿಕೊಡುವುದು ಬಹಳ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಸರ್ಕಾರ ಚಿಂತನೆ ಮಾಡಿಕೊಂಡು, ಮಹಾರಾಷ್ಟ್ರ Government Irrigation Secretary, Karnataka Irrigation Secretary ಮಟ್ಟದಲ್ಲಿ ಚರ್ಚೆಯಾಗಿ, ಒಂದು ಯೋಜನೆಗೆ ರೂಪುರೇಷೆ ಮಾಡಿಕೊಂಡು, ಇಲ್ಲಿನ Irrigation Minister ಮತ್ತು ಅಲ್ಲಿನ Irrigation Minister ಚರ್ಚೆ ಮಾಡಿ, ಮಾನ್ಯ ಮುಖ್ಯಮಂತ್ರಿಯವರ ಜೊತೆ ಮಾತನಾಡಿ ಒಂದು ಒಪ್ಪಂದ ಮಾಡಿಕೊಟ್ಟರೆ, ಇದೊಂದು permanent ವ್ಯವಸ್ಥೆಯಾಗುತ್ತದೆ. ನಾವು ಪ್ರತಿವರ್ಷ ಮಹಾರಾಷ್ಟ್ರಕ್ಕೆ ನೀರು ಬಿಡಿ ಎಂದು ಹೇಳುವುದು, ಆಗ ಕಾಂಗ್ರೆಸ್‌ನವರು ನಾವು ನೀರು ಬಿಡಿಸಿದೆವು ಎಂದು ಹೇಳುವುದು, ಬಿ.ಜೆ.ಪಿ.ಯವರು ನಾವು ನೀರು ಬಿಡಿಸಿದೆವು ಎಂದು ಹೇಳುವುದು, ಪುನ: ಇದಾಗಬಾರದು. ಆದ್ದರಿಂದ, ಇದು ಬಹಳ ಮಹತ್ವವಿದೆ, ಇದರ ಬಗ್ಗೆ ಯೋಚನೆ ಮಾಡಿ. ದಯಮಾಡಿ, ಮಾಡಬೇಕು. ಎರಡನೆಯದಾಗಿ, ಆಲಮಟ್ಟಿ ಯೋಜನೆಯಲ್ಲಿ ಈ ವರ್ಷ 3ನೇ ಹಂತದಲ್ಲಿ 524.256ಕ್ಕೆ (ಮೀಟರ್) ಮಾಡಿದಾಗ 76 ಸಾವಿರ ಎಕರೆ ಭೂಮಿ ಮುಳುಗುತ್ತದೆ. 15 ಸಾವಿರ ಎಕರೆ ಭೂಸ್ವಾಧೀನ ಮಾಡುವ ಸಲುವಾಗಿ, ಊರು ಕಟ್ಟಲಿಕ್ಕೆ ಉಪಯೋಗವಾಗುತ್ತದೆ ಮತ್ತು ರೋಡ್‌ಗೆ ಉಪಯೋಗವಾಗುತ್ತದೆ. ಹೆಚ್ಚುಕಡಿಮೆ 90 ಸಾವಿರ, 1 ಲಕ್ಷ ಎಕರೆ ಭೂಮಿ ಹೋಗುತ್ತದೆ. ಆದರೆ, ರೈತರಿಗೆ ಒಂದು ಎಕರೆಗೆ ಎಷ್ಟು ಪರಿಹಾರ ಧನ ಕೊಡುತ್ತೀರಿ? ಎಂಬ ಬಗ್ಗೆ ಇಲ್ಲಿಯವರೆಗೆ

ಸರ್ಕಾರದಿಂದ ಉತ್ತರ ಬಂದಿಲ್ಲ. ಕೇಳಿದರೆ, ಹೊಸ ಕಾನೂನು ಪ್ರಕಾರ ಕೊಡುತ್ತೇವೆ ಎನ್ನುತ್ತಾರೆ. ಹೊಸ ಕಾನೂನು ಪ್ರಕಾರ ಕೊಡಬೇಕಾದರೆ, ಒಂದು ಹಳ್ಳಿಯಲ್ಲಿ Sub Registrar value 3 ಲಕ್ಷ ರೂಪಾಯಿ ಇದೆ, ಒಂದು ಹಳ್ಳಿಯಲ್ಲಿ 3.5 ಲಕ್ಷ ರೂಪಾಯಿ ಇದೆ, ಇನ್ನೊಂದು ಹಳ್ಳಿಯಲ್ಲಿ 4 ಲಕ್ಷ ರೂಪಾಯಿ ಇದೆ, ಮತ್ತೊಂದು ಹಳ್ಳಿಯಲ್ಲಿ 4.5 ಲಕ್ಷ ರೂಪಾಯಿ ಇದೆ, ಇನ್ನೊಂದು ಹಳ್ಳಿಯಲ್ಲಿ 5.5 ಲಕ್ಷ ರೂಪಾಯಿ ಇದೆ. ಅದರ 4 ಪಟ್ಟು ಎಂದರೆ, ಅದೇ ರೈತನ ಭೂಮಿ ಮುಳುಗಿಹೋದರೆ, ಒಂದು ಊರಿನಲ್ಲಿ 10 ಲಕ್ಷ ರೂಪಾಯಿ ಬರುತ್ತದೆ, ಇನ್ನೊಂದು ಊರಿನಲ್ಲಿ 12 ಲಕ್ಷ ರೂಪಾಯಿ ಬರುತ್ತದೆ, ಮತ್ತೊಂದು ಗ್ರಾಮದಲ್ಲಿ 15 ಲಕ್ಷ ರೂಪಾಯಿ ಬರುತ್ತದೆ, ಇನ್ನೊಂದು ಗ್ರಾಮದಲ್ಲಿ 20 ಲಕ್ಷ ರೂಪಾಯಿ ಬರುತ್ತದೆ. ಒಂದೇ ತರಹ ಭೂಮಿ ಇದೆ. ಯಾವುದೇ ಊರಿಗೆ ಹೋದರೂ ಕೂಡ, ಯಾವುದೇ ನದಿ ದಂಡೆಗೆ ಹೋದರೂ ಆ ಭೂಮಿ ಅಷ್ಟೇ ಫಲವತ್ತತೆ ಇದೆ. ಆದರೆ, ಕೊಡುವ ಹಣವೇನಿದೆ, ಅದು ಬಹಳ ಭಿನ್ನವಿದೆ. ಇದರಿಂದ ರೈತರಲ್ಲಿ ವೈಷಮ್ಯ ಬರುತ್ತದೆ, ಅಸಹಕಾರವಾಗುತ್ತದೆ, ಅಸಂತೋಷವಾಗುತ್ತದೆ. ಆದ್ದರಿಂದ, ಎಲ್ಲಿಯಾದರೂ ಯಾವ ಗ್ರಾಮಗಳಾದರೂ ಬರಲಿ, ಸುಮಾರು 20, 22 ಗ್ರಾಮಗಳು 3ನೇ ಹಂತದಲ್ಲಿ ಮುಳುಗಡೆಯಾಗುತ್ತವೆ, ಆ ಎಲ್ಲಾ ಗ್ರಾಮಗಳಿಗೆ uniform ಆಗಿ rate ಕೊಡಬೇಕು. 2ನೇ ಹಂತದಲ್ಲಿ ಆ time ನಲ್ಲಿ ಸರ್ಕಾರ 1 ಲಕ್ಷ 50 ಸಾವಿರ ರೂಪಾಯಿ ಎಂದು ನಿರ್ಧಾರ ಮಾಡಿ ಕೊಟ್ಟಾಗ ಹೆಚ್ಚುಕಡಿಮೆ 2 ಲಕ್ಷ ರೂಪಾಯಿಗಳವರೆಗೆ ಒಬ್ಬ ರೈತನಿಗೆ uniform ಆಗಿ ಹಣ ಸಿಕ್ಕಿತು. ಹಾಗಾಗಿ, ಬೆಲೆ ನಿರ್ಧಾರ ಸಮಿತಿಯನ್ನು ರಚಿಸಿ, ಎಷ್ಟು ಬೆಲೆ ಕೊಡಬೇಕು, ಏನು ಕೊಡಬೇಕು ಎಂದು ನಿರ್ಧರಿಸಬೇಕು. ಇಲ್ಲಿಯವರೆಗೆ ನಮಗೇ ಗೊತ್ತಿರಲಿಲ್ಲ. ನಾವು ಇಲ್ಲಿ ಶಾಸಕರಾಗಿ ಬಂದು 4 ವರ್ಷಗಳಾದರೂ ಕೂಡ ನಮಗೆ ಎಷ್ಟು ಕೊಡುತ್ತೀರಿ ಎಂದು ಒಬ್ಬ ಸಾಮಾನ್ಯ ರೈತ ನಮ್ಮನ್ನು ಕೇಳಿದರೆ, ಇಷ್ಟು ಹಣ ಕೊಡುತ್ತಾರೆ ಎಂದು ಹೇಳುವ ಶಕ್ತಿ ನಮಗೇ ಇರಲಿಲ್ಲ. ನಮ್ಮ ಜೊತೆಯೇ ಚರ್ಚೆಯೇ ಇಲ್ಲಿಯವರೆಗೆ ಆಗಿಲ್ಲ. ಸಾಕಷ್ಟು ಚರ್ಚೆ ಮಾಡಿ, ಸಮಿತಿ ರಚಿಸಿ ಎಂದು ಹೇಳಿದರೆ ಇಲ್ಲಿಯವರೆಗೆ ಸರ್ಕಾರ ಚರ್ಚೆಯನ್ನೂ ಮಾಡಿಲ್ಲ, ಸಮಿತಿಯನ್ನೂ ರಚಿಸಿಲ್ಲ, ಏನೂ ಮಾಡಿಲ್ಲ. ಎಷ್ಟು ಕೊಡುತ್ತೇವೆಂದು ಹೇಳಿಯೂ ಇಲ್ಲ. ಈ ರೀತಿಯಾಗಿ ಹಾಗೆಯೇ ಮುಗುಮ್ಮಾಗಿ

ಹೊರಟಿದೆ. ರೈತರು ಅಷ್ಟು ಭೂಮಿ ಕಳೆದುಕೊಂಡು, ಮುಂದೇನು ಮಾಡಬೇಕೆಂದು ನಿರ್ಧಾರ ಮಾಡಬೇಕಲ್ಲ?

ಅಧ್ಯಕ್ಷರು: Conclude ಮಾಡಿ.

ಶ್ರೀ ಸಿದ್ದು ಬಿ. ನ್ಯಾಮಗೌಡ: ಎಲ್ಲಿಯಾದರೂ ಜಮೀನು ತೆಗೆದುಕೊಳ್ಳಬೇಕಾದರೆ, ನನಗೆ ಎಷ್ಟು ಹಣ ಬರುತ್ತದೆ, ನಾನು ಎಷ್ಟು ಜಮೀನು ತೆಗೆದುಕೊಳ್ಳಬೇಕು ಎನ್ನುವ idea, ವಿಚಾರ ಬೇಕಲ್ಲವೇ? ಆ ರೀತಿ ಏನೂ ಮಾಡಲಿಕ್ಕಾಗಿಲ್ಲ. ಹೀಗಾಗಿ, ನಮ್ಮ ರೈತರೆಲ್ಲ ಅಂಧಕಾರದಲ್ಲಿದ್ದಾರೆ. ಅವರು confusion ನಲ್ಲಿದ್ದಾರೆ. ಇದೂ ಕೂಡ ಬಹಳ ಮಹತ್ವದ್ದು ಇದೆ. ಸರ್ಕಾರ ಇದರ ಕಡೆ ಹೆಚ್ಚು ಲಕ್ಷ್ಯ ಕೊಡಬೇಕು.

ಅಧ್ಯಕ್ಷರು: ಮುಗಿಸಿ.

ಶ್ರೀ ಸಿದ್ದು ಬಿ. ನ್ಯಾಮಗೌಡ: ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲೊಂದು ಸಮಿತಿ ರಚಿಸಿ, ಆ ಭಾಗದ MLA, MP, Ministers ಎಲ್ಲರನ್ನೂ ಕರೆದು committee ರಚಿಸಿ, ಒಂದು ಬೆಲೆ ನಿರ್ಧಾರ ಮಾಡಬೇಕು. ಬೆಲೆ ನಿರ್ಧಾರ ಮಾಡುವ ಸಲುವಾಗಿ ಒಂದು committee ರಚಿಸಬೇಕು ಎಂದು ನಾನೂ ಕೂಡ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಮುಗಿಸಿಬಿಡಿ.

ಶ್ರೀ ಸಿದ್ದು ಬಿ. ನ್ಯಾಮಗೌಡ: ಆಯಿತು, ಎರಡೇ ನಿಮಿಷಗಳಲ್ಲಿ ಮುಗಿಸುತ್ತೇನೆ. ನನಗೆ ಅವಕಾಶ ಕೊಡುವುದನ್ನೇ late ಮಾಡಿಕೊಡುತ್ತೀರಿ. ಮುಗಿಸಿ ಎಂದು ಹೇಳುತ್ತೀರಿ.

ಅಧ್ಯಕ್ಷರು: ಇನ್ನೂ late ಆಗಿ ಮಾತನಾಡುವವರು ಇದ್ದಾರೆ.

ಶ್ರೀ ಸಿದ್ದು ಬಿ. ನ್ಯಾಮಗೌಡ: ಇದು important ವಿಷಯ, ನಮ್ಮ ಭಾಗದ ಸಮಸ್ಯೆ ಇದೆ ಸಾರ್.

ಅಧ್ಯಕ್ಷರು: Agriculture, irrigation ಬಗ್ಗೆ ಹೇಳಿದಿರಿ. ಬೇಗ ಹೇಳಿ.

ಶ್ರೀ ಸಿದ್ದು ಬಿ. ನ್ಯಾಮಗೌಡ: ದಯವಿಟ್ಟು, 2 ನಿಮಿಷ time ಕೊಡಿ.

ಅಧ್ಯಕ್ಷರು: O.K.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಸಿದ್ದು ಬಿ. ನ್ಯಾಮಗೌಡ: ಆದ್ದರಿಂದ, ಇವತ್ತು ಈ ಕುರಿತು ಸಹಾಯ ಮಾಡಬೇಕೆಂದು ಕೇಳುತ್ತಿದ್ದೇನೆ. ಅದರ ಜೊತೆಗೆ, ಶಿಕ್ಷಣ ಇಲಾಖೆಯಲ್ಲಿ ಶಾಲೆಗಳಿಗೆ ರಿಪೇರಿ ಸಲುವಾಗಿ. . . . ಎಷ್ಟೋ ಶಾಲೆಗಳು ಹಾಗೆಯೇ ಇವೆ. ಅದಕ್ಕೋಸ್ಕರ ರಿಪೇರಿಗೆಂದು ಹೆಚ್ಚು ಹಣ ಕೊಡಬೇಕು. ಅಲ್ಲದೆ, ಇವತ್ತು C.E.T. counseling ಶುರುವಾಗಿದೆ. ಇನ್ನೂ NEET result ಬಂದಿಲ್ಲ. ಹಾಗಾಗಿ, ಇವತ್ತು confusion ಇದೆ. ಇವತ್ತು C.E.T. ಪ್ರಕಾರ Engineering seat select ಮಾಡಿದರೆ, C.E.T.ಯಲ್ಲಿ ಕಾಗದಪತ್ರ ತೆಗೆದುಕೊಂಡಿರುತ್ತಾರೆ, ಹಣ ಪಡೆದುಕೊಂಡಿರುತ್ತಾರೆ, ಆಮೇಲೆ, ಮುಂದೆ ಆ ಹುಡುಗನಿಗೆ NEET ನಲ್ಲಿ medical seat ಸಿಕ್ಕಿದರೆ, ಇದನ್ನು ಬಿಟ್ಟು ಹೋಗಲಿಕ್ಕೆ ಬರುವುದಿಲ್ಲ. ಹಾಗಾಗಿ, C.E.T. and NEET ಎರಡನ್ನೂ ಒಂದೇ time ನಲ್ಲಿ ನಡೆಸಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಅದು ಸ್ವಲ್ಪ ತೊಂದರೆ ಇದೆ, confuse ಇದೆ. ಸರ್ಕಾರ ಅದಕ್ಕೆ ಹೆಚ್ಚು ಲಕ್ಷ್ಯ ಕೊಡಬೇಕು. ಇನ್ನು, ಅರಣ್ಯ ಇಲಾಖೆ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ಮೊನ್ನೆ ನಮ್ಮ ಹಿರಿಯ ನಾಯಕರು ಹೇಳಿದರು. ಎಷ್ಟು ಗಿಡ ನೆಟ್ಟಿದ್ದೀರಿ ಎಂದರೆ, 14 ಕೋಟಿ ಗಿಡಗಳನ್ನು ನೆಟ್ಟಿದ್ದೇವೆಂದು ಹೇಳಿದರು. ನಮ್ಮ ಕಡೆ ಗುಡ್ಡದಲ್ಲಿ ಏನೂ ಇಲ್ಲ. ಕಲ್ಲು, ಮಣ್ಣು ಬಿಟ್ಟರೆ ಏನೂ ಸಿಗುವುದಿಲ್ಲ. ನಾವು ಕಳೆದ 3 ವರ್ಷಗಳಿಂದ ಹೊಸ ಪ್ರಯೋಗ ಮಾಡಿದ್ದೇವೆ. ವಿದ್ಯಾರ್ಥಿಗಳು, ನೌಕರಸ್ಥರು, ರೈತರು, ನಮ್ಮ ಪಕ್ಷದ ಕಾರ್ಯಕರ್ತರೆಲ್ಲರನ್ನೂ ಕರೆದುಕೊಂಡು ಹೋಗಿ ಶ್ರಮದಾನ ಮಾಡಿ ಸುಮಾರು 15 ಸಾವಿರ ಗಿಡ ನೆಟ್ಟಿದ್ದೇವೆ. 3 ವರ್ಷಗಳ ಹಿಂದೆ 10 ಸಾವಿರ ಗಿಡ ನೆಟ್ಟೆವು. ಕಳೆದ ವರ್ಷ 5.5, 6 ಸಾವಿರ ಗಿಡ ನೆಟ್ಟಿದ್ದೇವೆ. ಈ ವರ್ಷ ಮತ್ತೆ ನೆಡಬೇಕೆಂದು ರೆಡಿ ಮಾಡಿದ್ದೇವೆ. ಅವುಗಳಿಗೆಲ್ಲ ನೀರಿನ ವ್ಯವಸ್ಥೆ ಮಾಡಿದ್ದೇವೆ. ಸರ್ಕಾರದಲ್ಲೇನಿದೆ ಎಂದರೆ, ಕೇವಲ ಸಸಿ ನೆಟ್ಟನಂತರ 3 ಸಲ ನೀರು ಹಾಕಬೇಕಂತೆ. 3 ಸಲ ನೀರು ಹಾಕಿದರೆ ಅವು ಹೇಗೆ ಬದುಕುತ್ತವೆ? ವರ್ಷದಲ್ಲಿ ಕೇವಲ 3 ಸಲ ನೀರು ಹಾಕಿದರೆ ಗಿಡಗಳು ಹೇಗೆ ಬದುಕುತ್ತವೆ, ಬದುಕಲಿಕ್ಕೆ ಸಾಧ್ಯವಿಲ್ಲ. ಒಂದು ಸಲ ನಾನು ಅರಣ್ಯ ಸಚಿವರೊಂದಿಗೆ ಗಲಾಟೆ ಮಾಡಿದ್ದೆ. ಈ ತರಹ ನೀವು ಮಲೆನಾಡಿನಲ್ಲಿ ಮಾಡಿದ ಕಾಯ್ದೆಗಳನ್ನು ಬಯಲುಸೀಮೆಯಲ್ಲಿ ಜಾರಿ ಮಾಡಿದರೆ, ಹೇಗೆ ಗಿಡ ನೆಡುವುದು? ಅರಣ್ಯ ಹೇಗೆ ಬೆಳೆಯುತ್ತದೆ? ಎಂದು ಕೇಳಿದೆ. ಪ್ರತಿ ವರ್ಷ ಇಷ್ಟು ಗಿಡ ನೆಡಿ ಎಂದು ಹೇಳುತ್ತಾರೆ, ಹಣ ಖರ್ಚು ಮಾಡುತ್ತಾರೆ.

19-06-2017

Next 6 ತಿಂಗಳು ಕಳೆದರೆ ಒಂದು ಗಿಡ ಸಹ ಸಿಗುವುದಿಲ್ಲ. ಅದಕ್ಕೋಸ್ಕರ, ಗಿಡ ಎಷ್ಟು ನೆಡುತ್ತೀರಿ? ನಮ್ಮ ಕ್ಷೇತ್ರದಲ್ಲಿ 1200 ಎಕರೆಯಲ್ಲಿ ಸಸಿ ನೆಟ್ಟಿದ್ದಾರೆ. ಅಲ್ಲಿ ಒಂದೂ ಗಿಡ ಇಲ್ಲ. ನಾನು ಈ ವಿಷಯವನ್ನು 2ನೇ ಸಲ, 3ನೇ ಸಲ ಹೇಳುತ್ತಿದ್ದೇನೆ. ಈ ವರ್ಷ 1200 ಎಕರೆಯಲ್ಲಿ ನೆಡಬೇಡಿ. 50 ಎಕರೆಯಲ್ಲಿ ನೆಡಿ, ಅದಕ್ಕೆ ವರ್ಷಪೂರ್ತಿ ನೀರು ಹಾಕಿ ಅಥವಾ 100 ಎಕರೆಯಲ್ಲಿ ಗಿಡ, ವರ್ಷಪೂರ್ತಿ ನೀರು ಕೊಡಿ. ಅದರಿಂದ ಆ ಸಸಿ ಬದುಕುತ್ತವೆ. ನಮ್ಮ ಉದಾಹರಣೆ ಪ್ರಕಾರ, 15 ಸಾವಿರ ಗಿಡ ಬಂದರೆ, ಅದರಲ್ಲಿ ಹೆಚ್ಚುಕಡಿಮೆ 5% ಗಿಡ ಹೋಗಿವೆ. ಇಂಥ ಬರಗಾಲವಿದ್ದರೂ ಕೂಡ ನಮ್ಮ MLA fund ಕೊಟ್ಟು, tanker, tractor ಎಲ್ಲ ಕೊಟ್ಟು ಕಳುಹಿಸಿದ್ದೇವೆ. ಅದೇರೀತಿಯಾಗಿ, labour ಗೆ ಕೂಡ ಹಣ ಕೊಡುತ್ತೇವೆಂದು ಹೇಳಿದ್ದೇವೆ. ಇದನ್ನು ಹೇಳಿದ ಬಳಿಕ, ಈಗ ಸ್ವಲ್ಪ ಅರಣ್ಯ ಇಲಾಖೆಯವರು 4 ಸಲ ನೀರು ಹಾಕಲಿಕ್ಕೆ ಹೇಳಿದ್ದಾರೆ, ಒಂದು ಸಲ ಹೆಚ್ಚಿಗೆ ಹಾಕುತ್ತಿದ್ದಾರೆ. ಸುಮಾರು 15 ಸಾವಿರ ಗಿಡಗಳಲ್ಲಿ 2-3% ಮಾತ್ರ ಗಿಡಗಳು ಉಳಿದಿವೆ. ಈಗ ಗಿಡಗಳು first class ಆಗಿ ಬೆಳೆದಿವೆ. Forest Department ನವರು ಅವುಗಳನ್ನು ನೋಡಲಿಕ್ಕೆ ಬಂದರೆ ಗೊತ್ತಾಗುತ್ತದೆ. ಬಹಳ ಚೆನ್ನಾಗಿದೆ ಎಂದು ಎಲ್ಲರೂ appreciate ಮಾಡುತ್ತಾರೆ. ಆ ರೀತಿಯಾಗಿ ಅದನ್ನು ನಮ್ಮ ರಾಜ್ಯದ ತುಂಬಾ ಮಾಡಿದರೆ ನಿಜವಾಗಿಯೂ ನಮ್ಮ ಅರಣ್ಯ ಬೆಳೆಯುತ್ತದೆ. ಇವತ್ತು ನಾವು ಬರಗಾಲವಿದೆ, ಮಳೆಯಾಗಿಲ್ಲ ಎನ್ನುತ್ತೇವೆ. ಮಳೆ ಏಕೆ ಆಗುವುದಿಲ್ಲ? ನಮ್ಮಲ್ಲಿದ್ದ ಗಿಡಗಳೆಲ್ಲ ಹೋಗಿವೆ. ನಮಗೆ ಸ್ವಾತಂತ್ರ್ಯ ಸಿಕ್ಕಾಗ ನಮ್ಮಲ್ಲಿ 33% ಅರಣ್ಯವಿತ್ತು. ಇವತ್ತು 17% ಸಹ ಅರಣ್ಯ ಉಳಿದಿಲ್ಲ. 17%ಗಿಂತ ಕಡಿಮೆಯಾಗಿದೆ. ಇದೇರೀತಿಯಾದರೆ, ಇನ್ನು 50, 100 ವರ್ಷಗಳಿಗೆ ನಾವೆಲ್ಲಿಗೆ ಹೋಗಿ ಮುಟ್ಟುತ್ತೇವೆ? ಹಾಗಾಗಿ, ನಾವು ಅದರ ಕಡೆ ತುಂಬಾ ಲಕ್ಷ್ಯ ಕೊಡಬೇಕು. ಗಿಡ ನೆಟ್ಟರೆ, ಅದಕ್ಕೆ tree guard ಹಾಕಬೇಕು. ನಾವು ಚೈನಾಗೆ ಹೋಗಿ ನೋಡಿದ್ದೇವೆ. ಅಲ್ಲಿ ರಸ್ತೆ ಬದಿಯಲ್ಲಿ ಗಿಡ ಹೇಗೆ ನೆಡುತ್ತಾರೆಂದರೆ, ಎಲ್ಲೋ ಒಂದು ಕಡೆ ಗಿಡ ಬೆಳೆಸುತ್ತಾರೆ. 10 ವರ್ಷ, 12 ವರ್ಷದ ಗಿಡ ತಂದು ರಸ್ತೆ ಬಾಜೂ ನೆಡುತ್ತಾರೆ. ಆ ರಸ್ತೆ ಕೆಲಸ ಮುಗಿಯುವಷ್ಟರಲ್ಲಿ, ಯಾವಾಗ 20 ವರ್ಷ, 25 ವರ್ಷ, ಆ ಗಿಡ ಬೆಳೆದಿದೆ, 25 ವರ್ಷಗಳ ಹಿಂದಿನ ಗಿಡ ಇತ್ತು ಎಂದು ಅನಿಸುತ್ತದೆ. ಅಷ್ಟು ಚಂದವಾಗಿ ಅವರು ಬೆಳೆಸುತ್ತಾರೆ. ಅಷ್ಟು technique ಆಗಿ ಅವರ ಕಡೆ ಇದೆ. ಬಸ್‌ನಲ್ಲಿ ಕುಳಿತು

19-06-2017

ಆ ಗಿಡ ನೋಡುವಾಗ ಅದು 20 ವರ್ಷಗಳಷ್ಟು ಹಳೆಯ ಅರಣ್ಯ ಇರಬಹುದೆನಿಸುತ್ತದೆ. ಆ ತರಹ ಆ ಗಿಡಗಳನ್ನು ಅವರು ಬೆಳೆಸಿದ್ದಾರೆ. ನಮ್ಮ ಅರಣ್ಯ ಇಲಾಖೆಯವರೇಕೆ ಈ ತರಹ ಮಾಡಬಾರದು? ಆ technique ಏಕೆ use ಮಾಡಬಾರದು? ಅದನ್ನು ಮಾಡಿದರೆ ನಮ್ಮ ಅರಣ್ಯ ಬೆಳೆಯುತ್ತದೆ. ಅರಣ್ಯ ಬೆಳೆದರೆ, ಮಳೆ ತಾನಾಗಿಯೇ ಬರುತ್ತದೆ. ಕೇವಲ ಸುಮ್ಮನೆ ನಾವು ಎಲ್ಲ ಕಡೆ ಗಿಡ ನೆಡಿ ಎಂದು ಪ್ರಚಾರ ಮಾಡುತ್ತೇವೆ. ಆದರೆ, ಏನೂ ಆಗುವುದಿಲ್ಲ. ಹಾಗಾಗಿ, ಅದರ ಕಡೆಯೂ ಹೆಚ್ಚು ಲಕ್ಷ್ಯ ಕೊಡಬೇಕು. ನಮ್ಮ ಅರಣ್ಯ ಇಲಾಖೆಯವರು ನಮ್ಮ ಜಮಖಂಡಿಗೆ ಗಮನ ಕೊಡಬೇಕು. ನಾವೆಲ್ಲ, ಸಾರ್ವಜನಿಕರೂ ಸೇರಿಕೊಂಡು 15 ಸಾವಿರ ಗಿಡ ಬೆಳೆಸಿದ್ದೇವೆ. ಇನ್ನೊಂದಿಷ್ಟು, ಆ ಗಿಡಗಳು ಆ ಊರಿನ ಬಾಜೂ ಇರುವುದರಿಂದ ಬಹಳಷ್ಟು ದನಕರುಗಳು ಗುಡ್ಡದಲ್ಲಿ ಓಡಾಡುತ್ತವೆ. ಬೇಲಿ ಹಾಕಲು ಹಣ ಕೊಡಿ ಎಂದು ಕೇಳಿದ್ದೇವೆ. ಇನ್ನೂವರೆಗೆ ಹಣ ಕೊಟ್ಟಿಲ್ಲ. ಕೊಡುತ್ತೇವೆ ಎನ್ನುತ್ತಾರೆ. ಮೊನ್ನೆ ಬಹಳಷ್ಟು ಕೇಳಿದಾಗ, ಸ್ವಲ್ಪ ಹಣ ಬಿಡುಗಡೆ ಮಾಡಿದ್ದಾರೆ. ಹೆಚ್ಚಿನ ಪ್ರಮಾಣದಲ್ಲಿ ಹಣ ಕೊಟ್ಟರೆ ಸುತ್ತಲೂ ಸುಮಾರು 60-70 ಎಕರೆಗೆ ಬೇಲಿ ಹಾಕಿದರೆ ದನಕರುಗಳು ಬರುವುದು ಕಡಿಮೆಯಾಗುತ್ತದೆ. ಗಿಡಗಳಿಗೆ protection ಆಗುತ್ತದೆ, ಗಿಡಗಳೂ ಉಳಿಯುತ್ತವೆ ಎನ್ನುವ ಮಾತನ್ನು ಸಹ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು: ಮುಗಿಸಿ. ಮಧ್ಯಾಹ್ನ 2 ಗಂಟೆ ಆಯಿತು.

ಶ್ರೀ ಸಿದ್ದು ಬಿ. ನ್ಯಾಮಗೌಡ: ಆಯಿತು ಸಾರ್. ಪಶು ಸಂಗೋಪನೆ ಇಲಾಖೆ ವಿಷಯದಲ್ಲಿ ನನ್ನದೊಂದು ವಿನಂತಿ ಇದೆ. ನಮ್ಮಲ್ಲಿ ಹೈನುಗಾರಿಕೆ ದೊಡ್ಡ ಪ್ರಮಾಣದಲ್ಲಿದೆ. ನದಿ ಇರುವುದರಿಂದ, ನೀರಾವರಿ ಅನುಕೂಲವಿರುವುದರಿಂದ ನಮ್ಮಲ್ಲಿ ಸಾಕಷ್ಟು ನೀರಾವರಿ ಇದೆ. ಅದರಿಂದ ದನಗಳಿಗೆ ಮೇವು ಸಿಗುವುದರಿಂದ ನಮ್ಮಲ್ಲಿ ಹೈನುಗಾರಿಕೆ ದೊಡ್ಡ ಪ್ರಮಾಣದಲ್ಲಿದೆ. ಆದರೆ, ಅಲ್ಲಿ ಪಶು ಆಸ್ಪತ್ರೆಗಳಿಲ್ಲ. ಬಹಳಷ್ಟು ತೊಂದರೆಯಾಗಿದೆ. ಈ ವರ್ಷದ ಬಜೆಟ್‌ನಲ್ಲಿ ಕೂಡ ಸರ್ಕಾರ ಕೊಟ್ಟಿಲ್ಲ. ಆದ್ದರಿಂದ, ದಯಮಾಡಿ, ನಮ್ಮ ಇನ್ನು 2-3 ಗ್ರಾಮಗಳಲ್ಲಿ, ಒಂದೇ ಗ್ರಾಮದಲ್ಲಿ ಒಂದು ದಿವಸಕ್ಕೆ 10 ಸಾವಿರ ಲೀಟರ್ ಹಾಲು ಸರಬರಾಜು ಮಾಡುತ್ತೇವೆ. ಕರ್ನಾಟಕ ರಾಜ್ಯದಲ್ಲೇ ಆಲಗೂರು

number one ಇದೆ. ಅಂಥ ಕಡೆ ಕೂಡ ಪಶು ಆಸ್ಪತ್ರೆ ಇಲ್ಲ. ಹೀಗಾಗಿ, ಬಹಳಷ್ಟು ತೊಂದರೆ ಇದೆ.

(ಮುಂದು)

19-06-2017 : 2-00 [22] kkd:ssd 1

ಶ್ರೀ ಸಿದ್ದು ಬಿ. ನ್ಯಾಮಗೌಡ(ಮುಂದು)

ಈ ವರ್ಷದ ಬಜೆಟ್‌ನಲ್ಲಿ ಕೇಳಿದರೆ, ಇಲ್ಲ, ಹೊಸ ಆಸ್ಪತ್ರೆ ಕೊಡುವುದಿಲ್ಲ, ಇದ್ದುದ್ದನ್ನು upgrade ಮಾಡುವುದಕ್ಕೆ ಕೊಡುತ್ತೇವೆಂದು ಹೇಳದರು. ಹಾಗಾಗಿ, ಪಶು ಇಲಾಖೆಯಿಂದ ಆಸ್ಪತ್ರೆಗಳನ್ನು ಕೊಡುವಂಥ ಕೆಲಸವನ್ನು ಮಾಡಬೇಕೆನ್ನುವಂಥ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು: ಆಯಿತು, ಮುಗಿಸಿಬಿಡಿ, 2 ಗಂಟೆ ಆಯಿತು.

ಶ್ರೀ ಸಿದ್ದು ಬಿ. ನ್ಯಾಮಗೌಡ: ಅದೇ ರೀತಿ ಶಿಕ್ಷಣದಲ್ಲಿಯೂ ಕೂಡ ನಮ್ಮಲ್ಲಿ High School, PU college, Degree college ಇನ್ನೂ ಇಲ್ಲ. ಹಿಂದೆ ಏನು Government ಮಂಜೂರು ಮಾಡಿತ್ತು, ಅದನ್ನೇ ಇವತ್ತು hostel ಕಟ್ಟುವುದೆಂದು building ಕಟ್ಟುವಂಥ ಕೆಲಸ ಮಾಡಿದ್ದಾರೆ. ಹೊಸದು ಯಾವುದೂ ಕೂಡ ಕೊಡುವ ಅವಕಾಶವಿಲ್ಲ. ನಮ್ಮಲ್ಲಿ ಮಕ್ಕಳ ಸಂಖ್ಯೆ ಬಹಳ ಇದೆ. ಇಡೀ ಬಾಗಲಕೋಟೆ ಜಿಲ್ಲೆಯಲ್ಲಿ ಎಷ್ಟು ಮಕ್ಕಳು 8ನೇ ತರಗತಿಯಲ್ಲಿದ್ದಾರೆ, ಅದರ ಅರ್ಧ ಮಕ್ಕಳು ನಮ್ಮ ಜಮಖಂಡಿಯಲ್ಲಿದ್ದಾರೆ. ಹಾಗಾಗಿ High School, PU College, Degree college ನ ಅವಶ್ಯಕತೆ ಬಹಳ ಇದೆ. ಆದ್ದರಿಂದ, ದಯಮಾಡಿ ಇದಕ್ಕೆ ಸಹಾಯ ಮಾಡಬೇಕೆಂದು ಕೇಳಿಕೊಂಡು, ನಾನು ಹೆಚ್ಚಿಗೆ ಮಾತನಾಡದೆ, ಇವತ್ತು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಎಲ್ಲರಿಗೂ ನಮಸ್ಕಾರಗಳು.

ಅಧ್ಯಕ್ಷರು: ಈಗ ಸದನವನ್ನು ಮುಂದೂಡಿ ಪುನ: ಮಧ್ಯಾಹ್ನ 3-00 ಗಂಟೆಗೆ ಸೇರುವುದು.

19-06-2017

(ಸದನವು ಮಧ್ಯಾಹ್ನ 2 ಗಂಟೆ 02 ನಿಮಿಷಕ್ಕೆ ಮುಕ್ತಾಯಗೊಂಡು ಪುನ:

ಮಧ್ಯಾಹ್ನ 3-00 ಗಂಟೆಗೆ ಸೇರಲು ನಿಶ್ಚಯಿಸಿತು)

19.06.2017/3.20/25/BR/VG

(ಸದನವು ಪುನ: ಮಧ್ಯಾಹ್ನ 3 ಗಂಟೆ 27 ನಿಮಿಷಕ್ಕೆ ಪ್ರಾರಂಭವಾಯಿತು. ಸಭಾಧ್ಯಕ್ಷರಾದ ಶ್ರೀ ಕೆ.ಬಿ.ಕೋಳಿವಾಡರವರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು: ಈಗ ಒಂದು ಪ್ರಕಟಣೆ ಇದೆ.

"ಪ್ರಕಟಣೆ"

ವಿಧಾನಸಭಾ ಸದಸ್ಯರಾದ ಶ್ರೀ ವೈ.ಎನ್.ರುದ್ರೇಶ್‌ಗೌಡರವರು ತಮ್ಮ ಅನಾರೋಗ್ಯದ ಕಾರಣದಿಂದ ಪ್ರಸ್ತುತ ಅಧಿವೇಶನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರವನ್ನು ನೀಡಿರುತ್ತಾರೆ. ಮಾನ್ಯ ಸದಸ್ಯರು ಸದನಕ್ಕೆ ಪ್ರಸ್ತಾವಿತ ಅವಧಿಯಲ್ಲಿ ಗೈರು ಹಾಜರಾಗಲು ಸದನದ ಸಹಮತಿ ಇದೆಯೆಂದು ಭಾವಿಸಲಾಗಿದೆ. ಶ್ರೀ ವೈ.ಎನ್.ರುದ್ರೇಶ್‌ಗೌಡರವರು ಪ್ರಸ್ತುತ ಅಧಿವೇಶನದ ಸಂದರ್ಭದಲ್ಲಿ ಸದನಕ್ಕೆ ಗೈರು ಹಾಜರಾಗಲು ಅನುಮತಿ ನೀಡಲಾಗಿದೆ.

ವಿತ್ತೀಯ ಕಾರ್ಯಕಲಾಪಗಳು

2017-18ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಸನ್ಮಾನ್ಯ ಅಧ್ಯಕ್ಷರೆ, ಈ ಒಂದು ಬೇಡಿಕೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟ ತಮಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಲು ಬಯಸುತ್ತೇನೆ. ನಾನೇನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ನಿಮ್ಮ ತಾಳ್ಮೆಯನ್ನೂ ಪರೀಕ್ಷೆ ಮಾಡುವುದಕ್ಕೆ ಹೋಗುವುದಿಲ್ಲ. ಬೆಲ್ ಹಾಕುವುದಕ್ಕೆ ಮುಂಚೆಯೇ ನಾನು ಕುಳಿತು ಬಿಡುತ್ತೇನೆ. ಏಕೆಂದರೆ, ನನ್ನ ಹತ್ತಿರ ಬಂಡವಾಳ ಉಳಿದಿಲ್ಲ. ಬಹಳಷ್ಟು ಜನ ಈಗ, ಹಿರಿಯರು, ಅನುಭವಿಗಳು ಸಾಕಷ್ಟು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮದು ಹೇಗೆ ಆಗಿದೆಯೆಂದರೆ, ಈ ಕೈವಲ್ಯ ಗ್ರಂಥದಲ್ಲಿ ಪದ್ಯವಿದೆ. 'ಎಂತು ಒಲಿವನೋ ಭಗವಂತ, ಎಂತು ಒಲಿವನೋ' ಎಂದು ಹೇಳಿ. ಅಂತೂ ಕೊನೆಗೆ ನೀವು ನನಗೆ ಒಲಿದಿದ್ದೀರಿ ಎಂದು ಹೇಳಿ ಭಾವಿಸಿಕೊಂಡು ನಾನು ಪ್ರಾರಂಭ ಮಾಡುತ್ತೇನೆ.

ಅಧ್ಯಕ್ಷರು: ಸವದಿಯವರೆ, 16 ತಾಸಿನಲ್ಲಿ 9.5 ತಾಸು ನಿಮ್ಮ ಪಾರ್ಟಿಯವರೇ ಮಾತನಾಡಿದ್ದಾರೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ನಾನು ಅದನ್ನು ಅಲ್ಲಗಳೆದಿಲ್ಲ. ನನ್ನ ವೈಯಕ್ತಿಕ ವಿಚಾರವನ್ನು ಹೇಳುತ್ತಿದ್ದೇನೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಪಾಪಿಗಳದ್ದು ನಂಬರ್ ಹತ್ತಕ್ಕೆ ಸ್ವಲ್ಪ ಲೇಟಾಗುತ್ತದೆ. ಪುಣ್ಯವಂತರದ್ದು ಮೊದಲು ಬರುತ್ತದೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಅವರಿಗೆ ಅನುಭವ ಇದೆ.

(ಮುಂದುವರೆದುದು)

19-06-2017/3-30/26/HRV/VG

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಮುಂ.ವ)

ನಾನು ಸವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಮ್ಮ ಗುರುಗಳಿಗೆ ಹೇಳುತ್ತೇನೆ, ಪಾಪಿ ಸಮುದ್ರಕ್ಕೆ ಹೋದರೂ ಮೊಣಕಾಲುದ್ದ ನೀರು ಎಂಬುದು ಅವರಿಗೆ ಗೊತ್ತಿದೆ. ಪಾಪ ಅವರು ಅದನ್ನು ತಿಳಿದುಕೊಂಡೇ ಹೇಳಿದರು. ಮಾನ್ಯ ಅಧ್ಯಕ್ಷರೆ, ಮೊದಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬಗ್ಗೆ ಮಾತನಾಡುತ್ತೇನೆ. ಈಗ ಆ ಇಲಾಖೆಯ ಸಚಿವರು ಇರಬೇಕಾಗಿತ್ತು. ಆದರೆ ಅನಿವಾರ್ಯ ಕಾರಣದಿಂದ ಈಗ ಅವರು ಇಲ್ಲಿ ಇಲ್ಲ. ಇಲಾಖಾಧಿಕಾರಿಗಳು ಇದ್ದಾರೆಂದು ನಾನು ಭಾವಿಸಿಕೊಂಡಿದ್ದೇನೆ. ನಮ್ಮ ಗ್ರಾಮೀಣ ಮತ್ತು ಪಂಚಾಯತ್ ರಾಜ್ ಇಲಾಖೆಯೊಳಗೆ ವಿಶೇಷವಾಗಿ ನಮ್ಮ ಮಾನ್ಯ ಹೆಚ್.ಕೆ. ಪಾಟೀಲರು ಮಂತ್ರಿಗಳಾದ ಮೇಲೆ, ಪ್ರಾರಂಭದಲ್ಲಿ ಮಾನ್ಯ ಅಧ್ಯಕ್ಷರೆ ನೀವು ಆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಪೀಠದ ಮೇಲೆ ಇರಲಿಲ್ಲ, ಹಿರಿಯ ಸಚಿವರಾಗಿರುವ ಇವತ್ತಿನ ಮಾನ್ಯ ಕಾಗೋಡು ತಿಮ್ಮಪ್ಪ ಸಾಹೇಬರು ಆವತ್ತು ಆ ಪೀಠದಲ್ಲಿ ಕುಳಿತಿದ್ದರು ಮಾನ್ಯ ಹೆಚ್.ಕೆ. ಪಾಟೀಲ್‌ರವರು ರಂಗು ರಂಗಿನ ಪುಸ್ತಕವನ್ನು ಅಂದು ಬಿಡುಗಡೆ ಮಾಡಿದರು. ಬಹಳ ವರ್ಣ ರಂಜಿತವಾಗಿರತಕ್ಕಂಥ ಪುಸ್ತಕಗಳನ್ನು ಬಿಟ್ಟು ಪ್ರಿಂಟ್ ಮಾಡಿ ಎಲ್ಲಾ ಇಲಾಖೆಗಳಿಂದ ತರಿಸಿಕೊಂಡು ನಮಗೆಲ್ಲರಿಗೂ ಹಂಚಿದರು. ಆಗ ನಾವು ಏನು ತಿಳಿದುಕೊಂಡವೆಂದರೆ, ಬಹುತೇಕ ನಮ್ಮ ಕ್ಷೇತ್ರಗಳು ಕೂಡ ಹೀಗೆ ಬಣ್ಣದಿಂದ ವರ್ಣರಂಜಿತವಾಗಿರತಕ್ಕಂಥ ಕ್ಷೇತ್ರಗಳಾಗಿಬಿಡುತ್ತವೆ ಎನ್ನುವಂಥ ಭ್ರಮೆಯೊಳಗೆ ನಾವು ಹೋಗಿಬಿಟ್ಟೆವು. ಏಕೆಂದರೆ ಅವರದ್ದು ಒಂದು ಹೊಸ ಕಲ್ಪನೆ, ಈ ನಾಡಿನ ಜನರಿಗೆ ಶುದ್ಧವಾಗಿರತಕ್ಕಂಥ ನೀರನ್ನು ಕೊಡಬೇಕು, ರೋಗರುಜಿನಗಳಿಂದ ಸಮಾಜ ದೂರವಿರಬೇಕು, ಒಳ್ಳೆಯ ಕಾರ್ಯಕ್ರಮವೆಂದು ಹೇಳಿ ಈ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ರಾಜ್ಯದಲ್ಲಿ 9 ಸಾವಿರ ಘಟಕಗಳನ್ನು ಪ್ರಾರಂಭ ಮಾಡಿದ್ದಾರೆ. ಈ 9 ಸಾವಿರ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಹಾಕಿದರು. ನಾವು ಹಳ್ಳಿಗೆ ಹೋದಾಗ ಮೊದಲು ಹಳ್ಳಿಯಲ್ಲಿ ಜನರು ಕುಡಿಯುವುದಕ್ಕೆ ನೀರಷ್ಟನ್ನೇ ಕೇಳುತ್ತಿದ್ದರು. ಈ ಶುದ್ಧ ನೀರಿನ ಘಟಕ ಹಾಕಿದ ಮೇಲೆ ನಾವು ಯಾವ ಹಳ್ಳಿಗೆ ಹೋದರು ಮೊದಲನೇ ಪ್ರಶ್ನೆ ನಮಗೇನೆಂದರೆ, ಮೊದಲು ನೀವು ಹಳೆ ಕಾಲದಲ್ಲಿ ಹಳ್ಳಿಗೆ ಹೋದಾಗ ಮೊದಲು ಶಾಲಾ ಮಾಸ್ತರನ್ನು ಮತ್ತು ಕೊಠಡಿಗಳನ್ನು ಹಳ್ಳಿಯ ಜನರು ಕೇಳುತ್ತಿದ್ದರು. ಸರ್ವ ಶಿಕ್ಷಣ ಅಭಿಯಾನ ಹೋದಮೇಲೆ ಸ್ವಲ್ಪ ನಮಗೆಲ್ಲರಿಗೂ ಕಾಟ ಕಡಿಮೆಯಾಯಿತು. ಬಹುತೇಕ ನಿಮಗೂ ಅನುಭವಕ್ಕೆ ಬಂದಿರಬೇಕೆಂದು ತಿಳಿದುಕೊಂಡಿದ್ದೇನೆ. ಏಕೆಂದರೆ ನೀವು ಕೂಡ ಹೆಚ್ಚು ಹಳ್ಳಿಗೆ ಹೋಗುವಂಥ ಒಬ್ಬ ವ್ಯಕ್ತಿಯೆಂದು ನನ್ನ ಭಾವನೆ. ಈ ಶುದ್ಧ ನೀರಿನ ಘಟಕಗಳು ಇವತ್ತು ಏನಾಗಿದೆಯೆಂದರೆ, ಎಲ್ಲಾ ಹಳ್ಳಿಗಳಲ್ಲಿಯೂ ಈ ಘಟಕಗಳನ್ನು ಹಾಕಿದ್ದಾರೆ. ಅಲ್ಲಿ coin ಹಾಕಿ ಕಾರ್ಡ್ ಹಾಕಿದರೆ ನೀರೇ ಬರುವುದಿಲ್ಲ. ನಾವೇನು ತಿಳಿದುಕೊಂಡಿದ್ದೆವೆಂದರೆ, ಬರಗಾಲ ಪರಿಸ್ಥಿತಿಯಿರುವುದರಿಂದ ನೀರು ಬರುತ್ತಿಲ್ಲವೇನು ಎಂದು ಆ ಜನರನ್ನು ನಾವು ಕೇಳಿದರೆ ಅಲ್ಲಿ ನೀರಿದೆ, ನಾವು ಪಕ್ಕದಲ್ಲಿಯೇ ಬೋರ್‌ವೆಲ್ ಹಾಕಿರಬಹುದು ಅಥವಾ ನದಿ ಮೂಲದಿಂದ ನೀರು ತಂದಿರಬಹುದು ಅಥವಾ ಎಲ್ಲಾದರೂ ನೀರಿನ ಮೂಲದಿಂದ ನೀರನ್ನು ತಂದು ಅದನ್ನು R.O. Plant ಗಳಿಗೆ ಕೊಟ್ಟಿದ್ದೇವೆ. ಇವತ್ತು ನೂರಕ್ಕೆ ಸುಮಾರು ಅರವತ್ತರಷ್ಟು

19-06-2017

ಎಲ್ಲಾ ಬಂದ್ ಆಗಿಬಿಟ್ಟಿವೆ. ಅವರ ಇಲಾಖೆಯ ಇಂಜಿನಿಯರ್‌ಗಳಿಗೆ ಫೋನ್ ಮಾಡಿ ಕೇಳಿದರೆ ಸಾರ್ ಯಾವ ಗುತ್ತಿಗೆದಾರನಿದ್ದಾನೋ ಅವನಿಗೇ 5 ವರ್ಷಗಳವರೆಗೆ, 3 ವರ್ಷಗಳವರೆಗೆ maintenance ಮಾಡಲು ಕೊಟ್ಟಿದ್ದೇವೆ, ಆದರೆ ಅವರು ಬರುತ್ತಿಲ್ಲವೆನ್ನುತ್ತಾರೆ. ಅವರನ್ನು ನೇರವಾಗಿ ಸಂಪರ್ಕ ಮಾಡಿ ನಾವು ಕೇಳಿದರೆ ಸಾರ್ ಕೆಲಸ ಮಾಡಿ ಎರಡು ವರ್ಷವಾಯಿತು, ನಮ್ಮಗೆ ಬಿಲ್ ಹಣ ಇನ್ನು ಬಂದಿಲ್ಲ, ಇನ್ನು maintenance ಮಾಡುವುದೆಲ್ಲಿ ಎನ್ನುತ್ತಾರೆ. ನಾನು ಕೆಲವೊಂದು ಕಡೆ ಶಾಸಕರ ನಿಧಿಯಿಂದ ಶುದ್ಧ ನೀರಿನ ಘಟಕ ಮಾಡಿಸಿದ್ದೇನೆ. 5 ಲಕ್ಷ ರೂ.ಗಳಲ್ಲಿ ಆಗಿದೆ. ಇದರಲ್ಲಿ 3 ಲಕ್ಷ ಸಿವಿಲ್ ವರ್ಕ್‌ಗೆ ಮತ್ತು 2 ಲಕ್ಷ ಮೆಷಿನರಿಗೆ ಆಗಿದೆ. ಅವು ಎಷ್ಟು ಉತ್ತಮವಾಗಿ ನಡೆದಿದೆಯೆಂದರೆ, ಇವೊತ್ತಿನವರೆಗೂ ಕೂಡ ಒಂದು ದಿವಸವೂ ಅವು ಬಂದ್ ಆಗಿಲ್ಲ. ಆದರೆ ಇಲಾಖೆಯವರು ಎರಡು, ಮೂರು ಏಜೆನ್ಸಿಗಳಿಂದ ಘಟಕಗಳನ್ನು ಹಾಕಿಸಿದ್ದಾರೆ. ಒಂದು ಕೆ.ಆರ್.ಡಿ.ಸಿ.ಎಲ್. ನಿಂದ, ಇನ್ನೆರಡು ಪ್ರೈವೇಟ್ ಕಂಪನಿಗಳವರಿಗೆ ಗುತ್ತಿಗೆ ಕೊಟ್ಟು ಮಾಡಿಸಿದ್ದಾರೆ. ನನ್ನ ಕಡೆ ಇದರ ಬಗ್ಗೆ ಎಲ್ಲ ಮಾಹಿತಿಯಿದೆ. ನಾನು ಇಡೀ ರಾಜ್ಯದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನನ್ನ ಕ್ಷೇತ್ರದಲ್ಲಿರತಕ್ಕಂಥದ್ದನ್ನು ಹೇಳಬಯಸುತ್ತೇನೆ. ನಮ್ಮಲ್ಲಿ ಸುಮಾರು 73 R.O. Plant ಗಳನ್ನು ಹಾಕಲಾಗಿದೆ. ಕೆ.ಆರ್.ಡಿ.ಸಿ.ಎಲ್. ನವರು 58, ಹೈಟೆಕ್ ಸೂರತ್ ಕಂಪನಿಯವರು 13 ಘಟಕಗಳನ್ನು ಕೂರಿಸಿದ್ದಾರೆ. ಇನ್ನು ಪೂನಾದ ಮೆಂಬರ್ಸ್ ಕಂಪನಿಯವರು 2 ಘಟಕಗಳನ್ನು ಕೂರಿಸಿದ್ದಾರೆ. ಸ್ಥಗಿತವಾಗಿರುವುದೆಷ್ಟೆಂದರೆ ಇವತ್ತು 30 ಹಳ್ಳಿಗಳಲ್ಲಿ ಘಟಕಗಳು ಬಂದ್ ಆಗಿವೆ. ಏನೇನೂ ಪ್ರಯೋಜನವಿಲ್ಲ. ಈ ಕೆ.ಆರ್.ಡಿ.ಸಿ.ಎಲ್. ನವರು ಇಲ್ಲೇ ಇದ್ದಾರೆ. ಅವರನ್ನು ಕೇಳಿದರೆ ನಮಗೆ ಹಣ ಬಂದಿಲ್ಲ, ನಮ್ಮ ಬಂಡವಾಳ ಹಾಕಿ ಮಾಡಿದ್ದೇವೆ, ಈ ಘಟಕಗಳಿಗೆ ಟೆಂಡರ್ ಎಷ್ಟು ಆಗಿದೆಯೆಂದರೆ, ಒಂದೊಂದು R.O. Plant 15 ಲಕ್ಷ ರೂ.ಗಳ ವರೆಗೂ ಟೆಂಡರ್ ಆಗಿದೆ. ನಾವು ಶಾಸಕರೇ ಇದನ್ನು ಮಾಡಿಸಿದರೆ ಒಂದು ಪ್ಲಾಂಟ್ ಕೆಲಸ 5 ರಿಂದ 6 ಲಕ್ಷ ರೂ.ಗಳೊಳಗೆ ಆಗುತ್ತದೆ. ಬೇರೆ ಏಜೆನ್ಸಿ ಮುಖಾಂತರ ಮತ್ತು ರಾಜ್ಯ ಮಟ್ಟದ ಟೆಂಡರ್ ಮುಖಾಂತರ ಮಾಡಿಸಿದಾಗ ಸುಮಾರು 10 ರಿಂದ 15 ಲಕ್ಷ ರೂ.ಗಳವರೆಗೂ ಕೊಟ್ಟಿದ್ದಾರೆ. ಆದರೆ ಪ್ರಯೋಜನವೇನಾಯಿತು, ಯಾವುದಕ್ಕೂ ಇವೊತ್ತು ಉಪಯೋಗವಿಲ್ಲದಂಥ R.O. Plant ಗಳಾಗಿ ಹಾಳಾಗಿ ಹೋಗಿವೆ. ಜನರು ಒಳ್ಳೆಯ

ಶುದ್ಧ ನೀರು ಕುಡಿಯಬೇಕು, ಅವರು ಆರೋಗ್ಯದಿಂದ ಸುರಕ್ಷಿತವಾಗಿರಬೇಕು ಎಂದು ಒಂದು ಕಡೆ ಹೇಳುತ್ತೇವೆ. ಒಂದು ಕಡೆ ಸರ್ಕಾರದ ಬೊಕ್ಕಸದಿಂದ ಹಣ ಖರ್ಚು ಮಾಡಿ ಇದನ್ನೆಲ್ಲ ನಾವು ಹಾಕಿಸುತ್ತೇವೆ. ಹೀಗೆ ಮಾಡಿದ ಮೇಲೆ ಅವು ಪ್ರಯೋಜನವಾಗಬೇಕಲ್ಲವೆ, ಆ ಪ್ರಯೋಜನ ಈವತ್ತು ನಿಂತುಹೋಗಿದೆ. ಇನ್ನೊಂದು ವಿಷಯ ಹೇಳುವುದೇನೆಂದರೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯ್ತಿ ರಾಜ್ ಇಲಾಖೆಯಲ್ಲಿ ಗ್ರಾಮೀಣರಸ್ತೆಗಳು ಬರುತ್ತದೆ. ಜಿಲ್ಲಾ ಪಂಚಾಯತಿ ವ್ಯಾಪ್ತಿಯೊಳಗೆ ಬರುವ ಗ್ರಾಮೀಣ ರಸ್ತೆಗಳನ್ನು ನಾವು ಹಳ್ಳಿಗಳಿಗೆ ಹೋಗಿ ನೋಡಿದರೆ ಅಲ್ಲಿ ಎತ್ತಿನ ಗಾಡಿಯೂ ಹೋಗುವುದಿಲ್ಲ, ಜೀಪ್ ಹೋಗುವುದಿಲ್ಲ, ಮೋಟಾರ್ ಸೈಕಲ್ ಹೋಗುವುದಿಲ್ಲ, ಇನ್ನು ಆ ರಸ್ತೆಯಲ್ಲಿ ಹೇಗೆ ಹೋಗಬೇಕು ಹೇಳಿ. ಅಲ್ಲಿ ನಾವು ಆ ಹಳ್ಳಿಯ ರಸ್ತೆಯಲ್ಲಿ ಹೋಗಬೇಕಾದರೆ ಕುದುರೆಯನ್ನಾದರೂ ತೆಗೆದುಕೊಂಡು ಹೋಗಬೇಕಾಗುತ್ತದೆ. ಆ ಕುದುರೆ ಮಾರುವವನ್ನು ಹೇಳುತ್ತಾನೆ, ನಮ್ಮ ಕುದುರೆಗಳು ಒಳ್ಳೆಯ ಕುದುರೆಗಳಾಗಿವೆ, ನಿಮ್ಮಲ್ಲಿರುವ ರಸ್ತೆಗೆ ಇದು ನಡೆಯುವುದಿಲ್ಲವೆನ್ನುತ್ತಾನೆ. ನಾನು ಸರ್ಕಾರಕ್ಕೆ ಒಂದು ಮನವಿ ಮಾಡಿದೆ, ಅನೇಕ ಭಾಗ್ಯಗಳನ್ನು ನೀವು ನಮಗೆ ಕೊಟ್ಟಿದ್ದೀರಿ, ಈಗ ನಮಗೊಂದು, ಈ ಗ್ರಾಮೀಣ ಪ್ರದೇಶದಲ್ಲಿ ರೈತರಿಗೆ ಮತ್ತು ಶಾಸಕರಿಗೆ ಹಳ್ಳಿಗೆ ಹೋಗುವುದಕ್ಕೆ ಒಂದು ಕೋಣದ ಭಾಗ್ಯವನ್ನು ನೀವು ನಮಗೆ ಕೊಟ್ಟರೆ , , ,

ಅಧ್ಯಕ್ಷರು:-ಯಾವುದು,

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-ಕೋಣದ ಭಾಗ್ಯವೆಂದು ಕೊಡಬೇಕು.

ಅಧ್ಯಕ್ಷರು:-ಕುದುರೆಯಲ್ಲ, ನೀವು ಹೇಳುತ್ತಿರುವುದು ಕೋಣ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-ಕುದುರೆ ಬೇಡ, ಕುದುರೆ ಬಹಳ ಕಿಮ್ಮತ್ತಿನಲ್ಲಿರುತ್ತದೆ, ಯಾರೂ ಕೊಡುವುದಿಲ್ಲ, ಒಂದು ಲಕ್ಷ, ಒಂದೂವರೆ ಲಕ್ಷ, ಎರಡು ಲಕ್ಷ ರೂ.ಗಳನ್ನು ಕುದುರೆಗೆ ಕೇಳುತ್ತಾರೆ. ಆದುದರಿಂದ ಸರ್ಕಾರದವರು ಕುದುರೆ ಭಾಗ್ಯವನ್ನು ಕೊಡುವುದಕ್ಕೆ ಆಗುವುದಿಲ್ಲ. ಕೊಟ್ಟರೂ ಕೂಡ ಆ ಕುದುರೆ ಕೂಡ ಆ ರಸ್ತೆಯಲ್ಲಿ ಹೋಗುವುದಿಲ್ಲ. ಕೋಣ ಭಾಗ್ಯವನ್ನು ಕೊಟ್ಟರೆ ಆ ಹಳ್ಳಿಯ ಜನರು ಅಲ್ಲಿಯ ರಸ್ತೆಯಲ್ಲಿ ಹೋಗುವುದಕ್ಕೆ ಕನಿಷ್ಠ ಅವರಿಗೆ 15 ರಿಂದ 20 ಕೋಣಗಳನ್ನು ಕೊಟ್ಟರೆ ಅವರು ಪಟ್ಟಣಕ್ಕೆ ಬರುವುದಕ್ಕೆ ಮತ್ತು ಹಳ್ಳಿಗಳಿಗೆ ವಾಪಸ್ ಹೋಗುವುದಕ್ಕೆ ಅನುಕೂಲವಾಗಲು ಕೋಣದ

ಭಾಗ್ಯವನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನೀವು ಹೆಚ್.ಕೆ. ಪಾಟೀಲ್ ಸಾಹೇಬರನ್ನು ಕೇಳಿ, ಅವರು ಬೇಕಾದ್ದೆಲ್ಲವನ್ನು ಹೇಳುತ್ತಾರೆ. ಆಕಾಶವನ್ನು ಮೂರೇ ಗೇಣಿನಲ್ಲಿ ಮುಟ್ಟಿಸಿಬಿಡುತ್ತಾರೆ. ನಮಗೆಲ್ಲೋ ಒಂದು ಕಡೆ ಅನುಮಾನ ಪ್ರಾರಂಭವಾಗಿದೆ. ಆರ್.ಡಿ.ಪಿ.ಆರ್.ನಲ್ಲಿರತಕ್ಕಂಥ ಅಧಿಕಾರಿಗಳಿಗೆ ಮತ್ತು ಅಲ್ಲಿರತಕ್ಕಂಥ ಸಚಿವರಿಗೆ ಒಳಗಿಂದೊಳಗೇ ಏನಾದರೂ ಭಿನ್ನಾಭಿಪ್ರಾಯ ಬಂದಿದೆಯೋ ಅಥವಾ ಇವರ ಮಾತಿಗೆ ಅಧಿಕಾರಿಗಳು ಬೆಲೆ ಕೊಡುತ್ತಿಲ್ಲವೋ ಎಂದು ನಮ್ಮಲ್ಲಿ ಇವತ್ತು ಅನುಮಾನ ಎದ್ದು ಕಾಣುವುದಕ್ಕೆ ಶುರುವಾಗಿದೆ. ನನ್ನ ಕ್ಷೇತ್ರದಲ್ಲಿ ನದಿ ದಂಡೆಗೆ ಸುಮಾರು 26 ಹಳ್ಳಿಗಳು ಬರುತ್ತವೆ. ಈಗ ನೀರು ಬರುವುದಕ್ಕೆ ಪ್ರಾರಂಭವಾಯಿತು. ಆದರೆ ಆ ನೀರನ್ನು ನೋಡುವುದಕ್ಕಾಗುವುದಿಲ್ಲ, ಅಷ್ಟು ಮಣ್ಣುಮಿಶ್ರಿತವಾಗಿರತಕ್ಕಂಥ ನೀರು. ಅದನ್ನು ಕುಡಿಯುವುದಕ್ಕಾಗುವುದಿಲ್ಲ. ಮಹಾರಾಷ್ಟ್ರದಿಂದ 4 ನದಿ ಮೂಲಗಳಿಂದ ಕೃಷ್ಣಾ ನದಿಗೆ ನೀರು ಬರುತ್ತದೆ, ಅದರಲ್ಲಿ ಮಳೆ ನೀರು ಮಿಶ್ರಿತವಾಗಿ ಇವತ್ತು ಮಣ್ಣಿನಿಂದ ಕಲಷಿತವಾಗಿ ಆ ನೀರನ್ನು ಕುಡಿಯುವುದಕ್ಕೆ ಬರುವುದಿಲ್ಲ. ಈ ಮಳೆಗಾಲ ನಿಂತಮೇಲೆ ನಾವು ಡ್ಯಾಂಗಳಲ್ಲಿ ಆರೇಳು ತಿಂಗಳುಗಳವರೆಗೆ ನೀರನ್ನು ನಿಲ್ಲಿಸುತ್ತೇವೆ. ನಿಂತ ನೀರು ಮಲಿನವಾಗಿ ಬಿಡುತ್ತದೆ. ಈ ಎಲ್ಲಾ ಹಳ್ಳಿಗಳ ಚರಂಡಿ ನೀರು ಕೃಷ್ಣಾ ನದಿಗೆ ಹೋಗುತ್ತಿದೆ. ಆ ನೀರನ್ನು ನಾವು ಮತ್ತೆ ಜನರಿಗೆ ಕುಡಿಸಬೇಕು, ಚರಂಡಿ ನೀರು ನದಿಗೆ ಹೋಗಿ mix ಆಗುತ್ತದೆ. ಆ ಚರಂಡಿ ನೀರು mix ಆಗಿರತಕ್ಕಂಥ ನದಿಗಳ ನೀರನ್ನು ಇವತ್ತು ಜನರು ಕುಡಿಯುವುದಕ್ಕೆ ಆಶ್ರಯಿಸುತ್ತಾರೆ. ನಾನು ಎರಡು ಪ್ರಸ್ತಾವನೆಗಳನ್ನು ಕೊಟ್ಟಿದ್ದು ಅವುಗಳು ಸುಮಾರು 4 ವರ್ಷಗಳಿಂದ ಅದು ಹಾಗೆಯೇ ಬಿದ್ದಿದೆ. ಅಲ್ಲಿ ಕಡೇ ಪಕ್ಷ multi village ಯೋಜನೆ ಮಾಡಿದರೆ, ಸಂಯುಕ್ತ ನೀರಿನ ಕುಡಿಯುವ ನೀರಿನ ಯೋಜನೆಯನ್ನು ತಂದರೆ ಅವು filter ಆಗಿ ಹಳ್ಳಿಯ ಜನರಿಗೆ ಕುಡಿಯುವುದಕ್ಕೆ ಸಾಧ್ಯವಾಗುತ್ತದೆ. ಎಲ್ಲಾ ಕಮಿಟಿಗಳಲ್ಲಿ ಇದು ಪಾಸ್ ಆಯಿತು. SLSC ಆಯಿತು, ವರದಿ ಬಂತು, ಸನ್ಮಾನ್ಯ ಮಂತ್ರಿಗಳಿಗೆ ಹೇಳಿದೆ, ಸಾರ್ ನಾನು ಬಿ.ಜೆ.ಪಿ. ಶಾಸಕನಿರಬಹುದು, ಅಲ್ಲಿರತಕ್ಕಂಥ ಜನರು ಯಾವುದೇ ಒಂದು ಪಕ್ಷಕ್ಕೆ ಗುತ್ತಿಗೆ ಕೊಟ್ಟಿರತಕ್ಕಂಥ ಜನರಲ್ಲ. ಎಲ್ಲಾ ವರ್ಗದ ಜನರಿರುತ್ತಾರೆ, ಅವರಿಗೆ ಯೋಗ್ಯವಾಗಿರತಕ್ಕಂಥ ಕುಡಿಯುವ ನೀರನ್ನು ಕೊಡಬೇಕು ಎಂದು ಹೇಳಿ multi village ಗಳಿಗೆ ಮಂಜೂರಾತಿ ಮಾಡಿ

19-06-2017

ಎಂದು ಹೇಳಿದರೆ, ಏನು ಮಾಡಬೇಕು ಎಂದು ಅವರು ನನ್ನನ್ನು ಕೇಳಿದರು. ಏನೂ ಬಾಕಿ ಉಳಿದಿಲ್ಲ, ಸಚಿವ ಸಂಪುಟದ ಮುಂದೆ ಮಂಡನೆಯಾಗಬೇಕು, ಆಡಳಿತಾತ್ಮಕ ಮಂಜೂರಾತಿ ಕೊಡಬೇಕು ಮತ್ತು ಟೆಂಡರ್ ಕರೆಯಬೇಕು ಎಂದೆ.

(ಮುಂದು)

D 19.06.2017/3.40/27/HBU-VG(PS)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಮುಂದು) : ಅವರು ಹೌದಾ ಎಂದರು. ನಾನು ಅವರ ಪಕ್ಕದಲ್ಲಿಯೇ ಕುಳಿತಿದ್ದೆ. ಅವರು ಕಾಗದ ಹರಿದುಕೊಂಡರು, ಯಾವ್ಯಾವ ಹಳ್ಳಿ ಹೇಳು ಎಂದರು, ಬರೆದರು. ಇಲ್ಲಿಯೇ ಪ್ರಧಾನ ಕಾರ್ಯದರ್ಶಿಯವರು ಕುಳಿತಿದ್ದರು. ಇದನ್ನು ತಕ್ಷಣ ಮುಂದಿನ ಸಚಿವ ಸಂಪುಟದ ಸಭೆಯಲ್ಲಿ ಮಂಡನೆ ಮಾಡುವುದಕ್ಕೆ ನಾನು ಆದೇಶಿತನಾಗಿದ್ದೇನೆಂದು ಬರೆದರು. ನನಗೆ ಖುಷಿಯಾಯಿತು. ಇನ್ನೇನು ನಮ್ಮ ಕೆಲಸ ಆಗಿಬಿಡ್ತು ಎಂದುಕೊಂಡೆ. ಅದನ್ನು ತೆಗೆದುಕೊಂಡು ಹೋಗಿ ಅಧಿಕಾರಿಗಳಿಗೆ ಕೊಟ್ಟೆ. ಅವರು ಅದನ್ನೂ ತೆಗೆದುಕೊಂಡರು. ಆರು ತಿಂಗಳಾದರೂ ಏನೂ ಕೆಲಸವಾಗಲಿಲ್ಲ. ನಾನು ಮತ್ತೊಂದು ಬಾರಿ ಕೇಳಿದೆ. ಆಗ ಅವರು ಇನ್ನೂ ನಿನ್ನ ಕೆಲಸವಾಗಿಲ್ಲ ಎಂದರು. ಸರ್, ಇನ್ನೂ ಆಗಿಲ್ಲವೆಂದು ಹೇಳಿದೆ. ಅದೇಗೆ ಆಗಲಿಲ್ಲವೆಂದರು. ನನಗೆ ಗೊತ್ತಿಲ್ಲ ಸಾರ್, ಅವರನ್ನೇ ಕೇಳಬೇಕೆಂದು ಹೇಳಿದೆ. ಅವರು ಇನ್ನೊಂದು ಬಾರಿ ಬರೆಯುತ್ತೇನೆ ಎಂದರು. ಮತ್ತೊಂದು ಬಾರಿ ಬರೆದರು. ಅದನ್ನು ನಾನೇ ತೆಗೆದುಕೊಂಡು ಹೋಗಿ ಇಲಾಖೆಗೆ ಕೊಟ್ಟೆ. ಅದನ್ನು ಇಟ್ಟುಕೊಂಡರು. ಈ ಪ್ರಕ್ರಿಯೆ ನಡೆದು ಸುಮಾರು ಎರಡು ವರ್ಷಗಳಾಯಿತು. ಅಧಿಕಾರಿಗಳನ್ನು ಕೇಳಿದರೆ ಅದಕ್ಕೆ ಇನ್ನು ಸಚಿವ ಸಂಪುಟದಲ್ಲಿ ಮಂಡನೆಯಾಗಬೇಕೆಂದು ಹೇಳುತ್ತಾರೆ. ಮತ್ತೆ ಮಂತ್ರಿಗಳು ಹೇಳಿದರಲ್ಲ ಎಂದು ಕೇಳಿದರೆ ಮಂತ್ರಿಗಳು ಹೇಳುತ್ತಾರೆ, ಬರೆಯುತ್ತಾರೆ ಏನು ಮಾಡುವುದಕ್ಕೆ ಆಗುತ್ತದೆ? ನನಗೆ ಈ ಸರ್ಕಾರದ ಬಗ್ಗೆ ಏನು ಸಂಶಯ ಎದ್ದು ಕಾಡುತ್ತಿದೆಯೆಂದರೆ ಮಂತ್ರಿಗಳ ಮಾತಿಗೆ ಅಧಿಕಾರಿಗಳು ಬೆಲೆ ಕೊಡುತ್ತಾರೋ ಇಲ್ಲವೋ ಎನ್ನುವ ಸಂಶಯ ಪ್ರಾರಂಭ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಆಗಿದೆ. ಯಾವುದಾದರೂ ಒಂದು ಕೆಲಸ ಆಗಬೇಕಾದರೆ ಶಾಸಕಾಂಗ ಮತ್ತು ಕಾರ್ಯಾಂಗ ಇವೆರಡೂ ಸೇರಿ ಮಾಡಿದಾಗ ಮಾತ್ರ ಕೆಲಸವಾಗುತ್ತದೆ. ಇಲ್ಲದಿದ್ದರೆ ಯಾವುದೇ ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಿಲ್ಲ. ನಾವು ಶಾಸಕರು ಒಂದು ಬಾರಿ ಗೆದ್ದು ಬರುತ್ತೀವಿ, ಇನ್ನೊಂದು ಬಾರಿ ಸೋಲುತ್ತೀವಿ. ಆದರೆ ಅವರು ನಿರಂತರವಾಗಿ ಇರುವವರು. ಮಾನ್ಯ ರಮೇಶ್ ಕುಮಾರ್ ರವರಿಗೆ ಗೊತ್ತಿದೆ. ಗಣೇಶ ಚತುರ್ಥಿ ಹಬ್ಬದಂದು ನಾವು ಗಣೇಶನನ್ನು ತರುತ್ತೇವೆ. ನಮ್ಮ ಮನೆಯೊಳಗೊಂದು ಗಣೇಶನನ್ನು ಇಂತಹ ಕಡೆಯೇ ಕೂರಿಸಬೇಕೆಂದು ಮಾಡ ಮಾಡಿಕೊಂಡಿರುತ್ತೇವೆ. ಗಣಪನನ್ನು ತೆಗೆದುಕೊಂಡು ಬರುವಾಗ ಮೆರವಣಿಗೆ ಮಾಡಿ, ಪಟಾಕಿ ಹಾರಿಸಿ ಗಣೇಶನ ಮೂರ್ತಿಯನ್ನು ತಂದು ಮಾಡದೊಳಗೆ ಇಟ್ಟು ಐದು ದಿವಸ ಪೂಜೆ ಪುನಸ್ಕಾರ ಮಾಡಿ ಐದು ದಿವಸದ ನಂತರ ಕೆರೆ ಅಥವಾ ಬಾವಿಯೊಳಗೆ ಎಲ್ಲಿಯಾದರೂ ಒಂದು ಕಡೆ ವಿಸರ್ಜನೆ ಮಾಡುತ್ತೇವೆ. ಅದಾದಮೇಲೆ ಜೋಕುಮಾರ ಬರುತ್ತಾನೆ. ವಿಸರ್ಜನೆ ಬಗ್ಗೆ ಏಕೆ ಉದಾಹರಣೆ ಕೊಡುತ್ತೇನೆಂದರೆ ನಾವೇನು ಶಾಸಕರಿರುತ್ತೇವೆ, ಅದು ಚಲೋ ಗಣಪತಿ ಇರಬಹುದು, ಒಂದು ಸಣ್ಣ ಗಣಪತಿ ಇರಬಹುದು, ದೊಡ್ಡ ಗಣಪತಿ ಇರಬಹುದು, ಆದರೆ ರೊಟೇಷನ್ ಏನಿದೆ ಅಂದರೆ ಬರುವುದು, ಐದು ದಿವಸ ಕೂಡುವುದು ಎದ್ದು ಒಯ್ದು ಒಗೆಯುವುದು. ಆದರೆ ಮನೆಯೊಳಗೆ ಗಣಪನನ್ನು ಕೂಡಿಸುವಂಥ ಮಾಡು ಏನಿರುತ್ತದೆ, ಅದು ಶಾಶ್ವತವಾಗಿ ಇರುತ್ತದೆ. ಅದು ಯಾವತ್ತು ಬದಲಾಗುವುದಿಲ್ಲ. ನಾವು ಬರುತ್ತೀವಿ, ಹೋಗುತ್ತೀವಿ, ಆದರೆ ಈ ದಿಕ್ಕಿನಲ್ಲಿ ನಮ್ಮ ಅಧಿಕಾರಿಗಳು ಏನು ಕುಳಿತಿದ್ದಾರಲ್ಲ, ಅವರು ನಿರಂತರವಾಗಿ ಇರುವಂಥ ಗಣಪತಿ ಮಾಡು ಇದ್ದ ಹಾಗೆ. ಅವರಿಗೆ ಇವತ್ತಿನ ಪರಿಸ್ಥಿತಿಯೊಳಗೆ ನಾವು ಹೆಚ್ಚು ಒತ್ತು ಕೊಟ್ಟು ಹೇಳಬೇಕಾಗಿದೆ. ಏಕೆಂದರೆ ಯಾವುದೇ ಸಚಿವರಿಗೆ ಈ ರೀತಿಯಾಗುತ್ತದೋ ಇಲ್ಲವೋ ಗೊತ್ತಿಲ್ಲ. ಆದರೆ ಪಂಚಾಯತ್ ರಾಜ್ ಇಲಾಖೆಯೊಳಗೆ ಮಾನ್ಯ ಹೆಚ್.ಕೆ. ಪಾಟೀಲರ ಮಾತನ್ನು ಅಧಿಕಾರಿಗಳು ಎಳ್ಳಷ್ಟೂ ಕೂಡ ಕೇಳುವುದಿಲ್ಲವೆನ್ನುವ ಭಾವನೆ ನನಗೆ ಬಂದಿದೆ. ಅದಕ್ಕೆ ಅವರು ಸ್ಪಷ್ಟೀಕರಣ ಕೊಡಬೇಕು. ಅದರ ಜೊತೆಗೆ ಅವರು ನಮಗೆ ಎಲ್ಲಾ ವಿಚಾರಗಳನ್ನು ಹೇಳಿ ಕನಸು ತುಂಬಿದರು. ಈಗಾಗಲೇ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಅನೇಕ ಹಿರಿಯ ಶಾಸಕರು ಮಾತನಾಡಿದರು. ವಿಮಾನ ನಿಲ್ದಾಣದಲ್ಲಿರುವಂಥ ಬಾತ್‌ರೂಮುಗಳು ಏನಿವೆ, ಅಂತಹ ಬಾತ್

ರೂಮುಗಳನ್ನು ಹಳ್ಳಿಹಳ್ಳಿಗೆ ಕಟ್ಟಿಸುತ್ತೇನೆಂದು ಹೇಳಿದರು. ಹಳ್ಳಿಯಲ್ಲಿ ಇವು ನಡೆಯುತ್ತದೆಯೇ ಎಂದು ನಾವು ಕೇಳಿದೆವು. ಏಕ್ರಿ ನೀವು ಶ್ರೀಮಂತರಷ್ಟೆ ಅಲ್ಲಿ ಸ್ನಾನ ಮಾಡಬೇಕಾ, ಬಡವರು ಸ್ನಾನ ಮಾಡಬಾರದೇ ಎಂದು ಕೇಳಿದರು. ನನಗೆ ಖುಷಿಯಾಯಿತು. ಆಗ ಮಾನ್ಯ ರಮೇಶ್ ಕುಮಾರ್ ರವರು ಮಂತ್ರಿಗಳಾಗಿರಲಿಲ್ಲ, ಅವರು ಅಲ್ಲಿ ಕುಳಿತುಕೊಂಡು ನಗುತ್ತಿದ್ದರು. ಇದು ಸಾಧ್ಯವೇ ಎನ್ನುವ ಸಂಶಯ ಅವರಿಗೆ ಅವತ್ತೇ ಪ್ರಾರಂಭವಾಗಿತ್ತು ಎಂದು ನಾನು ತಿಳಿದುಕೊಂಡಿದ್ದೆ.

ಶ್ರೀ ಬಿ ಸುರೇಶ್ ಗೌಡ : ಮಾನ್ಯ ಸವದಿಯವರೆ, ಹೆಣ್ಣುಮಕ್ಕಳಿಗೆ ಒಂದು ಮನಿ ಬ್ಯೂಟಿ ಪಾರ್ಲರ್ ಇಡುತ್ತೇವೆಂದು ಹೇಳಿದ್ದರು. ಅವರ ಕ್ಷೇತ್ರದಲ್ಲಿದೆಯೇ ಎಂದು ನಾವು ಕೇಳಿಬೇಕು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಅವರು ಯಾವ ರೀತಿ ಹೇಳಿದ್ದರೋ ಅವರೆ ನಾವು ಒಂದು ಬಾತ್ ರೂಮು ಕಟ್ಟಿಸುತ್ತೇವೆ. ಅಲ್ಲಿ shower ಹಾಕುತ್ತೇವೆ, ಆ ಬಾತ್ ರೂಮಿನಲ್ಲಿ ಶ್ಯಾಂಪು ಇಡುತ್ತೇವೆ. ಆ ಶ್ಯಾಂಪೂದಿಂದ ತಲೆ ತೊಳೆಸುತ್ತೇವೆ. ತಲೆ ತೊಳಿಸಿದ ಮೇಲೆ ಕೂದಲು ಒಣಗುವುದಕ್ಕೆ ಹೇರ್ ಡ್ರೈಯರ್ ಇಡುತ್ತೇವೆಂದು ಹೇಳಿದರು. ನೋಡಿ ಮಾನ್ಯ ಅಧ್ಯಕ್ಷರೆ, ಎಂತಹ ಕನಸುಗಳು. ಎಂತಹ ಕನಸುಗಳನ್ನು ತುಂಬಿದರು ಎಂದರೆ ನಾನು ಒಂದು ಬಾರಿ ಆಲೋಚನೆ ಮಾಡುತ್ತೇನೆ. ನಾನು ಒಂದು ಬಾರಿ ಹೇರ್ ಸಲೂನ್‌ಗೆ ಹೋದಾಗ ಹೇರ್ ಸಲೂನ್ ಮಾಡುವಂಥ ವ್ಯಕ್ತಿ ನಿಮ್ಮ ಕೂದಲು ಬಹಳ ತೆಳ್ಳಗೆ ಆಗುತ್ತಿದೆಯಲ್ಲ ಎಂದು ಕೇಳಿದ್ದರು. ಅದಕ್ಕೆ ನಾನು ಹೌದು, ವಯಸ್ಸಾಗುತ್ತಿದೆಯಲ್ಲ, ಅದಕ್ಕೆ ಆಯಿತು ಎಂದು ಹೇಳಿದೆ. ಅದಕ್ಕೆ ಅವರು ಇಲ್ಲ, ಇದಕ್ಕೆ ಏನೋ ಒಂದು ಕಾರಣ ಇದೆ ಎಂದು ಹೇಳಿದರು. ಏನು ಕಾರಣ ಎಂದು ಕೇಳಿದೆ. ನೀವು ಹೇರ್ ಡ್ರೈಯರ್ ಏನಾದರೂ ಉಪಯೋಗ ಮಾಡುತ್ತೀರಾ ಎಂದು ಕೇಳಿದರು. ಅದಕ್ಕೆ ನಾನು ಯಾವಾಗಲಾದರೂ ಒಮ್ಮೊಮ್ಮೆ ತಲೆ ಸ್ನಾನ ಮಾಡಿದಾಗ ಮಾಡುತ್ತೇನೆಂದು ಹೇಳಿದೆ. ಅದಕ್ಕೆ ಅವನು ಅದರಲ್ಲಿ ಹೇರ್ ಡ್ರೈ ಮಾಡುವುದಕ್ಕೆ ಹೋಗಬೇಡಿ ಎಂದು ಹೇಳಿದ. ನೀವು ಹೇರ್ ಡ್ರೈಯರ್‌ನಲ್ಲಿ ಕೂದಲು ಬಿಸಿ ಮಾಡಿದರೆ ಕೂದಲು ಉದುರುವುದಕ್ಕೆ ಪ್ರಾರಂಭವಾಗುತ್ತದೆ, ಅದಕ್ಕೆ ಅದರಲ್ಲಿ ಹೇರ್ ಡ್ರೈ ಮಾಡುವುದಕ್ಕೆ ಹೋಗಬೇಡಿ ಎಂದು ಹೇಳಿದ. ನಾನು ಮಾನ್ಯ ಹೆಚ್.ಕೆ. ಪಾಟೀಲ್ ಸಾಹೇಬರಿಗೆ ಹೇಳಿದೆ. ಸಾಹೇಬರೆ ನೀವು ಹೇಳಿದ್ದನ್ನೆಲ್ಲ ಮಾಡಿ, ಆದರೆ ಹೇರ್‌ಡ್ರೈಯರ್ ಮಾತ್ರ ಆ ಬಾತ್‌ರೂಮಿನಲ್ಲಿ ಇಡುವುದಕ್ಕೆ ಹೋಗಬೇಡಿ ಎಂದು ಹೇಳಿದೆ.

ಅವರು ಏಕೆಂದು ಕೇಳಿದರು. ಅದನ್ನು ಉಪಯೋಗ ಮಾಡಿದರೆ ಕೂದಲು ಉದುರುತ್ತವೆ, ನಮ್ಮ ಕಡೆ ಬಹಳ ಜನ ಹೆಣ್ಣುಮಕ್ಕಳು ಏನಿದ್ದಾರೆ, ಅವರ ಕೂದಲು ಉದುರಿದರೆ ಅದಕ್ಕೆ ಕೂದಲು ತರಿಸುವ ಭಾಗ್ಯ ಎಂದು ಮತ್ತೊಂದು ಯೋಜನೆ ತರಬೇಕಾದೀತು, ಅದಕ್ಕೆ ಅದನ್ನು ಬಿಟ್ಟು ಮಾಡಿ ಎಂದು ಹೇಳಿದೆ. ಅದಕ್ಕೆ ಅವರು ಪರಿಶೀಲನೆ ಮಾಡುತ್ತೇನೆಂದು ಹೇಳಿದರು. ಆದರೆ ಇವತ್ತಿನವರೆಗೂ ಕೂಡ ಒಂದು ಬಾತ್ ರೂಮು ಇಲ್ಲ, ಶ್ಯಾಂಪೂ ಇಲ್ಲ, ಶವರ್ ಇಲ್ಲ. ನಾವು ಹೇರ್ ಡ್ರೈಯರ್ ಬೇಡವೆಂದು ಹೇಳಿದ್ದೆವು, ಅದಕ್ಕೆ ಬಿಟ್ಟರು. ನಮ್ಮ ಮಾತಿಗೆ ಮನ್ನಣೆ ಕೊಡುವಂಥ ಏಕೈಕ ಮಂತ್ರಿ ಯಾರಾದರೂ ಇದ್ದರೆ ಮಾನ್ಯ ಹೆಚ್.ಕೆ. ಪಾಟೀಲರು. ಅವತ್ತು ನಾನು ಏನು ಮನವಿ ಮಾಡಿಕೊಂಡಿದ್ದೆ ಚಿಂತನೆ ಪ್ರಾರಂಭವಾಯಿತು. ಹೇರ್ ಡ್ರೈಯರ್ ಇಟ್ಟರೆ ಬಹುತೇಕ ಹೆಣ್ಣುಮಕ್ಕಳ ತಲೆಯಲ್ಲಿರುವ ಕೂದಲು ಹೋಗುತ್ತದೆ, ಇದನ್ನು ಮಾಡುವುದು ಬೇಡವೆಂದು ನನ್ನ ಮಾತಿಗೆ ಬೆಲೆ ಕೊಟ್ಟಿರುವ ಏಕೈಕ ಮಂತ್ರಿಗಳಿದ್ದರೆ ಅದು ಉತ್ತರ ಕರ್ನಾಟಕದ ಹುಲುಕೋಟಿಯ ಹುಲಿಯ ಮುಂದಿನ ಸಂತಾನ ವಾಗಿರುವಂಥ ಮಾನ್ಯ ಹೆಚ್.ಕೆ. ಪಾಟೀಲರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ : ನೀವು hair drier ಬೇಡವೆಂದು ಹೇಳಿದಿರಾ ಅಥವಾ ಬಾತ್ ರೂಮು ಬೇಡವೆಂದು ಹೇಳಿದ್ದೀರಾ? ಅದನ್ನು clarify ಮಾಡಿ, ಅದಕ್ಕೆ ಅವರು ಮಾಡಿರಲಿಕ್ಕಿಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ನಾಳೆ ಮಾನ್ಯ ಮಂತ್ರಿಗಳು ಬಂದಾಗ ಯಾರ್ಯಾರ ಮಾತಿಗೆ ಮಾರು ಹೋಗಿ ನೀವು ಬಂದ್ ಮಾಡಿದ್ದೀರೆಂದು ಅವರನ್ನು ಕೇಳೋಣ. ಇವತ್ತು ಹತ್ತು-ಹದಿನೈದು ವರ್ಷಗಳಲ್ಲಿ . . .

ಅಧ್ಯಕ್ಷರು : ಈ ವಿಷಯವಾಗಿ ಬಹಳಷ್ಟು ಮಂದಿ ಮಾತನಾಡಿದರು, ಆದರೆ ನಿಮ್ಮಷ್ಟು ಮಾರ್ಮಿಕವಾಗಿ ಯಾರೂ ಮಾತನಾಡಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರೇ, ಹೌದಲ್ಲವೇ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಸುಮಾರು 10-15 ವರ್ಷಗಳಲ್ಲಿ ನಾನು ಕಂಡ ಹಾಗೆ ಪಂಚಾಯತ್ ರಾಜ್ ಇಲಾಖೆ ಇಷ್ಟೊಂದು ತುಕ್ಕು ಹಿಡಿಯತ್ತದೆ ಎಂದು ನಾನು ಅಂದುಕೊಂಡಿರಲಿಲ್ಲ. ನಾವೆಲ್ಲರೂ ಕನಸುಗಾರರು. ಮಾನ್ಯ ಹೆಚ್.ಕೆ. ಪಾಟೀಲರು ಅಲ್ಲಿ ಕುಳಿತುಕೊಂಡಾಗ ನಾವೆಲ್ಲರೂ

19-06-2017

ಬಹುತೇಕ ಈ ಹುಲುಕೋಟಿ ಹುಲಿ ಇದೆಯಲ್ಲ, ಮುಂದೊಂದು ದಿವಸ ಇದು ಒಂದನೆಯ ಚೇರ್‌ಗೆ ಬರುತ್ತದೆ ಎಂದು ಮಾತನಾಡುತ್ತಿದ್ದೆವು. ಮೊನ್ನೆ ನಮ್ಮ ಪಕ್ಷದ ಅನೇಕ ಮುಖಂಡರು ಜನ ಜಾಗೃತಿ ಮತ್ತು ಜನ ಅಭಿಯಾನದಲ್ಲಿ ಹೋದಾಗ ಹೇಳುತ್ತಿದ್ದರು, ಅದು ಪತ್ರಿಕೆಯಲ್ಲಿ ಕೂಡ ಬಂತು. ಈಗ ಮಾನ್ಯ ಬಸವರಾಜ್ ರಾಯರೆಡ್ಡಿಯವರು ಬಂದರು. ಅವರು ಮಂತ್ರಿಯಾಗುವುದಕ್ಕಿಂತ ಮೊದಲು ಅನೇಕ ಸಲ ಪ್ರಸ್ತಾಪ ಮಾಡಿದರು. ಪಂಚಾಯತ್ ರಾಜ್ ಇಲಾಖೆ ಬಗ್ಗೆ ಇಷ್ಟು ಖಾರವಾಗಿ ಚರ್ಚೆಗಳನ್ನು ಮಾಡಿ ಅನೇಕ ಸಾರಿ ಮಾನ್ಯ ಹೆಚ್.ಕೆ. ಪಾಟೀಲ್‌ರಿಗೆ ಮುಜುಗರ ಆಗುವಂಥ ಪರಿಸ್ಥಿತಿಯನ್ನು ಸಹ ಉಂಟು ಮಾಡಿದರು. ಅವರೇನು ಮಂತ್ರಿಯಾದರೋ, ಅವರು ಎಲ್ಲಿ compromise ಆದರೋ ಏನಾಯಿತೋ, ಗೊತ್ತಿಲ್ಲ, ಅವರು ಒಂದು ಮಾತೂ ಕೂಡ ಆಡುವುದಕ್ಕೆ ತಯಾರಿಲ್ಲ. ನಾನು ಕಂಡ ಹಾಗೆ 15 ವರ್ಷದಲ್ಲಿ ಪಂಚಾಯತ್ ರಾಜ್ ಇಲಾಖೆಯೊಳಗೆ ಇಷ್ಟು ಮಂದಗತಿಯಲ್ಲಿ ನಡೆದಿರುವಂಥ ಕಾರ್ಯಗಳನ್ನು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ. ಅವರು ಹೇಳುತ್ತಿದ್ದರು, ಕೃಷ್ಣೆಯ ಕಣ್ಣೀರು ಬರೆದಿರುವಂಥ ಮಹಾನುಭಾವರು. ಅಂತವರಿಗೆ ಈ ಇಲಾಖೆ ಕೊಟ್ಟಾಗ ಏನು ಮಾಡಬಲ್ಲರು ಎನ್ನುವ ಚಿಂತನೆ ನಮಗಿತ್ತು. ಏನೇನೂ ಆಗಲಿಲ್ಲ. ಬಹುತೇಕ ನಾನು ಈ ಸಂದರ್ಭದಲ್ಲಿ ಮಾನ್ಯ ಹೆಚ್.ಕೆ. ಪಾಟೀಲರಿಗೆ ಇಷ್ಟು ಹೇಳುತ್ತೇನೆ. ಈಗ ದಿವಸಗಳು ಮುಗಿಯುವುದಕ್ಕೆ ಬಂದಿವೆ, ಇನ್ನು ಸ್ವಲ್ಪ ಉಳಿದಿವೆ. ಉಳಿದಿರುವಂಥ ದಿವಸದಲ್ಲಾದರೂ ಸಹ ಒಳ್ಳೆಯ ಹೆಸರು ತರುವಂಥ ಕೆಲಸ ಮಾಡಲಿ ಎಂದು ನಾನು ಅಪೇಕ್ಷೆ ಮಾಡುತ್ತೇನೆ.

(ಮುಂದು)

19.06.17 - 3.50 - (28) - RD-VG(PS)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮುಂದು.. .. .

ಅವರು ಹೇಗೆ ಮಾತನಾಡುತ್ತಾರೆಂದರೆ, "ಜಾಲಿ ಝಾಡ ಮೇ ಬಳು ಬೈಟಾ ಥಾ, ಮೈ ಸರ್ಪ್ ತೊಡು ಮಾತ್ಯಾ, ನಾಬಳ್ ಮೇ ಚುಕ್ಯಾ" ಅಂದರೆ "ಒಂದು ಜಾಲಿ ಗಿಡದೊಳಗೆ ಒಂದು ಬಳ್ಳುವ ಕುಳಿತಿತ್ತು, ನೇರವಾಗಿ ನಾನು ಅದಕ್ಕೆ ಗುರಿ ಇಟ್ಟು ಹೊಡೆದೆ, ನಾಲ್ಕೇ ಬೆರಳಲ್ಲಿ, ಅದಕ್ಕೆ ತಪ್ಪಿತು" ಎಂದು ಅದರ

ಅರ್ಥ. ಆ ರೀತಿ ನಮ್ಮ ಮಾನ್ಯ ಡಿ.ಕೆ.ಶಿವಕುಮಾರ್‌ರವರು 15 ದಿವಸಗಳಿಂದ ಅವರು ಎಲ್ಲಾ ಸರಕು ನೋಡಿ ಹೊಡೆದಿದ್ದರು, ಅದು ನಾಲ್ಕೆ ಬೆರಳಲ್ಲಿ ತಟ್ಟಿತು. ಅವರು ಏನಾದರೂ ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿ ಇದ್ದರೆ, ಬಹುತೇಕ ಆ ಜಾಗವನ್ನು ಬಿಡಬೇಕಾಗಿತ್ತು. ಅವರು ಎಷ್ಟು ದಿವಸಗಳು ಆ ಇಲಾಖೆಯಲ್ಲಿರುತ್ತಾರೆ, ಅಷ್ಟು ದಿವಸಗಳಲ್ಲಿ ಒಳ್ಳೆಯ ಕೆಲಸವನ್ನು ಮಾಡಬೇಕು, ಪ್ರಭಾವ ಬೀರಬೇಕು, ರಾಜ್ಯದ ಜನತೆ ನನ್ನ ಕಡೆ ನೋಡಬೇಕೆಂಬ ಕಲ್ಪನೆಯನ್ನು ಇಟ್ಟುಕೊಂಡು, ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದ್ದಾರೆ. ನಾನು ಆ ಅದ್ಭುತ ಕಾರ್ಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಅದು ಇಂತಿಂಥ ಕಾರ್ಯಗಳೆಂದು ಸಹ ಹೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ, ಮಾನ್ಯ ರಮೇಶ್ ಕುಮಾರ್‌ರವರು ಮೇಲೆ ಮೇಲೆ ಅದು ಏನೆಂದು ಹೇಳಿಬಿಡು ಎಂದು ಹೇಳುತ್ತಾರೆ. ನಾನು ಅದರ ಬಗ್ಗೆ touch ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಸರ್ಕಾರವಿದ್ದಾಗ ಶ್ರೀಮತಿ ಶೋಭ ಕರಂದ್ಲಾಜೆಯವರು ಇದ್ದಾಗ, ರೈತರಿಗೋಸ್ಕರ self executive ಎಂದು ತಂದರು, ಯಾವ ರೈತ ತಂತಿ, ಕಂಬ ಮತ್ತು transformerಗಳನ್ನು ತಾನೇ ಖರೀದಿ ಮಾಡಿಕೊಳ್ಳುವುದು, ತಾನೇ ಹಾಕಿಕೊಳ್ಳುವುದು, ಅದರ supervise ಮಾತ್ರ ಹೆಸ್ಕಾಂನವರು ಮಾಡುವುದು. ಆಗ ಬಹಳಷ್ಟು ರೈತರು ಮೂರು ತಾಸು, ನಾಲ್ಕು ತಾಸು ವಿದ್ಯುತ್ ಸಮಸ್ಯೆಯಿಂದ ಬೆಳೆ ಹಾಳಾಗುತ್ತಿದೆ. ನಮ್ಮ ಬೆಳೆ ಸಂಪೂರ್ಣವಾಗಿ, ನಮ್ಮ ಫಸಲು ನಮಗೆ ಬರಬೇಕಾದರೆ, ನಮಗೆ ಕನಿಷ್ಟ ಪಕ್ಷ 20-24 ತಾಸುಗಳು ವಿದ್ಯುತ್ ಬಂದರೆ ಮಾತ್ರ, ನಮಗೆ ಬದುಕಲು ಸಾಧ್ಯವೆಂಬ ಕಲ್ಪನೆ ಪ್ರಾರಂಭವಾಗಿ, ಲಕ್ಷಾಂತರ ರೂ.ಗಳನ್ನು ಖರ್ಚು ಮಾಡಿ, ವಿದ್ಯುತ್ ಕೊಳ್ಳಲು ಪ್ರಾರಂಭ ಮಾಡಿದರು. ಅವರು ವಿದ್ಯುತ್ ಬಿಲ್ ಅನ್ನು ಕಟ್ಟುತ್ತಾರೆ, ನಾವು 10 horse powerಗೆ ಎಲ್ಲಾ ರೈತರು ಉಚಿತ ವಿದ್ಯುತ್ ಅನ್ನು ಪಡೆದುಕೊಳ್ಳುತ್ತಾರೆ. ಅವರಿಗೆ ವಿದ್ಯುತ್ ಇಲ್ಲ, ಅವರು ಸ್ವಂತ ಖರ್ಚು ಮಾಡುತ್ತಾರೆ, ವಿದ್ಯುತ್ ಅನ್ನು ಪಡೆದುಕೊಳ್ಳುತ್ತಾರೆ. ಒಂದು ಯೂನಿಟ್‌ಗೆ ಪ್ರಾರಂಭದಲ್ಲಿ 40 ಪೈಸೆ ಇತ್ತು, ರೈತನು ತನ್ನದೇ ಆದಂಥ ಲೆಕ್ಕಚಾರವನ್ನು ಹಾಕಿದನು. 10 ಹೆಚ್.ಪಿ. ಮೋಟಾರ್‌ಗೆ ಒಂದು ತಿಂಗಳಿಗೆ ನಾವು ಎಷ್ಟು ವಿದ್ಯುತ್ ಅನ್ನು ಖರ್ಚು ಮಾಡಬಲ್ಲೆ, ಇದಕ್ಕೆ ನಾನು ಎಷ್ಟು ಹಣವನ್ನು ಕೊಡಬಲ್ಲೆ, ನಾನು ಬೆಳೆದಂಥ ಬಂದಾಗ, ಅದರಿಂದ ಎಷ್ಟು ಲಾಭವಾಗಬಹುದೆಂಬ ಚಿಂತನೆಯನ್ನು ಮಾಡಿಕೊಂಡು, ಒಟ್ಟಿಗೆ

19-06-2017

ಅನೇಕ ರೈತರು ಇಂಥ ಯೋಜನೆಯನ್ನು ಪ್ರಾರಂಭ ಮಾಡಿದರು. ಅದರಲ್ಲೂ ವಿಶೇಷವಾಗಿ ನಮ್ಮ ಉತ್ತರ ಕನ್ನಡದಲ್ಲಿ ಆಗಿದೆ. ಅದು ಇವತ್ತು ಏನಾಗಿದೆ? ರೈತರು self execution schemeನಲ್ಲಿ ಪ್ರಾರಂಭ ಮಾಡಿದ್ದಾರಲ್ಲಾ, ಅವರಿಗೆ ಇವತ್ತು ಒಂದು ಯೂನಿಟ್‌ಗೆ ರೂ.2.60 ಪೈಸೆ ಆಗಿದೆ. ಒಬ್ಬೊಬ್ಬ ರೈತನಿಗೆ ಒಂದು ವರ್ಷಕ್ಕೆ 10 Horse Power motor ಇದ್ದರೆ, ಸುಮಾರು 8 ರಿಂದ 10 ಲಕ್ಷ ರೂ.ಗಳಷ್ಟು ಹಣವನ್ನು ತುಂಬುವಂಥ ಪರಿಸ್ಥಿತಿ ಬಂದಿದೆ. ಒಂದು ಕಡೆ ರೈತನಿಗೆ ಬೆಳೆ ಹಾನಿಯಾಗುತ್ತಿದೆ, ಬರಗಾಲವಿದೆ, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅವರನ್ನು ರಕ್ಷಣೆ ಮಾಡಿ ಎಂದು ಒಂದು ಕಡೆ ಕೂಗು, ಇನ್ನೊಂದು ಕಡೆ indirect ಆಗಿ ರೈತ ಪ್ರಾಮಾಣಿಕವಾಗಿ ವಿದ್ಯುತ್ ಅನ್ನು ಪಡೆದುಕೊಂಡು ಹಣ ಕಟ್ಟಿ, ತನ್ನ ಜೀವವನ್ನು ಸವೆದು, ಬೆಳೆ ಬಂದರೆ, ಆ ಬೆಳೆಯಿಂದ ಬಂದಿರುವಂಥ ಎಲ್ಲಾ ಹಣ Electric Bill ಗೆ ಕಟ್ಟಬೇಕಾಗಿದೆ. ಇದು ದುರಂತದ ಸಂಗತಿಯಾಗಿದೆಯೆಂದು ಹೇಳಬೇಕಾಗುತ್ತದೆ. ಇನ್ನೊಂದು ವಿಷಯವೆಂದರೆ, ಇಡೀ ರಾಜ್ಯದಲ್ಲಿರುವಂಥ 10 Horse Powerವರೆಗೂ ವಿದ್ಯುತ್ ಪಡೆದುಕೊಂಡಿರುವ ರೈತರಿಗೆ, ನಾವು ಉಚಿತವಾಗಿ ವಿದ್ಯುತ್ ಅನ್ನು ಕೊಡುತ್ತೇವೆ. ಸುಮಾರು ನದಿ ಬಿಟ್ಟು ಸುಮಾರು 10-15 ಕಿ.ಮೀ.ವರೆಗೂ ನಮ್ಮ ಜಮೀನು ಇರುತ್ತದೆ. ನನಗೆ ಒಬ್ಬನಿಗೆ ಶಕ್ತಿ ಇಲ್ಲ, ಸುಮಾರು 8-10 ರೈತರು ಕೂಡಿಕೊಂಡು, ಒಂದು ಸಹಕಾರಿ ಸಂಘವನ್ನು ರಚನೆ ಮಾಡಿಕೊಂಡು, ಅಲ್ಲಿಂದ ಕೋಟ್ಯಾಂತರ ರೂ.ಗಳ ಸಾಲವನ್ನು ತೆಗೆದುಕೊಂಡು, pipeline ಹಾಕಿಕೊಳ್ಳುತ್ತಾರೆ, ಸುಮಾರು 6-7 ಜನ ರೈತರು ಏನಿರುತ್ತಾರೆ, ಒಬ್ಬೊಬ್ಬ ರೈತರು ಒಂದೊಂದು ಮೋಟಾರ್ ಅನ್ನು ಕೂಡಿಸುತ್ತೇವೆ. ಅದನ್ನು 10 ಕಿ.ಮೀ. ಆದಮೇಲೆ ಲಿಫ್ಟ್ ಮಾಡುತ್ತೇವೆ. ಅಲ್ಲಿಂದ ಸಮತಟ್ಟಾಗಿ ಮೇಲೆ ನೀರು ಹೋಗಬೇಕೆಂದು ವ್ಯವಸ್ಥೆ ಮಾಡಿಕೊಳ್ಳುತ್ತೇವೆ. ಇಡೀ ರಾಜ್ಯದಲ್ಲಿರುವಂಥ ರೈತರಿಗೆ ಉಚಿತವಾಗಿರುವಂಥ ವಿದ್ಯುತ್ ಕೊಡುವ ಯೋಜನೆ ಇದೆಯಲ್ಲಾ, ಅವರಿಗೆ ಅರಿವೇ ಆಗುವುದಿಲ್ಲ. ಅವರು ಬಿಲ್ ಕಟ್ಟಬೇಕು, ಏಕೆಂದರೆ, ಅವರೆಲ್ಲರೂ ಕೂಡಿ ಮಾಡಿಕೊಂಡಿರುತ್ತಾರಲ್ಲಾ, ಅವರೆಲ್ಲಾ ಕೂಡಿ 10 Horse Power motorನ ಐದಾರು ಮೋಟಾರ್‌ಗಳನ್ನು ಕೂರಿಸಿದರೆ, ಅದು ಸರ್ಕಾರದ ನಿಯಮದಲ್ಲಿ ಬರುವುದಿಲ್ಲ. ನೀವು ವೈಯಕ್ತಿಕವಾಗಿ ಒಂದೊಂದು ಮೋಟಾರ್ ಮಾಡಿಕೊಂಡರೆ ಮಾತ್ರ ಬರಲು ಸಾಧ್ಯವಿದೆ

ಎನ್ನುತ್ತಾರೆ. ಇಲ್ಲಿ ಮಾನ್ಯ ಪುಟ್ಟಣ್ಣಯ್ಯನವರು ಇಲ್ಲ, ಅವರು ರೈತರಿಗೆ ಏನಾದರೂ ಒಂದು ಯೋಜನೆಗಳಾಗಬೇಕು, ರೈತರಿಗೆ ಅಧುನಿಕ ವ್ಯವಸ್ಥೆಗಳಾಗಬೇಕೆಂದು ಹೇಳುತ್ತಿದ್ದರು. ರೈತರು ನಿಮ್ಮ ಕಡೆಯಿಂದ ಸಾಲವನ್ನು ಕೇಳಿಲ್ಲ, ಅವನೇ ಸಂಪೂರ್ಣವಾಗಿ ಬ್ಯಾಂಕ್‌ನಿಂದ ಸಾಲವನ್ನು ಪಡೆದುಕೊಂಡು, 8-10 ಜನರು ಕೂಡಿಕೊಂಡು, ಸ್ವಾಯುಕ್ತವಾಗಿ ಒಂದು ಯೋಜನೆಯನ್ನು ಮಾಡಿಕೊಂಡರೆ, ಅವರಿಗೆ ನೀವು ಹಣ ಕಟ್ಟಬೇಕು, ಬಿಲ್ ಕಟ್ಟಬೇಕೆಂದು ಇದೆ. ಎಲ್ಲಾ ರೈತರಿಗೂ ಮಾಡುತ್ತೀರಿ, ಇವರು 7-8 ಜನರನ್ನು ಬಿಟ್ಟರೆ ನಿಮಗೆ ಏನು ಹೊರೆಯಾಗುತ್ತದೆ? ಅದಕ್ಕೆ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಇಂಧನ ಸಚಿವರು ಇದರ ಬಗ್ಗೆ ಗಮನ ಹರಿಸಿ, ಅಂಥ ಜನರಿಗೂ ಅನ್ವಯವಾಗುವಂಥದ್ದು ಆಗಬೇಕು. ಮತ್ತೆ ಮೊದಲು ಒಂದು ಯೂನಿಟ್‌ಗೆ 40 ಪೈಸೆ ಇತ್ತು, ಅದನ್ನು ಅಲ್ಲಿಗೆ ಇಡಬೇಕು, ಇಲ್ಲವೆಂದರೆ, ಆ ರೈತರು ಕೂಡ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ನಾವು ಪ್ರೇರಣೆ ಕೊಟ್ಟಹಾಗೆ ಆಗುತ್ತದೆ. ಅಂಥ ರೈತರನ್ನು ಉಳಿಸುವುದಕ್ಕೋಸ್ಕರ ಆ ಕೆಲಸವನ್ನು ಮಾಡಬೇಕು.

ಶ್ರೀ ಪಿ.ರಾಜೀವ್: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಸಣ್ಣ ನೀರಾವರಿ ಇಲಾಖೆಯಿಂದ ಏತ ನೀರಾವರಿ ಯೋಜನೆಯನ್ನು ಮಾಡುತ್ತೇವೆ. ಸುಮಾರು ನದಿಗಳಿಂದ ಮತ್ತು surface water source ಎಲ್ಲಿ ಇರುತ್ತದೆ. ಅಲ್ಲಿಂದ ನಾಲ್ಕೈದು ಕಿ.ಮೀ. ಗಳವರೆಗೆ ತಂದು 100-150 ಎಕರೆಗಳಿಗೆ ಸರ್ಕಾರದ ಯೋಜನೆಯಿಂದಲೇ ಏತ ನೀರಾವರಿ ಮಾಡುತ್ತೇವೆ. ಅದಕ್ಕೆ ಒಂದೂವರೆ, ಎರಡು ಕೋಟಿ ರೂ.ಗಳನ್ನು ಸರ್ಕಾರ ಅನುದಾನ ಕೊಟ್ಟಿರುತ್ತದೆ. ಕೊನೆಗೆ ಎಲ್ಲಾ ಪೈಪ್‌ಲೈನ್ ಆಗಿ, ಮೋಟಾರ್ ಗಳನ್ನೆಲ್ಲಾ ಕೂರಿಸಿ, electrification ಆಗುವ ಸಮಯದಲ್ಲಿ Electrical Departmentನವರು ಏನು ಹೇಳುತ್ತಾರೆಂದರೆ, ನೀವು ಹಣ ಕಟ್ಟುತ್ತೇವೆಂದು ಹೇಳಿದರೆ ಮಾತ್ರ, electrification ಕೊಡುತ್ತೇವೆಂದು ಹೇಳುತ್ತಿದ್ದಾರೆ. ಅದಕ್ಕೆ ಈಗ ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರು ಹೇಳಿದ ಹಾಗೆ, ಸಾಮೂಹಿಕ ಏತ ನೀರಾವರಿಗಳು ಸರ್ಕಾರದಿಂದಲೇ ಅಗಲಿ ಅಥವಾ ರೈತರೇ ಒಂದು ಸಂಘದ ಮೂಲಕ ಮಾಡಿದರೆ, ಅವರೆಲ್ಲರಿಗೂ ಉಚಿತವಾಗಿ ವಿದ್ಯುತ್ ಪೂರೈಕೆ ಮಾಡುವಂಥದ್ದು ಬಹಳಷ್ಟು ಅವಶ್ಯಕತೆ ಇದೆಯೆನ್ನುವ ಬಗ್ಗೆ ನಾನೂ ಕೂಡ ಒತ್ತಾಯ ಮಾಡುತ್ತೇನೆ.

19-06-2017

ಅಧ್ಯಕ್ಷರು: Ok. ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರೆ, ಸಮಯ ಬಹಳ ಆಯಿತು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೆ, ನಾನು ಎರಡು-ಮೂರು ಇಲಾಖೆಗಳ ಬಗ್ಗೆ ಅಷ್ಟೇ ಮಾತನಾಡುತ್ತೇನೆ, ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳುವುದಿಲ್ಲ. ನಿಮ್ಮ ಕಷ್ಟ ಏನೆಂಬುದು ನನಗೆ ಅರ್ಥವಾಗುತ್ತದೆ. ಇಲ್ಲಿ ಮಾನ್ಯ ಕಂದಾಯ ಸಚಿವರಿದ್ದಾರೆ ಮತ್ತು ಮಾನ್ಯ ರಮೇಶ್‌ಕುಮಾರ್‌ರವರು ಇದ್ದಾರೆ. ಬಹುತೇಕ ನಮ್ಮ ಹಿರಿಯ ಸಚಿವರು ಇದ್ದಾರೆ. ಅವರಿಗೆ ನಾನು ಕೆಲವೊಂದು ವಿಚಾರಗಳನ್ನು ಗಮನಕ್ಕೆ ತರುತ್ತೇನೆ. ನಾನು ಸಹಕಾರ ಇಲಾಖೆಯ ಬಗ್ಗೆ ಪ್ರಮುಖವಾಗಿ ಒಂದೆರಡು ವಿಷಯಗಳನ್ನು ಹೇಳಿ ನಂತರ ಅವೆರಡೂ ಇಲಾಖೆಗಳಿಗೆ touch ಮಾಡಿ ಬಿಡುತ್ತೇನೆ. ನಮ್ಮಲ್ಲಿ ಅನೇಕ ಸಹಕಾರಿಗಳಿದ್ದಾರೆ, ಆ ಮೂಲೆಯಲ್ಲಿ ಸುಮಾರು ಮುರ್ನಾಲ್ಕು ಜನರು ಕುಳಿತಿದ್ದಾರೆ, ಈ ಕಡೆಯೂ ಇದ್ದಾರೆ. ಎಲ್ಲಾ ಸಹಕಾರಿಗಳು ಇದ್ದೇವೆ.

ಶ್ರೀ ಕೆ.ಎನ್.ರಾಜಣ್ಣ: ನೀವು ಇದ್ದೀರಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ನನ್ನನ್ನು ಸೇರಿಸಿ ಹೇಳುತ್ತಿದ್ದೇನೆ, ನಿಮಗೆ ನಾನು ಯಾವಾಗ ಅಸಹಕಾರ ಮಾಡಿದ್ದು? ಆ ಭಾವನೆ ನಿನಗೆ ಏಕೆ ಬಂತು? ನೀವು ಸಹಕಾರವೆಂದು ಹೇಳಬೇಕು, ಅಸಹಕಾರವೆಂದು ಹೇಳುವವರು ಅಲ್ಲಿದ್ದಾರೆ, ಅವರಿಗೆ ಹೇಳುತ್ತೇನೆ. ಇತ್ತೀಚೆಗೆ ಸಹಕಾರ ಇಲಾಖೆಯಲ್ಲಿ ಹಳ್ಳಿಗಳಲ್ಲಿ ಮಾತನಾಡುತ್ತಾರೆ, ಅದು ಏನೆಂದರೆ, "ಲಂಗು ಲಗಾಮು ಇಲ್ಲದ ಕುದುರೆ " ಎಂದು, ಹಾಗೆ ಈ ಇಲಾಖೆ ಲಂಗು ಲಗಾಮು ಇಲ್ಲದೇ ಇರುವಂಥ ಕುದುರೆಯಾಗಿ ಬಿಟ್ಟಿದೆ.

ಶ್ರೀ ಸಾ.ರಾ.ಮಹೇಶ್: ಅದು "ಲಂಗು" ಎಂದಿದೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೆ, ಅಲ್ಲಿ ಈಗ ಏನಾಗಿದೆಯೆಂದರೆ, ಕೆಲವು ಅಧಿಕಾರಿಗಳು ಬಂದು ಬಿಟ್ಟಿದ್ದಾರೆ. ನಾನು ಹಿಂದಿನ ಸಚಿವರ ಬಗ್ಗೆ ಚಕಾರವೆತ್ತುವುದಿಲ್ಲ. ಅವರು ಸಾಕಷ್ಟು ಪ್ರಯತ್ನಗಳನ್ನು ಮಾಡುವುದಕ್ಕೆ ಹೋದಾಗಲೂ ಕೂಡ, ಅದು ಅಸಾಧ್ಯವಾಯಿತೆಂದು ನಾನು ತಿಳಿದುಕೊಂಡೆ, ಈ ಸಹಕಾರ ಇಲಾಖೆಯಲ್ಲಿ ನಾನು ಎರಡು ಕಾನೂನುಗಳನ್ನು ತಂದೆವು, ಆ ಎರಡು ಕಾನೂನುಗಳು ಬದಲಾವಣೆಗಳು ಆಯಿತು. ಮೊದಲನೆಯದಾಗಿ, ವೈದ್ಯನಾಥನ್ ವರದಿ, ಎರಡನೆಯದಾಗಿ, ಸಂವಿಧಾನ 97 ತಿದ್ದುಪಡಿ. ಅವರೆಡೂ ಬಂದಿರುವುದರಿಂದ ಇಡೀ ಸಹಕಾರಿ ಕ್ಷೇತ್ರಕ್ಕೆ

ಒಂದು ಮೆರುಗು ಬಂತು. ಸ್ವಾಯತ್ತತೆ ಕೊಡಬೇಕು, ಅಧಿಕಾರ ವಿಕೇಂದ್ರೀಕರಣವಾಗಬೇಕು, ಸಹಕಾರಿ ಕ್ಷೇತ್ರದಲ್ಲಿ ಸರ್ಕಾರದ ಹಸ್ತಕ್ಷೇಪವಿರಬಾರದೆಂಬ ಒಂದು ಆಲೋಚನೆ ಇಟ್ಟುಕೊಂಡು, ಕೇಂದ್ರದಲ್ಲಿ ಅವತ್ತು ಯು.ಪಿ.ಎ.ಸರ್ಕಾರ ಸಂವಿಧಾನ 97 ತಿದ್ದುಪಡಿಯನ್ನು ತಂದಿದೆ. ಇಡೀ ದೇಶದಲ್ಲಿ 30 ರಾಜ್ಯಗಳಲ್ಲಿ ಮೊದಲು ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಂಡಿರುವುದು. ಇವತ್ತು ಅದರ ಪರಿಸ್ಥಿತಿ ಏನಾಗಿದೆ? ಒಂದು ಕಡೆ ಸರ್ಕಾರ ಕಾನೂನಿಗೆ ನಾವು ಗೌರವ ಕೊಡುತ್ತೇವೆ, ಸಂವಿಧಾನವೇ ನಮ್ಮ ಭಗವದ್ಗೀತೆ ಎಂದು ಹೇಳುತ್ತಿದೆ. ಆ ಸಂವಿಧಾನ 97 ತಿದ್ದುಪಡಿಯಾಗಿರುವುದು, ಎಷ್ಟು ಕಾನೂನುಗಳನ್ನು ತಂದಿದ್ದೀರೆಂಬುದನ್ನು ಇವತ್ತು ಹೇಳಬೇಕಾಗುತ್ತದೆ. ಇದಕ್ಕೆ ಮಾನ್ಯ ಕೆ.ಎನ್.ರಾಜಣ್ಣನವರೆ, ಏನು ಹೇಳುತ್ತೀರಿ?

ಶ್ರೀ ಕೆ.ಎನ್.ರಾಜಣ್ಣ: ನೀವು ಹೇಳುತ್ತಿದ್ದೀರಿ, ನಾನು ಕೇಳುತ್ತಿದ್ದೇನೆ.

ಮುಂದು.. ..

19-06-2017/4.00/29/GG/CP

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಮುಂದುವರೆದುದು): ನಾವು ಅಧಿಕಾರ ವಿಕೇಂದ್ರೀಕರಣ ಮಾಡಿ ಕೆಳಹಂತದಲ್ಲಿರುವ ಅಧಿಕಾರಿಗಳಿಗೆ ಕೊಟ್ಟಂಥ ಅಧಿಕಾರವನ್ನು ಇಲ್ಲಿ ಹಿರಿಯ ಅಧಿಕಾರಿಗಳು ಮತ್ತೆ ವಾಪಸ್ಸು ತೆಗೆದುಕೊಂಡಿದ್ದಾರೆ. ಪುನ: ಮತ್ತೆ ಅವರು ಬೆಂಗಳೂರಿಗೇ ಬರಬೇಕು. ನಾವು ಕೆಳ ಹಂತದವರಿಗೆ ಕೊಟ್ಟಂಥ ಹೆಚ್ಚಿನ ಅಧಿಕಾರವನ್ನೆಲ್ಲ ಪುನ: ವಾಪಸ್ಸು ತೆಗೆದುಕೊಂಡುಬಿಟ್ಟರು. ಇರಲಿ, ಮುಂದೆ ಕಾಲ ಬಂದಾಗ ನೋಡೋಣ, ಈಗ ನಾನು ಅದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆಯಿತು, ನೀವು ಅಧಿಕಾರವನ್ನು ವಾಪಸ್ಸು ಪಡೆದುಕೊಂಡಿರಿ, ಆದರೆ ಅದನ್ನು ಏನು ಚಲಾವಣೆ ಮಾಡಿದ್ದೀರಿ ಎನ್ನುವುದು ಬೇಕಲ್ಲವೇ? ನಿಮ್ಮ ಕಡೆ ಅಧಿಕಾರ ಇಟ್ಟುಕೊಂಡಿರಿ, ಅದನ್ನು ಏನು ಚಲಾವಣೆ ಮಾಡಿದಿರಿ ಎನ್ನುವುದು ಬೇಕಲ್ಲವೇ?

ಅಧ್ಯಕ್ಷರು: ಅಧಿಕಾರವನ್ನು ವಾಪಸ್ಸು ತೆಗೆದುಕೊಂಡರು ಎಂದು ಹೇಳುತ್ತಿದ್ದೀರಲ್ಲ, ಅದನ್ನು ಕಾನೂನು ತಿದ್ದುಪಡಿ ಮಾಡಿ ತೆಗೆದುಕೊಂಡರೋ ಅಥವಾ ಕೇವಲ circular ಕೊಟ್ಟರೋ?

19-06-2017

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಕಾನೂನನ್ನು ತಿದ್ದುಪಡಿ ಮಾಡಿದರೂ ಸಹ, ಕಾನೂನು ತಿದ್ದುಪಡಿಯಾಗಿ ಅದು ಅನುಷ್ಠಾನವಾದ ಮೇಲೆ ಪುನ: ಅದಕ್ಕೆ ಅನೇಕ ತಿದ್ದುಪಡಿಗಳನ್ನು ತಂದು ವಾಪಸ್ಸು ತೆಗೆದುಕೊಂಡುಬಿಟ್ಟರು, ಹಾಗೆ ಮಾಡಲು ಬರುವುದಿಲ್ಲ. ಯಾರಾದರೂ ಒಬ್ಬರು ನ್ಯಾಯಾಲಯಕ್ಕೆ ಹೋದರೆ ಅದು ನಿಂತುಹೋಗುತ್ತದೆ. ಇವರ ಕಾನೂನು ಕಿತ್ತುಹೋಗುತ್ತದೆ. ನಾವು ನ್ಯಾಯಾಲಯಕ್ಕೆ ಹೋಗಿಲ್ಲ, ಆ ಮಾತು ಬೇರೆ, ಇರಲಿ ಒಂದು ಸರ್ಕಾರ ಎಂದ ಮೇಲೆ ಇಂಥವುಗಳೆಲ್ಲ ನಡೆದಿದೆ, ನಡೆಯಲಿ ಎಂದು ನಾವು ಬಿಟ್ಟಿದ್ದೇವೆ. ಧಾರವಾಡ ಜಿಲ್ಲೆಯಲ್ಲಿ ನಡೆದಿರುವಂಥ ಒಂದು ಘಟನೆಯ ಬಗ್ಗೆ ಹೇಳುತ್ತೇನೆ. ಅಲ್ಲಿ ಹರ್ಷ ಎಂಟರ್‌ಪ್ರೈಸಸ್ ಎನ್ನುವ ಒಂದು ಸೊಸೈಟಿ ಇದೆ. ಅವರು ಜನರಿಂದ ಕೋಟಿಕೋಟಿ ರೂಪಾಯಿಗಳನ್ನು ಲೂಟಿ ಮಾಡಿದ್ದಾರೆ. ಸಾರ್ವಜನಿಕರಿಂದ deposit collect ಮಾಡಿ, pigmy collect ಮಾಡಿ ನಂತರ ದಿವಾಳಿ ತೆಗೆದುಕೊಂಡು ಹೋಗಿಬಿಟ್ಟರು. ಅವರಿಗೆ ಇವರು ಏನು ಮಾಡಿದರು? ಕೋಲಾರ based ಆದ Seven Hills ಎನ್ನುವ ಒಂದು ಸೊಸೈಟಿಯವರು ಬೆಂಗಳೂರಿನಿಂದ ಬಿಜಾಪುರದವರೆಗೆ, ಬಿಜಾಪುರದ ಪಕ್ಕದಲ್ಲಿರುವಂಥ ಅಥಣಿಯವರೆಗೂ ಬಂದುಬಿಟ್ಟಿದ್ದಾರೆ. ಅತ್ಯಂತ ಬಡವರು, ಕಾರ್ಮಿಕರು, ದುಡಿಯತಕ್ಕಂಥ ವರ್ಗದವರಿಗೆ ಆಮಿಷ ತೋರಿಸಿದರು, ಪ್ರತಿಶತ: 18% ಬಡ್ಡಿಕೊಡುತ್ತೇವೆ ಎಂದು ಆಮಿಷ ತೋರಿಸಿದರು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇದೇ ತರಹದ ಅಗ್ರಿ ಗೋಲ್ಡ್ ಕಂಪನಿಯ ವಿಚಾರ ಪ್ರಸ್ತಾಪವಾಯಿತು. ಆಗ ಜಯಚಂದ್ರರವರು ಅವರ ಎಲ್ಲ property seize ಮಾಡಿಕೊಂಡು, ಅವರ ಮೇಲೆ ಕಮ್ಮ ತೆಗೆದುಕೊಳ್ಳುತ್ತೇವೆ, arrest ಮಾಡಿಸುತ್ತೇವೆ ಎಂದರು. ಅದು ಇದುವರೆಗೂ ಆಗಲಿಲ್ಲ. ಜಯಚಂದ್ರರವರೆ ತಾವು last time session ನಲ್ಲಿ ಅಗ್ರಿ ಗೋಲ್ಡ್ ಕಂಪನಿಯ ಬಗ್ಗೆ ಹೇಳಿದಿರಿ. ಅದರಲ್ಲಿ ಸಾವಿರಾರು ಕೋಟಿ ರೂಪಾಯಿ ವಂಚನೆಯಾಗಿದೆ. ಈಗ ಲಕ್ಷ್ಮಣ ಸವದಿಯವರು, ಖಾಸಾನೀಸಾ ಬ್ರದರ್ಸ್, ಕಲಘಟಗಿ ಇವರ ಬಗ್ಗೆ ಹೇಳುತ್ತಿದ್ದಾರಲ್ಲ, ಅಲ್ಲಿ ಎರಡೂವರೆ ಸಾವಿರ ಕೋಟಿ ರೂಪಾಯಿ ವಂಚನೆಯಾಗಿದೆ. ಕಲಘಟಗಿ ತಾಲ್ಲೂಕು, ಹುಬ್ಬಳ್ಳಿ, ಧಾರವಾಡಗಳಲ್ಲಿನ ಜನರು, ಪೊಲೀಸರೂ ಸಹ ಹೀಗೆ ಎಲ್ಲರೂ deposits ಇಟ್ಟಿದ್ದಾರೆ. ಖಾಸಾನೀಸಾ ಸಹೋದರರು

ಎರಡೂವರೆ ಸಾವಿರ ಕೋಟಿ ರೂಪಾಯಿಗಳನ್ನು ಮೋಸ ಮಾಡಿ ತೆಗೆದುಕೊಂಡು ಹೋಗಿಬಿಟ್ಟರು. ಅಗ್ರಿ ಗೋಲ್ಡ್ ಕಂಪನಿಯ ಬಗ್ಗೆ ಜಯಚಂದ್ರರವರು ಇಲ್ಲಿ ಭರವಸೆ ಕೊಟ್ಟಿದ್ದರು. ಅಲ್ಲಿ ಹಣ ಹಾಕಿ ಕಳೆದುಕೊಂಡವರು ಇವತ್ತು ಬೆಳಗ್ಗೆಯೂ ಬಂದಿದ್ದರು, ಇದುವರೆಗೆ ಏನೂ ಆಗಲಿಲ್ಲ, ನಮ್ಮ ಹಣ ವಾಪಸ್ಸು ಬರಲಿಲ್ಲ, ಅವರ ಪ್ರಾಪರ್ಟಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಿಲ, ಏನೂ ಆಗಲಿಲ್ಲ ಎಂದು ಹೇಳಿಕೊಂಡು ಬಂದಿದ್ದರು. ಇದಕ್ಕೆ ಸರ್ಕಾರದವರು ತಕ್ಷಣ ಏನಾದರೂ ಕ್ರಮ ಕೈಗೊಳ್ಳದಿದ್ದರೆ ಈ ರೀತಿ ಅಗ್ರಿ ಗೋಲ್ಡ್ ಕಂಪನಿ, ಹರ್ಷ ಎಂಟರ್‌ಪ್ರೈಸಸ್, ಖಾಸಾನೀಸಾ ಬ್ರದರ್ಸ್ ಇಂಥವರೆಲ್ಲ ಮೋಸ ಮಾಡಿಕೊಂಡೇ ಇರುತ್ತಾರೆ. ಇದರಲ್ಲಿ ಜನರದೂ ತಪ್ಪಿದೆ ಎಂದು ನಾನು ಹೇಳುತ್ತೇನೆ. ಸರ್ಕಾರವೇ ಎಲ್ಲವನ್ನೂ ಮಾಡಬೇಕು ಎಂದೇನೂ ಅಲ್ಲ. ಆದರೆ ಈ ರೀತಿ ಮೋಸ ಮಾಡುವಂಥಾದ್ದು ನಡೆದಾಗ ನಮ್ಮ ಪೊಲೀಸ್ ವ್ಯವಸ್ಥೆ ಅಲರ್ಟ್ ಇದ್ದರೆ ಆಗ ಇಂಥವುಗಳಿಗೆ ಏನಾದರೂ ಕಡಿವಾಣ ಹಾಕಬಹುದು. ಅಥವಾ ಇಂಥ ಘಟನೆಗಳಾದಾಗ immediately ಅವರನ್ನು arrest ಮಾಡುವುದು, ಮತ್ತೊಂದು ಮಾಡುವುದನ್ನು ಮಾಡಿದರೆ ಸರಿಯಾಗುತ್ತದೆ. ಚರ್ಚೆಯಾದ ಮೇಲೆ ಎಷ್ಟೋ ದಿವಸಗಳ ಮೇಲೆ ಖಾಸಾನೀಸಾ ಸಹೋದರರನ್ನು arrest ಮಾಡಿದರು. ಆದರೆ ಅವರ ಪ್ರಾಪರ್ಟಿ ಎಲ್ಲಿವೆ ಎನ್ನುವ ಬಗ್ಗೆ investigation ಮಾಡಿ, ಅವುಗಳನ್ನು seize ಮಾಡಿ deposit ಮಾಡಿರುವವರಿಗೆ ಹಣ ವಾಪಸ್ಸು ಮಾಡುವಂತಾಗಬೇಕು. ಅಗ್ರಿ ಗೋಲ್ಡ್ ಕಂಪನಿಯ ಪರಿಸ್ಥಿತಿಯೂ ಹಾಗೇ ಆಗಿದೆ. ಇದರ ಬಗ್ಗೆ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ ಹಿನ್ನಲೆಯಲ್ಲಿ ನಾನು ಆಶ್ವಾಸನೆ ಕೊಟ್ಟಿದ್ದೆ, ಇದರ ಬಗ್ಗೆ ನಾನೇ ಕೂಲಂಕುಷವಾಗಿ ಸಭೆಯನ್ನು ನಡೆಸಿ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೆ. ಆ ಹಿನ್ನೆಲೆಯಲ್ಲಿ ನಾನು ಈಗಾಗಲೇ ಎರಡು ಸಭೆಗಳನ್ನು ಮಾಡಿದ್ದೇನೆ. ಕಂದಾಯ ಇಲಾಖೆಯ ಕಾರ್ಯದರ್ಶಿಗಳು ಮತ್ತು ಎಲ್ಲ ಇಲಾಖೆಗಳ ಕಾರ್ಯದರ್ಶಿಯವರು, CID ಯವರು, ಗೃಹ ಇಲಾಖೆಯ ಎಲ್ಲ ಅಧಿಕಾರಿಗಳು ಚರ್ಚೆ ಮಾಡಿದ್ದೇವೆ. ಧಾರವಾಡ, ಕಲಘಟಗಿ ಭಾಗದಲ್ಲಿ ಎರಡೂವರೆ ಸಾವಿರ ಕೋಟಿ ರೂಪಾಯಿಗಳ ವಂಚನೆಯಾಗಿದೆ ಎಂದು ತಾವು ಈಗ ಹೇಳಿದಿರಿ. ನೀವು ಹೇಳುತ್ತಿರುವುದು ಬಹಳ ಕಡಿಮೆ. Mythri Finance,

19-06-2017

Agri Gold ಈ ರೀತಿಯವುಗಳು, ತಾವು ಹೇಳುತ್ತಿರುವುದನ್ನೆಲ್ಲ ಸೇರಿಸಿಕೊಂಡರೆ ಸಾವಿರಾರು ಕೋಟಿ ಲೂಟಿಯಾಗಿದೆ. ಅದಕ್ಕೋಸ್ಕರ ನಮ್ಮಲ್ಲಿ ಒಂದು ಕಾನೂನು ಇದೆ. ಆ ಕಾನೂನನ್ನು ಜಾರಿಗೊಳಿಸುವುದರ ಬಗ್ಗೆ ಯಾರೂ ಕೂಡ ಕ್ರಮ ತೆಗೆದುಕೊಂಡಿರುವುದಿಲ್ಲ. ಆ ಕಾರಣಕ್ಕಾಗಿ, ನಾನು ಕಂದಾಯ ಇಲಾಖೆಯ ಕಾರ್ಯದರ್ಶಿಗಳ ಜೊತೆ ಚರ್ಚೆ ಮಾಡಿ ಒಂದು Cell ಅನ್ನು ಮಾಡಿ ಇಂಥ ಕೇಸ್‌ಗಳನ್ನೆಲ್ಲ ಅದಕ್ಕೆ ಕೊಟ್ಟಿದ್ದೇವೆ. ಮುಖ್ಯ ಕಾರ್ಯದರ್ಶಿಗಳ ಜೊತೆ ಕೂಡ ಚರ್ಚೆ ಮಾಡಿದ್ದೇವೆ. ಈ ರೀತಿ ವಂಚನೆ ಮಾಡಿರುವವರ ಆಸ್ತಿಗಳು ಯಾವಯಾವ ರಾಜ್ಯದಲ್ಲಿ ಇವೆ ಎನ್ನುವುದನ್ನು CID ಯವರು ವರದಿ ಕೊಟ್ಟಿದ್ದು, ಆ ಎಲ್ಲ ಕಡೆಯೂ ಕೂಡ ನಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿ ಅಲ್ಲಿ ಏನು ಆಸ್ತಿ ಇದೆ ಎಂದು ನೋಡಿಬರುವುದಕ್ಕೆ ಮತ್ತು attachment ಮಾಡುವುದಕ್ಕೆ ಕೂಡ ಕ್ರಮವನ್ನು ತೆಗೆದುಕೊಂಡಿದ್ದೇವೆ. ಇಲ್ಲಿಂದ ಲೂಟಿಯಾಗಿರುವಂಥ ಬಹುತೇಕ ಹಣವೆಲ್ಲ ಕೇರಳ ರಾಜ್ಯಕ್ಕೆ ಹೋಗಿ accommodate ಆಗಿದೆ. ಹಾಗಾಗಿ ಅಲ್ಲಿಗೂ ಕೂಡ ನಮ್ಮ ಮುಖ್ಯ ಕಾರ್ಯದರ್ಶಿಯವರಿಂದ ಕಾಗದವನ್ನೂ ಬರೆಸಿದ್ದೇವೆ. ನಮ್ಮ Cell ಮುಖೇನ ಇಬ್ಬರು ಅಧಿಕಾರಿಗಳು ಅಲ್ಲಿಗೆ ಹೋಗಿ ಏನೇನು ಕ್ರಮ ತೆಗೆದುಕೊಳ್ಳಬೇಕು, recovery ಮಾಡುವುದಕ್ಕೆ ಏನು ಮಾಡಬೇಕು ಎನ್ನುವ ಬಗ್ಗೆ ಕ್ರಮವನ್ನು ತೆಗೆದುಕೊಂಡಿದ್ದೇವೆ. ಪ್ರತಿ ಹದಿನೈದು ದಿವಸಗಳಿಗೊಮ್ಮೆ ಸಭೆ ಮಾಡಬೇಕೆಂದು ತೀರ್ಮಾನ ಮಾಡಿ ಈಗಾಗಲೇ ಎರಡು ಸಭೆಗಳನ್ನು ಮಾಡಿದ್ದೇವೆ, ಅಧಿವೇಶನ ಮುಗಿದ ಮೇಲೆ ಮತ್ತೊಂದು ಸಭೆಯನ್ನು ಮಾಡುತ್ತೇವೆ. ಈ ರೀತಿಯಾಗಿ ಅನ್ಯಾಯವಾಗುತ್ತಿರುವುದನ್ನು, ಮೋಸವಾಗುತ್ತಿರುವುದನ್ನು ವಾಪಸ್ಸು ಪಡೆಯಲು ಕಾನೂನು ಇದೆ. ಬಡವರು, ಬಹಳ ಅಮಾಯಕರು, ಸಣ್ಣ ಮಟ್ಟದಲ್ಲಿರುವವರು ಮೇಲೇಳುವುದಕ್ಕೂ ಸಾಧ್ಯವಿಲ್ಲದೇ ಇರುವವರೂ ಕೂಡ ಅತ್ಯಂತ ಕಷ್ಟದಲ್ಲಿದ್ದು, ಶೋಷಣೆಗೆ ಒಳಗಾಗಿದ್ದಾರೆ. ಇದು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಲ್ಲ, ಆಂಧ್ರ ಮತ್ತು ಬೇರೆಬೇರೆ ರಾಜ್ಯಗಳಲ್ಲೂ ಕೂಡ ಆಗಿದೆ. ಅಲ್ಲಿ ನೂರಾರು ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಲ್ಲಿ ಆತ್ಮಹತ್ಯೆ ಮಾಡಿಕೊಂಡಿಲ್ಲ ಎನ್ನುವ ಪ್ರಶ್ನೆಯಿಲ್ಲ, ಆಗಿದೆ. ಇದರ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲುವಂಥ ಕೆಲಸವನ್ನು ಮಾಡಲು ಒಂದು Cell ಅನ್ನು ಮಾಡಿದ್ದು, ನಾನೇ ಅದನ್ನು monitor ಮಾಡುತ್ತಿದ್ದೇನೆ. ನಾವು ತಂದಿರುವಂಥ ಕಾನೂನನ್ನು ಯಶಸ್ವಿಯಾಗಿ ಜಾರಿ ಮಾಡಬೇಕು ಎನ್ನುವ ಉದ್ದೇಶದಿಂದ ನಾವು

ಇದನ್ನೆಲ್ಲ ಮಾಡುತ್ತಿದ್ದೇವೆ. ನೀವು ಹೇಳಿರುವಂಥ ಎಲ್ಲ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡಿದ್ದೇನೆ. ನಾನೇ ಅದರ ನೇತೃತ್ವ ವಹಿಸಿ, property recovery ಮಾಡುವುದರ ಬಗ್ಗೆ ನಾನು ತಮಗೂ ಮಾಹಿತಿಯನ್ನು ಕೊಡುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೆ, ನಾನು ಎಲ್ಲ ಅಧಿಕಾರಿಗಳೂ ಒಳ್ಳೆಯವರಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅತ್ಯಂತ ಉತ್ತಮವಾಗಿ ಕೆಲಸವನ್ನು ನಿರ್ವಹಿಸುವಂಥ, ದಿವಸದಲ್ಲಿ 18 ತಾಸು ಕೆಲಸವನ್ನು ಮಾಡುವಂಥ ಅಧಿಕಾರಿಗಳನ್ನೂ ನಾನು ಕಂಡಿದ್ದೇನೆ. ಅಂಥವರು ಇಲ್ಲ ಎಂದು ಹೇಳುವುದಿಲ್ಲ. ಆದರೆ ಇಂಥ ದುರವಸ್ಥೆ ಆದಂಥ ಸಂದರ್ಭದಲ್ಲಿ, ಜನರನ್ನು ಲೂಟಿ ಮಾಡಿದಂಥ ಸಂದರ್ಭದಲ್ಲಿ, ಜನರಿಗೆ ಮೋಸ ಮಾಡಿದಂಥ ಸಂದರ್ಭದಲ್ಲಿ ಅಧಿಕಾರಿಗಳು ಎಚ್ಚೆತ್ತುಕೊಳ್ಳದಿದ್ದರೆ ಇಂಥ ಪ್ರಕರಣಗಳು ಇನ್ನೂ ಬಹಳಷ್ಟು ಆಗುತ್ತವೆ ಎನ್ನುವ ಭಾವನೆ ಬರುತ್ತಿದೆ. ಇದು ಇಡೀ ಸಹಕಾರಿ ಕ್ಷೇತ್ರಕ್ಕೇ ಒಂದು ಕಳಂಕ. ಸಹಕಾರಿ ಕ್ಷೇತ್ರ ತನ್ನದೇ ಆದಂಥ ಪಾವಿತ್ರ್ಯತೆಯನ್ನು ಕಾಯ್ದುಕೊಂಡಿದೆ. ಅದಕ್ಕೆ ನೂರು ವರ್ಷಗಳ ಇತಿಹಾಸವಿದೆ. ನಿಮ್ಮ ಭಾಗದಿಂದಲೇ ಒಂದು ಚಳುವಳಿ ಪ್ರಾರಂಭವಾಯಿತು. ಗದಗ್ ತಾಲ್ಲೂಕಿನ ಕಣಗಿನಹಾಳ ಗ್ರಾಮದಿಂದಲೇ ಈ ಚಳುವಳಿಗೆ ಬೀಜವನ್ನು ಹಾಕಿದರು. ಇವತ್ತು ಅದು ಇಡೀ ದೇಶಕ್ಕೆ ನೆರಳನ್ನು ಕೊಡುವಂಥ ಒಂದು ದೊಡ್ಡ ಮರವಾಗಿದೆ. ಅಂಥ ಮರಕ್ಕೆ ಏನಾದರೂ ತೊಂದರೆಯಾದಂಥ ಸಂದರ್ಭದಲ್ಲಿ, ನಮ್ಮ ಅಧಿಕಾರಿಗಳು, ನಮ್ಮ ಸರ್ಕಾರ ಅದನ್ನು ನೋಡದೇ ಹೋದರೆ, ಇಡೀ ವ್ಯವಸ್ಥೆಗೇ ಒಂದು ಕಳಂಕ ಬರುತ್ತದೆ. ಅದರ ಜೊತೆಗೆ, ಸಹಕಾರಿ ಕ್ಷೇತ್ರದ ಕೆಲವೊಂದು ವಿಚಾರಗಳನ್ನು ಹೇಳುತ್ತೇನೆ. ಇದು ಒಂದು ಕಡೆ ಅಸ್ತವ್ಯಸ್ತವಾದರೆ ಇನ್ನೊಂದು ಕಡೆ ನಮ್ಮ ಎಲ್ಲ ಶಾಸಕರೂ ಕೂಡ ಸಹಕಾರಿ ಕ್ಷೇತ್ರದಲ್ಲಿರುವ ಎಲ್ಲ ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಮಾತನಾಡಿದ್ದಾರೆ. ಸುಮಾರು 10,000 ಕೋಟಿ ರೂಪಾಯಿಗಳಷ್ಟು ಸಾಲವಿದೆ. ಅದರಲ್ಲಿ ನಬಾರ್ಡ್‌ದು ಪಾಲಿದೆ, ಅಪೆಕ್ಸ್ ಬ್ಯಾಂಕ್ ಪಾಲಿದೆ, ಡಿ.ಸಿ.ಸಿ. ಬ್ಯಾಂಕ್ ಪಾಲಿದೆ. ಅದರಲ್ಲಿ ವಿಶೇಷವಾಗಿ ರೈತರು ತನ್ನದೇ ಆಗಿರುವಂಥ ಸಂಸ್ಥೆಗಳನ್ನು ಕಟ್ಟಿಕೊಂಡಿರುವಂಥ PACSನ ಪಾಲೂ ಇದೆ. ಸಾಲ ಮನ್ನಾ ಮಾಡಿ ಎಂದು ನಾವು ಏಕೆ ಒತ್ತಡ ಮಾಡುತ್ತಿದ್ದೇವೆ, ಅದನ್ನು ಮಾಡಲಿಕ್ಕೆ ನಿಮಗೆ ಏಕೆ ತೊಂದರೆಯಿಲ್ಲ ಎಂದು ಹೇಳಲು ಹೊರಟಿದ್ದೇವೆ ಎಂದರೆ ನಮ್ಮ ವಿರೋಧ ಪಕ್ಷದ ನಾಯಕರು

19-06-2017

ಹಿಂದೆ ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ 25,000 ರೂಪಾಯಿಗಳವರೆಗೆ ಸಾಲ ಮನ್ನಾ ಮಾಡಿದರು. ಆಗ ನಾನು ಶಾಸಕನಾಗಿದ್ದೆ, ಇದರ ಮೊತ್ತ ಎಷ್ಟಾಗಬಹುದು ಎನ್ನುವ ಮಾಹಿತಿಯನ್ನು ಪಡೆದುಕೊಳ್ಳಲು ಅವರು ನನ್ನನ್ನು ಒಂದು ಸಾರಿ ಕರೆದರು. ಆಗ ಹಣಕಾಸಿನ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಕರೆಸಿದರು. ಇದರ ದುಡ್ಡು ಹೊಂದಿಸಲು ನಮಗೆ ಕಷ್ಟವಾಗುತ್ತದೆ ಎನ್ನುವ ಅಭಿಪ್ರಾಯ ಆಗ ಬಂದಂಥ ಸಂದರ್ಭದಲ್ಲಿ ಇಡೀ ರಾಜ್ಯದಲ್ಲಿ ಜಾರಿಯಲ್ಲಿದ್ದ VAT ಅನ್ನು ಒಂದು ವರ್ಷದವರೆಗೆ 0.5% ಹೆಚ್ಚು ಮಾಡಬೇಕು, ಅದರಿಂದ 3,600 ಕೋಟಿ ರೂಪಾಯಿ ಹೊಂದಾಣಿಕೆಯಾಗುತ್ತದೆ ಎಂದು ಹೇಳಿದರು. ಆ ರೀತಿ 0.5% VAT ಅನ್ನು ಹೆಚ್ಚು ಮಾಡಿದರು. ಒಂದು ವರ್ಷದವರೆಗೆ ಅದು ಸಂಗ್ರಹವಾಯಿತು. ಜಗದೀಶ್ ಶೆಟ್ಟರ್‌ರವರ ಕಾಲಾವಧಿಯಲ್ಲಿ 900 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಮರುಪಾವತಿಯಾಯಿತು. ತದನಂತರ ಹೊಸ ಸರ್ಕಾರ ಬಂತು, ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾದ ಮೇಲೆ ಉಳಿದಿರುವಂಥ ಸಾಲ ಮರುಪಾವತಿಯಾಯಿತು. ಇದನ್ನು ಮಾಡಲು ಹಣಕಾಸು ಇಲಾಖೆಯವರು 0.5% ನಷ್ಟು VAT ಅನ್ನು ಏರಿಸಿದರು. ಅದನ್ನು ಒಂದು ವರ್ಷಕ್ಕೆ ನಿಲ್ಲಿಸಲಿಲ್ಲ. ಮುಂದಿನ ಜುಲೈ ಒಂದನೇ ತಾರೀಖಿನವರೆಗೂ ಅದನ್ನು ಸಂಗ್ರಹಿಸುತ್ತಾರೆ. ಜುಲೈ ಒಂದನೇ ತಾರೀಖಿನಿಂದ GST ಬರುತ್ತದೆ, ಆಗ ಅದು ಬಂದ್ ಆಗುತ್ತದೆ. ಇಲ್ಲಿಯವರೆಗೆ ವಸೂಲಾತಿ ಮಾಡಿರುವ 0.5% ನಷ್ಟು VAT ನ ಹಣವಿದೆಯಲ್ಲ, ಅದು ಈ ಸಾಲ ಮನ್ನಾಕ್ಕೆ ಸರಿಹೋಗುತ್ತದೆ. ಅದಕ್ಕಾಗಿ ನಾವು ಇದನ್ನು ಕೇಳುತ್ತಿದ್ದೇವೆ. ನಾವು ಅವೈಜ್ಞಾನಿಕವಾಗಿ ರೈತರ ಸಾಲ ಮನ್ನಾ ಮಾಡಿ ಎಂದು ಕೇಳುತ್ತಿಲ್ಲ. ವೈಜ್ಞಾನಿಕವಾಗಿ ನಾವು ಕೇಳುತ್ತಿದ್ದೇವೆ. ನಾಲ್ಕು ವರ್ಷಗಳ ಕಾಲ ಇಡೀ ರಾಜ್ಯದ ಜನ ರೈತರ ಸಾಲವನ್ನು ಮನ್ನಾ ಮಾಡಲು ಕೊಟ್ಟಿರುವಂಥ 0.5% VAT ನ ಹಣವಿದೆ. ಅದು ರೈತರಿಗೋಸ್ಕರ ಕಲೆಕ್ಟ್ ಮಾಡಿರುವಂಥ ಹಣ, ಅದನ್ನು ನೀವು ರೈತರಿಗಾಗಿ ಕೊಡಿ ಎನ್ನುವ ಬೇಡಿಕೆಯನ್ನು ನಾವು ಅನೇಕ ದಿನಮಾನಗಳಿಂದ ಇಡುತ್ತಿದ್ದೇವೆ. 21ನೇ ತಾರೀಖು ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ, ಇಡೀ ರಾಜ್ಯದ ಜನ 0.5% VAT ರೂಪದಲ್ಲಿ ಕೊಟ್ಟಿರುವ ಹಣವನ್ನು ನಾನು ರೈತರಿಗೆ pass on ಮಾಡುತ್ತೇನೆ, ರೈತರ ಸಾಲ ಮನ್ನಾ ಆಗುತ್ತದೆ ಎನ್ನುವಂಥ ಮಾತನ್ನು ಹೇಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಅಧ್ಯಕ್ಷರು: ಆಯಿತು, ಸವದಿಯವರೆ ಬೇಗ ಮುಗಿಸಿ. (ಮುಂದುವರೆದಿದೆ)

ದಿನಾಂಕ: 19-06-2017-04.10 (30) KKD (AJ) /CP

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಮುಂದು . . .)

ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು : ಈಗಾಗಲೇ more than one hour ಆಯಿತು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಕಾನೂನು ಮತ್ತು ಇಂಧನ ಸಚಿವರು ಇರುತ್ತಾರೆ. ರೈತರು ಟ್ರ್ಯಾಕ್ಟರುಗಳನ್ನು ಓಡಿಸುತ್ತಾರೆ. ಈ ಟ್ರ್ಯಾಕ್ಟರ್‌ಗಳಿಗೆ Road Tax ಇರುವುದಿಲ್ಲ. ಏಕೆಂದರೆ, tractors ಹೆಚ್ಚಾಗಿ ರಸ್ತೆ ಮೇಲೆ ಬರದೇ ಭೂಮಿಯಲ್ಲೇ ಹೆಚ್ಚಾಗಿ ಕೆಲಸ ಗಳನ್ನು ಮಾಡುತ್ತವೆ ಎನ್ನುವ ಉದ್ದೇಶದಿಂದ ರೈತರಿಗೆ ಅನುಕೂಲವಾಗುವ ದೃಷ್ಟಿಯಿಂದ ಟ್ರ್ಯಾಕ್ಟರ್‌ಗಳಿಗೆ road tax ಇರುವುದಿಲ್ಲ. ಆದರೆ ಇಂದು ಏನಾಗಿದೆಯೆಂದರೆ ರೈತರುಗಳು ಕಬ್ಬು ಕಠಾವು ಮಾಡುವುದಕ್ಕೆ ಹೊಸ machinery ಗಳನ್ನು ತೆಗೆದುಕೊಂಡಿದ್ದಾರೆ. ಕಬ್ಬನ್ನು ಕಠಾವು ಮಾಡುವ ಯಂತ್ರ ರಸ್ತೆಯ ಮೇಲೆ ಬರುವುದೇ ಇಲ್ಲ. ಆದರೆ ಸರ್ಕಾರ ಕಬ್ಬು ಕಠಾವು ಮಾಡುವ ಯಂತ್ರಕ್ಕೆ road tax ಹಾಕಿರುತ್ತಾರೆ. ದಯಮಾಡಿ road tax ಹಾಕುವುದು ಸರಿಯಲ್ಲ. ಏಕೆಂದರೆ ಆ ಯಂತ್ರಗಳು ಹೊಲ ಬಿಟ್ಟು ಹೊರಗೆ ಬರುವುದಿಲ್ಲ, ಕಬ್ಬಿನ ಗದ್ದೆಯಲ್ಲಿಯೇ ಇರುತ್ತವೆ. ಒಂದು ಹೊಲದಿಂದ ಇನ್ನೊಂದು ಹೊಲಕ್ಕೆ ತೆಗೆದುಕೊಂಡು ಹೋಗಬೇಕಾದಂತಹ ಸಂದರ್ಭ ಬಂದರೆ ಅದನ್ನು ಲಾರಿಯಲ್ಲಿ ತೆಗೆದುಕೊಂಡು ಹೋಗುತ್ತಾರೆ. ಲಾರಿ road tax ತುಂಬುತ್ತದೆ. ಹಾಗಾಗಿ ದಯಮಾಡಿ ನಾನು ಹೇಳುವುದೇನೆಂದರೆ, ಹಿರಿಯ ಸಚಿವರು ಇಲ್ಲಿದ್ದಾರೆ. ಕಬ್ಬು ಕಠಾವು ಯಂತ್ರಕ್ಕೆ road tax ಏನು ಹಾಕಿದ್ದಾರೆ ಅದನ್ನು ತೆಗೆದು ಹಾಕುವಂತೆ ಸಾರಿಗೆ ಇಲಾಖೆಯವರಿಗೆ ಹೇಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ವಿಶೇಷವಾಗಿ ಮಾನ್ಯ ಕಂದಾಯ ಸಚಿವರಿಗೆ ಕಳಕಳಿಯ ಪ್ರಾರ್ಥನೆವೊಂದಿದೆ. ಕಂದಾಯ ಸಚಿವರು ಮತ್ತು ಆರೋಗ್ಯ ಸಚಿವರು ಬಹಳ ತಡವಾಗಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಂತ್ರಿಯಾದರು. ಅವರು ಪ್ರಾರಂಭದಲ್ಲೇ ಮಂತ್ರಿಯಾಗಿದ್ದರೆ ಆ ಎರಡು ಇಲಾಖೆಗಳಲ್ಲಿ ಅದ್ಭುತ ಸಾಧನೆಗಳಾಗುತ್ತಿತ್ತು ಎನ್ನುವ ಭಾವನೆ ಮೂಡುತ್ತದೆ. ಕಂದಾಯ ಸಚಿವರು "ಉಳುವವನೇ ಒಡೆಯ" ಆಗಬೇಕೆಂಬ ಕನಸನ್ನಿಟ್ಟುಕೊಂಡು ಅನೇಕ ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದಿದ್ದು, ಅದಕ್ಕೇನಾದರೂ ಒಂದು ಕಲ್ಪನೆಯನ್ನು ಮೂಡಿಸಬೇಕೆಂದು ಹೇಳಿ ಪಣತೊಟ್ಟು ಕಾರ್ಯ ಮಾಡುತ್ತಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ಸಚಿವರಲ್ಲಿ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಇಡೀ ರಾಜ್ಯದಲ್ಲಿ ಭೂಮಿ ಮೋಜಣಿ ಆಗಿ ಅನೇಕ ವರ್ಷಗಳಾಗಿವೆ. ಬ್ರಿಟಿಷರು ಇದ್ದಂತಹ ಕಾಲದಲ್ಲಿ ಮೋಜಣಿ ಆಗಿರುತ್ತದೆ. ಆದಾದನಂತರ ಜಮೀನುಗಳ ಅಳತೆ ಆಗಿ ರುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಬಡಿದಾಟ, ಹೊಡೆದಾಟ, ಕೊಲೆಗಳಾಗುತ್ತಿವೆಯೆಂದರೆ ಆ ರೈತರ ಮಧ್ಯೆಯಿರುವಂತಹ ಸೀಮಿ ಜಗಳಗಳಿಂದಲೇ ಆಗುತ್ತಿರುವುದು. ಇದಕ್ಕೆ ನನ್ನ ಪ್ರಾರ್ಥನೆಯೇನೆಂದರೆ, ಈ ಹಿಂದೆ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಪ್ರಾಯೋಗಿ ಕವಾಗಿ ಒಂದು ಜಿಲ್ಲೆಯನ್ನು ಆಯ್ಕೆ ಮಾಡಿದ್ದರು. ಇಡೀ ಜಿಲ್ಲೆ ಮರು ಮೋಜಣಿ ಆಗಬೇಕೆಂದು ಮಾಡಿದ್ದರು. ಅಂದರೆ ಮರುಮಾಪನ ಆಗಬೇಕೆಂದು ಹೇಳಿ ಈ ರೀತಿ ಮಾಡಿದ್ದರು.

ಶ್ರೀ ಅಶೋಕ್ ಖೇಣಿ : ಸವದಿ ಅವರೆ, ಒಂದೇ ಒಂದು ನಿಮಿಷ ಮಾತನಾಡುತ್ತೇನೆ. ಬೆಂಗಳೂರಿನಲ್ಲಿ ಒಂದೊಂದು ಎಕರೆಗೆ ಪೋಡಿ ಮಾಡುವುದಕ್ಕೆ 30 ಲಕ್ಷ ರೂ.ಗಳನ್ನು ಕೇಳುತ್ತಿದ್ದಾರೆಂದು ಜನ ಹೇಳುತ್ತಿದ್ದಾರೆ. ಇದು ನಿಜವೇ ಅಥವಾ ಸುಳ್ಳು ಎನ್ನುವುದು ಗೊತ್ತಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಬೆಂಗಳೂರಿನ ಬಗ್ಗೆ ನನಗೆ ಗೊತ್ತಿಲ್ಲ. ಹಳ್ಳಿ ಕಡೆಯೆಂದು ನಾನು ತಿಳಿದುಕೊಂಡೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಆ ರೀತಿ ಏನೂ ಇಲ್ಲ. ಖೇಣಿ ಅವರೆ ನಾನು ಮಾತನಾಡುತ್ತೇನೆ. ಕುಳಿತುಕೊಳ್ಳಿ. ನೀವು ಪ್ರತ್ಯೇಕವಾಗಿ ಮಾತನಾಡಿ. ಮಾನ್ಯ ಅಧ್ಯಕ್ಷರೆ, ನಾನು ಕಂದಾಯ ಸಚಿವರಲ್ಲಿ ಕೇಳಿ ಕೊಳ್ಳುವುದೇನೆಂದರೆ, ಸುಮಾರು ನೂರಾರು ವರ್ಷಗಳ ಹಿಂದೆ ಇಡೀ ರಾಜ್ಯದ ಜಮೀನು ಅಳತೆಯಾಗಿ ದ್ದು, ಅದೇ ಅಳತೆಯ ಆಧಾರದ ಮೇಲೆ, ಅಂದು ಬ್ರಿಟಿಷರು pics-stone ಎಂದು

ಹಾಕಿಟ್ಟಿದ್ದರೋ, ಅದು 15-20 ಸರ್ವೆ ನಂಬರ್‌ಗಳಲ್ಲಿ ಸಿಗುತ್ತದೆ. ಆದರೆ ಅವೂ ಕೂಡ ಇವತ್ತು ಕಿತ್ತುಹೋಗಿದೆ. ಹಾಗಾಗಿ ತಾವು ಇನ್ನೊಂದು ಸಾರಿ ಸಂಪೂರ್ಣವಾಗಿ ಅಳತೆ ಮಾಡಬೇಕು. ಪ್ರಾಯೋಗಿಕವಾಗಿ ಈ ಹಿಂದೆ ಬೆಳಗಾವಿ ಜಿಲ್ಲೆ ಆಯ್ಕೆಯಾಗಿದ್ದು, ಅದನ್ನು ಮುಗಿಸಿಕೊಡಬೇಕು. ಇದರ ಜೊತೆಗೆ ಇಡೀ ರಾಜ್ಯದ ರೈತರ ಜಮೀನುಗಳನ್ನು ಇನ್ನೊಂದು ಸಾರಿ ಅಳತೆಯನ್ನು ಮಾಡಬೇಕಾದ್ದುದು ಅವಶ್ಯಕತೆಯಿದೆ ಎನ್ನುವುದನ್ನು ಸದನದ ಮುಖಾಂತರ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ, ZP roads, Taluk roads ಮತ್ತು ಗ್ರಾಮ ರಸ್ತೆಗಳೆಂಬ ಮೂರು ರೀತಿಯ ರಸ್ತೆಗಳು ಬರುತ್ತವೆ. ಸರ್ವೆನಂಬರ್‌ಗಳ ಮಧ್ಯದಲ್ಲಿರುವ ರಸ್ತೆಗಳೇನಿವೆ ಅದನ್ನು ಅನೇಕ ಜನರು ಒತ್ತುವರಿ ಮಾಡಿಸಿಕೊಂಡು ಮುಗಿಸಿರುತ್ತಾರೆ. ಈ ಸರ್ವೆನಂಬರ್‌ಗಳ ಮಧ್ಯದಲ್ಲಿರುವ ರಸ್ತೆಗಳನ್ನು ನೀವು ಮೋಜಣಿ, ಅಳತೆ ಮಾಡಿಸಿದರೆ, ಅನೇಕ ರೈತರಿಗೆ ತಮ್ಮ ಸರ್ವೆ ನಂಬರ್‌ಗಳನ್ನು ದಾಟಿ ಇನ್ನೊಂದು ಸರ್ವೆ ನಂಬರ್‌ಗೆ ಹೋಗುವುದಕ್ಕೆ ಸಾಕಷ್ಟು ಉಪಯೋಗವಾಗುತ್ತದೆ. ಆದ್ದರಿಂದ ದಯಮಾಡಿ ನೀವು ಆ ರಸ್ತೆಗಳ ಮೋಜಣಿ ಮಾಡುವಂತಹ ಕೆಲಸ ಆಗಬೇಕು. ಈ ಕೆಲಸ ತಮ್ಮ ಕಾಲದಲ್ಲಿ ಆದರೆ ಮಾತ್ರ ಸಾಧ್ಯ ಎನ್ನುವುದನ್ನು ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ಕೊನೆಯದಾಗಿ, ಜಲ ಸಂಪನ್ಮೂಲ ಇಲಾಖೆ ಬಗ್ಗೆ ಹೇಳುವುದೇನೆಂದರೆ, ಚುನಾವಣೆ ಪೂರ್ವದಲ್ಲಿ 'ಕಾಂಗ್ರೆಸ್ಸಿನ ನಡಿಗೆ ಕೃಷ್ಣೆಯ ಕಡೆಗೆ' ಎಂದು ಹೇಳಿರುವ ಬಗ್ಗೆ ಟೀಕೆ ಟಿಪ್ಪಣಿಗಳಾಗಿದ್ದು, ಇದರ ಬಗ್ಗೆ ನಮ್ಮ ಕಡೆಗೆ ಬಹಳಷ್ಟು ಮಾತನಾಡಿರುತ್ತಾರೆ. ಅದನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ನೀರಾವರಿ ಇಲಾಖೆ ಬಗ್ಗೆ ಹೇಳುವುದಾದರೆ, ಎಲ್ಲೆಲ್ಲಿ ಮುಳುಗಡೆ ಪ್ರದೇಶದಲ್ಲಿ, ಉದಾಹರಣೆಗೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ಸುಮಾರು 26 ಹಳ್ಳಿಗಳು ಹಿಪ್ಪರಗಿ ಡ್ಯಾಂನಿಂದ ಮುಳುಗಡೆಯಾಗಿವೆ. ಆ ಮುಳುಗಡೆ ಆಗಿರುವಂತಹ ಹಳ್ಳಿಗಳಿಗೆ ಈಗಾಗಲೇ ಪರಿಹಾರವನ್ನು ಕೊಟ್ಟಿದ್ದೇವೆ. ಪರಿಹಾರ ಕೊಟ್ಟ ನಂತರ ಅವರನ್ನು ಬೇರೆ ಕಡೆಗೆ ಸ್ಥಳಾಂತರ ಮಾಡಬೇಕಲ್ಲವೇ? R and R Centre ಗಳನ್ನು ಮಾಡಿ ಪುನರ್ವಸತಿ ಕೇಂದ್ರಗಳಿಗೆ ಆ ರೈತರನ್ನು shift ಮಾಡಬೇಕಾಗುತ್ತದೆ. ಆದರೆ ಅಲ್ಲಿ ಇನ್ನೂ ಅನೇಕ ಕೆಲಸಗಳು ಪೆಂಡಿಂಗ್‌ನಲ್ಲಿರುತ್ತವೆ. ಇದರ ಜೊತೆಗೆ, ಸದನದಲ್ಲಿ ನೀರಾವರಿ ಸಚಿವರು ಇಲ್ಲ. ಹಣ ಬಿಡುಗಡೆಯಾದಂತಹ ಸಂದರ್ಭದಲ್ಲಿ, ಪಂಚಾಯಿತಿಯಲ್ಲಿ ಸಿ.ಟಿ.ಎಸ್. ನಂಬರ್ ಇರುತ್ತದೋ ಅವರಿಗೆ

ಮಾತ್ರ ಹಣ ಕೊಟ್ಟಿರುತ್ತಾರೆ. ರೀಸಾ ನಂಬರ್‌ನಲ್ಲಿರುವವರಿಗೆ ಕೊಟ್ಟಿರುವುದಿಲ್ಲ. ಸಿ.ಟಿ.ಎಸ್. ನಂಬರ್‌ನ ಒಳಗಡೆ ಇರುವಂತಹವರಿಗೆ ರೀಸಾ ನಂಬರ್ ಇದ್ದು, ಅವರಿಗೆ ಕೊಟ್ಟಿರುವುದಿಲ್ಲ. ಅಲ್ಲಿರುವಂತಹವರು ಅತ್ಯಂತ ಬಡವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿರುತ್ತಾರೆ. ಒಳ್ಳೆಯ ಜನರಿಗೆ ಹಣ ತಲುಪಿರುತ್ತದೆ. ಆದರೆ ಅತ್ಯಂತ ಕಡು ಬಡವರಿರುವವರಿಗೆ ಇನ್ನೂ ಪರಿಹಾರ ತಲುಪಿರುವುದಿಲ್ಲ. ಅದಕ್ಕಾಗಿ ನಾನು ವಿನಂತಿ ಮಾಡುವುದೇನೆಂದರೆ, ರೀಸಾ ನಂಬರ್‌ನಲ್ಲಿರುವ ರೈತರಿಗೂ ಪರಿಹಾರವನ್ನು ಕೊಟ್ಟು, ಅವರನ್ನು ಸಹ ಪುನರ್ವಸತಿ ಕೇಂದ್ರಗಳಿಗೆ ಕಳುಹಿಸುವಂತಹ ಕೆಲಸ ನೀರಾವರಿ ಇಲಾಖೆಯಿಂದ ಆಗಬೇಕೆನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಹೇಳಿ, conclude ಮಾಡುತ್ತೇನೆ ಅಧ್ಯಕ್ಷರೆ. ಸದನದಲ್ಲಿ ಮಾನ್ಯ ಶಿಕ್ಷಣ ಇಲಾಖೆಯ ಸಚಿವರಾದ ತನ್ವೀರ್ ಸೇಠ್ ಅವರು ಇದ್ದಾರೆ. ನಿಮಗೆ ಗೊತ್ತಿರುವಂತೆ ನಮ್ಮ ಕ್ಷೇತ್ರದ ಅನೇಕ ಕಡೆಗಳಲ್ಲಿ ಸರ್ವ ಶಿಕ್ಷಣ ಅಭಿಯಾನ ಬರುವಂತಹ ಪೂರ್ವದಲ್ಲಿ ನಾವ್ಯಾರಾದರೂ ಹಳ್ಳಿಗಳಿಗೆ ಹೋದರೆ ಪ್ರತಿಯೊಂದು ಹಳ್ಳಿಯಲ್ಲಿಯೂ ನಮ್ಮ ಹತ್ತಿರ, 100 ಜನ ಮಕ್ಕಳಿದ್ದಾರೆ, ಒಬ್ಬ ಮಾಸ್ಟರ್ ಇದ್ದು, ಒಂದೇ ಕೋಣೆ ಇರುತ್ತದೆಂದು ಹೇಳುತ್ತಿದ್ದರು. ಆದರೆ ಸರ್ವ ಶಿಕ್ಷಣ ಅಭಿಯಾನ ಬಂದ ಮೇಲೆ ಆ ಕೊರತೆ ಬಹಳಷ್ಟು ಕಡಿಮೆಯಾಗಿದೆ. ಹತ್ತು ವರ್ಷದಲ್ಲಿ ಇರಬೇಕೆನ್ನುವ ಆಲೋಚನೆಯಿಂದ ಸರ್ವ ಶಿಕ್ಷಣ ಅಭಿಯಾನ ಪ್ರಾರಂಭವಾಯಿತು. ಹತ್ತು ವರ್ಷ ಆದ ಮೇಲೆ ಪುನ: ಅದು ನಿಂತು ಹೋಯಿತು. ಇವತ್ತು ಜನಗಣತಿಯ ಆಧಾರದ ಮೇಲೆ ಇನ್ನಷ್ಟು ಬಹಳಷ್ಟು ವಿದ್ಯಾರ್ಥಿಗಳು ಬರುತ್ತಿರುವ ಸಂದರ್ಭದಲ್ಲಿ ಕೋಣೆಗಳ ಕೊರತೆ ಇದೆ. ಇದರ ಜೊತೆಗೆ ನೂರಾರು ವರ್ಷಗಳ ಹಿಂದೆ ನಿರ್ಮಾಣ ಮಾಡಿದಂತಹ ಕಟ್ಟಡಗಳಿದ್ದು, ಅವು ಶೀತಲಗೊಂಡಿರುತ್ತವೆ. ಆ ಶೀತಲಗೊಂಡಿರುವಂತಹ ಕಟ್ಟಡಗಳು ಯಾವಾಗ ಬಿದ್ದು, ಆ ಮಕ್ಕಳ ಜೀವ ತೆಗೆದುಕೊಳ್ಳುತ್ತದೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಜಿಲ್ಲೆಯ ಯಮಕನಮರಡಿಯಲ್ಲಿ ಎರಡು ಕೊಠಡಿಗಳ ಕುಸಿತವಾಗಿ ಸುಮಾರು 2 ಅಥವಾ ಮೂರು ವಿದ್ಯಾರ್ಥಿಗಳು ಪ್ರಾಣ ಕಳೆದುಕೊಂಡಿದ್ದಾರೆ. ನಮ್ಮಲ್ಲಿ ಅಂದರೆ ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ನನ್ನ ಅಥಣಿ ಕ್ಷೇತ್ರದಲ್ಲಿ ಹಳೆಯ ಕಟ್ಟಡಗಳನ್ನು ತೆರವು ಮಾಡಿದ್ದೇವೆ. ಹುಡುಗರು ಪ್ರಾಣ ಕಳೆದುಕೊಳ್ಳಬಾರದೆನ್ನುವ ಉದ್ದೇಶದಿಂದ ತೆರವು ಮಾಡಿ ಅಲ್ಲಿ ಷೆಡ್‌ಗಳನ್ನು ಹಾಕಿಕೊಟ್ಟಿದ್ದೇವೆ. ಆ ಷೆಡ್‌ಗಳಲ್ಲಿ ಮಕ್ಕಳು ಪಾಠವನ್ನು ಕಲಿಯುತ್ತಿದ್ದಾರೆ. ವಿಶೇಷವಾಗಿ ಷೆಡ್‌ಗಳಲ್ಲಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಮಕ್ಕಳು ಶಿಕ್ಷಣವನ್ನು ಕಲಿಯುತ್ತಿದ್ದಾರೋ ಅಂತಹದ್ದನ್ನು ವಿಶೇಷ ಪ್ರಕರಣವೆಂದು ಗಮನಿಸಿ, ಹಣವನ್ನು ಬಿಡುಗಡೆ ಮಾಡಿ, ಶೀತಲಗೊಂಡಿರುವಂತಹ ಎಲ್ಲಾ ಕಟ್ಟಡಗಳನ್ನು ಪುನರ್‌ಜೀವನ್‌ಗೊಳಿಸಬೇಕೆಂದು ಶಿಕ್ಷಣ ಇಲಾಖೆಯ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ. ವಿಶೇಷವಾಗಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಬಗ್ಗೆ ಹೇಳುವುದಾದರೆ, ಈಗಾಗಲೇ ಟಿ.ವಿ.ಗಳಲ್ಲಿ ತಾವೆಲ್ಲರೂ ಗಮನಿಸಿರುವಂತೆ, ಯಾವುದನ್ನು ನಂಬಬೇಕು ಅಥವಾ ಯಾವುದನ್ನು ನಂಬಬಾರದು ಎನ್ನುವಂತಾಗಿದೆ. ಆಹಾರ ಇಲಾಖೆಯಲ್ಲಿ ಅನೇಕ ಕಡೆ ದೃಶ್ಯ ಮಾಧ್ಯಮದಲ್ಲಿ, ಪತ್ರಿಕೆಗಳಲ್ಲಿ ಅದರಲ್ಲೂ ವಿಶೇಷವಾಗಿ ಸೋಷಿಯಲ್ ಮಿಡಿಯಾಗಳಲ್ಲಿ ಪ್ಲಾಸ್ಟಿಕ್ ಅಕ್ಕಿ, ಸಕ್ಕರೆ, ತತ್ತಿಗಳು ಬರುತ್ತಿವೆಂದು ತೋರಿಸುತ್ತಿದ್ದಾರೆ. ಇದಕ್ಕಿಂತಲೂ ಹೆಚ್ಚು ವಿಷಕರವಾಗಿರುವಂತಹ ಸಂಗತಿಯೊಂದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ವಿಶೇಷವಾಗಿ ಹಾಲು. ಇದರ ಬಗ್ಗೆ ಬಹಳ ಹೆಚ್ಚಾಗಿ ಗಮನದಲ್ಲಿಡಬೇಕು. ಪ್ಲಾಸ್ಟಿಕ್ ಸಕ್ಕರೆ, ಅಕ್ಕಿ, ತತ್ತಿಗಳನ್ನೆಲ್ಲವನ್ನು ತಡೆಯಬಹುದು. ಆದರೆ ವಿಷವನ್ನೇ ಇಂದು ಕುಡಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಹೈನುಗಾರಿಕೆಯಿಂದ ಹಾಲನ್ನು ಪಡೆದುಕೊಂಡು ಸೊಸೈಟಿಗಳಿಗೆ ಸರಬರಾಜು ಮಾಡುವ ಸಮಯದಲ್ಲಿ ಮಧ್ಯವರ್ತಿಗಳೇನಿದ್ದಾರೆ ಅವರನ್ನು ಗೌಳಿ ಎಂದು ಕರೆಯುತ್ತೇವೆ. ರೈತರ ಕಡೆಯಿಂದ ಹಾಲನ್ನು ತೆಗೆದುಕೊಂಡು 100-200 ಲೀಟರ್ ಹಾಲನ್ನು ಸಂಪಾದನೆ ಮಾಡಿಕೊಳ್ಳುತ್ತಾರೆ.

(ಮುಂದು . . .)

ದಿ:19-06-2017-4.20(31)-ಪಿಂ.ಕೆ.ಕೆ(ಜೆ.ಎಲ್)-ಹೆಚ್.ಎಸ್

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಮುಂದುವರೆದುದು) : ಡೈರಿಗಳಿಗೆ ಹೋಗುವುದು ಮತ್ತು ಹಾಲನ್ನು ಬೇರೆ ಕಡೆ ಕಳುಹಿಸುವಂತಹ ಸಂದರ್ಭದಲ್ಲಿ ನಕಲಿ ಹಾಲನ್ನು ತಯಾರು ಮಾಡುತ್ತಿದ್ದಾರೆ. ನಕಲಿ ಹಾಲು ಎಂದರೆ ಅದರಲ್ಲಿ ಏನೇನು ಮಿಕ್ಸ್ ಮಾಡುತ್ತಾರೆಂದು ಗೊತ್ತೇನು? ಫಿನಾಯಿಲ್, ಟೂತ್‌ಫೇಸ್ಟ್, ಫರ್ಟಿಲೈಸರ್ ಅಂದರೆ ಗೊಬ್ಬರ ಎಂದು ಏನು ಕರೆಯುತ್ತೇವೆ ಅದೆಲ್ಲವನ್ನೂ ಮಿಶ್ರಣ ಮಾಡುತ್ತಾರೆ. ಅದರ ಜೊತೆಗೆ paint ಕೂಡ ಮಿಕ್ಸ್ ಮಾಡುತ್ತಿದ್ದಾರೆ. ನಕಲಿ ಹಾಲನ್ನು ಸೃಷ್ಟಿ ಮಾಡಿಕೊಂಡು ಅನೇಕ ಜನರಿಗೆ ಇವತ್ತು ವಿಷ ಹಾಕುವಂತಹ ಕೆಲಸ ನಡೆದಿದೆ ಅದಕ್ಕೆ ವಿಶೇಷವಾಗಿ ನಾನು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಅಧಿಕಾರಿಗಳಿಗೆ ಮತ್ತು ಸಚಿವರಿಗೆ ನಾನು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕೇಳಿಕೊಳ್ಳುವುದೇನೆಂದರೆ, ನೀವು ಒಂದು ವೇಳೆ ಅನ್ನ ಕೊಡದಿದ್ದರೂ ನಡೆಯುತ್ತದೆ ವಿಷ ಕೊಡುವಂತಹ ಕೆಲಸ ಮಾಡುವಂತಹ ಈ ಜನರನ್ನು ಸದೆಬಡಿಯಬೇಕು ಮತ್ತು ಇಂತಹ ಕಾರ್ಯಗಳನ್ನು ಮಾಡುವುದಕ್ಕೆ ಅವಕಾಶ ಕೊಡಲಾರದ ಹಾಗೆ ಸರ್ಕಾರ ನೋಡಿಕೊಳ್ಳಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಕೊನೆಯದಾಗಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ತಮಗೆ ಶರಣುಗಳನ್ನು ಹೇಳಿ ಶರಣು ಮತ್ತು ಶರಣಾರ್ಥಿ ಶರಣರಿಗೆ.

ಶ್ರೀ ಹೆಚ್.ಪಿ.ರಾಜೇಶ್: ಮಾನ್ಯ ಕಾನೂನು ಸಚಿವರೆ ದಯಮಾಡಿ adulteration of food ಬಗ್ಗೆ ಒಂದು ಪ್ರತ್ಯೇಕವಾದ ಬಿಲ್ ತೆಗೆದುಕೊಂಡು ಬನ್ನಿ. ಅದು ಬಹಳ critical ಇದೆ.

ಅಧ್ಯಕ್ಷರು: ಆಯಿತು ಕುಳಿತುಕೊಳ್ಳಿ ಇದನ್ನು ನಂತರ ನೋಡೋಣ. ಗುರುಪಾಟೀಲ್ ಶಿರವಾಳರವರೆ ಎರಡು ನಿಮಿಷ ಸಮಯ ಕೊಡುತ್ತೇನೆ ಮಾತನಾಡಿ ಮುಗಿಸಿ.

ಶ್ರೀ ಹೆಚ್.ಪಿ.ರಾಜೇಶ್: Adulteration of food ಬಗ್ಗೆ separate ಕಾನೂನು ತರಬೇಕು.

ಶ್ರೀ ಅಶೋಕ್ ಖೇಣಿ: ಮಾನ್ಯ ಅಧ್ಯಕ್ಷರೆ, ನನಗೆ ಎರಡು ನಿಮಿಷ ಕಾಲಾವಕಾಶ ಕೊಟ್ಟಿದ್ದಾರೆ.

ಅಧ್ಯಕ್ಷರು: ನಿಮಗಲ್ಲ ಗುರುಪಾಟೀಲ್ ಶಿರವಾಳರವರಿಗೆ ಈವಾಗ ಅವಕಾಶ ಕೊಟ್ಟಿದ್ದೇನೆ ನಿಮಗೆ ನಂತರ ಅವಕಾಶ ಕೊಡುತ್ತೇನೆ.

ಶ್ರೀ ಗುರುಪಾಟೀಲ್ ಶಿರವಾಳ (ಶಹಾಪುರ): ಮಾನ್ಯ ಅಧ್ಯಕ್ಷರೆ, ಇಲಾಖೆಗಳ ಬೇಡಿಕೆ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿರುವುದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತಾ, ಕಳೆದ ನಾಲ್ಕು ವರ್ಷಗಳಿಂದ ಸರ್ಕಾರ ಅನೇಕ ಸಾಧನೆಗಳನ್ನು ಸಂಪೂರ್ಣವಾಗಿ ಮಾಡಿದ್ದೇವೆಂದು ಜಾಹೀರಾತಿನ ಮೂಲಕ ಬಿಂಬಿಸುವಂತಹ ಕೆಲಸವನ್ನು ಮಾಡುತ್ತಿದೆ. ನಿಜಸ್ಥಿತಿ ಏನು ಎನ್ನುವುದನ್ನು ಸರ್ಕಾರ ಒಂದು ಕಡೆ ನೋಡಬೇಕಾಗುತ್ತದೆ. ಉದಾಹರಣೆಗೆ ತಮಗೆ ಹೇಳಬೇಕೆಂದರೆ ಅನ್ನಭಾಗ್ಯ ಯೋಜನೆಯನ್ನು ಪ್ರಪ್ರಥಮದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿರುವುದು. ತಮಗೆ ಗೊತ್ತಿರುವ ಹಾಗೆ ಅನ್ನಭಾಗ್ಯ ಯೋಜನೆ ಕಳೆದ ನಾಲ್ಕು ವರ್ಷಗಳಲ್ಲಿ ಯಾವ್ಯಾವ ರೂಪಗಳನ್ನು ತಾಳಿದೆ ಎಂಬುದನ್ನು ನಾವು ನೋಡಬೇಕಾಗುತ್ತದೆ. ಅನ್ನಭಾಗ್ಯ ಯೋಜನೆಯಡಿಯಲ್ಲಿ ಪ್ರಪ್ರಥಮವಾಗಿ 30 ಕೆ.ಜಿ ಅಕ್ಕಿಯನ್ನು,

ತದನಂತರದಲ್ಲಿ 10 ಕೆ.ಜಿ, 5 ಕೆ.ಜಿ ಇವತ್ತು ಏಳು ಕೆ.ಜಿಗೆ ಬಂದು ನಿಂತಿದೆ. ಸರ್ಕಾರ ಯಾವ ಯೋಜನೆಯ ಸಂಪೂರ್ಣ ಸಾಧನೆ ಮಾಡಿದ್ದೇವೆಂದು ಹೊರಟಿದೆ ಆದರೆ ಅದರ ಸಂಪೂರ್ಣ ವಿಫಲತೆಯನ್ನು ಇದರ ಮೂಲಕ ನಾವು ತೋರಿಸುವುದಕ್ಕೆ ಬಯಸುತ್ತೇವೆ. ವಸತಿ ಇಲಾಖೆಯಲ್ಲಿ ಕಳೆದ 2013-14 ರಿಂದ 2016-17 ರವರೆಗೆ ಯಾದಗಿರಿ ಜಿಲ್ಲೆಗೆ ವಿವಿಧ ವಸತಿ ಯೋಜನೆಯಲ್ಲಿ ಸುಮಾರು 36,576 ಮನೆಗಳು ಮಂಜೂರಾಗಿವೆ. ಇತ್ತೀಚಿನ ವರದಿ ಪ್ರಕಾರ ಕೇವಲ 9,702 ಮನೆಗಳನ್ನು ಮಾತ್ರ ಕಟ್ಟಿಸಲಾಗಿದೆ. ಇದು ಏನು ತೋರಿಸುತ್ತದೆಂದರೆ ಸರ್ಕಾರ ಬಡವರಿಗೆ ನಾವು ಸೂರನ್ನು ಕೊಡುತ್ತೇವೆಂದು ಏನು ಹೇಳುತ್ತಿದೆ ಆ ಸೂರು ಕೊಡುವಂತಹ ಸರ್ಕಾರದ ಕೆಲಸ ಸಂಪೂರ್ಣ ವಿಫಲವಾಗಿದೆಯೆಂಬುದನ್ನು ಈ ಮೂಲಕ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಯಾವ್ಯಾವ ಇಲಾಖೆಯಿದೆ ಅದರಲ್ಲಿ ಸಂಕ್ಷಿಪ್ತವಾಗಿ ಮೂರ್ನಾಲ್ಕು ಹೇಳಿ.

ಶ್ರೀ ಗುರುಪಾಟೀಲ್ ಶಿರವಾಳ: ಸರ್ಕಾರ ಇವತ್ತು ನಿವೇಶನಗಳನ್ನು ಹಂಚುತ್ತೇವೆಂದು ಆಯವ್ಯಯದಲ್ಲಿ ಹೇಳಿದ್ದಾರೆ. ನಾನು ನಾಲ್ಕು ವರ್ಷಗಳಿಂದ ನೋಡುತ್ತಿದ್ದೇನೆ ಒಂದು ಕಡೆ ಕೂಡ ನಿವೇಶನವನ್ನು ಹಂಚುವುದಕ್ಕೆ ಆಗಲಿಲ್ಲ. ಭೂಮಿಯನ್ನು ಖರೀದಿ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಕ್ಷೇತ್ರದ ಶಹಾಪುರ ನಗರಸಭೆಗೆ ಒಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ ಆದರೆ ಕಳೆದ ಎರಡು ವರ್ಷಗಳಿಂದ ಭೂಮಿಯನ್ನು ಖರೀದಿ ಮಾಡುವುದಕ್ಕೆ ಸಾಧ್ಯವಾಗಿಲ್ಲ, ಮಂಜೂರು ಕೂಡ ಆಗಲಿಲ್ಲ. ಸರ್ಕಾರ ಯಾವ ವೇಗದಲ್ಲಿ ಕೆಲಸ ಮಾಡುತ್ತಿದೆಯೆಂಬುದಕ್ಕೆ ಇದೊಂದು ಉದಾಹರಣೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ 2014-15ನೇ ಸಾಲಿನಲ್ಲಿ ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಸುಮಾರು 387 ಕೋಟಿ ರೂ.ಗಳನ್ನು ನಿಗದಿಪಡಿಸಿತ್ತು. ಅದರಲ್ಲಿ ಕೇವಲ 281 ಕೋಟಿ ರೂ.ಗಳನ್ನು ಮಾತ್ರ ಖರ್ಚು ಮಾಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನ್ಯಾಯ ಒದಗಿಸಿಕೊಡುತ್ತೇವೆಂದು ಸರ್ಕಾರದ ನಿಲುವು ಏನಿದೆ, ಐತಿಹಾಸಿಕ ಕಾನೂನು ತಂದು ಆ ಕಾನೂನಿನಡಿಯಲ್ಲಿ ಯಾರು ತಪ್ಪು ಮಾಡುತ್ತಾರೆ ಅವರಿಗೆಲ್ಲಾ ಶಿಕ್ಷೆ ಕೊಡುತ್ತೇವೆಂದು ಸರ್ಕಾರ ಹೇಳಿದೆ ಆದರೆ ಇಲ್ಲಿಯವರೆಗೆ ಯಾವೊಬ್ಬ ಅಧಿಕಾರಿಗೂ ಕೂಡ ಈ ಕಾನೂನಿನಡಿಯಲ್ಲಿ ಯಾವುದೇ ಕ್ರಮವನ್ನು ವಹಿಸಿಲ್ಲ. ಭೋವಿ ಜನಾಂಗದ ಅಭಿವೃದ್ಧಿಗಾಗಿ ಕರ್ನಾಟಕ

ಭೋವಿ ಅಭಿವೃದ್ಧಿ ನಿಗಮವನ್ನು ಸ್ಥಾಪನೆ ಮಾಡಿ 2015-16, 2016-17 ನೇ ಸಾಲಿನಲ್ಲಿ 60 ಕೋಟಿ ರೂ.ಗಳನ್ನು ನಿಗದಿಪಡಿಸಿದೆ ಆದರೆ ಇದರಲ್ಲಿ ಒಂದು ರೂಪಾಯಿ ಕೂಡ ಖರ್ಚಾಗಿಲ್ಲ. ಅದೇ ರೀತಿಯಾಗಿ ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ 2014-15 ರಿಂದ 2017-18 ನೇ ಸಾಲಿನವರೆಗೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ 43,768 ಕೊಳವೆಬಾವಿಗಳನ್ನು ಕೊರೆಯಬೇಕಾಗಿತ್ತು ಆದರೆ ಇದರಲ್ಲಿ ಕೇವಲ 15,660 ಕೊಳವೆಬಾವಿಗಳನ್ನು ಮಾತ್ರ ಕೊರೆಯಲಾಗಿದೆ. ಇದರಲ್ಲಿ ಕೇವಲ 6,938 ಕೊಳವೆ ಬಾವಿಗಳಿಗೆ ಮಾತ್ರ ಪಂಪ್‌ಸೆಟ್‌ಗಳನ್ನು ಒದಗಿಸಲಾಗಿದೆ.

ಅಧ್ಯಕ್ಷರು: ಈಗಾಗಲೇ ಬಹಳಷ್ಟು ಶಾಸಕರು ಈ ಬಗ್ಗೆ ಮಾತನಾಡಿದ್ದಾರೆ. ಮಾತನಾಡದೆ ಇರುವಂತಹ ಯಾವುದಾದರೂ ಎರಡು ಇಲಾಖೆಗಳಿದ್ದರೆ ಮಾತನಾಡಿ.

ಶ್ರೀ ಗುರುಪಾಟೀಲ್ ಶಿರವಾಳ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಇವರೇನು ನ್ಯಾಯ ಒದಗಿಸುವುದು .....

ಅಧ್ಯಕ್ಷರು: ಜನರಲ್ ಆಗಿ ಬೇಡ ನಿಮ್ಮ ಕ್ಷೇತ್ರದ ವಿಷಯ ಇದ್ದರೆ ಹೇಳಿ. ಈಗಾಗಲೇ ಜನರಲ್ ಆಗಿ ಬಹಳ ಜನ ಮಾತನಾಡಿದ್ದಾರೆ.

ಶ್ರೀ ಗುರುಪಾಟೀಲ್ ಶಿರವಾಳ: ಗಂಗಾಕಲ್ಯಾಣ ಯೋಜನೆ ಇವತ್ತು ಯಾವ ರೀತಿ ನಡೆಯುತ್ತಿದೆ ಎಂದರೆ, ವಾಲ್ಮಿಕಿ ಅಭಿವೃದ್ಧಿ ನಿಗಮದಲ್ಲಿಯೂ ಕೂಡ ಅದೇ ರೀತಿಯಾಗಿದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ 2016-17ನೇ ಸಾಲಿನಲ್ಲಿ ಸುಮಾರು 2217 ಕೋಟಿ ರೂ.ಗಳನ್ನು ನಿಗಧಿಪಡಿಸಿದ್ದರೆ 1664 ಕೋಟಿ ರೂ.ಗಳನ್ನು ಮಾತ್ರ ಖರ್ಚು ಮಾಡಿದ್ದಾರೆ ಅಂದರೆ ಎಲ್ಲಾ ಇಲಾಖೆಗಳಲ್ಲಿಯೂ ಕೂಡ ಈ ರೀತಿಯಾದಂತಹ ವಿಫಲತೆಯನ್ನು ನಾವು ಕಾಣುತ್ತಿದ್ದೇವೆ. ಅದೇ ರೀತಿಯಾಗಿ ಗ್ರಾಮೀಣ ಅಭಿವೃದ್ಧಿ ಇಲಾಖೆ ಬಗ್ಗೆ ಹೇಳುವುದಾದರೆ, ಕೆರೆಗಳನ್ನು ತುಂಬಿಸುವ ಮೂಲಕ ಅಲ್ಲಿದ್ದಂತಹ ಬರಗಾಲವನ್ನು ನಾವು ನಿವಾರಿಸುತ್ತೇವೆ ಎಂದು ಸರ್ಕಾರ ಒಂದು ಕಡೆ ಹೇಳುತ್ತದೆ. ಗ್ರಾಮೀಣಾಭಿವೃದ್ಧಿ ಇಲಾಖೆ ಕೆರೆಗಳಿಗಾಗಿ 2014-15ನೇ ಸಾಲಿನಲ್ಲಿ ಮೀಸಲಿಡಲಾಗಿದ್ದ ಸುಮಾರು 17 ಕೋಟಿ ರೂ.ಗಳಲ್ಲಿ ಕೇವಲ ಎಂಟು ಕೋಟಿ ರೂ.ಗಳನ್ನು ಮಾತ್ರ ಖರ್ಚು ಮಾಡಿದೆ. 2016-17ನೇ ಸಾಲಿನಲ್ಲಿ 10 ಕೋಟಿ ರೂ.ಗಳನ್ನು ನಿಗಧಿಪಡಿಸಿದ ಮೊತ್ತದಲ್ಲಿ 4.92 ಲಕ್ಷ ರೂ.ಗಳು ಮಾತ್ರ

ಖರ್ಚಾಗಿದೆ. ಕೆರೆ ಸಂಜೀವಿನಿ ಯೋಜನೆಯಡಿಯಲ್ಲಿ ಒಂದನೇ ಹಂತದಲ್ಲಿ 50 ಕೋಟಿ ರೂ.ಗಳನ್ನು ನಿಗಧಿಪಡಿಸಿದ್ದರೆ ಕೇವಲ 25 ಕೋಟಿ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ. ಇದೇ ರೀತಿಯಾಗಿ ಒಂದನೇ ಹಂತ, ಎರಡನೇ ಹಂತ, ಮೂರನೇ ಹಂತಗಳಲ್ಲಿ ಸರ್ಕಾರ ದುಡ್ಡನ್ನು ಬಿಡುಗಡೆ ಮಾಡಲೇ ಇಲ್ಲ.

ಅಧ್ಯಕ್ಷರು: ಸಚಿವರು ಏನು ಉತ್ತರ ಕೊಡುತ್ತಾರೆಂದು ನೋಡೋಣ. Next ಹೆಸರು ಕರೆಯೋಣ.

ಶ್ರೀ ಗುರುಪಾಟೀಲ್ ಶಿರವಾಳ: ಇಲ್ಲ ಐದು ನಿಮಿಷ ಕಾಲಾವಕಾಶ ಕೊಡಿ. ಅದೇ ರೀತಿಯಾಗಿ ನಗರಾಭಿವೃದ್ಧಿ ಇಲಾಖೆಯಲ್ಲಿ ವಿಶೇಷವಾಗಿ ಯಾದಗಿರಿ ಜಿಲ್ಲೆಯಲ್ಲಿ ಅಧಿಕಾರಿಗಳ ಕೊರತೆ ತುಂಬಾ ಇದೆ. ನಮ್ಮಲ್ಲಿ ಗ್ರಾಮಪಂಚಾಯಿತಿಗಳಲ್ಲಿ PDO ಗಳಿಲ್ಲ, ನಗರಸಭೆಯಲ್ಲಿ ಯಾವ ಅಧಿಕಾರಿಗಳೂ ಕೂಡ ಇಲ್ಲ. ಪುರಸಭೆಗಳಲ್ಲಿ ಅಧಿಕಾರಿಗಳಿಲ್ಲ, ಇಂಜಿನಿಯರ್ಸ್ ಇಲ್ಲ. ಅದಕ್ಕೆ ದಯಮಾಡಿ ತಮ್ಮ ಮೂಲಕ ನಾನು ಒತ್ತಾಯ ಮಾಡುವುದೇನೆಂದರೆ, ನಮ್ಮ ಜಿಲ್ಲೆಗೆ ಹೆಚ್ಚಿನ ಅಧಿಕಾರಿಗಳನ್ನು ಸರ್ಕಾರ ಕೊಡಬೇಕು. ಇಲ್ಲವೆಂದರೆ, ಇಲ್ಲಿಂದ ಘೋಷಣೆ ಆಗುವ ಯೋಜನೆಗಳು, ಬಿಡುಗಡೆ ಆಗುವ ಹಣವನ್ನು ಇಲ್ಲಿಯವರೆಗೆ ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಸರ್ಕಾರಕ್ಕೆ ನನ್ನ ವಿನಂತಿಯೇನೆಂದರೆ, ಈ ಜಿಲ್ಲೆಗೆ ಹೆಚ್ಚಿನ ಅಧಿಕಾರಿಗಳನ್ನು ಕೊಟ್ಟು ಘೋಷಣೆ ಆಗುವ ಯೋಜನೆಗಳಿಗೆ ಹಣ ಸಂಪೂರ್ಣವಾಗಿ ಖರ್ಚಾಗುವಂತಹ ರೀತಿಯಲ್ಲಿ ಕೆಲಸವಾಗಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ಅಧ್ಯಕ್ಷರು: ಅಶೋಕ್ ಖೇಣಿಯವರೆ ಮಾತನಾಡಿ.

ಶ್ರೀ ಅಶೋಕ್ ಖೇಣಿ: ಮಾನ್ಯ ಅಧ್ಯಕ್ಷರೆ, ನನಗೆ ಹತ್ತು ನಿಮಿಷಗಳ ಕಾಲಾವಕಾಶವನ್ನು ಕೊಟ್ಟಿದ್ದೀರಿ.

ಅಧ್ಯಕ್ಷರು: ಹತ್ತು ನಿಮಿಷ ಬೇಡ ಐದು ನಿಮಿಷ ಅಷ್ಟೆ.

ಶ್ರೀ ಅಶೋಕ್ ಖೇಣಿ: ನಾನು ಹತ್ತು ನಿಮಿಷದಲ್ಲಿ ಒಂದೊಂದು ನಿಮಿಷಕ್ಕೆ ಒಂದು ವಿಷಯದಂತೆ ಹತ್ತು ವಿಷಯಗಳನ್ನು ಮಾತನಾಡುತ್ತೇನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಅಧ್ಯಕ್ಷರು: ಐದು ನಿಮಿಷ ಮಾತನಾಡಿ.

ಡಾ: ಸಿ.ಎನ್.ಅಶ್ವತ್ಥ್ ನಾರಾಯಣ: ಮಾನ್ಯ ಅಧ್ಯಕ್ಷರೆ, ನನಗೊಂದು ಅವಕಾಶ ಕೊಡಿ.

ಅಧ್ಯಕ್ಷರು: ನೀವೆಲ್ಲರೂ ಕೂಡಿ 11 ತಾಸು ಮಾತನಾಡಿದ್ದೀರಿ. 16 ತಾಸು ಇದ್ದಿದ್ದರೆ ಒಂಭತ್ತು ತಾಸು ಆಗಿತ್ತು ಈಗ ಸವದಿಯವರು ಒಂದು ತಾಸು ಮಾತನಾಡಿದರು ಹತ್ತು ತಾಸಿನ ಮೇಲೆ ಆಯಿತ್ತು.

ಶ್ರೀ ವಿ.ಸುನೀಲ್‌ಕುಮಾರ್: ಡಾ: ಅಶ್ವಥ್ ನಾರಾಯಣ್‌ರವರು health ಬಗ್ಗೆ ಜಾಸ್ತಿ ಮಾತನಾಡುತ್ತಾರೆ.

ಅಧ್ಯಕ್ಷರು: ಆಯಿತು.

ಶ್ರೀ ಅಶೋಕ್ ಖೇಣಿ(ಬೀದರ್ ದಕ್ಷಿಣ): ಮಾನ್ಯ ಅಧ್ಯಕ್ಷರೆ, HKRDB is very important for Hyderabad-Karnataka region. After years of struggle ಈ ಬಿಲ್‌ಅನ್ನು ಏಕೆ ತಂದದ್ದು ಎಂದರೆ, to uplift the people from this backward region. But the purpose of this Bill, the purpose of funding is utter disaster failure. (ಮುಂದು.)

ವಿಸ-19-06-2017-(32)-4-30-ಎಸ್ಎಂಕೆ-ಹೆಚ್ಎಸ್

ಶ್ರೀ ಅಶೋಕ್ ಖೇಣಿ: ಮುಂದು.,

ಏಕೆಂದರೆ, 4 ವರ್ಷಗಳಾದರೂ ಇದುವರೆವಿಗೂ Master Plan ಮಾಡಿಲ್ಲ. ಡಾ:ಎಂ.ನಂಜುಂಡಪ್ಪನವರ ವರದಿ ಏನು ಹೇಳುತ್ತದೆ ಎಂದರೆ, Master Plan ಮಾಡಿ, according to the Master Plan you should do the development. 4 ವರ್ಷಗಳಾದರೂ ಇನ್ನೂ ಮಾಡಿಲ್ಲ. ಏನು ಮಾಡಿದ್ದಾರೆಂದರೆ, cleverly ಎಲ್ಲಾ funding ಅನ್ನು Micro and Macro ಆಗಿ divide ಮಾಡಿದ್ದಾರೆ. Approximately ರೂ.3,300 ಕೋಟಿ ಏನು ಬಂದಿದೆ, ಅದರಲ್ಲಿ Microನಲ್ಲಿ ರೂ.1600 ಕೋಟಿ ಆಗಿದೆ. Macroನಲ್ಲಿ ರೂ.1700 ಕೋಟಿ ಆಗಿದೆ. Macro

ಅಂದರೆ ಏನು? All the jobs are decided by RC or the Secretary in Gulbarga and the funding and procurement is done without the involvement of the MLAs. ನನ್ನ ವಿಚಾರ ಏನೆಂದರೆ, when you do the procurement from one office, potentially it could lead to corruption and nepotism. So, my question is, ಈಗ ನೋಡಿ for example, my Constituency has got Rs.25 Crores in the last 4 years and my neighbouring constituencies have got Rs.150 Crores. My constituency is one of the poorest constituencies in the whole Hyderabad-Karnataka region. The reason they give is, because I am supposed to be in Bidar (South) and in Bidar (Rural) constituency all the villages are there. My constituency has got 124 villages. None of the city benefits come to my constituency. ನಮ್ಮ constituency ನಲ್ಲಿ ಒಂದು ಸಿನಿಮಾ ಥಿಯೇಟರ್ ಇಲ್ಲ, ಈಗ ಒಂದು college ಆಗಿದೆ. It is a very poor area. But still we are not getting funding. So it is going backward and becoming more backward. ಈಗ farmers ಬಗ್ಗೆ ಬಹಳ ಜನ ಮಾತನಾಡಿದರು. ನಾನು ಯಾವಾಗಲೂ ನೋಡುತ್ತೇನೆ. ಎಲ್ಲಾ sympathize ಮಾಡುತ್ತಾರೆ, ಯಾರಾದರೂ farmer ಆತ್ಮಹತ್ಯೆ ಮಾಡಿಕೊಂಡಾಗ ಎಲ್ಲರೂ they are all in race. I never seen people running that fast to go to that farmer's house to give them some money and take photographs and release in the press. But there should

be a simple solution to solve this permanently. Nobody is looking for permanent solution. My suggestion to the Government is, farmer is a very proud man. ಅದಕ್ಕೆ ಅವನು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಯಾವ ಕಾರಣದಿಂದಲೂ ದುಡ್ಡು ಕೊಡುವುದಿಲ್ಲ ಎಂದು ಹೇಳುವುದಿಲ್ಲ. Because he is a very proud, very self working, self motivated person. My suggestion is, ಯಾರಿಗೆ 4 ಎಕರೆವರೆಗೆ ಭೂಮಿ ಇರುತ್ತದೆ, include him in NREGS scheme. When the husband and wife work in their own field, that is also labour. So, give him Rs.235 per day for 100 days each. ಅಂದರೆ, Rs.47,000 ಅವರಿಗೆ ಕೊಡಿ. ಅದರಿಂದ ಏನಾಗುತ್ತದೆ ಎಂದರೆ, he does not have to go to borrow from anywhere. He can do his daily requirement through that money. The second thing you do is, give a support price based on the cost of the input. ಈಗ ನೀವು PWDಯಲ್ಲಿ ಮಾಡಿದ್ದೀರಿ, ಏಕೆಂದರೆ ಅಲ್ಲಿ contractors ಇದ್ದಾರೆ, ಎಲ್ಲಾ ದೊಡ್ಡ ಶ್ರೀಮಂತರಿರುತ್ತಾರೆ. ದೊಡ್ಡ project ಬರುತ್ತದೆ. Every district has its own district guideline rate. ರೈತರಿಗೆ ಹಾಗೆ ಮಾಡಿ. ಒಂದು decide ಮಾಡಿ, this is the rate ಎಂದು ಮಾಡಿ. ನಾನು exactly 10 minutes ಮಾತನಾಡಿ ಮುಗಿಸುತ್ತೇನೆ. ತಾವು watch ನೋಡಿದರೆ ತಮ್ಮನ್ನು ನೋಡಿ I get disturbed. ಈಗ ಇದನ್ನು ಒಂದು book ರೀತಿ ಮಾಡಿ publish ಮಾಡಿ. This is the minimum rate ಎಂದು ಮಾಡಿ. ಏನಾಗುತ್ತದೆ ಎಂದರೆ, suppose there is drought, the guy suffers. He cannot produce anything. But if there is a good rain fall, he produces a lot and the price crashes.

Either way the person is suffering. He is walking on a thin edge of razor blade. So, ನನ್ನ suggestion ಏನೆಂದರೆ, Minimum procurement price ಮಾಡಿ. Let the Government buy at that price. ಈಗ ತೊಗರಿಗೆ ಮಾಡಿದ ಹಾಗೆ ಮಾಡಿ. ಅದರಲ್ಲಿ ಏನಾಗುತ್ತದೆ farmerಗೆ fertilizer subsidy ಬೇಕಾಗುವುದಿಲ್ಲ, seed ಬೇಕಾಗುವುದಿಲ್ಲ, ರೈತ ಸತ್ತರೆ 5 ಲಕ್ಷ ರೂಪಾಯಿ ಬೇಕಾಗಿಲ್ಲ, ಏನೂ ಆಗುವುದಿಲ್ಲ. Not even one farmer will commit suicide. They will have a prosperous, healthy life and his economy will get benefited. Because, now you are helping them where the real help is and you are giving the power to develop the farm in his hand. ಅದು ನನ್ನ request ಇದೆ. You should look into the cost. All the subsidies could be removed and that money could be given to the farmer for his labour. ನನಗೆ ಹಾಗೆ ಅನ್ನಿಸುತ್ತದೆ. But in education, we take award again as the last district in education. Last year we were in 27th place and this year we have come again to 30th place. ಏಕೆಂದರೆ, school buildings leak ಆಗುತ್ತವೆ, ನೀರು ಬಂದರೆ flood ಆಗುತ್ತದೆ, some of the buildings have collapsed and there are no teachers. I will tell you an example. I went to one school. It is Urdu school. On demand they have given a teacher. That teacher does not know one word of Urdu. He is a Kannada teacher. Students are telling, how can we learn Urdu with a

Kannada a teacher? This is the type of organization we have. For example, some of the students are walking 4 K.M. to go to school. Because, there are no busses. The roads are bad. So the busses cannot come. They refuse to ply the busses and there is very low funding. I made a study. There are 242 schools which require Rs.40.6 Crores for repairs and compound wall for the schools. This was in 2013-14. But the entire state budget for repairs of the schools was only Rs.36 Crores. So, we are missing where it is required. We are spending fund. When you educate a child, you are creating asset to the state and the nation. Now, another example is, new boys schools have been built in Kamthana, Sangolagi etc., ಅಲ್ಲಿ ನಾನು inspectionಗೆ ಹೋಗಿ ನೋಡಿದೆ ಅಲ್ಲಿ toilets ಇಲ್ಲ. ನಾನು ಅಲ್ಲಿನ officers ಅನ್ನು toilets ಏಕೆ ಇಲ್ಲವೆಂದು ಕೇಳಿದೆ. The answer to me was, ಸರ್, ಅದು ಹುಡುಗರ day school, ಹೊರಗಡೆ ಹೋಗಬಹುದು ಎಂದು ಹೇಳಿದರು. ಅದಕ್ಕೆ ನಾನು ಹೇಳಿದೆ, are you telling me that our children should go outside for toilet? ಹೌದು ಸರ್ ಎಂದರು. So, what is the use of having Swachcha Bharatha when we are telling our children that we will not give you toilets, you go outside in the public. I think, this is so much for Swachcha Bharatha. I think, the officers who plan these things actually they deserve

Bharatha Ratna award. Nothing less than a Bhatatha Ratna award. Another example is, there is a BEO. I called him and asked why so much poor education is there? He gave me plenty of reasons. I asked him, do you have children? He said, Yes. I asked, where do they go to school? He said, they go to private school. ಏಕೆ ಎಂದು ಕೇಳಿದರೆ public school ಚೆನ್ನಾಗಿ ಇಲ್ಲ, Government school ಚೆನ್ನಾಗಿ ಇಲ್ಲ ಎಂದು ಹೇಳುತ್ತಾನೆ. He is the in-charge of schools and he is sending his children to private school. Then I reminded him, there is a Supreme Court Order that these people cannot send their children to the private school and they should send them to public school. So, I would like the Government to take action against these officers who are sending their children to private school when they are supposed to send them to public school. Next point is about Anganawadis. Now what are we doing? All Anganawadis have become slums. There are no toilets, no water facility, roofs are leaking etc., So, we are taking our wonderful children, newly born children and exposing them to the slum and dirty conditions. They form dirty habits and they influence the area when they are growing up. When that habit happens, how are

they expecting them to clean up the habit when they grow up? So, my request is, let us spend money in Anganawadis to bring up a clean and healthy environment. There are 312 Anganawadis. I gave a study. Out of 312 Anganawadis 77 are in terrible conditions. But nothing is happening. Sir, my constituency may be one of the few constituencies. 3 lakh people are there, we don't have one fire station or fire engine. 3 lakh people have no protection from fire. Every day you will find people's shop is burning, house is burning. Recently a news came that 7 shops burnt and they got Rs.40 lakh loss. Last week DC's house got fire. This week my house got fire. There is no fire protection, no fire engines. So, I request that something should be done. One of the reasons for fire is, ಮಾನ್ಯ ಡಿ.ಕೆ.ಶಿವಕುಮಾರ್‌ರವರೇ, one of the hassles of fire is, when they are installing the poles, they install right in the earth without putting concrete or anything. The moment it get little wet, the poles bend. When they bend, trees hit them and there will be short circuit and the fire will be there. So, I think they should change the rules and make sure that the poles are put in concrete. ಇನ್ನು ಭಾಗ್ಯ scheme ಏನಾಗಿದೆ, I cannot speak about other

constituencies. In my constituency, it is a good scheme but it is not reaching the people. Lot of the men are selling that rice to drink. Their wives and children are not getting the food or nutrition which is required. My suggestion is, former Chief Minister of Tamil Nadu did that. Each villageನಲ್ಲಿ kitchen ಮಾಡಿ. Let the kitchen be open from 6.00 a.m to 6 p.m. ಬಿಸಿ ಅನ್ನ, ಬೇಳೆ ಅವರು ತಿನ್ನಲಿ. Rich people will not go there. The people who are really hungry can go there. If you do it you could get rid of this rice scheme, etc. So, I think you should do kitchen in every village like the President of US has done in depression area. Next, I would like to talk about Karanja scheme. We have been talking and talking. Nothing is happening. Still people are living like refugees. They have no future. My suggestion is, in future when you acquire land for irrigation, suppose you acquire 100 acres of land in upstream to store the water, you acquire 30 acres i.e., 1/3rd of the land in downstream. For the people who have lost land here, give them the land in the downstream. So, instead of dry land they are getting cultivated land. 1/3rd of the cultivated land is equal to one acre of dry land. So, in that way they are

again restored as farmers. This is just a suggestion I am giving. ನಾನು ಏನು ಹೇಳುತ್ತೇನೆಂದರೆ, dam ಕಟ್ಟುವ ಸಲುವಾಗಿ land acquisition ಮಾಡುತ್ತೀರಿ.

(ಮುಂದು..,)

19.06.2017 4.40 (33) KS:SP

(ಮುಂದು. . .)

ನಾನು ಹೇಳುತ್ತಿರುವುದು when you have acquired land. . ನೀವು ಯಾವಾಗ land acquisition ಮಾಡುತ್ತೀರಿ, ಅಂದರೆ dam ಕಟ್ಟುವುದಕ್ಕೆ land acquisition ಮಾಡುತ್ತೀರಿ, you have acquired thousands of acres of land on upstream. Upstream ಮಾಡಿದಾಗ ಯಾಕೆ ಜನ displace ಆಗುತ್ತಾರೆ? We have to put them on some rehabilitation project.

SRI. KAGODU THIMMAPPA: Which project?

SRI.ASHOK KHENI: Any project.

SRI.KAGODU THIMMAPPA: ಹಾಗೆ ಹೇಳಿರಿ.

HON'BLE SPEAKER: General ಆಗಿ ಹೇಳುತ್ತಿದ್ದಾರೆ. Please conclude.

SRI ASHOK KHENI: Any project, which is the Government rule, is. ಕರಂಜಾ ಡ್ಯಾಂನಲ್ಲಿ 40 ವರ್ಷಗಳಾದರೂ ಇನ್ನೂ ಅವರಿಗೆ ಏನು employment ಇಲ್ಲ, ಅವರಿಗೇನೂ rehabilitation ಇಲ್ಲ, ಮತ್ತೆ ಅವರಿಗೆ ಏನೂ ಪರಿಹಾರ ಸಿಗುತ್ತಿಲ್ಲ. So, they are looking like refugees. Some other

Ministers have come there. They are in a pitiable condition. It is not right. You should take it in good form and do it. Sir, Women Police Training Center ಬಗ್ಗೆ ಹೇಳುವುದಾದರೆ, I thought Karnataka should lead . . . because Karnataka has some other most dynamic ladies not only in military, army but also in education. So, I thought we should have Women Police Training Center, who is expertise in handling women problems. So, 99 acres of land was given to the Police Department nearly 4 years back and also I have got lot of Lambani women, who are very strong, very honest, very hard working, I thought they will make fantastic women police officers. ಅದರ ಬಗ್ಗೆ ಇನ್ನೂ ಏನೂ ಮಾಡಿಲ್ಲ. ನಾನು ಆಯವ್ಯಯದಲ್ಲಿ women police training center ಕೇಳಿದರೆ ನೀವು women toilets ಅನ್ನು ಕೊಟ್ಟಿದ್ದೀರಿ. There is a big difference between training center and toilets you know. So, please ಅದನ್ನು ನಾನು request ಮಾಡುತ್ತೇನೆ. They should give the estimation which they have held.

HON'BLE SPEAKER: Please conclude ಮಾಡಿ.

SRI ASHOK KHENI: ಇನ್ನೊಂದು ವಿಷಯವೆಂದರೆ, 100 KV Sub Station ಬಗ್ಗೆ ನಾನು ಕೇಳಿದ್ದೆನು and bought the land and give to the KPTCL. ಅವರು 3 ವರ್ಷಗಳ ಹಿಂದೆ 100 KV station ಬೇಕಾಗುವುದಿಲ್ಲ ಎಂದು ಹೇಳಿದರು. Because there is no planning, no foresight, they had

only fixed it on their head. Now they are telling they need it, because now we are getting brownouts, blackouts, because there is increase in the load, increase in the industry, and increase in the pump sets. So, ಅದನ್ನು immediately ಮಾಡಬೇಕು. But my question is, when these officers act shoot from their hip, why cannot somebody take action against them for the loss, the State and people are suffering. They will escape. ಇನ್ನೊಂದು ಕೊನೆಯ ವಿಚಾರವೆಂದರೆ ಕೆಲವು ಗ್ರಾಮ ಪಂಚಾಯಿತಿಗಳಿಗೆ ಸರಿಯಾಗಿ insurance ಬಂದಿಲ್ಲ, compensation ಬಂದಿಲ್ಲ. ಬರುತ್ತದೆ ಎಂದು ಹೇಳುತ್ತಾರೆ, ಆದರೆ ಬಂದಿಲ್ಲ. I don't know why only my constituency is been single out, not to get the compensation.

ಅಧ್ಯಕ್ಷರು:- ಸಾಕು, ಚರ್ಚೆಯನ್ನು ಇಲ್ಲಿಗೆ conclude ಮಾಡೋಣ.

ಡಾ: ಸಿ.ಎನ್.ಅಶ್ವತ್ಥ್‌ನಾರಾಯಣ್:- ಮಾನ್ಯ ಸಭಾಧ್ಯಕ್ಷರೆ, ನನಗೆ 5 ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು:- ಬೇಡ.

ಶ್ರೀ ಆನಂದ್ ವಿಶ್ವನಾಥ್ ಚಂದ್ರಶೇಖರ್ ಮಾಮನಿ:- ನಮ್ಮ ಕ್ಷೇತ್ರದ ಬಗ್ಗೆ ಮಾತನಾಡುವುದಕ್ಕಾಗಿ 5 ನಿಮಿಷ ಅವಕಾಶ ಕೊಡಿ.

ಶ್ರೀ ಬಿ.ಆರ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಾತನಾಡುವುದಕ್ಕೆ ನಮಗೆ ಅವಕಾಶ ಸಿಗುತ್ತದೆ ಎಂದು ಬೆಳಿಗ್ಗೆಯಿಂದ ಕಾಯುತ್ತಿದ್ದೇನೆ.

ಅಧ್ಯಕ್ಷರು:- ಮಾನ್ಯ ಬಿ.ಆರ್.ಪಾಟೀಲ್‌ರವರೆ, ತಾವು 5 ನಿಮಿಷದಲ್ಲಿ ಮುಗಿಸುತ್ತೀರಾ?

ಶ್ರೀ ಬಿ.ಆರ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಮ್ಮ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಿ.

ಅಧ್ಯಕ್ಷರು:- ಮಾನ್ಯ ಬಿ.ಆರ್.ಯಾವಗಲ್‌ರವರೆ, ತಾವು 2-3 ನಿಮಿಷದಲ್ಲಿ ಮುಗಿಸುತ್ತೀರಾ?

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

19-06-2017

ಶ್ರೀ ಬಿ.ಆರ್.ಯಾವಗಲ್:- ಮಾನ್ಯ ಅಧ್ಯಕ್ಷರೆ, ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಬಿ.ಆರ್.ಯಾವಗಲ್:- ತಾವು ಸಭಾಧ್ಯಕ್ಷರಾಗಿ ಈ ಸದನವನ್ನು ನಡೆಸಬೇಕು. ಮತ್ತೆ ತಮ್ಮ ಸಮಸ್ಯೆಯನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ. ನನಗೆ 5 ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು:- ಮಾನ್ಯ ಬಿ.ಆರ್.ಯಾವಗಲ್‌ರವರು 2-3 ನಿಮಿಷ ಮಾತನಾಡಲಿ. ನೀವು 5 ನಿಮಿಷ ಮಾತನಾಡಿ.

ಶ್ರೀ ಬಿ.ಆರ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಮ್ಮ ವಿಚಾರವನ್ನು ಸದನದಲ್ಲಿ ಮುಕ್ತವಾಗಿ ಮಾತನಾಡಬೇಕಾಗಿದೆ.

ಅಧ್ಯಕ್ಷರು:- ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಕ್ಕೆ ಟೈಂ ಬೇಕಲ್ಲವೇ? ನಾನು ಏನು ಮಾಡಲಿ ಹೇಳಿ? ಮಾನ್ಯ ಬಿ.ಆರ್.ಯಾವಗಲ್‌ರವರೆ, ತಾವು 2-3 ನಿಮಿಷದಲ್ಲಿ ಮಾತನಾಡಿ ಮುಗಿಸಿ. ಮಾನ್ಯ ಬಿ.ಆರ್.ಪಾಟೀಲ್‌ರವರೆ, ತಾವು ಆನಂತರ 5 ನಿಮಿಷದಲ್ಲಿ ಮಾತನಾಡಿ ಮುಗಿಸಿ. ಡಾ:ಸಿ.ಎನ್.ಅಶ್ವತ್ಥ್‌ನಾರಾಯಣ್‌ರವರೆ, ತಾವು Medical Bill ಬಂದಂಥ ಸಂದರ್ಭದಲ್ಲಿ ಮಾತನಾಡಿ. ತಾವು ಆ ವಿಷಯದ ಮೇಲೆ ಮಾತನಾಡಬೇಕಾಗಿದೆ ಅಲ್ಲವೇ? ಬಿಲ್ ಬರುತ್ತದೆ ಆಗ ತಾವು ಮಾತನಾಡಿ. ಮಾನ್ಯ ಬಿ.ಆರ್.ಯಾವಗಲ್‌ರವರೆ, ತಾವು ಎರಡು-ಮೂರು ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀ ಬಿ.ಆರ್.ಯಾವಗಲ್(ನರಗುಂದ):- ಮಾನ್ಯ ಅಧ್ಯಕ್ಷರೆ, ನಾನು ಈಗ ಬಹಳ ಮುಖ್ಯವಾಗಿ ಜಲಸಂಪನ್ಮೂಲ ಇಲಾಖೆಗೆ ಸಂಬಂಧಪಟ್ಟ ಮಹಾದಾಯಿ ವಿಚಾರದ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಅಲ್ಲಿ ಚಳುವಳಿ, ಹೋರಾಟ, ಧರಣಿ ಸತ್ಯಾಗ್ರಹ ನಡೆದು ಜುಲೈ 16ನೇ ತಾರೀಖಿಗೆ ಎರಡು ವರ್ಷವಾಗುತ್ತದೆ. ಆದರೆ, ದುರ್ದೈವದಿಂದ ಅದಕ್ಕೆ ಯಾವುದೇ ರೀತಿಯ ಪರಿಹಾರ ಸಿಗದಂತಹ ಪರಿಸ್ಥಿತಿ ಆಗಿದೆ. ಈ ವಿಚಾರದ ಬಗ್ಗೆ ಧರಣಿ ಕುಳಿತುಕೊಂಡವರು ಅಲ್ಲಿಯೇ ಇದ್ದಾರೆ. ಇವತ್ತು ಜನರು ಬಹಳ ವ್ಯಾಘ್ರವಾಗಿದ್ದಾರೆ. ಅದು ಹೊರತಾಗಿ ಇವತ್ತು ನಮ್ಮ ಮಲಪ್ರಭಾ ಕೊಳ್ಳ ಬಹಳ ಗಂಭೀರ ಪರಿಸ್ಥಿತಿಯಲ್ಲಿದೆ. ಮಹಾದಾಯಿ ಯೋಜನೆಯಿಂದ ನೀರು ಸಿಗದೆ ಇದ್ದರೆ ಸದರಿ ಯೋಜನೆ ಸಂಪೂರ್ಣವಾಗಿ ವಿಫಲವಾಗಿ ಹೋಗುತ್ತದೆ. ಕುಡಿಯುವ

ನೀರಿಗೂ ಸಹ ಬರ ಬರುವಂಥ ಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ನಾನು ಬಹಳ ವಿವರವಾಗಿ ಹೇಳಬಹುದು. ಅಂದರೆ ಯಾವಾಗ ಪ್ರಾರಂಭವಾಯಿತೆಂದು ಮತ್ತು ನಾವೆಲ್ಲ ಪಕ್ಷದವರು ಹೋಗಿ ಹೇಳಿ ಬಂದಿದ್ದೇವೆ. ಇದರ ಬಗ್ಗೆ ರಾಜ್ಯದಾದ್ಯಂತ ಚಳುವಳಿ ಕೂಡ ಆಯಿತು. ಮತ್ತು ಇದಕ್ಕೆ ಬೆಂಬಲ ಕೂಡ ಸಿಕ್ಕಿತು. ಈ ವಿಷಯದ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಗಳನ್ನು ಹಲವಾರು ಸಾರಿ ಭೇಟಿ ಆಗಿ ಬಂದಿದ್ದೇವೆ. ಈ ಎಲ್ಲಾ ಕೆಲಸಗಳನ್ನು ಮಾಡಲಾಗಿದೆ. ಆದರೆ, ದುರ್ದೈವದಿಂದ ಇಲ್ಲಿಯವರೆಗೆ ಈ ಬಗ್ಗೆ ಸಕಾರಾತ್ಮಕವಾದಂಥ ಯಾವುದೇ ನಿಲುವನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಜಲಸಂಪನ್ಮೂಲ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದನ್ನೇ ಅದರೆ, ಇದರ ಬಗ್ಗೆ ತಾವು ಬಹಳ ಗಂಭೀರವಾಗಿ ವಿಚಾರ ಮಾಡಬೇಕು. ಈ ವಿಚಾರದ ಬಗ್ಗೆ ಅಲ್ಲಿ ಚಳುವಳಿ, ಸತ್ಯಾಗ್ರಹ ನಡೆಯುತ್ತಿದ್ದು, ಈ ಬಗ್ಗೆ ತಾವು ಏನಾದರೊಂದು ಕ್ರಮವನ್ನು ಜರುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅದು ಆಗದೆ ಇದ್ದರೆ ಅಲ್ಲಿನ ಪರಿಸ್ಥಿತಿ ಬಹಳ ಗಂಭೀರವಾಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಜಲಸಂಪನ್ಮೂಲ ಸಚಿವರಾಗಿರುವ ಮಾನ್ಯ ಎಂ.ಬಿ.ಪಾಟೀಲ್‌ರವರ ಗಮನಕ್ಕೆ ತರುವುದೇನೆಂದರೆ, Tribunal ನ ಅವಧಿ ಮುಂದಿನ ತಿಂಗಳು ಮುಗಿಯುತ್ತದೆ ಎಂದು ಹೇಳುತ್ತಿದ್ದಾರೆ. Tribunal ಮುಂದೆ ಅನೇಕ ಸಾಕ್ಷ್ಯ ವಿಚಾರಗಳು ನಡೆದಿರಬಹುದು. ಆದರೆ, ಇಲ್ಲಿಯವರೆಗೆ ಯಾವುದೇ ಒಂದು judgment ಬಾರದೆ ಇರುವ ಪರಿಸ್ಥಿತಿ ಆಗಿದೆ. ಅಲ್ಲಿನ ಜನರು ಮತ್ತು ರೈತರ ಭಾವನೆ ಏನಿದೆ ಎರೆದರೆ, ಈಗಿರುವ Tribunal ಅವಧಿ ಮುಂದಿನ ತಿಂಗಳು ಮುಗಿಯುತ್ತಿದೆ ಎಂದು ಹೇಳುತ್ತಿರುವುದರಿಂದ, ಅಷ್ಟರೊಳಗೆ ಸಾಕ್ಷ್ಯಾದಾರಗಳು, argument ಅನ್ನು ಮಾಡಿ ಈ ಬಗ್ಗೆ ತೀರ್ಪು ಹೊರಗಡೆ ಬರುವುದಕ್ಕೆ ಏನಾದರೂ ಪ್ರಯತ್ನ ಮಾಡಬೇಕೆಂದು ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು:- Please conclude.

ಶ್ರೀ ಬಿ.ಆರ್.ಯಾವಗಲ್:- ಮಾನ್ಯ ಅಧ್ಯಕ್ಷರೆ, ಇನ್ನು ಎರಡು ವಿಷಯ ಮಾತ್ರ ಹೇಳುತ್ತೇನೆ.

ಅಧ್ಯಕ್ಷರು:- ಸಾಕು. ಈಗಾಗಲೇ ಸಾಕಷ್ಟು ಹೇಳಿದ್ದೀರಿ.

19-06-2017

ಶ್ರೀ ಬಿ.ಆರ್.ಯಾವಗಲ್:- ಮಾನ್ಯ ಅಧ್ಯಕ್ಷರೆ, ಬೇರೆಯವರಿಗೆ ತಾಸುಗಟ್ಟಲೆ ಅವಕಾಶ ಕೊಟ್ಟಿದ್ದೀರಿ. ನಾನು ಇನ್ನು ಎರಡು ವಿಚಾರ ಮಾತ್ರ ಹೇಳುತ್ತೇನೆ. ಸಾಲ ಮನ್ನಾ ಮಾಡುವುದರ ಬಗ್ಗೆ ನಾವು ಅಲಕ್ಷ್ಯ ಮಾಡುವುದು ಬೇಡ. ಇವತ್ತಿನ ದಿವಸ ರೈತರು ನಿಜಕ್ಕೂ ತೊಂದರೆಯಲ್ಲಿದ್ದಾರೆ. ಸರ್ಕಾರ ರೈತರಿಗೆ ಅನೇಕ ರೀತಿಯಲ್ಲಿ ಸಹಾಯ ಮಾಡಿರಬಹುದು. ಆದರೆ, ಆ ಪ್ರಶ್ನೆ ಬೇರೆ. ಇವತ್ತು ರೈತರ ಸಾಲದ ಹೊರೆ ಬಹಳಷ್ಟಾಗಿದೆ. ರೈತರು ಸಾಲದ ಬಾಧೆಯಿಂದ ನೇಣು ಹಾಕಿಕೊಳ್ಳುವುದು ಮತ್ತು ಆತ್ಮಹತ್ಯೆ ಮಾಡಿಕೊಳ್ಳುವ ವಿಚಾರವನ್ನು ನಾವು ಇಲ್ಲಿ ಹೇಳುತ್ತಿದ್ದೇವೆ. ಬಹಳಷ್ಟು ಮಟ್ಟಿಗೆ ಇದು ಸಹ ನೇರವಾಗಿ ಕಾರಣವಾಗಿದೆ. ಆ ಭಾವನೆಯಿಂದ ಅವರು ಹೊರಕ್ಕೆ ಬಂದು ಹೊಸ ಜೀವನ ಕೊಡತಕ್ಕಂಥದಕ್ಕೆ ಸರ್ಕಾರದ ಕಡೆಯಿಂದ ಒಂದು ಕೊಡುಗೆ ಆಗಬೇಕಾಗಿದೆ. ಮೂರ್ನಾಲ್ಕು ವರ್ಷಗಳಿಂದ ಬರಗಾಲ ಬಂದರೆ ಅವರು ಎಲ್ಲಿಂದ ಹಣ ತಂದು ಕಟ್ಟುತ್ತಾರೆ ಎಂಬ ಬಗ್ಗೆ ಕೂಡ ವಿಚಾರ ಮಾಡಬೇಕು. ಮಾನ್ಯ ಕಂದಾಯ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಇನಾಂ ಇದ್ದಂಥ ಜಮೀನುಗಳಿಗೆ Inam Abolition Act ಕೆಳಗಡೆ ಹಲವಾರು ಪ್ರಕ್ರಿಯೆಗಳು ಆಗಬೇಕಾಗಿತ್ತು. ಆದರೆ, ದುರ್ದೈವದಿಂದ ಈ ಕೆಲಸ ಆಗದೆ ಜಮೀನನ್ನು ಲಾವಣಿದಾರರಾಗಿ ಮಾಡುತ್ತಿದ್ದವರು ಮತ್ತು ಜಮೀನು ತಮಗೆ ಸೇರಿದ್ದು ಎಂದು ಬಿಟ್ಟಿರುವುದು ಸಹ ಇದೆ. ಇದು ತಮಗೆ ಗೊತ್ತಿದೆ. ಆ ಮಾಲೀಕರ ಹೆಸರು ಗೆರೆ ಮೇಲಿದ್ದರೆ ಇವರ ಹೆಸರು ಗೆರೆ ಕೆಳಗಡೆ ಇರುತ್ತದೆ. ಇದೆಲ್ಲಾ ತಮಗೆ ಸೇರಿದ್ದು ಎಂಬ ಭಾವನೆಯಿಂದ ರೈತರೆಲ್ಲರೂ ಹಾಗೆ ಬಿಟ್ಟಿದ್ದರು. ಆದರೆ, ವಾಸ್ತವಿಕವಾಗಿ ಅವರು ಮಾಲೀಕರು ಅಲ್ಲ. ಅವರು Form No.7ರಲ್ಲಿ Land Reforms Act ಕೆಳಗಡೆ ಅರ್ಜಿ ಹಾಕಿದವರಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ತಮ್ಮ ಹತ್ತಿರ ಬಂದು ತಮ್ಮ ಕಡೆಯಿಂದ ಬೈಯಿಸಿಕೊಂಡು ಬಿಟ್ಟೆವು. ಈ ಸಂದರ್ಭದಲ್ಲಿ ನಾನು ರೈತರ ಪರವಾಗಿ ಮನವಿ ಮಾಡುವುದೇನೆಂದರೆ, ಆದಷ್ಟು ಬೇಗ amendment ಅನ್ನು ತಂದು ಮತ್ತೊಂದು ಬಾರಿ Form No.7 ರಲ್ಲಿ ಅರ್ಜಿ ತೆಗೆದುಕೊಂಡು ಅವರು ಲಾವಣಿದಾರರು, ಮಾಲೀಕರು ಎಂದು ಒಂದು ಅವಕಾಶವನ್ನು ಕೊಟ್ಟು ಅವರು ಮುಂದುವರಿಸಿಕೊಂಡು ಹೋಗುವಂತೆ ಮಾಡಿ ಈಗ ಇರುವ ಕಾನೂನು ತೊಡಕನ್ನು ಬಿಡಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

19-06-2017

ಡಾ: ಎಸ್. ಶಿವರಾಜ್ ಪಾಟೀಲ್(ರಾಯಚೂರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಇಂಧನ ಸಚಿವರಲ್ಲಿ ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಮಾನ್ಯ ಇಂಧನ ಸಚಿವರಾಗಿರುವ ಶ್ರೀ ಡಿ.ಕೆ.ಶಿವಕುಮಾರ್‌ರವರ ಗಮನಕ್ಕೆ ತರುವುದೇನೆಂದರೆ, ನಮ್ಮ ಕ್ಷೇತ್ರದಲ್ಲಿರುವ RTPS and YTPS ವಿದ್ಯುತ್ ಉತ್ಪಾದನ ಕೇಂದ್ರಗಳಿಂದ ಕರ್ನಾಟಕ ರಾಜ್ಯದ 70% ಭಾಗಕ್ಕೆ ವಿದ್ಯುತ್ ಸರಬರಾಜು ಮಾಡುತ್ತಿದ್ದೇವೆ. ಈ ಯೋಜನೆಗಳಿಂದ ಭೂಮಿ ಕಳೆದುಕೊಂಡವರಿಗೆ ಇವತ್ತಿನವರೆಗೂ ನೌಕರಿ ಕೊಟ್ಟಿಲ್ಲ. ಇದಕ್ಕೋಸ್ಕರ ಸುಮಾರು 26 ವರ್ಷಗಳಿಂದ ಜನರು ತಿರುಗಾಡುತ್ತಿದ್ದಾರೆ. ನಾವು ಸುಮಾರು 100 ಸಾರಿ ಕೆ.ಪಿ.ಸಿ. ಕಛೇರಿಗೆ ಹೋಗಿದ್ದೇವೆ. ಮುಂದಿನ ದಿನಗಳಲ್ಲಿ ಅವರು ಮತ್ತೆ ಉಪವಾಸ ಸತ್ಯಾಗ್ರಹ ಕುಳಿತುಕೊಂಡು ಮತ್ತೆ strike ಮಾಡುವ ಹಂತದಲ್ಲಿದ್ದಾರೆ ಆದ್ದರಿಂದ, ದಯಮಾಡಿ ಅದರ ಬಗ್ಗೆ ಒಂದು clarification ಕೊಡಿ ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಉತ್ತರ ಕೊಡುವ ಸಂದರ್ಭದಲ್ಲಿ ಆ ವಿಷಯದ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ಮಾನ್ಯ ಬಿ.ಆರ್.ಪಾಟೀಲ್‌ರವರೆ, ತಾವು ಬೇಗ ಮಾತನಾಡಿ ಮುಗಿಸಿ.

ಶ್ರೀ ಬಿ.ಆರ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಾನು ಬೆಳಿಗ್ಗೆಯಿಂದ ಕಾಯುತ್ತಿದ್ದೇನೆ. ನಾನು ಮಾತನಾಡುವುದಕ್ಕೆ ತಾವು ನನಗೆ ಅಪ್ಪಣೆ ಕೊಟ್ಟಿಂಥ ಸಂದರ್ಭದಲ್ಲಿ ಮಾತ್ರ ನಾನು ಮಾತನಾಡಿದ್ದೇನೆ.

ಅಧ್ಯಕ್ಷರು:- ಎಲ್ಲಾ ಮಂತ್ರಿಗಳು reply ಕೊಡುವುದಕ್ಕೆ ಬಂದು ಕುಳಿತುಕೊಂಡಿದ್ದಾರೆ. ಎಲ್ಲಾ ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ರೆಡಿ ಇದ್ದಾರೆ. ದಯವಿಟ್ಟು 5 ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀ ಬಿ.ಆರ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ನನ್ನ ಅನುಭವದ ಕೆಲವು ವಿಚಾರಗಳನ್ನು ಸರ್ಕಾರದ ಜೊತೆಗೆ ಹಂಚಿಕೊಳ್ಳದಿದ್ದರೆ ಆಥವಾ ತಮ್ಮ ಗಮನಕ್ಕೆ ತರದೆ ಇದ್ದರೆ ನನ್ನ ಕರ್ತವ್ಯದಲ್ಲಿ ಚ್ಯುತಿ ಬಂದಂತೆ ಆಗುತ್ತದೆ.

ಅಧ್ಯಕ್ಷರು:- ನಿಮ್ಮ ವಿಚಾರಗಳನ್ನು ಒಂದು ಗಂಟೆ ಅವಧಿಯೊಳಗೆ ಹೇಳಬಹುದು ಅಥವಾ ಕಡಿಮೆ ಅವಧಿಯಲ್ಲಿಯೂ ಸಹ ಹೇಳಬಹುದು. ಬೇಗ ಮಾತನಾಡಿ ಮುಗಿಸಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

19-06-2017

ಶ್ರೀ ಬಿ.ಆರ್.ಪಾಟೀಲ್(ಆಳಂದ):- ಮಾನ್ಯ ಅಧ್ಯಕ್ಷರೆ, ಈಗಾಗಲೇ ಬಹಳಷ್ಟು ವಿಷಯಗಳು ಚರ್ಚೆ ಆಗಿವೆ. ಆದ್ದರಿಂದ, ಪುನ: ಆ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಕೆಲವು ವಿಷಯಗಳನ್ನು ಯಾರು ಬಿಟ್ಟಿದ್ದಾರೆಯೋ ಅಂಥ ವಿಷಯಗಳನ್ನು ಮಾತ್ರ ನಾನು ಪ್ರಸ್ತಾಪ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಯಾವ ವಿಷಯವನ್ನು ಬಿಟ್ಟಂತೆ ಕಾಣುವುದಿಲ್ಲ. ಎಲ್ಲಾ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆಯಿತು ತಾವು ಮಾತನಾಡಿ.

ಶ್ರೀ ಬಿ.ಆರ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ಬಜೆಟ್‌ನಲ್ಲಿ ಬಹಳ ದೊಡ್ಡ ಪ್ರಮಾಣದ ಅನುದಾನವನ್ನು ಅಂದರೆ, 1,86,561 ರೂಪಾಯಿ ಕೊಟ್ಟಿದ್ದಾರೆ. ಕೊಟ್ಟಂಥ ಹಣ ಪೂರ್ಣವಾಗಿ ಖರ್ಚು ಆಗಿಲ್ಲ ಎಂಬ ಸಾಮಾನ್ಯವಾದ ಆರೋಪಗಳು ಸಾಮಾನ್ಯವಾಗಿ ಎಲ್ಲ ಸದಸ್ಯರುಗಳಿಂದ ಪ್ರತಿಯೊಂದು ಸದನದಲ್ಲಿ ಬರುತ್ತದೆ. ಇದು ಸತ್ಯ ಕೂಡ ಆಗಿದೆ. ಇಷ್ಟೊಂದು ಹಣ ಕೊಟ್ಟರೂ ಕೂಡ ಏಕೆ ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ ಎಂಬ ಬಗ್ಗೆ ನಾವು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಹಣ ಇದೆ ಮತ್ತು ಹಣ ಕೊಡಬೇಕೆಂದು ಸರ್ಕಾರ ಉದ್ದೇಶ ಕೂಡ ಆಗಿದೆ. ಆದರೆ, ಕೊಟ್ಟಿರುವ ಹಣ ಖರ್ಚಾಗುತ್ತಿಲ್ಲ. (ಮುಂದು)

19-06-2017-4-50-34-MS.SP.

ಶ್ರೀ ಬಿ.ಆರ್.ಪಾಟೀಲ್:(ಮುಂದು)_

ಖರ್ಚು ಆಗದೆ ಇರುವುದಕ್ಕೆ ಕಾರಣಗಳನ್ನು ನಾನು ಹುಡುಕಿದ ಹಾಗೆ ಬಹುಶ: ಸರ್ಕಾರಗಳು ಏನೋ ಉತ್ಸಾಹದಿಂದ ಏನು ಜನರಿಗೆ ಸಹಾಯ ಮಾಡಬೇಕೆಂದು ಹೇಳಿ ಕಾರ್ಯಕ್ರಮಗಳನ್ನು ಘೋಷಣೆ ಮಾಡುತ್ತಾರೆ. ಇದಕ್ಕಾಗಿ ಹಣವನ್ನು ಇಡುತ್ತಾರೆ. ಆದರೆ ಹಣವನ್ನು ಖರ್ಚು ಮಾಡುವುದಕ್ಕೆ ಯೋಜನೆ ಮತ್ತು ಕಾರ್ಯಕ್ರಮಗಳು ಇರುವುದಿಲ್ಲ ಅದಕ್ಕೆ ಬೇಕಾದಂತಹ ಸಿಬ್ಬಂದಿಗಳು ಇರುವುದಿಲ್ಲ. ಹಾಗಾಗಿ ಅನೇಕ ಇಲಾಖೆಗಳಿಗೆ ಕೊಟ್ಟಂತಹ ಹಣ ಇವತ್ತು ಖರ್ಚಾಗದೆಯೆ ಉಳಿಯುತ್ತದೆ. ಕೊನೆಗೆ Re-appropriation Bill ತಂದು ನಾವು ಬೇರೆಬೇರೆ ಇಲಾಖೆಗಳಿಗೆ ತೆಗೆದುಕೊಂಡು

ಹೋಗಿ ಖರ್ಚು ಮಾಡುತ್ತೇವೆ. ಇದು ಅವತ್ತಿನಿಂದಲೂ ಇವತ್ತಿನವರೆಗೂ ನಡೆದುಕೊಂಡು ಬಂದಿರುವಂತಹ ಒಂದು ಪದ್ಧತಿಯಾಗಿದೆ. ಇದನ್ನು ನಾವು ಎಲ್ಲಿಯವರೆವಿಗೆ ಬದಲಾವಣೆ ಮಾಡುವುದಿಲ್ಲ. ಅಲ್ಲಿಯವರೆವಿಗೆ ಯಾವುದೇ ಸರ್ಕಾರದ ಯೋಜನೆಗಳು ಅನುಷ್ಠಾನವಾಗುವುದಕ್ಕೆ ಸಾಧ್ಯವಿಲ್ಲವೆನ್ನುವಂತಹ ಮಾತನ್ನು ಹೇಳುತ್ತೇನೆ. ಇವತ್ತು ನನಗೆ ಬಹಳ ಸಂತೋಷದ ಸಂಗತಿ ಎಂದರೆ, ಯಾವ ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರವನ್ನು ನಡೆಸುತ್ತಿದ್ದಾರೆ. ಎಲ್ಲರಿಗೂ ಕೂಡ ಸಮಪಾಲು ಕೊಡುವಂತಹ ಮಾತನ್ನು ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಬಸವಣ್ಣನವರ ಭಾವಚಿತ್ರವನ್ನು ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಹಾಕುವಂತಹ ಆದೇಶವನ್ನು ಮಾಡುವ ಮುಖಾಂತರ ನಿಜವಾಗಿ ಒಬ್ಬ ದೊಡ್ಡ ದಾರ್ಶನಿಕನ ಸಮತಾವಾದಿಯ ಸಂದೇಶವನ್ನು ಇಡೀ ನಾಡಿಗೆ ಸಾರುವಂತಹ ಕೆಲಸವನ್ನು ಮಾಡಿದ್ದಾರೆ. ಅದಕ್ಕಾಗಿ ನಾವೆಲ್ಲರೂ ಕೂಡ ಅಭಿನಂದಿಸಲೇಬೇಕೆಂದು ಹೇಳುತ್ತೇನೆ. ಅಕ್ಕಮಹಾದೇವಿಯ ಹೆಸರಿನಲ್ಲಿ ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡುವ ಮುಖಾಂತರ ಒಬ್ಬ ಮಹಿಳೆ ಪುರುಷ ಪ್ರಧಾನ ಸಮಾಜವನ್ನು ವಿರೋಧ ಮಾಡಿ ಬಂಡಾಯವೆದ್ದು ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡು ಕ್ರಾಂತಿ ಮಾಡಿದಂತಹ ಅಕ್ಕಮಹಾದೇವಿಯ ಹೆಸರನ್ನು ವಿಶ್ವವಿದ್ಯಾಲಯಕ್ಕೆ ಇಟ್ಟಿರುವುದಕ್ಕೆ ಸರ್ಕಾರಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಇವತ್ತು ಯಾವುದೇ ಕಾರ್ಯಗಳು ಅಭಿವೃದ್ಧಿ ಕೆಲಸಗಳು ನಿರಂತರವಾಗಿ ನಡೆಯಬೇಕು. ಅಭಿವೃದ್ಧಿ ಎಷ್ಟುವುದು ನಿಂತ ನೀರಲ್ಲ, ಅದು ಹರಿಯುವ ನೀರಾಗಿದೆ. ಯಾವುದೇ ಸರ್ಕಾರಗಳು ಬರಲಿ, ಎಷ್ಟೇ ದಿನಗಳು ಆಗಲಿ, ಎಷ್ಟೇ ವರ್ಷಗಳು ಆಗಲಿ, ಅಭಿವೃದ್ಧಿಯು ಮುಗಿಯುವುದಿಲ್ಲ. ಆದರೆ ಬಹಳ ಮುಖ್ಯವಾದಂತಹ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಏನು ಮಾಡುತ್ತಿದ್ದಾರೆಂದರೆ, ಎಲ್ಲಾ ಸಮುದಾಯಗಳಿಗೂ ಕೂಡ ಸಂತೃಪ್ತಿ ಮಾಡಿ ಎಲ್ಲಾ ಸಮುದಾಯಗಳ ಸ್ವಾಭಿಮಾನವನ್ನು ಎತ್ತಿ ಹಿಡಿದು ಅನೇಕ ಮಹಾಪುರುಷರ ಜಯಂತಿಯನ್ನು ಆಚರಣೆ ಮಾಡಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇಡೀ ಒಂದು ಸಮಾಜದಲ್ಲಿ ಸದ್ಭಾವನೆಯನ್ನು ಮೂಡಿಸಿ ಸಮಾಜವನ್ನು ಬೆಸುಗೆ ಮಾಡಿ ಒಂದು ಅಖಂಡತೆ, ಐಕ್ಯತೆ ಸಮಾಜದಲ್ಲಿ ಬರಬೇಕೆನ್ನುವಂತಹ ಉದ್ದೇಶದಿಂದ ಈ ಒಂದು ಕಾರ್ಯವನ್ನು ಮಾಡುತ್ತಿದ್ದಾರೆ. ಅದಕ್ಕೆ ನಾವೆಲ್ಲರೂ ಕೂಡ ಸಹಕಾರವನ್ನು ನೀಡಬೇಕಾಗುತ್ತದೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ
ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

SCP/TSP Bill ಅನ್ನು ಇವತ್ತು ತಂದರು, ಈ ಬಗ್ಗೆ ಅನೇಕ ಜನರು ಮಾತನಾಡಿದ್ದಾರೆ. ನನ್ನ ಅನುಭವದ ಪ್ರಕಾರ ಒಂದು ವೇಳೆ ಸರ್ಕಾರದಲ್ಲಿ SCP/TSP Bill ಬರದೇ ಹೋಗಿದ್ದರೆ ಇವತ್ತು ದಲಿತರ ಓಣಿಗಳಲ್ಲಿ ರಸ್ತೆಗಳು, ಚರಂಡಿಗಳು, ಸ್ವಚ್ಛತೆ ಆಗಿದೆ ಇದು ಆಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಈ ಕಾನೂನನ್ನು ತಂದು ಎಲ್ಲಾ ಇಲಾಖೆಗಳಿಂದ ಅದಕ್ಕೆ ಅನುದಾನವನ್ನು ಒದಗಿಸಿ SCP/TSPಯಿಂದ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಇದರಿಂದಾಗಿ ದೊಡ್ಡ ಬದಲಾವಣೆಯಾಗಿದೆ. ಇದು ಮುಂದುವರೆದು ಒಂದು ದಿವಸ ಸ್ವಚ್ಛ ಭಾರತದ ಕನಸು ನನಸಾಗುತ್ತದೆನ್ನುವಂತಹ ಮಾತನ್ನು ಹೇಳುತ್ತೇನೆ. ಮತ್ತೊಂದು ಮಹತ್ವದ ಕೆಲಸವೆಂದರೆ, ಈ ಸರ್ಕಾರದಲ್ಲಿ ಬಹುಶ: ನನಗನಿಸಿದ ಹಾಗೆ ಮಹದೇವಪ್ಪನವರು ಸದ್ದಾಗಲಿಲ್ಲ. ಇವತ್ತು ರಸ್ತೆಯ ಅಭಿವೃದ್ಧಿ ಕಾಮಗಾರಿಗಳು ಈ ಸರ್ಕಾರದಲ್ಲಿ ಆದಷ್ಟು ಹಿಂದೆ ಯಾವ ಸರ್ಕಾರದಲ್ಲಿಯೂ ಕೂಡ ಆಗಿರುವುದಿಲ್ಲ. ನಾನು ಅನೇಕ ಸಲ ಆಳುವ ಪಕ್ಷದಲ್ಲಿದ್ದೆ. ಬಹಳ ಮಹತ್ವವಾದಂತಹ ಕೆಲಸ ಸಂಪರ್ಕ ಕಲ್ಪಿಸುವಂತಹದ್ದು ಈ ಸರ್ಕಾರದಲ್ಲಿ ಆಗಿದೆ. ಸಂಪರ್ಕ ಇಲ್ಲದೇ ಹೋಗಿದ್ದರೆ ಯಾವುದೇ ಸರ್ಕಾರದ ಯೋಜನೆಗಳು ಸಾಮಾನ್ಯ ಜನತೆಗೆ ಮುಟ್ಟುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಇದಕ್ಕೆ ಕೇಂದ್ರ ಸರ್ಕಾರವು ಕೊಟ್ಟಿದೆ ರಾಜ್ಯ ಸರ್ಕಾರವೂ ಕೊಟ್ಟಿದೆ. ಈ ಬಗ್ಗೆ ರಾಜ್ಯ ಸರ್ಕಾರವು ಕೂಡ ಅಷ್ಟೇ ಮುತುವರ್ಜಿ ವಹಿಸಿ ಇವತ್ತು ದೊಡ್ಡ ಪ್ರಮಾಣದಲ್ಲಿ ರಸ್ತೆಗಳನ್ನು ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ನಮ್ಮ ಭಾಗದಲ್ಲಿ ಅದು ನನ್ನ ಕ್ಷೇತ್ರದಲ್ಲಿ ನಾವು ಹೇಳಿಕೊಳ್ಳುವುದಕ್ಕೆ ಹೆಮ್ಮೆ ಅನಿಸುತ್ತದೆ. ಎಲ್ಲಾ ಕಡೆಗಳಲ್ಲಿ ರಸ್ತೆ ಕಾಮಗಾರಿಗಳು ಆಗಿವೆ. ರಸ್ತೆಗಳ ಸಂಪರ್ಕ ಆಗಿವೆ. ಇವತ್ತು ರೈತರಿಗೆ, ವಿದ್ಯಾರ್ಥಿಗಳಿಗೆ, ಹಳ್ಳಿಗಾಡಿನ ಜನರಿಗೆ, ಅನೇಕರಿಗೆ ಇದರಿಂದ ಅನುಕೂಲವಾಗಿರುವುದರಿಂದ ಅಭಿವೃದ್ಧಿ ಸಾಮಾನ್ಯ ಜನರಿಗೆ ಮುಟ್ಟುವುದಕ್ಕೆ ಸಾಧ್ಯವಾಗುತ್ತಿದೆ. ಅಂತಹ ಒಂದು ಕೆಲಸವನ್ನು ಮಾಡಿರುವುದನ್ನು ನಾವು ಇಲ್ಲಿ ನೆನಪಿಸಬೇಕಾಗುತ್ತದೆ. ನೀರಿನ ವಿಷಯದ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಮಾತನಾಡುತ್ತಿದ್ದಾರೆ. ಆ ಸಮಸ್ಯೆ ಬಗೆಹರಿಯುತ್ತಿಲ್ಲ. ಇದು ಬಹುಶ: ನಮ್ಮ ರಾಜ್ಯಕ್ಕೆ ಮತ್ತು ದೇಶಕ್ಕೆ ಸೀಮಿತವಾಗಿರುವುದಲ್ಲ, ಇಡೀ ಭೂಮಂಡಲಕ್ಕೆ ಸಮಸ್ಯೆ ಉದ್ಭವವಾಗಿದೆ. ಆದರೆ ನಾವು ಇವತ್ತು ಎಚ್ಚರಗೊಳ್ಳದೆ ಹೋಗಿದ್ದರೆ ಈ ನೀರಿನ ಸಮಸ್ಯೆಯ ಬಗ್ಗೆ ಪರಿಹಾರವನ್ನು ಕಂಡುಹಿಡಿಯದೆ ಹೋಗಿದ್ದರೆ ಬಹುಶ: ಯಾವ

ಸರ್ಕಾರಗಳು ಕೂಡ ಮುಂದೆ ಜನರಿಗೆ ನೀರನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ನಾನು 70 ವರ್ಷದ ಹಿಂದಿನ ಸರಾಸರಿ ಎಲ್ಲಾ ಮಳೆ ಪ್ರಮಾಣದ ಲೆಕ್ಕಪತ್ರವನ್ನು ಹುಡುಕಿದ್ದೇನೆ. ಕಳೆದ 70 ವರ್ಷದಲ್ಲಿ ಏನು ಸರಾಸರಿ ಮಳೆ ಬೀಳುತ್ತಿದೆ ಅದು ಬೀಳುತ್ತದೆ ಆದರೆ ಕಾಲಮಾನ ಋತುವಿನಲ್ಲಿ ಬದಲಾವಣೆಯಾಗುತ್ತಿದೆ. Erratic rain ಆಗುತ್ತಿದೆ. ಜೂನ್‌ನಲ್ಲಿ ಪ್ರಾರಂಭವಾಗಬೇಕಾದಂತಹ ಮಳೆ ಮೇನಲ್ಲಿ ಬರುತ್ತದೆ. ಮುಂದೆ ಜುಲೈ, ಆಗಸ್ಟ್, ಸೆಪ್ಟೆಂಬರ್‌ವರೆಗೂ ಮಳೆ ಬರುವುದಿಲ್ಲ. ನಾವು ಮಳೆ ನೀರು ಬಿದ್ದಿರುವುದನ್ನು ಅದನ್ನು ಹಿಡಿದಿಡುವಂತಹ ಕೆಲಸವನ್ನು ಮಾಡಬೇಕಾಗಿದೆ. ಅದನ್ನು ಮಾಡದೇ ಹೋದರೆ ಯಾವ ಸರ್ಕಾರಗಳು ಬರಲಿ, ಯಾವುದೇ ಪಕ್ಷದ ಸರ್ಕಾರ ಬರಲಿ, ಕುಡಿಯುವ ನೀರಿನ ಸಮಸ್ಯೆ, ಕೃಷಿಯ ಸಮಸ್ಯೆ, ದನಕರುಗಳಿಗೆ, ಹೈನುಗಾರಿಕೆಗೆ ನೀರನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲ. ಆ ನಿಟ್ಟಿನಲ್ಲಿ ಇವತ್ತು ಈ ನೀರಿನ ಕೆಲಸ ಮಾಡಬೇಕು. ನಮ್ಮ ಹೋರಾಟಕ್ಕೆ ನಮ್ಮ ಮನವಿಗೆ ನಮ್ಮ ಒತ್ತಾಯಕ್ಕೆ ಮಣಿದು ಸರ್ಕಾರದ ಸಣ್ಣ ನೀರಾವರಿ ಸಚಿವರು ಇಲ್ಲಿಯೇ ಇದ್ದಾರೆ. ಇಡೀ ಕರ್ನಾಟಕದ 176 ತಾಲ್ಲೂಕುಗಳಲ್ಲಿ ಹೊಸ ಒಂದು ಮಾದರಿಯನ್ನು ಕೈಗೊಂಡಿದ್ದೀರಿ. ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅನುದಾನ ಒದಗಿಸಿದ್ದಾರೆ. ಅದಕ್ಕಾಗಿ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಾವು ಮುತುರ್ವಜಿ ವಹಿಸಿ ಮಹಾರಾಷ್ಟ್ರದಲ್ಲಿ ಸಿರ್‌ಪುರ್ ಮಾದರಿಯಲ್ಲಿ ನೀರು ನಿಲ್ಲಿಸುವಂತಹ ಕೆಲಸ ಮಾಡಿ ಯಶಸ್ವಿಯಾಗಿದ್ದಾರೆ. ಅಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸಿಕೊಂಡಿದ್ದಾರೆ. ತಾವು ಕೂಡ Pilot project ಅನ್ನು ನನ್ನ ಕ್ಷೇತ್ರದಲ್ಲಿ ತೆಗೆದುಕೊಂಡು ಈ ವರ್ಷ 20 ಕೋಟಿಗೆ ಯೋಜನೆಯನ್ನು ಸಿದ್ದ ಮಾಡಿಸುತ್ತಿದ್ದೀರಿ. ದಯಮಾಡಿ ಇದಕ್ಕೆ ವಿಶೇಷವಾದ ಕಾಳಜಿಯನ್ನು ವಹಿಸಿ ಇದು ಯಶಸ್ವಿಯಾಗಿ ಅನುಷ್ಠಾನ ಮಾಡುವುದಕ್ಕೆ ಪ್ರಯತ್ನಪಟ್ಟರೆ ಇಡೀ ರಾಜ್ಯಕ್ಕೆ ಒಂದು ಮಾದರಿ ಯೋಜನೆಯಾಗುತ್ತದೆ. ಮುಂದೆ ಬರುವಂತಹ ದಿನಗಳಲ್ಲಿ ಈ ಯೋಜನೆಯನ್ನು ಬೇರೆ ತಾಲ್ಲೂಕುಗಳಿಗೆ ವಿಸ್ತರಣೆ ಮಾಡಿದರೆ ನೀರಿನ ಸಮಸೆಯನ್ನು ಬಗೆಹರಿಸಿದಂತಾಗುತ್ತದೆ. ದಯಮಾಡಿ ಮಾನ್ಯ ಮಂತ್ರಿಗಳು ಮಾಡಬೇಕೆಂದು ಹೇಳುತ್ತೇನೆ. ಸರ್ಕಾರಕ್ಕೆ ಇನ್ನೊಂದು ಅಭಿನಂದನೆಯನ್ನು ಸಲ್ಲಿಸಬೇಕು. ಇವತ್ತು 225 ಕೋಟಿ ರೂಗಳನ್ನು ಖರ್ಚು ಮಾಡಿ ಅಮರ್ಜ್ಯಾ ಮಧ್ಯಮ ನೀರಾವರಿ ಯೋಜನೆಯನ್ನು ಕಟ್ಟಿದರೂ ಕೂಡ ಅಲ್ಲಿ ನೀರು ನಿಂತಿರಲಿಲ್ಲ. ಮಹಾರಾಷ್ಟ್ರ

ಹರಿವು ನಮಗೆ ಬರುತ್ತಿತ್ತು. ಅಲ್ಲಲ್ಲಿ ಅವರುಗಳು ಡ್ಯಾಂ ಅನ್ನು ಕಟ್ಟಿಕೊಂಡ ಮೇಲೆ ಆ ಹರಿವು ನಿಂತುಹೋದ ಮೇಲೆ ಮತ್ತೆ ನಾವು ಸರ್ಕಾರಕ್ಕೆ ಮೇಲಿಂದ ಮೇಲೆ ಒತ್ತಾಯ ಮಾಡಿ ವಿನಂತಿ ಮಾಡಿಕೊಂಡಮೇಲೆ ಇವತ್ತು ಭೀಮಾ ನದಿಯಿಂದ ಅಮರ್ಜ್ಯಾ ಡ್ಯಾಂಗೆ ನೀರು ತುಂಬಿಸುವಂತಹ ಕೆಲಸ ಘೋಷಣೆಯನ್ನು ಸರ್ಕಾರದವರು ಮಾಡಿದ್ದಾರೆ. ಅದನ್ನು ಅದಷ್ಟು ಬೇಗನೆ ಅನುಷ್ಠಾನ ಮಾಡಿದರೆ ಇವತ್ತು ಆ ಭಾಗದ ರೈತರಿಗೆ ಕಬ್ಬು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಕಾರ್ಖಾನೆಯು ನಡೆಯುತ್ತದೆ, ಅಲ್ಲಿಯ ಜನರಿಗೆ ಕುಡಿಯುವುದಕ್ಕೆ ನೀರು ಸಹ ಸಿಗುತ್ತದೆ. . ಕರ್ನಾಟಕದಲ್ಲಿ ವಿಶೇಷವಾಗಿ ಏಕೈಕ ಕೇಂದ್ರೀಯ ವಿಶ್ವವಿದ್ಯಾಲಯ ನನ್ನ ಕ್ಷೇತ್ರದಲ್ಲಿ ಬಂದು ಅಮರ್ಜ್ಯಾ ಡ್ಯಾಂನಿಂದ ಈಗಾಗಲೆ ಬಸವರಾಜ ಬೊಮ್ಮಾಯಿಯವರು 17 ಕೋಟಿ ರೂಪಾಯಿಗಳನ್ನು ಒದಗಿಸಿದ್ದರು. ಅಲ್ಲಿ ಪೈಪ್‌ಲೈನ್ ಹಾಕುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಆದರೆ ನೀರಿಲ್ಲದ್ದು ಕಾರಣ ತೊಂದರೆಯಾಗಿದೆ. ವಿಶ್ವವಿದ್ಯಾಲಯಕ್ಕೂ ನೀರು ಸಿಗುತ್ತಿಲ್ಲ. ಅಳಂದ ಪಟ್ಟಣಕ್ಕೂ ಸಿಗುತ್ತಿಲ್ಲ.

ಶ್ರೀ ಕೆ.ಶಿವಮೂರ್ತಿ: ಇವೆಲ್ಲವನ್ನು ಒಪ್ಪಿಕೊಂಡಿಯೇ ತಾವು ಕಾಂಗ್ರೆಸ್ಸಿಗೆ ಬಂದಿರುವುದು.

ಅಧ್ಯಕ್ಷರು: ಆಯಿತು ಬಿಡಿ.

ಶ್ರೀ ಬಿ.ಆರ್.ಪಾಟೀಲ್: ಈ ಸದನದಲ್ಲಿ ಕಾಂಗ್ರೆಸ್ ಮತ್ತು ಜನತಾದಳ ಎಂದು ಇಲ್ಲ.

ಶ್ರೀ ಕೆ.ಶಿವಮೂರ್ತಿ: ತಾವು ಕಾಂಗ್ರೆಸ್‌ಗೆ ಬಂದು ಇವೆಲ್ಲವನ್ನು ಒಪ್ಪಿದ್ದೀರಿ.

ಅಧ್ಯಕ್ಷರು: ಆಯಿತು ಬಿಡಿ.

ಶ್ರೀ ಬಿ.ಆರ್.ಪಾಟೀಲ್: ಇವತ್ತು ಭೀಮಾ ನದಿಯಿಂದ ಅಮರ್ಜ್ಯಾಕ್ಕೆ ನೀರು ತರುವಂತಹ ಕೆಲಸವನ್ನು ಆದಷ್ಟು ಬೇಗನೆ ಮಾಡಬಹುದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೃಷಿಯ ಬಗ್ಗೆ ಅನೇಕ ಚರ್ಚೆಗಳು ಆಗಿವೆ. ಮಾನ್ಯ ಕಂದಾಯ ಸಚಿವರು ಯಾವುದೇ ವಿಷಯ ಸಾಮಾನ್ಯ ಸದಸ್ಯರು ಹೇಳಿದರೂ ಕೂಡ ಬಹಳ ಗಂಭೀರವಾಗಿ ಗಮನಿಸಿ ಬರೆದುಕೊಳ್ಳುತ್ತಾರೆ ಇದು ನನಗೆ ಬಹಳ ಸಂತೋಷವೆನಿಸುತ್ತದೆ. ಮೊನ್ನೆ ಮಳೆ ವಿಪರೀತ ಬಂದು ಹೋಯಿತು. ನಮ್ಮ ಕ್ಷೇತ್ರದಲ್ಲಿ ಮಳೆ ಬಂದು ರಸ್ತೆಗಳು ಹಾಳಾದವು, ಹೊಲಗಳು, ಬೆಳೆಗಳು ಹಾಳಾಯಿತು, ಬಹಳ ದೊಡ್ಡ ಪ್ರಮಾಣದಲ್ಲಿ erratic rain ಬಂದು ತೊಂದರೆಯಾಯಿತು. ಅದೇ ತರಹ ಬೆಳೆ ಹಾನಿಯಾಗಿಯೂ ಕೂಡ ವಿಮೆ

ಸಿಗಬೇಕೆಂದು ಕಾನೂನು ಇದೆ. ನನ್ನ ಅನುಭವದಲ್ಲಿ ಏನಾಗುತ್ತದೆ ಎಂದರೆ ಅಧಿಕಾರಿಗಳು ಹೊಲಗಳಲ್ಲಿ ಓಡಾಡಿ ಎಷ್ಟು ಹಾಳಾಗಿದೆ ಯಾರ್ಯಾರದು ಎಷ್ಟೆಷ್ಟು ಎಕರೆ ಹಾಳಾಗಿದೆ ಎಂದು ಬರೆದುಕೊಳ್ಳುವುದು ಕಂದಾಯ ಇಲಾಖೆಯ ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳಿಂದ ಸಾಧ್ಯವಿಲ್ಲ. ತಾವು satellite surveyಯನ್ನು ಸಹ ಮಾಡಿ ನೋಡಿದ್ದೀರಿ. ಅಲ್ಲಿಯೂ ಕೂಡ ಇದನ್ನು exact ಆಗಿ ಯಾವ ಬೆಳೆ ಎಂದು ಗುರುತಿಸುವುದಕ್ಕೂ ಆಗುತ್ತಿಲ್ಲ. ಅಷ್ಟು ಸೂಕ್ಷ್ಮವಾಗಿ ಗಮನಿಸುವುದಕ್ಕೂ ಕೂಡ ಆಗುತ್ತಿಲ್ಲ. ತಾವು Insurance ಅನ್ನು ಕೊಡುತ್ತೀರಿ. ಇದು ನ್ಯಾಯ ಸಮ್ಮತವಾಗಿ ಸಿಗುತ್ತಿಲ್ಲ. ಏಕೆಂದರೆ, ಆ ರೈತರಿಗೆ ಏನು ಬೆಳೆ ಹಾಕಿದ್ದಾರೆ ಎಂಬ ದಾಖಲೆ ನಮ್ಮ ಸರ್ಕಾರಿ ಇಲಾಖೆಯಿಂದ ಆಗುತ್ತಿಲ್ಲ. ಕಂದಾಯ ಇಲಾಖೆ ಮತ್ತು ಕೃಷಿ ಇಲಾಖೆಯವರು random ಆಗಿ ಬರೆದುಕೊಡುತ್ತಾರೆ. ಆದರೆ ವಾಸ್ತವಿಕ ರೂಪದಲ್ಲಿ ಆ ಕೃಷಿಯಲ್ಲಿ ಏನೇನು ಬೆಳೆ ಹಾಕಿದ್ದಾರೆಂಬ ದಾಖಲೆ ಆಗುವುದಿಲ್ಲ.

(ಮುಂದು)

ವಿಸ. 19.06.2017/5.00/35/ಎನ್.ಸಿ.ಕೆ/ಎಸ್.ಬಿಸ್.ಡಿ

ಶ್ರೀ ಬಿ.ಆರ್.ಪಾಟೀಲ್ (ಮುಂಧು) ನಾನು ಒಂದು ಸಲಹೆಯನ್ನು ಮಾನ್ಯ ಕಂದಾಯ ಸಚಿವರಿಗೆ ಕೊಡಬಯಸುತ್ತೇನೆ. ತಾವು ಬೇಕಾದರೆ ಒಂದು Pass book ಮಾಡಿ. ರೈತ ತನ್ನ ಹೊಲದಲ್ಲಿ ತೊಗರಿಬೇಳೆ, ಉದ್ದು, ಹೆಸರು, ಎಳ್ಳು ಎಷ್ಟೆಷ್ಟು ಬಿತ್ತಿದ್ದಾನೆ ಎಂದು ಆ ಪುಸ್ತಕದಲ್ಲಿ ಅವನು ಬಂದು ಬರೆಸಲಿ. ಆಗ ಆತನಿಗೆ ಆ ಪ್ರಮಾಣದಲ್ಲಿ ಬೆಳೆ ಹಾನಿಯಾದಾಗ ಪರಿಹಾರ ಹಾಗು ವಿಮೆ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅದು ಮನುಷ್ಯನಿಂದ ಸಾಧ್ಯವಿಲ್ಲ. ಅದಕ್ಕೆ ದಯಮಾಡಿ ಹೊಸ ಪದ್ಧತಿ ಅಳವಡಿಸಿಕೊಂಡರೆ ಸರಿಯಾದಂಥ insurance ಬೆಳೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅನೇಕ ಕಡೆ ಆಸ್ಪತ್ರೆಗಳು, ಶಾಲೆಗಳು ಮಂಜೂರಾಗುತ್ತಿವೆ. ಆದರೆ ಯಾವುದೇ ಹಳ್ಳಿಗಳಲ್ಲಿ ಜಾಗವೇ ಸಿಗುತ್ತಿಲ್ಲ. ಸ್ಮಶಾನಕ್ಕೂ ಕೂಡ ಜಾಗ ಸಿಗುತ್ತಿಲ್ಲ. ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ತಾವು ದಯಮಾಡಿ Land Bank create ಮಾಡಿ. ತಾಲ್ಲೂಕು ಕೇಂದ್ರದಲ್ಲಿ ಅನೇಕ ಹೊಸ ಹೊಸ ಯೋಜನೆಗಳು ಬರುತ್ತವೆ. ಅನುಷ್ಠಾನ ಮಾಡಬೇಕಾಗುತ್ತದೆ. ಆಗ ಜಾಗವೇ ಇರುವುದಿಲ್ಲ. ಏಕೆ ಸರ್ಕಾರ

ಒಂದು Land Bank create ಮಾಡಬಹುದು. Land Bank create ಮಾಡದೇ ಹೋಗಿದ್ದರೆ.. ನಮ್ಮ ತಾಲ್ಲೂಕಿನಲ್ಲಿ ಅನೇಕ ಯೋಜನೆಗಳು ಬಂದಿವೆ. 10 ಕಿ.ಮೀ ಆಚೆ ಆಳಂದ ಎಂದು ಕರೆಯುತ್ತೇವೆ. ಆದರೆ 10 ಕಿ.ಮೀ. ಆಚೆ ನಾವು ಅಲ್ಲಿ ಎಲ್ಲ hostels ಕಟ್ಟಿದ್ದೇವೆ. Officeಗಳನ್ನು ಕಟ್ಟುತ್ತಿದ್ದೇವೆ. ದಯಮಾಡಿ ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಹಳ್ಳಿಗಳಲ್ಲಿ ಕೂಡ ಒಂದು Land Bank create ಮಾಡಿದರೆ ಅಭಿವೃದ್ಧಿಗೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಕೊನೆಯದಾಗಿ ನಿರುದ್ಯೋಗದ ಸಮಸ್ಯೆ ಬಗ್ಗೆ ಮಾತನಾಡುತ್ತಿದ್ದೇವೆ. ಈಗ ನಾವು ಒಂದು ಪ್ರಮುಖವಾಗಿ ಸದನದ ಗಮನಕ್ಕೆ ತರಬಯಸುತ್ತೇನೆ. ಈಗ ಹಳ್ಳಿಗಾಡಿನಲ್ಲಿ ಕಲಿತಂಥ ಮಕ್ಕಳಿಗೆ ಮತ್ತು ಪಟ್ಟಣ ಮತ್ತು ನಗರಪ್ರದೇಶಗಳಲ್ಲಿ ಕಲಿತಂಥ ಮಕ್ಕಳ ಶಿಕ್ಷಣದ ಗುಣಮಟ್ಟದಲ್ಲಿ ಬಹಳ ವ್ಯತ್ಯಾಸ ಇದೆ. ಸ್ಪರ್ಧೆಯಲ್ಲಿ ಯಾರು ನಗರ, ಪಟ್ಟಣಪ್ರದೇಶದಲ್ಲಿ ಓದಿರುತ್ತಾನೆ, ಅವನು ಸ್ಪರ್ಧೆಯಲ್ಲಿ ಪಾಸ್ ಆಗಿ ಮುಂದೆ ಹೋಗುತ್ತಾನೆ. ನಮ್ಮ ಹಳ್ಳಿಗಾಡಿನಲ್ಲಿ ಶಾಲೆ ಕಟ್ಟಡ ಇರುವುದಿಲ್ಲ. ಅಲ್ಲಿ Laboratory, Library ಇರುವುದಿಲ್ಲ. Mathematics, Science teacher ಇರುವುದಿಲ್ಲ. ಹಾಗಾಗಿ ಹಳ್ಳಿಗಾಡಿನ ಮಕ್ಕಳು ಪಟ್ಟಣ ಪ್ರದೇಶಗಳ ಮಕ್ಕಳ ಜೊತೆ ಸ್ಪರ್ಧೆ ಮಾಡಿ ಈ ವೃತ್ತಿನಿರತ ಶಿಕ್ಷಣದಲ್ಲಿ ಮತ್ತು ಸೇವೆಯಲ್ಲಿ ಅವರಿಗೆ ಅನ್ಯಾಯವಾಗುತ್ತಿದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ವಿನಂತಿಸುವುದೇನೆಂದರೆ ಈ ಒಂದು ತಾರತಮ್ಯ ಬಗೆಹರಿಯಬೇಕಾದರೆ ಒಬ್ಬ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಅಧ್ಯಯನ ಆಗಬೇಕು. ಎಷ್ಟು ಜನ ಇಲ್ಲಿಯವರೆಗೆ Engineers, Doctors ಆಗಿದ್ದಾರೆ. ಯಾರ್ಯಾರು ಸರ್ಕಾರಿ ನೌಕರಿಗೆ ಹೋಗಿದ್ದಾರೆ. ಅವರು ಪಟ್ಟಣ ಪ್ರದೇಶದಿಂದ ಬಂದವರು ಎಷ್ಟು ಜನರಿದ್ದಾರೆ, ಹಳ್ಳಿಗಾಡಿನಿಂದ ಬಂದವರು ಎಷ್ಟು ಜನರಿದ್ದಾರೆ?

ಅಧ್ಯಕ್ಷರು: ಪಾಟೀಲರೆ, ಅಸೆಂಬ್ಲಿಗೆ ಗೊತ್ತಿದೆ. ಹಿಂದೆ ಗ್ರಾಮೀಣ ಪ್ರದೇಶದವರಿಗೆ grace marks ಎಂದು ಹಾಕಿ ಅದು quash ಆಗಲಿಲ್ಲವೇ?

ಶ್ರೀ ಬಿ.ಆರ್.ಪಾಟೀಲ್: ಮಾನ್ಯ ಬಂಗಾರಪ್ಪನವರು..

ಅಧ್ಯಕ್ಷರು: ಬಂಗಾರಪ್ಪನವರು ಇದ್ದಾಗ ಕೊಟ್ಟರು, ಆದರೆ courtನಲ್ಲಿ quash ಆಗಲಿಲ್ಲವೇ?

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಬಿ.ಆರ್.ಪಾಟೀಲ್: ಬಂಗಾರಪ್ಪನವರು ಗ್ರಾಮೀಣ ಕೃಪಾಂಕ ಎಂದು ಕೊಟ್ಟಿದ್ದರು. ಆದರೆ ಈಗಲೂ ಸರ್ಕಾರದಲ್ಲಿ ಶೇಕಡ 10 ರಷ್ಟು ಮೀಸಲಾತಿಯನ್ನು ಗ್ರಾಮೀಣ ಭಾಗದಲ್ಲಿ ತಾವು ಕೊಟ್ಟಿದ್ದೀರಿ. ಆದರೆ ಪ್ರಮಾಣ ಸಾಲದು. ಅದನ್ನು 30-40 ರಷ್ಟು ಮಟ್ಟಕ್ಕೆ ನಾವು ತೆಗೆದುಕೊಂಡು ಹೋದರೆ ಗ್ರಾಮೀಣ ಮಕ್ಕಳಿಗೆ ನ್ಯಾಯ ಸಿಗುತ್ತದೆ. ಅಂಥ ಒಂದು ಕೆಲಸವನ್ನು ಸರ್ಕಾರ ಮಾಡಬಹುದೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಆಯಿತು. ಬೇಗ ಮುಗಿಸಿ.

ಡಾ: ಸಿ.ಎನ್.ಅಶ್ವತ್ಥನಾರಾಯಣ: ಮಾನ್ಯ ಅಧ್ಯಕ್ಷರೆ,. . .

ಅಧ್ಯಕ್ಷರು: ಮೆಡಿಕಲ್ ಬಗ್ಗೆ ಮಾತನಾಡುವಾಗ ಹೇಳಿ. ನೀವು ಅದೇ field ಬಗ್ಗೆ ಮಾತನಾಡುವುದು, ಆ field ಬಗ್ಗೆ ಚರ್ಚೆ ಮಾಡುವಾಗ ಹೇಳಿ. Demand ಆದರೂ ಅದೇ ವಿಷಯ, ಬಿಲ್ ಆದರೂ ಅದೇ ವಿಷಯ ಬರುತ್ತದೆ ಆಗ ಹೇಳಿ.

ಡಾ: ಸಿ.ಎನ್.ಅಶ್ವತ್ಥನಾರಾಯಣ: ಮಾನ್ಯ ಅಧ್ಯಕ್ಷರೆ, ಏಕೆಂದರೆ ಇಲಾಖಾವಾರು ಚರ್ಚೆ ಆಗಿಲ್ಲ. Medical Education ಬಗ್ಗೆ ಚರ್ಚೆ ಆಗಿಲ್ಲ.

ಶ್ರೀ ಬಿ.ಆರ್.ಪಾಟೀಲ್: ಈ ವರ್ಷ ಕರ್ನಾಟಕದಲ್ಲಿ 13 Engineering Colleges ಮುಚ್ಚಿ ಹೋದವು. ನಮಗೆ ಕೇವಲ Medical and Engineering colleges ಕಡೆ ನಮ್ಮ ಗಮನ ಇದೆ. ಅಂದರೆ ಅದರಲ್ಲಿ ಸಾಕಷ್ಟು ದುಡ್ಡು ಇದೆ. ಬಡವರಿಗಂತೂ ನ್ಯಾಯ ಸಿಗುವುದಿಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಕೌಶಲ್ಯ ತರಬೇತಿ ಕಡೆಗೆ ವಿಶೇಷವಾದ ಗಮನವನ್ನು ಹರಿಸಿ ಅದಕ್ಕೆ ಸಾಕಷ್ಟು ಹಣವನ್ನು ಇಟ್ಟಿದ್ದಾರೆ. ಈ ಕೌಶಲ್ಯ ತರಬೇತಿಗೆ ಹಣ ಇಟ್ಟು ಕೂಡ ಅದರ ಅನುಷ್ಠಾನ ಕಾರ್ಯ ಇನ್ನು ಶುರುವಾಗಿಲ್ಲ. ದಯಮಾಡಿ ಈ ಕೌಶಲ್ಯ ತರಬೇತಿಯಲ್ಲಿ ಪ್ರಧಾನಮಂತ್ರಿಗಳು ಅಷ್ಟೇ ಆಸಕ್ತಿ ವಹಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಅಷ್ಟೇ ಆಸಕ್ತಿ ವಹಿಸಿದ್ದಾರೆ. ಕೌಶಲ್ಯ ತರಬೇತಿಯಲ್ಲಿ ನಾವು ಹೆಚ್ಚಿನ ಆಸಕ್ತಿಯನ್ನು ವಹಿಸಿ ಈ ನಿರುದ್ಯೋಗ ಮಕ್ಕಳಿಗೆ ಉದ್ಯೋಗವನ್ನು ಕೊಡುವಂಥ ಕೆಲಸವನ್ನು ಮಾಡಿದರೆ ಅನುಕೂಲವಾಗುತ್ತದೆ. ಈಗ 371(J) ಕಲಂ ಬಗ್ಗೆ ಮಾನ್ಯ ಅಶೋಕ ಖೇಣಿಯವರು ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡಿದರು. 371(J) ಕಲಂ ಬಂದ ಮೇಲೆ ಏನು ನಮ್ಮ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

19-06-2017

ಹೈದರಾಬಾದ್-ಕರ್ನಾಟಕಕ್ಕೆ ಬಹಳ ದೊಡ್ಡ ಅನುಕೂಲವಾಯಿತು ಎಂದು ಅಂದುಕೊಂಡಿದ್ದೇವೆ. ಖಂಡಿತ ಒಂದು ದಿನ ಆಗುತ್ತದೆ. ಆದರೆ ಆ ಹೈದರಾಬಾದ್ ಕರ್ನಾಟಕದ ಹಿಂದುಳಿದ ಪ್ರದೇಶದ ಬಗ್ಗೆ ಒಂದು ಅಧ್ಯಯನದ ವರದಿಯೇ ಇಲ್ಲ. ನಂಜುಂಡಪ್ಪನವರು ಹಿಂದೆ ಮಾಡಿದಂಥ ವರದಿ ನಮ್ಮಲ್ಲಿದೆ. ಆದರೆ ನನಗೇನು ಅಂದರೆ ಒಂದು perspective plan 10 ವರ್ಷಗಳ ಕಾಲದ ಅವಧಿಯಲ್ಲಿ ಒಂದು plan ಮಾಡಿದ್ದೇವೆ. ಖೇಣಿಯವರ ಕ್ಷೇತ್ರದಲ್ಲಿರುವ ಸಮಸ್ಯೆ ನನ್ನ ಕ್ಷೇತ್ರದಲ್ಲಿ ಇರದೆ ಬೇರೆ ಸಮಸ್ಯೆ ಇರಬಹುದು. ಭೀಮಾನಾಯ್ಕರವರ ಕ್ಷೇತ್ರದಲ್ಲಿ ಬೇರೆ ರೀತಿ ಸಮಸ್ಯೆ ಇರಬಹುದು. ಹಾಗಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಸಮಸ್ಯೆಗಳು ಇರುತ್ತವೆ. ಮದ್ರಾಸ್‌ನಿಂದ ಬಳ್ಳಾರಿ ಬಂದಿತು, ಹೈದರಾಬಾದ್‌ನಿಂದ ನಾವು ಬಂದಿದ್ದೇವೆ. ಹೀಗಾಗಿ ಬೇರೆ ಬೇರೆ ತಾಲ್ಲೂಕಿನ ಸಮಸ್ಯೆಗಳು ಬೇರೆ ಬೇರೆ ರೀತಿ ಇವೆ. ಹಾಗಾಗಿ ಇವತ್ತು ಹೈದರಾಬಾದ್-ಕರ್ನಾಟಕ ಪರಿಪೂರ್ಣವಾಗಿ ಅಭಿವೃದ್ಧಿಯಾಗಬೇಕಾದರೆ 10 ವರ್ಷಗಳ ಕಾಲದ ಒಂದು perspective plan ಸಿದ್ಧತೆ ಮಾಡಿ ಆ ಪ್ರಕಾರ ಹಣವನ್ನು ಹಂಚಿಕೆ ಮಾಡಿಕೊಂಡು ಹೋದರೆ ಬಹಳ ಅನುಕೂಲವಾಗುತ್ತದೆ. ಕೊನೆಗೆ ಈಗ ಅಭಿವೃದ್ಧಿ ಪ್ರಾರಂಭವಾಗುವುದೇ ಶಿಕ್ಷಣದಿಂದ ಮೊದಲೇ ಹೈದರಾಬಾದ್ ಕರ್ನಾಟಕದಲ್ಲಿ ಅನಕ್ಷರತೆ ಜಾಸ್ತಿ ಇದೆ. ನಿರುದ್ಯೋಗ ಜಾಸ್ತಿ ಇದೆ, ಬಡತನ ಜಾಸ್ತಿ ಇದೆ. ಅದರಲ್ಲಿ ಪರಿಶಿಷ್ಟ ಜಾತಿ/ಪಂಗಡದ ಜನ, ಅಲ್ಪಸಂಖ್ಯಾತ ಜನ ಜಾಸ್ತಿ ಇದ್ದಾರೆ. ಆದರೆ ನಮ್ಮಲ್ಲಿ ಹೈಸ್ಕೂಲ್, Junior colleges ಇಲ್ಲ. ನಾನು ಸರ್ಕಾರಕ್ಕೆ ಏನು ವಿನಂತಿ ಮಾಡಿಕೊಳ್ಳುತ್ತೇನೆ. 371(J) ಕಲಂ ಅನುಷ್ಠಾನ ಆಗಬೇಕಾದರೆ ಅದು ಶಿಕ್ಷಣದಿಂದ ಪ್ರಾರಂಭವಾಗುತ್ತದೆ. ದಯಮಾಡಿ ಈ ಸರ್ಕಾರ 4 ವರ್ಷಗಳಿಂದ ಒಂದು High School, Junior college ತೆಗೆದಿಲ್ಲ. ದಯಮಾಡಿ ಈ ವರ್ಷ High School, Junior Colleges ನಮ್ಮ ಭಾಗದಲ್ಲಿ ತಾವು ಮಾಡದೇ ಹೋದರೆ ಬಹಳ ದೊಡ್ಡ ಅನ್ಯಾಯವಾಗುತ್ತದೆ. ಅದನ್ನು ಈ ಸರ್ಕಾರ ಮಾಡಬೇಕೆಂದು ಈ ಸಂದರ್ಭದಲ್ಲಿ ತಾವು ಮಾತನಾಡಿದ್ದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಅಶ್ವತ್ಥನಾರಾಯಣ ನೀವು ಮಾತನಾಡಲೇಬೇಕೇ?

19-06-2017

ಡಾ: ಸಿ.ಎನ್.ಅಶ್ವತ್ಥನಾರಾಯಣ: ಹೌದು, ಬೇಡಿಕೆಗಳ ಮೇಲೆ ಆರೋಗ್ಯ ಇಲಾಖೆಯ ಬಗ್ಗೆ ಮಾತನಾಡುವಾಗ ವಿಷಯ ಪ್ರಸ್ತಾಪ ಮಾಡಿದಂತೆ ಬಿಲ್‌ಗಳ ಬಗ್ಗೆ ಚರ್ಚೆ ಮಾಡುವಾಗ ಈ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ಎರಡು ನಿಮಿಷ ಮಾತನಾಡಿ. Only two minutes. No, No, ನೋಡಿ ಒಂದು ನಿಮಿಷ ಕೇಳಿ, 8 ದಿನಗಳ ಕಾಲ ಚರ್ಚೆ ಮಾಡಿದ್ದೇವೆ, ಸುಮಾರು 23 ಗಂಟೆಗಳ ಕಾಲ ಚರ್ಚೆ ಮಾಡಿದ್ದೇವೆ. ಸುಮಾರು 12 ಗಂಟೆಗಳ ಕಾಲ ವಿರೋಧ ಪಕ್ಷದವರಿಗೆ ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ. ಜೆಡಿ(ಎಸ್) ಪಕ್ಷದವರನ್ನು ಬಿಟ್ಟು ಎಲ್ಲರಿಗೂ ಕೊಟ್ಟಿದ್ದೇನೆ. ಇನ್ನು ಕೊಡಿ ಎಂದರೆ ಎಷ್ಟು ಕೊಡಲಿ ಆಗುವುದಿಲ್ಲ. ಡಾ: ಅಶ್ವತ್ಥನಾರಾಯಣ last ಮಾತನಾಡಿ. Please ನಿಮಗೆ ಮತ್ತೊಮ್ಮೆ ಅವಕಾಶ ಕೊಡುತ್ತೇನೆ.

ಡಾ: ಸಿ.ಎನ್.ಅಶ್ವತ್ಥನಾರಾಯಣ (ಮಲ್ಲೇಶ್ವರಂ): ಮಾನ್ಯ ಅಧ್ಯಕ್ಷರೆ, ಬೇಡಿಕೆಗಳ ಮೇಲೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕಾಗಿ ನಿಮಗೆ ಕೃತಜ್ಞತೆಗಳು. ಮುಖ್ಯವಾಗಿ ಆರೋಗ್ಯ ಇಲಾಖೆಯಲ್ಲಿ ಇವತ್ತೇನು 70,000 sanctioned posts ಇವೆ. 69,466 posts ಇದೆ. ಅದರಲ್ಲಿ ಈಗ ಭರ್ತಿಯಾಗಿರುವಂಥದ್ದು ಕೇವಲ 29,968 posts. ಈ ರೀತಿ ಪರಿಸ್ಥಿತಿಯಲ್ಲಿ ಆರೋಗ್ಯ ಇಲಾಖೆ Nurses ಆಗಲಿ, Doctors ಆಗಲಿ ಎಲ್ಲ ಸಿಬ್ಬಂದಿಗಳ ಕೊರತೆ ಇದೆ. ಈ ಒಂದು ವಾತಾವರಣದಲ್ಲಿ ಗುಣಮಟ್ಟದ ಆರೋಗ್ಯ ಕೊಡಲಿಕ್ಕೆ ಬಹಳ ಕಷ್ಟಕರವಾಗುತ್ತದೆ. ಈ ಒಂದು ಯೋಜನೆ ಈ ಒಂದು ಪರಿಸ್ಥಿತಿಯಲ್ಲಿ ಸರ್ಕಾರ ಹಲವಾರು ಯೋಜನೆಗಳನ್ನು ಘೋಷಣೆ ಮಾಡುತ್ತಲೇ ಇದ್ದಾರೆ. ಈಗ ಘೋಷಣೆ ಮಾಡಿರುವಂಥ ಕಾರ್ಯಕ್ರಮಗಳು Dialysis ಮತ್ತು ICU ಕಾರ್ಯಕ್ರಮ. ಈ Dialysis ಗೆ 176 ಕಡೆ ನಾವು Dialysis centre ಗಳನ್ನು ಪ್ರಾರಂಭ ಮಾಡುತ್ತೇವೆಂದು ಸರ್ಕಾರ ಗುರಿಯಿಟ್ಟುಕೊಂಡಿದ್ದಾರೆ. ಈಗ 56 ಕಡೆ ಪ್ರಾರಂಭ ಮಾಡಿದ್ದಾರೆ. ಈ 56 ಕೇಂದ್ರಗಳು ಸರ್ಕಾರದಿಂದ ನಡೆಯುತ್ತಿತ್ತು. ಇವತ್ತು ಅದನ್ನು ಸಹ outsource ಮಾಡಿದ್ದಾರೆ. ಈಗ Outsource ಮಾಡಿ 56 ಕಡೆ ನಡೆಯುತ್ತಿರುವ ಕೇಂದ್ರಗಳಲ್ಲಿ 17 ಕೇಂದ್ರಗಳನ್ನು ಒಂದು ಏಜೆನ್ಸಿಗೆ ಕೊಟ್ಟಿದ್ದಾರೆ. ಇನ್ನು ಉಳಿದ BRS ಎನ್ನುವ ಸಂಸ್ಥೆಗೆ ಕೊಟ್ಟಿದ್ದಾರೆ. 17 ಕೇಂದ್ರಗಳನ್ನು ಮಾತ್ರ ಒಂದು

ಏಜೆನ್ಸಿ ತೆಗೆದುಕೊಂಡು ನಡೆಸುತ್ತಿದ್ದಾರೆ. 56 ರಲ್ಲಿ ಉಳಿದ 39 ಕೇಂದ್ರಗಳನ್ನು ಇನ್ನು take over ಮಾಡಿಲ್ಲ. ಹಾಗಾಗಿ ಎಲ್ಲೋ ಒಂದು ಕಡೆ ಗೊಂದಲ ನಿರ್ಮಾಣ ಮಾಡಿದ್ದಾರೆ. ಈಗ ನಡೆಸುತ್ತಿರುವುದರಲ್ಲಿಯೂ ಅನುಮಾನ ನಿರ್ಮಾಣ ಮಾಡಿ outsource ಮಾಡಿದ್ದಾರೆ. Out source ನಿಂದ ಮಾಡಿರುವ ಏಜೆನ್ಸಿಯನ್ನು take over ಮಾಡಿಕೊಂಡಿಲ್ಲ. Out source ಮಾಡಿಕೊಂಡಿರುವ ಏಜೆನ್ಸಿಗೆ ನಾವು ಹೊರಗಡೆ ಯಾವುದೇ ಒಂದು Dialysis ಕೇಂದ್ರಕ್ಕೆ ಹೋದರೂ ಸಹ ಒಂದು ಸಂಸ್ಥೆಯನ್ನು ನಡೆಸುತ್ತಿರುವ ಕಡೆ 600-00 ರೂಪಾಯಿಗಳಿಗೆ dialysis ಆಗುತ್ತದೆ. ಆದರೆ ಇಲ್ಲಿ ಸರ್ಕಾರಿ building, ಸರ್ಕಾರಿ ನೀರು ಮತ್ತು equipments ಸರ್ಕಾರದ್ದು ಇದೆ. ಎಲ್ಲ ಸರ್ಕಾರದ್ದೇ ಇದ್ದರೂ 1,125-00 ರೂಪಾಯಿಗಳಿಗೆ service ಕೊಡುತ್ತಿದ್ದಾರೆ. ಹಾಗಾಗಿ ಇವತ್ತು ಇನ್ನು ಬೇರೆ ಬೇರೆ ಕಡೆಗಳಲ್ಲಿ ಇಂಥ Dialysis ಕೇಂದ್ರಗಳನ್ನು start ಮಾಡುವುದಕ್ಕೆ ಮೊದಲೇ ಈ ರೀತಿ ಪರಿಸ್ಥಿತಿ ನಿರ್ಮಾಣ ಮಾಡಿರುವುದು. ಎಲ್ಲ ತಾಲ್ಲೂಕುಗಳಲ್ಲಿರುವ ಆಸ್ಪತ್ರೆಗಳಲ್ಲಿ 2017ರ ಜನವರಿ ತಿಂಗಳಿನಿಂದಲೇ ICU ಗಳನ್ನು ಪ್ರಾರಂಭ ಮಾಡುತ್ತೇವೆಂದು ಸರ್ಕಾರ ಗುರಿ ಇಟ್ಟುಕೊಂಡಿದೆ. ಆದರೆ ಇದುವರೆಗೆ ಒಂದು ಕಡೆಯೂ ICU ಪ್ರಾರಂಭವಾಗಿಲ್ಲ. ಕೇವಲ equipments ಮಾತ್ರ ಕಳುಹಿಸಿದ್ದಾರೆ. Equipments ಮಾತ್ರ ಕಳುಹಿಸಿದರೆ ICU ಪ್ರಾರಂಭ ಮಾಡಲಿಕ್ಕೆ ಸಾಧ್ಯವೇ? ಈಗಿರುವಂಥದ್ದಕ್ಕೆ ಸಿಬ್ಬಂದಿ ಇಲ್ಲ. ಹೊಸ ಹೊಸ ಕಾರ್ಯಕ್ರಮಗಳು ನೋಡಿ. ಇಷ್ಟು advertisement ಕೊಟ್ಟಿದ್ದಾರೆ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಜಾಹಿರಾತು ನೀಡಿದ್ದ ಪತ್ರಿಕೆಯನ್ನು ಸದನದಲ್ಲಿ ಪ್ರದರ್ಶಿಸಿದರು)

ಡಾ: ಸಿ.ಎನ್.ಅಶ್ವತ್ಥನಾರಾಯಣ: ಇಷ್ಟು ಕಾರ್ಯಕ್ರಮಗಳು ಇವೆ. ಒಂದೇ ಒಂದು ಕಾರ್ಯಕ್ರಮ ಸಹ ಅನುಷ್ಠಾನವಾಗಿಲ್ಲ. ಇಲ್ಲಿ ಯಾವುದೇ ಒಂದು ICU ನಲ್ಲಿ ಆಗಲಿ ಅಥವಾ ಒಂದು ICU Health Care Unit ಎಂದು ಹೇಳಿದ್ದಾರೆ. Tele Medicine ಬಗ್ಗೆ ಮಾತನಾಡುತ್ತಿದ್ದಾರೆ. Tele Medicine ಸಹ ತುಮಕೂರಿನಲ್ಲಿ ಪ್ರಾರಂಭ ಮಾಡಿದ್ದಾರೆ. ಈ ತುಮಕೂರಿನಲ್ಲಿ ಪ್ರಾರಂಭ ಮಾಡಿರುವಂಥ Tele Medicine pilot project ಸಹ ಇವತ್ತು ಸರಿಯಾಗಿ ನಡೆಯುತ್ತಿಲ್ಲ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

(ಮುಂದು)

19.06.2017 /5.10 (36) / JB-SSD

ಡಾ: ಸಿ.ಎನ್.ಅಶ್ವತ್ಥನಾರಾಯಣ (ಮುಂದು . ..): ಇವತ್ತು ಅಲ್ಲಿಯೂ ಸಹ monitoring ಆಗುತ್ತಿಲ್ಲ. ಅಲ್ಲಿಯೂ ಸಹ pilot project fail ಆಗಿರುವಂತಹದ್ದು ಸಹ ಇದೆ. ಅದನ್ನು ಬಿಟ್ಟು Super Specialty Hospitals ಇವತ್ತು ಕೋಲಾರ, ರಾಮನಗರ ಹಾಗೂ ಇನ್ನಿತರೆ ಕಡೆಗಳಲ್ಲಿ Super Specialty Hospitals ಮಾಡಿದ್ದೇವೆಂದು ಕೊಟ್ಟಿದ್ದಾರೆ. ಆದರೆ, ಇನ್ನೂ ಅಲ್ಲಿ foundation ಸಹ ಹಾಕಿಲ್ಲ. ಅದರ ಜೊತೆಯಲ್ಲಿ Mobile Clinic ಬಗ್ಗೆ ಮಾತನಾಡಿದ್ದಾರೆ. Mobile clinicಗೆ ಸಹ allocated fund ಅನ್ನು utilize ಮಾಡಿಲ್ಲ. ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಹೇಳಿದ್ದಾರೆ. ಪ್ರತಿಯೊಂದು Hospital ನಲ್ಲಿ R.O. ಘಟಕ ಅಂದರೆ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಒಂದು ಕಡೆಯೂ ಸಹ ಕುಡಿಯುವ ನೀರಿನ ವ್ಯವಸ್ಥೆಯನ್ನು ಪ್ರಾರಂಭ ಮಾಡಿಲ್ಲ ಅಥವಾ ಎಲ್ಲಿಯೂ ಒಂದು ಕ್ಯಾಂಟೀನ್‌ಅನ್ನು ಸಹ ಪ್ರಾರಂಭ ಮಾಡಿಲ್ಲ. ಈ ರೀತಿ ಇವರು ಮನೆ ಮನೆಗೆ ತಜ್ಞರು ಎಂದು ಕಾರ್ಯಕ್ರಮ ಕೊಟ್ಟಿದ್ದಾರೆ. ಮನೆ ಮನೆಗೆ ತಜ್ಞರನ್ನು ಬಿಡಿ. ಈಗಿರುವಂತಹ Hospitals ನಲ್ಲಿ ಕೇವಲ 40% ಮಾತ್ರ Specialists ಇದ್ದಾರೆ. ಮಾನ್ಯ ಅಧ್ಯಕ್ಷರೆ, ಮನೆ ಮನೆಗೂ ತಜ್ಞರ ಪ್ರಶ್ನೆ ಎಲ್ಲಿ ಬರುತ್ತದೆ? ಈ ರೀತಿ ನಮ್ಮ ಬೆಂಗಳೂರು ನಗರದಲ್ಲಿ 140 ಆರೋಗ್ಯ ಕೇಂದ್ರಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ, ಇದುವರೆಗೂ ಮಾಡಿರುವುದು 30 ಆರೋಗ್ಯ ಕೇಂದ್ರಗಳನ್ನು ಮಾತ್ರ. ಈ ಗುರಿಗಳನ್ನು ಹೇಳುತ್ತಾ ಹೋಗುತ್ತಿದ್ದಾರೆ. ಮತ್ತೆ NABH ಇವತ್ತು ಗುಣಮಟ್ಟದ ಬಗ್ಗೆ ಸರ್ಕಾರ ಯಾವಾಗಲೂ ಮಾತನಾಡುತ್ತಿರುತ್ತದೆ. 12 Hospitals ನಲ್ಲಿ NABH accreditation ತೆಗೆದುಕೊಳ್ಳುತ್ತೇವೆಂದು ಮಾಡಿದ ಪ್ರಯತ್ನ 2012ನೇ ಸಾಲಿನಿಂದ ಆಗಿಲ್ಲ, ಈಗ 2017ನೇ ಸಾಲಿನಲ್ಲಿದ್ದೇವೆ, ಒಂದು hospital ಗೂ ಸಹ NABH accreditation ಇಲ್ಲ. ಈ ರೀತಿ ಸರ್ಕಾರ ಗುಣಮಟ್ಟ ಹೆಚ್ಚಿಸುವಂತಹ ಒಂದು ಪ್ರಯತ್ನದಲ್ಲಿಯೂ ಸಹ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಯಶಸ್ವಿಯಾಗಿಲ್ಲ. ಅದರ ಜೊತೆಯಲ್ಲಿ ಇವತ್ತು ಏನು ಒಂದು e-Hospital ಎಂದು computerization programme ತೆಗೆದುಕೊಂಡಿದ್ದಾರೆ, ಮೂರು Hospitals ನಲ್ಲಿ ತೆಗೆದುಕೊಂಡಿದ್ದರು. ಆ ಮೂರು Hospitals ನಲ್ಲಿ ಪ್ರಾರಂಭ ಮಾಡಿಯಾದರೂ ಇದುವರೆಗೂ ಮೂರು Hospitalsನಲ್ಲಿಯೂ computerization ಮಾಡಿಲ್ಲ. 2012 ನೇ ಸಾಲಿನಲ್ಲಿ ಪ್ರಾರಂಭ ಮಾಡಿರುವುದು. ಅದಕ್ಕೆ ಇಟ್ಟಿರುವಂತಹ ರೂ.32 ಕೋಟಿಗಳನ್ನು ಖರ್ಚು ಸಹ ಮಾಡಿಲ್ಲ. ಮತ್ತೆ 2016-17ನೇ ಸಾಲಿನಲ್ಲಿ National Health Mission ನಿಂದ ರೂ.2,200 ಕೋಟಿಗೆ allocation ಮಾಡಿದ್ದಾರೆ. ಅದರಲ್ಲಿ ಖರ್ಚು ಮಾಡಿರುವುದು ಎಷ್ಟು? 45% ಮಾತ್ರ ಖರ್ಚು ಮಾಡಿದ್ದಾರೆ. ಕೆಲವಾರು ಕಾರ್ಯಕ್ರಮಗಳಲ್ಲಿ ನೀವು ನೋಡಬೇಕು. ಕೆಲವಾರು ಕಾರ್ಯಕ್ರಮಗಳಲ್ಲಿ 0% utilization ಇದೆ. ಆರೋಗ್ಯದಲ್ಲಿ ಇವತ್ತು ಗುಣಮಟ್ಟ ಕಾಪಾಡಬೇಕು ಎನ್ನುವುದರಲ್ಲಿ ಈಗಾಗಲೇ National Health Mission ಪ್ರಾರಂಭ ಮಾಡಿ 8-10 ವರ್ಷಗಳಾಗಿದೆ. ಈ 8-10 ವರ್ಷಗಳಾದ ಮೇಲೆಯೂ ಸಹ ಪ್ರತಿ ವರ್ಷ ಈ ದುಡ್ಡು lapse ಆಗುತ್ತಿದೆ. Utilization below 50% ಇದೆ. ಈ ರೀತಿ performance ಇರಬೇಕಾದರೆ ಹೇಗೆ ಆರೋಗ್ಯ ಇಲಾಖೆ. ಅಂದರೆ ಪ್ರತಿಯೊಬ್ಬರಿಗೂ ಆರೋಗ್ಯ ಕೊಡುವಂತಹದ್ದು ಅದರ primary responsibility ಆಗಿರುತ್ತದೆ. ಮಾನ್ಯ ಅಧ್ಯಕ್ಷರೆ, Medical Education ದು ಹೇಳುವುದಾದರೆ ಇಲಾಖಾವಾರು ಚರ್ಚೆಯಾಗಬೇಕಿತ್ತು, ನಮ್ಮ ಹಿಂದಿನ ಸಭಾಧ್ಯಕ್ಷರು ಇಲಾಖಾವಾರು ಚರ್ಚೆಗೆ ಅವಕಾಶ ಕೊಡುತ್ತಿದ್ದರು, ಹಾಗಾಗಿ ನಾವು ಇಲಾಖಾವಾರು ಮಾತನಾಡುವುದಕ್ಕೆ ಸಾಧ್ಯವಾಗತ್ತಿತ್ತು. ಇವತ್ತು ಇಲಾಖೆಯಲ್ಲಿ .. .

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಅದಕ್ಕೆಲ್ಲಾ ಕಾರಣ ಮಾನ್ಯ ವಿರೋಧ ಪಕ್ಷದ ಸದಸ್ಯರೇ ಆಗಿದ್ದರು.

ಡಾ: ಸಿ.ಎನ್.ಅಶ್ವತ್ಥ ನಾರಾಯಣ: ಮಾನ್ಯ ಅಧ್ಯಕ್ಷರೆ, 2012ನೇ ಸಾಲಿನಲ್ಲಿ Marks card scam ಆಯಿತು. ಇದುವರೆಗೂ ನಾವು with prove, with marks card ಈ ಸಭೆಯ ಮುಂದೆ ಹಾಜರುಪಡಿಸಿದ್ದೆವು, ಮಾನ್ಯ ಮಂತ್ರಿಗಳ ಗಮನಕ್ಕೂ ಸಹ ತರಲಾಗಿತ್ತು. ಎಲ್ಲಾ

investigationನಲ್ಲಿ, ಎಲ್ಲಾ ರಿಪೋರ್ಟ್‌ನಲ್ಲಿಯೂ ಸಹಿತ ತಪ್ಪಾಗಿದೆ marks cardನಲ್ಲಿ tampering ಆಗಿದೆ ಎಂದು ಬಂತು. ಏಕೆಂದರೆ, ಡಿಸೆಂಬರ್-2012ರಲ್ಲಿ ಪರೀಕ್ಷೆ ಬರೆದು ಮೇ-2013ನೇ ಸಾಲಿನಲ್ಲಿ marks card ನಲ್ಲಿ ಏನೂ change ಆಗಿಲ್ಲ, ಬದಲಾವಣೆಯಾಗಿಲ್ಲವೆಂದು ಘೋಷಣೆಯಾಯಿತು. ಮತ್ತೆ ನವೆಂಬರ್-2013ನೇ ಸಾಲಿನಲ್ಲಿ Marks card generate ಆಯಿತು, Vice Chancellor ನವರ signature ಇಲ್ಲದೇ ಯಾವ ಒಂದು marks card generate ಆಗಿ personal ಆಗಿ ತೆಗೆದುಕೊಂಡು ಹೋಗಿ ಕೊಟ್ಟು ಈ scam ಅನ್ನು ನೀಟ್ ಆಗಿ ಇಟ್ಟು with prove ಕೊಟ್ಟಿದ್ದರೂ ಸಹಿತ ಕೆಲವು ಮೂರೇ ಮೂರು sample ಕೊಟ್ಟು, ಆ ಮೂರು sample ನಲ್ಲಿ Marks card ಹೇಗೆ tamper ಆಗಿದೆ ಎಂದು ಕೊಡಲಾಗಿತ್ತು. ಆದರೆ, ಇವತ್ತು B-report generate ಆಗಿದೆ. ಇನ್ನು ಒಂದು answer sheet tampering ಅನ್ನು 2014ನೇ ಸಾಲಿನಲ್ಲಿ ಸರ್ಕಾರದ ಗಮನಕ್ಕೆ ತರಲಾಯಿತು. Answer paper tampering ಆಗಿರುವುದಕ್ಕೆ ಇನ್ನೂ ಸಹ ಚಾರ್ಜ್‌ಶೀಟ್ ಆಗಿಲ್ಲ. 2014ರಲ್ಲಿ ಇದನ್ನು ಗಮನಕ್ಕೆ ತಂದಿದ್ದರೂ ಸಹ 2017ನೇ ಇಸವಿಯಾದರೂ ಸಹ ಚಾರ್ಜ್‌ಶೀಟ್ ಆಗಿಲ್ಲ.

ಅಧ್ಯಕ್ಷರು: o.k., please conclude ಮಾಡಿ.

ಡಾ: ಸಿ.ಎನ್.ಅಶ್ವತ್ಥನಾರಾಯಣ: ಮತ್ತೆ PGET, Vijaynagar Institute of Medical Sciences ನಲ್ಲಿ 2011ರಲ್ಲಿ PGET ನಲ್ಲಿ scam ಆಯಿತು, Copying ಆಯಿತು, ಎಲ್ಲರೂ red-handed ಆಗಿ ಸಿಕ್ಕಿಹಾಕಿಕೊಂಡರು. ಇವತ್ತಿನವರೆಗೂ ಯಾರ ಮೇಲೂ ಕ್ರಮ ಜರುಗಿಸಿಲ್ಲ. ಯಾರ ಮೇಲೆಯೂ action ತೆಗೆದುಕೊಂಡಿಲ್ಲ. ಮತ್ತೆ ರಾಜೀವ್ ಗಾಂಧಿ ಯೂನಿವರ್ಸಿಟಿ ಕ್ಯಾಂಪಸ್ ಬಗ್ಗೆ ಹೇಳುವುದಾದರೆ Rajiv Gandhi University ಗೆ land ಅನ್ನೇ ಹಸ್ತಾಂತರ ಮಾಡದೇ ಮತ್ತು Administrative sanction ಆಗದೇ ಹೇಗೆ ಟೆಂಡರ್ ಮಾಡಿದ್ದರು? ಇವತ್ತು ರಾಜೀವ್ ಗಾಂಧಿ ಯೂನಿವರ್ಸಿಟಿಯವರು tender call ಮಾಡಬೇಕೇ ಅಥವಾ ಸರ್ಕಾರ tender call ಮಾಡಬೇಕೇ? ಅವು ಸ್ವಾಯತ್ತತೆ

ಇರುವಂತಹ ಸಂಸ್ಥೆಗಳಾಗಿವೆ. Land ಅನ್ನೂ transfer ಮಾಡದೇ ಈ ರೀತಿ ಸರ್ಕಾರದಲ್ಲಿ ಏನು ಒಂದು ಹಠ ಹಿಡಿದು ಇಲಾಖೆಯಲ್ಲಿ ಈ ರೀತಿಯ ಸುಧಾರಣಾ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಎಷ್ಟರಮಟ್ಟಿಗೆ ಸರಿ ಇದೆ ಎಂದು ಹೇಳಿ.

ಅಧ್ಯಕ್ಷರು: O.k. Please conclude ಮಾಡಿ.

ಡಾ: ಸಿ.ಎನ್.ಅಶ್ವತ್ಥನಾರಾಯಣ: ಮತ್ತೆ ಬೆಂಗಳೂರಿನ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಸ್ಯಾಂಕಿ ಕೆರೆ ಬಗ್ಗೆ ಸಹ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಸ್ಯಾಂಕಿ ಕೆರೆದೂ ಸಹ . . .

ಅಧ್ಯಕ್ಷರು: ಈಗ 2017-18ನೇ ಸಾಲಿನ ಈ ಕೆಳಕಂಡ 28 ಬೇಡಿಕೆಗಳ ಮೇಲೆ ಚರ್ಚೆ ಮುಕ್ತಾಯ ಮಾಡೋಣ. ಈಗ ಇದರಲ್ಲಿ ಒಟ್ಟು 31 ಜನ ಮಾತನಾಡಿದ್ದಾರೆ. 8 ದಿನಗಳ ಕಾಲ ಚರ್ಚೆಯಾಗಿದೆ. ಆಮೇಲೆ 22 ಗಂಟೆಗಳಿಗಿಂತಲೂ ಹೆಚ್ಚು ಚರ್ಚೆಯಾಗಿದೆ. ಯಾವ್ಯಾವ ಪಕ್ಷದವರು ಎಂದು ಹೇಳುವುದು ಬೇಡ. ಒಟ್ಟಾರೆ ಚರ್ಚೆಯಾಗಿದೆ. ಚರ್ಚೆ ಮುಕ್ತಾಯ ಮಾಡೋಣ.

ಡಾ: ಸಿ.ಎನ್.ಅಶ್ವತ್ಥನಾರಾಯಣ: ಸರ್, ಬೆಂಗಳೂರು ಬಗ್ಗೆ ಮಾತನಾಡುವುದಕ್ಕೆ ಅವಕಾಶವೇ ಸಿಗಲಿಲ್ಲ.

ಅಧ್ಯಕ್ಷರು: ಸರ್ಕಾರದ ಉತ್ತರವನ್ನು ಮಾನ್ಯ ಕಂದಾಯ ಸಚಿವರು ಕೊಡುತ್ತಾರೆ. ಕಂದಾಯ ಸಚಿವರು ಉತ್ತರ ಕೊಡುತ್ತಾರೆ. ಒಂದೇ ನಿಮಿಷ ಮಂತ್ರಿಗಳೇ, ಒಂದೆರಡು ಬಿಲ್‌ಗಳನ್ನು introduce ಮಾಡಿಬಿಡುತ್ತೇನೆ. ಈಗ ವಿಧೇಯಕಗಳನ್ನು ಮಂಡಿಸುವುದು.

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

<u>ಶಾಸನ ರಚನೆ</u>

<u>ವಿಧೇಯಕಗಳನ್ನು ಮಂಡಿಸುವುದು</u>

ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ) ವಿಧೇಯಕ, 2017

<u>ಮಂಡನೆಗೆ ಅನುಮತಿ ಕೋರಿಕೆ</u>

19-06-2017

ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)(ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ) :- ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆ ಮಂಡಿಸಲಾಯಿತು.

ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

2017ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕೃತವಾಗಿದೆ.

ಮಾನ್ಯ ಮಂತ್ರಿಗಳು ಈಗ ದಯವಿಟ್ಟು ವಿಧೇಯಕವನ್ನು ಮಂಡಿಸಬೇಕು

ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)(ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ) :- ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತೇನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

19-06-2017

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ-2)

ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕ, 2017

<u>ಮಂಡನೆಗೆ ಅನುಮತಿ ಕೋರಿಕೆ</u>

ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ರೋರಿಕ್ ಮತ್ತು ದೇವಿಕಾ ರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆ ಮಂಡಿಸಲಾಯಿತು.

ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

2017ನೇ ಸಾಲಿನ ರೋರಿಕ್ ಮತ್ತು ದೇವಿಕಾ ರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕೃತವಾಗಿದೆ.

ಮಾನ್ಯ ಮಂತ್ರಿಗಳು ಈಗ ದಯವಿಟ್ಟು ವಿಧೇಯಕವನ್ನು ಮಂಡಿಸಬೇಕು

ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ರೋರಿಕ್ ಮತ್ತು ದೇವಿಕಾ ರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ-3)

ಅಧ್ಯಕ್ಷರು: ಈಗ ಕಂದಾಯ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆಗೆ ಸರ್ಕಾರದಿಂದ ಉತ್ತರ.

ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಮೊದಲನೇ ಬಾರಿಗೆ ಕಂದಾಯ ಇಲಾಖೆಯ ಬೇಡಿಕೆಯ ಮೇಲೆ ನಡೆದಂತಹ ಚರ್ಚೆಗೆ ಉತ್ತರ ನೀಡುವ ಅವಕಾಶ ನನಗೆ ಸಿಕ್ಕಿದೆ. ಅದಕ್ಕೆ ತಮಗೆ ಮತ್ತು ಮಾನ್ಯ ಸದಸ್ಯರೆಲ್ಲರಿಗೂ ಕೂಡ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಕಂದಾಯ ಇಲಾಖೆ ಒಂದು ಸರ್ಕಾರದ ಮಾತೃ ಇಲಾಖೆ. ಈ ಇಲಾಖೆಯ ಆಡಳಿತ ಶುದ್ಧವಾಗಿದ್ದರೆ ಇನ್ನುಳಿದ ಎಲ್ಲಾ ಇಲಾಖೆಯ ಮೇಲೂ ಕೂಡ ಅದು ಪರಿಣಾಮವನ್ನು ಬೀರುತ್ತದೆ.

(ಈ ಹಂತದಲ್ಲಿ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಮುಖ್ಯಮಂತ್ರಿಗಳು ಈ ಅಧಿವೇಶನದಲ್ಲಿ ಬಜೆಟ್‌ಅನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಆಗ ನಾನು ಮಾನ್ಯ ಅಧ್ಯಕ್ಷರ ಸ್ಥಾನದಲ್ಲಿ ಕುಳಿತಿದ್ದೆ. ನನ್ನ ಸರ್ಕಾರ ಸ್ವಚ್ಛ ಮತ್ತು ಪಾರದರ್ಶಕ ಆಡಳಿತವನ್ನು ನೀಡುತ್ತದೆ ಎಂದು ಹೇಳುತ್ತೇನೆ, ಆ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ. ಅದಕ್ಕೆ ನಾನು ನನಗೆ ಸಿಕ್ಕಂತಹ ಅವಧಿಯಲ್ಲಿ ಇಡೀ ರಾಜ್ಯದ ಎಲ್ಲಾ ಜನರಿಗೂ ಕೂಡ ಎರಡು ಬಾರಿ ಭೇಟಿ ನೀಡಿ ಪರಿಸ್ಥಿತಿಯನ್ನು ತಿಳಿದುಕೊಂಡಿದ್ದೇನೆ ಹಾಗೂ ಆಡಳಿತ ಉತ್ತಮವಾಗಿರುವ ಬಗ್ಗೆ ಮಾರ್ಗದರ್ಶನವನ್ನೂ ಸಹ ನಾನು ಮಾಡಿ ಯಾವ್ಯಾವ ಕಾರ್ಯಕ್ರಮಗಳು ನಿರೀಕ್ಷೆ ಪ್ರಮಾಣದಲ್ಲಿ ಕಾರ್ಯಗತವಾಗಿದೆ ಎನ್ನುವುದನ್ನು ತಿಳಿದುಕೊಂಡು ಬಾಕಿ ಉಳಿದಿರುವಂತಹ ಕಾರ್ಯಕ್ರಮಗಳನ್ನು ಸಕಾಲದಲ್ಲಿ ಮಾಡುವುದಕ್ಕೆ ಮಾರ್ಗದರ್ಶನ ಕೂಡ ಕೊಟ್ಟಿದ್ದೇವೆ. ಮಾನ್ಯ ಛೇರ್ಮನ್‌ರವರೆ, ನಿಜ ಬಹಳ ಕೆಲಸಗಳು ಇವೆ. ನಮ್ಮ ನಿರೀಕ್ಷಣೆ ಪ್ರಕಾರ ಆಡಳಿತದಲ್ಲಿ ಇನ್ನಷ್ಟು ಸೃಜನಶೀಲತೆಯಾಗಬೇಕಿದೆ. ಅದಕ್ಕೆ ಎಲ್ಲರೂ ಪ್ರಯತ್ನಪಡಬೇಕು. ಒಂದು ಏನಾಗಿದೆ ಎಂದರೆ, ನೇರ ನೇಮಕಾತಿಯಿಂದ ಆದಂತಹ ತಹಶೀಲ್ದಾರರ ಕೊರತೆ ಬಹಳವಿದೆ, ಹೆಚ್ಚು-ಕಡಿಮೆ ಇಲ್ಲವೇ ಇಲ್ಲ. ಯಾರು promote ಆಗಿದ್ದಾರೆಯೋ ಅವರನ್ನು ಇಟ್ಟುಕೊಂಡು ಕೆಲಸ ಮಾಡುವಂತಹ ಪರಿಸ್ಥಿತಿ ನಮಗೆ ಬಂದಿದೆ. ಅದು ಏನಾಗಿದೆ ಎಂದರೆ, ಅವರೆಲ್ಲಾ

promote ಆಗಿ ಬಂದಿರುತ್ತಾರೆ. ಒಂದು ಆಡಳಿತ ನಡೆಸುವಂತಹ ಆತ್ಮವಿಶ್ವಾಸ ಸ್ವಲ್ಪ ಕಡಿಮೆಯಿರುತ್ತದೆ. ಹಾಗಾಗಿ ಅವರ ಕೆಳಗಿರತಕ್ಕಂತಹ ಅಧಿಕಾರಿಗಳ ಮೇಲೆ ಹತೋಟಿ ಕೊಡುವ ವಿಚಾರದಲ್ಲಿಯಾಗಬಹುದು ಅಥವಾ ಅವರ ಮೇಲೆ ಪ್ರಭಾವ ಬೀರುವುದು ಆಗಬಹುದು ಅದು ಸ್ವಲ್ಪ ಕಡಿಮೆಯಿದೆ. ಹೀಗಾಗಿ ಸ್ವಲ್ಪ ಕೆಳಹಂತದ ಅಧಿಕಾರಿಗಳಲ್ಲಿ ಈ ಕೊರತೆಯಿದೆ. ನಮ್ಮ ಬಿ.ಆರ್.ಪಾಟೀಲ್ರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು.

(ಮುಂದು . . .)

ದಿ:19-06-2017-5.20(37)-ಜೆ.ಎಲ್-ಎಸ್.ಪಿ

ಶ್ರೀ ಕಾಗೋಡು ತಿಮ್ಮಪ್ಪ (ಮುಂದು.,) :

ಹೀಗಾಗಿ ಕೆಳಹಂತದ ಅಧಿಕಾರಿಗಳಲ್ಲಿ ಈ ಕೊರತೆಯಿದೆ. ಬಿ.ಆರ್.ಪಾಟೀಲ್‌ರವರು ಮಾತನಾಡುತ್ತಾ ಮಳೆ ಹಾನಿಯಿಂದ ಯಾವ್ಯಾವ ಫಸಲು ನಷ್ಟಕ್ಕೆ ಒಳಗಾಗಿರುತ್ತವೆ ಅವುಗಳನ್ನು ನಮ್ಮ ಗ್ರಾಮಲೆಕ್ಕಿಗರು ಗುರುತಿಸಿ ಪಹಣಿಯಲ್ಲಿ ಅದನ್ನು ನಮೂದಿಸಿದರೆ ಪರಿಹಾರ ಕೊಡುವುದಕ್ಕೆ, ವಿಮೆ ಮಾಡುವುದಕ್ಕೆ ಅನುಕೂಲವಾಗುತ್ತದೆಂಬ ಮಾತನ್ನು ಹೇಳಿದರು ಅದನ್ನು ನಾನು ಸಂಪೂರ್ಣ ಒಪ್ಪುತ್ತೇನೆ. ಕಾರಣವೇನೆಂದರೆ, ನನಗೆ ಗೊತ್ತಿರುವ ರೀತಿಯಲ್ಲಿ ಪ್ರತಿ ವರ್ಷ ನಮ್ಮ ಗ್ರಾಮ ಲೆಕ್ಕಾಧಿಕಾರಿಗಳು ನಿಗಧಿತ ಅವಧಿ ಸಂದರ್ಭದಲ್ಲಿ ಆಯಾಯ ಗ್ರಾಮದ ಪ್ರತಿ ಸರ್ವೆ ನಂಬರ್‌ಗಳಿಗೆ ಭೇಟಿ ಮಾಡಿ ಅಲ್ಲಿ ಏನು ಬೆಳೆ ಬೆಳೆದಿದ್ದಾರೆ, ಏನು ಬೆಳೆ ಆಗಿದೆ, ಎಷ್ಟು ಆಣೆ ಪ್ರಮಾಣ ಬೆಳೆದಿದೆ ಎನ್ನುವುದನ್ನು ನಿಖರವಾಗಿ ಗುರುತಿಸಿಕೊಂಡು ಪಹಣಿಯಲ್ಲಿ ನಮೂದು ಮಾಡಬೇಕು. ಈ ವರ್ಷ ಎಷ್ಟು ಮಳೆಯಾಗಿದೆ, ಎಷ್ಟು ಆಣೆ ಬೆಳೆ ಆಗಿದೆ, ಯಾವ ಬೆಳೆ ಬಂದಿದೆ ಅಥವಾ ಹಾಳು ಬಿದ್ದಿದ್ದರೆ ಹಾಳು ಬಿದ್ದಿದೆ ಇತ್ಯಾದಿ ವಿವರಗಳನ್ನು ನಮ್ಮ ಪಹಣಿ ಕಲಂನಲ್ಲಿ ಬರೆಯಬೇಕಾಗಿದೆ. ಅನೇಕ ಕಡೆ ನಾನು ಕೇಳಿದಾಗ ಬೆಳೆಯನ್ನು ನಮೂದಿಸುವುದೇ ಇಲ್ಲ. ನಮ್ಮ ಮಾನ್ಯ ಸದಸ್ಯರು ಹೇಳಿದ ವಿಷಯದ ಹಿನ್ನೆಲೆಯಲ್ಲಿ ನಾನು ಪರಿಶೀಲನೆ ಮಾಡಿ ನೋಡಿದಾಗ ಬೆಳೆ ಕಾಲಂ ಅನ್ನು ಹಾಗೇ ಇಟ್ಟಿದ್ದಾರೆ. ಹಾಗಾಗಿ ನಮ್ಮ ಸೊಸೈಟಿಗೆ ಸಾಲಕ್ಕೆ ಹೋದರೆ ಆ ಸೊಸೈಟಿಯವರು ಸಾಲವನ್ನೇ ಕೊಡುವುದಿಲ್ಲ. ಹೀಗಾಗಿ ಸ್ವಲ್ಪ ದಾರಿ ತಪ್ಪಿದೆ. ಬಹಳ ವರ್ಷಗಳ ಕಾಲದಿಂದ ವಾಸ್ತವಿಕವಾಗಿ ಬ್ರಿಟಿಷ್‌ರವರ ಕಾಲದಿಂದ ಇದು ನಡೆದು ಬಂದ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪದ್ಧತಿಯಾಗಿದೆ. ಅದರಲ್ಲಿ ತಾವೆಲ್ಲಾ ಬಾಂಬೆ ಕರ್ನಾಟಕ ಪ್ರದೇಶದಿಂದ ಬಂದಂತಹವರು ಅಲ್ಲಿ ಈ ಪಹಣಿ ಬರೆಯುವುದು, ದಾಖಲೆ ಇಡುವ ಪದ್ಧತಿ ಬಹಳ ಚೆನ್ನಾಗಿ ನಡೆಯುತ್ತದೆ. ಆ ರೀತಿ ನಮ್ಮಲ್ಲಿಯೂ ಕೂಡ ಇತ್ತು. ಇತ್ತೀಚೆಗೆ ನಮ್ಮ ಗಾಡಿ ತಪ್ಪಿರುವ ಕಾರಣಕ್ಕಾಗಿ ಪ್ರತಿ ವರ್ಷ ತಪ್ಪದೆ ಅದು ಮೊದಲನೇ ಬೆಳೆ ಆಗಿರಬಹುದು, ಎರಡನೇ ಬೆಳೆ ಆಗಿರಬಹುದು ಆಯಾಯ ಜಮೀನಿಗೆ ಹೋಗಿ ಪರಿಶೀಲನೆ ಮಾಡಿ ಪಹಣಿ ಬರೆಯುವಂತಹ ಕೆಲಸ ಸ್ವಲ್ಪ ತಪ್ಪಾಗಿದೆ. ಅದಕ್ಕೆ ನಾನು ಸರ್ಕಾರದಿಂದ ಅಗತ್ಯ ಸೂಚನೆ ಕೊಟ್ಟು ತಪ್ಪದೆ ಪಹಣಿಯನ್ನು ಬರೆಯುವಂತಹ ಕೆಲಸವನ್ನು ಮಾಡಬೇಕು ಎನ್ನುವುದನ್ನು ಹೇಳಿದ್ದೇನೆ. ಇದನ್ನು ಏಕೆ ಹೇಳುತ್ತೇನೆಂದರೆ, ಮಾನ್ಯ ಸದಸ್ಯರಾದ ನಮ್ಮ ಬೋಪಯ್ಯರವರು ಇಲ್ಲೇ ಇದ್ದಾರೆ. ಅವರೆಲ್ಲಾ ಕೊಡಗು ಜಿಲ್ಲೆಯಲ್ಲಿ coffee plantation ಬೆಳೆಯುತ್ತಾರೆ. ಅಲ್ಲಿ ಅನೇಕ ಜನರಿಗೆ coffee plantation ಗೆ ಮಂಜೂರಾಗಿರುವ ಭೂಮಿ ಬಗ್ಗೆ ಅವರ ಅನುಭವದಲ್ಲಿದೆ ಅದನ್ನು ಯಾರೂ ಪ್ರಶ್ನೆ ಮಾಡುವುದಿಲ್ಲ. ಅವರ ಅನುಭವದಲ್ಲಿದಂತಹ ಜಾಗದ ಬದಲಿಗೆ ಬೇರೆ ಜಾಗವನ್ನು ಕೂಡ ಮಂಜೂರು ಮಾಡಿದ್ದಾರೆ. ಅದೇ ರೀತಿ ಅನೇಕ ಕಡೆ ಸರ್ಕಾರದ ಜಮೀನನ್ನು ಅನುಮತಿ ಇಲ್ಲದೆ ಒತ್ತುಮಸಿಕೊಂಡು ಸಾಗುವಳಿ ಮಾಡುವುದು, ಬೇಲಿ ಹಾಕಿಕೊಂಡಿರುವುದು ಅಥವಾ ಸ್ವಾಧೀನಪಡಿಸಿಕೊಂಡಿರುವುದು ಇದೆಲ್ಲಾ ಇದೆ. ಇವುಗಳನ್ನೆಲ್ಲಾ ಏಕೆ ಕಂಡುಹಿಡಿಯುವುದಿಲ್ಲ ಈ ರೀತಿಯೆಲ್ಲಾ ಏಕೆ ಆಗುತ್ತವೆಂದರೆ ಪ್ರತಿ ವರ್ಷ ನಮ್ಮ ಗ್ರಾಮ ಲೆಕ್ಕಾಧಿಕಾರಿಗಳು ಪರಿಶೀಲನೆ ಮಾಡಿ ಆ ರೀತಿಯಾದಂತಹ ಪ್ರಕರಣವನ್ನು ಗರುತಿಸಿ ಆಯಾಯ ವರ್ಷವೇ ತಹಸೀಲ್ದಾರ್‌ರವರಿಗೆ ವರದಿ ಮಾಡಿದರೆ ಅವರು ಅದರ ಮೇಲೆ ಕ್ರಮ ಕೈಗೊಳ್ಳುತ್ತಾರೆ. ಹೀಗೆ ಸ್ವಲ್ಪ ಬಿಗಿ ತಪ್ಪಿದಂತಹ ವಾತಾವರಣವಿದೆ. ಇದಕ್ಕೊಂದು ಬಿಗಿ ತರಬೇಕೆನ್ನುವ ಪ್ರಯತ್ನವನ್ನು ಈಗ ಪ್ರಾರಂಭ ಮಾಡಿದ್ದೇನೆ. ಇದು ಏನಾಗಿದೆಯೆಂದರೆ ಮೊದಲನೇ ಬಾರಿ ಈ ಮಾತನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಹಿಂದೆ ಶ್ಯಾನುಭೋಗರು ಹೇಳುತ್ತಿದ್ದರು ಏನೆಂದರೆ, ನಮ್ಮ ಮನೆ ಕಟ್ಟೆ ಮೇಲೆ ಬಂದು ಅಡುಗೆ ಮಾಡಿಕೊಂಡು ಅಲ್ಲೇ ಊಟ ಮಾಡಿಕೊಂಡು ಇಡೀ ಗ್ರಾಮವನ್ನು ತಿರುಗಾಟ ಮಾಡಿ pencil entry ಮಾಡಿಕೊಂಡು ಮಾಡುತ್ತಿದ್ದರು. ಇವತ್ತು ಆ ಪದ್ಧತಿಯನ್ನು ಗ್ರಾಮ ಲೆಕ್ಕಾಧಿಕಾರಿಗಳು ಮರೆತೆಬಿಟ್ಟಿದ್ದಾರೆ. ಹಾಗಾಗಿ ಈ ವ್ಯವಸ್ಥೆ ಆಗಿದೆ. ಇದಕ್ಕೊಂದು ಪರಿಹಾರ

ಕಂಡುಹಿಡಿಯಬೇಕಾಗಿದೆ. ಇವರ್ಯಾರು ಆಯಾಯ ಗ್ರಾಮದಲ್ಲಿ ವಾಸ ಮಾಡುತ್ತಿಲ್ಲ. Taluk headquarter ನಿಂದ ಹೋಗಬೇಕು ಅಲ್ಲಿ ಬರೆಯಬೇಕು. ಒಂದೊಂದು ಸಾರಿ ಹೋಗುತ್ತಾರೆ, ಒಂದೊಂದು ಸಾರಿ ಹೋಗುವುದಿಲ್ಲ. ಹೀಗೆ ದಿಕ್ಕು ತಪ್ಪಿದಂತಹ ವಾತಾವರಣ ಇದೆ. ಇದಕ್ಕೊಂದು ಹೊಸ ರೂಪ ಕೊಟ್ಟು ಪ್ರತಿ ವರ್ಷ ತಪ್ಪದ ರೀತಿಯಲ್ಲಿ ಬೆಳೆ ಪರಿಶೀಲನೆ ಮಾಡಬೇಕು ಮತ್ತು ಪ್ರತಿ ದಿವಸ ಅವರವರ circleನಲ್ಲಿ ವಾಸ ಮಾಡಬೇಕು. ಅವರಿಗೆ ವಾಸ ಮಾಡುವುದಕ್ಕೆ ಕಛೇರಿ ನಡೆಸುವುದಕ್ಕೆ ಒಂದು ವಸತಿ ಸೌಲಭ್ಯವನ್ನು ಕಲ್ಪಿಸುವುದಕ್ಕೆ ನಾನು ಈಗ ಪ್ರಾರಂಭ ಮಾಡಿದ್ದೇನೆ.

ಛೇರ್ಮನ್: ಮಾನ್ಯ ಕಂದಾಯ ಸಚಿವರು ಒಳ್ಳೆಯ ವಿಷಯಗಳನ್ನು ಪ್ರಸ್ತಾಪಿಸುತ್ತಿದ್ದೀರಿ ಸರ್ಕಾರದಲ್ಲಿ ಪರಿಶೀಲಿಸಬೇಕಾಗಿರುವ ನನ್ನದೊಂದು ವಿನಂತಿಯೇನೆಂದರೆ, ಈಗ ಕಾಫಿ, ರಬ್ಬರ್, ಅಡಿಕೆ, ತೆಂಗು ಈ ರೀತಿ permanent crop ಇರುವಂತಹ ಪ್ರದೇಶವಿದೆ. ಈ ಪ್ರದೇಶದಲ್ಲಿ ಪ್ರತಿ ವರ್ಷವೂ ಪಹಣಿ ಮಾಡಬೇಕಾದ ಅಗತ್ಯವಿರುವುದಿಲ್ಲ. ಅಂತಹವುದಕ್ಕೆ ಸ್ವಲ್ಪ ವಿನಾಯಿತಿ ಕೊಟ್ಟರೆ ಅವರಿಗೆ ಸ್ವಲ್ಪ workload ಕಡಿಮೆಯಾಗುತ್ತದೆಂಬುದು ನನ್ನ ಅಭಿಪ್ರಾಯ. ಅದನ್ನು ಕೂಡ ಪರಿಶೀಲಿಸಬಹುದು.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಛೇರ್ಮನ್‌ರವರೆ ತಾವು ಹೇಳುವುದು ಸರಿಯಿದೆ ಆದರೆ ಅದೇನಾಗುತ್ತದೆಯೆಂದರೆ, ಒಂದು ಭಾಗಕ್ಕೆ ಅಕಸ್ಮಾತ್ ಮಳೆ ಬಂದು ಹತ್ತು ಮರ ಬಿದ್ದು ಹೋಗಿರುತ್ತವೆ, ಆಗ ಅದನ್ನು ಅವರು ಗುರುತಿಸಬೇಕಾಗುತ್ತದೆ. ಆದ್ದರಿಂದ ಅಗತ್ಯವಿದ್ದಲ್ಲಿ ಮಾಡಲೇಬೇಕು. ಅಗತ್ಯವಿರದಿದ್ದಲ್ಲಿ ಪಹಣಿ ಮಾಡಬೇಕಾದ ಅಗತ್ಯವಿರುವುದಿಲ್ಲ. ನಾವು ಈ ಪದ್ಧತಿಯನ್ನು ಅನುಸರಿಸಬೇಕಾದಂತಹ ಅಗತ್ಯವಿದೆಯೆಂಬ ಕಾರಣಕ್ಕಾಗಿ ನಾನು ಈ ಮಾತನ್ನು ಹೇಳಿದ್ದೇನೆ. ಆದ್ದರಿಂದ ಕಂದಾಯ ಇಲಾಖೆಯಲ್ಲಿ ಸಮಯದ ಅಭಾವವಿರುವುದರಿಂದ ನಾವು ಹೆಚ್ಚು ಹೊತ್ತು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಆದಷ್ಟು ಬೇಗ ಮಾಡೋಣ. ಆದರೆ ಕೆಲವು ಕಾರ್ಯಕ್ರಮಗಳು ಬಹಳ ಚೆನ್ನಾಗಿ ನಡೆಯುತ್ತಿವೆ. ಉದಾಹರಣೆಗೆ ಸಕಾಲ ಕಾರ್ಯಕ್ರಮ 100 ಕ್ಕೆ 90 ರಷ್ಟು ಸಾಧನೆ ಆಗಿರುವುದನ್ನು ತಾವು ಅನೇಕ ಕಡೆ ನೋಡಿದ್ದೀರಿ. ಗ್ರಾಮಸಭೆಗಳನ್ನು ಸರಿಯಾಗಿ ಸೇರುವಂತಹ ಕೆಲಸ ನಡೆಯುತ್ತಿದೆ. ಇವೆಲ್ಲಾ ನಡೆಯುವುದರಿಂದ ಜನರ ಸಮಸ್ಯೆಗಳು ಸಕಾಲದಲ್ಲಿ ಪರಿಹಾರ ಆಗುತ್ತಿವೆ.

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉದಾಹರಣೆಗೆ pension ಕೊಡುವುದು ಇತ್ಯಾದಿ ನಮ್ಮ ಸಮಾಜಿಕ ನ್ಯಾಯದ ಕಾರ್ಯಕ್ರಮಗಳಿವೆ ಇವೆಲ್ಲವೂ ಕೂಡ ಎಲ್ಲಾ ಜಿಲ್ಲೆಗಳಲ್ಲಿ 100 ಕ್ಕೆ 95 ರಷ್ಟು ಪ್ರಗತಿ ಸಾಧಿಸಿರುವುದನ್ನು ನಾನು ನೋಡಿ ಬಂದಿದ್ದೇನೆ. ಹೀಗಾಗಿ ಇತ್ತೀಚೆಗೆ ಆಡಳಿತದಲ್ಲಿ ಸ್ವಲ್ಪ ಜಾಗೃತಿ ಮೂಡಿದೆ. ಜನರ ನಿರೀಕ್ಷಣೆಗೆ ತಕ್ಕಂತೆ ನಡೆದುಕೊಳ್ಳುವಂತಹ ಪ್ರವೃತ್ತಿ ಕೂಡ ಇವತ್ತು ಬಂದಿದೆಯನ್ನುವಂತಹ ಸಂತೋಷದ ಮಾತನ್ನು ತಮ್ಮೊಂದಿಗೆ ಸದನದಲ್ಲಿ ಹಂಚಿಕೊಳ್ಳುವುದಕ್ಕೆ ನಾನು ಇಷ್ಟ ಪಡುತ್ತೇನೆ. ಭೂಮಿ ಅಳತೆ ವಿಚಾರದ ಬಗ್ಗೆ ನಮ್ಮ ಅನೇಕ ಮಿತ್ರರು ಇಲ್ಲಿ ಹೇಳಿದ್ದಾರೆ. ಇವತ್ತು ಬಹಳಷ್ಟು ಪಕ್ಕಾ ಪೋಡಿ ಆಗುತ್ತಿಲ್ಲ. ಕಾರಣವೇನೆಂದರೆ vacancies ಹುದ್ದೆಗಳು ಬಹಳ ಇದೆ ನೇಮಕ ಮಾಡಿಲ್ಲ. ನಾನು ಬಂದನಂತರ ಸುಮಾರು ಒಂದು ಸಾವಿರ Surveyor ಗಳನ್ನು ನೇಮಕ ಮಾಡುವುದಕ್ಕೆ ಕ್ರಮ ಕೈಗೊಂಡಿದ್ದೇವೆ. ಅದರದೇ ಆದಂತಹ ವಿಧಾನದಿಂದ ಸ್ವಲ್ಪ ವಿಳಂಬವಾಗುವುದು ಸ್ವಾಭಾವಿಕವಾಗಿದೆ ಹೀಗಾಗಿ ನಿಂತಿದೆ. ಜೊತೆಗೆ 400, 500 ಜನ ನಿವೃತ್ತಿ Surveyor ಗಳನ್ನು ಇವತ್ತು ನೇಮಕ ಮಾಡುತ್ತಿದ್ದೇವೆ. ಈಗಾಗಲೇ 300 ಜನ Surveyor ಗಳನ್ನು ನೇಮಕ ಮಾಡಿದ್ದೇವೆ. ನೇಮಕ ಮಾಡಿಕೊಂಡು ಪಕ್ಕಾ ಪೋಡಿಯನ್ನು ಸ್ವಲ್ಪ ಬೇಗ ಮಾಡಿಕೊಡುವ ಕೆಲಸವನ್ನು ಮಾಡಿದ್ದೇವೆ. ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ಬಹಳಷ್ಟು ಪಕ್ಕಾ ಪೋಡಿ ಮಾಡುವ ಕೆಲಸ ಉಳಿದುಕೊಂಡಿದ್ದು, ಅದನ್ನು ವಿಳಂಬವಿಲ್ಲದೆ ಮಾಡುವುದಕ್ಕೆ ಚಾಲನೆ ಕೊಟ್ಟಿದ್ದೇನೆ. ಸ್ವಲ್ಪ ಸಮಯ ತೆಗೆದುಕೊಳ್ಳಬಹುದು ಈ ವರ್ಷದ ಅವಧಿಯಲ್ಲಿ ಹೆಚ್ಚು ವಿತರಣೆ ಮಾಡುವ ಪ್ರಯತ್ನವನ್ನು ನಾನು ಪ್ರಾಮಾಣಿಕವಾಗಿ ಮಾಡುತ್ತೇನೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಯಾರೋ Surveyor ಪೋಡಿ ಮಾಡುವುದಕ್ಕೆ 15 ಲಕ್ಷ ರೂ.ಗಳನ್ನು ಕೇಳುತ್ತಿದ್ದಾರೆಂದು ನಮ್ಮ ಖೇಣಿಯವರು ಹೇಳಿದರು. ಇರಬಹುದು ಇಂತಹ ಹುಳುಗಳು ಇದ್ದಾವೆ, ಇಲ್ಲವೆಂದು ಹೇಳುವುದಿಲ್ಲ. ಆದರೆ ನಮ್ಮಂತಹ ಶಾಸಕರು, ಪ್ರಜ್ಞಾವಂತರು, ವಿಚಾರವಂತರು ಇಂತಹವರ ಗಮನಕ್ಕೆ ಇಂತಹ ಪ್ರಕರಣಗಳು ಬಂದಾಗ ಲಿಖಿತ ಮೂಲಕ ಸಂಬಂಧಪಟ್ಟವರ ಗಮನಕ್ಕೆ ತಕ್ಷಣ ತಂದರೆ ವಿಚಾರಣೆ ಮಾಡಿ ಅದನ್ನು ತಡೆಗಟ್ಟುವಂತಹ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಿಜ ಇವತ್ತು ಆಡಳಿತದಲ್ಲಿ ಭ್ರಷ್ಟಾಚಾರ ಇದೆ ಅದನ್ನು ನಿಗ್ರಹ ಮಾಡುವುದಕ್ಕೆ ನಾವೆಲ್ಲರೂ ಕೂಡ ಪ್ರಯತ್ನಿಸಬೇಕು ಆ ನಿಟ್ಟಿನಲ್ಲಿ ಕೆಲಸ ಮಾಡುವುದಕ್ಕೆ ನಾನು ಪ್ರಯತ್ನಪಡುತ್ತೇನೆ ಎಂಬ ಮಾತನ್ನು ಈ

ಸಂದರ್ಭದಲ್ಲಿ ಹೇಳುತ್ತೇನೆ. ಬಗರ್‌ಹುಕುಂ ಮಂಜೂರಾತಿ ಮಾಡುವಂತಹ ಕೆಲಸದ ಬಗ್ಗೆ ಹೇಳಬೇಕೆಂದರೆ, ನಾನು ಬಂದಾಗ ಸುಮಾರು ಐದು ಲಕ್ಷದಷ್ಟು ಅರ್ಜಿಗಳು ಬಾಕಿಯಿತ್ತು. ಅದನ್ನು ವಿಲೇವಾರಿ ಮಾಡಿ ಎರಡು ಲಕ್ಷ ಚಿಲ್ಲರೆ ಉಳಿದುಕೊಂಡಿದೆ ಅವುಗಳನ್ನು 2-3 ತಿಂಗಳಲ್ಲಿ ವಿಲೇವಾರಿ ಮಾಡಬೇಕೆಂಬ ನಿರೀಕ್ಷಣೆ ಇಟ್ಟುಕೊಂಡಿದ್ದೇನೆ.

ಶ್ರೀ ಈ.ತುಕಾರಾಂ: ಮಾನ್ಯ ಛೇರ್ಮನ್‌ರವರೆ, ದಯಮಾಡಿ High Court ನಲ್ಲಿರುವ ಬಗರ್‌ಹುಕುಂ ಸಮಿತಿ stay vacate ಮಾಡಿಸಿ. ಅದು ತುಂಬಾ ಮುಖ್ಯ ಇದೆ.

ಶ್ರೀ ಕಾಗೋಡು ತಿಮ್ಮಪ್ಪ: ಹೌದು. ನಾನು ಬಂದನಂತರ ವಾರಕ್ಕೊಮ್ಮೆ ಸಭೆ ಕರೆಯಬೇಕು, ಇಬ್ಬರು ಬಂದರೆ ಸಾಕು ಸಭೆ ನಡೆಸಬೇಕು, ಎರಡನೇ ಸಭೆ ಆದ ತಕ್ಷಣ ಹಕ್ಕು ಪತ್ರ ಕೊಡಬೇಕು, ಹಕ್ಕುಪತ್ರ ಕೊಟ್ಟ ತಕ್ಷಣ ಕೂಡಲೇ ಎಂಬ ಶಬ್ದ ಬಳಸಿದ್ದೇನೆ. ಕೂಡಲೇ RTC entry ಮಾಡಬೇಕೆಂದು ಸರ್ಕಾರದಿಂದ ಒಂದು ಸುತ್ತೋಲೆಯನ್ನು ಕಳುಹಿಸಿದ್ದೇವೆ. ನನ್ನ ಗ್ರಹಚಾರಕ್ಕೆ ಏನಾಗಿದೆಯೆಂದರೆ, ಎಲ್ಲಾ ತಾಲ್ಲೂಕಿನ ವಿದ್ಯಮಾನವನ್ನು ನಾನು ತಿಳಿದುಕೊಂಡಿದ್ದೇನೆ. ನಮ್ಮ ಶಾಸಕರುಗಳೇ ಇದಕ್ಕೆ ಹೆಚ್ಚಿನ ಆಸಕ್ತಿ ತೋರದಿರುವುದು ನನ್ನ ಗಮನಕ್ಕೆ ಬಂದಿದೆ.

(ಮುಂದುವರೆದಿದೆ)

ದಿನಾಂಕ: 19-06-2017-05.30 (38) AJ/SP

ಶ್ರೀ ಕಾಗೋಡು ತಿಮ್ಮಪ್ಪ (ಮುಂದು . . .)

ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ಉಳಿದ 2-3 ತಿಂಗಳಿನಲ್ಲಿ ತಪ್ಪದೇ ಪ್ರತಿ ವಾರ ಸಭೆ ಮಾಡುವಂತಹ ಕೆಲಸ ಮಾಡಿ ಉಳಿದಿರುವಂತಹ ಅರ್ಜಿಗಳನ್ನು ಇತ್ಯರ್ಥ ಪಡಿಸುವುದಕ್ಕೆ ತಾವು ಸಹಕಾರ ನೀಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದೊಂದು ವಿಷಯವನ್ನು ಸಕಾಲದಲ್ಲಿ ಮಾಡದೇ ಹೋದರೆ ನಮಗೆ ಗೌರವ ಬರುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಗೋಮಾಳ ಜಮೀನು ಕೂಡ ಹಾಗೆಯೇ ಇತ್ತು. ಭೂ ಮಂಜುರಾತಿ ನಿಯಮದ ಪ್ರಕಾರ 100 ಜಾನುವಾರು ಇದ್ದರೆ 30 ಎಕರೆ ಗೋಮಾಳದ ಭೂಮಿ ಇರಬೇಕಾಗುತ್ತದೆ. ಅದಕ್ಕಿಂತಲೂ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕಡಿಮೆಯಿದ್ದರೆ ಕೊಡುವುದಕ್ಕೆ ಬರುವುದಿಲ್ಲವೆಂದು ನಿಯಮದಲ್ಲಿಯೇ ಇದೆ. ಹಾಗಾಗಿ ಆ ನಿಯಮಕ್ಕೆ ತಿದ್ದುಪಡಿ ತಂದು ನಮೂನೆ 50-53 ರ ಅರ್ಜಿಗಳು pending ನಲ್ಲಿ ಏನಿವೆ, ಅಷ್ಟಕ್ಕೆ ಸೀಮಿತ ಗೊಳಿಸಿ ಅದನ್ನು ಕೊಡಬಹುದೆಂದು ತೀರ್ಮಾನ ಮಾಡಿದ್ದೇನೆ. ಹೀಗಿರುವಾಗ ಯಾರೋ ಒಬ್ಬರು ಹೈಕೋರ್ಟಿಗೆ ಹೋಗಿ stay ತಂದಿರುತ್ತಾರೆ. ಆ stay ಅನ್ನು vacate ಮಾಡುವ ಸಲುವಾಗಿ ಈಗಾಗಲೇ Advocate General ಅವರಿಗೆ ಹೇಳಿದ್ದು, ಆದಷ್ಟು ಬೇಗನೆ ಅದನ್ನು vacate ಮಾಡುವಂತಹ ಪ್ರಯತ್ನವನ್ನು ಮಾಡಿದ್ದೇವೆ. ಅದೊಂದು ಕೆಲಸ ಮಾಡಿದರೆ ಸುಮಾರು 30-40 ಸಾವಿರ ಅರ್ಜಿಗಳು ಇತ್ಯರ್ಥವಾಗುತ್ತವೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಸಚಿವರೆ, ಒಂದು ನಿಮಿಷ. ನಮ್ಮಲ್ಲಿ ಸಿ & ಡಿ landಗೆ ಕೊಡುವುದಕ್ಕೆ ಬರುವುದಿಲ್ಲ ಎಂದು ಅರ್ಜಿಗಳು pendingನಲ್ಲಿದ್ದು, clear ಮಾಡಿದರೆ ಸುಮಾರು ಅರ್ಜಿಗಳು clear ಆಗುತ್ತವೆ. ನಮ್ಮಲ್ಲಿ ಈಗ ಸುಮಾರು 5,000 ಅರ್ಜಿಗಳು ಇರುತ್ತವೆ.

ಶ್ರೀ ಕಾಗೋಡು ತಿಮ್ಮಪ್ಪ : ಅಲ್ಲಿಗೇ ಬರುತ್ತಿದ್ದೇನೆ. ನಿಮ್ಮಲ್ಲಿಯೇ ಹೆಚ್ಚಾಗಿವೆ. ಮಾನ್ಯ ಸದಸ್ಯರಾದ ಬೋಪಯ್ಯನವರು ಇಲ್ಲಿಯೇ ಇದ್ದಾರೆ.

ಶ್ರೀ ಕೆ. ಗೋಪಾಲ್ ಪೂಜಾರಿ : ಕುಮ್ಕಿ ಜಮೀನನ್ನು ಕೊಡಲಿಕ್ಕೆ ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಆ ವಿಷಯಕ್ಕೂ ಬರುತ್ತೇನೆ. ಅಲ್ಲಿಯೇ ಹುಟ್ಟಿರುವುದು. ಸಿ & ಡಿ ಕ್ಲಾಸ್ ಇದೆ. ಈ ಬಗ್ಗೆ ಈಗಾಗಲೇ ಇತ್ತೀಚೆಗೆ Government Order ಒಂದನ್ನು issue ಮಾಡಿದ್ದೇವೆ. ಹಿಂದೆ, 1991 ರಲ್ಲಿ ಅರಣ್ಯ ಬೆಳೆಸುವುದಕ್ಕೋಸ್ಕರ ಸಿ & ಡಿ ಕ್ಲಾಸ್ ಅನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿದರು. 1991 ರಲ್ಲಿ ಬಗರ್‌ಹುಕುಂ ಮಂಜೂರಾತಿ ಕಾನೂನು ಜಾರಿಗೆ ಬಂದ ನಂತರ ಅದನ್ನು ವಾಪಸ್ಸು ತೆಗೆದುಕೊಂಡಿದ್ದೆವು. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಂತಹ ಕಾಲದಲ್ಲಿ ವಾಪಸ್ಸು ಪಡೆಯಲಾಗಿತ್ತು. ವಾಪಸ್ಸು ಕೊಟ್ಟಿರುವ ಬಗ್ಗೆ G.O.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

issue ಆಗಿದೆ. ಅದರ ಪ್ರಕಾರ ಪ್ರಕ್ರಿಯೆಗಳನ್ನು ಸಕಾರಾತ್ಮಕವಾಗಿ ಮಾಡಲಿಲ್ಲ. ಆ ಬಗ್ಗೆ ಬೋಪಯ್ಯನವರು ವಿಶೇಷವಾಗಿ ಪ್ರಸ್ತಾಪ ಮಾಡಿರುವುದಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ : 1991 ರ ಆದೇಶವನ್ನು ತೆಗೆದುಕೊಂಡ ನಂತರ ಕೊಡಗು ಜಿಲ್ಲಾಧಿಕಾರಿಗಳು 844 ಎಕರೆ ಭೂಮಿಯನ್ನು 2007 ರಲ್ಲಿ ಅರಣ್ಯ ಇಲಾಖೆಯ land bank ಗೆ ಹಸ್ತಾಂತರ ಮಾಡಿರುತ್ತಾರೆ. ಈ ರೀತಿ ಮಾಡುವುದಕ್ಕೆ ಅವರಿಗೆ ಅಧಿಕಾರ ಎಲ್ಲಿದೆ? ಆರ್.ಟಿ.ಸಿ.ಯಲ್ಲಿಯೂ ಇದೆ. ಆದರೂ ಅದರ ಬಗ್ಗೆ ಮಾತನಾಡುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅದು ತಪ್ಪಿದೆ.

ಶ್ರೀ ಕೆ.ಜಿ. ಬೋಪಯ್ಯ : ಅಂತಹ ತಪ್ಪುಗಳು ಬಹಳ ಇವೆ.

ಶ್ರೀ ಕಾಗೋಡು ತಿಮ್ಮಪ್ಪ : ಆಯಾ ಕಾಲಕ್ಕೆ ನಮ್ಮ ಆಡಳಿತವನ್ನು ಶುದ್ಧವಾಗಿ, ಚುರುಕಾಗಿ ಮಾಡದೇ ಇರುವುದರಿಂದ ಅವ್ಯಾಹತ ಆಗಿದೆ.

ಶ್ರೀ ಕೆ.ಜಿ. ಬೋಪಯ್ಯ : ನೀವು ಹೇಳುವುದನ್ನು ಒಪ್ಪುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ತಪ್ಪು ಯಾರು ಮಾಡಿದ್ದಾರೆಂದರೆ, ಆಡಳಿತ ನಡೆಸುವಂತಹವರು ತಪ್ಪನ್ನು ಮಾಡಿರುತ್ತಾರೆ. ಆ ತಪ್ಪಿಗಾಗಿ ಜನರ ಕ್ಷಮೆ ಕೇಳಬೇಕಾದಂತಹ ಅಗತ್ಯವಿದೆ. ಆ ರೀತಿಯಿದ್ದರೆ ಅದನ್ನು ಸರಿ ಮಾಡುವಂತಹ ಕೆಲಸ ಮಾಡುತ್ತೇನೆ. ಇದರ ಜೊತೆಗೆ ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಮಂಗಳೂರು, ಕೊಡಗು ಜಿಲ್ಲೆಗಳಲ್ಲಿ privilege land ಎಂದು ಇವೆ. ಕಂದಾಯ ಕಾನೂನು 79(2) ರ ಪ್ರಕಾರ privilege land ಎನ್ನುವ ವಿಶ್ಲೇಷಣೆ ಇದೆ. ಇದನ್ನು ಹಿಂದಿನವರು ಅರಣ್ಯ ಎಂದು ಮಾಡಿಟ್ಟು ಕುಳಿತುಕೊಂಡಿದ್ದಾರೆ. ಈಗ ಆ ಭೂಮಿಯೆಲ್ಲವೂ deemed forest ಎಂದು ಆಗಿದೆ. ಇದನ್ನು ಕೈ ಬಿಡಬೇಕೆಂದು ನಾನು ಕೈ ಮುಗಿದು ಕೇಳುತ್ತಿದ್ದೇನೆ. ಈಗಾಗಲೇ ಈ ವಿಷಯ ಸಚಿವ ಸಂಪುಟದಲ್ಲಿದೆ. ಇದನ್ನು ಬಿಡಿಸುವಂತಹ ಕೆಲಸ ಮಾಡಿದರೆ ನಮ್ಮ ಎಲ್ಲಾ ಸಮಸ್ಯೆಗಳು ಬಗೆಹರಿಯುತ್ತವೆ. ಇದಕ್ಕೆ ನನ್ನ ಪ್ರಾಮಾಣಿಕ ಪ್ರಯತ್ನವಿದೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅದಕ್ಕಾಗಿ ನಾನು ನಮ್ಮೆಲ್ಲಾ ಸಚಿವ ಸಂಪುಟದ ಸದಸ್ಯರುಗಳಿಗೆ ಈ ಸದನದ ಮುಖಾಂತರ ಪ್ರಾರ್ಥನೆ ಮಾಡುವುದೇನೆಂದರೆ, ನಮ್ಮನ್ನು ಬದುಕಿಸಿರಿ ಎಂದು ಕೇಳುತ್ತಿದ್ದೇನೆ.

ಶ್ರೀ ಎಸ್. ಅಂಗಾರ : ಮಾನ್ಯ ಸಚಿವರೆ, ಇದರ ಜೊತೆಗೆ ನಮ್ಮಲ್ಲಿ ಕಾನ ಮತ್ತು ಬಾಣೆ ಜಾಗಗಳೂ ಇವೆ.

ಶ್ರೀ ಕಾಗೋಡು ತಿಮ್ಮಪ್ಪ : Privilege land ಒಳಗೆಯೇ ಈ ಜಾಗಗಳೆಲ್ಲವೂ ಬರುತ್ತದೆ.

ಶ್ರೀ ಎಸ್. ಅಂಗಾರ : ಕುಮ್ಕಿಗೆ ಗೆ ಆಗಿದೆ. ಕಾನ ಮತ್ತು ಬಾಣೆಗೆ ಆಗಿರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅದರಲ್ಲಿಯೇ ಬರುತ್ತದೆ ಮಹಾರಾಯರೆ, ಕಾನ, ಬಾಣೆ ಎಲ್ಲವೂ ಬರುತ್ತದೆ. ನಿಮ್ಮಲ್ಲಿ ಮತ್ತು ನಮ್ಮಲ್ಲಿ ಕಾನ ಬರುತ್ತದೆ. ಕಾನದಲ್ಲಿಯೇ ನಮ್ಮ ಮನೆಗಳೆಲ್ಲಾ ಬರುವುದು. ಕಾನ, ಬಾಣೆ ಇವೆಲ್ಲವೂ privilege landನೊಳಗೆ ಬರುವಂತಹದ್ದು. ಇದನ್ನು ಕೈಬಿಡಬೇಕೆಂದು ಈಗಾಗಲೇ ಸರ್ಕಾರದ ಮುಂದೆ ತೀರ್ಮಾನಕ್ಕೆ ಬಂದಿದೆ. ಹಾಗಾಗಿ ಈ ಒಂದು ಕೆಲಸ ಆದರೆ ಅನೇಕ ಅರ್ಜಿಗಳು ಇತ್ಯರ್ಥವಾಗುತ್ತವೆ.

ಶ್ರೀ ಕೆ. ಗೋಪಾಲ್ ಪೂಜಾರಿ : ತಾವು ಈ ಹಿಂದೆ ಜಿಲ್ಲಾಧಿಕಾರಿಗಳ ಸಭೆಯಲ್ಲಿ ಕುಮ್ಕಿ ಕೊಡಬೇಕೆಂದು ಹೇಳಿದ್ದಿರಿ. ಆದರೆ ಜಿಲ್ಲಾಧಿಕಾರಿಯವರು ಸರ್ಕಾರಿ ಆದೇಶ issue ಆಗದ ಕಾರಣ ಮಾಡುವುದಕ್ಕಾಗುವುದಿಲ್ಲವೆಂದು ಸರ್ಕಾರಕ್ಕೆ ಬರೆದಿದ್ದಾರೆ. ಈಗ ಕುಮ್ಕಿ land ಕೊಡುತ್ತಿಲ್ಲ. Stop ಮಾಡಿದ್ದಾರೆ. ಹಾಗಾಗಿ ತಾವು ಕುಮ್ಕಿ ಜಮೀನನ್ನು ಕೊಡಬೇಕೆಂದು ಒಂದು ಆದೇಶ ಮಾಡಿದರೆ, ಅದನ್ನು ಅಕ್ರಮ-ಸಕ್ರಮ sitting ನಲ್ಲಿಡುವುದಕ್ಕೆ ಪ್ರಾರಂಭ ಮಾಡುತ್ತೇವೆ. ಆದರೆ ಪುನ: ಜಿಲ್ಲಾಧಿಕಾರಿಗಳು ಮಾಹಿತಿಯನ್ನು ಕೇಳಿರುತ್ತಾರೆ. ಇದರ ಸರ್ಕಾರಿ ಆದೇಶ issue ಮಾಡಿದರೆ ಮಾತ್ರ ಮಾಡುತ್ತೇವೆಂದು ಹೇಳಿ ಅರ್ಜಿಗಳನ್ನೆಲ್ಲವನ್ನು pending ನಲ್ಲಿಟ್ಟಿರುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಹೌದು ಸ್ವಾಮಿ. ನಾವೇ ಶಾಸನ ಮಾಡುವವರು. Deemed forest list ನಿಂದ ಇದನ್ನು ಕೈ ಬಿಡದೇ ಹೋದರೆ, ಜಿಲ್ಲಾಧಿಕಾರಿಗಳು ಹೇಳುವುದು ಸರಿಯಿದೆ.

ಹಾಗಾಗಿಯೇ ಅದನ್ನು ಕೈ ಬಿಡಬೇಕೆಂದು ಹೇಳುತ್ತಿರುವುದು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಯಾವತ್ತಾದರೂ ಇದರ ಬಗ್ಗೆ ಬೇಡಿಕೆಯ ಮೇಲೆ ಚರ್ಚೆ ಮಾಡಿ ಒಂದು ದಿವಸ ನಮ್ಮ ಶಾಸಕರು ಇದನ್ನೆಲ್ಲವನ್ನು ಕೈ ಬಿಡಬೇಕೆಂದು ಒತ್ತಾಯ ಮಾಡುತ್ತಾರೆ.

ಶ್ರೀ ಕೆ. ಗೋಪಾಲ ಪೂಜಾರಿ : Sir, deemed ಅಲ್ಲದೇ ಗದ್ದೆ ಪಕ್ಕದಲ್ಲೇ ಕುಮ್ಕಿ ಜಾಗವಿದ್ದು ಅದನ್ನು ಬಿಡುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಸ್ವಾಮಿ, ಇಷ್ಟು ವರ್ಷಗಳಿಂದ ಶಾಸಕರಾಗಿದ್ದೀರಿ. ಕಂದಾಯ ಕಾನೂನಿನ 79(2) ನ ಸೆಕ್ಷನ್ (2) ಅನ್ನು ಓದಿಕೊಳ್ಳಿ. ಯಾವ್ಯಾವ ಜಮೀನು ಅದರಲ್ಲಿ ಸೇರಿದೆ ಎನ್ನುವುದು ತಿಳಿಯುತ್ತದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮಲೆನಾಡು ಪ್ರದೇಶದಿಂದ ಬಂದಂತಹ ನಾವು ಈ ಸದನದಲ್ಲಿ ಘರ್ಜನೆ ಮಾಡದೇ ಹೋದರೆ ಸದನಕ್ಕೆ ತಿಳಿಯುವುದು ಹೇಗೆ? ಅದಕ್ಕಾಗಿಯೇ ನಾನು ಹೇಳಿದ್ದೇನೆ. ನಮ್ಮ ಜಯಚಂದ್ರ ಅವರಿಗೆ ಕಾನ ಅಂದರೆ ಗೊತ್ತಿದೆಯೇ? ಆದರೆ ನಮಗೆ ಗೊತ್ತು. ಸೊಪ್ಪಿನ ಬೆಟ್ಟ ಗೊತ್ತಿದೆಯೇ? ಗೊತ್ತಿಲ್ಲ. ನಿಮ್ಮೂರಿನಲ್ಲಿರುವ ಹಾಡಿ ಗೊತ್ತಾ? ಇಲ್ಲ. ಆಯಾ ಪ್ರದೇಶದಲ್ಲಿ ನಾವುಗಳು ಬದುಕಿ ಬಂದಿರುವುದರಿಂದ ಅದರ ಅನುಭವ ನಮಗೇ ತಿಳಿದಿರುತ್ತದೆ. ಆದ್ದರಿಂದ ಈ ಅನುಭವದ ಹಿನ್ನೆಲೆಯಲ್ಲಿ ಇದನ್ನು ಬಗೆಹರಿಸಿಕೊಂಡರೆ, ಈಗಿರುವಂತಹ ಅರ್ಜಿಗಳನ್ನು ಬೇಗ ಇತ್ಯರ್ಥ ಪಡಿಸಿಕೊಳ್ಳುವುದಕ್ಕಾಗುತ್ತದೆನ್ನುವುದು ಒಂದು ಭಾಗ. ಆದ್ದರಿಂದ ನಾನು ಇದರ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಇದು ಆಗುತ್ತದೆ ಎನ್ನುವ ನಂಬಿಕೆ, ವಿಶ್ವಾಸವನ್ನು ಕೂಡ ಇಟ್ಟುಕೊಂಡಿದ್ದೇನೆ ಎನ್ನುವ ಒಂದು ಮಾತಾದರೆ, ಈ ಹಿಂದೆ ಕಾನೂನೊಂದು ತಿದ್ದುಪಡಿ ಆಗಿದೆ. ಕಂದಾಯ ಕಾನೂನು 192 ರಲ್ಲಿ ಮಂಜೂರಾತಿ ಇಲ್ಲದೆ, ಯಾರು ಜಮೀನು ಮಾಡಿಕೊಂಡಿರುತ್ತಾರೋ, ಮನೆಗಳನ್ನು ನಿರ್ಮಾಣ ಮಾಡಿರುತ್ತಾರೋ ಅವರು ಜೈಲಿಗೆ ಹೋಗಬೇಕು ಮತ್ತು fine ಸಹ ಕಟ್ಟಬೇಕೆಂದು ಇದೆ. ಇದರಿಂದ ತಪ್ಪಿಸಿಕೊಳ್ಳುವುದಕ್ಕಾಗುತ್ತಿಲ್ಲ. ಅದಕ್ಕೋಸ್ಕರ 94-ಸಿ, 94-ಸಿಸಿ ಅದರ ಪ್ರಕಾರ ಆ ನಿವೇಶನವನ್ನು ಕೊಡುವುದಕ್ಕೆ ಈ ಹಿಂದೆ ನಾನು ಹೇಳಿದ್ದೆ. ಈಗ ಅದು ತಿದ್ದುಪಡಿ ಆಗಿದೆ. ಈಗಾಗಲೇ ಅದನ್ನು ಕೊಡುವ ಪ್ರಯತ್ನವನ್ನು ಮಾಡಿದ್ದೇವೆ. ಇದರ ಸಂಬಂಧ ಒಂದು ಸುತ್ತೋಲೆಯನ್ನು ಸಹ ಕಳುಹಿಸಿರುತ್ತೇನೆ. ಅದೇನೆಂದರೆ, ನಮ್ಮ PDO and VA ಗಳು ಜಂಟಿಯಾಗಿ ಪ್ರತಿ ಗ್ರಾಮಕ್ಕೆ ನಕಾಶೆ

ಇಟ್ಟುಕೊಂಡು ಭೇಟಿ ಮಾಡಿ ಯಾರ್‍ಯಾರ ಮನೆ ಎಲ್ಲಿವೆ ಎನ್ನುವುದನ್ನು ಗುರುತಿಸಿ ಅವರಿಗೆ ಮಂಜೂರಾತಿ ಹಕ್ಕುಪತ್ರವನ್ನು ನೀಡಬೇಕು. ಒಂದು ವೇಳೆ ಹಕ್ಕುಪತ್ರ ಇದ್ದರೆ ಬೇಡ. ಅರ್ಜಿ ಕೊಡದೇ ಇದ್ದರೂ ಅರ್ಜಿಯನ್ನು ಕೊಡುವುದಕ್ಕೆ ಅವಕಾಶ ಮಾಡಲಾಗಿದೆ. ಮೊನ್ನೆಯೂ ಸಹ ಪುನ: ಮೂರು ತಿಂಗಳ ವಿಸ್ತಾರ ಮಾಡಲಾಗಿದೆ. ಈ ರೀತಿ ಮಾಡುವುದರಿಂದ ಯಾರೂ ಸಹ ಮನೆ ಕಟ್ಟಿಕೊಂಡು ವ್ಯಾಸ ಮಾಡುವಂತಹವರು ನಮ್ಮ ಕಾನೂನಿನ ಕತ್ತಿಗೆ ತಲೆ ಕೊಡಬಾರದೆಂದು ನನ್ನ ಆಶೆಯಾಗಿದೆ. ಇದನ್ನು ಕೂಡ ಅವಧಿಯೊಳಗೆ ತೀರ್ಮಾನ ಮಾಡುತ್ತೇವೆ. ಹೀಗೆ ಮಾಡುವುದರಿಂದ ತೀರ್ಮಾ ಅವಶ್ಯಕವಾಗಿ ರುವಂತಹ ನಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಕೆ.ಜಿ. ಬೋಪಯ್ಯ : Receive ಆಗುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಮತ್ತೆ ಅವಕಾಶ ಕೊಟ್ಟರೆ ಮಾತ್ರ receive ಆಗುತ್ತದೆ.

ಶ್ರೀ ಕೆ.ಜಿ. ಬೋಪಯ್ಯ : ಅವಕಾಶ ಕೊಟ್ಟಿದ್ದೀರಿ. ಆದರೆ ಕಂಪ್ಯೂಟರ್‌ನಲ್ಲಿ receive ಆಗುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಈಗಾಗಲೇ ತಹಶೀಲ್ದಾರ್ ಅವರಿಗೆ ಅವಧಿಯ ಬಗ್ಗೆ ಸುತ್ತೋಲೆ ಹೋಗಿರುತ್ತದೆ. ಇನ್ನು ಮುಂದೆ ತೆಗೆದುಕೊಳ್ಳುತ್ತದೆ. ಹೆದರಬೇಕಾದ ಅವಶ್ಯಕತೆಯಿಲ್ಲ.

ಶ್ರೀ ಕೆ.ಜಿ. ಬೋಪಯ್ಯ : ಈ ಸಂಬಂಧ ಇರುವ ಸುತ್ತೋಲೆಯನ್ನು ಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ : ನಾಳೆಯೇ ತಮಗೆ ಗೆಜೆಟ್ ನೋಟಿಫಿಕೇಷನ್ ಪ್ರತಿಯನ್ನು ಕೊಡುತ್ತೇನೆ.

ಶ್ರೀ ಬಿ. ಸುರೇಶ್ ಗೌಡ : ಮಾನ್ಯ ಅಧ್ಯಕ್ಷರೆ, ಮಂಜೂರಾತಿ ಇಲ್ಲದೆ ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿಕೊಂಡಿರುವವರಿಗೆ ಜೈಲು ಮತ್ತು ದಂಡ ಎಂದು ಹೇಳುತ್ತೀರಿ. ಆದರೆ ಗೋಮಾಳ ಜಮೀನಿನಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ. ಸರ್ಕಾರಿ ಜಾಗ ಎಂದರೆ ಗ್ರಾಮೀಣ ಪ್ರದೇಶಗಳಲ್ಲಿ ಗೋಮಾಳಗಳು. ಅಲ್ಲೆಲ್ಲಾ ಗುಂಪು ಗುಂಪಾಗಿ ಕಳೆದ 25 ವರ್ಷಗಳ ಹಿಂದೆಯೇ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಅಂತಹ

19-06-2017

ಕಡೆಗಳಿಗೆ ಹಕ್ಕುಪತ್ರಗಳನ್ನು ತಯಾರು ಮಾಡಬೇಕಾದರೆ ತಹಶೀಲ್ದಾರ್ ಮತ್ತು Village Accountant ಹೋಗಿ ಸ್ಥಳ ಪರಿಶೀಲನೆ ಮಾಡಿ, ಹಕ್ಕುಪತ್ರಗಳನ್ನು ತಯಾರು ಮಾಡಿ ವಿತರಣೆ ಮಾಡಬೇಕಾಗುತ್ತದೆ. ಆದರೆ ಈಗ ಏನಾಗಿದೆಯೆಂದರೆ, ಗೋಮಾಳದ ಜಮೀನಿನ ಬಗ್ಗೆ ಒಂದು ಪ್ರಕರಣ ಹೈಕೋರ್ಟಿಗೆ ಹೋದ ಮೇಲೆ 94-ಸಿ ಗೂ ಕೂಡ ಅನ್ವಯವಾಗುತ್ತದೆ ಮತ್ತು 50 ಮತ್ತು 53 ಅರ್ಜಿಗಳು ಬಗರ್‌ಹುಕುಂ ನಲ್ಲಿ ಏನಿವೆ, ಅವು ಗೋಮಾಳಕ್ಕೆ apply ಆಗುತ್ತದೆಂದು ತಹಶೀಲ್ದಾರ್ ಅವರಿಗೆ ಹೇಳಿದರೆ, ಗೋಮಾಳದಲ್ಲಿ ಮನೆ ಕಟ್ಟಿಕೊಂಡಿರುವುದಕ್ಕೆ ಹಕ್ಕುಪತ್ರ ಕೊಡುವುದಕ್ಕಾಗುವುದಿಲ್ಲವೆಂದು ಕಾನೂನನ್ನು ಹೇಳಿ, ಹಕ್ಕುಪತ್ರವನ್ನು ವಿತರಣೆ ಮಾಡುವುದಕ್ಕೆ ತಹಶೀಲ್ದಾರ್ ಅವರು ಬಹಳ ಮುಜುಗರ ಪಡುತ್ತಿದ್ದಾರೆ. ಇದ್ದರ ಜೊತೆಗೆ action ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ತಾವು 94-ಸಿಗೂ ಕೂಡ, ಗೋಮಾಳದಲ್ಲಿ ಮನೆ ಕಟ್ಟಿಕೊಂಡಿರುವವರಿಗೆ ಕಾನೂನು ಅನ್ವಯವಾಗುತ್ತದೆಯೇ ಎನ್ನುವುದರ ಬಗ್ಗೆ clarification ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಸದಸ್ಯರ ಅನುಮಾನಕ್ಕೆ ನಾನು ಪರಿಹಾರವನ್ನು ತೋರಿಸುತ್ತೇನೆ. ಇದಕ್ಕೆ stay ಅನ್ನು ಮೊದಲು vacate ಮಾಡಬೇಕು. ಈಗ ತಹಶೀಲ್ದಾರ್ ಅವರು ಹೇಳುವುದರಲ್ಲಿದೆ. 94-ಸಿ ಮತ್ತು 94-ಸಿಸಿಗೆ ಅರ್ಜಿ ತೆಗೆದುಕೊಳ್ಳುವುದಕ್ಕೆ ಮತ್ತು ಅದನ್ನು ತೀರ್ಮಾನ ಮಾಡುವುದಕ್ಕೆ ಅಡಚಣೆ ಆಗದ ರೀತಿಯಲ್ಲಿ ಏನು ಮಾಡಬೇಕೋ ಅದನ್ನು ನಾನು ಮಾಡುತ್ತೇನೆ.

(ಮುಂದು . . .)

ವಿ.ಸ.:19.06.2017.05.40.(39).ಜಿಎಂ.ಪಿಎಸ್.
ಶ್ರೀ ಕಾಗೋಡು ತಿಮ್ಮಪ್ಪ(ಮುಂದುವರೆದುದು):

ಒಟ್ಟಾರೆ, ಆ ಗೋಮಾಳದಲ್ಲಿ ಕಟ್ಟಿರುವಂಥ ಮನೆಗಳ regularize ಆಗುವುದಕ್ಕೆ ಏನು ಅಗತ್ಯವಿದೆಯೋ ಅದನ್ನು ನಾನು ಮಾಡಿಕೊಡುತ್ತೇನೆ. ನೀವು ಹೇಳಿದ್ದು ಒಳ್ಳೆಯದಾಗಿದೆ.

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

19-06-2017

ಶ್ರೀ ಬಿ.ಸುರೇಶ್‌ಗೌಡ: ಅಪ್ಲಿಕೇಷನ್‌ಗೆ ಕಿಮ್ಮತ್ತು ಎಲ್ಲವನ್ನೂ ಕಟ್ಟಿಸಿಕೊಳ್ಳಿ ಎಂದು ತಹಸೀಲ್ದಾರ್‌ರಿಗೆ ನೀವು ಆದೇಶ ಮಾಡಬೇಕು. ನಿಮ್ಮ ಪ್ರಧಾನ ಕಾರ್ಯದರ್ಶಿಯವರು ಅವರಿಗೆ ಏನೋ ಒಂದು ಆದೇಶ ಮಾಡಿ ಕಳುಹಿಸಿದ್ದಾರಂತೆ, ಆದ್ದರಿಂದ ನಾನು ನಿಮ್ಮಲ್ಲಿ ವಿನಂತಿ ಮಾಡುವುದೇನೆಂದರೆ. . . . .

ಶ್ರೀ ಕಾಗೋಡು ತಿಮ್ಮಪ್ಪ: ನಾನು ಹೇಳುವುದನ್ನು ಸ್ವಲ್ಪ ಕೇಳಿ. ಏನಾಗಿದೆಯೆಂದರೆ, ಹೈಕೋರ್ಟಿನ ಆದೇಶವಿದೆ. ಆ ಆದೇಶದಲ್ಲಿ ಏನು ಹೇಳಿದ್ದಾರೆಂದರೆ, ಎಲ್ಲಾ processing ಮಾಡಿಕೊಳ್ಳಿ, ಆದರೆ, ಸಾಗುವಳಿ ಚೀಟಿಯನ್ನು ಕೊಡಬೇಡಿ ಎಂದು ಹೇಳಿದ್ದಾರೆ. ಅದಕ್ಕೋಸ್ಕರ ಹೈಕೋರ್ಟಿನ ಆದೇಶದ ಪ್ರಕಾರ ಒಂದು ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಬಿ.ಸುರೇಶ್‌ಗೌಡ: ಆ ಆದೇಶವನ್ನು ನೋಡಿದ್ದೇನೆ. ನೀವು ನಮಗೆಲ್ಲರಿಗೂ ಮೀಟಿಂಗ್ ಮಾಡಿ proceedings ಮಾಡಿ ಎಂದು ಹೇಳಿದ್ದೀರಿ. ಆದರೆ, ನಾನು ತಹಸೀಲ್ದಾರರಿಗೆ ಏನು ಹೇಳಿದ್ದೇನೆಂದರೆ, ಎಲ್ಲಾ ಹಕ್ಕುಪತ್ರಕ್ಕೆ ಕಿಮ್ಮತ್ತನ್ನು ಕಟ್ಟಿಸಿಕೊಂಡು ರೆಡಿ ಮಾಡಿಟ್ಟುಕೊಳ್ಳಿ. ಹೈಕೋರ್ಟ್‌ನಿಂದ ಆದೇಶ ಏನು ಬರುತ್ತದೆಯೋ ಅದರ ಮೇಲೆ ಹಕ್ಕುಪತ್ರ ವಿತರಣೆ ಮಾಡೋಣ. ಈ ಸರ್ಕಾರದ ಆಯಸ್ಸು ಇನ್ನು 8 ತಿಂಗಳುಗಳಿದೆ. ನಿಮ್ಮ ಆಡಳಿತ ಅವಧಿ ಇನ್ನೂ ಒಂದು ತಿಂಗಳಿದ್ದಂತೆ ಹೈಕೋರ್ಟಿನಿಂದ ಆದೇಶ ಬರಬಹುದು. ಆಗ ನಾವು ಹಕ್ಕುಪತ್ರವನ್ನು ಕೊಡುವುದಕ್ಕೆ ಆಗುವುದಿಲ್ಲ. ಅರ್ಜಿಗಳು ಹಾಗೇ ಉಳಿದುಕೊಳ್ಳುತ್ತವೆ. ನೀವು ಕೊಟ್ಟಿರುವಂಥ 6 ತಿಂಗಳ ಅವಧಿಯೊಳಗೆ ಸಕ್ರಮ ಮಾಡಿಕೊಳ್ಳಬೇಕು ಎಂದು, ಆ ಸಮಯವೂ ಸಹ ಮುಗಿದುಹೋಗುತ್ತದೆ. ಆದ್ದರಿಂದ ತಕ್ಷಣ ಅರ್ಜಿಗಳನ್ನು ವಿಲೇ ಮಾಡುವುದಕ್ಕೆ ತಹಸೀಲ್ದಾರರು ರೆಡಿ ಮಾಡಿಟ್ಟುಕೊಂಡಿರಬೇಕು. ಹೈಕೋರ್ಟ್ ಆದೇಶ ಅಥವಾ ಸರ್ಕಾರದ ಆದೇಶ ಬಂದ ತಕ್ಷಣ ವಿತರಣೆ ಮಾಡಬೇಕು. ನನಗೆ ಮತ್ತೊಂದು clarification ಬೇಕಾಗಿದೆ. ನಮ್ಮ ಕ್ಷೇತ್ರದ ಬಗರ್‌ಹುಕುಂನಲ್ಲಿ ಫಾರಂ 53, 54ನಲ್ಲಿ 20 ವರ್ಷಗಳ ಹಿಂದೆ ಕಿಮ್ಮತ್ತು ಕಟ್ಟಿದ್ದಾರೆ. ಹಕ್ಕುಪತ್ರ ಮಾತ್ರ ಕೊಟ್ಟಿಲ್ಲ. ಅವತ್ತಿನ ದಿನ ಇದ್ದಂಥ ಬಗರ್ ಹುಕುಂ ಸಮಿತಿ ಆದೇಶ ಮಾಡಿದೆ. ಆ ಆದೇಶ ಮಾಡಿದ ಮೇಲೆ ಕಿಮ್ಮತ್ತನ್ನು ಕಟ್ಟಿದ್ದಾನೆ. ನಂತರ ಹಕ್ಕುಪತ್ರವೂ ಸಹ ರೆಡಿ ಇದೆ. ಈ ಹಕ್ಕುಪತ್ರ 20 ವರ್ಷಗಳ ಹಿಂದೆ ಆಗಿರುವುದು. ಅವರು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಉಳುಮೆಯನ್ನು ಮಾಡುತ್ತಿದ್ದಾರೆ. ಆದರೆ, ಹಳೆಯ 20 ವರ್ಷದ ಹಕ್ಕುಪತ್ರ ಕೊಡಿ ಎಂದು ಕೇಳಿದರೆ, ಕಾನೂನಿನಲ್ಲಿ ಅವಕಾಶವಿಲ್ಲ ಎಂದು ಹೇಳುತ್ತಾರೆ.

(ಗೊಂದಲ)

ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್: ಬಿಡಿ, ಹೇಳಿದ್ದನ್ನೇ ಹೇಳುತ್ತಿದ್ದಾರೆ. ಹೇಳಿದ ವಿಚಾರವನ್ನೇ ಅರ್ಧ ಗಂಟೆಯಿಂದ ಪ್ರಸ್ತಾಪ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಬಿ.ಸುರೇಶ್‌ಗೌಡ: ಸಮಸ್ಯೆಯಿರುವುದರಿಂದ ನಾನು ಕೇಳುತ್ತಿದ್ದೇನೆ. 20 ವರ್ಷಗಳ ಹಿಂದೆ ಆಗಿರುವ ಹಕ್ಕುಪತ್ರವನ್ನು ಕೊಡಿಸಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ನಾನು ಹೇಳುವುದನ್ನು ಸ್ವಲ್ಪ ಕೇಳಿ. ಸ್ಟೇ ಕೊಟ್ಟು ಎಷ್ಟು ದಿನಗಳಾಗಿದೆ?

ಶ್ರೀ ಬಿ.ಸುರೇಶ್‌ಗೌಡ: ಸ್ಟೇ ಕೊಟ್ಟು ಒಂದು ತಿಂಗಳಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ: ಇವರು ಎಷ್ಟು ದಿವಸಗಳಿಂದ ಶಾಸಕರಾಗಿದ್ದಾರೆ? ಇಷ್ಟು ದಿವಸ ನೀವು ಈ ಶಾಸನಸಭೆಯಲ್ಲಿ ಈ ವಿಚಾರವನ್ನು ಏತಕ್ಕಾಗಿ ಪ್ರಸ್ತಾಪ ಮಾಡಲಿಲ್ಲ? ಅದಕ್ಕಾಗಿ ನನಗೆ ಗೊತ್ತಿದೆ. ನಿಮ್ಮಲ್ಲಿ ಮೀಟಿಂಗ್ ಸೇರುತ್ತಿಲ್ಲ. ವಾರಕ್ಕೊಂದು ಬಾರಿ ಮೀಟಿಂಗ್ ಮಾಡುತ್ತಿಲ್ಲ. ಎಲ್ಲವನ್ನೂ ನಾನು ತಿಳಿದುಕೊಂಡಿದ್ದೇನೆ. ನಾನು ಇಲ್ಲೇ ಕುಳಿತಿದ್ದರೂ ಅದೇ ಕೆಲಸವನ್ನು ಮಾಡುತ್ತೇನೆ. ಆದ್ದರಿಂದ, ಅದನ್ನು ಸರಿಮಾಡಿಸಿ ಕೊಡುತ್ತೇನೆ.

ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್: ಮಾನ್ಯ ಸಚಿವರೆ, ನನ್ನ ಎರಡು ಪ್ರಶ್ನೆಗಳಿಗೆ ಉತ್ತರ ನೀಡಿ. ಮೊದಲನೆಯದಾಗಿ, 94ಸಿ ಮತ್ತು 94ಸಿಸಿ, ಇದನ್ನು ಮಾನ್ಯ ಮಂತ್ರಿಗಳು ಪುನ: extension ಮಾಡಿ ಆದೇಶ ಕಳುಹಿಸಿದ್ದಾರೆ. ಮೊನ್ನೆ ಮಂತ್ರಿಗಳ ಬಳಿಯೂ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಕಳೆದ 3 ತಿಂಗಳಿನ ಹಿಂದೆ ಏನು ಆದೇಶ ಮಾಡಿದ್ದೀರೋ, ಕೆಲವೇ ಅಧಿಕಾರಿಗಳು ಆ ಆದೇಶವನ್ನು ಜಾರಿಗೆ ತಂದು RTCಯೊಳಗೆ ತಂದು ಮಂಜೂರಿ ಮಾಡಿ ಕೊಟ್ಟರು. ಅನೇಕರು ಹಣ ತುಂಬಿದರು, ಅವರಿಗೆ ಆರ್‌ಟಿಸಿಯನ್ನೂ ಕೊಟ್ಟು ಆಯಿತು. ಆದರೆ, ಇನ್ನೂ ಅನೇಕರಿಗೆ ಮಂಜೂರಿಯಾಗಿದೆ, ಅವರು ಹಣ ತುಂಬಿಲ್ಲ. ಎರಡನೇ ಆದೇಶದಲ್ಲಿ ರೇಟ್ ಕಡಿಮೆ ಮಾಡಿದ್ದೀರಿ. ಆ ರೇಟ್‌ನಲ್ಲಿಯೇ ತಮಗೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕೊಡಬೇಕೆಂದು ಬಡವರು ಕೇಳುತ್ತಿದ್ದಾರೆ. ಅದನ್ನು ಮಾನ್ಯ ಮಂತ್ರಿಗಳು ಮಾಡಿಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಎರಡನೆಯದಾಗಿ, ಸನ್ಮಾನ್ಯ ಕಾಗೋಡು ತಿಮ್ಮಪ್ಪನವರಿಗೂ ಈ ವಿಚಾರ ಗೊತ್ತಿದೆ. ಫಾರಂ 53 ಬಂದ ಕಾಲದಲ್ಲಿ ಅನೇಕ ಅಮಾಯಕರು, ಅವಿದ್ಯಾವಂತ ಜನರು ಗೊತ್ತಿಲ್ಲದೆ ಇನ್ನೂ ಸಹ ಫಾರಂ 53 ಅರ್ಜಿ ತುಂಬದೆ ಅನೇಕ ಜನ ಸಾಯುತ್ತಿದ್ದಾರೆ. ಅವ್ಯಾಹತವಾಗಿ ಒಂದು ತಿಂಗಳು ಅಥವಾ ಎರಡು ತಿಂಗಳುಗಳ ಅವಕಾಶ ಕೊಟ್ಟರೆ ಆ ಬಡವರು ಸಹ ಜಮೀನಿನಲ್ಲಿ, ಅವರು ಉಳುಮೆ ಮಾಡುತ್ತಿರುವ ಜಮೀನಿದೆ, ಆದರೆ Record of Rights ಅವರ ಕೈಯ್ಯಲಿಲ್ಲ. ಅದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸದಸ್ಯರು ಎರಡು ವಿಷಯಗಳನ್ನು ಹೇಳಿದ್ದಾರೆ. ರೇಟ್ ಕಡಿಮೆ ಮಾಡುವ ವಿಚಾರ. ಆದರೆ, ಆಯಾ ಕಾಲದಲ್ಲಿ ಯಾವ ರೇಟ್ ಇತ್ತೋ ಅದನ್ನು ಕೊಡಬೇಕಾಗುತ್ತದೆ. ಆ ತೀರ್ಮಾನ ಇತ್ತೀಚೆಗೆ ಯಾವ ತಾರೀಖಿನಿಂದ ಜಾರಿಗೆ ಬಂದಿದೆಯೋ ಆಗಲೂ ಸಹ ಅವಕಾಶವಿದೆ. ಎರಡನೆಯದಾಗಿ, ಇನ್ನೊಂದು ಫಾರಂ 53ಗೆ ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ. ಅದಕ್ಕಾಗಿಯೇ, ಇಂಥ ಅನೇಕ ಜನ, ಯಾವಗಲ್‌ರವರು ಆಗಲೇ ಇನಾಂ ಬಗ್ಗೆ ಮಾತನಾಡುತ್ತ ಇಲ್ಲಿಯೇ ಹೇಳಿದ್ದಾರೆ. ಸ್ವಾಮಿ, ಇನಾಂ ಕಾನೂನು ಯಾವಾಗ ಜಾರಿಗೆ ಬಂದಿತು? 1959ರಲ್ಲಿ, ಇನ್ನೂ ಅರ್ಜಿ ಕೊಡಲಿಲ್ಲವೆಂದು ಹೇಳಿದರೆ ನಮಗೆಲ್ಲಾ ನಾಚಿಕೆ ಆಗುವುದಿಲ್ಲವೆ? ಭೂಸುಧಾರಣೆ ಕಾನೂನು ಬಂದಿದ್ದು ಯಾವಾಗ? 1974ರಲ್ಲಿ, ಆಗ ಅರ್ಜಿ ಕೊಡಿಸಲಿಲ್ಲವೆಂದು ಹೇಳಿದರೆ, ಆ ಪ್ರದೇಶದಿಂದ ಶಾಸಕರಾದಂಥ ಸ್ನೇಹಿತರು ಏನು ಮಾಡುತ್ತಿದ್ದರೆಂದು ನಾನು ಪ್ರಶ್ನೆ ಕೇಳುತ್ತಿದ್ದೇನೆ. ನಮ್ಮಗಳ ತಪ್ಪಿನಿಂದಾಗಿ ಅವರು ಹಾಗೇ ಕುಳಿತಿದ್ದಾರೆ. ಮೊನ್ನೆ ಬೆಳಗಾವಿಯ ಖಾನಾಪುರಕ್ಕೆ ಹೋಗಿದ್ದೆನು. ನಮ್ಮ ಬೋಪಯ್ಯನವರು ಕೇಳುವುದೇನೆಂದರೆ, ಇನಾಂ ಜಮೀನಿಗೆ ಸುಮಾರು ಎರಡು ಸಾವಿರ ಜನ ಇನ್ನೂ ಅರ್ಜಿಯನ್ನೇ ಕೊಟ್ಟಿಲ್ಲ. ಅದಕ್ಕಾಗಿಯೇ ಇನ್ನೊಂದು ಬಾರಿ ಅರ್ಜಿಯನ್ನು ಕೊಡುವುದಕ್ಕೋಸ್ಕರ ಇನಾಂ ಕಾನೂನನ್ನು ತಿದ್ದುಪಡಿ ಮಾಡಿದ್ದೇನೆ. ಬಗರ್ ಹುಕುಂ ಅಲ್ಲ. ಈ ಸದನದಲ್ಲಿಯೇ ಇನಾಂ ಕಾನೂನನ್ನು ತರಬೇಕೆಂದು ನಾನು ಪ್ರಯತ್ನ ಮಾಡಿದ್ದೇನೆ. ಕಾನೂನು ಇಲಾಖೆಗೆ ಕಳುಹಿಸಿದರೆ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಕಳುಹಿಸುತ್ತಿದ್ದಾರೆ.

19-06-2017

ಶ್ರೀ ಜಗದೀಶ್ ಶೆಟ್ಟರ್: ನಿಮಗೂ ಆಗಲಿಲ್ಲ. ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಅಡ್ಡಾಡುವುದನ್ನು ತಪ್ಪಿಸುವುದಕ್ಕೆ ಆಗಲಿಲ್ಲ. ಕಾಗೋಡು ತಿಮ್ಮಪ್ಪನವರೆ ನಿಮ್ಮ ಕಡೆಯಿಂದ ಇದೆಲ್ಲವೂ ಆಗುತ್ತದೆಂದು ನಾವು ತಿಳಿದುಕೊಂಡಿದ್ದೆವು. ಆದರೆ, ನಿಮ್ಮಿಂದಲೂ ಈ ವ್ಯವಸ್ಥೆಯನ್ನು ಸುಧಾರಣೆ ಮಾಡುವುದಕ್ಕೆ ಆಗಲಿಲ್ಲ. ಅಲ್ಲಿ ಇಲ್ಲಿ ಅಡ್ಡಾಡುತ್ತಿವೆ.

(ಗೊಂದಲ)

ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್: ಸಾರ್, 53 ಗೊಂದು ಅವಕಾಶ ಕೊಡಿ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ನಾಳೆ, ನಾಡಿದ್ದು ಎರಡು ದಿವಸ ಇದೆ. ಸಾಧ್ಯವಾದರೆ ತರುತ್ತೇನೆ.

ಛೇರ್ಮನ್: ಉಳಿದ ಸದಸ್ಯರಲ್ಲಿ ಮನವಿ ಏನೆಂದರೆ, ಮಾನ್ಯ ಸಚಿವರು ಅವರ ಚರ್ಚೆಯನ್ನು ಮುಗಿಸಲಿ. ಸದಸ್ಯರುಗಳು ಏನೇ ಸ್ಪಷ್ಟೀಕರಣ ಕೇಳುವುದಿದ್ದರೂ ಆಮೇಲೆ ಕೇಳಿ. ಸುರೇಶ್‌ಗೌಡರೆ, ಹೆಬ್ಬಾರ್‌ರವರೆ, ನೀವು ಹೇಳುವುದನ್ನು ಹೇಳಿದ್ದೀರಿ. ಸಚಿವರು ಪೂರ್ಣ ಉತ್ತರ ಕೊಟ್ಟ ಮೇಲೆ ಯಾವುದೇ ಸದಸ್ಯರಿಗೆ ಏನೇ ವಿವರಣೆ ಕೇಳುವುದಾದರೆ ಆಮೇಲೆ ಕೇಳಬಹುದು. ಮಾನ್ಯ ಸಚಿವರು ಮೊದಲು ಉತ್ತರವನ್ನು ಮುಗಿಸುತ್ತಾರೆ. ಸಮಯ ಇಲ್ಲ. ಆ ಹಿನ್ನೆಲೆಯಲ್ಲಿ ಅವರು ಉತ್ತರ ಮುಗಿಸುತ್ತಾರೆ. ಅವರು ಉತ್ತರ ಕೊಟ್ಟಮೇಲೆ ಕೇಳಿ.

(ಗೊಂದಲ)

ಶ್ರೀ ನಾರಾಯಣ್ಣಗೌಡ: ದುರಸ್ತಿ ಬಗ್ಗೆ ಒಂದೇ ಒಂದು ಸೆಕೆಂಡ್ ಕೇಳುತ್ತೇನೆ.

(ಗೊಂದಲ)

ಶ್ರೀ ಬಿ.ಸುರೇಶ್‌ಗೌಡ: ಬಗರ್ ಹುಕುಂ ಕಮಿಟಿಯಲ್ಲಿ ಸುಮಾರು 100 ಜನ ಫಾರಂ 53, 54 ನಲ್ಲಿ ಅರ್ಜಿ ಹಾಕಿರುವುದನ್ನು ಕೆಐಎಡಿಬಿಯವರು ವಶ ಪಡಿಸಿಕೊಂಡಿದ್ದಾರೆ. Without notification or ರೈತರಿಗೆ ಯಾವುದೇ ನೋಟೀಸ್ ಕೊಡದೆ ವಶಪಡಿಸಿಕೊಂಡಿದ್ದಾರೆ. ಇಲ್ಲಿಯವರೆಗೂ ಆ ಜಮೀನಿಗೆ ನಾವು ಹಕ್ಕುಪತ್ರ ವಿತರಣೆ ಮಾಡುವುದಕ್ಕಾಗುತ್ತಿಲ್ಲ. ನಿನ್ನೆ ಒಂದು ಸಭೆ ಆಯಿತು. ಆ ಸಭೆಯಲ್ಲಿ ನಾವೇನು ನಿರ್ಣಯ ಮಾಡಿದ್ದೇವೆಂದರೆ, ಕೆಐಎಡಿಬಿಯವರು ಕಾನೂನು

ಬಾಹಿರವಾಗಿ, ಅಕ್ರಮವಾಗಿ ಈ ಜಮೀನನ್ನು ವಶ ಪಡಿಸಿಕೊಂಡಿದ್ದಾರೆ. ಆದ್ದರಿಂದ, ಅದನ್ನು ರದ್ದು ಮಾಡಲಾಗಿದೆ. ನಾವು ಬಗರ್ ಹುಕುಂ ಸಮಿತಿಯಿಂದ ಆದೇಶ ಮಾಡುತ್ತಿದ್ದೇವೆ. ಕೆಐಎಡಿಬಿ acquire ಮಾಡಿದಂಥ ಆದೇಶವನ್ನು ರದ್ದು ಮಾಡಿದ್ದೇವೆ. ಆ ಜಮೀನನ್ನು ಈ ರೈತರಿಗೆ ಕೊಡಬೇಕೆಂದು ಹೇಳಿ ನಾವು ಆದೇಶ ಮಾಡಿದ್ದೇವೆ.

ಛೇರ್ಮನ್: ನೀವು ಒಂದು ಬಾರಿ ಉತ್ತರ ಮುಗಿಸಿಬಿಡಿ. ಆಮೇಲೆ ಸದಸ್ಯರು ಏನೇನು ಸ್ಪಷ್ಟೀಕರಣ ಬೇಕೋ ಅದನ್ನು ಕೇಳುತ್ತಾರೆ.

(ಗೊಂದಲ)

ಶ್ರೀ ಬಿ.ಸುರೇಶ್‌ಗೌಡ: ಇದನ್ನು ಸರಿ ಮಾಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಛೇರ್ಮನ್‌ರವರೆ, ಗೋಮಾಳ ಕಡಿಮೆಯಿದೆ ಎನ್ನುವ ಕಾರಣಕ್ಕಾಗಿ ಕೆಲವು ಅರ್ಜಿಗಳು ವಜಾ ಆಗಿವೆ. ಅದನ್ನು ಪುನ: ತೆಗೆದುಕೊಳ್ಳಬೇಕೆಂದರೆ ಕಾನೂನು ಅಡ್ಡ ಬರುತ್ತಿದೆ. ಅದಕ್ಕೆ ನಾನು ಮಾನ್ಯ ಸದಸ್ಯರೆಲ್ಲರಲ್ಲಿ ವಿನಂತಿ ಮಾಡುತ್ತಿದ್ದೇನೆ, ಗೋಮಾಳದ ಕೊರತೆಯಿಂದ ಯಾರ್‌ಯಾರ ಅರ್ಜಿಗಳು ವಜಾ ಆಗಿವೆಯೋ, ಆ ಬಡವರಿಂದ ಎಸಿಗೆ ಒಂದೊಂದು ಅಪೀಲ್ ಹಾಕಿಸಿ. ಅಂಥ ಸಂದರ್ಭದಲ್ಲಿ ಅವೆನ್ನಲ್ಲಾ ನೀವು ಸ್ವೀಕಾರ ಮಾಡಿ ಪುನರ್ ವಿಚಾರಣೆಗೆ ಕಳುಹಿಸಿ ಎಂದು ನಾನು ಈಗಾಗಲೇ ಎಸಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಮತ್ತೊಂದು ಬಾರಿ ಪರಿಶೀಲನೆ ಮಾಡುವುದಕ್ಕೆ ನಾನೇ ಹೇಳಿದ್ದು, ನಮ್ಮ ರೂಲ್‌ನಲ್ಲಿ ಅವಕಾಶವಿದೆ. ಅದನ್ನೂ ಮಾಡುತ್ತೇವೆ. ಏಕೆಂದರೆ, ಒಂದು ಬಾರಿ ವಜಾ ಆಗಿರುವುದಕ್ಕೆ ಮತ್ತೆ ಅಪೀಲ್ ಹಾಕಲೇಬೇಕು. ಹಾಕಿಸಿ, ಅದನ್ನು ಪರಿಶೀಲನೆ ಮಾಡೋಣ. ಮತ್ತೊಂದು, ಅರಬೈಲ್‌ರವರು ಹೇಳಿದ್ದು, ಮತ್ತೊಂದು ಬಾರಿ ಅರ್ಜಿ ಹಾಕುವುದಕ್ಕೆ ಅವಕಾಶ ಮಾಡಿ ಕೊಡಿ ಎಂದು, ಈಗ ನೀವು ಹೇಳುತ್ತಿದ್ದೀರಲ್ಲ, ಒಂದು ಹತ್ತು ಜನ ಇದ್ದರೆ ಬಗ್ಗೆ ಎದ್ದು ನಿಂತು ಕೊಡಲೇಬೇಕು ಎಂದು ಹೇಳುವುದಕ್ಕೆ ಆಗುವುದಿಲ್ಲವೆ?

ಶ್ರೀ ನಾರಾಯಣಗೌಡ: ಮಾನ್ಯ ಛೇರ್ಮನ್‌ರವರೆ, ಹತ್ತು ಜನರು ಮಾತ್ರವಲ್ಲ, ಇಲ್ಲಿರುವ ಎಲ್ಲರೂ ಹೇಳುತ್ತಾರೆ.

ಶ್ರೀ ಎಂ.ರಾಜಣ್ಣ: ಮಾನ್ಯ ಛೇರ್ಮನ್‌ರವರೆ, ಅರ್ಜಿ ಹಾಕುವುದಕ್ಕೆ ಅವಕಾಶ ಮಾಡಿಕೊಡಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಕೆ.ಷಡಕ್ಷರಿ: ಮಾನ್ಯ ಸಚಿವರೆ, ಅರ್ಜಿ ಹಾಕುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಿ. ಅವಕಾಶ ಕೊಡಲೇಬೇಕು.

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಸಚಿವರೆ, ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ಎಲ್ಲರಿಗೂ ಕೈ ಮುಗಿಯುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ. ಏಕೆಂದರೆ, ನಾನು ಈ ಮಾತನ್ನು ಏತಕ್ಕಾಗಿ ಹೇಳಿದೆನು ಎಂದು ನೀವೆಲ್ಲರೂ ಅರ್ಥ ಮಾಡಿಕೊಳ್ಳಿ. ಸುಮ್ಮನೆ ನಾನು ಹೇಳುತ್ತಿಲ್ಲ.

(ಗೊಂದಲ)

ಛೇರ್ಮನ್: ರಾಜಣ್ಣನವರೆ ನೀವು ಆಮೇಲೆ ಕೇಳಬಹುದು.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ಇರುವಂಥ ಅರ್ಜಿಯನ್ನು ಒಂದು ತಿಂಗಳಿನಲ್ಲಿ, ಎರಡು ತಿಂಗಳಿನಲ್ಲಿ ಇತ್ಯರ್ಥ ಮಾಡಿಕೊಡಿ. ಹೊಸದಾಗಿ ಅರ್ಜಿ ಕೊಡುವ ವಿಚಾರದಲ್ಲಿ ಖಂಡಿತವಾಗಿ ನಿಮ್ಮ ಪರವಾಗಿ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಎನ್.ರಾಜಣ್ಣ: ಮಾನ್ಯ ಛೇರ್ಮನ್‌ರವರೆ, ಒಂದು ತಿಂಗಳಿನಲ್ಲಿ, ಎರಡು ತಿಂಗಳಿನಲ್ಲಿ ಮಾಡಬೇಕೆಂದು ನೀವು ಹೇಳುತ್ತಿದ್ದೀರಿ. ನೀವು ಭೂಮಿಯ ಬಗ್ಗೆ ಭೂ ಸುಧಾರಣೆ ಬಗ್ಗೆ ಜೀವನ ಪರ್ಯಂತ ಹೋರಾಟವನ್ನು ಮಾಡಿಕೊಂಡು ಬಂದಿದ್ದೀರಿ. ನಾವೆಲ್ಲರೂ ಇನ್ನೂ ಹೊಸಬರು. ಭೂಮಿ ಬಗ್ಗೆ, ಹೋರಾಟದ ಬಗ್ಗೆ ನೀವು ಬಹಳ ಬಾರಿ ಅರಿವನ್ನು ಮೂಡಿಸಿದ್ದೀರಿ. ಆದರೆ, ಈಗ ಹೆಬ್ಬಾರ್‌ರವರು ಹೇಳಿದ್ದರಿಂದ, ಈ ಭಾಗದಲ್ಲಿರುವ ನಾವೆಲ್ಲರೂ ಹೇಳಿದಂತೆ ಆಗುತ್ತದೆ. ನಮ್ಮೆಲ್ಲರ ಪರವಾಗಿ ನೀವೇ ಇದ್ದೀರಲ್ಲ, ಅದಕ್ಕಾಗಿ ನಾವ್ಯಾರೂ ಹೇಳಲಿಲ್ಲ. ಈ ಕಡೆ 20 ಜನರಿದ್ದಾರೆ, ಎಲ್ಲರಿಗೂ ಇದರ ಅವಶ್ಯಕತೆಯಿದೆ. ಆದ್ದರಿಂದ ಒಂದು ತಿಂಗಳಾದರೂ ಅವಕಾಶ ಮಾಡಿಕೊಡಿ ಸಾರ್.

ಶ್ರೀ ಕಾಗೋಡು ತಿಮ್ಮಪ್ಪ: ಆಯಿತು.

(ಮುಂದುವರೆದಿದೆ)

19-06-2017

19.06.2017 / 05.50 (40) MPL-P

ಶ್ರೀ ನಾರಾಯಣಗೌಡ : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ. ದುರಸ್ತಿ ಏತಕ್ಕೆ ಆಗುತ್ತಿಲ್ಲ? ತಾವು ಇಲಾಖೆಗೆ ಮಂತ್ರಿಗಳಾಗಿ ಬಂದ ಮೇಲೆ ದುರಸ್ತಿ ಬಗ್ಗೆ ತುಂಬಾ ವಿಶ್ವಾಸವನ್ನು ಇಟ್ಟುಕೊಂಡಿದ್ದೆವು. 4(1) 6(1) ಆಗಿ . . .

ಶ್ರೀ ಕಾಗೋಡು ತಿಮ್ಮಪ್ಪ : ಹೇಳುತ್ತೇನೆ ಕುಳಿತುಕೊಳ್ಳಿ. ದುರಸ್ತಿ ಬಂತು, ಪೋಡಿ ಬಂತು ಇವೆಲ್ಲಾ ಆಗಬೇಕಾಗಿದೆ. ಎಲ್ಲಾ ನಿಂತು ಹೋಗಿವೆ. ಅವು ಎಷ್ಟು pending ಇದೆ ಎಂದು ನಾನು ಹೇಳಲಾಗುವುದಿಲ್ಲ. ಇಲ್ಲಿ ಹೇಳಿದರೆ ನಮಗೇ ನಾಚಿಕೆಯಾಗುತ್ತದೆ. ಕಾರಣವೇನೆಂದರೆ, ಒಬ್ಬ ಸರ್ವೇಯರ್ ಒಂದು ತಿಂಗಳಿಗೆ 23 ಪ್ರಕರಣವನ್ನು ಇತ್ಯರ್ಥಪಡಿಸುತ್ತಾನೆ. ಹೋಗಿ ಬಿಟ್ಟಿದೆ. ಹಾಗಾಗಿ ಸ್ವಲ್ಪ ನಿಧಾನಗತಿಯಾಗಿದೆ. ಅದನ್ನು ಬರುವ 6 ತಿಂಗಳಿನಲ್ಲಿ ಖಂಡಿತವಾಗಿ dispose ಮಾಡುವ ಕೆಲಸ ಮಾಡುತ್ತೇನೆ. ಇನ್ನೊಂದು ಸಾರಿ ನಾನು ಎಲ್ಲಾ ಜಿಲ್ಲೆಗಳಿಗೂ ಭೇಟಿ ಕೊಡುತ್ತೇನೆ. ಸವದಿಯವರು ಮೋಜಣಿ ವಿಚಾರ ಹೇಳಿದರು. ಇದರ ಬಗ್ಗೆ ನನಗೂ ಆಲೋಚನೆ ಇದೆ. re-survey ಆಗಿ ಎಷ್ಟೋ ವರ್ಷಗಳಾಗಿವೆ. ಹಿಂದೆ ಈ ಕುರಿತು ಚರ್ಚೆಯಾಗಿ ಅನೇಕ ಕಾರಣಗಳಿಂದ ಮಾಡಲಾಗದೆ ಮುಂದೆ ಹೋಯಿತು. ಇವತ್ತಿಗೂ ಅದು ನನ್ನ ತಲೆಯಲ್ಲಿದೆ. ಅದಕ್ಕೆ ಅನೇಕ ತೊಂದರೆಗಳಿವೆ, ಅಷ್ಟು ಸುಲಭವಲ್ಲ. ಇಡೀ ರಾಜ್ಯದ ಸರ್ವೇ ಮಾಡಬೇಕಾದರೆ ಸಿಬ್ಬಂದಿ ಎಷ್ಟು ಬೇಕು? ಅದಕ್ಕೆ ಬದ್ಧತೆಯಿರುವ ಅಧಿಕಾರಿಗಳೆಷ್ಟು ಬೇಕು? ಇದು ಅಗತ್ಯ ಇದೆ. ಆದಾಗ್ಯೂ ಕೂಡಾ ನಮ್ಮಲ್ಲಿ ಹಿಂದೆ ನಮ್ಮ ಸರ್ಕಾರದವರು ಪೋಡಿ ಮುಕ್ತ ಗ್ರಾಮ ಮಾಡಬೇಕೆಂದು ಜಾರಿಗೆ ತಂದಿದ್ದಾರೆ. ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ಗ್ರಾಮ ಮಾಡಿ. ಅದರಲ್ಲಿ ಏನಾಗಿತ್ತೆಂದರೆ ಹಳೆ ಸರ್ವೆ ನಂಬರ್ ಮಾತ್ರ ಪೋಡಿ ಮಾಡುವುದು ಇತ್ತು. ಹೊಸದಾಗಿ ಬಗರ್ ಹುಕುಂ ಜಮೀನು ಮಂಜೂರಾಗಿದ್ದರೆ ಹಿಸ್ಸೆ ಮಾಡಿಕೊಂಡಿದ್ದರೆ ಅಥವಾ ಇನಾಮ್ ಜಮೀನು ಮಂಜೂರಾಗಿದ್ದರೆ ಭೂ

ಸುಧಾರಣೆ ಕೊಟ್ಟರೆ ಮಂಜೂರಾಗಿದ್ದರೆ ಇವೆಲ್ಲಾ ಇರಲಿಲ್ಲ. ಈಗ ಹೊಸದಾಗಿ order ಹೊರಡಿಸಿ ಎಲ್ಲಾ ಸರ್ವೆ ನಂಬರ್ including Government land ಪ್ರತಿಯೊಂದನ್ನೂ ಮಾಡಬೇಕೆಂದು ಈ ವರ್ಷದಿಂದ ಒಂದೊಂದು ಗ್ರಾಮವನ್ನು ಪಕ್ಕಾ ಮಾಡಿದ್ದೇನೆ. ವಾಸ್ತವಿಕವಾಗಿ ನನ್ನ ತಲೆಯೊಳಗೆ ಪೋಡಿ ಮುಕ್ತ ರಾಜ್ಯ ಮಾಡಬೇಕೆಂದು ನನ್ನ ಇಚ್ಛೆ. ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಿಕೊಳ್ಳದಿದ್ದರೆ ಅದನ್ನು ಮಾಡಿ ಪ್ರಯೋಜನವಿಲ್ಲ. ನಿಮ್ಮ ಜೊತೆ ನಾನಿದ್ದೇನೆ. ನಿಮ್ಮ ಆಲೋಚನೆಯ ಬಗ್ಗೆ ನನಗೂ ಕಾಳಜಿಯಿದೆ. ಅದನ್ನು ಮಾಡಬೇಕಾದ ಅಗತ್ಯವಿದೆ. ಏಕೆಂದರೆ ನೂರು ವರ್ಷದ ಹಿಂದೆ ಆಗಿರುವಂತಹುದು. ಈಗ ಅನೇಕ ಬದಲಾವಣೆಯಾಗಿದೆ. ಇದನ್ನು ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಈ ಪೋಡಿ ಬಾಕಿ ಉಳಿದ ಕೆಲಸ ಏನಿದೆ, ಇದನ್ನು ನಿರೀಕ್ಷೆ ಪ್ರಕಾರ ಬೇಗನೆ ಮಾಡಿಕೊಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇನೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಜೊತೆಗೆ ಬರ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ಈ ಬರ ಪರಿಸ್ಥಿತಿಯಲ್ಲಿ ಕೈಗೊಂಡಿರುವ ಕ್ರಮದ ಬಗ್ಗೆ ಹಿಂದೆ ಈ ಸದನದಲ್ಲಿ ವಿವರವಾಗಿ ಹೇಳಿದ್ದೇನೆ. ಈಗಲೂ ಕೂಡಾ ಬೇಡಿಕೆಯ ಮೇಲೆ ಚರ್ಚೆ ಇರುವ ಕಾರಣದಿಂದ ಸಂಕ್ಷಿಪ್ತವಾಗಿ ಹೇಳುವುದಾದರೆ ನಾವು ಈ ಸಾರಿ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಿದ್ದೇವೆ. ಕುಡಿಯುವ ನೀರನ್ನು ಕೊಡುವ ವಿಚಾರದಲ್ಲಿ ಎಲ್ಲಾ ಜಿಲ್ಲೆಗೂ ಸಾಕಷ್ಟು ಹಣವನ್ನು ಕೊಟ್ಟಿದ್ದೇವೆ. ಇನ್ನೂ ಹಣವಿದೆ. ಎಲ್ಲಿ ಬೋರ್‌ವೆಲ್‌ನಲ್ಲಿ ನೀರು ಸಿಗುತ್ತಿಲ್ಲ. ಅಲ್ಲಿ ಟ್ಯಾಂಕರ್‌ನಲ್ಲಿ ನೀರು ಹೊಡೆಸುವ ಕೆಲಸ ಮಾಡುತ್ತಿದ್ದೇವೆ. ಅದಕ್ಕೆ ಬೇಕಾದಷ್ಟು ಹಣವನ್ನೂ ಕೂಡಾ ಕೊಟ್ಟಿದ್ದೇವೆ. ಕುಡಿಯುವ ನೀರಿಗೆ ಏನೂ ತೊಂದರೆಯಿಲ್ಲ.

ಶ್ರೀ ನಾರಾಯಣಗೌಡ :ಮಾನ್ಯ ಅಧ್ಯಕ್ಷರೆ, ಹಣ ಕೊಡುವುದು ತುಂಬಾ balance ಇದೆ. ಏಕೆಂದರೆ ಬೋರ್‌ವೆಲ್ಲನ್ನು ತಾವು ಕೊರೆಸಿ ಕೊಟ್ಟಿದ್ದೀರಿ. ಬೋರ್ ಕೊರೆಸುವುದಕ್ಕೆ ಎಲ್ಲಾ ಶಾಸಕರಿಗೂ ತಾವು permission ಕೊಟ್ಟಿದ್ದಿರಿ. ಬೋರ್‌ವೆಲ್ owner ಗಳು ಯಾರೂ ಮುಂದೆ ಬರುತ್ತಿಲ್ಲ.

ಶ್ರೀ ಎಂ.ಟಿ.ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಬಿಲ್ payment ಆಗಿಲ್ಲ. ಹಣ ಬಿಡುಗಡೆಯಾಗಿಲ್ಲ.

19-06-2017

ಶ್ರೀ ಕಾಗೋಡು ತಿಮ್ಮಪ್ಪ : ಕೃಷ್ಣಪ್ಪನವರೆ ಈಗ ಹಣ ಇದೆ. ಪ್ರತಿ ಜಿಲ್ಲಾಧಿಕಾರಿಗಳ ಕೈಯ್ಯಲ್ಲಿ ಸುಮಾರು 8 ರಿಂದ 10 ಕೋಟಿ ರೂಪಾಯಿ ಇದೆ.

ಶ್ರೀ ಬಿ. ಸುರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ಪೈಪ್‌ಲೈನ್‌ಗೆ ಹಣ ಕೊಟ್ಟಿದ್ದೀರಿ. ಬೋರ್ ಕೊರೆಯುವುದಕ್ಕೆ ಕೊಟ್ಟಿಲ್ಲ. ಪೈಪ್‌ಲೈನ್‌ಗೆ ಮತ್ತು ಪಂಪ್‌ಮೋಟಾರ್‌ಗೆ ಕೊಟ್ಟಿದ್ದೀರಿ. ಬೋರ್‌ವೆಲ್ drill ಮಾಡುವುದಕ್ಕೆ ಹಣ ಕೊಟ್ಟಿಲ್ಲ. ಒಂದು ಕೋಟಿ ರೂ. ಪಂಪ್ ಮೋಟಾರ್‌ಗೆ ಕೊಟ್ಟಿದ್ದೀರಿ. ಒಂದೊಂದು ತಾಲ್ಲೂಕಿನಲ್ಲಿ ಬೋರ್ ಡ್ರಿಲ್ ಮಾಡಿರುವುದು 3 ಕೋಟಿ ರೂ. ಇದೆ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ನಿಮಗೆ ಕೊಟ್ಟಂತಹ ದುಡ್ಡೂ ಇದೆ.

(ಗೊಂದಲ)

ಶ್ರೀ ಎಂ.ಟಿ.ಕೃಷ್ಣಪ್ಪ : ಇಲ್ಲ, ಬಿಡುಗಡೆ ಮಾಡಿಲ್ಲ.

(ಗೊಂದಲ)

ಶ್ರೀ ನಾರಾಯಣಗೌಡ : ಮಾನ್ಯ ಅಧ್ಯಕ್ಷರೆ, ನಮ್ಮ ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ 3 ಕೋಟಿ ರೂ. Balance ಇದೆ.

ಶ್ರೀ ಕೆ.ಎಂ.ತಿಮ್ಮರಾಯಪ್ಪ: ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಪಂಚಾಯಿತಿಗಳಿಂದ ಟ್ಯಾಂಕರ್‌ನಿಂದ ನೀರು ಹೊಡೆದಿರುವುದು ಇದುವರೆಗೂ payment ಆಗಿಲ್ಲ ಸರ್. 63 ಹಳ್ಳಿಗಳಿಗೆ ಈಗಲೂ ನಮ್ಮಲ್ಲಿ ಟ್ಯಾಂಕರ್‌ನಲ್ಲಿ ಕುಡಿಯುವ ನೀರನ್ನು ಹೊಡೆಯುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಒಂದು ಕೆಲಸ ಮಾಡಿ. ನೀವು task force ನಲ್ಲಿ ಸೇರಿಸಿ. ನಿಮ್ಮ ನಿಮ್ಮ ತಾಲ್ಲೂಕುಗಳಲ್ಲಿ ಎಷ್ಟು ಹಣ ಬಾಕಿಯಿದೆ ಎನ್ನುವುದನ್ನು ನಿರ್ಣಯ ಮಾಡಿ ಡಿ.ಸಿ ಯವರಿಗೆ ಕಳುಹಿಸಿ. ಅದನ್ನು ತೆಗೆದುಕೊಂಡು ಎಂಟೇ ದಿನದಲ್ಲಿ ನಾನು ಹಣ ಬಿಡುಗಡೆ ಮಾಡಿ ಕೊಡುತ್ತೇನೆ.

(ಗೊಂದಲ)

ಶ್ರೀ ನಾರಾಯಣಗೌಡ : ಮಾನ್ಯ ಅಧ್ಯಕ್ಷರೆ, Task force ನಲ್ಲಿ 40-40 ಲಕ್ಷ ಕೊಡುತ್ತಿದ್ದಾರೆ. Balance amount ಕೊಡುತ್ತಿಲ್ಲ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

19-06-2017

(ಗೊಂದಲ)

ಶ್ರೀ ಬಿ.ಆರ್.ಯಾವಗಲ್ : ಮಾನ್ಯ ಅಧ್ಯಕ್ಷರೆ, ಬರ ಪರಿಹಾರದ ಹಣ . . .

(ಗೊಂದಲ)

ಶ್ರೀ ಬಿ.ಸುರೇಶ್‌ಗೌಡ : ಗಮನ ಸೆಳೆಯುವ ಸೂಚನೆಯಲ್ಲಿ ಹಾಕಿದ್ದೇನೆ ನಾನು. 3 ಕ್ಕೋಟಿ ರೂ. ಹಣ ಬರಬೇಕು.

(ಗೊಂದಲ)

ಛೇರ್ಮನ್ : ಎಲ್ಲರೂ ಒಟ್ಟಿಗೆ ನಿಂತು ಮಾತನಾಡಿದರೆ ಯಾರಿಗೂ ಸ್ಪಷ್ಟತೆ ಬರುವುದಿಲ್ಲ. ಒಂದೇ ನಿಮಿಷ. ಈಗ ಕಂದಾಯ ಸಚಿವರು ಬರದ ಬಗ್ಗೆ ಅವರ ಬೇಡಿಕೆಗಳ ಮೇಲಿನ ಚರ್ಚೆ ವಿಷಯದಲ್ಲಿ ಏನು ಮಾತನಾಡುತ್ತಿದ್ದಾರೆ ಅವರು ಒಂದು ಸಾರಿ ಪೂರ್ಣ ಮುಗಿಸಲಿ. ಅದಾದ ಮೇಲೆ ಯಾವ್ಯಾವ ಸದಸ್ಯರು ನಿಮಗೇನು ಸಂಶಯ ಇದೆ, ಯಾವುದಕ್ಕೆ ಸ್ಪಷ್ಟೀಕರಣ ಬೇಕು ಅದನ್ನು ಕೇಳಬಹುದು. ಯಾವಗಲ್ ರವರೆ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರೆ ತಮ್ಮ ಉತ್ತರವನ್ನು ಪೂರ್ಣಗೊಳಿಸಿ.

ಶ್ರೀ ನಾರಾಯಣಗೌಡ : ಕುಡಿಯುವ ನೀರಿನ ವಿಷಯ ತುಂಬಾ ಅಗತ್ಯವಾದುದು. ದಯವಿಟ್ಟು ಅವಕಾಶ ಮಾಡಿಕೊಡಬೇಕು.

ಛೇರ್ಮನ್ : ಅವರು ಹೇಳುತ್ತಾರೆ. ಅವರು ಉತ್ತರ ಕೊಟ್ಟು ಮುಗಿಯಲಿ ನಂತರ ಕೇಳಿ. ಆಮೇಲೆ ಕೇಳಬಹುದು ಅವರು ಉತ್ತರ ಕೊಟ್ಟು ಮುಗಿಸಲಿ.

ಶ್ರೀ ನಾರಾಯಣಗೌಡ : ಅಲ್ಲ, ಉಳಿದಿರುವ ಹಣವನ್ನು ಕೊಡುವುದಕ್ಕೆ ಡಿ.ಸಿ ಯವರಿಗೆ ಹೇಳಿ ಅವಕಾಶ ಮಾಡಿ ಕೊಡಿ. ತುಂಬಾ ಸಮಸ್ಯೆ ಇದೆ. ಬೋರ್‌ವೆಲ್ ಕೊರೆಯುವುದಕ್ಕೆ ಒಬ್ಬರೂ ಮುಂದೆ ಬರುತ್ತಿಲ್ಲ.

(ಗೊಂದಲ)

ಶ್ರೀ ಬಿ.ಸುರೇಶ್‌ಗೌಡ : ಇದು ತುರ್ತಾಗಿ ಆಗಬೇಕಾಗಿರುವುದು. ಅವರು ಉತ್ತರದಲ್ಲಿ ಹಣ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದಕ್ಕೆ ನಾವು ಹಣ ಕೊಟ್ಟಿಲ್ಲ ಸ್ವಾಮಿ, ಕುಡಿಯುವುದಕ್ಕೆ ನೀರಿಲ್ಲ. ಟ್ಯಾಂಕರ್ ಮೂಲಕ ನೀರು ಕೊಡಲು ದಯವಿಟ್ಟು ಹಣ ಬಿಡುಗಡೆ ಮಾಡಿ ಎಂದು ಕೇಳುತ್ತಿದ್ದೇವೆ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

19-06-2017

(ಗೊಂದಲ)

ಛೇರ್ಮನ್ : ನೀವು ಹೇಳಿದ್ದು ಸಚಿವರ ಗಮನಕ್ಕೆ ಬಂದಿದೆ. ಹೀಗೆ ಎಲ್ಲರೂ ಒಟ್ಟಿಗೆ ಎದ್ದು ನಿಂತು ಕೇಳಿದರೆ ಏನಾಗುತ್ತದೆ? ಸಚಿವರು ಪೂರ್ಣ ಉತ್ತರ ಕೊಡಲಿ.

ಶ್ರೀ ನಾರಾಯಣಗೌಡ : ಅಲ್ಲಲ್ಲ, ಸಚಿವರ ಗಮನಕ್ಕೆ ಬರಲಿ ಎಂದು ನಾವು ಹೇಳುತ್ತಿರುವುದು.

ಛೇರ್ಮನ್ : ಕೇಳಿ. ಆಮೇಲೆ ಮತ್ತೆ ಕೇಳುವುದಕ್ಕೆ ಅವಕಾಶವಿದೆ. ಈಗ ಅವರು ಉತ್ತರ ಮುಗಿಸಲಿ.

ಶ್ರೀ ನಾರಾಯಣಗೌಡ : ನಮ್ಮ ತಾಲ್ಲೂಕಿನಲ್ಲಿಯೇ 3 ಕೋಟಿ ರೂ. ಹಣ ಇದೆ. ಒಬ್ಬರೂ ಬೋರ್ ಕೊರೆಯುವುದಕ್ಕೆ ಮುಂದೆ ಬರುತ್ತಿಲ್ಲ. ದಯವಿಟ್ಟು ಅವಕಾಶ ಮಾಡುವುದಕ್ಕೆ ಡಿ.ಸಿ. ಯವರಿಗೆ ಹೇಳಿ. ಅವರಿಗೆ payment ಮಾಡಲು ಹೇಳಿ ದಯವಿಟ್ಟು.

ಶ್ರೀ ಕಾಗೋಡು ತಿಮ್ಮಪ್ಪ : ಟ್ಯಾಂಕರ್‌ನಿಂದ ಹೊಡೆದಂತಹ ನೀರಿಗೆ ಹಣ ಬಾರದೆ ಹೋಗಿದ್ದರೆ ಅದನ್ನು ತಕ್ಷಣ ಬಿಡುಗಡೆ ಮಾಡಿಸುತ್ತೇನೆ. ನೀವೇನೂ ಮಾಡುವುದು ಬೇಡ. ನಿಮ್ಮ ಸಿ.ಇ.ಓ ಗಳಿಗೆ ಹೇಳಿ ತಕ್ಷಣ ನಿಮ್ಮ ನಿಮ್ಮ ತಾಲ್ಲೂಕಿನ ಬಿಲ್ಲನ್ನು ತಕ್ಷಣ intimate ಮಾಡುವುದಕ್ಕೆ ಹೇಳುತ್ತೇನೆ.

ಶ್ರೀ ಬಿ.ಸುರೇಶ್‌ಗೌಡ : ಬೋರ್‌ವೆಲ್ ಡ್ರಿಲ್ ಮಾಡಿರುವುದನ್ನು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮ task force ತೀರ್ಮಾನದ ಪ್ರಕಾರ ನಿಮಗೆ ಕೊಟ್ಟ ದುಡ್ಡಿನಲ್ಲಿ ಮಾಡಿ ಕಡಿಮೆಯಾಗಿದ್ದರೆ ಇನ್ನೊಂದು ಸ್ವಲ್ಪ ದುಡ್ಡನ್ನು ಕೊಡುತ್ತೇವೆ.

ಶ್ರೀ ಬಿ.ಸುರೇಶ್‌ಗೌಡ : ಅದನ್ನೇ ಹೇಳುತ್ತಿರುವುದು ಸರ್ ಸ್ವಲ್ಪ ಹಣ ಕೊಡಿ ಎಂದು. ಬೋರ್‌ವೆಲ್ ಡ್ರಿಲ್ ಮಾಡುತ್ತಿಲ್ಲ ಈಗ.

(ಗೊಂದಲ)

ಶ್ರೀ ಬಿ.ಆರ್.ಯಾವಗಲ್ : ಬರ ಪರಿಹಾರ . . . .

(ಗೊಂದಲ)

ಶ್ರೀ ನಾರಾಯಣಗೌಡ : Task force ನಲ್ಲಿ ಖಾಲಿ 40-40 ಲಕ್ಷ ರೂ. 50 ಲಕ್ಷ ರೂ. ಕೊಡುತ್ತಿದ್ದಾರೆ. ಅದನ್ನು ಜಾಸ್ತಿ ಪೈಪ್‌ಲೈನ್‌ಗೆ ಹಾಕುತ್ತಿದ್ದಾರೆ. ಕೊರೆದಿರುವ ಬೋರಿಗೆ ಹಣ ಕೊಡುತ್ತಿಲ್ಲ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಬಿ.ಆರ್.ಯಾವಗಲ್ : ಬರ ಪರಿಹಾರದ ಹಣ ಆಧಾರ್ ಕಾರ್ಡ್‌ಗೆ ಲಿಂಕ್ ಇಲ್ಲದೆ ಬ್ಯಾಂಕ್‌ಗಳಲ್ಲಿ ಜಮಾ ಆಗುತ್ತಿಲ್ಲ. ಅವರಿಗೆ ಚೆಕ್ ಬೇಕಾದರೆ ಕೊಡೋಣ ಎಂದು ತಾವು ಹಿಂದೆ ಈ ಸದನದಲ್ಲಿ ಹೇಳಿದ್ದಿರಿ. ಅದನ್ನು ಸ್ವಲ್ಪ ಬೇಗನೆ ಮಾಡಿಸಿದರೆ ಒಳ್ಳೆಯದು.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಬರ ಪರಿಹಾರಕ್ಕೆ ಕೇಂದ್ರಸರ್ಕಾರದಿಂದ ಬಂದ ಹಣ ಏನಿದೆಯಲ್ಲ, ಈಗಾಗಲೇ ಸುಮಾರು 22,70,000 ರೈತರಿಗೆ ಹಣ ಬಿಡುಗಡೆ ಮಾಡಲಾಗಿದೆ. ಇನ್ನು ಕೇವಲ ಸುಮಾರು 77,000 ಜನರದು ಬಾಕಿಯಿದೆ. ಯಾವಗಲ್ ಹೇಳಿದ ರೀತಿಯಲ್ಲಿ ಆ ಲಿಂಕ್ ಹೊಂದಿಸುತ್ತಿದ್ದೇವೆ. ಇನ್ನು 8-10 ದಿನಗಳಲ್ಲಿ ಆಗದೆ ಹೋದರೆ ಆ ಹಣವನ್ನು ನಾವು ಜಿಲ್ಲಾಧಿಕಾರಿಗಳಿಗೆ ಕಳುಹಿಸಿ ಜಿಲ್ಲಾಧಿಕಾರಿಗಳ ಮುಖಾಂತರ ಫಲಾನುಭವಿಗಳಿಗೆ ನೇರವಾಗಿ ಚೆಕ್ ಮುಖಾಂತರ ಕೊಡುವ ಕೆಲಸವನ್ನು ಮಾಡುತ್ತೇವೆ. ಬಹಳಷ್ಟು ದಿವಸ ಇಟ್ಟುಕೊಳ್ಳುವುದಕ್ಕೆ ಹೋಗುವುದಿಲ್ಲ.

ಶ್ರೀ ಕೆ.ಎಂ.ತಿಮ್ಮರಾಯಪ್ಪ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ತುಂಬಾ ತಾರತಮ್ಯವಾಗಿದೆ. ಸರಿಯಾದ ರೀತಿಯಲ್ಲಿ ಬರ ಪರಿಹಾರ ಹಣ ವಿತರಣೆಯಾಗಿಲ್ಲ. ರಾಜ್ಯಮಟ್ಟದಿಂದ ಹಣ ವಿತರಣೆ ಮಾಡುವ ವ್ಯವಸ್ಥೆ ಏನು ಮಾಡಿದ್ದಾರೆ ಅದು ಹಳ್ಳಿಗಳಲ್ಲಿ ಸರಿಯಾದ ರೀತಿಯಲ್ಲಿ ವಿತರಣೆಯಾಗುತ್ತಿಲ್ಲ. 10 ಎಕರೆ ಇರುವವನಿಗೆ 2 ಸಾವಿರ ರೂ. ಬಂದಿದೆ. 2 ಎಕರೆ ಇರುವವನಿಗೆ 14 ಸಾವಿರ ರೂ. ಹೋಗಿದೆ. ಈ ರೀತಿ ಬಹಳಷ್ಟು ವ್ಯತ್ಯಾಸಗಳಾಗಿವೆ. ಅದನ್ನು ಸರಿಪಡಿಸುವ ಕೆಲಸ ಇದುವರೆಗೆ ಆಗಿಲ್ಲ. ಅದು ಸರಿಯಾದ ರೀತಿಯಲ್ಲಿ ಎಲ್ಲರಿಗೂ ಹಂಚಿಕೆಯಾಗುವ ವ್ಯವಸ್ಥೆ ಮಾಡಿಸಿ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ತಾವು ಬರ ಪರಿಹಾರದ ಮೀಟಿಂಗ್‌ಗೆ ಬಂದಾಗ tail end ರೈತರಿಗೆ ಕೆನಾಲ್ ಕೊನೆ ಭಾಗದಲ್ಲಿದ್ದವರಿಗೂ ಪರಿಹಾರ ಹಣ ಕೊಡಬೇಕೆಂದು ಹೇಳಿದ್ದಿರಿ. ನಮಗ್ಯಾರಿಗೂ ನೀರು ಬಂದಿಲ್ಲ ಸರ್. ತಾವು ರಾಯಚೂರಿಗೆ ಬಂದಾಗ ನಾವು ಹೇಳಿದ್ದೇವೆ. ತಾವು ಹೇಳಿದ ಮೇಲೆ ಸರ್ವೆ ಮಾಡಿ ತಯಾರು ಇಟ್ಟಿದ್ದಾರೆ. ಅವರು ತಾವು ಕಳುಹಿಸಿ ಕೊಡಿ ಎಂದರೆ ಕಳುಹಿಸಿಕೊಡುತ್ತೇವೆ ಎನ್ನುತ್ತಾರೆ. ತಾವು ದಯಮಾಡಿ ಆ tail end ರೈತರಿಗೂ ಬೆಳೆ ಪರಿಹಾರ ಬರುವಂತೆ ಮಾಡಬೇಕು. ಏಕೆಂದರೆ ಮಳೆ ಇಲ್ಲ. ಕೆನಾಲ್ ನೀರು ಇಲ್ಲ. ಎರಡೂ

19-06-2017

ಬಂದಿಲ್ಲ ಸರ್ ನಮಗೆ. ದಯಮಾಡಿ ತಾವು ಹೇಳಿದರೆ ಕಳುಹಿಸಿಕೊಡುತ್ತಾರಂತೆ. ತಾವು ಒಂದು ಆದೇಶ ಕೊಡಿ. ಸರ್ವೆ ಮಾಡಿ ರೆಡಿ ಇಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ನೀರಾವರಿ ಪ್ರದೇಶಕ್ಕೆ ಬಿಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳಿದ್ದನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಬೇಕಾಗುತ್ತದೆ. ಏಕೆಂದರೆ ಇದು ನಮ್ಮ ಕೇಂದ್ರಸರ್ಕಾರದ norms ಗೆ ಕೂಡಾ ಬರುವುದಿಲ್ಲ. ಆದುದರಿಂದ ಅದನ್ನು ವಿಶೇಷ ಪ್ರಕರಣ ಎಂದು ನಾವು ಪರಿಗಣಿಸಬೇಕಾದ ಅಗತ್ಯವಿದೆ ನೋಡುತ್ತೇವೆ.

ಶ್ರೀ ಕೆ.ಎಂ.ತಿಮ್ಮರಾಯಪ್ಪ : ಹಣ ಹಂಚಿಕೆ ಮಾಡುವ ವಿಚಾರವನ್ನು ಹೇಳಿ ಸರ್. ತುಂಬಾ ತಾರತಮ್ಯವಾಗಿದೆ. ಏಕೆ ಆ ರೀತಿ ಆಗಿದೆ? ಅದನ್ನು ಸರಿಪಡಿಸುವ ವಿಧಾನ ಹೇಗೆ? ಹಳ್ಳಿಗಳಲ್ಲಿ ಅದೇ ಒಂದು ದೊಡ್ಡ ಸಮಸ್ಯೆಯಾಗಿದೆ. ದಯವಿಟ್ಟು ಅದನ್ನು ಸರಿಪಡಿಸುವ ಕೆಲಸ ಮಾಡಿ. 2 ಎಕರೆ ಇರುವವರಿಗೆ 14 ಸಾವಿರ ರೂ. ಹೋಗಿದೆ. 10 ಎಕರೆ ಇರುವವನಿಗೆ 2 ಸಾವಿರ ರೂ. ಬಂದಿದೆ. ಈ ರೀತಿಯ ವ್ಯತ್ಯಾಸಗಳು ಬೇಕಾದಷ್ಟು ಆಗಿವೆ. ಒಂದೆರಡು ಪ್ರಕರಣಗಳಲ್ಲ. ನೂರಾರು ಪ್ರಕರಣಗಳು ಈ ರೀತಿ ನಮ್ಮ ತಾಲ್ಲೂಕಿನಲ್ಲಿ ಆಗಿವೆ.

ಶ್ರೀ ಕಾಗೋಡು ತಿಮ್ಮಪ್ಪ : ನೂರಾರು ಪ್ರಕರಣ ಎಂದು ಸುಮ್ಮನೆ ಕತೆ ಹೇಳಬೇಡಿ. ಹೇಳುವವರೆಗೆ ಕೇಳಿ. ನಾನು ಬರಪೀಡಿತ ತಾಲ್ಲೂಕುಗಳು ಯಾವುವು ಇವೆ, ಆ ತಾಲ್ಲೂಕುಗಳಲ್ಲಿ ಎಷ್ಟು ಜನ ರೈತರಿಗೆ ನಾವು ಕೊಟ್ಟಿದ್ದೇವೆ ಎನ್ನುವ list ಇದೆ. ಅದನ್ನು ನಾನು ನಿಮಗೆ ಕಳುಹಿಸಿಕೊಡುತ್ತೇನೆ.

(ಮುಂದು. . .)

19/06/2017/6.00/41/BR/VG

ಶ್ರೀ ಕಾಗೋಡು ತಿಮ್ಮಪ್ಪ: ಸುಮ್ಮನೆ ನೂರಾರು, ನೂರಾರು ಎಂದು ಕಥೆ ಹೇಳಬೇಡಿ, ಹೇಳುವವರೆವಿಗೂ ಕೇಳಿ. ನಾನು ಬರಪೀಡಿತ ತಾಲ್ಲೂಕುಗಳು ಯಾವುದಿವೆ, ಆ ತಾಲ್ಲೂಕುಗಳಲ್ಲಿ ಎಷ್ಟು ಜನ ರೈತರಿಗೆ ನಾವು ಕೊಟ್ಟಿದ್ದೇವೆ ಎನ್ನುವ list ಇದೆ. ಅದನ್ನು ನಿಮಗೆ ಕಳುಹಿಸಿಕೊಡುತ್ತೇನೆ.

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಕಸ್ಮಾತ್ ಆಗಿ ಯಾವುದಾದರೂ ತಪ್ಪಿ ಹೋಗಿದ್ದರೆ ನೀವು ಜಿಲ್ಲಾಧಿಕಾರಿಗಳಿಗೆ ತಹಶೀಲ್ದಾರ್ ಮುಖಾಂತರ ತಿಳಿಸಿ, ಬಿಟ್ಟು ಹೋಗಿದ್ದರೆ, ಅವರಿಗೂ ಕೊಡಿಸುವಂಥ ಕೆಲಸ ಮಾಡೋಣ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಲಿಸ್ಟ್ ಪ್ರಶ್ನೆ ಅಲ್ಲ, ಲಿಸ್ಟ್ ಸರಿಯಾಗಿದೆ. ಆಧಾರ್ ಲಿಂಕ್ ಮಾಡಿರುವುದು ಕೆಲವು ಅಕೌಂಟ್‌ಗಳಿಗೆ ತಲುಪಿಲ್ಲ. ಅದರ ಸಲುವಾಗಿ ಪೆಂಡಿಂಗ್ ಇವೆ. ಕೆಲವು ಮಂದಿಗೆ ಹೆಚ್ಚು ಕಡಿಮೆಯಾದದ್ದೂ ಕೂಡ ಇದೆ. ಅದಕ್ಕಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು, ತಹಶೀಲ್ದಾರ್‌ಗಳನ್ನು ಕರೆದರೆ ಸರಿ ಮಾಡುವ ಪ್ರಯತ್ನವನ್ನು ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ಖಂಡಿತ ಅದನ್ನು ಮಾಡೋಣ.

ಶ್ರೀ ಸಾ.ರಾ.ಮಹೇಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮೈಸೂರಿನಲ್ಲಿ KDP ಸಭೆ ಮಾಡಿದಾಗ ಏನು tailendನಲ್ಲಿ ಭತ್ತ ಬೆಳೆದು ಕೆಲವು ನಾಶವಾಗಿವೆ, ಅವಕ್ಕೂ ಕೊಡುತ್ತೇವೆ. ಹಿಂದೆ, ಎಸ್.ಎಂ.ಕೃಷ್ಣಾರವರ ಕಾಲದಲ್ಲಿ 32.00 ಕೋಟಿ ರೂಪಾಯಿಗಳನ್ನು ಕಾವೇರಿ ಕಣಿವೆಗೆ ಕೊಟ್ಟಿದ್ದರು, ಅದೇ ರೀತಿ ಮೈಸೂರು, ಮಂಡ್ಯ ಜಿಲ್ಲೆಗಳಿಗೂ ವಿಶೇಷ ಹಣವನ್ನು ಕೊಡುತ್ತೇವೆಂದು ಒಪ್ಪಿಕೊಂಡಿದ್ದರು. ಆದರೆ, ಅದರ ಬಗ್ಗೆ ಯಾವುದೇ ರೀತಿ ಕ್ರಮ ಆಗಿಲ್ಲ. ಇದರ ಬಗ್ಗೆ ಬೆಳಕು ಚೆಲ್ಲಬೇಕೆಂದು ಕೋರುತ್ತೇನೆ.

ಛೇರ್ಮನ್: ಮಹೇಶ್‌ರವರೆ, ಅದನ್ನು ವಿಶೇಷ ಪ್ರಕರಣವೆಂದು ಪರಿಗಣಿಸುತ್ತೇನೆಂದು ಹೇಳಿದರಲ್ಲಾ. ಇಲ್ಲೇ ಈಗ ಹೇಳಿದರು.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, Houseನ ದೃಷ್ಟಿಗೆ ಒಂದು information ಕೊಡುತ್ತೇನೆ, ಹೀಗಿದೆ. ಇದುವರೆವಿಗೂ 22,99,757 ಜನ ರೈತರಿಗೆ ಕೊಟ್ಟಿದ್ದೇವೆ. ಇದು 1,530.37 ಕೋಟಿ ರೂ.ಗಳು. ನಿಮಗೆ ಇನ್ನೂ ಹೇಳುವುದಾದರೆ, ಬೆಳಗಾವಿ ಜಿಲ್ಲೆಗೆ 46.00 ಕೋಟಿ ರೂ. ಬಾಗಲಕೋಟೆ ಜಿಲ್ಲೆಗೆ 63.00 ಕೋಟಿ ರೂ. . . . .

ಛೇರ್ಮನ್: ಆ ವಿವರಗಳೆಲ್ಲ ಬೇಡ ಬಿಡಿ.

ಶ್ರೀ ಕಾಗೋಡು ತಿಮ್ಮಪ್ಪ: ಅದರಿಂದ ಯಾವುದಾದರೂ ಬಿಟ್ಟು ಹೋದರೆ, ಈ ಬದಲಾವಣೆ ಏಕೆ ತರಬೇಕಾಯಿತು ಎಂದರೆ ಹೋದ ವರ್ಷ ಕೊನೆಗಳಿಗೆಯವರೆವಿಗೂ ಕೆಲವರಿಗೆ ದುಡ್ಡು ಕೊಡಲು

ಆಗಲಿಲ್ಲ. ಈ ಕಾರಣದಿಂದ ಹೊಸ ಪದ್ಧತಿಯನ್ನು ಈ ಸಾರಿ ತಂದಿದ್ದರಿಂದ ಇಷ್ಟು ಜನರಿಗೆ ನೇರವಾಗಿ ಕೊಡಲು ಸಾಧ್ಯವಾಯಿತು. ಏನೊಂದು ಕಂಪ್ಲೇಂಟ್ ಇಲ್ಲ. ಆಧಾರ್ ಲಿಂಕ್ ಏಕೆ ಆಗುತ್ತಿಲ್ಲ ಎಂದರೆ, ಅಪ್ಪನ ಹೆಸರಿಗೆ ಖಾತೆ ಇರುತ್ತದೆ, ಸತ್ತು ಹೋಗಿರುತ್ತಾನೆ. ಮಗ ಅರ್ಜಿ ಕೊಟ್ಟಿದ್ದಾನೆ, ಈಗ ಆಧಾರ್ ಹೋಲುತ್ತಿಲ್ಲ ಅಥವಾ ಊರು ಬಿಟ್ಟು ಹೋಗಿದ್ದಾನೆ. ಹೀಗೆ ಈ ಗೊಂದಲಗಳಿಂದ ಆಗಿದೆ ಏನ: ಉಳಿದಿದ್ದು ಎಷ್ಟಪ್ಪಾ ಎಂದರೆ ನಮ್ಮದು ಹೆಚ್ಚು ಕಡಿಮೆ 77,000 ಚಿಲ್ಲರೆ ಇದೆ. ಅದನ್ನು ಈ ತಿಂಗಳ ಒಳಗಾಗಿ ಎಲ್ಲವನ್ನೂ ಕಂಪ್ಲೀಟ್ ಮಾಡುತ್ತೇವೆ. ನಿಮ್ಮ ತಾಲ್ಲೂಕುಗಳಲ್ಲಿ ಬಿಟ್ಟು ಹೋಗಿದ್ದರೆ, ಅದನ್ನು ದಯವಿಟ್ಟು ತಹಶೀಲ್ದಾರ್ ಮುಖಾಂತರ Task Forceನಲ್ಲಿ meeting ಮಾಡಿ ಕಳುಹಿಸಿಕೊಟ್ಟರೆ, ಬಿಟ್ಟು ಹೋದವರದ್ದೂ ಕೊಡುವಂಥ ಕೆಲಸ ಮಾಡುತ್ತೇವೆ. ಒಟ್ಟಿನಲ್ಲಿ ಈ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಿದ್ದೇವೆ ಎನ್ನುವ ಮಾತನ್ನು ತಮ್ಮ ಎದುರಿಗೆ ನಾನು ಹಂಚಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಇದರ ಜೊತೆಗೆ, ಈಗ ನಮ್ಮ ಮುಂಗಾರಿಗೆ ಕೇಂದ್ರ ಸರ್ಕಾರದಿಂದ ಇನ್ನೂ ಹಣ ಬಂದಿಲ್ಲ. ನಾವು ಈಗ ಹೋಗಿ ಬರಬೇಕೆಂದು ಗೃಹ ಸಚಿವರಿಗೆ ಸಮಯವನ್ನು ಕೇಳುತ್ತಿದ್ದೇವೆ. ಅವರು ಸಮಯ ಕೊಟ್ಟ ಕೂಡಲೇ ಕೇಂದ್ರಕ್ಕೆ ಹೋಗಿ ಇನ್ನೊಂದು ಬಾರಿ ಅವರ ಮನವರಿಕೆ ಮಾಡಿ ದುಡ್ಡನ್ನು ಬಿಡುಗಡೆ ಮಾಡುವಂಥ ಕೆಲಸವನ್ನು ಮಾಡಿ, ಇವತ್ತು ಅದನ್ನು ಮುಂಗಾರಿಗೂ, ಹಿಂಗಾರಿಗೂ ಹಣವನ್ನು ಕೊಡುವಂಥ ಕೆಲಸವನ್ನು ಮಾಡುತ್ತೇವೆ. ಹೋದ ಸಾರಿ ನಮ್ಮ ಗುಲ್ಬರ್ಗಾ, ಬೀದರ್ ಆ ಭಾಗಗಳಲ್ಲಿ ಆಕಸ್ಮಿಕವಾಗಿ ಮಳೆ ಬಂತು. ಅದಕ್ಕೂ ಸಹ ಕೇಂದ್ರ ಸರ್ಕಾರದಿಂದ ರೂ.170 ಕೋಟಿ ಬಂದು ಅದನ್ನೂ ಸಹ ಎಲ್ಲಾ ಕಡೆ ಬಿಡುಗಡೆ ಮಾಡಿ ಹಣ ಪಾವತಿಯಾಗಿದೆ. ಹೀಗಾಗಿ ಈ ಬರ ಪರಿಸ್ಥಿತಿಯಲ್ಲಿ ಮತ್ತು ಮಳೆ ಜಾಸ್ತಿಯಾಗಿ ಬೆಳೆ ನಷ್ಟವಾಗಿತ್ತೋ ಅವರಿಗೆ ಪರಿಹಾರ ಕೊಡುವ ವಿಚಾರದಲ್ಲಿ ಸರ್ಕಾರ ಕ್ರಮ ಕೈಗೊಂಡಿದೆ ಮತ್ತು ಕೇಂದ್ರ ಸರ್ಕಾರವೂ ಸಹ ಮುಂಗಾರಿಗೆ ನಮ್ಮ ನೆರವಿಗೆ ಬಂದಿದೆ. ನಾವು 4,000 ಚಿಲ್ಲರೆ ಕೋಟಿ ಕೇಳಿದ್ದೆವು. ಅವರು 1,600 ಚಿಲ್ಲರೆ ಕೋಟಿ ಕೊಟ್ಟಿದ್ದಾರೆ. ಹಿಂಗಾರಿಗೂ ನಾವು ಕೇಳಿದ ಮೊತ್ತ ಕಡಿಮೆಯಾಗಿದೆ. ಅವರದೇ ಆದ norms ಇರುತ್ತವೆ. ಆದಗ್ಯೂ ಕೇಂದ್ರ ಸರ್ಕಾರ ನಮಗೆ ನೆರವಿಗೆ ಬಂದಿದೆ. ನಾನು ಈ ಸದನದ ಮುಖಾಂತರ ಕೃತಜ್ಞತೆಯನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತೇನೆ. ಇಷ್ಟು ಮಾತನ್ನು ನಾನು ಈ

ಸಂದರ್ಭದಲ್ಲಿ ಹೇಳುತ್ತಾ ಈ ವರ್ಷದಲ್ಲಿ ಮಳೆ ಸಕಾಲದಲ್ಲಿ ಬರುತ್ತದೆ ಎನ್ನುವ ನಿರೀಕ್ಷೆ ಇಟ್ಟುಕೊಂಡಿದ್ದೇವೆ. ಈಗ ಬಿತ್ತನೆ ಶುರುವಾಗಿದೆ. ಇದನ್ನು ನಾವು ನಿರೀಕ್ಷೆ ಮಾಡುತ್ತಿದ್ದೇವೆ. ಆದುದರಿಂದ, ಹಿಂದಿನ ವರ್ಷ ಬಂದಂಥ ಪರಿಸ್ಥಿತಿ ಈ ವರ್ಷ ಬರುವುದಿಲ್ಲವೆಂದು ನಂಬಿಕೆ ಇಟ್ಟುಕೊಂಡಿದ್ದೇವೆ. ನಮ್ಮೆಲ್ಲರ ನಂಬಿಕೆಯಿಂದ ಈ ವರ್ಷ ಹವಾಮಾನ ಪರಿಸ್ಥಿತಿ ನಮ್ಮ ಕರ್ನಾಟಕ ರಾಜ್ಯಕ್ಕೆ ಅನುಕೂಲವಾಗುತ್ತದೆ ಎಂದು ನಂಬಿಕೆ ಮಾತನ್ನು ಈ ಸಂದರ್ಭದಲ್ಲಿ ಇಟ್ಟುಕೊಂಡಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಮಾತನಾಡುವ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ ಮಾಡಿದ್ದೆ ಮತ್ತು ವಿನಂತಿಯನ್ನೂ ಮಾಡಿದ್ದೆ. ಈ ನೀರಾವರಿ ಯೋಜನೆಗಳ command areaದಲ್ಲಿ ಕಳೆದ ವರ್ಷ ಮುಂಗಾರು ಹಂಗಾಮಿಗೂ ನೀರು ಕೊಡಲು ಆಗಿಲ್ಲ, ಹಿಂಗಾರು ಹಂಗಾಮಿಗೂ ನೀರು ಕೊಡಲು ಆಗಿಲ್ಲ. ಮಳೆ ಅಭಾವದಿಂದ ಜಲಾಶಯಗಳು ತುಂಬಲಿಲ್ಲ. ಘಟಪ್ರಭ, ಮಲಪ್ರಭ, ಹೇಮಾವತಿ, ಹಾರಂಗಿ ಎಲ್ಲಾ project ಗಳಲ್ಲೂ ಕೂಡ notified command area ಕ್ಕೆ ನೀರು ಕೊಡದೇ ಹೋದುದರಿಂದ ರೈತರಿಗೆ ನಷ್ಟವಾಗಿದೆ.

ಛೇರ್ಮನ್: ಆ ಪರಿಹಾರವನ್ನು ವಿಶೇಷ ಪ್ರಕರಣವೆಂದು ಪರಿಗಣಿಸುತ್ತೇನೆಂದು ಹೇಳಿದರು.

ಶ್ರೀ ಗೋವಿಂದ ಎಂ. ಕಾರಜೋಳ: ಅದನ್ನು ನಾನು ಕೇಳಿಸಿಕೊಂಡಿದ್ದೇನೆ. ಆ command area ದ ರೈತರಿಗೂ ಕೂಡ ಬೆಳೆ ಪರಿಹಾರ ಕೊಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡಿದ್ದೆ. ಅದಕ್ಕೆ ನಾನು ಸನ್ಮಾನ್ಯ ಕಂದಾಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ, ಈ ನೀರಾವರಿ ಯೋಜನೆಗಳಿಗೆ command area ದಲ್ಲಿ ಪರಿಹಾರ ಸಿಕ್ಕಿಲ್ಲ, ಅವರ ನೆರವಿಗೂ ಬರಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರಾದ ಶ್ರೀ ಕೆ.ಬಿ.ಕೋಳಿವಾಡರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

19-06-2017

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈಗ ಪ್ರಸ್ತಾಪ ಮಾಡಿರುವುದನ್ನು ವಿಶೇಷ ಪ್ರಕರಣವಾಗಿ ನಮ್ಮ Cabinet Sub-Committee ಯಲ್ಲಿ ಇಟ್ಟು ಚರ್ಚೆ ಮಾಡಿ ವರದಿಯನ್ನು ತರಿಸಿಕೊಂಡು ತೀರ್ಮಾನ ಮಾಡುತ್ತೇವೆ. ಅದೇ ರೀತಿ ತೆಂಗಿನ ಮರ, ಅಡಿಕೆ ಮರ ಸತ್ತು ಹೋಗಿವೆಯೆಂದು ಮಾನ್ಯ ಸದಸ್ಯರು ಈ ಸದನದಲ್ಲಿ ಚರ್ಚೆ ಮಾಡಿ ನಮ್ಮ ಗಮನಕ್ಕೆ ತಂದಿದ್ದಾರೆ. ಈಗಾಗಲೇ ನಾವು Cabinet Sub-committee ಯಲ್ಲಿ ಬರ ಪರಿಹಾರದ ಬಗ್ಗೆ ಚರ್ಚೆ ಮಾಡಿ ವರದಿಯನ್ನು ಕೇಳಿದ್ದೇವೆ. ಆ ವರದಿ ಬಂದ ಮೇಲೆ ಯಾವ ರೀತಿ ಪರಿಹಾರ ಕೊಡಬೇಕು ಎನ್ನುವ ಬಗ್ಗೆ ಒಂದು ತೀರ್ಮಾನಕ್ಕೆ ಬರುತ್ತೇವೆ ಎನ್ನುವ ಮಾತನ್ನೂ ಸಹ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇಷ್ಟು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಾ ನಮ್ಮ ಕಂದಾಯ ಇಲಾಖೆಯ ಬೇಡಿಕೆಗಳನ್ನು ತಾವು ಮಾನ್ಯ ಮಾಡಿಕೊಡಬೇಕೆಂದು ಹೇಳಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ.ಬಿ.ಪ್ರಸನ್ನಕುಮಾರ್: ನಗರ ಪ್ರದೇಶಗಳಲ್ಲಿ ಸುಮಾರು 40 ವರ್ಷಗಳಿಂದ ವಾಸವಿರುವ ಸ್ಲಂ ನಿವಾಸಿಗಳಿಗೆ ಹಕ್ಕು ಪತ್ರ ಕೊಡಿಸುವ ಬಗ್ಗೆ ನೀವು ಈಗಾಗಲೇ ಕಾರ್ಯರೂಪಕ್ಕೆ ತರುತ್ತಿದ್ದೀರಿ, ಅದು ಮತ್ತೆ ನಿಂತಿದೆ.

ಶ್ರೀ ಕಾಗೋಡು ತಿಮ್ಮಪ್ಪ: ಕೊಳ್ಳಬೆ ಪ್ರದೇಶ ಇರಬಹುದು, ಎಲ್ಲೇ ಇರಬಹದು, ಸರ್ಕಾರಿ ಜಾಗದಲ್ಲಿ ಮಂಜೂರಾತಿ ಇಲ್ಲದೇ ಮನೆ ಕಟ್ಟಿಕೊಂಡವರಿಗೆ 94 ಸಿಸಿ ಪ್ರಕಾರ ಕೊಡುವುದಕ್ಕೆ ಅವಕಾಶ ಇದೆ. ನಿಮ್ಮ ಶಿವಮೊಗ್ಗದ್ದು ಈಗಾಗಲೇ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿದೆ. ಅದು ಏನಾಗಿದೆ ಎಂದರೆ ಮಧ್ಯದಲ್ಲಿ ಒಂದು ಕೆರೆ ಸೇರಿಕೊಂಡಿದೆ. ನಾವು ಅವರಿಗೆ ಹಕ್ಕು ಪತ್ರ ಕೊಡಬೇಕಾದರೆ, ಆ ಕೆರೆಯನ್ನು ಬಿಡುಗಡೆ ಮಾಡಬೇಕು. ಅದಕ್ಕೆ ಒಂದು ತಿದ್ದುಪಡಿಯಾಗಬೇಕಾಗಿದೆ. ಕಂದಾಯ ಕಾನೂನು section 58ಕ್ಕೆ ತಿದ್ದುಪಡಿಯಾಗಿ ಆದ ಕೂಡಲೇ ಅದು ಕೊಡಲು ಬರುತ್ತದೆ, ಅದನ್ನೂ ಮಾಡೋಣ.

ಶ್ರೀ ಕೆ.ಬಿ.ಪ್ರಸನ್ನಕುಮಾರ್: ಆ ಜಾಗದಲ್ಲಿ ಕೆರೆ ಇಲ್ಲ. ಏನು ಕೆರೆ ಪ್ರದೇಶವೆಂದು ಹೇಳುತ್ತಾರೆ, ಅಲ್ಲಿ ಈಗ ಒಂದು ಚಾನಲ್ ಹೋಗಿದೆ. ಪ್ರಸ್ತುತ ಅಲ್ಲಿ ಈಗ ಕೆರೆ ಪ್ರದೇಶ ಇಲ್ಲ.

ಅಧ್ಯಕ್ಷರು: ಆಯಿತು ಬಿಡಿ, ಅದಕ್ಕೆ ಕಾನೂನು ತಿದ್ದುಪಡಿಯಾಗಬೇಕಾಗುತ್ತದೆ, ಮಾಡುತ್ತಾರೆ.

19-06-2017

ಶ್ರೀ ಸಿ.ಬಿ.ಸುರೇಶ್‌ಬಾಬು: ಮಾನ್ಯ ಅಧ್ಯಕ್ಷರೆ, ಈಗ ಪುರಸಭೆ ವ್ಯಾಪ್ತಿಯಲ್ಲಿ ಗುಂಡುತೋಪು ಇದೆ. ಆ ಗುಂಡುತೋಪುಗಳಲ್ಲಿ ಅಲೆಮಾರಿ ಜನಾಂಗದವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಪುರಸಭೆಯವರು ಐದಾರು ಜನಕ್ಕೆ ಹಕ್ಕು ಪತ್ರಗಳನ್ನು ಕೊಟ್ಟು ಮನೆಗಳನ್ನು ಕಟ್ಟಿದ್ದಾರೆ. ಇನ್ನು ಉಳಿದವರಿಗೆ ಕೊಡಲು ಕಾನೂನು ತೊಡಕನ್ನು ತೋರಿಸುತ್ತಾರೆ. ಅಲೆಮಾರಿಗಳು ಎಂದರೆ, ಮೊದಲೇ ವಾಸ ಮಾಡುವುದಕ್ಕೆ ಸ್ಥಳ ಕೊಡಬೇಕು. ಆದುದರಿಂದ, ಗುಂಡುತೋಪನ್ನು ಅವರಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡಲು ದಯಮಾಡಿ ಏನಾದರೂ ಒಂದು ತಿದ್ದುಪಡಿ ತರಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ಗುಂಡುತೋಪು, ಹಾವೇರಿ, ಹಿರೇಮಗಳೂರು ಭಾಗಗಳಲ್ಲಿ ಒಂದು ರೀತಿಯಾದ ಬೀಳು ಜಮೀನುಗಳಿವೆ. ಅಲ್ಲೂ ಸಹ, ಕೊಡಬಹುದೆಂದು ಸರ್ಕಾರದಿಂದ ಆದೇಶವನ್ನು ಕೊಡುತ್ತಿದ್ದೇವೆ.

ಅಧ್ಯಕ್ಷರು: O.K. ಈಗ ಕೃಷ್ಣ ಬೈರೇಗೌಡರೆ, ತಮ್ಮ ಬೇಡಿಕೆಗಳ ಮೇಲೆ ಚರ್ಚೆ.

ಶ್ರೀ ಕೃಷ್ಣಾ ಬೈರೇಗೌಡ (ಮಾನ್ಯ ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಬೇಡಿಕೆಗಳಮೇಲೆ ಚರ್ಚೆ ಸಾಕಷ್ಟು ಆಗಿ ಮಾತನಾಡಿದ ಅನೇಕ ಸದಸ್ಯರು ಕೃಷಿ ಹಾಗೂ ಕೃಷಿಗೆ ಸಂಬಂಧಪಟ್ಟಂಥ ವಿಚಾರಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ ಹಾಗೂ ಅವರ ಸಲಹೆಗಳನ್ನು ಕೊಟ್ಟಿದ್ದಾರೆ. ಸರ್ಕಾರದ ಕಾರ್ಯವೈಖರಿಯನ್ನು ಟೀಕೆ ಮಾಡಿದ್ದಾರೆ. ಅವರ ಸಲಹೆ, ಸೂಚನೆ, ಟೀಕೆ ಎಲ್ಲದ್ದಕ್ಕೂ ಸಹ ನಾನು ಸರ್ಕಾರದ ಪರವಾಗಿ ಅವರು ಮಾರ್ಗದರ್ಶನ ಮಾಡಿರುವುದಕ್ಕಾಗಿ ಅವರಿಗೆಲ್ಲಾ ಧನ್ಯವಾದ ಹೇಳ ಬಯಸುತ್ತೇನೆ. ನಮ್ಮ ಸರ್ಕಾರ ಕಳೆದ ನಾಲ್ಕು ವರ್ಷಗಳಿಂದ ಶ್ರೀಯುತ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವ ಪ್ರಯತ್ನವನ್ನು ನಾವು ಮಾಡಿಕೊಂಡು ಬಂದಿದ್ದೇವೆ. ಮಾತನಾಡಿದ ಅನೇಕರು ರೈತರ ಸಂಕಷ್ಟಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಸಾಲಮನ್ನಾದ ವಿಚಾರ ಮಾತನಾಡಿದ್ದಾರೆ. ರೈತರ ಆತ್ಮಹತ್ಯೆ ಪ್ರಕರಣದ ಬಗ್ಗೆ ಮಾತನಾಡಿದ್ದಾರೆ ಮತ್ತು ಕೆಲವು ಇಲಾಖೆಗಳ ಕಾರ್ಯಕ್ರಮದ ಬಗ್ಗೆಯೂ ಮಾತನಾಡಿದ್ದಾರೆ. ರೈತರ ಕಲ್ಯಾಣ ಎಂದು ಹೇಳಿದರೆ, ಅದು ಎಂಟು ಹತ್ತು ಇಲಾಖೆಗಳಿಗೆ ಸಂಬಂಧಪಟ್ಟ ವಿಷಯವಾಗಿದೆ. ಅದರಲ್ಲಿ, ಸ್ವಲ್ಪ ಕೃಷಿ ಇಲಾಖೆಗೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

19-06-2017

ಸಂಬಂಧಪಟ್ಟಂತೆ ಪ್ರತಿಕ್ರಿಯೆ ಕೊಡಬಯಸುತ್ತೇನೆ. ಬೇರೆ ಇಲಾಖೆಗಳದ್ದೂ ಸಹ ಮಧ್ಯದಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡುತ್ತೇನೆ.

(ಮುಂದುವರೆದುದು)

19-07-2017/6-10/42/HRV/VG

ಶ್ರೀ ಕೃಷ್ಣ ಬೈರೇಗೌಡ (ಮುಂದುವರೆದುದು)

ಈಗ ನಮ್ಮ ಸರ್ಕಾರ ಬಂದಮೇಲೆ ನಾಲ್ಕು ವರ್ಷದಿಂದ ರೈತರು ನಮ್ಮಿಂದ ನಿರೀಕ್ಷೆ ಮಾಡತಕ್ಕಂಥ ಕೆಲವು ವಿಚಾರಗಳಲ್ಲಿ ಮಳೆ ಬಂದಾಗ ಸಮಯಕ್ಕೆ ಸರಿಯಾಗಿ ಬಿತ್ತನೆ ಬೀಜ ಮತ್ತು ರಸಗೊಬ್ಬರಗಳ ಸರಬರಾಜು ಮಾಡಬೇಕು ಎಂಬುದು ಕನಿಷ್ಠ ನಿರೀಕ್ಷೆಯಾಗಿತ್ತು. ನಮ್ಮ ಸರ್ಕಾರ ಬಂದಮೇಲೆ ನಾವು ಆ ಕೆಲಸವನ್ನು ಬಹಳ ಜವಾಬ್ದಾರಿಯಿಂದ ನಿರ್ವಹಣೆ ಮಾಡಿದ್ದೇವೆ. ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಹಿಂದೆ ಕೆಲವು ಸಂದರ್ಭಗಳಲ್ಲಿ ಸಮಯಕ್ಕೆ ಸರಿಯಾಗಿ ಬಿತ್ತನೆ ಬೀಜ ಸಿಗದೆ, ರಸಗೊಬ್ಬರ ಸಿಗದೆ ಗಲಾಟೆಗಳಾಗಿ, ಗಲಭೆಗಳಾಗಿ ಗೋಲಿಬಾರ್ ಆಗಿ ರೈತರು ಪ್ರಾಣ ಕಳೆದುಕೊಂಡಿದ್ದನ್ನು ಸಹ ನಾವು ನೋಡಿದ್ದೇವೆ, ತಮ್ಮ ಜಿಲ್ಲೆಯಲ್ಲಿಯೂ ಸಹ ಏನಾಯಿತು ಎಂದು ತಮಗೆ ಗೊತ್ತಿದೆ. ಅಂಥ ಯಾವುದೇ ಒಂದು ಪ್ರಕರಣಕ್ಕೂ ಕಳೆದ ನಾಲ್ಕು ವರ್ಷದಿಂದ ನಾವು ಆಸ್ಪದ ಕೊಡದೆ ಬಹಳ ಸೂಕ್ಷ್ಮತೆಯಿಂದ, ಜವಾಬ್ದಾರಿಯಿಂದ ಬಿತ್ತನೆ ಬೀಜ, ರಸ ಗೊಬ್ಬರಗಳನ್ನು ಸಮಯಕ್ಕೆ ಸರಿಯಾಗಿ ಕೊಡತಕ್ಕಂಥ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ ಎನ್ನುವುದನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಇನ್ನು ಮುಂದುವರಿದು ರೈತರಿಗೆ ಒಳ್ಳೆಯ ಗುಣಮಟ್ಟದ ಬೀಜ ಸಿಗಬೇಕು, ನಾವು ಕೊಡುತ್ತಿರುವ ಬೀಜವನ್ನೇನೋ ಕೊಡುತ್ತಿದ್ದೇವೆ, ಆದರೆ ಗುಣಮಟ್ಟದ್ದಿಲ್ಲವೆಂದು ಹೇಳಿ, ನಾವು ಇಷ್ಟು ದಿನ ಏನಾಗುತ್ತಿತ್ತು, ರೈತರಿಗೆ ಈ T.L. seed ಎಂದು ಕೊಡುತ್ತಾರೆ, truthfully labeled ಎಂದು ಹೇಳಿ ಕೊಡುತ್ತಾರೆ, ಅದು ನಿಜವಾಗಿ ಹೇಳಬೇಕೆಂದರೆ ಅದಕ್ಕೆ traceability ಇರುವುದಿಲ್ಲ. ಅದು ನಿಜವಾಗಿ ಒಳ್ಳೆಯ ಬಿತ್ತನೆ ಬೀಜ ಹೌದೋ ಅಲ್ಲವೋ ಎಂದು

ಪ್ರಮಾಣೀಕರಿಸುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಹೊಸದಾಗಿ ನಾವು ಈ ವರ್ಷ ರಾಜ್ಯ ಬೀಜ ನಿಗಮ ಹಾಗೂ ರಾಷ್ಟ್ರೀಯ ಬೀಜ ನಿಗಮದೊಡನೆ ಒಂದು ಒಡಂಬಡಿಕೆಯನ್ನು, MoU ವನ್ನು ಮಾಡಿಕೊಂಡಿದ್ದೇವೆ. ಆದಷ್ಟು ಇನ್ನು ಎರಡೂರು ವರ್ಷಗಳಲ್ಲಿ ನಾವು ರೈತರಿಗೇನು ಬಿತ್ತನೆ ಬೀಜವನ್ನು ಕೊಡುತ್ತೇವೋ ಅವುಗಳು certified seeds ಆಗಿರಬೇಕು, ಈ T.L. seeds ಎನ್ನುವುದನ್ನು ಕೊಡಬಾರದು, certified seeds ಅನ್ನೇ ಕೊಡಬೇಕೆಂದು ಈ ವರ್ಷದಿಂದ ಪ್ರಾರಂಭ ಮಾಡಿದ್ದೇವೆ. ಇನ್ನು ಎರಡೂರು ವರ್ಷಗಳಲ್ಲಿ ಅದು, ನಾನು ಮಂತ್ರಿಯಿರಲಿ ಅಥವಾ ಬೇರೆಯವರು ಮಂತ್ರಿಯಿದ್ದರೂ ಸಹ ಇದರ ಪ್ರಯೋಜನ ಇನ್ನು ಎರಡೂರು ವರ್ಷಗಳಲ್ಲಿ ಆಗುತ್ತದೆ. ಬಿತ್ತನೆ ಬೀಜದ ಗುಣಮಟ್ಟ ಒಳ್ಳೆಯ ಗುಣಮಟ್ಟದ ಬೀಜವನ್ನು ಕೊಡುವಂಥ ಕೆಲಸವನ್ನು ನಾವು ಆರಂಭ ಮಾಡಿದ್ದೇವೆ. ಇನ್ನು ಎರಡನೆಯದಾಗಿ ಅವರೆಲ್ಲಾ ಏನು ಮಾಡುತ್ತಾರೆಂದರೆ ರೈತರಿಂದ ಖರೀದಿ ಮಾಡುವಾಗ 18 ರೂ.ಗಳನ್ನು ಕೊಟ್ಟು ಬಿತ್ತನೆ ಬೀಜವನ್ನು ಖರೀದಿ ಮಾಡಿದರೆ ಅದೇ ಬೀಜವನ್ನು ಸರ್ಕಾರಕ್ಕೆ 30 ರಿಂದ 35 ರೂ.ಗಳಿಗೆ ಸರಬರಾಜು ಮಾಡುತ್ತಿದ್ದರು. ಈಗ ನಾವು ಒಡಂಬಡಿಕೆ ಮಾಡಿಕೊಂಡಿರುವುದರಿಂದ ಸರ್ಕಾರಕ್ಕೆ ಮತ್ತು ರೈತರಿಗೆ ತಗಲುವ ಖರ್ಚು ಕೂಡ ಕಡಿಮೆಯಾಗುತ್ತದೆ. ಮುಂದಿನ ವರ್ಷಗಳಲ್ಲಿ ಇದರಿಂದ ಸುಮಾರು 50 ಕೋಟಿ ರೂ.ಗಳಷ್ಟು ಸರ್ಕಾರಕ್ಕೆ ಉಳಿತಾಯವಾಗುತ್ತದೆ, 50 ಕೋಟಿ ರೈತರಿಗೂ ಕೂಡ ಉಳಿತಾಯವಾಗುತ್ತದೆ. ಉತ್ತಮ ಗುಣಮಟ್ಟದ ಬೀಜ ಕೊಡುವುದಕ್ಕೂ ಕೂಡ ಸಾಧ್ಯವಾಗುತ್ತದೆ. ಬಹಳ ವರ್ಷಗಳಿಂದ ಸಮಸ್ಯೆಯಿರುವುದು, ಹಿಂದಿನ ವರ್ಷಗಳಲ್ಲಿ ಮಾತನಾಡಿದಾಗ ಮತ್ತು ಅನೇಕ ಸಂದರ್ಭಗಳಲ್ಲಿ ಸದಸ್ಯರು ಪ್ರಸ್ತಾಪ ಮಾಡಿದ್ದು ಕೃಷಿ ಇಲಾಖೆಗೆ ಮತ್ತು ಕೃಷಿಗೆ ಸಂಬಂಧಪಟ್ಟ ಇಲಾಖೆಗಳು ಮತ್ತು ರೈತರಿಗೂ ಇರತಕ್ಕಂಥ ಅಂತರ ಬಹಳ ಜಾಸ್ತಿಯಾಗಿದೆ, ಹಿಂದೆ ಎಷ್ಟರಮಟ್ಟಿಗೆ ವಿಸ್ತರಣಾ ಚಟುವಟಿಕೆಗಳು ಆಗುತ್ತಿತ್ತೋ ಆ ಪ್ರಮಾಣದಲ್ಲಿ ಆಗುತ್ತಿಲ್ಲ, ಹೀಗಾಗಿ ರೈತರ ನಡುವೆ ಅಂತರ ಜಾಸ್ತಿಯಾಗಿದೆ ಎನ್ನುವಂಥ ವಿಚಾರವನ್ನು ಅನೇಕ ಬಾರಿ ಪ್ರಸ್ತಾಪ ಮಾಡಿದ್ದಾರೆ. ಆ ಕಾರಣದಿಂದಲೇ ಎರಡು ವರ್ಷದ ಹಿಂದೆ, ಅಂದರೆ ಈಗ ಮೂರು ವರ್ಷ, ಕೃಷಿ ಅಭಿಯಾನ ಎನ್ನುವಂಥ ಕಾರ್ಯಕ್ರಮವನ್ನು ಆರಂಭ ಮಾಡಿದ್ದೇವೆ. ಬಹುತೇಕ ಶಾಸಕರುಗಳು ಈ ಕೃಷಿ ಅಭಿಯಾನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೀರೆಂದು ನಾವು ತಿಳಿದುಕೊಂಡಿದ್ದೇವೆ. ಕೃಷಿ ಮತ್ತು ಅದಕ್ಕೆ

19-06-2017

ಸಂಬಂಧಪಟ್ಟ ಎಲ್ಲಾ ಇಲಾಖೆಗಳವರನ್ನು ಒಂದುಗೂಡಿಸಿ ರೈತರು ಅಧಿಕಾರಿಗಳನ್ನು ಹುಡುಕಿಕೊಂಡು ಕಛೇರಿಗೆ ಬರುವುದಲ್ಲ, ಅಧಿಕಾರಿಗಳು ರೈತರ ಮನೆ ಬಾಗಿಲಿಗೆ ಹೋಗಬೇಕು ಎಂದು ಇಲಾಖೆಗಳ ನಡಿಗೆ ರೈತರ ಕಡೆಗೆ ಎಂದು ಹೇಳಿ ಪ್ರತಿ ಗ್ರಾಮ ಪಂಚಾಯತಿ ಮತ್ತು ಹೋಬಳಿ ಮಟ್ಟದಲ್ಲಿ ಕೃಷಿ ಅಭಿಯಾನ ಕಾರ್ಯಕ್ರಮವನ್ನು ಮಾಡಿ ಕೃಷಿ ಇಲಾಖೆಯ ಕಾರ್ಯಕ್ರಮಗಳು ಮತ್ತು ಎಲ್ಲಾ ಇಲಾಖೆಗಳು ಇದರಲ್ಲಿ ಬರುತ್ತವೆ, ಅದು ಪಶು ಸಂಗೋಪನಾ ಇಲಾಖೆ, ತೋಟಗಾರಿಕೆ, ಸಹಕಾರ ಇಲಾಖೆ, ಹೀಗೆ ಸಂಬಂಧಪಟ್ಟಂಥ ಎಲ್ಲಾ ಇಲಾಖೆಗಳ ಕಾರ್ಯಕ್ರಮಗಳನ್ನು ಅಲ್ಲಿಯೇ ಹೋಗಿ ರೈತರಿಗೆ ವಿವರಣೆ ಮಾಡತಕ್ಕಂಥದ್ದು, ಹೊಸ ತಾಂತ್ರಿಕತೆಯನ್ನು ರೈತರಿಗೆ ಅಲ್ಲಿ ಪರಿಚಯ ಮಾಡಿಕೊಡತಕ್ಕಂಥದ್ದು, ಈ ರೀತಿಯ ಕೃಷಿ ಅಭಿಯಾನ ಕಾರ್ಯಕ್ರಮವನ್ನು ನಾವು ಈಗ ಮೂರನೇ ವರ್ಷದಲ್ಲಿಯೂ ನಡೆಸುತ್ತಿದ್ದೇವೆ. ಹಿಂದಿನ ಎರಡು ವರ್ಷಗಳಲ್ಲಿ ಸುಮಾರು 14 ಲಕ್ಷ ರೈತರು ಇಂಥ ಕೃಷಿ ಅಭಿಯಾನ ಕಾರ್ಯಕ್ರಮಗಳಲ್ಲಿ ರಾಜ್ಯದಲ್ಲಿ ಭಾಗವಹಿಸಿದ್ದಾರೆ. ಇದರಿಂದಾಗಿ ವಿಸ್ತರಣಾ ಚಟುವಟಿಕೆಗೆ ಪುನ:ಶ್ಚೇತನ ಮಾಡತಕ್ಕಂಥ ಕೆಲಸವನ್ನು ನಮ್ಮ ಇಲಾಖೆ ಮಾಡಿ ಅಧಿಕಾರಿಗಳನ್ನು ರೈತರ ಬಳಿಗೆ ಕಳುಹಿಸುವಂಥ ಕೆಲಸವನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ ಸಿಬ್ಬಂದಿ ಕೊರತೆಯೆಂದು ಹೇಳಿ ನಾವು ಬಂದ ಮೇಲೆ ಹೊರ ಗುತ್ತಿಗೆಯಾಧಾರದ ಮೇಲೆ ಪ್ರತಿ ರೈತ ಸಂಪರ್ಕ ಕೇಂದ್ರಕ್ಕೆ ಒಬ್ಬರು ತಾಂತ್ರಿಕ ಸಿಬ್ಬಂದಿ ಮತ್ತು ಇನ್ನೊಬ್ಬರು ಆಡಳಿತ ಸಿಬ್ಬಂದಿ ಎಂದು ಪ್ರತಿ ರೈತ ಸಂಪರ್ಕ ಕೇಂದ್ರಕ್ಕೆ ಎರಡು ಸಿಬ್ಬಂದಿಯನ್ನು ತೆಗೆದುಕೊಂಡಿದ್ದೇವೆ. ಇದಲ್ಲದೇ ಇನ್ನೂ ಸಹ ಖಾಲಿಯಿರುವಂಥ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ನೇಮಕಾತಿ ಪ್ರಕ್ರಿಯೆಯನ್ನು ಮಾಡುತ್ತಿದ್ದೇವೆ, ಜುಲೈ 29 ಕ್ಕೆ ನಮ್ಮ ಇಲಾಖೆಯಲ್ಲಿ ಸುಮಾರು 607 ಹುದ್ದೆಗಳಿಗೆ ನೇರ ನೇಮಕಾತಿಯನ್ನು interview ಇಲ್ಲದೇ ಮಾಡತಕ್ಕಂಥ ಪ್ರಕ್ರಿಯೆಯನ್ನು ಮಾಡುತ್ತಿದ್ದೇವೆ. ಬಹುಶ: ಕಳೆದ ಹತ್ತು ವರ್ಷಗಳಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ನೇಮಕಾತಿ ಇದರಲ್ಲಿಯೇ ಆಗುತ್ತಿರುವುದು. ಅದೇ ರೀತಿ ತೋಟಗಾರಿಕಾ ಇಲಾಖೆಯಲ್ಲಿಯೂ ಸಹ ಬಹಳ ದೊಡ್ಡ ಪ್ರಮಾಣದಲ್ಲಿ ನೇಮಕಾತಿಗಳನ್ನು ಮಾಡಿ ಖಾಲಿಯಿರುವಂಥ ಹುದ್ದೆಗಳನ್ನು ಭರ್ತಿ ಮಾಡಿ ವಿಸ್ತರಣಾ ಚಟುವಟಿಕೆಗಳಿಗೆ ಪುನ:ಶ್ಚೇತನ ಕೊಡತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ. ಇದಷ್ಟೇ ಅಲ್ಲ, ಇವತ್ತು ತಂತ್ರಜ್ಞಾನದಲ್ಲಿ ಬಹಳ ಬದಲಾವಣೆಯಾಗಿದೆ, ಹಳ್ಳಿಗಳಲ್ಲಿ ಎಲ್ಲರ ಕೈಯಲ್ಲಿಯೂ

19-06-2017

ಮೊಬೈಲ್ ಫೋನ್‌ಗಳಿವೆ, ಇವೊತ್ತು Whatsapp ಇರುವುದರಿಂದ ಹಳ್ಳಿಯ ಪ್ರತಿ ಮನೆಗಳವರು Whatsapp ಬಳಸುತ್ತಾರೆ. ತಂತ್ರಜ್ಞಾನವನ್ನು ಬಳಸಿಕೊಂಡು, ಹಿಂದೆ ನಾವೆಲ್ಲಾ ಗ್ರಾಮಸೇವಕರನ್ನು ಬಳಸಿಕೊಂಡು ಆ ಗ್ರಾಮ ಸೇವಕರು ಮನೆ ಮನೆಗೆ ಹೋಗಿ ವಿಸ್ತರಣಾ ಚಟುವಟಿಕೆಯನ್ನು ಮಾಡುತ್ತಿದ್ದರು. ಅದಕ್ಕೆ ಪರ್ಯಾಯವಾಗಿ ಈಗ ಟೆಲಿಕಮ್ಯುನಿಕೇಶನ್ ಟೆಕ್ನಾಲಜಿಯನ್ನು ಬಳಸಿಕೊಂಡು ರೈತರಿಗೆ ಎಸ್.ಎಂ.ಎಸ್. ಮುಖಾಂತರ, Whatsapp ಮುಖಾಂತರ ಸಂದೇಶಗಳನ್ನು ಕೊಡತಕ್ಕಂಥ ಕೆಲಸಗಳನ್ನು ಮಾಡುತ್ತಿದ್ದೇವೆ. ಉದಾಹರಣೆಗೆ ವಾರಕ್ಕೆ ಎರಡು ಬಾರಿ ಹವಾಮಾನ ಮುನ್ಸೂಚನೆಯನ್ನು ಗ್ರಾಮಪಂಚಾಯತಿವಾರು ಕೊಡುತ್ತಿದ್ದೇವೆ. ಬಹುಶ: ಇದು ತಮಗೂ ಕೂಡ SMS ಮುಖಾಂತರ ಬಂದಿರಬಹುದು. ವಾರಕ್ಕೆ ಎರಡು ಬಾರಿ ಹವಾಮಾನ ಮುನ್ಸೂಚನೆ, ಮಳೆ ಎಷ್ಟಾಗುತ್ತದೆ ಎನ್ನುವ ಮುನ್ಸೂಚನೆಯನ್ನು ಇವೊತ್ತು ರೈತರಿಗೆ ಕೊಡುತ್ತಿದ್ದೇವೆ. ಸುಮಾರು 25 ಲಕ್ಷ ರೈತರಿಗೆ ಎಸ್.ಎಂ.ಎಸ್. ಮುಖಾಂತರ ಇದು ಹೋಗುತ್ತಿದೆ. ಇದರ ಜೊತೆಗೆ ಆ ಬೆಳೆಗಳ ಬಗ್ಗೆ ಮಾಹಿತಿಯನ್ನು ಕೂಡ ಎಸ್.ಎಂ.ಎಸ್. ಮುಖಾಂತರ ರೈತರಿಗೆ ಕೊಡುತ್ತಿದ್ದೇವೆ. ಏನಾದರೂ ಸುಧಾರಣೆ ಮಾಡಿಕೊಳ್ಳುವಂಥ ಸಂದೇಶಗಳನ್ನು ಕೂಡ ಎಸ್.ಎಂ.ಎಸ್. ಮುಖಾಂತರ ಕೊಡುತ್ತಿದ್ದೇವೆ. ಇದರ ಜೊತೆಗೆ Whatsapp ರೈತರ ಗುರಿಪುಗಳನ್ನು ಸಹ ಮಾಡಿದ್ದೇವೆ. ಸುಮಾರು ಐದಾರು ಲಕ್ಷ ರೈತರು Whatsapp ನಲ್ಲಿಯೂ ಸಹ ನಮ್ಮ ಜೊತೆಗೆ ಸಂಪರ್ಕದಲ್ಲಿದ್ದಾರೆ. ಅವರಿಗೆ ವಿಡಿಯೋ ಮುಖಾಂತರ, ಫೋಟೋಗಳ ಮುಖಾಂತರ, ಕೃಷಿಯ ಬಗ್ಗೆ ಸುಧಾರಣೆ ಮಾಡಿಕೊಳ್ಳತಕ್ಕಂಥ ಸಂದೇಶಗಳನ್ನು ಅವರಿಗೆ ಕೊಡುವಂಥ ಕೆಲಸವನ್ನು ಕೂಡ ನಾವು ಇಲಾಖೆಯಿಂದ ಮಾಡುತ್ತಿದ್ದೇವೆ.

ಶ್ರೀ ಅರವಿಂದ ಲಿಂಬಾವಳಿ:-ಮಾನ್ಯ ಸಚಿವರೆ, ತಾವು ಹೇಳುತ್ತಿರತಕ್ಕಂಥ ಸಲಹೆ ಒಳ್ಳೆಯದೇ ಆಗಿದೆ. ಈಗ Whatsapp ಗಿಂತ ತಮಗೆ ಈಗಾಗಲೇ ಹೊಸ ತಂತ್ರಜ್ಞಾನದ ಬಗ್ಗೆ ಗೊತ್ತಿರಬಹುದು, ಇತ್ತೀಚೆಗೆ rural area ದಲ್ಲಿ ಜಾಸ್ತಿ ಬಳಸುತ್ತಿರುವುದು Youtube. ಏಕೆಂದರೆ ಆ Youtube ಗಳಲ್ಲಿ ನೋಡುವುದಕ್ಕೆ ಬರುತ್ತದೆ, ಓದುವುದಕ್ಕೆ ಬರದವರು ನೋಡಿ ಕೇಳಿ ಅದನ್ನು ಬಳಸುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಟಿ.ವಿ. ಗಿಂತಲೂ ಹೆಚ್ಚು

ಉಪಯೋಗವಾಗುತ್ತಿರುವುದು Youtube. ಆದುದರಿಂದ ಇದರ ಬಗ್ಗೆಯೂ ಸಹ ತಾವು ಸ್ವಲ್ಪ ಯೋಚನೆ ಮಾಡಬಹುದು.

ಶ್ರೀ ಕೃಷ್ಣ ಬೈರೇಗೌಡ:-ನಾವು Whatsapp ನಲ್ಲಿ video ಗಳನ್ನು ಕೂಡ ಹಾಕುತ್ತಿದ್ದೇವೆ. ಅದರಲ್ಲಿ short video, ಎರಡು ನಿಮಿಷದ್ದು, ಮೂರು ನಿಮಿಷದ್ದು, ಕೃಷಿ ಪದ್ಧತಿಯಲ್ಲಿ ಯಾವ ತರಹ ಸುಧಾರಣೆ ಮಾಡಿಕೊಳ್ಳಬೇಕು ಎನ್ನುವ ಬಗ್ಗೆ ವಿಡಿಯೋ ಮಾಡಿ ಹಾಕುತ್ತಿದ್ದೇವೆ. ನೀವು ಹೇಳುವ ಪ್ರಕಾರ ಅದನ್ನು Youtube ನಲ್ಲಿ ನಮ್ಮದೊಂದು ಚಾನಲ್ ಶುರು ಮಾಡುತ್ತಿದ್ದೇವೆ, ಅದಕ್ಕೆ link ಕೊಟ್ಟುಬಿಟ್ಟರೆ Whatsapp ನಲ್ಲಿ ಅವರು Youtube ನಲ್ಲಿ video ನೋಡಿಕೊಳ್ಳುತ್ತಾರೆ. ಆದುದರಿಂದ ತಾವು ಹೇಳಿದಂತೆ ಅದೇ ಡೈರೆಕ್ಷನ್‌ನಲ್ಲಿಯೇ ನಾವು ಹೋಗುತ್ತಿದ್ದೇವೆ. Whatsapp ಮುಖಾಂತರ photos, message, video ಹಾಕುತ್ತಿದ್ದೇವೆ. ಅದನ್ನು Youtube ನಲ್ಲಿಯೂ ಹಾಕಿ ಆ ಲಿಂಕ್‌ನ್ನು ನೀವು ಹೇಳುತ್ತಿರುವಂತೆ Whatsapp ಮುಖಾಂತರ, SMS ಮುಖಾಂತರ link ಅನ್ನು ರೈತರಿಗೆ ಕಳುಹಿಸಿದರೆ ಆ link click ಮಾಡಿದರೆ ಅದು Youtube ನಲ್ಲಿ open ಆಗುವ ತರಹ ಇರಬೇಕು. ಖಂಡಿತ ಆ direction ನಲ್ಲಿ ನಾವು ಕೆಲಸವನ್ನು ಮಾಡುತ್ತಿದ್ದೇವೆ. ಇದು ಬಹಳ ಸರಳವಾಗಿ ರೈತರನ್ನು ತಲುಪತಕ್ಕಂಥ ವಿಧಾನಗಳು. ಅನೇಕ ವಿಚಾರಗಳನ್ನು ಇದರಿಂದ ರೈತರಿಗೆ ಮುಟ್ಟಿಸುವುದಕ್ಕೆ ಸಾಧ್ಯವಾಗುತ್ತದೆ. ಆ ತಂತ್ರಜ್ಞಾನವನ್ನು ಬಳಸಿಕೊಂಡು ವಿಸ್ತರಣಾ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಕಳೆದ ಮೂರು ವರ್ಷದ ಹಿಂದೆ ನಾನು ಇದೇ ಸದನದಲ್ಲಿ ಹೇಳಿದ್ದೆ, ಇನ್ನು ಎರಡೂರು ವರ್ಷಗಳಲ್ಲಿ ರಾಜ್ಯದ ಎಲ್ಲಾ ರೈತರಿಗೆ ಅವರ ಜಮೀನಿನ ಮಣ್ಣಿನ ಆರೋಗ್ಯದ ಚೀಟಿಯನ್ನು ಕೊಡುತ್ತೇವೆಂದು ಹೇಳಿದ್ದೆ. ನಾನು ಕೃಷಿ ಇಲಾಖೆ ಬೇಡಿಕೆ ಮೇಲೆ ಉತ್ತರ ಕೊಡುವಾಗ ಇದನ್ನು ಹೇಳಿದ್ದೆ. ರೈತರ ಜಮೀನಿನ ಮಣ್ಣಿನ ಆರೋಗ್ಯದ ಚೀಟಿಯಲ್ಲಿ ಅವರ ಜಮೀನಿನಲ್ಲಿ ನಾವೇ ಸರ್ಕಾರದ ಖರ್ಚಿನಲ್ಲಿ ಮಣ್ಣಿನ ಮಾದರಿಯನ್ನು ತೆಗೆದುಕೊಂಡು ಮಣ್ಣನ್ನು ಪರೀಕ್ಷೆ ಮಾಡಿ ಅವರ ಜಮೀನಿನ ಮಣ್ಣಿನ ಗುಣಲಕ್ಷಣಗಳೇನು ಎನ್ನುವಂಥದ್ದು ಇರುತ್ತದೆ, ಅದರ ಜೊತೆಗೆ ಅವರು ಬೆಳೆಯುವಂಥ ಸಾಧಾರಣ 6 ಬೆಳೆಗಳನ್ನು ತೆಗೆದುಕೊಂಡು ಆ ಯಾವ ಬೆಳೆಗೆ ಆ ಮಣ್ಣಿಗೆ ಎಷ್ಟು ಗೊಬ್ಬರವನ್ನು ಹಾಕಬೇಕು

ಎನ್ನುವಂಥ ಸಲಹೆಯು ಕೂಡ ಆ ಮಣ್ಣಿನ ಆರೋಗ್ಯ ಚೀಟಿಯಲ್ಲಿರುತ್ತದೆ. ಇಂಥದ್ದನ್ನು ಸುಮಾರು 17 ಲಕ್ಷ ಮಾದರಿಗಳನ್ನು ಈಗಾಗಲೇ ಸಂಗ್ರಹಿಸಿದ್ದೇವೆ. ಈ ವರ್ಷದ ಅಂತ್ಯಕ್ಕೆ ರಾಜ್ಯದ ಎಲ್ಲಾ ರೈತರಿಗೆ ಅವರ ಜಮೀನಿನ ಮಣ್ಣಿನ ಆರೋಗ್ಯದ ಚೀಟಿಯನ್ನು ಕೊಟ್ಟು ಪೂರೈಸುತ್ತೇವೆ. ಒಂದು ಸುತ್ತು ಎಲ್ಲಾ ರೈತರಿಗೂ ಸಹ ಸರ್ಕಾರದ ಖರ್ಚಿನಲ್ಲಿ ನಾವು ಇದನ್ನು ಅವರ ಜಮೀನಿನ ಮಣ್ಣಿನ ಆರೋಗ್ಯ ಚೀಟಿಯನ್ನು ಎಲ್ಲಾ ರೈತರಿಗೂ ಕೊಡುವಂಥ ಕೆಲಸ ಈಗಾಗಲೇ ಬಹುತೇಕ ಆಗಿದೆ, ಬಾಕಿಯಿರುವಂಥದ್ದನ್ನು ಈ ವರ್ಷದೊಳಗೆ ಎಲ್ಲರಿಗೂ ಕೊಡುತ್ತೇವೆ, ನಾವು ಘೋಷಣೆ ಮಾಡಿದ ಮೇಲೆ ಕೇಂದ್ರ ಸರ್ಕಾರ ಕೂಡ ಇದೇ ರೀತಿಯ ಒಂದು ಘೋಷಣೆಯನ್ನು ಮಾಡಿ ಅವರು ನಮ್ಮ ಎರಡು ಅನುದಾನದಲ್ಲಿ ಈ ಕಾರ್ಯಕ್ರಮವನ್ನು ನಾವು ಅನುಷ್ಠಾನ ಮಾಡುತ್ತಿದ್ದೇವೆ. ಪ್ರತಿಯೊಬ್ಬ ರೈತರಿಗೂ ಅವರ ಮಣ್ಣಿನ ಆರೋಗ್ಯದ ಚೀಟಿಯನ್ನು, ಏಕೆಂದರೆ ಯಾವ ಭೂಮಿಗೆ ಯಾವ ಬೆಳಗೆ ಏನು ಗೊಬ್ಬರವನ್ನು ಹಾಕಬೇಕು ಎನ್ನುವುದು ಕನಿಷ್ಟ ವೈಜ್ಞಾನಿಕ ಪದ್ಧತಿ, ಆದರೆ ಇವತ್ತು ರೈತರು ಇದನ್ನು ಅನುಸರಣೆ ಮಾಡುತ್ತಿಲ್ಲ. ಇದನ್ನು ಮಾಡುವುದರಿಂದ ಖರ್ಚು ಕೂಡ ಉಳಿಯುತ್ತದೆ ಮತ್ತು ಇಳುವರಿ ಕೂಡ ಸುಧಾರಣೆಯಾಗುತ್ತದೆ. ಆ ಕೆಲಸವನ್ನು ಕೂಡ ಸರ್ಕಾರ ಮಾಡುತ್ತಿದೆ. ದೇಶದಲ್ಲಿಯೇ ಈ ಕಾರ್ಯಕ್ರಮದಲ್ಲಿ ನಾವು ಎರಡನೇ ಸ್ಥಾನದಲ್ಲಿದ್ದೇವೆ.

(ಮುಂದು)

D 19.06.2017/6.20/43/HBU-CP

ಶ್ರೀ ಕೃಷ್ಣ ಭೈರೇಗೌಡ (ಮುಂದು) : ಮಾನ್ಯ ಅಧ್ಯಕ್ಷರೆ, ಕೆಲವು ಸದಸ್ಯರು ಇಲ್ಲಿಯೂ ಪ್ರಸ್ತಾಪ ಮಾಡಿದರು, ಹಾಗೆ ಮೇಲ್ಮನೆಯಲ್ಲಿ ಕೂಡ ಪ್ರಸ್ತಾಪ ಮಾಡಿದರು. ಸಾವಯವ ಕೃಷಿ ಮತ್ತು ಸಿರಿಧಾನ್ಯಗಳಿಗೆ ಬಹಳ ಹೆಚ್ಚಿನ ಒತ್ತನ್ನು ನಾವು ಕೊಡುತ್ತಿದ್ದೇವೆ. ಸಿರಿಧಾನ್ಯ ಎಂದರೆ ರಾಗಿ, ಜೋಳದ ಜೊತೆಗೆ ಇತರೆ ನವಣೆ, ಆರ್ಕ, ಈ ರೀತಿಯಾಗಿ ಸಿರಿಧಾನ್ಯಗಳು ನಮ್ಮ ಒಣ ಭೂಮಿಗೆ ಖುಷ್ಕಿ ಬೇಸಾಯಕ್ಕೆ ಸೂಕ್ತವಾಗಿರತಕ್ಕಂಥ ಬೆಳೆಗಳು. ಮಳೆ ಕಡಿಮೆಯಾಗಿ, ಬರಗಾಲ ಜಾಸ್ತಿಯಾಗುತ್ತಿದೆ, ನೀರಿಗೆ ಹಾಹಾಕಾರ ಇರುವಂಥ ಸಂದರ್ಭದಲ್ಲಿ ಈ ಸಿರಿಧಾನ್ಯಗಳು ನಮ್ಮ ರೈತರ ನೆರವಿಗೆ ಬರುವಂಥ

ಬೆಳೆಗಳು. ಅದನ್ನು ಯಾರು ಬಳಸುತ್ತಾರೆ, ಅದು ಆರೋಗ್ಯಕ್ಕೆ ಕೂಡ ಒಳ್ಳೆಯದು. ಹಾಗಾಗಿ ಸಿರಿಧಾನ್ಯಗಳಿಗೆ ನಾವು ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ. ಮೊನ್ನೆ ನಾವು ಒಂದು ರಾಷ್ಟ್ರೀಯ ವಾಣಿಜ್ಯ ಮೇಳ ಮಾಡಿದೆವು. ಅದೇ ದಿಕ್ಕಿನಲ್ಲಿ ಈ ಒಂದು ಹಣಕಾಸು ವರ್ಷದಲ್ಲಿ ಅಂತರಾಷ್ಟ್ರೀಯ ಮಟ್ಟದ ವಾಣಿಜ್ಯ ಮೇಳವನ್ನು ಆಯೋಜನೆ ಮಾಡುವಂಥ ಕೆಲಸವನ್ನು ಮಾಡಿಕೊಂಡಿದ್ದೇವೆ. ಕೇಂದ್ರದ ಅನೇಕ ಸಚಿವರು ಸಹ ಭಾಗವಹಿಸಿ, ನೀವು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ, ನಾವೂ ಕೂಡ ಇದಕ್ಕೆ ಕೇಂದ್ರದಲ್ಲಿ ಸಹಕಾರ ಕೊಡುತ್ತೇವೆಂದು ಹೇಳಿದರು. ಈ ವರ್ಷ ರಾಗಿ, ಜೋಳ ಎರಡು ಬೆಳೆಗಳನ್ನು ಬೆಳೆಯುವ ಪ್ರದೇಶಗಳನ್ನು ಜಾಸ್ತಿ ಮಾಡಬೇಕೆಂದು ಪ್ರಯತ್ನ ಮಾಡುವುದರ ಜೊತೆಗೆ ಅವುಗಳನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ. ಸುಮಾರು 18 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರಾಗಿ, ಜೋಳ ಬೆಳೆಯುತ್ತಾರೆ. ಆ ಬೆಳೆಯನ್ನು ಇನ್ನು ಜಾಸ್ತಿ ಮಾಡಬೇಕು. ಅದರ ಜೊತೆಗೆ ರಾಗಿ, ಜೋಳ, ಸಜ್ಜೆ ಬಿಟ್ಟು ಆರ್ಕ, ನವಣೆ ಇದೆಲ್ಲವನ್ನು ನಮ್ಮ ರಾಜ್ಯದಲ್ಲಿ ಕೇವಲ 20 ರಿಂದ 22 ಸಾವಿರ ಹೆಕ್ಟೇರ್‌ನಲ್ಲಿ ಬೆಳೆಯುತ್ತಾರೆ. ಅದನ್ನು ಈ ವರ್ಷ 45,000 ಹೆಕ್ಟೇರ್ ಅಂದರೆ ಡಬಲ್ ಮಾಡಬೇಕೆನ್ನುವ ಗುರಿ ಹಾಕಿಕೊಂಡಿದ್ದೇವೆ. ಇತರೆ ಸಿರಿಧಾನ್ಯಗಳೇನಿವೆ, ಅವುಗಳ ಪ್ರದೇಶವನ್ನು ಈ ವರ್ಷ ಎರಡು ಪಟ್ಟು ಹೆಚ್ಚು ಮಾಡಬೇಕೆಂದು ಅದಕ್ಕೆ ಬಹಳ ಪ್ರೋತ್ಸಾಹವನ್ನು ಕೊಡುವಂಥ ಕೆಲಸವನ್ನು ಮಾಡುತ್ತಿದ್ದೇವೆ. ರೈತರಿಗೆ ನೇರವಾಗಿ ಮಾರುಕಟ್ಟೆ ಜೊತೆಗೆ ಸಂಪರ್ಕವನ್ನು ಕಲ್ಪಿಸುವಂಥ ಕೆಲಸವನ್ನು ಮಾಡುತ್ತಿದ್ದೇವೆ. ಅದಷ್ಟೆ ಅಲ್ಲ ರಾಗಿ ಮತ್ತು ಜೋಳವನ್ನು ಸರ್ಕಾರವೇ ಖರೀದಿ ಮಾಡುವಂಥ ಕೆಲಸವನ್ನು ಮಾಡುತ್ತಿದ್ದೇವೆ. ನಾವು ಇನ್ನೊಂದು ವಿಚಾರದಲ್ಲಿ ಘೋಷಣೆ ಮಾಡಿದ್ದೇವೆ. ಅದೇನೆಂದರೆ ಸರಾಸರಿ 1,700 ಎಂಎಸ್‌ಪಿ ಇದ್ದರೆ, ಶಾಶ್ವತವಾಗಿ ಇನ್ನು ಮುಂದೆ ರಾಗಿ ಮತ್ತು ಜೋಳಕ್ಕೆ ಬೋನಸ್ ಪ್ರೈಸ್ ಅಂದರೆ ಹೆಚ್ಚುವರಿ ಪ್ರೋತ್ಸಾಹಧನ, ಕನಿಷ್ಠ ಬೆಂಬಲ ಬೆಲೆ ಏನಿರುತ್ತದೆ, ಅದಕ್ಕಿಂತ ಮೇಲೆ 400 ರೂಪಾಯಿ ಪ್ರೋತ್ಸಾಹಧನವನ್ನು ಕೊಡುವುದಕ್ಕೆ ಸರ್ಕಾರದ ಶಾಶ್ವತ ಕಮಿಟ್‌ಮೆಂಟ್ ರೀತಿಯಲ್ಲಿ ಮಾಡುತ್ತಿದ್ದೇವೆ. ಅದಕ್ಕೆ ನಮ್ಮ ಸಂಪುಟದಲ್ಲಿ ಎಲ್ಲರೂ ಒಪ್ಪಿಗೆ ಕೊಟ್ಟಿದ್ದಾರೆ. ಇದನ್ನು ನಾವು ಬೆಳೆ ಬೆಳೆದ ಮೇಲೆ ಹೇಳುವುದಲ್ಲ. ಇದನ್ನು ಬಿತ್ತನೆ ಮಾಡುವುದಕ್ಕೆ ಮೊದಲೇ ರಾಗಿ ಮತ್ತು ಜೋಳಕ್ಕೆ ಇಷ್ಟು ಬೆಲೆ ಕೊಡುತ್ತೇವೆಂದು advance ಆಗಿ ನಾವು ಘೋಷಣೆ

ಮಾಡಿ, ರೈತರು ಹೆಚ್ಚಿಗೆ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡುವುದಕ್ಕೋಸ್ಕರ fixed bonus price 400 ರೂಪಾಯಿ ಎಂದು ಎರಡಕ್ಕೂ ಸಹ ಮಾಡಿದ್ದೇವೆ. ಎಂಎಸ್‌ಪಿ ಏನಿರುತ್ತದೆ, ಅದರ ಮೇಲೆ 400 ರೂಪಾಯಿ ನಾವು ಕೊಡುತ್ತೇವೆ. 1700 ರೂಪಾಯಿಗೆ 400 ರೂಪಾಯಿ ಸೇರಿಸಿದರೆ ಸುಮಾರು 25% ಬೋನಸ್ ಬೆಲೆಯಾಯಿತು. ಇಡೀ ದೇಶದಲ್ಲಿ ಇಷ್ಟು ಬೋನಸ್ ಯಾವ ಬೆಳೆಗೆ ಯಾವ ಸರ್ಕಾರ ಕೂಡ ಕೊಟ್ಟಿಲ್ಲ. ನಮ್ಮ ರಾಜ್ಯದಲ್ಲಿ ನಾವು ತೊಗರಿ ಬೆಳೆಗೆ, ಕಡಲೆಗೆ ಬೋನಸ್ ಕೊಟ್ಟಿದ್ದೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನೀವು ಬೋನಸ್ ಕೊಡುತ್ತಿರುವುದು ಸ್ವಾಗತಾರ್ಹ. ಅದು unscientific ಅಲ್ಲ, ಅದನ್ನು ತಾವು ಹೇಳುತ್ತಿರುವುದು.

ಶ್ರೀ ಕೃಷ್ಣ ಬೈರೇಗೌಡ : ಅದಕ್ಕೆ ನಾವು ಹೆಚ್ಚುವರಿಯಾಗಿ ಕೊಡುತ್ತಿರುವುದು. ರಾಗಿ ಮತ್ತು ಜೋಳ ಬೆಳೆಯುವ ರೈತರಿಗೆ ಒಳ್ಳೆಯ ಆದಾಯ ಬರಬೇಕೆಂದು ಎಂಎಸ್‌ಪಿ ಗೆ ನಾವು ಲಿಮಿಟ್ ಆಗಿಲ್ಲ. ಎಂಎಸ್‌ಪಿ ಮೇಲೆ ನಾವು 400 ರೂಪಾಯಿ ಕೊಡುತ್ತೇನೆನ್ನುವುದು ನಮ್ಮ ಕಮಿಟ್‌ಮೆಂಟ್ ಇದೆ. ಇದರ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಯವರಿಗೆ ಮಾನ್ಯ ಮುಖ್ಯಮಂತ್ರಿಯವರು ಪತ್ರ ಕೂಡ ಬರೆದಿದ್ದೇವೆ. ಆ ಪತ್ರದಲ್ಲಿ ರಾಗಿ ಮತ್ತು ಜೋಳಕ್ಕೆ ನೀವು ನಿಗದಿ ಮಾಡಿರುವ ದರ ಸರಿಯಿಲ್ಲ, ಇದನ್ನು ಪರಿಷ್ಕರಣೆ ಮಾಡಬೇಕೆಂದು ಸಹ ಕೇಂದ್ರಕ್ಕೆ ಪತ್ರ ಬರೆದಿದ್ದೇವೆ. ಅವರು ಏನು ಪರಿಷ್ಕರಣೆ ಮಾಡಿ ಹೆಚ್ಚಾದರೂ ಸ್ವಾಗತ ಮಾಡುತ್ತೇವೆ, ಅದರ ಮೇಲೆ 400 ರೂಪಾಯಿ ನಾವು ಕೊಡುತ್ತೇವೆ. ಈ ಎರಡೂ ಬೆಳೆಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವಂಥ ಕೆಲಸವನ್ನು ಮಾಡುತ್ತಿದ್ದೇವೆ. ನಮ್ಮದು standing commitment ಇದೆ. ರಾಗಿ ಮತ್ತು ಜೋಳ ಎಷ್ಟು ಬೆಳೆದರೂ ಸರ್ಕಾರ ಅದನ್ನು ರೈತರಿಂದ ಎಂಎಸ್‌ಪಿ + 400 ರೂಪಾಯಿಗೆ ಖರೀದಿ ಮಾಡುತ್ತೇವೆ. ಬಂದಂತಹ ಅಷ್ಟೂ ಪ್ರಮಾಣವನ್ನು ನಾವು ಖರೀದಿ ಮಾಡಿ ಮಾರಾಟ ಮಾಡಿ ಲಾಭ ಮಾಡುವುದಕ್ಕೆ ಅಲ್ಲ. ಅಷ್ಟನ್ನು ಪಿಡಿಎಸ್ ವ್ಯವಸ್ಥೆ ಮುಖಾಂತರ ವಾಪಸ್ಸು ಜನರಿಗೆ ಉಚಿತವಾಗಿ ಜನರಿಗೆ ಕೊಡುತ್ತೇವೆ. ರೈತರಿಂದ 21 ಅಥವಾ 22 ರೂಪಾಯಿಗೆ ಖರೀದಿ ಮಾಡಿ, ನಾವು ಅದರ ಮೇಲೆ 3-4 ರೂಪಾಯಿ ಖರ್ಚು ಮಾಡಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

25 ಅಥವಾ 26 ರೂಪಾಯಿ ಖರ್ಚು ಮಾಡಿ ಅದನ್ನು ವಾಪಸ್ಸು ಆರೋಗ್ಯಕ್ಕೆ ಒಳ್ಳೆಯದಾಗಲಿ ಎಂದು ಪಿಡಿಎಸ್ ಮುಖಾಂತರ ಅಕ್ಕಿ ಬದಲಿಗೆ ಕೊಡುತ್ತೇವೆ. ಈ ಕಾರ್ಯಕ್ರಮ ಕರ್ನಾಟಕದಲ್ಲಿ ಮಾತ್ರ ಇರುವಂಥಾದ್ದು. ಇದು ಕೇವಲ ರಾಗಿ ಜೋಳ ಅಷ್ಟೆ ಅಲ್ಲ, ಸಿರಿಧಾನ್ಯಗಳ ಜೊತೆಗೆ ಪ್ರೋತ್ಸಾಹ ಕೊಡುವುದರ ಜೊತೆಗೆ ದ್ವಿದಳ ಧಾನ್ಯಗಳನ್ನು ಸಹ ಪಿಡಿಎಸ್ ನಲ್ಲಿ ಕೊಡುವುದಕ್ಕೆ ಪ್ರಾರಂಭ ಮಾಡುತ್ತಿದ್ದೇವೆ. ಅದು ಸ್ವಲ್ಪ ವಿಳಂಬವಾಗಿದೆ. ಈಗ ಅದು streamline ಆಗುತ್ತಿದೆ. ದ್ವಿದಳ ಧಾನ್ಯ ಎಂದರೆ ಒಂದು ತಿಂಗಳು ಕಡಲೆ, ಇನ್ನೊಂದು ತಿಂಗಳು ತೊಗರಿ, ಮತ್ತೊಂದು ತಿಂಗಳು ಹೆಸರು ಆಗಬಹುದು, ದ್ವಿದಳ ಧಾನ್ಯಗಳನ್ನು ಸಹ ನಾವು ಪಿಡಿಎಸ್ ಮುಖಾಂತರ ಕಡಿಮೆ ದರದಲ್ಲಿ ಜನರಿಗೆ ಕೊಡುವಂಥ ಕಾರ್ಯಕ್ರಮವನ್ನು ಸಹ ನಮ್ಮ ರಾಜ್ಯದಲ್ಲಿ ಪ್ರಾರಂಭ ಮಾಡುತ್ತಿದ್ದೇವೆ. ಅದೇ ರೀತಿ ಸಾವಯವ ಕೃಷಿಗೆ ಸಹ ಪ್ರೋತ್ಸಾಹ ಕೊಡುತ್ತಿದ್ದೇವೆ. ಸಾವಯವ ಕೃಷಿ ಭಾಗ್ಯ ಪ್ರಾರಂಭವಾದಮೇಲೆ ಸುಮಾರು 75,000 ಹೆಕ್ಟೇರ್ ಪ್ರದೇಶವನ್ನು ನಾವು ಸಾವಯವ ಕೃಷಿಗೆ ಪರಿವರ್ತನೆ ಮಾಡಿದ್ದೇವೆ. ಪರಿವರ್ತನೆ ಮಾಡುವುದಕ್ಕೆ ಖರ್ಚು ಕೊಡುವುದರ ಜೊತೆಗೆ ಅವರ ಸಂಘಗಳನ್ನು ರಚನೆ ಮಾಡಿ 14 ಒಕ್ಕೂಟಗಳನ್ನು ಮಾಡಿದ್ದೇವೆ. ಸಾವಯವ ಕೃಷಿಯಲ್ಲಿ ಬೆಳೆ ಬೆಳೆಯುವುದಕ್ಕೆ ಸಮಸ್ಯೆ ಅಲ್ಲ, ಅವುಗಳಿಗೆ ಒಳ್ಳೆಯ ಬೆಲೆ ಮತ್ತು ಮಾರುಕಟ್ಟೆ ಸಿಗಬೇಕು. ಅವರಿಗೆ ಮಾರ್ಕೆಟ್ ಲಿಂಕೇಜ್ ಮಾಡುವುದಕ್ಕೆ 14 ಒಕ್ಕೂಟಗಳನ್ನು ರಚನೆ ಮಾಡಿ. . .

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸಾವಯವ ಕೃಷಿಗೆ ಎಷ್ಟು ಕೊಡುತ್ತೀರೋ, ನೈಸರ್ಗಿಕ ಕೃಷಿಗೆ ಏಕೆ ಅಷ್ಟು ಬೆಂಬಲ ಕೊಡುತ್ತಿಲ್ಲವೆಂದು ಹೇಳಿ.

ಶ್ರೀ ಕೃಷ್ಣ ಬೈರೇಗೌಡ : ತಾವು ಕಳೆದ ಬಾರಿ ಪ್ರಸ್ತಾಪ ಮಾಡಿದ ಮೇಲೆ ನಾವು ವಿಶ್ವವಿದ್ಯಾಲಯಗಳಿಗೆ ಹೇಳಿದ್ದೇವೆ. ಅವರು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ವರದಿ ಕೊಟ್ಟರೆ ಅದನ್ನೂ ಸಹ ಇದರಲ್ಲಿ ಸೇರಿಸಿಕೊಳ್ಳುತ್ತೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಎಂ.ಎಸ್ಸಿ ಎ.ಜಿ. ಯಲ್ಲಿ ಸಬ್ಜೆಕ್ಟ್ ಇದೆ. ಅದನ್ನು ಸರ್ಕಾರ ಅನುಷ್ಠಾನಕ್ಕೆ ತರುವುದರಲ್ಲಿ war footನಲ್ಲಿ ಕೆಲಸ ಮಾಡಿದರೆ ಅದು ಆಗುತ್ತದೆ. ಅದರ ಬಗ್ಗೆ ದಯವಿಟ್ಟು ನೋಡಿ. ಮಾನ್ಯ ಚಂದ್ರಬಾಬು ನಾಯ್ಡು ರವರು ಸುಭಾಶ್ ಪಾಳೇಕರ್ ರವರನ್ನು ಕರೆಸಿ,

ನಮ್ಮ ರಾಜ್ಯದಲ್ಲಿ ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದರು, ತಾವು ಆ ದಿಕ್ಕಿನಲ್ಲಿ ಆಲೋಚನೆ ಮಾಡಿ.

ಶ್ರೀ ಕೃಷ್ಣ ಬೈರೇಗೌಡ : ವೈಜ್ಞಾನಿಕ ವರದಿ ಬಂದಮೇಲೆ ಅದನ್ನು ನೋಡಿ ಮಾಡುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಜೋಳ ಮತ್ತು ರಾಗಿಗೆ ಶಾಶ್ವತವಾಗಿ ಪ್ರೋತ್ಸಾಹಧನ ರೂ.400/- ಕೊಡುತ್ತೇವೆಂದು ಹೇಳಿದರು. ಅದು ಒಳ್ಳೆಯ ಕೆಲಸ. ಆದರೆ ಸರ್ಕಾರ ಒಂದು ಆಲೋಚನೆ ಮಾಡಬೇಕು. ನಾವು ಒಂದು ಎಕರೆಗೆ ಎಷ್ಟು ಜೋಳ ಬೆಳೆಯುತ್ತೇವೆ? ಒಣ ಬೇಸಾಯದಲ್ಲಿ ಐದು ಕ್ವಿಂಟಾಲ್‌ಗಿಂತಲೂ ಜಾಸ್ತಿ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಐದು ಕ್ವಿಂಟಾಲ್ ಎಂದರೆ ಹಣ ಎಷ್ಟಾಯಿತು? 5X3=15 ಆಯಿತು. ಸರಾಸರಿ 3 ಸಾವಿರ ರೂಪಾಯಿ ಸಿಕ್ಕರೂ 15 ಸಾವಿರ ರೂಪಾಯಿ ಆಗುತ್ತದೆ. ಅದರಿಂದ ರೈತರಿಗೆ ಖರ್ಚು ವೆಚ್ಚ ಪೂರೈಕೆಯಾಗುವುದಿಲ್ಲ. ಎರಡನೆಯದಾಗಿ, ಅವನು ದುಡಿದ ದುಡಿಮೆಗೆ ಲಾಭ ಸಿಗುವುದಿಲ್ಲ. ಅದಕ್ಕೆ ನಾನು ಸರ್ಕಾರಕ್ಕೆ ಏನು ಸಲಹೆ ಮಾಡುತ್ತೇನೆಂದರೆ ಬೆಂಬಲ ಬೆಲೆ ಹೆಚ್ಚು ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದೇವೆ ಎಂದು ಹೇಳಿದಿರಿ. ಕೇಂದ್ರ ಸರ್ಕಾರ ಮಾಡದೇ ಹೋದರೂ ಕೂಡ ತಾವು ಹೆಚ್ಚಿನ ಪ್ರಮಾಣದಲ್ಲಿ ಅಂದರೆ ಕನಿಷ್ಠ ಒಂದು ಸಾವಿರ ರೂಪಾಯಿಯಾದರೂ ಪ್ರೋತ್ಸಾಹ ಧನ ಕೊಡುತ್ತೇವೆಂದು ಹೇಳಬೇಕು. ಜೋಳವನ್ನು ಉತ್ತರ ಕರ್ನಾಟಕದ ಹಳೆ ಹತ್ತು ಜಿಲ್ಲೆಗಳಲ್ಲಿ ಪ್ರತಿನಿತ್ಯ ಉಪಯೋಗ ಮಾಡುತ್ತಾರೆ. ಅವರಿಗೆ ಪ್ರೋತ್ಸಾಹ ಕೊಟ್ಟರೆ ಹೆಚ್ಚು ಜೋಳ ಬೆಳೆಯುತ್ತಾರೆ. ಇಲ್ಲದಿದ್ದರೆ ಎಲ್ಲರೂ ತೊಗರಿ, ಕಡಲೆ, ಸೂರ್ಯಪಾನ ಬೆಳೆಯುವುದು, ಈ ರೀತಿ ವಾಣಿಜ್ಯ ಬೆಳೆಗಳನ್ನು ಬೆಳೆಯುವುದರ ಕಡೆ ಮುಖ ಮಾಡುತ್ತಾರೆ. ಅದಕ್ಕೆ ಜೋಳ ಬೆಳೆಯುವುದಕ್ಕೆ ಹೆಚ್ಚು ಪ್ರೋತ್ಸಾಹ ಮಾಡಬೇಕು, ಅದು ಅತೀ ಅವಶ್ಯಕವಾಗಿದೆ ಎನ್ನುವುದು ಸರ್ಕಾರದ ಕಾರ್ಯಕ್ರಮವಾಗಿದೆ, ಅದು ಒಳ್ಳೆಯದು. ಆದರೆ ಅವರಿಗೆ ಪ್ರೋತ್ಸಾಹ ಧನ ಹೆಚ್ಚು ಮಾಡಿ ಕನಿಷ್ಠ 20 ಸಾವಿರ ರೂಪಾಯಿಯಾದರೂ ಒಣ ಬೇಸಾಯದಲ್ಲಿ ಒಂದು ಎಕರೆಗೆ ಲಾಭ ಬರುವ ರೀತಿಯಲ್ಲಿ ನೋಡಬೇಕು. ಅದರಲ್ಲಿ ಖರ್ಚು ವೆಚ್ಚ ನೋಡಿ ಅವನಿಗೆ ಕನಿಷ್ಠ 5-6 ಸಾವಿರ ರೂಪಾಯಿಯಾದರೂ ಉಳಿಯಬೇಕು.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

19-06-2017

ಶ್ರೀ ಕೃಷ್ಣ ಬೈರೇಗೌಡ : ಶೇಕಡಾವಾರು ನೋಡಿದರೆ 25% ಅಷ್ಟು ಪ್ರೋತ್ಸಾಹ ಧನ ಯಾವ ರಾಜ್ಯದ ಯಾವ ಬೆಳೆಗೂ ಕೊಡುತ್ತಿಲ್ಲ. ನೀವು ಹೇಳುವ ವಿಚಾರವನ್ನು ನಾನು ಒಪ್ಪುತ್ತೇನೆ. ನಾನು ಅಲ್ಲಗೆಳೆಯುತ್ತಿಲ್ಲ. ಆದರೆ ತಮ್ಮ ನಿರೀಕ್ಷೆಗೆ ಅಷ್ಟು ಮಾಡುವುದಕ್ಕೆ ಹೋಗಿದಿದ್ದರೂ ಸಹ ನಮ್ಮ ಇತಿಮಿತಿಯಲ್ಲಿ ಗರಿಷ್ಠ ಈ ಬೆಳೆಗಳಿಗೆ ಮಾಡುತ್ತಿದ್ದೇವೆ. ಇವು ನಮ್ಮ ನಾಡಿನ ಬೆಳೆಗಳು, ನಮ್ಮ ಭೂಮಿಯ ಬೆಳೆಗಳು, ಇವುಗಳನ್ನು ಉಳಿಸಬೇಕು, ಇವು ಜನರ ಆರೋಗ್ಯಕ್ಕೆ ಒಳ್ಳೆಯದು ಎಂದು ಇನ್ನೂ ಹೆಚ್ಚಿಗೆ ಮಾಡುವ ಪ್ರಯತ್ನ ಮಾಡೋಣ. ಮಾನ್ಯ ಅಧ್ಯಕ್ಷರು ಸಮಯದ ಮಿತಿ ಕೊಟ್ಟಿರುವುದರಿಂದ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮದು ಬೆಳೆಗಳು ಅಷ್ಟೆ ಅಲ್ಲ. ಇಳುವರಿ ಹೇಗೆ ಹೆಚ್ಚಿಗೆ ಮಾಡಬೇಕೆನ್ನುವುದಕ್ಕೆ . . .

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಹೇಳಿದ್ದಕ್ಕೆ ಉತ್ತರ ಕೊಡಿ. ನಾನೇಕೆ ಸಲಹೆ ಮಾಡಿದೆ ಎಂದರೆ ಉಚಿತವಾಗಿ ನಾಳೆ ರಾಗಿ ಮತ್ತು ಜೋಳವನ್ನು ಪಿಡಿಎಸ್ ಮುಖಾಂತರ ಕೊಡುತ್ತೇವೆಂದು ಹೇಳಿದಿರಿ. ಅದಕ್ಕೆ ಸರ್ಕಾರ 30-32 ರೂಪಾಯಿ ಕೊಟ್ಟು ಅಕ್ಕಿ ಖರೀದಿ ಮಾಡುವುದರ ಬದಲಾಗಿ ಇದಕ್ಕೆ ಸ್ವಲ್ಪ ಜಾಸ್ತಿ ಪ್ರೋತ್ಸಾಹ ಮಾಡಿದರೆ ರೈತರಿಗೆ ಉದ್ಯೋಗವಾಗುತ್ತದೆ ಮತ್ತು ಉತ್ತರ ಕರ್ನಾಟಕದ ರೈತರ ಆಹಾರ ಪದ್ಧತಿಗೆ ಸಹಾಯವಾಗುತ್ತದೆ. ತಾವು ಆ ರೀತಿ ಮಾಡಬೇಕು.

ಶ್ರೀ ಕೃಷ್ಣ ಬೈರೇಗೌಡ : ನಾನು ಹೆಚ್ಚಿಗೆ ಹೇಳುವುದಕ್ಕೆ ಹೋದರೆ ಬಹಳ ಸಮಯವಾಗುತ್ತದೆ. ನಾವು ಕೇಂದ್ರದ ಆಹಾರ ಇಲಾಖೆಗೆ ಇನ್ನೊಂದು ಪ್ರಸ್ತಾವನೆ ಕೊಟ್ಟಿದ್ದೇವೆ. ಅಕ್ಕಿ ನಮಗೆ ಸಾಗಾಣಿಕೆ ಮಾಡುವುದಕ್ಕೆ ಒಂದು ಕಿಲೋಗೆ ನಾಲ್ಕು ರೂಪಾಯಿ ಖರ್ಚು ಬರುತ್ತದೆ.

(ಮುಂದು)

19-06-17 - 6.30 - (44) - RD-CP

ಶ್ರೀ ಕೃಷ್ಣ ಬೈರೇಗೌಡ: ಮುಂದು.. ..

19-06-2017

ನಾವು ರಾಗಿ, ಜೋಳ ಕೊಟ್ಟು ಕೊಳ್ಳುತ್ತೇವೆ. ನಿಮಗೆ 4 ರೂ.ಗಳು ಏನು ಉಳಿತಾಯವಾಗುತ್ತದೆ, ಅದರಲ್ಲಿ 2 ರೂ.ಗಳನ್ನು ನಮಗೆ ಕೊಡಿ. ನಾವು ರೈತರಿಗೆ ಹೆಚ್ಚಿಗೆ ಬೋನಸ್ ಕೊಡುತ್ತೇವೆಂದು ಹೇಳುತ್ತಿದ್ದೇವೆ. ಆದರೆ ದುರಾದೃಷ್ಟವೆಂದರೆ ಕೇಂದ್ರಸರ್ಕಾರ ಅದಕ್ಕೂ ಒಪ್ಪುತ್ತಿಲ್ಲ. ನಾವು ಎಲ್ಲಾ ಆಯಾಮದಲ್ಲೂ ಯೋಚನೆ ಮಾಡುತ್ತಿದ್ದೇವೆ, ನಾನು ಅದಾಯ ಸುಧಾರಣೆ ಮಾಡುವುದಕ್ಕೋಸ್ಕರ ಹೇಳಿದೆ. ನಾವು ಇಳುವರಿ ಹೆಚ್ಚಿಗೆ ಮಾಡುವುದಕ್ಕೂ ಹೊಸ ತಂತ್ರಜ್ಞಾನವನ್ನು ಉಪಯೋಗಿಸಿ ರಾಗಿ, ಜೋಳದ ಹೊಸ ತಳಿಗಳನ್ನು ಮುಂದಿನ ವರ್ಷದಿಂದ ಪರಿಚಯ ಮಾಡುವಂಥದ್ದನ್ನು ಮಾಡುತ್ತಿದ್ದೇವೆ. ತಾವು ಹೇಳಿದ ಸಲಹೆಗಳನ್ನು ಕೂಡ ಖಂಡಿತವಾಗಿ, ನಾವು ಅಲೋಚನೆ ಮಾಡುತ್ತೇವೆ. ನಾವು ಸಾವಯವ ಕೃಷಿಗೂ ಕೂಡ ಅಷ್ಟೆ ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ. ಇದಕ್ಕೆ 14 ಒಕ್ಕೂಟಗಳನ್ನು ಮಾಡಿ, ಮಾರುಕಟ್ಟೆ ಜೊತೆಗೆ ಅವರಿಗೆ ನೇರ ಸಂಪರ್ಕ ಮಾಡುತ್ತಿದ್ದೇವೆ. ಈ ಒಕ್ಕೂಟಗಳಿಗೆ ರೈತರು ಬೆಳೆದಂಥದ್ದನ್ನು ಸಂಗ್ರಹಣೆ ಮಾಡಿ, ಪ್ಯಾಕಿಂಗ್ ಮಾಡಿ, ಅದನ್ನು ಮಾರುಕಟ್ಟೆ ಮಾಡುವುದಕ್ಕೆ ಅವರಿಗೆ ಬಂಡವಾಳವನ್ನು ಸಹಿತ ನಾವೇ ಹೂಡುತ್ತಿದ್ದೇವೆ. ಅವರಿಗೆ ಏನಾದರೂ ಗಾಡಿ, ware house, grading, packing machine ಬೇಕಾದರೆ, ನಾವೇ ಕೊಟ್ಟು, ಅವರಿಗೆ certification ಖರ್ಚು ಅನ್ನು ನಾವೇ ಕೊಟ್ಟು, ಮಾರುಕಟ್ಟೆಯಲ್ಲಿ ಒಳ್ಳೆಯ ಸೌಲಭ್ಯವನ್ನು ಪಡೆದುಕೊಳ್ಳುವುದಕ್ಕೆ, ನಾವು ಅವರಿಗೆ ಸಹಾಯ ಮಾಡುತ್ತಿದ್ದೇವೆ. ನಾವು ಕಳೆದ ನಾಲ್ಕು ವರ್ಷಗಳಲ್ಲಿ ಸಾವಯವ ಕೃಷಿಗೆ ಆಯವ್ಯಯದಲ್ಲಿ ಕೊಟ್ಟಿದ್ದು 149 ಕೋಟಿ ರೂ.ಗಳಲ್ಲಿ ಸುಮಾರು 138 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಹಿಂದೆ ಸಾವಯವದ ಬಗ್ಗೆ ಬಹಳ ಪ್ರಚಾರವಾಗಿತ್ತು. 2012-13ನೇ ಇಸವಿಯಲ್ಲಿ ಆಯವ್ಯಯದಲ್ಲಿ ಸಾವಯವ ಕೃಷಿ ಪ್ರೋತ್ಸಾಹಕ್ಕೆ 200 ಕೋಟಿ ರೂ.ಗಳನ್ನು ಕೊಟ್ಟಿದ್ದು, ಅದರಲ್ಲಿ 13 ಕೋಟಿ ರೂ.ಗಳು ಖರ್ಚಾಗಿದೆ. ಈಗ ನಾವು ಹಾಗೆ ಮಾಡಿಲ್ಲ, ನಾವು ಮೊದಲನೇ ವರ್ಷ 44 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. ಇದು ಮೊದಲನೇ ವರ್ಷವಾಗಿದ್ದರಿಂದ 33 ಕೋಟಿ ರೂ.ಗಳು ಖರ್ಚಾಯಿತು. ಆನಂತರ, 2015-16ರಲ್ಲಿ 40 ಕೋಟಿ ರೂ.ಗಳಲ್ಲಿ 39 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. 2016-17ನೇ ಇಸವಿಯಲ್ಲಿ 56 ಕೋಟಿ ರೂ.ಗಳಿಗೆ 56 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ.

19-06-2017

ಈ ವರ್ಷ 40 ಕೋಟಿ ರೂ.ಗಳನ್ನು ಸಾವಯವ ಕೃಷಿ ಪ್ರೋತ್ಸಾಹಕ್ಕಾಗಿ ಇಟ್ಟುಕೊಂಡಿದ್ದೇವೆ. ಇದು ಅಲ್ಲದೇ ಕೇಂದ್ರದಿಂದಲೂ ಸಹ ಇದಕ್ಕೆ ಸ್ವಲ್ಪ ಹಣ "ಪರಂಪರಾಗತ್ ಕೃಷಿ ವಿಕಾಸ್ ಯೋಜನೆ"ಯಿಂದಲೂ ಬರುತ್ತಿದೆ. ಅದನ್ನೂ ಸಹ ನಾವು ಮಾಡುತ್ತಿದ್ದೇವೆ. ಇನ್ನು ನಮ್ಮ ಸರ್ಕಾರದ ಮುಖ್ಯವಾದಂಥ ಕಾರ್ಯಕ್ರಮವಾದ "ಕೃಷಿ ಭಾಗ್ಯ" ಯೋಜನೆಯಲ್ಲಿ ಮಳೆಯನ್ನು ನಂಬಿ ವ್ಯವಸ್ಥಾಯ ಮಾಡುವಂಥ ರೈತರಿಗೆ, ಆಗಲೇ ಮಾನ್ಯ ಕೋನರೆಡ್ಡಿಯವರು ಪ್ರಸ್ತಾಪ ಮಾಡಿದರು. ಹಳೆಯ ನೀರನ್ನು ಸಂಗ್ರಹ ಮಾಡಿಟ್ಟುಕೊಂಡು, ಆ ನೀರನ್ನು ಮಳೆ ಕೈ ಕೊಟ್ಟಾಗ ಬಳಸುವುದರಿಂದ, ರೈತರ ಬೆಳೆಯನ್ನು ಉಳಿಸಿಕೊಳ್ಳಬಹುದು, ಇಳುವರಿಯನ್ನು ಸಹ ಹೆಚ್ಚಿಗೆ ತೆಗೆದುಕೊಳ್ಳಬಹುದು. ಇದಕ್ಕೆ ರೈತರಿಂದ ಬಹಳ ವ್ಯಾಪಕವಾಗಿ ಸ್ಪಂದನೆ ಸಿಕ್ಕಿದೆ. ಇಲ್ಲಿಯವರೆಗೂ ರಾಜ್ಯದಲ್ಲಿ ಸುಮಾರು 1,59,000 ಕೃಷಿ ಹೊಂಡಗಳು ಆಗಿವೆ. ಇದರಲ್ಲಿ ಬಹಳ ಹೆಚ್ಚಿಗೆ ಸ್ಪಂದನೆ ಉತ್ತರ ಕರ್ನಾಟಕದ ಭಾಗದ ಕೆಲವು ಜಿಲ್ಲೆಗಳಲ್ಲಿ ಸಿಕ್ಕಿದೆ, ಅಲ್ಲಿ ಹೆಚ್ಚಿನ ರೈತರು ಮಾಡಿಕೊಂಡಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಗೆ 1,461 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ಈ ವರ್ಷದ ಬೇಡಿಕೆಯಲ್ಲಿ ಕೃಷಿ ಭಾಗ್ಯ ಯೋಜನೆಗೆ 600 ಕೋಟಿ ರೂ.ಗಳ ಪ್ರಸ್ತಾಪನೆ ಇವತ್ತು ಸದನದ ಮುಂದೆ ಇದೆ. ಈ ವರ್ಷ ಸುಮಾರು 70,000 ಕೃಷಿ ಹೊಂಡಗಳನ್ನು ಮಾಡಬೇಕೆಂದು ಆಯೋಜನೆ ಮಾಡಿಕೊಂಡಿದ್ದೇವೆ. ಈಗಾಗಲೇ 21,000 ಕೃಷಿ ಹೊಂಡಗಳು ಆಗಿವೆ. ಈ ಹಣಕಾಸು ವರ್ಷ ಮುಗಿಯುವುದರೊಳಗೆ ಒಟ್ಟು ಸುಮಾರು 2,20,000 ಅಷ್ಟು ಗುರಿಯನ್ನು ಮುಟ್ಟಬೇಕೆಂದು ಇಟ್ಟುಕೊಂಡಿದ್ದೇವೆ. ಇದನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಬರಗಾಲಗಳು ಒಂದರ ಮೇಲೆ ಒಂದು ಬರುತ್ತಿದೆ. ರೈತರ ಅದಾಯ ಕುಂಠಿತವಾಗುತ್ತಿದೆ. ಇಂಥ ಸಂದರ್ಭದಲ್ಲಿ ಕೃಷಿ ಭಾಗ್ಯ ಯೋಜನೆ ರೈತರ ನೆರವಿಗೆ ಬರುತ್ತದೆನ್ನುವುದು, ನಮ್ಮ ಹೇಳಿಕೆಯಷ್ಟೆ ಅಲ್ಲ, ಅದಕ್ಕೆ ಒಂದು ಅಧ್ಯಯನವನ್ನು ಸಹ ಮಾಡಿಸಿದ್ದೇವೆ. ಕೃಷಿ ಬೆಲೆ ಆಯೋಗದಿಂದಲೂ ಮಾಡಿಸಿದ್ದೇವೆ, ವಿಶ್ವವಿದ್ಯಾಲಯಗಳಿಂದಲೂ ಮಾಡಿಸಿದ್ದೇವೆ. ನಾವು ಅಧ್ಯಯನ ಮಾಡಿಸಿದಾಗ ಕೃಷಿ ಭಾಗ್ಯ ಯೋಜನೆಯನ್ನು ಯಾರು ಸರಿಯಾಗಿ ಅನುಷ್ಠಾನ ಮಾಡಿಕೊಂಡಿದ್ದಾರೆ. ಅವರ ಬೆಳೆ ಇಳುವರಿ ಎಷ್ಟು ಬಂದಿದೆಯೆನ್ನುವುದನ್ನು ಮತ್ತು ಬೇರೆಯವರಿಗೆ ಅಂದರೆ ಕೃಷಿ ಭಾಗ್ಯವನ್ನು ಯಾರು ಅನುಷ್ಠಾನ ಮಾಡಿಕೊಂಡಿಲ್ಲ, ಅವರಿಗೆ ಹೋಲಿಕೆ ಮಾಡಿ ನೋಡಿದಾಗ, ಕೃಷಿ ಭಾಗ್ಯವನ್ನು ಅನುಷ್ಠಾನ

ಮಾಡಿಕೊಂಡಿರುವವರಿಗೆ 20% ನಿಂದ ಹಿಡಿದು 120% ಹೆಚ್ಚಿಗೆ ಇಳುವರಿ ಬಂದಿದೆ. ಅಂದರೆ ಹೆಚ್ಚಿಗೆ ಇಳುವರಿ ಬಂದರೆ, ಅವರಿಗೆ ಅದಾಯ ಬಂದ ಹಾಗೆ ಆಗುತ್ತದೆ. ಹಾಗಾಗಿ ಒಣ ಬೇಸಾಯದಲ್ಲೂ ಸುಸ್ಥಿರತೆಯನ್ನು ತರಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು. .. .

ಶ್ರೀ ಎನ್.ಹೆಚ್.ಕೋನರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಳೆ ಇಲ್ಲದೇ ಇರುವಂಥ ಸಮಯದಲ್ಲಿ last ಬೆಳೆ ಬರುವಂಥ ಬೆಳೆಗೆ ಜೀವ ಕೊಟ್ಟ ಹಾಗೆ ಆಗುತ್ತದೆ, ಅದರಿಂದ ಬಹಳ ದೊಡ್ಡ ಉಪಯೋಗವಾಯಿತು.

ಶ್ರೀ ಕೃಷ್ಣ ಬೈರೇಗೌಡ: ಹೌದು, ಮಾನ್ಯ ಆನಂದ್‌ಸಿಂಗ್‌ರವರು ಇಲ್ಲಿದ್ದಾರೆ. ನಾನು ಅವರ ಜೊತೆಗೆ ಮೊನ್ನೆ ಅವರ ಕ್ಷೇತ್ರದಲ್ಲಿ ಒಂದು ಕಡೆ ಹೋಗಿದ್ದೆವು. ಅವರ ಮುಂದೆಯೇ ಕೆಲವು ಊರಿನ ರೈತರು ಹೇಳಿದರು. ನಾವು ಹೊಲದಲ್ಲಿ ನಿಂತುಕೊಂಡು ಮಾತನಾಡುತ್ತಿದ್ದೆವು, ಅವರನ್ನು ನಿಮ್ಮ ಊರಿನ ಪರಿಸ್ಥಿತಿ ಹೇಗೆ ಎಂದು ಕೇಳಿದಾಗ, ಅಲ್ಲಿಗೆ ಬಂದಿದ್ದ ರೈತರು ಹೇಳಿದರು. ನಾವು ಹೋದ ವರ್ಷ ಕೃಷಿ ಭಾಗ್ಯ ಮಾಡಿಕೊಂಡಿದ್ದೆವು, ನಮಗಷ್ಟೆ ಬೆಳೆಯಾಗಿದೆ, ಉಳಿದವರು ಯಾರಿಗೂ ನಮ್ಮ ಊರಿನಲ್ಲಿ ಬೆಳೆಯಾಗಿಲ್ಲವೆಂದು ಹೇಳಿದರು. ಆಗ ಮಾನ್ಯ ಆನಂದ್‌ಸಿಂಗ್‌ರವರು ಸಹ ಇದ್ದರು, ಅವರ ಸಮ್ಮುಖದಲ್ಲಿ ನಡೆದಂಥ ಚರ್ಚೆ, ತಾವು ಅದನ್ನು ಒಪ್ಪುತ್ತೀರೆಂದು ನಾನು ಭಾವಿಸುತ್ತೇನೆ. ಆ ರೀತಿ ತಾವು ಹೇಳಿದ ಹಾಗೆ ಮಳೆ ಕೈಕೊಟ್ಟಾಗ ಬೆಳೆ ಉಳಿಸಿಕೊಳ್ಳುವುದಕ್ಕೆ, ಇದು ಒಂದು ರೀತಿ ಜೀವ ಕೊಡುವಂಥ ಶಕ್ತಿ ಈ ಯೋಜನೆಯಲ್ಲಿದೆ. ಇದರ ಜೊತೆಗೆ ಇಳುವರಿಯೂ ಸಹ ಶೇ.20 ರಿಂದ ಶೇ.100, ಶೇ.120 ರವರೆಗೂ ಹೆಚ್ಚುವರಿಯಾಗಿ ಇಳುವರಿಯನ್ನು ಪಡೆದುಕೊಂಡು, ಅದಾಯ ಹೆಚ್ಚಿಗೆ ಪಡೆದುಕೊಳ್ಳುವುದಕ್ಕೂ ಸಹ ಈ ಯೋಜನೆ ರೈತರಿಗೆ ಸಹಕಾರಿಯಾಗಿದೆ. ಕೃಷಿ ಇಲಾಖೆ ಮುಖಾಂತರ 600 ಕೋಟಿ ರೂ.ಗಳ ಪ್ರಸ್ತಾವನೆ ಇದೆ. ತೋಟಗಾರಿಕಾ ಇಲಾಖೆಯಲ್ಲೂ ಸಹ 200 ಕೋಟಿ ರೂ.ಗಳ ಪ್ರಸ್ತಾವನೆ ಇದೆ. ಈ ವರ್ಷ ಕೃಷಿ ಭಾಗ್ಯ ಯೋಜನೆಗೆ ಒಟ್ಟು 800 ಕೋಟಿ ರೂ.ಗಳ ಪ್ರಸ್ತಾವನೆ ಇವತ್ತು ಸದನದ ಮುಂದೆ ಇದೆ. ಮಾನ್ಯ ಮುಖ್ಯಮಂತ್ರಿಯವರು ಮತ್ತು ಅನೇಕರು ಪಕ್ಷಾತೀತವಾಗಿ ಇದಕ್ಕೆ ಎಲ್ಲರೂ ಸಹಕಾರ ಕೊಟ್ಟಿದ್ದಾರೆ.

19-06-2017

ಶ್ರೀ ಬಿ.ಆರ್.ಯಾವಗಲ್: ಮಾನ್ಯ ಅಧ್ಯಕ್ಷರೆ, ಇದು ಬಹಳ ಒಳ್ಳೆಯ ಕಾರ್ಯಕ್ರಮವಾಗಿದ್ದು, ಅತ್ಯಂತ ಯಶಸ್ವಿ ಕಾರ್ಯಕ್ರಮ, ಜನರು ನೇರವಾಗಿ ಭಾಗವಹಿಸಿ ಮಾಡಿಕೊಳ್ಳುವ ಕಾರ್ಯಕ್ರಮವಾಗಿದೆ. ನಾನು ಮಾನ್ಯ ಮಂತ್ರಿಯವರಿಗೆ ಒಂದು ಸಲಹೆ ಮಾಡುವುದೇನೆಂದರೆ, ತಾವು ಒಬ್ಬರಿಗೆ ಒಂದೊಂದು ಕೃಷಿ ಭಾಗ್ಯದಲ್ಲಿ ಕೆರೆಯನ್ನು ಮಾಡಿಕೊಳ್ಳಲು ಸಲಕರಣೆಗಳನ್ನು ಕೊಡುತ್ತಿದ್ದೀರಿ. ಆ ರೀತಿಯಾಗಿ ಇದನ್ನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಅವರ ಜಮೀನು ಏನು ಇರುತ್ತದೆ, ಒಂದೆರಡು ವ್ಯವಸ್ಥೆಯನ್ನು ಮಾಡಿಕೊಳ್ಳುವುದಕ್ಕೆ, ಇನ್ನೂ ಹೆಚ್ಚಿನ ಕೆರೆಗಳನ್ನು ಕೊಡುವುದಕ್ಕೆ, ಈಗ ಒಂದೊಂದು ಕೆರೆಯನ್ನು ಕೊಡುತ್ತಿದ್ದಾರೆ, ಇನ್ನೂ ಹೆಚ್ಚಿನ ಕೆರೆಗಳನ್ನು ಕೊಡುವುದಕ್ಕೆ ತಾವು ಪರಿಶೀಲನೆ ಮಾಡಬೇಕು.

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಇನ್ನೂ ಮುಂದೆ ಮಾಡುತ್ತಾ ಮಾಡುತ್ತಾ ಒಂದು ಸುತ್ತು ಇರುವ ಬೇಡಿಕೆಯನ್ನು ಈಡೇರಿಸಿದ ಮೇಲೆ, ಖಂಡಿತವಾಗಿಯೂ ಖಂಡನೇ ಸುತ್ತಿಗೂ ಅವಕಾಶವನ್ನು ಮಾಡಿ ಕೊಡೋಣ. ನಮಗೆ ರೈತರ ಇಳುವರಿ ಜಾಸ್ತಿಯಾಗಬೇಕು, ಉತ್ಪಾದನೆ ಜಾಸ್ತಿಯಾಗಬೇಕು, ಅದಾಯ ಜಾಸ್ತಿ ಬರಬೇಕು, ಒಂದು ಸುತ್ತು ಬೇಡಿಕೆ ಪೂರೈಸಿದ ಮೇಲೆ, ಖಂಡಿತವಾಗಿಯೂ ಇನ್ನೊಂದು ಸುತ್ತಿನಲ್ಲಿ ಅವರಿಗೂ ಸಹ ಖಂಡಿತವಾಗಿಯೂ ಅನುಕೂಲ ಮಾಡೋಣ. ತಾವು ಆನೇಕ ಸಲಹೆಗಳನ್ನು ಏನು ಕೊಟ್ಟಿದ್ದೀರಿ, ಅವೆಲ್ಲವನ್ನೂ ನಾವು ಸರಳೀಕರಣ ಮಾಡಿದ್ದೇವೆ. ನಾವು ಎಲ್ಲಾ ಪಕ್ಷದವರ ಸಲಹೆಗಳನ್ನು ತೆಗೆದುಕೊಂಡು, ಅನುಷ್ಠಾನದಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಿ, ನಾವು ಸರಳೀಕರಣವನ್ನು ಮಾಡಿ ಕೊಟ್ಟಿದ್ದೇವೆ. ಇನ್ನೊಂದು ಬಹಳ ಚರ್ಚೆಯಾದಂಥ ವಿಷಯವೆಂದರೆ, ಈಗಲೂ ಸಹ ಚರ್ಚೆಯಾಯಿತು. ಕಳೆದ 2 ವರ್ಷಗಳಿಂದಲೂ ಬರಗಾಲವಿದ್ದುದ್ದರಿಂದ ರೈತರಿಗೆ ಬಹಳ ನಷ್ಟವಾಗಿದೆ ಎನ್ನುವಂಥ ವಿಚಾರವನ್ನು ನಾವು ಒಪ್ಪುವಂಥದ್ದೆ, ಹಾಗೂ ಕೃಷಿ ವಿಮೆ ಬಗ್ಗೆಯೂ ಸಹ ಇಲ್ಲಿ ಬಹಳ ಚರ್ಚೆಯಾಗಿದೆ. ಮಾನ್ಯ ಶಿವಲಿಂಗೇಗೌಡರಿಂದ ಹಿಡಿದು ಸುಮಾರು ಸದಸ್ಯರು ಮತ್ತು ಹಾವಗಡದ ಶಾಸಕರು, ಎಲ್ಲರೂ ಕೃಷಿ ವಿಮೆ ಬಗ್ಗೆ ಬಹಳ ಚರ್ಚೆಗಳು ಇಲ್ಲಿ ಆಗಿವೆ. ನಾವು ಕೃಷಿ ವಿಮೆಯಲ್ಲಿ ಬಹಳ ಸುಧಾರಣೆ ತರುವಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ. ನಾನು ಇಲ್ಲಿ ಎಲ್ಲವನ್ನೂ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ, ಸಮಯದ ಅಭಾವವಿರುವರಿಂದ ಆಗುವುದಿಲ್ಲ. ಆದರೆ ಕೃಷಿ ವಿಮೆ ಅನುಷ್ಠಾನದಲ್ಲಿ ನಾವು ಹಾಕಿಕೊಂಡಿರುವ ವ್ಯವಸ್ಥೆ ಏನಿದೆ, ನಾವು ಸಂರಕ್ಷಣೆ ಎನ್ನುವ

ತಂತ್ರಾಂಶವನ್ನು (software) ಅನ್ನು ತಯಾರು ಮಾಡಿದ್ದೇವೆ. ನಾನು ಬಹಳ detail ಆಗಿ ಹೇಳುವುದಕ್ಕೆ ಹೋಗುವುದಿಲ್ಲ. ಹಿಂದೆ ಎಲ್ಲಾ ಬೆಳೆ ಕಟಾವು ಪ್ರಯೋಗ, crop cutting experiment ಎಲ್ಲವನ್ನೂ ಕುಳಿತಲ್ಲೇ ಮಾಡುತ್ತಿದ್ದರು. ಈಗ ಅದನ್ನು ಸ್ಥಳಕ್ಕೆ ಹೋಗಿ ಮಾಡುವಂತೆ ಮಾಡಿದ್ದೇವೆ. ಆದರೂ ಕೆಲವು ರೈತರಿಗೆ ನ್ಯಾಯ ಸಿಕ್ಕಿಲ್ಲವೆಂದು ಕೆಲವು ಸದಸ್ಯರ ವಿಚಾರವಾಗಿದೆ. ನಾನು ತಮ್ಮ ವಿಚಾರಗಳನ್ನೆಲ್ಲಾ ಖಂಡಿತವಾಗಿಯೂ ಮನಸ್ಸಿಗೆ ಹಾಕಿಕೊಂಡಿದ್ದೇನೆ. ನಾವು ಒಂದೊಂದು ಪ್ರಕರಣದಲ್ಲೂ ನ್ಯಾಯ ಕೊಡುವುದಕ್ಕೆ ಆಗದೇ ಹೋಗಬಹುದು, ಏಕೆಂದರೆ, ಒಂದು ಚೌಕಟ್ಟಿನಲ್ಲಿ ಕೆಲಸ ಮಾಡುವಾಗ, ಪ್ರತಿಯೊಬ್ಬರಿಗೂ ಸರಿಪಡಿಸುವುದಕ್ಕೆ ಆಗದೇ ಹೋಗಬಹುದು. ಆದರೆ ತಾವು ಕೊಟ್ಟಿರುವ ಸಲಹೆಗಳನ್ನು ವ್ಯವಸ್ಥೆ ಮುಖಾಂತರ ಹೇಗೆ ಸರಿಪಡಿಸುವುದು ಎನ್ನುವುದರ ಕಡೆಗೆ, ತಾವುಗಳು ಆಕ್ರೋಶ ಏನು ವ್ಯಕ್ತಪಡಿಸಿದ್ದೀರಿ, ಅಷ್ಟೆ ಕಾಳಜಿ ಸರ್ಕಾರಕ್ಕೆ ಇದೆಯೆನ್ನುವುದನ್ನು ಸಹ ನಾನು ತಮಗೆ ಮನವರಿಕೆ ಮಾಡಬಯಸುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ನಾವು ಮಾತನಾಡಿರುವುದಲ್ಲ, ಮೊನ್ನೆ ತಾವು ಸದನದಲ್ಲಿ ಇರಲಿಲ್ಲ.

ಶ್ರೀ ಕೃಷ್ಣ ಬೈರೇಗೌಡ: ನಾನು ಇದ್ದೆ. ತಾವು ಮಾತನಾಡುವಾಗಲೂ ಇದ್ದೆ, ಅವರು ಮಾತನಾಡುವಾಗಲೂ ಇದ್ದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ತಾವು ನಾನು ಮಾತನಾಡುವಾಗ ಇರಲಿಲ್ಲ.

ಶ್ರೀ ಕೃಷ್ಣ ಬೈರೇಗೌಡ: ನಾನು ಇರಲಿಲ್ಲವೆಂದರೆ, ನಿಮ್ಮ ಹೆಸರನ್ನೂ ಏಕೆ ಹೇಳುತ್ತಿದ್ದೆ?

ಶ್ರೀ ಕೆ.ಎಂ.ಶಿವಲಿಂಗೇಗೌಡ: ನಾನು ತಮ್ಮ ಹತ್ತಿರ ಬಂದು discussion ಮಾಡಿದೆ. ನಾನು ಹೇಳುತ್ತಿರುವುದೇನೆಂದರೆ, ಇಲ್ಲಿ ಸುಮ್ಮನೆ insurance ಇಟ್ಟಿದ್ದೇವೆಂದು ಹೇಳಿ, ನಾವು ಕಾವಸ್ಥೆಗೆ insurance ಅನ್ನು ಇಟ್ಟು, ನಿಜವಾಗಿಯೂ loanees ಬಿಟ್ಟರೆ, non-loanees ಗೆ ಯಾವುದೇ ಕಾರಣದಿಂದಲೂ insurance apply ಆಗುತ್ತಿಲ್ಲ. ಅದಕ್ಕೆ ಕಾರಣವೆಂದರೆ, ಮೊದಲನೆಯದಾಗಿ, ಬ್ಯಾಂಕಿಂಗ್ ವ್ಯವಸ್ಥೆ, ಬ್ಯಾಂಕ್‌ನವರು ರೈತರ ಜೊತೆಯಲ್ಲಿ ಸರಿಯಾದ ರೀತಿಯಲ್ಲಿ ಸ್ಪಂದಿಸುತ್ತಿಲ್ಲ. ಎರಡನೆಯದಾಗಿ, ನೀವು ಕಟಾವಿನ ಸಮೀಕ್ಷೆಯ ಆಧಾರದ

ಮೇಲೆ, ತಾವು insurance ಅನ್ನು declare ಮಾಡುತ್ತೀರಿ, ಆ ಸಮೀಕ್ಷೆಯಲ್ಲಿ ಮೋಸವಿದೆಯೆಂದು ನಾನು direct ಆಗಿ ಹೇಳುತ್ತಿದ್ದೇನೆ. ಮೂರನೆಯದಾಗಿ, ನಿಮ್ಮ ಕಂಪನಿಗಳು ಏನಿವೆ, ನೀವು ಖಾಸಗಿ ಕಂಪನಿಯವರ ಮಾಲಿಕತ್ವದಲ್ಲಿರುವಂಥವರು, ಇವರು ಏನು ದಾನಶೂರ ಕರ್ಣರಲ್ಲ, ಇವರು ದೆಹಲಿಯಿಂದ ಬಂದಿರುವ ದೊರೆಗಳು, ಇವರು ಯಾವ್ಯಾವ backing ನಿಂದ ಬಂದಿರುತ್ತಾರೆಂಬುದು ಗೊತ್ತಾಗುತ್ತದೆ. ಇವರು ನಿಜವಾಗಿಯೂ ಇಲ್ಲಿ ಬಂದು ಲಾಭಕ್ಕಾಗಿ ದುಡಿಯುವುದಕ್ಕೆ ಅಲ್ಲಿಂದ ಬಂದಿದ್ದಾರೆಯೇ ಹೊರತು, ಇವರಿಗೆ ಕನ್ನಡ ಬರುವುದಿಲ್ಲ.

ಮುಂದು.. ..

19-06-2017/6.40/45/GG/HS

ಶ್ರೀ ಕೆ.ಎಂ. ಶಿವಲಿಂಗೇಗೌಡ (ಮುಂದುವರೆದುದು): ಇದರಲ್ಲಿ ಇವರು ಮಾಡುತ್ತಿರುವ ವ್ಯವಸ್ಥೆ ಕೆಟ್ಟುಹೋಗಿದೆ. ಈ ವ್ಯವಸ್ಥೆಯಲ್ಲಿ ನಾವು ನಮ್ಮ ಪ್ರಧಾನ ಮಂತ್ರಿಗಳಿಗೂ ಹೇಳುತ್ತೇವೆ, ಯಾರಿಗೆ ಬೇಕಾದರೂ ಹೇಳುತ್ತೇವೆ. ನಿಮ್ಮ ಮತ್ತು ಅವರ 50:50 partnership ನಲ್ಲಿರುವ ಈ ಯೋಜನೆ ಒಳ್ಳೆಯದಿದೆ. ಆದರೆ ಆ ಯೋಜನೆಯನ್ನು ಕಾರ್ಯಗತ ಮಾಡುವ ಪದ್ಧತಿ ಅಕ್ಷರಶ: ತಪ್ಪಿದೆ. ರೈತರು insurance ಬರುತ್ತದೆ ಎಂದುಕೊಂಡು, ಇದು ಸುಮ್ಮನೆ ಆನೆ ಬಂತು ಆನೆ ಎನ್ನುವ ಕತೆಯಾಗುವುದು ಬೇಡ. ನೀವು ಬುದ್ಧಿವಂತರಿದ್ದೀರಿ. ನಿಮ್ಮ ಬುದ್ಧಿವಂತಿಕೆಯ ಬಗ್ಗೆ ನಮಗೆ ಸಂದೇಹವಿಲ್ಲ. ನೀವು ಕೇಂದ್ರ ಸರ್ಕಾರದ ಜೊತೆ ಮಾತನಾಡಿ, ಎಲ್ಲಾದರೂ ಮಾತನಾಡಿ, L1 rate ನಲ್ಲಿ ಬರುವಂಥ ಖಾಸಗಿ ಕಂಪನಿಗಳ ಮಾಲೀಕತ್ವದಲ್ಲಿರುವಂಥ insurance company ಗಳು ತಪ್ಪಬೇಕು. ತಪ್ಪದಿದ್ದರೆ ರೈತರಿಗೆ insurance ಸಿಕ್ಕುವುದಿಲ್ಲ. Loanees ಗೆ ಬಿಟ್ಟರೆ ಬ್ಯಾಂಕುಗಳವರು ಬೇರೆಯವರಿಗೆ insurance ಮಾಡುವುದಿಲ್ಲ. ಈ ಮೂರು ಅಂಶಗಳನ್ನೂ ತಾವು ಮನಸ್ಸಿಟ್ಟು ಮಾಡಬೇಕು.

ಅಧ್ಯಕ್ಷರು: ನಿಮ್ಮ ಮೂರೂ ಪಾಯಿಂಟ್‌ಗಳ ಮೇಲೆ ಉತ್ತರ ಕೊಡುತ್ತಾರೆ.

ಶ್ರೀ ಕೃಷ್ಣಬೈರೇಗೌಡ: ಇವೆಲ್ಲವುಗಳನ್ನೂ ತಾವು ಮೊದಲೇ ಹೇಳಿದ್ದೀರಿ, ನಾನು ಕೇಳಿಸಿಕೊಂಡಿದ್ದೇನೆ, ನಾನು ನಿಮ್ಮ ಜೊತೆ ವೈಯಕ್ತಿಕವಾಗಿಯೂ ಮಾತನಾಡಿದ್ದೇನೆ.

19-06-2017

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾತನಾಡಿದ್ದೀರಿ. ಆದರೆ ಇವುಗಳನ್ನು ಮಾಡದಿದ್ದರೆ ರೈತರಿಗೆ ಪ್ರಯೋಜನವಾಗುವುದಿಲ್ಲ. 100% ಬರ ಎಂದು declare ಮಾಡುತ್ತಾರೆ, ನಂತರ ಕಟಾವು ಸಮೀಕ್ಷೆಗೆ ಹೋಗುತ್ತಾರೆ.

ಶ್ರೀ ಕೃಷ್ಣಬೈರೇಗೌಡ: ಆಯಿತು, ನಾನು ಹೇಳುವುದನ್ನು ಸ್ವಲ್ಪ ಕೇಳಿಸಿಕೊಳ್ಳಿ. ಮೊನ್ನೆ ಮಾತನಾಡಿದ್ದನ್ನೇ ಈಗ ಮತ್ತೆ ಮಾತನಾಡುತ್ತಿದ್ದೀರಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾತನಾಡುತ್ತಿಲ್ಲ, ಮೂರು ಪಾಯಿಂಟ್‌ಗಳನ್ನು ಹೇಳಿದ್ದೇವೆ, ಇವುಗಳನ್ನು ಮಾಡುತ್ತೇವೆ ಎಂದು ಹೇಳಿ.

ಶ್ರೀ ಕೃಷ್ಣಬೈರೇಗೌಡ: ಹೇಳುವುದನ್ನು ಕೇಳಿಸಿಕೊಳ್ಳಿ. ವಿಮಾ ಯೋಜನೆಯಲ್ಲಿ ನ್ಯೂನತೆಗಳೂ ಇವೆ, ಇಲ್ಲ ಎಂದು ಅಲ್ಲ. ಇದರಲ್ಲಿ ರಾಜ್ಯಕ್ಕೆ ಸಂಪೂರ್ಣ ಸ್ವಾಯತ್ತತೆಯೂ ಇಲ್ಲ. ಇದು ಕೇಂದ್ರ ಪ್ರಾಯೋಜಿತ ಯೋಜನೆ. ಇದರಲ್ಲಿ ಕೇಂದ್ರ ಒಂದು ಪೈಸೆ ಕೊಟ್ಟರೆ ನಮ್ಮ ರಾಜ್ಯದ್ದೂ ಒಂದು ಪೈಸೆ ಇದೆ, ಅಂದರೆ ಸಮಾನ ಭಾಗವಿದೆ. ಆದರೂ ಸಹ ಇದು ಕೇಂದ್ರ ಪ್ರಾಯೋಜಿತ ಯೋಜನೆ. Actually, ಕೇಂದ್ರ ಪ್ರಾಯೋಜಿತ ಯೋಜನೆಯಿಂದು ಇರಬೇಕು ಎಂದರೆ ಅವರ ಪಾಲು 75ರಷ್ಟು ಇರಬೇಕು. ಆದರೆ ಇದರಲ್ಲಿ ಅವರದೂ 50% ನಮ್ಮದೂ 50% ಇದ್ದರೂ ಹೆಸರು ಮಾತ್ರ ಅವರದ್ದು ಇದೆ. ಹಾಗಾಗಿ ಈ ಯೋಜನೆಯನ್ನು ರೂಪಿಸಿರುವವರು ಅವರು. ನಾವು ಆ ನಿಯಮಗಳನ್ನು ಬದಲಾವಣೆ ಮಾಡುವುದಕ್ಕೆ ಆಗದಿದ್ದರೂ ಸಹ ಅನುಷ್ಠಾನದ ವಿಚಾರದಲ್ಲಿ ನಮಗೆ ಸಾಕಷ್ಟು ಸ್ವಾಯತ್ತತೆ ಇದೆ. ಈಗ ತಾವು ಏನು ಕೆಲವು ನ್ಯೂನತೆಗಳನ್ನು ತೋರಿಸಿದ್ದೀರಿ, ಅದನ್ನು ಸ್ವಲ್ಪಮಟ್ಟಿಗಾದರೂ ನಮ್ಮ ಹಂತದಲ್ಲಿ ಅದನ್ನು ಸರಿಪಡಿಸತಕ್ಕಂಥ ಅವಕಾಶಗಳಿವೆ. ಅದನ್ನು ಈಗ ನಾವು ಮಾಡುತ್ತಿದ್ದೇವೆ. ಕಳೆದ ವರ್ಷವೂ ಮಾಡಿದ್ದೇವೆ, ಈ ವರ್ಷವೂ ಅವುಗಳನ್ನು ಸರಿಪಡಿಸುವುದಕ್ಕೆ ಆದಷ್ಟು ಗಮನ ಕೊಟ್ಟು ನಾವು ಮಾಡುತ್ತೇವೆ. ಆದರೂ ಸಹ ತಮ್ಮ ಮಾಹಿತಿಗೋಸ್ಕರ ಹೇಳುತ್ತಿದ್ದೇವೆ, ಕಳೆದ ಎರಡು ವರ್ಷಗಳಿಂದ ಬರ ಇದ್ದುದರಿಂದ, ಅದರ ಹಿಂದೆ ಬರ ಇದ್ದಂಥ ವರ್ಷಗಳಿಗೆ ಹೋಲಿಕೆ ಮಾಡಿದರೆ ನಮ್ಮ ರೈತರಿಗೆ ವಿಮೆ ಎಷ್ಟು ಬಂದಿದೆ ಎನ್ನುವುದನ್ನು ಸ್ವಲ್ಪ ಸಂಕ್ಷಿಪ್ತವಾಗಿ ತಮ್ಮ ಜೊತೆಗೆ ಹಂಚಿಕೊಳ್ಳುತ್ತೇನೆ. 2013ರಲ್ಲಿ ಮುಂಗಾರಿನಲ್ಲಿ 57 ಕೋಟಿ ರೂಪಾಯಿ ಮತ್ತು ಹಿಂಗಾರಿನಲ್ಲಿ 5

ಕೋಟಿ ರೂಪಾಯಿ ಬಂದಿತ್ತು. 2014ರಲ್ಲಿ ಮುಂಗಾರಿನಲ್ಲಿ 203 ಕೋಟಿ ರೂಪಾಯಿ ಮತ್ತು 15 ಕೋಟಿ ರೂಪಾಯಿ ಹಿಂಗಾರಿನಲ್ಲಿ ಬಂದಿತ್ತು. 2015ರಲ್ಲಿ ಬರ ಆಗಿದ್ದಂಥ ವರ್ಷದಲ್ಲಿ ಮುಂಗಾರಿನಲ್ಲಿ 693 ಕೋಟಿ ರೂಪಾಯಿ ಮತ್ತು ಹಿಂಗಾರಿನಲ್ಲಿ 179 ಕೋಟಿ ರೂಪಾಯಿ ಬಂದಿತ್ತು. ಅಲ್ಲಿಗೆ 2015-16ನೇ ಸಾಲಿನಲ್ಲಿ ಸುಮಾರು 870 ಕೋಟಿ ರೂಪಾಯಿ ವಿಮೆ ಮುಖಾಂತರ ರಾಜ್ಯದ ರೈತರಿಗೆ ಹಣ ಬಂದಿದೆ. ರೈತರು ಬಹುಶ: 200 ಕೋಟಿ ರೂಪಾಯಿ ಕಟ್ಟಿರಬಹುದು. ಪಾವತಿಯಾಗಿರುವುದು 870 ಕೋಟಿ ರೂಪಾಯಿಗಳು. 2012ರಲ್ಲೂ ಸಹ 152 ತಾಲ್ಲೂಕುಗಳು ಬರಪೀಡಿತ ತಾಲ್ಲೂಕುಗಳು ಎಂದು ಘೋಷಣೆಯಾಗಿತ್ತು. ಆ ವರ್ಷ ರೈತರಿಗೆ ವಿಮೆ ಬಂದದ್ದು ಬರೀ 250 ಕೋಟಿ ರೂಪಾಯಿಗಳಷ್ಟೇ. ಆದರೆ ನಾವು ಅನುಷ್ಠಾನವನ್ನು ಸ್ವಲ್ಪ ಸುಧಾರಿಸಿದ್ದರಿಂದ 870 ಕೋಟಿ ರೂಪಾಯಿ 2015-16ನೇ ಸಾಲಿನಲ್ಲಿ ಬಂದಿದೆ. 2016-17ನೇ ಸಾಲಿನಲ್ಲಿ ಮುಂಗಾರಿನ ವಿಮೆಯನ್ನು ಮಾತ್ರ ನಾವು settle ಮಾಡಿದ್ದೇವೆ. 1,100 ಕೋಟಿ ರೂಪಾಯಿ ಮುಂಗಾರಿಗೆ ಸಂಬಂಧಪಟ್ಟಹಾಗೆ ಬಂದಿದೆ. ಹಿಂಗಾರಿಗೂ ಸಹ ನಾವು 1,000 ಕೋಟಿ ರೂಪಾಯಿಗಳನ್ನು ಅಂದಾಜು ಮಾಡಿದ್ದೇವೆ. ಅಲ್ಲಿಗೆ ಮುಂಗಾರು ಮತ್ತು ಹಿಂಗಾರು ಎರಡೂ ಸೇರಿದರೆ 2,100 ರಿಂದ 2,200 ಕೋಟಿ ರೂಪಾಯಿ ವಿಮೆ ಮುಖಾಂತರ ರೈತರಿಗೆ ಬರುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಕರ್ನಾಟಕದಲ್ಲಿರುವಂಥ ಎಷ್ಟು ಜನ ರೈತರಿಗೆ ವಿಮೆ ಬಂದಿದೆ?

ಶ್ರೀ ಕೃಷ್ಣಬೈರೇಗೌಡ: ಹಣ ನೇರವಾಗಿ ರೈತರ ಅಕೌಂಟಿಗೆ ಹೋಗುತ್ತದೆ. ಇವು Adhaar enabled payment.

ಶ್ರೀ ಕೆ.ಎಂ. ಶಿವಲಿಂಗೇಗೌಡ: ನಾವು ಏಕೆ ಹೇಳುತ್ತಿದ್ದೇವೆ ಎಂದರೆ ನನ್ನ ಕ್ಷೇತ್ರದಲ್ಲಿ 1 ಕೋಟಿ 53 ಲಕ್ಷ ಬಂದಿದೆ. 100% ಬರ ಎಂದು ಘೋಷಣೆ ಮಾಡಿದ್ದಾರೆ.

ಶ್ರೀ ಕೃಷ್ಣಬೈರೇಗೌಡ: ನೀವು ಹೇಳಿದ ವಿಚಾರವನ್ನು ಕೇಳಿ ನಾವು ಅರ್ಥಮಾಡಿಕೊಂಡಿದ್ದೇವೆ. ನಾವು ಏನು ಹೇಳುತ್ತಿದ್ದೇವೆ ಅದನ್ನು ತಾವೂ ಅರ್ಥಮಾಡಿಕೊಳ್ಳಬೇಕು. ಒಂದು ನಿಮಿಷ ನಾನು ಹೇಳುವುದನ್ನು ಕೇಳಿಸಿಕೊಳ್ಳಿ, ಕುಳಿತುಕೊಳ್ಳಿ ನಾನು ಹೇಳುತ್ತೇನೆ. ನ್ಯೂನತೆಗಳಿಲ್ಲ ಎಂದು ನಾನು ಹೇಳುತ್ತಿಲ್ಲ. ಈ ವರ್ಷ ಮುಂಗಾರಿಗೆ ಸಂಬಂಧಪಟ್ಟ ಹಾಗೆ ಒಟ್ಟು 1,100 ಕೋಟಿ ರೂಪಾಯಿಗಳಷ್ಟು

ಬರುತ್ತಿದೆ. ನಿಜವಾಗಿ ಬರಬೇಕಾಗಿರುವ ಕೆಲವು ರೈತರಿಗೆ ಬರದೇ ಹೋಗಿರಬಹುದು. ಅದನ್ನೇನೂ ನಾನು ಮುಚ್ಚಿಡುತ್ತಿಲ್ಲ. ಮುಚ್ಚಿಟ್ಟು ನನಗೇನಾಗಬೇಕಾಗಿದೆ? ನ್ಯೂನತೆಗಳಿಲ್ಲ ಎಂದು ನಾನು ಹೇಳಲಿಲ್ಲ. ಕೆಲವು weaknesses ಇರಬಹುದು. ಆದರೂ ಒಂದು ಸರಾಸರಿ, average ಎಂದು system level ನಲ್ಲಿ ನೋಡಿದಾಗ 1,100 ಕೋಟಿ ರೂಪಾಯಿ ಮುಂಗಾರಿಗೆ payment ಆಗುತ್ತಿದೆ. ಹಿಂಗಾರಿಗೂ 1,000 ಕೋಟಿ ರೂಪಾಯಿ ಎಂದು ನಾವು ಅಂದಾಜು ಮಾಡಿದ್ದೇವೆ. ಅಲ್ಲಿಗೆ ಒಟ್ಟು 2,100 ರಿಂದ 2,200 ಕೋಟಿ ರೂಪಾಯಿ ಬರುತ್ತಿದೆ. ಎಲ್ಲ ರೈತರಿಗೂ ನ್ಯಾಯ ಸಿಕ್ಕಿದೆಯೇ ಎಂದರೆ ಬಹುಶ: ಇಲ್ಲ. ನ್ಯೂನತೆಗಳಿವೆ, ಆದರೆ ಒಂದು state average ನೋಡಿದಾಗ 2,200 ಕೋಟಿ ರೂಪಾಯಿ ಬರುತ್ತಿದೆ. ಹಿಂದಿನ highest figure ಎಂದರೆ 250 ಕೋಟಿಯೋ, 300-400 ಕೋಟಿ ರೂಪಾಯಿಗಳು ಬಂದಿತ್ತು. ಹಾಗಿರುವಾಗ ಈ ವರ್ಷ 2,200 ಕೋಟಿ ರೂಪಾಯಿ ರೈತರಿಗೆ ವಿಮೆ ಮೂಲಕ ಸಿಗುತ್ತದೆ. ಇದರಲ್ಲಿ ಎಲ್ಲ ರೈತರಿಗೆ ನ್ಯಾಯ ಸಿಗುತ್ತಿಲ್ಲ ಎನ್ನುವುದು ಕೆಲವು ಸದಸ್ಯರ ಅಭಿಪ್ರಾಯ. ಅವುಗಳನ್ನು ಸುಧಾರಣೆ ಮಾಡಲು ನಾವು ಖಂಡಿತವಾಗಿ ಬದ್ಧತೆಯಿಂದ ಕೆಲಸ ಮಾಡುತ್ತೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಅವೆಲ್ಲ ಆಧಾರ್‌ಗೆ ಲಿಂಕ್ ಇರುವುದರಿಂದ ಹಣ ನೇರವಾಗಿ ರೈತರ ಅಕೌಂಟಿಗೆ ಹೋಗುತ್ತದೆ. ಸಮಯದ ಕೊರತೆ ಇರುವುದರಿಂದ ನಾನು ಬಹಳ ಆಳವಾಗಿ ಹೋಗುತ್ತಿಲ್ಲ. ಏಕೆಂದರೆ ಉತ್ತರ ಕೊಡಲು ಬೇರೆ ಎಲ್ಲ ಸಚಿವರು ಕಾಯುತ್ತಿದ್ದಾರೆ.

ಶ್ರೀ ಎನ್.ಹೆಚ್. ಕೋನರೆಡ್ಡಿ: ಅವರು ಹೇಳುತ್ತಿರುವಂಥಾದ್ದು ಬಹಳ ಮಹತ್ವದ್ದಾಗಿದೆ. ರಾಜ್ಯ ಸರ್ಕಾರದ್ದು 50%, ಕೇಂದ್ರ ಸರ್ಕಾರದ್ದು 50% ಪಾಲು ಎಂದು ನೀವು ಹೇಳಿದಿರಿ. ಆ ಯೋಜನೆಯನ್ನು ಜಾರಿ ಮಾಡಬೇಕಾದರೆ ಪ್ರಧಾನ ಮಂತ್ರಿಗಳು ಬೆಳಗಾವಿಗೆ ಬಂದರು. ಆದರೆ ನಿಮ್ಮ ರಾಜ್ಯ ಸರ್ಕಾರ ಯಾರನ್ನೂ ಕರೆಯಲೇ ಇಲ್ಲವಲ್ಲ, ಇದರ ಉದ್ದೇಶವೇನು? ನಾವೆಲ್ಲರೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇರುವಾಗ . . . .

19-06-2017

ಶ್ರೀ ಕೃಷ್ಣಬೈರೇಗೌಡ: ನಾವು ಕೋನರೆಡ್ಡಿಯವರನ್ನು ನಮ್ಮ ಜೊತೆ ಇಟ್ಟುಕೊಳ್ಳಬೇಕಾಗಿತ್ತು. ನಾವು ಕೆಲಸ ಮಾಡುತ್ತೇವೆ ಆದರೆ ಪ್ರಚಾರದಲ್ಲಿ weak. ಕೋನರೆಡ್ಡಿಯವರು ನಮ್ಮ ಜೊತೆಗಿದ್ದರೆ ಪ್ರಚಾರವೂ ಸರಿಹೋಗುತ್ತದೆ. ಪ್ರಚಾರದಲ್ಲಿ ನಾವು weak ಇದ್ದೇವೆ.

ಶ್ರೀ ಎನ್.ಹೆಚ್. ಕೋನರೆಡ್ಡಿ: ನಾನು ಹೇಳುತ್ತಿರುವುದು ಅದಕ್ಕಲ್ಲ. ಈ ಶಾಸನಸಭೆಯಲ್ಲಿ ಮುಖ್ಯಮಂತ್ರಿಗಳಿಂದ ಹಿಡಿದು ನಾವೆಲ್ಲರೂ ಇದ್ದೇವೆ. ನಾನು ಹೇಳುವುದನ್ನು ನೀವು ಅರ್ಥಮಾಡಿಕೊಳ್ಳಲಿಲ್ಲ. ನಿಮ್ಮ ಜೊತೆ, ನಮ್ಮ ಜೊತೆ ಎನ್ನುವುದಕ್ಕಿಂತ ಹೆಚ್ಚಾಗಿ, ಅದು ರಾಜ್ಯದ ಗೌರವ ಎಂದು ನಾನು ಹೇಳಿದೆ. ಅದಕ್ಕೆ ಯಾರನ್ನೂ ಕರೆಯದಿದ್ದರೆ ಅದಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. 50% ರಾಜ್ಯ ಸರ್ಕಾರದ್ದಿದೆ ಎಂದು ನೀವೇ ಹೇಳಿದಿರಿ. ಎರಡು insurance company ಗಳಿವೆ. ಅವು ಎಲ್ಲಿಂದ ಬಂದವು? ಏಕೆ insurance ಕಡಿಮೆ ಬರುತ್ತಿದೆ? ಆವತ್ತು ಏನು ಘೋಷಣೆ ಮಾಡಿದರೆಂದರೆ 25% ಒಂದು ಸಲ ಬರುತ್ತದೆ ಎಂದರು, 50% ಬರುತ್ತದೆ ಎಂದರು, 75% ಎಲ್ಲಿ ಬಂದಿದೆ?

ಶ್ರೀ ಕೃಷ್ಣಬೈರೇಗೌಡ: ಕೋನರೆಡ್ಡಿಯವರಿಗೆ ಇನ್ನೊಮ್ಮೆ ನಾನು ಸ್ಪಷ್ಟೀಕರಿಸುತ್ತೇನೆ. ಇದರಲ್ಲಿ ಕೇಂದ್ರ ಮತ್ತು ರಾಜ್ಯದ ಸಮಪಾಲು ಇದೆ. ಕೇಂದ್ರದ ಪ್ರತಿಯೊಂದು ರೂಪಾಯಿಗೆ ನಮ್ಮದೂ ಒಂದು ರೂಪಾಯಿ ಇದೆ. ಹೆಸರು ಮಾತ್ರ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ. ಸಾಮಾನ್ಯವಾಗಿ ಯಾವುದೇ ಯೋಜನೆಗೆ ಪ್ರಧಾನ ಮಂತ್ರಿಗಳ ಯೋಜನೆ ಎಂದು ಹೆಸರನ್ನಿಟ್ಟರೆ 75 ಅಥವಾ 90 ಅಥವಾ 100ರಷ್ಟು ಪಾಲನ್ನು ಅವರು ತೆಗೆದುಕೊಳ್ಳುತ್ತಾರೆ. ಆದರೆ ನಾನು ನೋಡಿದ ಹಾಗೆ ಇದೊಂದೇ ವಿಶಿಷ್ಠ ಯೋಜನೆ, ಅರ್ಧ ಪಾಲು ಕೊಟ್ಟುಬಿಟ್ಟು ಹೆಸರು ಮಾತ್ರ ಪೂರ್ತಿ ಅವರದ್ದಾಗಿದೆ.

ಶ್ರೀ ಎನ್.ಹೆಚ್. ಕೋನರೆಡ್ಡಿ: ನಾನು ಅದನ್ನು ಹೇಳುತ್ತಿಲ್ಲ. ಅವರು ಬಿ.ಜೆ.ಪಿ. flag ಹಾಕಿಕೊಂಡು ಮಾಡುತ್ತಾರೆ. ನಿನ್ನೆ ಹುಬ್ಬಳ್ಳಿಯಲ್ಲಿ ಆ ಪ್ರಶ್ನೆ ಬಂತು. ಹೀಗೆ ಆಗಬಾರದು ಎಂದು ಹೇಳುತ್ತಿದ್ದೇನೆ. ಅದು ಕಾಂಗ್ರೆಸ್ ಇರಲಿ, ಬಿ.ಜೆ.ಪಿ. ಇರಲಿ, ಜೆ.ಡಿ.(ಎಸ್) ಇರಲಿ, ಅದು ಸರ್ಕಾರಿ ಕಾರ್ಯಕ್ರಮವಾದರೆ, ಪಕ್ಷದ flag ಹಾಕಿ ಮಾಡಬಾರದು ಎನ್ನುವುದು ನನ್ನ ವಾದ.

19-06-2017

ಶ್ರೀ ಕೃಷ್ಣಬೈರೇಗೌಡ: ಹೌದು. ಇತ್ತೀಚೆಗೆ ನಮ್ಮ ಮೇಲೆ ಇನ್ನೊಂದು ಆರೋಪ ಮಾಡಿದರು. ಏನೆಂದರೆ ಇದನ್ನು ರಾಜ್ಯ ಸರ್ಕಾರ ಸರಿಯಾಗಿ ಅನುಷ್ಠಾನ ಮಾಡಿಲ್ಲ ಎಂದು ಆರೋಪ ಮಾಡಿದರು. ಇದಕ್ಕೆ ನಾನು ಏನು ಹೇಳಬೇಕೆಂದು ಗೊತ್ತಾಗುತ್ತಿಲ್ಲ. ಒಮ್ಮೊಮ್ಮೆ ನಾವೂ ಸಹ ಇಷ್ಟ ಬಂದ ಹಾಗೆ ಮಾತನಾಡುತ್ತೇವೆ. ಆದರೆ ಅದಕ್ಕೆ ಏನಾದರೊಂದು ಆಧಾರ ಇರಬೇಕಲ್ಲವೇ? ಹಿಂಗಾರಿನಲ್ಲಿ ನಮ್ಮ ರಾಜ್ಯದಲ್ಲಿ ಸುಮಾರು 62 ರಿಂದ 65% ರೈತರು ವಿಮಾ ಯೋಜನೆಯಲ್ಲಿ ನೋಂದಣಿಯಾಗಿದ್ದಾರೆ. ಈ ದೇಶದಲ್ಲೇ second highest enrollment ಆಗಿರುವುದು ನಮ್ಮ ಕರ್ನಾಟಕದಲ್ಲಿ. Enrollment ನಲ್ಲಿ ತಮಿಳುನಾಡು highest ಇದೆ, second highest ನಾವಿದ್ದೇವೆ.

ಶ್ರೀ ಬಿ.ಆರ್. ಪಾಟೀಲ್: ಇದರಲ್ಲಿ ಎರಡು system ಇದೆ. ಒಂದು, ಸಹಕಾರಿ ಸಾಲವನ್ನು ತೆಗೆದುಕೊಳ್ಳುವಾಗ compulsoryಯಾಗಿ premium cut ಮಾಡಿಕೊಳ್ಳುತ್ತಾರೆ. Nationalized banks ನಿಂದ ತೆಗೆದುಕೊಳ್ಳುವಾಗಲೂ ಅದು compulsory. ಆದರೆ suo- motu ಆಗಿ ಎಷ್ಟು ಜನ ಆಗಿದ್ದಾರೆ ಎನ್ನುವ ವಿವರ ಕೊಟ್ಟರೆ ಒಳ್ಳೆಯದು.

ಶ್ರೀ ಕೃಷ್ಣಬೈರೇಗೌಡ: ಅದನ್ನು ಪ್ರತ್ಯೇಕವಾಗಿ ಕೊಡುತ್ತೇನೆ, ಈಗ ಸದ್ಯಕ್ಕಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅದೊಂದಕ್ಕೇ ನಾನು ಹೊಡೆದಾಡುತ್ತಿರುವುದು. Loanees ಗೆ ಆಗಿದೆ, non-loanees ಗೆ ಆಗಿಲ್ಲ.

ಶ್ರೀ ಬಿ.ಆರ್. ಪಾಟೀಲ್: Suo-motu ಆಗಿ premium ಕಟ್ಟಿ insuranceನ ಲಾಭ ತೆಗೆದುಕೊಳ್ಳುವವರು ಎಷ್ಟು?

ಶ್ರೀ ಕೃಷ್ಣಬೈರೇಗೌಡ: ಅವರೂ ಒಂದು ಪಾಲು ಇದ್ದಾರೆ. ಅವರನ್ನು ಸಾಲರಹಿತ ರೈತರು ಎಂದು ಕರೆಯುತ್ತಾರೆ. ಸಾಲ ತೆಗೆದುಕೊಂಡಿರುವ ರೈತರಿಗೆ ಇದು compulsory ಇದೆ. ಸಾಲ ತೆಗೆದುಕೊಂಡವರೂ ಸಹ ಎಷ್ಟೋ ಜನ ವಿಮೆಗೆ ನೋಂದಣಿಯಾಗುತ್ತಿಲ್ಲ. ನಾವು ಬಹಳ ಬಲವಂತ ಮಾಡುತ್ತಿದ್ದೇವೆ. ನಾವು ಹೀಗೆ ಬಲವಂತ ಮಾಡಿದಾಗ DCC ಬ್ಯಾಂಕುಗಳು, ನೀವು ಈ ರೀತಿ ಬಲವಂತ ಮಾಡಬೇಡಿ ಎಂದು ನಮ್ಮ ಮೇಲೆ ಒತ್ತಡ ತರುತ್ತಿದ್ದಾರೆ. ಆದರೂ ಸಹ, ಕೆಲವರಿಗೆ

ಅನುಕೂಲ ಆಗದಿದ್ದರೂ overall ನೋಡಿದಾಗ ಅನುಕೂಲವಾಗುತ್ತದೆ ಎಂದು ಹೇಳಿ ನಾವು ಆದಷ್ಟೂ enrollment ಗೆ .. . . . .

ಶ್ರೀ ಬಿ.ಆರ್. ಪಾಟೀಲ್: ನಮ್ಮ ರೈತರು ಪ್ರೀಮಿಯಂ ಕಟ್ಟುವುದೇ ಬೇಡ ಎಂದುಕೊಂಡರೂ, ನಾವು ಕಟ್ಟುವುದಿಲ್ಲ ಎಂದರೂ ಬ್ಯಾಂಕುಗಳವರು compulsory ಕಟ್ಟಿಸಿಕೊಳ್ಳುತ್ತಾರೆ. (ಮುಂದು.)

19-06-2017 : 6-50 [46] kkd:hs

ಶ್ರೀ ಬಿ.ಆರ್. ಯಾವಗಲ್: 4% ಕಟ್ಟಿಸಿಕೊಳ್ಳುತ್ತಾರೆ.

ಶ್ರೀ ಕೃಷ್ಣ ಬೈರೇಗೌಡ: ಇಲ್ಲ, ಈಗ 2% ಮಾತ್ರ. ಮುಂಗಾರಿನಲ್ಲಿ 2% ಮತ್ತು ಹಿಂಗಾರಿನಲ್ಲಿ ಒಂದೂವರೆ percent.

ಶ್ರೀ ಬಿ.ಆರ್. ಯಾವಗಲ್: 2% ಆದರೂ ಅವರು ತೆಗೆದುಕೊಳ್ಳುವಂಥ ಸಾಲದ ಪ್ರಮಾಣ ಸಿಕ್ಕಾಪಟ್ಟೆ ಜಾಸ್ತಿ ಇದೆ. ಅವರಿಗೆ ಒಂದು ಕಡೆ ಅದು ಬರುವುದೇ ಇಲ್ಲ ಮತ್ತು insurance ಬಗ್ಗೆ ಜವಾಬ್ದಾರಿಯನ್ನೇ ತೆಗೆದುಕೊಳ್ಳುವುದಿಲ್ಲ. ಆದರೆ cut ಮಾಡುವುದು ಮಾತ್ರ ಕಟಾವು...

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ: ರೈತರಿಗೆ 2% ಅವರು ತುಂಬಬೇಕು. ಇನ್ನು ಉಳಿದದ್ದು ಏನು premium ಇರುತ್ತದೆ, ಅದನ್ನು ನಾವು ಅಂದರೆ ರಾಜ್ಯ ಮತ್ತು ಕೇಂದ್ರ ಸರ್ಕಾರ ಎರಡೂ ಸಹ ಸಮಾನಾಂತರವಾಗಿ ನಾವು ತುಂಬುತ್ತೇವೆ. ಅದು actual premium, 15%, 16% ಇರುತ್ತದೆ. ಆದರೆ, ರೈತರಿಗೆ ನಾವು charge ಮಾಡುವುದು ಎರಡೇ percent. So, ನಾವು enrollment ನಲ್ಲಿ ಹಿಂಗಾರಿಲ್ಲಿ ದೇಶದಲ್ಲಿಯೇ ಎರಡನೇ ಗರಿಷ್ಠ ನೋಂದಾವಣೆ ನಮ್ಮ ರಾಜ್ಯದಲ್ಲಿ ಆಗಿದೆ ಎನ್ನುವುದನ್ನೂ ಸಹ ಹೇಳುತ್ತಿದ್ದೇನೆ. ಏಕೆಂದರೆ record ಗೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೋಗಬೇಕೆನ್ನುವ ಕಾರಣಕ್ಕೆ. ಅದರ ಜೊತೆಗೆ ರೈತರ ಅದಾಯದ ಬಗ್ಗೆ ಬಹಳ ಚರ್ಚೆಯಾಗಿದ್ದರಿಂದ ಇದಕ್ಕೆ ಪೂರಕವಾಗಿ ಹೇಳುತ್ತೇನೆ. ಈಗ ಬೆಳೆ ಪರಿಹಾರವನ್ನು ನಾವು ಸರ್ಕಾರದಿಂದ ಕೊಡುತ್ತೇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಸೇರಿ input subsidy ಎಂದು ಏನು ನಾವು ಕೊಡುತ್ತಿದ್ದೇವೆ, ಅದನ್ನೇ ನಾವು ಬೆಳೆ ಪರಿಹಾರ ಎಂದು ಕರೆಯುತ್ತೇವೆ. ನೀವೆಲ್ಲ ನೋಡಿರುವ ಹಾಗೆ ರಾಜ್ಯದಲ್ಲಿ 2010ರಿಂದ ನಿರಂತರವಾಗಿ ಒಂದಲ್ಲ ಒಂದು ವರ್ಷ ನಮ್ಮನ್ನು ಬರಗಾಲ ಕಾಡುತ್ತಲೇ ಇದೆ. ಕಳೆದ ಎರಡು ವರ್ಷಗಳಲ್ಲಿ ನಾವು ಎಷ್ಟು ಪರಿಹಾರ ಕೊಟ್ಟಿದ್ದೇವೆ, ಅದಕ್ಕೆ ಮೊದಲು ಎಷ್ಟು ಪರಿಹಾರ ಕೊಡುತ್ತಿದ್ದೆವು ಎನ್ನುವುದನ್ನು ಸ್ವಲ್ಪ ನಿಮ್ಮ ಜೊತೆಗೆ ಹಂಚಿಕೊಳ್ಳುತ್ತೇನೆ. ಏಕೆಂದರೆ, ಮಾತನಾಡುವುದು ಬಹಳ ಸರಳ. ವಿಚಾರ ಆಧಾರಿತವಾಗಿ, ಅಂಕಿಸಂಖ್ಯೆ ಆಧಾರದ ಮೇಲೆ ಮಾತನಾಡಿದರೆ ಆವಾಗ ನೀವು ನಮ್ಮನ್ನು ಟೀಕೆ ಮಾಡಿದಾಗ ಅದನ್ನು ನಾವೂ ಸಹ ಸಕಾರಾತ್ಮಕವಾಗಿ ತೆಗೆದುಕೊಳ್ಳಬಹುದು. 2011ರಲ್ಲಿ 123 ತಾಲ್ಲೂಕುಗಳಲ್ಲಿ ಬರ ಎಂದು ಘೋಷಣೆಯಾಗಿದೆ. ಆ ವರ್ಷ ನಾವು ರೈತರಿಗೆ ಪರಿಹಾರ ಕೊಟ್ಟಿದ್ದು ಸುಮಾರು 300 ಕೋಟಿ ರೂಪಾಯಿಗಳು. 2012 ರಲ್ಲಿ 157 ತಾಲ್ಲೂಕುಗಳಲ್ಲಿ ಬರ ಎಂದು ಘೋಷಣೆಯಾಗಿತ್ತು. ಆ ವರ್ಷ ನಾವು ರೈತರಿಗೆ ಪರಿಹಾರ ಕೊಟ್ಟಿದ್ದು 379 ಕೋಟಿ ರೂಪಾಯಿಗಳು. 2015-16ರಲ್ಲಿ 137 ತಾಲ್ಲೂಕುಗಳು ಬರಪೀಡಿತ ಪ್ರದೇಶಗಳೆಂದು ಘೋಷಣೆಯಾಗಿದೆ. ನಾವು ಕೊಟ್ಟಿದ್ದ ಪರಿಹಾರ 2459 ಕೋಟಿ ರೂಪಾಯಿಗಳು. 2012ರಲ್ಲಿ 157 ತಾಲ್ಲೂಕುಗಳಲ್ಲಿ ಬರ ಆದಾಗ ಕೊಟ್ಟಿದ್ದು 379 ಕೋಟಿ ರೂಪಾಯಿಗಳು.

ಶ್ರೀ ಅರವಿಂದ ಚಂದ್ರಕಾಂತ್ ಬೆಲ್ಲದ್: ಇದರಲ್ಲಿ insurance ಸೇರಿದೆಯೇ?

ಶ್ರೀ ಕೃಷ್ಣ ಬೈರೇಗೌಡ: Insurance ಬಿಟ್ಟು ಹೇಳುತ್ತಿದ್ದೇನೆ. ತಮ್ಮ ಮಾಹಿತಿಗೆ Insurance ಸೇರಿಸಿ ಸಹ ಹೇಳುತ್ತೇನೆ. ತಾವು ತಿಳುವಳಿಕೆ ಇರುವವರಿದ್ದೀರಿ. ಇದು ಬರೀ input subsidy ಯದು ಹೇಳುತ್ತಿದ್ದೇನೆ. ಅದನ್ನು ಸೇರಿಸಿಯೂ ಹೇಳುತ್ತೇನೆ. You are on the right track. You have asked a right question.

19-06-2017

ಶ್ರೀ ಕೆ.ಎಂ. ಶಿವಲಿಂಗೇಗೌಡ: ಏಕೆ ಹೀಗೆ ಆಯಿತು ಎಂದು ಗೊತ್ತೇ? ಮಾನ್ಯ ಸಚಿವರೆ, ಒಂದು ನಿಮಿಷ, ನಾವು ಹೇಳುವುದನ್ನೂ ಕೇಳಿಕೊಳ್ಳಿ.

ಶ್ರೀ ಕೃಷ್ಣ ಬೈರೇಗೌಡ: ಒಂದು ನಿಮಿಷ ಗೌಡ್ರೆ, ನೀವೆಲ್ಲ ಇಷ್ಟು ಹೊತ್ತು ಮಾತನಾಡಿದ್ದನ್ನು ಕೇಳಿದ್ದೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: 33% ಬೆಳೆ loss ಆದರೆ, ...

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಈಗ ಕೆಲವು ಅನುಷ್ಠಾನದಲ್ಲಿ ಕೆಲವರು genuine ಅರ್ಹರು ಇರುವವರಿಗೆ ತಪ್ಪಿ ಹೋಗಿರಬಹುದು, ಇಲ್ಲವೆಂದು ನಾನು ಹೇಳುವುದಕ್ಕಾಗುವುದಿಲ್ಲ. ಅದನ್ನು ಸರಿ ಮಾಡುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತಿದ್ದೇವೆ. ಎಲ್ಲರೂ ಸಹ ಇದರಲ್ಲೂ...

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ನೀವು ಹೇಗೆ 2000 ಕೋಟಿ ಎಂದು ಹೇಳಿದರೋ, ನಾನೂ ಹೇಳುತ್ತೇನೆ, ನಮ್ಮ ಕ್ಷೇತ್ರದಲ್ಲಿ ಇವತ್ತಿನವರೆಗೂ 45% ಮೇಲೆ rise ಆಗಿಲ್ಲ. 45% ಗಿಂತ ಮೇಲೆ ಆಗಿಲ್ಲ.

ಶ್ರೀ ಕೃಷ್ಣ ಬೈರೇಗೌಡ: ಆಯಿತು, ನೀವು ಹೇಳುವಾಗ ಹೇಳಿ. ಈಗ ಬೇಡ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಏಕೆಂದರೆ ಖಾತೆದಾರರು, ಖಾತೆ ಇಲ್ಲದವರಿಗೆ ಕೊಡುತ್ತಿಲ್ಲ. ಹಿಂದೆ ಖಾತೆ ಇಲ್ಲದಿದ್ದರೂ ಕೂಡ ಮನೆಯ ಯಜಮಾನಿಗೆ ಕೊಡುತ್ತಿದ್ದಿರಿ. ಈಗ ಕೊಡುತ್ತಿಲ್ಲ. ಈಗ ಆಧಾರ್ ಕಾರ್ಡ್ ಸರಿಯಿಲ್ಲವೆಂದು ಕೊಡುತ್ತಿಲ್ಲ, ಯಾವ್ಯಾವ document ಸರಿಯಿಲ್ಲ, bank account ಇಲ್ಲವೆಂದು ಕೊಡುತ್ತಿಲ್ಲ. ಇದರಿಂದ ಇನ್ನೂ ಕೂಡ 45% ಗಿಂತ ಮೇಲೆ ಹೋಗಿಲ್ಲ. 33% ಇದೆ. ಈಗ 100% ಬರ ಬಂದಿದೆ. ಕಳೆದ 2011, 2012, 2013 ರಲ್ಲಿ ...

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಕೃಷ್ಣ ಬೈರೇಗೌಡ: ದಯವಿಟ್ಟು ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ. ಉತ್ತರ ಕೊಡುವಾಗ ಮಧ್ಯದಲ್ಲಿ ಮಾತನಾಡಿದರೆ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಉತ್ತರ ಕೊಡಿ. ನಾವು ಬೇಡ ಎಂದು ಹೇಳುವುದಿಲ್ಲ.

ಶ್ರೀ ಕೃಷ್ಣ ಬೈರೇಗೌಡ: ಅಲ್ಲ, ನೀವು ಬೇಡಿಕೆ ಮೇಲೆ ಚರ್ಚೆ ಮಾಡುವಾಗಲೂ ನೀವೇ ಮಾತನಾಡುವುದು, ಸರ್ಕಾರ ಉತ್ತರ ಕೊಡುವಾಗಲೂ ನೀವೇ ಮಾತನಾಡುವುದೆಂದರೆ ಆಗುವುದಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಇರುವ ಸತ್ಯಾಂಶ ಹೇಳಿದರೆ ನಿಮಗೆ ಬೇಜಾರು. ಹೇಳಿಕೊಳ್ಳಿ.

ಅಧ್ಯಕ್ಷರು: ಆಯಿತು. ಸಚಿವರೆ, ಬೆಳೆ ವಿಮೆ ಬಗ್ಗೆ ಏನು ತೊಂದರೆಗಳಿವೆ ಅದನ್ನು ಬಗೆಹರಿಸಿರಿ. ಮುಂದಿನ point ಗೆ ಹೋಗಿ.

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಇದರಲ್ಲಿ 2 ವರ್ಷಗಳಿಂದ ನಾವು ನೇರವಾಗಿ ರೈತರ account ಗೆ ಹಾಕುವಂಥ system ಅನ್ನು ತೆಗೆದುಕೊಂಡು ಬಂದಿದ್ದೇವೆ. ಇದರಲ್ಲಿ ಏನು ಸೋರಿಕೆ, ಶೋಷಣೆ ಆಗುತ್ತಿತ್ತೋ, 80% ಕಡಿಮೆ ಆಗಿದೆ. 100% ನಷ್ಟು ಆಗಿದೆ ಎಂದು ನಾನು ಹೇಳುವುದಿಲ್ಲ. ಸುಧಾರಣೆ ಕ್ರಮವನ್ನೂ ಮಾಡಿದ್ದೇವೆ. ಇಷ್ಟೂ amount ರೈತರ account ಗೆ ಹೋಗುವ ತರಹವೂ ಮಾಡುತ್ತಿದ್ದೇವೆ. ಮೊದಲು ಅವನು ತಲಾಟಿಯ ಕೈ ಬೆಚ್ಚಗೆ ಮಾಡುವವರೆಗೂ ಹಣ ಬರುತ್ತಿರಲಿಲ್ಲ. ಹೌದೋ, ಇಲ್ಲವೋ? ಈಗ ಅದನ್ನೆಲ್ಲ ತೆಗೆದುಹಾಕಿ ನೇರವಾಗಿ account ಗೆ ಹೋಗುವ ತರಹ ಮಾಡಿದ್ದೇವೆ. ಕೆಲವರು survey ಮಾಡುವಾಗ ಈಗಲೂ ತಪ್ಪಾಗುತ್ತಿದೆ. Survey ಅನ್ನು ಸರಿ ಮಾಡುವುದಕ್ಕೋಸ್ಕರ ಈ ವರ್ಷ GPS enabled Mobile App ಗಳ ಮೂಲಕ survey ಮಾಡುವ system ನ್ನು ತೆಗೆದುಕೊಂಡು ಬರುತ್ತಿದ್ದೇವೆ. ಈ ವರ್ಷದಿಂದ ಅದೂ ಸಹ ಆಗಿಬಿಡುತ್ತದೆ. ಅದನ್ನು Bhoomi software ಗೆ link ಮಾಡುವುದರಿಂದ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಎಷ್ಟೋ ಸೋರಿಕೆಗಳು ತಪ್ಪಿಹೋಗುತ್ತವೆ. 2015-16ರಲ್ಲಿ ಬರೀ input subsidy 2459 ಕೋಟಿ ರೂಪಾಯಿಗಳು, ಇದಕ್ಕೆ ವಿಮೆಯದ್ದು ಸಹ ಸೇರಿಸಿದರೆ 3331 ಕೋಟಿ ರೂಪಾಯಿಗಳು ರೈತರಿಗೆ ಹೋಗಿರುವಂಥದ್ದು. ಹಿಂದಿನ ಯಾವುದೇ ವರ್ಷಗಳಿಗೆ ಹೋಲಿಕೆ ಮಾಡಿದರೆ Insurance plus ವಿಮೆಯದ್ದು ಸೇರಿಸಿದರೆ minimum 3 times more.

ಶ್ರೀ ಅರವಿಂದ ಚಂದ್ರಕಾಂತ್ ಬೆಲ್ಲದ್: ಹಿಂದಿನದು, ಮೊದಲಿನದು split up ಮಾಡಿ ಹೇಳಿದರೆ ನಮಗೆ ಅನುಕೂಲವಾಗುತ್ತದೆ.

ಶ್ರೀ ಕೃಷ್ಣ ಬೈರೇಗೌಡ: ಬರೆದುಕೊಳ್ಳಿ, ಖರೀಫ್ ಗೆ 1852 ಕೋಟಿ ರೂಪಾಯಿಗಳು input subsidy, ಹಿಂಗಾರು 607 ಕೋಟಿ ರೂಪಾಯಿಗಳು input subsidy, ಮುಂಗಾರಿನಲ್ಲಿ insurance 693 ಕೋಟಿ ರೂಪಾಯಿಗಳು, ಹಿಂಗಾರಿನಲ್ಲಿ insurance 179 ಕೋಟಿ ರೂಪಾಯಿಗಳು, ಎಲ್ಲಾ ಸೇರಿಸಿದರೆ 3331 ಕೋಟಿ ರೂಪಾಯಿಗಳು. ಹಿಂದೆ 2001 ರಲ್ಲಿ highest 1121 ಕೋಟಿ ರೂಪಾಯಿಗಳು. ಅದಕ್ಕೆ ಹೋಲಿಕೆ ಮಾಡಿದರೆ minimum, more than three times through insurance and through input subsidy ನಾವು ರೈತರಿಗೆ ನೇರವಾಗಿ accountಗೆ ಹಾಕಿದ್ದೇವೆ. ಏನೂ harassment ಇಲ್ಲದೆಯೇ ಹಾಕಿದ್ದೇವೆ. 2016-17ನೇ ಸಾಲಿನಲ್ಲೂ ಸಹ ರಾಜ್ಯದಲ್ಲಿ ಬರ ತೀವ್ರವಾಗಿ ಬಂದಿದೆ. ಅದಕ್ಕೆ ಸಂಬಂಧಪಟ್ಟ ಹಾಗೆ ನಾನು ಆಗಲೇ ಹೇಳಿದೆ, ಮುಂಗಾರು ವಿಮೆಗೆ 1100 ಕೋಟಿ ರೂಪಾಯಿಗಳು ಹಾಗೂ ಮುಂಗಾರಿನಲ್ಲಿ input subsidy ಸುಮಾರು 1600 ಕೋಟಿ ರೂಪಾಯಿಗಳು. 1600 ಕೋಟಿ ರೂಪಾಯಿಗಳು only for ಮುಂಗಾರು ಬೆಳೆಯದು ಹೇಳುತ್ತಿದ್ದೇನೆ. 1600 ಕೋಟಿ ರೂಪಾಯಿಗಳ input subsidy ಮತ್ತು 1100 ಕೋಟಿ ರೂಪಾಯಿಗಳ ವಿಮೆ, ಅಲ್ಲಿಗೆ ಬರೀ ಮುಂಗಾರು ಒಂದಕ್ಕೇ 2700 ಕೋಟಿ ರೂಪಾಯಿಗಳು ಆಗುತ್ತದೆ. ಹಿಂಗಾರಿಗೆ ಸಂಬಂಧಪಟ್ಟ ಹಾಗೆ ತಮಗೂ ಗೊತ್ತಿದೆ, 1310 ಕೋಟಿ ರೂಪಾಯಿಗಳಿಗೆ ಕೇಂದ್ರಕ್ಕೆ ಮನವಿ ಕೊಟ್ಟಿದ್ದೇವೆ, ಇಲ್ಲಿಯವರೆಗೂ ಸಹ ಆ ಹಣ ಬಂದಿಲ್ಲ. ಹಣ ಬರುತ್ತದೆನ್ನುವ ನಿರೀಕ್ಷೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಇಟ್ಟುಕೊಂಡಿದ್ದೇವೆ. ಎಷ್ಟು ಬರುತ್ತದೋ ನೋಡೋಣ. ವಿಮೆಯಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳು ಬರುತ್ತದೆ ಎನ್ನುವ ಒಂದು rough ಅಂದಾಜನ್ನು ಹಾಕಿಕೊಂಡಿದ್ದೇವೆ. So, ಅದೊಂದು ಸಾವಿರ, ಇದೊಂದು ಸಾವಿರ ಸೇರಿದರೆ ಒಂದು, ಒಂದೂವರೆ ಸಾವಿರ ಕೋಟಿ ರೂಪಾಯಿಗಳು ಹಿಂಗಾರಿಗೆ ಸಂಬಂಧಪಟ್ಟ ಹಾಗೆ ಆದರೆ, ಈ 2700 ಕೋಟಿ ರೂಪಾಯಿಗಳು ಮುಂಗಾರಿಗೆ ಸಂಬಂಧಪಟ್ಟ ಹಾಗೆ ಆದರೆ, ಹತ್ತಿರ ಹತ್ತಿರ 4,500 ಕೋಟಿ ರೂಪಾಯಿಗಳು ಈ ವರ್ಷ ಒಟ್ಟು ಪರಿಹಾರ ವಿಮೆ ಮತ್ತು input subsidy ಮುಖಾಂತರ ರೈತರ account ಗೆ ಹೋಗತಕ್ಕಂಥದ್ದನ್ನು ನಾನು ಹೇಳುತ್ತಿದ್ದೇನೆ. ಆ ಕೆಲಸವನ್ನು ಸಹ ನಾವು ಮಾಡುತ್ತಿದ್ದೇವೆ. ಈಗ ಬರ ಮತ್ತು ರೈತರ ಆದಾಯ ನಷ್ಟ ಇದರ ಬಗ್ಗೆ ಬಹಳ ಚರ್ಚೆಯಾಗಿದ್ದರಿಂದ ಇದನ್ನು ನಾನು ಹೇಳುತ್ತಿದ್ದೇನೆ. ಅದಲ್ಲದೆ . .

ಶ್ರೀ ಬಿ.ಆರ್. ಪಾಟೀಲ್: ಒಂದೇ ಒಂದು ಸೆಕೆಂಡ್ ಹೇಳಿಬಿಡುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ: ಬೇಡ ಸರ್, ದಯವಿಟ್ಟು ಬೇಡ. ಆಮೇಲೆ ನಾನು ತಮಗೆ ಹೇಳುತ್ತೇನೆ. Let me complete.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್: ಬರಗಾಲ ಬಿದ್ದ ಮೇಲೆ ತಾವು 3 ಪಂಚಾಯತಿಗಳಲ್ಲಿ ಪರಿಹಾರ ಕೊಟ್ಟಿದ್ದೀರಿ. ಆದರೆ ವಿಮೆ ಒಂದು ರೂಪಾಯಿ ಸಹ ಕೊಡಲಿಲ್ಲ. ತಮಗೆ ಅನೇಕ ಸಲ ಕೇಳಿದ್ದೇನೆ.

ಅಧ್ಯಕ್ಷರು: ಅದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ.

ಶ್ರೀ ಬಿ.ಆರ್. ಪಾಟಿಲ್: ಮಾನ್ಯ ಅಧ್ಯಕ್ಷರೆ, ಬೆಳೆ ಪರಿಹಾರ ಕೊಟ್ಟಿದ್ದಾರೆ, ವಿಮೆ ಹಣ ಕೊಡಲಿಲ್ಲ.

ಅಧ್ಯಕ್ಷರು: ಸಚಿವರೆ, Next point ತೆಗೆದುಕೊಳ್ಳಿ. Insurance ಮೇಲಿನ ಉತ್ತರ ಬಿಡಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಮುಂದುವರೆದು, ರೈತರ ಆದಾಯದ ಬಗ್ಗೆ ಬಹಳ ಚರ್ಚೆಯಾಗುತ್ತಿದೆ. ದೇಶದಲ್ಲಿಯೇ ಕರ್ನಾಟಕ ಮೊದಲನೆ ಬಾರಿಗೆ ಮಾರುಕಟ್ಟೆಯಲ್ಲಿ ಒಂದು ಬದಲಾವಣೆಯನ್ನು ತೆಗೆದುಕೊಂಡು ಬಂದು on line markets ಅನ್ನು ನಾವು ಮಾಡಿದ್ದೇವೆ. Unified Market Platform (UMP) ಎಂದು ನಾವು ಕರ್ನಾಟಕದಲ್ಲಿ ಮಾಡಿದ್ದೇವೆ. Online market reforms ಮಾಡಿ online trading ಮಾಡುವಂಥದ್ದನ್ನು ಮಾಡಿದ್ದೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಸಚಿವರೆ, ಕರ್ನಾಟಕ ರಾಜ್ಯದಲ್ಲಿ ಯಾವ್ಯಾವ market ನಲ್ಲಿ online marketing ನಡೆಯುತ್ತದೆ?

ಶ್ರೀ ಕೃಷ್ಣ ಬೈರೇಗೌಡ: ಆಯಿತು, ತಮಗೆ ಅವಕಾಶ ಸಿಕ್ಕಿದ್ದಾಗ ತಾವು ಹೇಳಿಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ನಮ್ಮ ಅರಸೀಕೆರೆಯಲ್ಲಿ ಎಲ್ಲಿ ನಡೆಯುತ್ತಿದೆ ಎಂದು ಹೇಳಿ. ಅಲ್ಲಿ ಖಾಲಿ ಡಬ್ಬ ಇಟ್ಟುಕೊಂಡು ಕುಳಿತಿದ್ದಾರೆ.

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ಅವರಿಗೆ ಹೇಳಬೇಕು. ಪ್ರತಿಯೊಂದು ಪಾಯಿಂಟ್‌ಗೂ ಇವರು ಈ ತರಹ ಎದ್ದು ಮಾತನಾಡಿದರೆ ನಾವು ಹೇಗೆ ಉತ್ತರ ಕೊಡುವುದು?

ಶ್ರೀ ಕೆ.ಎಂ. ಶಿವಲಿಂಗೇಗೌಡ: ನಾನು ಇದ್ದುದ್ದನ್ನು ಹೇಳಿದರೆ ನೀವು ಇಲ್ಲ ಎಂದು ಹೇಳಿದರೆ ನಾನು ಏನು ಮಾಡೋಣ?

ಶ್ರೀ ಕೃಷ್ಣ ಬೈರೇಗೌಡ: ಸರ್ಕಾರ ಉತ್ತರ ಕೊಡಬೇಕೇ ಬೇಡವೇ?

ಅಧ್ಯಕ್ಷರು: ಶಿವಲಿಂಗೇಗೌಡರೆ, ಕುಳಿತುಕೊಳ್ಳಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಅಧ್ಯಕ್ಷರೆ, ನಾವು ತೆಗೆದುಕೊಂಡು ಬಂದಿರುವಂಥ ಮಾರುಕಟ್ಟೆ ಸುಧಾರಣೆ ಕ್ರಮವನ್ನು ಕೇಂದ್ರ ಸರ್ಕಾರ ಗುರುತಿಸಿ, ಕರ್ನಾಟಕ ಮಾದರಿಯನ್ನು ಇಡೀ ದೇಶದಲ್ಲಿಯೇ ಮಾಡಬೇಕು ಎಂದು ಕೇಂದ್ರದವರು ಇದನ್ನು ಅನುಷ್ಠಾನ ಮಾಡುತ್ತಿದ್ದಾರೆ. ಏಕೆ ಮಾಡುತ್ತಿದ್ದಾರೆಂದರೆ, ಒಂದು ವಾರದ ಹಿಂದೆಯಷ್ಟೇ ನೀತಿ ಆಯೋಗದ ಒಂದು ಅಧ್ಯಯನ ಹೊರಗಡೆ ಬಂದಿದೆ. ನೀತಿ ಆಯೋಗ ಒಂದು ಅಧ್ಯಯನ ಮಾಡಿದೆ. ಈ ಕರ್ನಾಟಕದಲ್ಲಿ ನಾವು ಮಾಡಿದ ಮಾರುಕಟ್ಟೆ ಸುಧಾರಣೆಯಲ್ಲಿ ಇದರ ಕಷ್ಟ ನಷ್ಟ ಏನು ಎನ್ನುವುದನ್ನು ಅಧ್ಯಯನ ಮಾಡಿ ಹೇಳುತ್ತಾರೆ, 'ಕರ್ನಾಟಕದ ರೈತರು ಯಾರು ಈ Unified Market Platform, online market ಅನ್ನು ಉಪಯೋಗ ಪಡೆದುಕೊಂಡಿದ್ದಾರೆ, ಅವರಿಗೆ ಸಿಗತಕ್ಕಂಥ ಬೆಲೆ ಸರಾಸರಿ 38% ಜಾಸ್ತಿಯ ಬೆಲೆ ಅವರಿಗೆ ಸಿಗುತ್ತಿದೆ ಎಂದು ನಾನು ಹೇಳುತ್ತಿರುವುದಲ್ಲ, Central Government ನೀತಿ ಆಯೋಗ ಹೇಳುತ್ತಿದೆ. 'Karnataka farmers earn 38% more through e-trading platform.' ಇದು ನೀತಿ ಆಯೋಗ ಹೇಳುತ್ತಿರತಕ್ಕಂಥದ್ದು. ಏಕೆಂದರೆ online market reforms ಮಾಡಿದ್ದರಿಂದ ಯಾರು ಅದರ ಲಾಭ ತೆಗೆದುಕೊಳ್ಳುತ್ತಿದ್ದಾರೆ ಅವರಿಗೆ 38% same commodity ಗೆ ಜಾಸ್ತಿ income ಬರುತ್ತಿದೆ.

(ಮುಂದು)

19-06-2017 :7-00 [47] kkd:sp

ಶ್ರೀ ಕೃಷ್ಣಬೈರೇಗೌಡ (ಮುಂದು)

ಅಥವಾ ಮುಖಾಂತರವೂ ರೈತರಿಗೆ ನ್ಯಾಯ ಕೊಡುವಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ.

ಅಧ್ಯಕ್ಷರು: ಒಂದು ನಿಮಿಷ ಕೇಳಿ. Online trading O.k. Online payment ಮಾಡಿದ್ದೀರಾ?

19-06-2017

ಶ್ರೀ ಕೃಷ್ಣ ಬೈರೇಗೌಡ: Online payment ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಕೆಲವು ತೊಡಕುಗಳಿವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ನಮ್ಮಪ್ಪನಾಣೆ ಒಬ್ಬನೂ ಸಹ ಬಂದು online ನಲ್ಲಿ tender ಹಾಕಿಲ್ಲ. ಯಾರು ಹಾಕಿದ್ದಾರೆ? ಹೇಳಿ. ಯಾವ market ನಲ್ಲಿ ಹಾಕಿದ್ದಾರೆ ಹೇಳಿ.

ಶ್ರೀ ಕೃಷ್ಣ ಬೈರೇಗೌಡ: ಆ ತೊಡಕನ್ನು ನಿವಾರಣೆ ಮಾಡತಕ್ಕಂಥ ಕೆಲಸವನ್ನೂ ನಾವು ಮಾಡುತ್ತಿದ್ದೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಯಾವ ಅರಸೀಕೆರೆಯೂ ಇಲ್ಲ, ಎಲ್ಲೂ ಹಾಕಿಲ್ಲ. ಕೃಷ್ಣ ಬೈರೇಗೌಡರಿಗೆ ಪಾಪ ಮಾಹಿತಿ ಇಲ್ಲವೆಂದು ತೋರುತ್ತದೆ.

ಅಧ್ಯಕ್ಷರು: Online trading ನಡೆಯುತ್ತಿದೆ ಈಗ.

ಶ್ರೀ ಕೃಷ್ಣ ಬೈರೇಗೌಡ: 162 market ಪೈಕಿ ಸುಮಾರು 157 market ಗಳನ್ನು online trading ಮಾಡಿದ್ದೇವೆ.

ಅಧ್ಯಕ್ಷರು: On line trading ಇದೆ.

ಶ್ರೀ ಕೃಷ್ಣ ಬೈರೇಗೌಡ: Payment ಇನ್ನೂ online ನಲ್ಲಿ ಇಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅವರು ಯಾರೋ ಮಾಡಿದರು, ಇವರು ಯಾರೋ ಮಾಡಿದರು ಎಂದು ಸುಮ್ಮಸುಮ್ಮನೆ ಹೇಳಿದರೆ ಒಪ್ಪಿಕೊಳ್ಳುವುದಕ್ಕಾ ಇಲ್ಲಿ ಬಂದಿರುವುದು? ಒಳ್ಳೆಯದನ್ನು ಒಪ್ಪಿಕೊಳ್ಳೋಣ.

ಶ್ರೀ ಕೃಷ್ಣ ಬೈರೇಗೌಡ: ಅದರಲ್ಲಿ ಕೆಲವು traders ವಿರೋಧ, ಅವರದ್ದು ಕೆಲವು ಸಮಸ್ಯೆಗಳಿವೆ. ಅವುಗಳನ್ನು ಪರಿಹಾರ ಮಾಡತಕ್ಕಂಥ ಪ್ರಯತ್ನವನ್ನು ಕೂಡ ಮಾಡುತ್ತಿದ್ದೇವೆ.

19-06-2017

ಅಧ್ಯಕ್ಷರು: ಶಿವಲಿಂಗೇಗೌಡರೆ, 100ಕ್ಕೆ 90ರಷ್ಟು online trading ನಡೆಯುತ್ತಿದೆ. ಸುಮ್ಮನೆ ಇಲ್ಲ ಎಂದು ಹೇಳಬಾರದು.

ಶ್ರೀ.ಗುರುಪಾಟೀಲ್ ಶಿರವಾಳ್: ಮಾನ್ಯ ಸಭಾಧ್ಯಕ್ಷರೆ, online trading ನಡೆಯುತ್ತಿದೆ.

ಶ್ರೀ ಕೃಷ್ಣ ಬೈರೇಗೌಡ: ಸುಮಾರು ಒಂದೂವರೆ ಲಕ್ಷ ಕೋಟಿ ರೂಪಾಯಿಗಳಷ್ಟು ವ್ಯವಹಾರ ಈ online platform ಮುಖಾಂತರ ಆಗುತ್ತಿದೆ. ಯಾರೂ ಹಾಕುತ್ತಿಲ್ಲವೆಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ಇದರ ಮುಖಾಂತರ ಒಂದೂವರೆ ಲಕ್ಷ ಕೋಟಿ ರೂಪಾಯಿಗಳ ವಹಿವಾಟು ಆಗುತ್ತಿದೆ. ರೈತರಿಗೆ ಆದಾಯ ಸುಧಾರಣೆ ಮಾಡಲಿಕ್ಕೆ ನಮಗೆ ತೊಂದರೆಯಾಗಿರುವುದು, ಕನಿಷ್ಠ ಬೆಂಬಲ ಬೆಲೆ ಏನು ನಿಗದಿಯಾಗುತ್ತದೆ, ತಾವೆಲ್ಲ ಅದರ ಬಗ್ಗೆ ಮಾತನಾಡಿದಿರಿ, ಪುಟ್ಟಣ್ಣಯ್ಯನವರು ಮಾತನಾಡಿದರು. ಕನಿಷ್ಠ ಬೆಂಬಲ ಬೆಲೆ ಅದು ಏನು ನಿಗದಿಯಾಗುತ್ತದೆ, ಅದರ ಮೇಲೆ ಮಾರುಕಟ್ಟೆ ದರ ಜಾಸ್ತಿ ಅವಲಂಬಿತವಾಗಿದೆ. ಕನಿಷ್ಠ ಬೆಂಬಲ ಬೆಲೆ ವರ್ಷದಿಂದ ವರ್ಷಕ್ಕೆ ಸರಿಯಾಗಿ ಏರಿಕೆಯಾದರೆ, ರೈತರಿಗೆ ಸಿಗುವಂಥ ದರವೂ ಸಹ ಸ್ವಲ್ಪ ಏರಿಕೆಯಾಗುತ್ತದೆ. ಆದರೆ, ನಮಗೆ ತೊಂದರೆಯಾಗಿರುವುದೇನೆಂದರೆ, ಕಳೆದ 2-3 ವರ್ಷಗಳಲ್ಲಿ ಕನಿಷ್ಠ ಬೆಂಬಲ ಬೆಲೆ ಏನು ವಾರ್ಷಿಕ ಏರಿಕೆಯಾಗುತ್ತದೆ, ಆ ಏರಿಕೆ ದರ ಕಡಿಮೆಯಾಗಿದೆ. Increase in MSP, 2006-07 ರಿಂದ 2013-14 ರವರೆಗೆ ತೆಗೆದುಕೊಂಡರೆ, ಸರಾಸರಿ ಪ್ರತಿ ವರ್ಷ 15% MSP ಜಾಸ್ತಿಯಾಗುತ್ತಿದೆ. ಅರ್ಥವಾಗುತ್ತಿದೆಯೋ ಏನೋ? Average increase in MSP was 15% per year. ತಾವು ಹಿರಿಯರು, ಅವಸರ ಮಾಡಬೇಡಿ, ಒಂದು ನಿಮಿಷ ಪೂರ್ತಿ ಕೇಳಿಸಿಕೊಳ್ಳಿ. Government of India MSP ಅನ್ನು ಪ್ರತಿವರ್ಷ 15% increase ಮಾಡುತ್ತಿತ್ತು. 3 ವರ್ಷಗಳಿಂದೀಚೆಗೆ ಏನಾಗಿದೆ ಎಂದರೆ, ಸರಾಸರಿ ಏರಿಕೆ ದರ ಎಷ್ಟಿದೆ ಎಂದರೆ, 2%, 3%, 4% ಇದೆ. So, the increase in MSP per year is only 4% average, compared to 15% between 2006-07 and 2013-14.

ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ್: ಇದರಲ್ಲಿ inflation difference ತೆಗೆಯಬೇಕು. Last year inflation ಸಹ drop ಆಗಿದೆ.

ಶ್ರೀ ಕೃಷ್ಣಬೈರೇಗೌಡ: ಅರವಿಂದರವರೇ, inflation ಭಾರವನ್ನು ರೈತರು ಹೊರಬೇಕೇ?

ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ್: Inflation difference ತೆಗೆದು, benefit ಏನು ಬರುತ್ತದೆ ನೋಡಿ.

ಶ್ರೀ ಕೃಷ್ಣಬೈರೇಗೌಡ: ನಿಜ. Inflation ಆಗುತ್ತದೆಂದು ರೈತರಿಗೆ ಸಿಗುವ ಆದಾಯದ ಮೇಲೆ ಹೊಡೆತ ಮಾಡುವುದು, ತಾವು ಹೇಳುವುದರ ಅರ್ಥ, ನೀವು middle class ನವರನ್ನು appease ಮಾಡುವುದಕ್ಕೋಸ್ಕರ ರೈತರಿಗೆ ಅನ್ಯಾಯ ಮಾಡಿದ ಹಾಗಾಗುತ್ತದೆ.

ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ್: ಹಾಗಲ್ಲ. Actual benefit farmer ಗೆ ಯಾವಾಗ ಮುಟ್ಟುತ್ತದೆ?. . . .

ಶ್ರೀ ಬಿ.ಆರ್. ಪಾಟೀಲ್: Cost of expenditure ಅನ್ನು ನೀವು calculate ಮಾಡಿ, price ಗೆ ಬರುತ್ತೀರೋ?

ಶ್ರೀ ಕೃಷ್ಣಬೈರೇಗೌಡ: ಹೌದು.

ಶ್ರೀ ಬಿ.ಆರ್. ಪಾಟೀಲ್: ಏಕೆಂದರೆ, ನಾವು Agriculture Price Commission ಮಾಡುವಾಗ ಒಂದು ವಿನಂತಿ ಮಾಡಿದ್ದೆವು. ನೀವು Agriculture Price Commission ಗಿಂತ Cost and Price Commission ಎಂದು ಮಾಡಿ, ಆಗ calculate ಆಗುತ್ತದೆ.

ಶ್ರೀ ಕೃಷ್ಣಬೈರೇಗೌಡ: ಅದಕ್ಕೆ ನಾವೇನು ಮಾಡುತ್ತಿದ್ದೇವೆಂದರೆ, ನಮ್ಮ ಬೆಲೆ ಆಯೋಗದಿಂದ ಅಧ್ಯಯನ ಮಾಡಿಸಿ, ನಾವು ಕನಿಷ್ಠ ಬೆಂಬಲ ಬೆಲೆಯಲ್ಲಿ ಖರೀದಿ ಮಾಡುವಾಗ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಹೆಚ್ಚುವರಿ ಪ್ರೋತ್ಸಾಹ ಧನವನ್ನು ರಾಜ್ಯದ ಕಡೆಯಿಂದ ಕೊಡುತ್ತಿದ್ದೇವೆ. ಇದು ತಮಗೆ ಗೊತ್ತಿದೆ.

ಶ್ರೀ ಬಿ.ಆರ್. ಯಾವಗಲ್: ಲೆಕ್ಕ ಹಾಕಿದರೆ zero, minus . . .

(ಗೊಂದಲ)

ಶ್ರೀ ಕೃಷ್ಣಬೈರೇಗೌಡ: ನಾನು comparison ಏನು ಕೊಟ್ಟಿದ್ದು ಎಂದರೆ, . . .

ಅಧ್ಯಕ್ಷರು: ಅಲ್ಲ, 28 ಇಲಾಖೆಗಳಿವೆ, ಒಂದೊಂದು ಇಲಾಖೆ. . . .

ಶ್ರೀ ಕೃಷ್ಣಬೈರೇಗೌಡ: 4-5 ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ. ನಾನು ಮಾತನಾಡಿದ್ದಕ್ಕಿಂತ ಮಧ್ಯದಲ್ಲಿ ಬೇರೆಯವರು ಮಾತನಾಡುತ್ತಿರುವುದೇ ಜಾಸ್ತಿ. ಹಾಗಾಗಿ, ಹೆಚ್ಚು ಸಮಯವಾಗುತ್ತಿದೆ. ನಮ್ಮ ಶಿವಲಿಂಗೇಗೌಡರವರು ಮನಸ್ಸು ಮಾಡಿದರೆ, ನಾನು ಮಾತನಾಡಿ ಮುಗಿಸುತ್ತೇನೆ. ಗೌಡರೇ, ಮುಗಿಸುವುದಕ್ಕೆ ಬಿಡಿ. ನಾನೇನು ಹೇಳಿದೆ ಎಂದರೆ, ಹಿಂದಿನ ವರ್ಷಗಳಲ್ಲಿ ಸರಾಸರಿ between 2006-07 and 2013-14, ಪ್ರತಿ ವರ್ಷ ರೈತರಿಗೆ ಒಳ್ಳೆಯ ಆದಾಯ ಬರಲಿ, ಒಳ್ಳೆಯ ದರ ಸಿಗಲಿ ಎಂದು ಪ್ರತಿ ವರ್ಷ MSP 15% ಜಾಸ್ತಿಯಾಗುತ್ತಿದೆ. ರೈತರಿಗೆ 15% rate ಸಿಗುತ್ತಿತ್ತು ಎಂದು ಒಂದು ಅಂದಾಜು ಮಾಡಬಹುದು. ಈಗ ದುರಾದೃಷ್ಟ ಏನಾಗಿದೆ ಎಂದರೆ, ಪ್ರತಿ ವರ್ಷ ಕೇವಲ 4% ಅಷ್ಟೇ MSP increase ಆಗುತ್ತಿದೆ. ಇದು ರೈತರಿಗೆ ಬರುವ income ಮೇಲೆ ನೇರವಾಗಿ ಹೊಡೆತ ಬೀಳುತ್ತಿದೆ. ಅದಕ್ಕೆ ನಾವೇನು ಮಾಡುತ್ತಿದ್ದೇವೆಂದರೆ, ನೀವು input cost ಲೆಕ್ಕ ಹಾಕಿದರೆ, ಇದು minus ಆಗಿ ಹೋಗುತ್ತದೆ. ಈ 4% ಏನಿದೆ, that is below the inflation rate. Inflation is at 5.5%, so you are actually immiserizing the farmer year after year. The way MSP is getting fix today, immiserization of farmer is happening every year. ನಾವು ಅದನ್ನು ಸ್ವಲ್ಪ ಸರಿದೂಗಿಸಲಿಕ್ಕೆ ಏನು ಮಾಡುತ್ತಿದ್ದೇವೆಂದರೆ, ರಾಜ್ಯದಿಂದ ಪ್ರೋತ್ಸಾಹ ಧನ ಕೊಡುತ್ತಿದ್ದೇವೆ. ನಾನು ಆಗಲೇ ರಾಗಿ, ಜೋಳದ ಬಗ್ಗೆ ಹೇಳಿದೆ. ಅದೇ ತರಹ,

ಈ ವರ್ಷ ತಮಗೂ ಗೊತ್ತಿದೆ, ತೊಗರಿ ಮೇಲೆ 450 ರೂಪಾಯಿ ಪ್ರೋತ್ಸಾಹ ಧನ ಕೊಟ್ಟಿದ್ದೇವೆ. ಪಕ್ಕದಲ್ಲಿ ಒಂದು ಕಡೆ ಮಹಾರಾಷ್ಟ್ರ ಇದೆ, ಇನ್ನೊಂದು ಕಡೆ ತೆಲಂಗಾಣ ಇದೆ, ಮತ್ತೊಂದು ಕಡೆ ಆಂಧ್ರಪ್ರದೇಶ ಇದೆ. ಯಾವ ರಾಜ್ಯದಲ್ಲೂ ಒಂದೂ ರೂಪಾಯಿ ಸಹ ಪ್ರೋತ್ಸಾಹ ಧನ ಕೊಟ್ಟಿಲ್ಲ. ಕರ್ನಾಟಕ ಮಾತ್ರ 450 ರೂಪಾಯಿಗಳ ಪ್ರೋತ್ಸಾಹ ಧನವನ್ನು ಕೊಟ್ಟು, 5500 ರೂಪಾಯಿ rate ಕೊಟ್ಟು, 34 ಲಕ್ಷ ಕ್ವಿಂಟಾಲ್. . . . ಒಂದು ನಿಮಿಷ ಇರಿ ಸಾರ್, ಹೇಳಿಬಿಡುತ್ತೇನೆ. ಈ ವರ್ಷ ಒಟ್ಟು ಉತ್ಪಾದನೆ 71 ಲಕ್ಷ ಕ್ವಿಂಟಾಲ್ ಎಂದು ಅಂದಾಜು ಮಾಡಿದ್ದೆವು. ಅದರಲ್ಲಿ 34 ಲಕ್ಷ ಕ್ವಿಂಟಾಲ್ ಅನ್ನು ಸರ್ಕಾರವೇ ಖರೀದಿ ಮಾಡಿದೆ. ಈಗ ಇನ್ನೂ ಸ್ವಲ್ಪ ಉಳಿದಿದೆ ಎಂದು ತಾವು ಹೇಳಬಹುದು. ಮೊನ್ನೆ ಆಹಾರ ಇಲಾಖೆ ಕಡೆಯಿಂದ ಅದನ್ನೂ ಮಾಡಿಸಿದ್ದೇವೆ.

ಅಧ್ಯಕ್ಷರು: Conclude ಮಾಡಿ. ಇನ್ನೂ ಬಹಳ ಉಳಿದಿದೆ.

ಶ್ರೀ ಕೃಷ್ಣಬೈರೇಗೌಡ: Last 2 points ಇವೆ. ಪಾಟೀಲರೆ ಇರಿ, ನಿಮ್ಮದನ್ನೂ solve ಮಾಡೋಣ. Previous highest ಯ್ಯಾವತ್ತು ತೊಗರಿ procurement ಆಗಿತ್ತೆಂದರೆ, 2013-14ರಲ್ಲಿ, ಎಷ್ಟಾಗಿತ್ತು ಎಂದರೆ, 2 ಲಕ್ಷ 51 ಸಾವಿರ ಕ್ವಿಂಟಾಲ್ was the previous highest record at an expenditure of Rs.137 crores. ಈ ವರ್ಷ 1,900 ಕೋಟಿ ರೂಪಾಯಿ ವೆಚ್ಚದಲ್ಲಿ ರೂ.34 ಲಕ್ಷ ಅಂದರೆ, ಹಿಂದಿನ highest ಗಿಂತ 15 times ಹೆಚ್ಚು ಈ ವರ್ಷ procurement ಮಾಡಿದ್ದೇವೆ. ಹೌದು. ನಮ್ಮ initiative ನಿಂದ ಆಗಿದೆ. ನಾವೇ ಅವರಿಗೆ reach out ಮಾಡಿ NAFED ನವರು ಮಾಡಬೇಕೆಂದು ಅವರಿಗೆ convince ಮಾಡಿ, ಕರೆದುಕೊಂಡು ಬಂದು ಅವರಿಗೆ centers ಕೊಟ್ಟು, ಅವರಿಗೆ ಸಿಬ್ಬಂದಿ ಎಲ್ಲ ಕೊಟ್ಟು, ಪ್ರೋತ್ಸಾಹ ಧನ ಕೊಟ್ಟು ನಾವು ಮಾಡಿದ್ದು. ಪ್ರೋತ್ಸಾಹ ಧನವನ್ನು ಯಾವ ರಾಜ್ಯದವರೂ ಕೊಟ್ಟಿಲ್ಲ. ಹಾಗಾಗಿ, market intervention ಅನ್ನು ಸಹ ನಮ್ಮ ಸರ್ಕಾರ ಬಂದಮೇಲೆ ಹೆಚ್ಚು ಹೆಚ್ಚು ಮಾಡಿದ್ದೇವೆ. 2013-14ರಲ್ಲಿ ಬೆಲೆ ಬಿದ್ದು ಹೋದಾಗ ರೂ.1,718 ಕೋಟಿ ರೂಪಾಯಿಗಳನ್ನು market intervention ಗೆ ಖರ್ಚು ಮಾಡಿದ್ದೇವೆ. ಆ ವರ್ಷ ಭತ್ತ, ಮೆಕ್ಕೆ ಜೋಳ, ತೊಗರಿ,

ಕಡಲೆಕಾಳು, ಕೊಬ್ಬರಿ, ತೆಂಗಿನ ಕಾಯಿ, ಶೇಂಗಾ, ಸೂರ್ಯಕಾಂತಿ, ಟೊಮೆಟೋ ವನ್ನು ಆ ವರ್ಷ purchase ಮಾಡಿದ್ದೆವು. ಆಮೇಲೆ, ಈ ವರ್ಷ ತೆಂಗಿನ ಕಾಯಿಗೆ ಸ್ವಲ್ಪ ಹೆಸರು ಕಾಳು, 65 ಕೋಟಿ ರೂಪಾಯಿಗಳನ್ನು ಈರುಳ್ಳಿಗೆ ಕೊಟ್ಟಿದ್ದೇವೆ, ಅದೆಲ್ಲ ನಷ್ಟವೇ, ಆದರೂ ರೈತರಿಗೆ ಸ್ವಲ್ಪವಾದರೂ ಸುಧಾರಣೆ ಆಗಲಿ ಎಂದು 65 ಕೋಟಿ ರೂಪಾಯಿ ವೆಚ್ಚದಲ್ಲಿ ಈರುಳ್ಳಿ ಖರೀದಿ ಮಾಡಿದ್ದೇವೆ. ಅದರಲ್ಲಿ ನಮ್ಮ ಸರ್ಕಾರಕ್ಕೆ ವಾಪಸ್ ಬಂದಿದ್ದು ಎರಡೇ ಕೋಟಿ ರೂಪಾಯಿ. ಇನ್ನುಳಿದಷ್ಟೂ ನಷ್ಟವಾಯಿತು.

ಶ್ರೀ ಸಿ.ಎನ್. ಬಾಲಕೃಷ್ಣ: ತೆಂಗು, ಕೊಬ್ಬರಿಗೆ ಎಷ್ಟು ಕೊಟ್ಟಿದ್ದೀರಿ ಸಾರ್.

ಅಧ್ಯಕ್ಷರು: ಅದೆಲ್ಲ ಆಯಿತು ಬಿಡಿ.

ಶ್ರೀ ಕೃಷ್ಣಬೈರೇಗೌಡ: ಹಾಗೆಯೇ, ತೊಗರಿ ಈ ವರ್ಷ ಒಟ್ಟು procurement ರೂ.1,982 ಕೋಟಿ ಮಾಡಿದ್ದೇವೆ. ನಮ್ಮ revolving fund size ಇರುವುದು, 1400 ಕೋಟಿ ರೂಪಾಯಿಗಳಾದರೂ ಸಹ ನಾವು ಅವಶ್ಯಕತೆ ಬಂದಾಗ ಮಾರುಕಟ್ಟೆಯಲ್ಲಿ ಸಾಲ ತೆಗೆದುಕೊಂಡು procurement ಮಾಡಿದ್ದೇವೆ. ನಾವು procurement ನಿಲ್ಲಿಸುವುದಕ್ಕೆ ಹೋಗಿಲ್ಲ.

ಶ್ರೀ ಸಿ.ಎನ್. ಬಾಲಕೃಷ್ಣ: ತೆಂಗು, ಕೊಬ್ಬರಿಗೆ ಎಷ್ಟು ಕೊಟ್ಟಿದ್ದೀರಿ, ಹೇಳಿ ಸಾರ್.

ಶ್ರೀ ಬಿ.ಆರ್. ಪಾಟೀಲ್: ತಾವು ತೊಗರಿ Board ಗೆ ಶಕ್ತಿ ತುಂಬಿದ್ದರೆ ಆಗುತ್ತಿತ್ತು. ನೀವು ಇಲ್ಲಿಯವರೆಗೆ ತೊಗರಿ Board ಗೆ ಶಕ್ತಿ ತುಂಬಲಿಲ್ಲ. ತೊಗರಿ Board skeleton body ತರಹ ಇದೆ. ಅದರ ಉದ್ದೇಶವೇ ಈಡೇರಿಲ್ಲ.

ಶ್ರೀ ಕೃಷ್ಣಬೈರೇಗೌಡ: ಅದರ ಬಗ್ಗೆ ಚರ್ಚೆಯಾಗುತ್ತಿದೆ. Separate ಆಗಿ ಹೇಳುತ್ತೇನೆ. ಅದಲ್ಲದೆ, ತಮಗೇ ಗೊತ್ತಿದೆ, ಅನೇಕ ರೈತರು ಯಾರು ಬಡ್ಡಿ ಇಲ್ಲದೇ ಸಾಲ ತೆಗೆದುಕೊಳ್ಳುತ್ತಾರೆ, actually ಯಾವುದೇ ಬಡ್ಡಿ ಇಲ್ಲದೇ ಸಾಲ ಬರುತ್ತಿದೆ ಎಂದು ಅವರೂ

ಅಂದುಕೊಂಡಿರಬಹುದು. ಮಾನ್ಯ ಅಧ್ಯಕ್ಷರೇ, ವಾಸ್ತವಾಂಶ ತಮಗೇ ಗೊತ್ತಿದೆ. ಸರ್ಕಾರದ ಪರವಾಗಿ ನಾವು ಬಡ್ಡಿಯನ್ನು ಭರಿಸುತ್ತಿದ್ದೇವೆ. ಪ್ರತಿವರ್ಷ ಬಡ್ಡಿ ಭರಿಸುವುದಕ್ಕೆ ನಮ್ಮ ಸರ್ಕಾರ ಹತ್ತಿರ ಹತ್ತಿರ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. Interest subvention ಗೆ ರೈತರಿಗೆ ಉಚಿತ ಅಂದರೆ, ಬಡ್ಡಿರಹಿತ ಸಾಲ ಕೊಡುವುದಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಸರ್ಕಾರ ರೈತರ ಪರವಾಗಿ ಬಡ್ಡಿಯನ್ನು ತುಂಬುತ್ತಿದೆ. ಆಮೇಲೆ, ರೈತರಿಗೆ ನಮ್ಮ ರಾಜ್ಯದಲ್ಲಿ ಉಚಿತವಾಗಿ ಕರೆಂಟ್ ಕೊಡುತ್ತಿದ್ದೇವೆ. ಅದು ತಮಿಳುನಾಡು, ಮಹಾರಾಷ್ಟ್ರದಲ್ಲೂ, ಗುಜರಾತ್‌ನಲ್ಲೂ ಇಲ್ಲ. ಕೇವಲ ರೈತರಿಗೆ ಕೊಡುವ ಕರೆಂಟ್‌ಗೆ ಸರ್ಕಾರ ಭರಿಸುವಂಥ ವೆಚ್ಚ ರೂ.8 ಸಾವಿರ, ರೂ.9 ಸಾವಿರ ಕೋಟಿ ರೂಪಾಯಿ. ಅದನ್ನೂ ಸಹ ಪರೋಕ್ಷವಾಗಿ ನಾವು ರೈತರಿಗೆ ಖರ್ಚು ಮಾಡುತ್ತಿರುವ ಹಣ. ಖರ್ಚೆಂದರೆ, ನೇರವಾಗಿ ಖರ್ಚು ಮಾಡುತ್ತಿರುವ ಹಣ. ಹಾಗಾಗಿ, ಆದಾಯದ ಕಡೆಗೆ ನಾವು ಹೆಚ್ಚಿನ ಮಹತ್ವ ಕೊಡುತ್ತಿದ್ದೇವೆ. ತೋಟಗಾರಿಕೆ ಇಲಾಖೆಯಲ್ಲಿ ರೈತ ಉತ್ಪಾದಕರ ಸಂಘಟನೆ ಮಾಡಿದ್ದೇವೆ. Farmer Producer Organizations ಮಾಡಿದ್ದೇವೆ. ಅವರನ್ನೂ ಸಹ ನಾವು market ಗೆ ನೇರವಾಗಿ link ಮಾಡಿ, ಅವರಿಗೆ ಹೆಚ್ಚಿಗೆ ಆದಾಯ ಬರುವ ತರಹ Horticulture Department ನಿಂದ ಸಹ ಮಾಡಿಸುತ್ತಿದ್ದೇವೆ. Horticulture ಇಲಾಖೆಯವರು ಈಗಾಗಲೇ 92 FPO ಗಳನ್ನು ಮಾಡಿದ್ದಾರೆ. ಈ ವರ್ಷ ಇನ್ನೂ 20 FPO ಗಳನ್ನು ರಚನೆ ಮಾಡುತ್ತಿದ್ದೇವೆ. ಕೊನೆಗೆ, ನಮ್ಮ ಸಚಿವರು ಇಲ್ಲ, ಹಾಲು ಉತ್ಪಾದಕರ ಬಗ್ಗೆ ಹೇಳುವುದಾದರೆ, ಒಂದು ಲೀಟರ್ ಹಾಲಿನ ಮೇಲೆ 5 ರೂಪಾಯಿ ಸಹಾಯ ಧನ ಕೊಡುತ್ತಿದ್ದೇವೆ.

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

(ಮುಂದು)

ವಿಸ-19-06-2017-(48)-7-10-ಎಸ್ಸೆಂಕೆ-ಎಸ್‌ಪಿ

ಶ್ರೀ ಕೃಷ್ಣ ಬೈರೇಗೌಡ : ಮುಂದು.,

19-06-2017

ಈ ವರ್ಷ ಆಯವ್ಯಯದಲ್ಲಿ ಅದಕ್ಕೆ 1,200 ಕೋಟಿ ರೂಪಾಯಿಗಳ ಪ್ರಸ್ತಾವನೆ ಮಾಡಿಕೊಂಡಿದ್ದೇವೆ. ಇದು ರೈತರಿಗೆ ನೇರವಾಗಿ ಅವರ account ಗೆ ಹೋಗತಕ್ಕಂಥ ಹಣ. ಒಂದು ಲೀಟರ್ ಮೇಲೆ 5 ರೂಪಾಯಿ ಸಹಾಯಧನ ಕೊಡುತ್ತಿದ್ದೇವೆ, ಇದು ನೇರವಾಗಿ ಅವರ ಮನೆಗೆ ಹೋಗತಕ್ಕಂಥ ವಿಚಾರ, ಅದಕ್ಕೆ 1,200 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಆದಾಯ ಸುಧಾರಣೆಗೆ ಎಲ್ಲಾ ಕ್ರಮಗಳನ್ನು ನಾವು ಯಾವುದೆಲ್ಲಾ ಆಯಾಮದಲ್ಲಿ ಮಾಡುವುದಕ್ಕೆ ಸಾಧ್ಯ ಆ ಎಲ್ಲಾ ಪ್ರಯತ್ನ ಮಾಡುತ್ತಿದ್ದೇವೆ. ಆದರೂ ಸಾಲದು ಇನ್ನೂ ಹೆಚ್ಚಿನ ಪ್ರಯತ್ನ ಮಾಡಬೇಕು ಎನ್ನುವ ತಮ್ಮಗಳ ಸಲಹೆಯನ್ನು ಸ್ವೀಕರಿಸುತ್ತೇವೆ. ಕೊನೆಯದಾಗಿ ಎರಡು ವಿಚಾರಗಳೆಂದರೆ, ರೈತರ ಜಮೀನಿನ ಹಿಡುವಳಿ ಗಾತ್ರ ಕಡಿಮೆಯಾಗುತ್ತದೆ. ಅದರಿಂದಲೂ ಸಹ ಅವರ ಆದಾಯದ ಮೇಲೆ ದುಷ್ಪರಿಣಾಮವಾಗುತ್ತದೆ. ಕೆಲಸ ಮಾಡುವುದಕ್ಕೆ ಜನರೂ ಸಹ ಸಿಗುತ್ತಿಲ್ಲ. ಹೀಗಾಗಿ ಯಾಂತ್ರೀಕರಣ ಮಾಡುವುದರಿಂದ ಖರ್ಚು-ವೆಚ್ಚಗಳು ಕಡಿಮೆಯಾಗುತ್ತವೆಂದು ನಮ್ಮ ಸರ್ಕಾರ ಬಂದ ಕೃಷಿ ಯಾಂತ್ರೀಕರಣಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದೇವೆ. ನಾನು ಅಧಿಕಾರ ತೆಗೆದುಕೊಳ್ಳುವ ಹಿಂದಿನ ವರ್ಷದಲ್ಲಿ ಯಾಂತ್ರೀಕರಣಕ್ಕೆ ನಮ್ಮ ಇಲಾಖೆಯಲ್ಲಿದ್ದಂಥ ಅನುದಾನ 127 ಕೋಟಿ. ಕಳೆದ ವರ್ಷ 456 ಕೋಟಿ ಖರ್ಚು ಮಾಡಿದ್ದು, ಈ ವರ್ಷ 458 ಕೋಟಿಗೆ ಪ್ರಸ್ತಾವನೆ ಮಾಡಿಕೊಂಡಿದ್ದೇವೆ. 4 ವರ್ಷಗಳಲ್ಲಿ 4 ಪಟ್ಟು ಹೆಚ್ಚು ಅನುದಾನವನ್ನು ಹೆಚ್ಚಿಸಲಾಗಿದೆ. ಇದು ಕೂಡ ರೈತರಿಗೆ ನೇರವಾಗಿ ಹೋಗತಕ್ಕಂಥದ್ದು.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ : ಕೇಂದ್ರ ಸರ್ಕಾರದ ನೆರವಿನ ಬಗ್ಗೆಯೂ ಹೇಳಬೇಕಲ್ಲವೇ?

ಶ್ರೀ ಕೃಷ್ಣ ಬೈರೇಗೌಡ : ಅದರಲ್ಲಿ ಕೇಂದ್ರದ್ದು 20% ಇದ್ದರೆ ಹೆಚ್ಚು Sir, ಬೇಕಾದರೆ ತಮಗೆ ಅಂಕಿಸಂಖ್ಯೆಗಳ ಮಾಹಿತಿ ಒದಗಿಸುತ್ತೇನೆ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ : ಇನ್ನೊಂದು ವಿಷಯ ಹೇಳುತ್ತೇನೆ. ತಾವು ಪ್ರಾರಂಭದಲ್ಲಿ, ಗೊಬ್ಬರವನ್ನು ಸಮಯಕ್ಕೆ ಸರಿಯಾಗಿ ವಿತರಣೆ ಮಾಡುತ್ತೇವೆಂದು ಹೇಳಿದಿರಿ. ಆದರೆ, ಕಳೆದ ಮೂರು ವರ್ಷಗಳಲ್ಲಿ ಕೇಂದ್ರದಲ್ಲಿ ನೂತನ ಸರ್ಕಾರ ಬಂದ ಮೇಲೆ ಕರ್ನಾಟಕ ಮಾತ್ರವಲ್ಲ ಇಡೀ ರಾಷ್ಟ್ರದಲ್ಲಿ

ಎಲ್ಲಿಯೂ ಗೊಬ್ಬರದ ಕೊರತೆಯಾಗದಂತೆ ನೋಡಿಕೊಂಡಿದ್ದಾರೆ ಅದರ ಜೊತೆಗೆ rate ಕಡಿಮೆ ಮಾಡಿದ್ದಾರೆ.

ಅಧ್ಯಕ್ಷರು : ಅವರು ಕರ್ನಾಟಕದ ಬಗ್ಗೆ ಹೇಳಿದ್ದಾರೆ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ : ಅದಕ್ಕಾಗಿ ನೀವು ಅನಂತ್ ಕುಮಾರ್‌ರವರಿಗೆ ಅಭಿನಂದನೆಗಳನ್ನು ಹೇಳಿ. ನೀವು ಗೊಬ್ಬರಕ್ಕೆ ಗೋಲಿಬಾರ್ ಮಾಡಿದಿರಿ ಎಂದು ಹೇಳಿದಿರಿ, ಅದು ಸರಿಯಲ್ಲ. ಗೊಬ್ಬರದ ಕೊರತೆಯಾಗದ ಹಾಗೆ ಕಳೆದ ಮೂರು ವರ್ಷಗಳಿಂದ ಕೇಂದ್ರ ಸರ್ಕಾರ ನೋಡಿಕೊಂಡಿದೆ.

ಶ್ರೀ ಬಿ.ಆರ್.ಯಾವಗಲ್ : ಕಳೆದ ಮೂರು ವರ್ಷಗಳಿಂದ ಮಳೆ ಬಾರದೆ ಬರಿ ಬರ ಇದೆ, ಮಳೆಯೂ ಇಲ್ಲ ಬೆಳೆಯೂ ಇಲ್ಲ ಗೊಬ್ಬರ ಎಲ್ಲಿ ಖರ್ಚಾಗಬೇಕು?

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ : ನಾನು ಹೇಳುತ್ತೇನೆ. ವೈಯುಕ್ತಿಕವಾಗಿ ನಮಗೆ ಯಾವುದೇ ಸಂದರ್ಭದಲ್ಲಿ ಗೊಬ್ಬರ ಬೇಕಾದಾಗ ಅನಂತ್ ಕುಮಾರ್‌ರವರನ್ನು ಸಂಪರ್ಕಿಸಿದಾಗ ಖಂಡಿತವಾಗಿ ಅವರು ನಮಗೆ ಸ್ಪಂದಿಸಿದ್ದಾರೆ. ನಾನು ಇಲ್ಲವೆಂದು ಹೇಳುತ್ತಿಲ್ಲ.

ಶ್ರೀ ಕೆ.ಜಿ.ಬೋಪಯ್ಯ : ಗೋಲಿಬಾರ್ ಮಾಡಿದಿರಿ ಎಂದು ಹೇಳಬಾರದು.

(ಗೊಂದಲ)

ಶ್ರೀ ಕೃಷ್ಣಬೈರೇಗೌಡ : ನಾನು ಪೂರ್ತಿಯಾಗಿ ಹೇಳುತ್ತೇನೆ. ಆದರೆ, ಈ ಸರ್ಕಾರ ಬರುವುದಕ್ಕಿಂತ ಒಂದು ವರ್ಷ ಮುಂಚೇನೂ ನಾವು ನಿಭಾಯಿಸಿದ್ದೇವೆ. ಆ ವರ್ಷವೂ ನಮಗೆ ಎಲ್ಲೂ ಕೊರತೆಯಾಗುವುದಕ್ಕೆ ಬಿಟ್ಟಿಲ್ಲ, ಹಾಗೆ ನಿಬಾಯಿಸಿದ್ದೇವೆ.

ಶ್ರೀ ಕೆ.ಜಿ.ಬೋಪಯ್ಯ : ಆಗ ಸಿಕ್ಕಿಲ್ಲ ಏಕೆ ಸುಮ್ಮನೆ ಹೇಳುತ್ತೀರಿ?

(ಗೊಂದಲ)

ಅಧ್ಯಕ್ಷರು : ಬೋಪಯ್ಯನವರೇ ಒಂದು ಇಲಾಖೆಯ ಮೇಲೆ ಇಷ್ಟು ಹೊತ್ತು ತೆಗೆದುಕೊಂಡರೆ ಹೇಗೆ?

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಕೆ.ಜಿ.ಬೋಪಯ್ಯ : ಆಗ ಗೊಬ್ಬರ ಎಷ್ಟು ಬರುತ್ತಿತ್ತು ಎಂದು ನಿಮಗೆ ಗೊತ್ತಿಲ್ಲ. ನೀವು ತೋಟಕ್ಕೆ ಗೊಬ್ಬರ ಹಾಕುವುದಿಲ್ಲ, ನಾವು ತೋಟಕ್ಕೆ ಗೊಬ್ಬರ ಹಾಕುತ್ತಿರುವವರು ನಮಗೆ ಗೊತ್ತಿದೆ. ಗೊಬ್ಬರ ಹಾಕಬೇಕಾದರೆ ಎಲ್ಲಿಂದ ತರುತ್ತಿದ್ದೇವೆ ಎಂಬುದು ನಮಗೆ ಗೊತ್ತು.

(ಗೊಂದಲ)

ಶ್ರೀ ಹೆಚ್.ಸಿ.ಕುಮಾರಸ್ವಾಮಿ : ಮಾನ್ಯ ಕೃಷಿ ಸಚಿವರೇ, ಮಾನ್ಯ ಅಧ್ಯಕ್ಷರೆ, ನನಗೆ clarification ಗೆ ನನಗೆ ಸಮಯ ಕೊಡಬೇಕು.

ಅಧ್ಯಕ್ಷರು : Clarification ಎಲ್ಲಾ ಆಗಿದೆ ಬಿಡಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ : ಅಧ್ಯಕ್ಷರು urgent ಮಾಡುತ್ತಿದ್ದಾರೆ, ಎರಡು ನಿಮಿಷದಲ್ಲಿ ಮುಗಿಸಿ ಬಿಡುತ್ತೇನೆ. ಪ್ರತಿ ಹನಿ ನೀರು ಬಹಳ ಮುಖ್ಯವಾಗಿರುವುದರಿಂದ ನಮ್ಮ ಸರ್ಕಾರ ಹನಿ ನೀರಾವರಿಗೂ ಬಹಳ ಮಹತ್ವ ಕೊಟ್ಟಿದೆ. ನಾನು ಜವಾಬ್ದಾರಿ ತೆಗೆದುಕೊಳ್ಳುವ ಹಿಂದಿನ ವರ್ಷ 2012-13 ರಲ್ಲಿ ಆಯವಯ್ಯದಲ್ಲಿ ಹನಿ ನೀರಾವರಿಗೆ 107 ಕೋಟಿ ಇತ್ತು. ಹನಿ ನೀರಾವರಿಗಾಗಿ ಕಳೆದ ವರ್ಷ 414 ಕೋಟಿ ರೂಪಾಯಿಗಳವರೆಗೆ ತಂದಿದ್ದೇವೆ. ಈ ವರ್ಷ ಇದಕ್ಕಾಗಿ 512 ಕೋಟಿ ರೂಪಾಯಿಗಳು, ಅಂದರೆ 5 ವರ್ಷಗಳಲ್ಲಿ ಹನಿ ನೀರಾವರಿಗೆ ನಾವು ಕೊಡುತ್ತಿರುವ ಪ್ರೋತ್ಸಾಹ ಧನ 5 ಪಟ್ಟು ಹೆಚ್ಚು ಮಾಡಿದ್ದೇವೆ. ಕೇಂದ್ರ ಸರ್ಕಾರ 45 % subsidy ಕೊಡುತ್ತಿತ್ತು. ಅವರು ಪಾಲು ಈಗ 27% ಗೆ ಬಂದಿದೆ, ಆ ಪಾಲನ್ನೂ ರಾಜ್ಯದ ಕಡೆಯಿಂದ ನಾವೇ ಭರಿಸುತ್ತಿದ್ದೇವೆ. ಹೀಗಾಗಿ 90% subsidy ಮೂಲಕ ರೈತರಿಗೆ ಹನಿ ನೀರಾವರಿಯನ್ನು ಕೊಡುವಂಥ ಕೆಲಸ ಮಾಡುತ್ತಿದ್ದೇವೆ. ಈ ವರ್ಷ ಹೊಸ ಕಾರ್ಯಕ್ರಮ ಎಂದರೆ, ತಂತ್ರಜ್ಞಾನ ಅಳವಡಿಸುವ ವಿಚಾರದಲ್ಲಿ ನಮ್ಮ ದೇಶದಲ್ಲಿಯೇ ನಾವು ಹಿಂದುಳಿದಿದ್ದೇವೆ. ಅದಕ್ಕೆ ಈ ವರ್ಷ ಕೆಲವು ತಂತ್ರಜ್ಞಾನಗಳನ್ನು ಗುರುತಿಸಿ ಯಾವ ರೈತರು ಆ ತಂತ್ರಜ್ಞಾನ ಅಳವಡಿಸಿಕೊಳ್ಳುತ್ತಾರೋ ಅವರ account ಗೆ ನೇರವಾಗಿ incentive, ಪ್ರೋತ್ಸಾಹಧನವನ್ನು ಕೊಡುವಂಥ ಕಾರ್ಯಕ್ರಮವನ್ನು ಈ ವರ್ಷದಿಂದ ನಮ್ಮ ಇಲಾಖೆಯಲ್ಲಿ ಕೊಡುವ ಪ್ರಸ್ತಾವನೆ ಇಟ್ಟುಕೊಂಡಿದ್ದು, ಅದಕ್ಕೆ 100 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ.

19-06-2017

ಕೆಲವೊಂದು 10-15 technologies ನ್ನು ನಾವು ಗುರುತಿಸಿದ್ದು, ಅದನ್ನು ಯಾವ ರೈತರು ಅಳವಡಿಸಿಕೊಳ್ಳುತ್ತಾರೋ ಅವರ account ಗೆ ನೇರವಾಗಿ ಹಣ ಹಾಕಲಿಕ್ಕೆ, ಏನೆಂದರೆ, ತಂತ್ರಜ್ಞಾನ ಅಳವಡಿಸಿಕೊಳ್ಳಲಿಕ್ಕೆ ಪ್ರೋತ್ಸಾಹಿಸಬೇಕೆನ್ನುವ ಉದ್ದೇಶದಿಂದ ಆ ಒಂದು ಕಾರ್ಯಕ್ರಮವನ್ನೂ ಸಹ ನಾವು ಇದರಲ್ಲಿ ಸೇರಿಸಿಕೊಂಡಿದ್ದೇವೆ. ಕೊನೆಯದಾಗಿ ಹೇಳುವುದಾದರೆ, ಈ ವರ್ಷ ಆಯವ್ಯಯದಲ್ಲಿ ನಮ್ಮ ಇಲಾಖೆಗೆ ಪ್ರಸ್ತಾಪಿಸಲ್ಪಟ್ಟ ಹಣ ಸುಮಾರು 4,971 ಕೋಟಿ, ಆಯವ್ಯಯ ಪುಸ್ತಕದಲ್ಲಿ 5080 ಕೋಟಿ ಎಂದು ಇದೆ. ಅದಕ್ಕೆ ಅನುಮೋಧನೆ ಕೊಡಬೇಕೆಂದು ಕೇಳುವುದರ ಜೊತೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರೆ ನಾಯಕರುಗಳು ಅನೇಕ ಬಾರಿ ಮಾತನಾಡಿರುವುದನ್ನು ನಾನು ಕೇಳಿದ್ದೇನೆ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ : ನಾನು ಆಗಲೇ ಹೇಳಿದಂತೆ ಹೊಸದಾಗಿ ಸ್ವಲ್ಪ tarpaul ಕಳುಹಿಸಿ ಕೊಡಿ.

ಶ್ರೀ ಕೆ.ಎನ್.ರಾಜಣ್ಣ : ಬೋಪಯ್ಯನವರೇ,

(ಗೊಂದಲ)

ಅಧ್ಯಕ್ಷರು : ಬೋಪಯ್ಯನವರೇ ಸಾಕು ಬಿಡಿ, ಸಾಕಷ್ಟು ಎಲ್ಲಾ ಕೇಳಿದ್ದೀರಿ. ಸ್ವಲ್ಪ ತಾಳಿ ನಾವು ಕೇಳಲೇಬಾರದೆ?

ಅಧ್ಯಕ್ಷರು : ಆಯಿತು ಕೇಳಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ : ಒಂದು ನಿಮಿಷ ರಾಜಣ್ಣನವರೇ. ನಾನು ಮುಗಿಸಿ ಬಿಡುತ್ತೇನೆ. ಹಣ ಸರಿಯಾಗಿ ಖರ್ಚು ಮಾಡಿಲ್ಲ, ಹಾಗೆ ಹೀಗೆ ಎಂದು ಸಾರ್ವಜನಿಕರಲ್ಲಿ ಟೀಕೆ ಮಾಡತಕ್ಕಂಥದ್ದು ನಾನು ಕೇಳಿದ್ದೇನೆ. ನಮ್ಮ ಇಲಾಖೆಯ ಆಯವ್ಯಯಕ್ಕೆ ಅನುಮೋಧನೆ ಕೊಡಬೇಕೆಂದು ಕೇಳುವುದರ ಜೊತೆಗೆ ನಾವು ಎಷ್ಟು ಖರ್ಚು ಮಾಡಿದ್ದೇವೆ ಎನ್ನುವುದನ್ನೂ ಸಹ ಹೇಳಿ ಬಿಡುತ್ತೇನೆ. 2008-09 ರಲ್ಲಿ ಕೃಷಿ ಇಲಾಖೆಗೆ ಇಟ್ಟಿರತಕ್ಕಂಥ ಹಣ 1,957 ಕೋಟಿ, ಖರ್ಚಾಗಿದ್ದು 1,216 ಕೋಟಿ. 2009-10 ರಲ್ಲಿ

ಆಯವ್ಯಯದಲ್ಲಿ ಪ್ರಸ್ತಾಪಿಸಿದ್ದು 1,574 ಕೋಟಿ, ಖರ್ಚಾಗಿದ್ದು 1,218 ಕೋಟಿ. 2010-11 ರಲ್ಲಿ ಪ್ರಸ್ತಾಪಿತ amount 1,894 ಕೋಟಿ, ಖಚಾಗಿದ್ದು 1,306 ಕೋಟಿ. Percentag-wise ಹೇಳುವುದಾದರೆ, ನೀವು ಕೃಷಿಗೆ separate budget ಇಟ್ಟಾಗಲೂ ಸಹ ಖರ್ಚಾಗಿದ್ದು ಎಷ್ಟು ಎಂದರೆ 2008-09 ರಲ್ಲಿ 62%, 2009-10 ರಲ್ಲಿ 77%, 2010-11 ರಲ್ಲಿ 69%, 2011-12 ರಲ್ಲಿ 71%, 2012-13 ರಲ್ಲಿ 66%.

ಅಧ್ಯಕ್ಷರು : Next ನಿಮ್ಮದೂ ಹೇಳಿಬಿಡಿ.

ಶ್ರೀ ಕೃಷ್ಣ ಬೈರೇಗೌಡ : 2013-14 ರದ್ದು ಹೇಳಿ ಬಿಡುತ್ತೇನೆ. ನಮ್ಮ ಸರ್ಕಾರ ಬಂದು ನಾನು ಇಲಾಖೆಯ ಜವಾಬ್ದಾರಿ ವಹಿಸಿಕೊಂಡ ಮೇಲೆ 2013-14 ರಲ್ಲಿ 86%, 2014-15 ರಲ್ಲಿ 91.4%, 2015-16 ರಲ್ಲಿ 98.7%, 2016-17 ರಲ್ಲಿ ನಮಗೆ ಆಯವ್ಯಯದಲ್ಲಿ ಕೊಟ್ಟಿರುವ ಹಣ 4,241 ಕೋಟಿ, ಖರ್ಚು ಮಾಡಿದ ಹಣ 4,713 ಕೋಟಿ, ಅಂದರೆ 111% of budgetary estimate. ಇನ್ನು ಮೇಲಾದರೂ ಏನಾದರೂ ಟೀಕಿಸುವಾಗ ಆಧಾರ ಇಟ್ಟುಕೊಂಡು ಟೀಕಿಸಿದರೆ ನಾವು ಖಂಡಿತವಾಗಿ ಸ್ವಾಗತಿಸುತ್ತೇವೆ. ಅದನ್ನು ಬಿಟ್ಟು ಏನೋ ಒಂದು ಹೇಳಬೇಕೋ ಎಂದು ಹೇಳುವಂಥದ್ದಲ್ಲ. ನಾನು ಈ ಅಂಕಿ-ಸಂಖ್ಯೆಯನ್ನು ಯಾರಿಗೆ ಬೇಕಾದರೂ ಕಳುಹಿಸಿ ಕೊಡುತ್ತೇನೆ. ಇದನ್ನು ನಾನು ಕೊಟ್ಟಿದ್ದಲ್ಲ. ಸರ್ಕಾರದ ಅಧಿಕಾರಿಗಳು ಕೊಟ್ಟಿರುವಂಥ ಮಾಹಿತಿ.

(ಗೊಂದಲ)

ಶ್ರೀ ಹೆಚ್.ಸಿ.ಕುಮಾರಸ್ವಾಮಿ : ಮಾನ್ಯ ಸಚಿವರೇ, ಒಂದು ಸಲಹೆ ಏನೆಂದರೆ,

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ,

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ : ಇನ್ನೊಂದು ನಿಮಿಷದಲ್ಲಿ ಮುಗಿಸುತ್ತೇನೆ. ದಯಮಾಡಿ, ಮಾನ್ಯ ಕುಮಾರಸ್ವಾಮಿಯವರು ಮತ್ತು ಮಾನ್ಯ ಪುಟ್ಟಣ್ಣನವರು ಸಹಕರಿಸಬೇಕು. ಇನ್ನೊಂದು ವಿಚಾರ ಹೇಳಬೇಕಾಗಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಉತ್ತರಿಸಿದ್ದಾರೆ. ಆದರೂ ಪ್ರಸ್ತಾಪಿಸಬೇಕಾಗುತ್ತದೆ. ರೈತರ account ಗೆ 1 ರೂಪಾಯಿ ಹಾಕಿದ್ದಾರೆ ಎಂದು ಅದರ ಬಗ್ಗೆ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಏನೊಂದು ವಿಚಾರ ತಿಳಿದುಕೊಳ್ಳದೇ ಅದರ ಬಗ್ಗೆ ಎಷ್ಟು ಗುಲ್ಲು ಎಬ್ಬಿಸಿದರು ಎಂದರೆ, ಈ ಸರ್ಕಾರ ರೈತರನ್ನು ಕಸಕ್ಕೆ ಸಮಾನವಾಗಿ ಕಾಣುತ್ತದೆ ಎಂದು ಮಾತನಾಡಿದರು. ಇಲ್ಲಿ ಉತ್ತರ ಕೊಡುವುದಕ್ಕೆ ಅವಕಾಶ ಸಿಗುತ್ತದೆಯೋ ಇಲ್ಲವೊ ಗೊತ್ತಿಲ್ಲ. ವಾಸ್ತವಾಂಶ ಏನೆಂದರೆ, 22 ಲಕ್ಷ ರೈತರಿಗೆ 1,450 ಕೋಟಿ ರೂಪಾಯಿಗಳನ್ನು ಈಗಾಗಲೇ ಅವರ account ಗೆ ನೇರವಾಗಿ ಹಾಕಿದೆ. ಇದಾದ ಮೇಲೆ ಇನ್ನು ಕೆಲವು ರೈತರದ್ದು ಬಿಟ್ಟು ಹೋಗಿದೆ, ಮತ್ತೊಂದು ಅವಕಾಶ ಕೊಡಬೇಕೆನ್ನುವ ಬೇಡಿಕೆ ಬಂತು. ಇದಾದ ಮೇಲೆ ಕಂದಾಯ ಸಚಿವರು ಇನ್ನೊಂದು entry ಮಾಡಲಿಕ್ಕೆ ಅವಕಾಶ ಮಾಡಿ ಕೊಟ್ಟರು. ಆಗ ಸುಮಾರು 1 ಲಕ್ಷದ 69 ಸಾವಿರ ರೈತರದ್ದು ಅದರಲ್ಲಿ ಹೊಸದಾಗಿ entry ಮಾಡಿದರು. ಇದಾದ ಮೇಲೆ ಅದರಲ್ಲಿ 1 ಲಕ್ಷದ 69 ಸಾವಿರ ರೈತರ banking IFSC code, Account number, Adhar number, ಇಷ್ಟು ಮಾಹಿತಿಯನ್ನು ಅದರಲ್ಲಿ entry ಮಾಡಿದರು. ಸರ್ಕಾರ ಅದು ಸರಿ ಇದೆಯೋ ಇಲ್ಲವೋ ಎಂದು ನೋಡಬೇಕೋ ಬೇಡವೋ? ಹೀಗಾಗಿ 1 ರೂಪಾಯಿ ಅವರ account ಗೆ ಹಾಕಿ test ಮಾಡೋಣ ಎಂದು ಸರ್ಕಾರ test ಮಾಡಿದೆವು. It is an administrative caution ನಿಂದ ನಾವು ಮಾಡುವ ಕೆಲಸ ಸರಿಯಾಗಿರಬೇಕು, ತಪ್ಪಾಗಬಾರದು ಎನ್ನುವ ದೃಷ್ಟಿಯಿಂದ 1 ರೂಪಾಯಿಯನ್ನು 1 ಲಕ್ಷದ 69 ಸಾವಿರ ರೈತಗೆ account ಗೆ ಹಾಕಿದೆವು. ಹಾಕಿದ ಮೇಲೆ ಏನಾಯಿತು ಎಂದರೆ, 1 ಲಕ್ಷ ರೈತರ account ಗೆ 1 ರೂಪಾಯಿ ಹೋಯಿತು. ಅಲ್ಲಿಗೆ ಆ ರೈತರದ್ದು ಎಲ್ಲಾ ಸರಿ ಇದೆ ಎಂದು ಅರ್ಥ. ಇನ್ನು 55 ಸಾವಿರ accounts inactive accounts ಎಂದು ಬಂತು. ಅಂದರೆ, ಅವರು ಯಾವುದೋ ಜನಧನ ಯೋಜನೆಯಡಿಯಲ್ಲಿ account open ಮಾಡಿದರು, ಇದಾದ ಮೇಲೆ ಅದನ್ನು activate ಮಾಡಿಲ್ಲ. ಹೀಗಾಗಿ ಅದು dead ಆಗಿದೆ. ಅವರ ಪರ್ಯಾಯ account ಗಳನ್ನು ತೆಗೆದುಕೊಂಡು ಆ account ಗಳಿಗೆ ಹಾಕುವಂತಹ ಕೆಲಸ ಮಾಡುತ್ತಿದ್ದೇವೆ. ಇದಲ್ಲದೆ 11 ಸಾವಿರ ರೈತರ account ineligible ಎಂದು ಬಂತು. ಏಕೆ ineligible ಎಂದು ತಾವು ಕೇಳಬಹುದು. ಅವರು ಈಗಾಗಲೇ ಒಂದು ಸುತ್ತು ಪರಿಹಾರ

ತೆಗೆದುಕೊಂಡಿದ್ದಾರೆ. ಅವರ account ಗೆ ನಾವು ದುಡ್ಡು ಹಾಕಿದ್ದರೆ 7 ಕೋಟಿ 29 ಲಕ್ಷ ಹಣ ಅಂಥ ineligible ರೈತರಿಗೆ ಹೋಗುತ್ತಿತ್ತು.

(ಮುಂದು)

19.06.2017 7.20 (49) KS:SSD

ಶ್ರೀ ಕೃಷ್ಣ ಬೈರೇಗೌಡ:- (ಮುಂದು)

Eligible ಇದ್ದಂಥ ಒಂದು ಲಕ್ಷ ರೈತರು ಹಾಗೂ 20 ಸಾವಿರ ಹಳೆ ಬಾಕಿ ಇದ್ದಂಥವರ ಅಕೌಂಟ್‌ಗೆ 72 ಕೋಟಿ ರೂಪಾಯಿ ಹೋಗಿದೆ. ಒಂದು ರೂಪಾಯಿ ಅಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ. ಟೆಸ್ಟ್ ಪಾಸ್ ಆದಂಥ 1 ಲಕ್ಷ ರೈತರ ಅಕೌಂಟ್‌ಗೆ 72 ಕೋಟಿ ರೂಪಾಯಿ ಹೋಗಿದೆ. ತಮ್ಮ ಮಾಹಿತಿಗಾಗಿ ಈ ವಿಚಾರವನ್ನು ಇಲ್ಲಿ ಹೇಳುತ್ತಿದ್ದೇನೆ. ತಾವು ಹೊರಗಡೆ ಏನು ಬೇಕಾದರೂ ಮಾತನಾಡಿಕೊಳ್ಳಿ. ವಾಸ್ತವಾಂಶವನ್ನು ತಮಗೆ ಹೇಳಿದ್ದೇನೆ. ಒಂದು ರೂಪಾಯಿ ಅಲ್ಲ, 72 ಕೋಟಿ ರೂಪಾಯಿ ಅದೇ ರೈತರ ಅಕೌಂಟ್‌ಗೆ ಹೋಗಿದೆ. Demonetization ಮಾಡಿದವರು ಯಾರೋ ಆದರೆ, ಅದರ ಕಷ್ಟವನ್ನು ಯಾರೋ ಅನುಭವಿಸಿದವರು ಎನ್ನುವಂಥ ಪರಿಸ್ಥಿತಿ ಆಗಿದೆ. ಈ ವಿಚಾರ ಬಿಡಿ. ಆದರೆ, ನಾವು ಕೊಡುವ ಹಣ ಯಾರೋ ರೈತರ ಹೆಸರಿಗೆ ಹೋಗಬಾರದು. ನಾವು ಕೊಡುವ ಹಣ ಇನ್ಯಾರಿದೋ ಅಕೌಂಟ್‌ಗೆ ಹೋದರೆ ಸರ್ಕಾರ ಅದಕ್ಕೆ ಜವಾಬ್ದಾರಿ ಆಗುತ್ತದೆಯೋ ಇಲ್ಲವೋ ಹೇಳಿ? ಅಂಥ ಅನಾಹುತಗಳನ್ನು ತಪ್ಪಿಸಬೇಕೆಂದು ನಾವು test run ಮಾಡಿ ಯಾರದು ಸರಿ ಇದೆಯೆಂದು ಬಂತೋ ಅಂಥವರ ಅಕೌಂಟ್‌ಗೆ compensation ಹಣವನ್ನು ಹಾಕಿದ್ದೇವೆ. It is an administrative improvement measure. ಈ ವಿಚಾರವನ್ನು ತೆಗೆದುಕೊಂಡು ನೀವು ಏನೇನೋ ಮಾತನಾಡಿದರೆ ಎಷ್ಟು ಸರಿ ಎನ್ನತಕ್ಕಂಥದ್ದನ್ನು ತಮಗೆ ಬಿಡುತ್ತೇನೆ. ಇಷ್ಟು ವಿಚಾರಗಳನ್ನು ಹೇಳಿ ಕೊನೆಯದಾಗಿ ಒಂದು ವಿಚಾರ ಹೇಳುವುದಕ್ಕೆ ಬಯಸುತ್ತೇನೆ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಜಗದೀಶ್ ಶೆಟ್ಟರ್:- ಈ ವಿಷಯವನ್ನು ನೀವು ರೈತರಿಗೆ ಮೊದಲೇ ಹೇಳಬೇಕಾಗಿತ್ತು.

ಶ್ರೀ ಕೃಷ್ಣ ಬೈರೇಗೌಡ:- ಅದನ್ನು ಹೇಳಬಾರದು.

ಶ್ರೀ ಎನ್.ಹೆಚ್.ಕೋನರೆಡ್ಡಿ:- ಈ ವಿಷಯವನ್ನು ನೀವ್ಯಾರು ಮೊದಲು ಹೇಳಿಲ್ಲ. ಇವತ್ತು ಹೇಳಿದ ವಿಚಾರವನ್ನು ಅವತ್ತೆ ಹೇಳಿದ್ದರೆ ಮುಗಿದು ಹೋಗುತ್ತಿತ್ತು.

ಶ್ರೀ ಜಗದೀಶ್ ಶೆಟ್ಟರ್:- ಇನ್ನು 22,000 ಜನರಿಗೆ ಕೊಡುವುದು ಬಾಕಿ ಇದೆ ಎಂದು ಮಾನ್ಯ ಕಾಗೋಡು ತಿಮ್ಮಪ್ಪನವರು ಈಗಾಗಲೇ ಹೇಳಿದ್ದಾರೆ. ಒಂದು ಸಿಸ್ಟಮ್ ತರದು ಇಷ್ಟೆಲ್ಲ improvement ಆದಮೇಲೂ ಕೂಡ ಪದೇಪದೆ ಟೆಸ್ಟಿಂಗ್ ಮತ್ತೊಂದು ನಡೆಯುತ್ತಾ ಇದೆ. 1700 ಕೋಟಿ ರೂಪಾಯಿ ಬಂದ ತಕ್ಷಣ ಒಂದೇ ದಿವಸದಲ್ಲಿ ಮಾಡುತ್ತೇವೆಂದು ಹೇಳಿದರು. ಆದರೆ, ಈಗ 1 ತಿಂಗಳು ಆಯಿತು. Administrationನ್ನು improvement ಮಾಡುತ್ತೇವೆಂದು ಹೇಳುತ್ತೀರಿ. ಆದ್ದರಿಂದ ಒಂದು ಸಿಸ್ಟಮ್ ಅನ್ನು ರೆಡಿಯಾಗಿ ಇಟ್ಟುಕೊಂಡಿರಿ. ಇವತ್ತು advanced technology ಬಂದಿದೆ. ಇಂಥ ಘಟನೆಗಳು ಏನಾದರೂ ಆದಾಗ ತಕ್ಷಣ ಸರ್ಕಾರ ಕಡೆಯಿಂದ clarification ಬರಬೇಕು. Public ನಲ್ಲಿ debate ನಡೆಯುವಾಗ ತಕ್ಷಣ ಮಾನ್ಯ ಕೃಷಿ ಮಂತ್ರಿಗಳಾಗಲಿ ಅಥವಾ ಇಲಾಖೆಯ ಕಾರ್ಯದರ್ಶಿಗಳು ಬಂದು ಈ ಬಗ್ಗೆ ಟೆಸ್ಟಿಂಗ್ ಮಾಡುತ್ತಿದ್ದೇವೆಂದು ಹೇಳಬೇಕು. ವಿಷಯವೆಲ್ಲ ಹುಯಿಲೆದ್ದ ಮೇಲೆ ಅದಕ್ಕೊಂದು ಸ್ಪಷ್ಟೀಕರಣ ಕೊಡತಕ್ಕಂತ ಕೆಲಸ ಮಾಡುತ್ತಿದ್ದೀರಿ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಏನೆಂದರೆ,..

ಅಧ್ಯಕ್ಷರು:- ಮಾನ್ಯ ಗೋವಿಂದ ಕಾರಜೋಳರವರೆ, ಮಾನ್ಯ ಸಚಿವರು ಬೇಡಿಕೆ ಮೇಲೆ ಉತ್ತರ ಕೊಟ್ಟ ನಂತರ ತಾವು clarification ಕೇಳಿ.

ಶ್ರೀ ಗೋವಿಂದ ಎಂ.ಕಾರಜೋಳ:- ಮಾನ್ಯ ಸಚಿವರಲ್ಲಿ ಈಗಲೇ clarification ಕೇಳಿಬಿಡುತ್ತೇನೆ. ಆನಂತರ ಅವರು ಉತ್ತರ ಕೊಟ್ಟು ಮುಗಿಸಲಿ. ಗುಲ್ಬರ್ಗದಲ್ಲಿ ತೊಗರಿ ಮಂಡಳಿಯನ್ನು ಯಾವರೀತಿಯಾಗಿ ಪ್ರಾರಂಭ ಮಾಡಲಾಗಿದೆಯೋ ಅದೇ ರೀತಿಯಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಜೋಳದ ಮಂಡಳಿಯನ್ನು ಮಾಡಬೇಕೆಂದು ಸರ್ಕಾರಕ್ಕೆ ಸಲಹೆ ಮಾಡಿದ್ದೆ. ಎರಡನೇ ವಿಚಾರ ಏನೆಂದರೆ,

ಎಸ್‌ಸಿಪಿ/ಟಿಎಸ್‌ಪಿ ಹಣದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಖರೀದಿ ಮಾಡಿ ಕೊಡುತ್ತಿದ್ದೀರಿ. ಆದರೆ, ಎಸ್‌ಸಿ/ಎಸ್‌ಟಿ ಜನಾಂಗದವರ ಹೆಸರಿನಲ್ಲಿ ಇದನ್ನು ಬೇರೆಯವರು 100ಕ್ಕೆ 90%ರಷ್ಟು ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ, ಅವರಿಗೆ ಪರ್ಯಾಯವಾಗಿ ಉಪಯೋಗ ಆಗತಕ್ಕಂಥ ಉಪಕರಣಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಪ್ರತಿ ವರ್ಷ ಅದೇ ರೀತಿಯ Agriculture implements ಅನ್ನು ಕೊಡುತ್ತಿರುತ್ತೀರಿ. ಎಸ್‌ಸಿ/ಎಸ್‌ಟಿ ಜನಾಂಗದಲ್ಲಿ ರೈತರು ಪ್ರತಿ ವರ್ಷ ಕಡಿಮೆ ಆಗುತ್ತಾರೆ ಹೊರತು ಜಾಸ್ತಿ ಆಗುವುದಿಲ್ಲ. ಆದ್ದರಿಂದ, ಆ ಹಣವನ್ನು ಬೇರೆ ಕೆಲಸಕ್ಕೆ ಉಪಯೋಗ ಮಾಡಿಕೊಳ್ಳಿ ಎಂದು ನಾನು ಸಲಹೆ ಕೊಟ್ಟಿದ್ದೆ. ಅಂದರೆ, ಈ ಹಣವನ್ನು ಭೂಮಿ ಖರೀದಿಗಾಗಿ ಅಥವಾ ವಸತಿ ಶಾಲೆಗಳಿಗೆ ಅಥವಾ ನಿಮ್ಮ ಇಲಾಖೆಗೆ ಬರತಕ್ಕಂಥ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಎಸ್‌ಸಿ/ಎಸ್‌ಟಿ ಜನಾಂಗದ ವಿದ್ಯಾರ್ಥಿಗಳು ಓದುತ್ತಿದ್ದರೆ ಅಂಥವರಿಗೆ ಅನುಕೂಲ ಮಾಡಿಕೊಡತಕ್ಕಂಥ ಕೆಲಸ ಆಗಬೇಕು.

ಶ್ರೀ ಕೃಷ್ಣ ಬೈರೇಗೌಡ:- ನಮ್ಮ ಖರ್ಚಿನಲ್ಲಿ ಅವರಿಗೆ ಲ್ಯಾಪ್‌ಟ್ಯಾಪ್ ಕೊಡತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ.

ಶ್ರೀ ಗೋವಿಂದ ಎಂ.ಕಾರಜೋಳ:- ಜೋಳದ ಮಂಡಳಿ ಬಿಜಾಪುರ ಅಥವಾ ಬಾಗಲಕೋಟೆಯಲ್ಲಿ ಆಗಬೇಕು ಮತ್ತೊಂದು ಎಸ್‌ಸಿಪಿ/ಟಿಎಸ್‌ಪಿ ಹಣವನ್ನು ಸದುಪಯೋಗ ಆಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂಬ ಎರಡು ವಿಚಾರಗಳನ್ನು ಹೇಳಿದ್ದೇನೆ. ಈ ಬಗ್ಗೆ ಉತ್ತರ ಹೇಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಜೋಳ ಮಂಡಳಿಯನ್ನು ಮಾಡುವುದರ ಬಗ್ಗೆ ವಿಚಾರ ಮಾಡುತ್ತೇವೆ. ಈಗಾಗಲೇ ಮಾಡಿರುವ ಮಂಡಳಿಗಳು ಎಷ್ಟು ಅನುಕೂಲವಾಗಿವೆ ಎಂಬ ಬಗ್ಗೆ ಇನ್ನೊಂದು ಸಂದರ್ಭದಲ್ಲಿ ಚರ್ಚೆ ಮಾಡೋಣ. ಯಂತ್ರೋಪಕರಣ ಬಿಟ್ಟು ಬೇರೆ ಕೊಡಬೇಕೆಂದು ತಾವು ಹೇಳಿದ್ದೀರಿ. ನಮ್ಮ ಇಲಾಖೆಯ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ತಾವು ಏನು ಸಲಹೆ ಕೊಟ್ಟರೂ ಸಹ I am open for your suggestions. ನೀವು ಏನೇ ಸಲಹೆ ಕೊಟ್ಟರೂ ಸಹ ಅದನ್ನು ನಾವು ಖಂಡಿತ ಅಳವಡಿಸಿಕೊಳ್ಳುತ್ತೇವೆ. ಪರಿಶಿಷ್ಟ ರೈತರಿಗೆ ನಾವು ಬೇರೆ

19-06-2017

ಯಾವ ರೀತಿಯಲ್ಲಿ ಸಹಾಯ ಮಾಡಬಹುದೆಂಬ ವಿಚಾರದ ಬಗ್ಗೆ ಕೂಡ ನಾವು ಖಂಡಿತವಾಗಿ ಮುಕ್ತ ಮನಸನ್ನು ಇಟ್ಟುಕೊಂಡಿದ್ದೇವೆ. ಒಂದು system permanent ಆಗಿ ಆಗಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿರತಕ್ಕಂಥದ್ದು ನೂರಕ್ಕೆ ನೂರು ಸರಿ ಇದೆ. ಇದೇ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಈ ಸಾರಿ ನಾವು ರೈತರ ಮಾಹಿತಿಗಳನ್ನು enter ಮಾಡಿರತಕ್ಕಂಥದು permanent database ನಲ್ಲಿರುತ್ತದೆ. ಇಷ್ಟು ಜನ ರೈತರ ಮಾಹಿತಿಯನ್ನು ಭೂಮಿ ಸಾಫ್ಟ್‌ವೇರ್ ಜೊತೆಗೆ ಲಿಂಕ್ ಮಾಡಿದ್ದೇವೆ. ಅವರ ಅಕೌಂಟ್ ನಂಬರ್, ಆಧಾರ್‌ನ ಮಾಹಿತಿ ಇನ್ನೇಲೆ ನಮಗೆ permanent ಆಗಿ ಸಿಗುತ್ತದೆ. ಮುಂದಿನ ವರ್ಷ ದುರಾದೃಷ್ಟವಶಾತ್ ಏನಾದರು ಪ್ರಕೃತಿ ವಿಕೋಪ ಆದರೆ ಸರ್ವೆ ಮಾಡುವುದಕ್ಕೋಸ್ಕರ mobile app ಅನ್ನು ಬಳಕೆ ಮಾಡುತ್ತೇವೆ. ರೈತನ ಜಮೀನಿಗೆ ಸಂಬಂಧಪಟ್ಟ ವಿವರಗಳ ಜೊತೆಗೆ ಅವರ ಬ್ಯಾಂಕ್ ಅಕೌಂಟ್ ಮತ್ತು ಆಧಾರ್ ಮಾಹಿತಿ ಎಲ್ಲವೂ ಕೂಡ ಅದರಲ್ಲಿ permanent ಆಗಿ capture ಆಗಿರುತ್ತದೆ. ಸರ್ವೆ ಮಾಡಿದ ಕೂಡಲೇ ಈ ಎಲ್ಲಾ ಅಂಶಗಳು automatically update ಆಗಿರುತ್ತದೆ. Long term ಪರಿಹಾರ ಸಿಗಬೇಕೆಂದು ನಾವು ಈ ವರ್ಷ ಈ ರೀತಿಯ ತೊಂದರೆಯನ್ನು one time ತೆಗೆದುಕೊಂಡು ಮಾಡುತ್ತಿದ್ದೇವೆ. ಆದರೆ, ಇನ್ಮುಂದೆ ಮಾಡಿಕೊಂಡು ಹೋಗುವುದಕ್ಕೆ ಇದು ಬಹಳ ಸರಳೀಕರಣವಾಗುತ್ತದೆ. ಸುಮಾರು 2-3 ತಿಂಗಳು ಸರ್ಕಾರಕ್ಕೆ ಕೆಲಸ ಉಳಿತಾಯವಾಗುತ್ತದೆ. ತಾವು ಹೇಳಿದಂತ ಸಿಸ್ಟಮ್ ಅನ್ನು ಸರ್ಕಾರ ಮಾಡುವಂಥ ಪ್ರಯತ್ನವನ್ನು ಮಾಡುತ್ತಿದೆ. ಇದು ಇನ್ನು ಮುಂದೆ permanent ಆಗಿರುತ್ತದೆ. ನಾವು ಹಾಕುತ್ತಿರುವ ಶ್ರಮ ಮುಂದೆ ಯಾರೇ ಈ ಕೆಲಸ ಮಾಡುವವರಿಗೆ ಇದು ಬಹಳ ಸರಳೀಕರಣವಾಗುತ್ತದೆ. This is a permanent data base we are building. It will be beneficial. It is one of its kind in the Country. Definitely it will help. ಇದು ಭವಿಷ್ಯದಲ್ಲಿ help ಆಗುತ್ತದೆ ಎಂದು ಹೇಳುತ್ತಾ ಎಲ್ಲಾ ಗೌರವಾನ್ವಿತ ಸದಸ್ಯರುಗಳು ಕೊಟ್ಟಿರುವ ಸಲಹೆಗಳನ್ನು ಮತ್ತು ಟೀಕೆಗಳನ್ನು ಸ್ವೀಕಾರ ಮಾಡುತ್ತೇವೆ. ಆದಷ್ಟು ಸುಧಾರಣೆ ಮಾಡತಕ್ಕಂಥ ಪ್ರಯತ್ನಗಳನ್ನು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತೇವೆಂದು ಹೇಳುತ್ತಾ ಆಯವ್ಯಯದಲ್ಲಿ ಕೃಷಿ ಇಲಾಖೆಗೆ ಪ್ರಸ್ತಾಪಿತ ಮೊತ್ತಕ್ಕೆ ತಾವು ಎಲ್ಲರೂ ಸಹ ಅನುಮೋದನೆ ಕೊಡಬೇಕೆಂದು ತಮ್ಮೆಲ್ಲರಲ್ಲಿಯೂ ಮನವಿ ಮಾಡುತ್ತೇನೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಕೃಷಿ ಇಲಾಖೆಯಲ್ಲಿ ಬಡವರಿಗೆ ನಾನಾ ರೀತಿಯ ಸಬ್ಸಿಡಿ ಯೋಜನೆಗಳಿವೆ. ಆದರೆ, ಅದರಲ್ಲಿಯೂ ಕೂಡ ಯಂತ್ರೋಪಕರಣಗಳ ಬಗ್ಗೆ ಹೇಳುವುದಾದರೆ, ಬಡವರಿಗೆ ಯಂತ್ರೋಪಕರಣಗಳನ್ನು ನೀವು ಹಂಚುತ್ತಿದ್ದೀರಿ. ಆದರೆ, ಇವುಗಳು ಫಲಾನುಭವಿಗಳಿಗೆ ತಲುಪುತ್ತಿದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಮತ್ತು ಅವರು ಇವುಗಳನ್ನು ಸರಿಯಾಗಿ ಉಪಯೋಗಿಸುತ್ತಿದ್ದಾರೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಮತ್ತು ಅದರಿಂದ ಏನು ಪ್ರಯೋಜನ ಆಗುತ್ತಿದೆ ಎಂಬ ಬಗ್ಗೆ ಗೊತ್ತಾಗಬೇಕು. ಆದ್ದರಿಂದ, ಒಂದು ಸಮಿತಿ ಮಾಡಿ ಸಂಬಂಧಪಟ್ಟ ಫಲಾನುಭವಿ ಅದನ್ನು ಕೊಂಡುಕೊಳ್ಳುತ್ತಿದ್ದಾನೆಯೋ ಅಥವಾ ಇಲ್ಲವೋ ಎಂದು ಮತ್ತು ಆತ ಕೊಂಡುಕೊಂಡ ಮೇಲೆ ಅದನ್ನು ಸರಿಯಾಗಿ ಉಪಯೋಗಿಸುತ್ತಿದ್ದಾನೆಯೋ ಅಥವಾ ಇಲ್ಲವೋ ಎಂದು ಪರಿಶೀಲನೆ ಮಾಡಿ ವರದಿ ಕೊಡಬೇಕೆಂದು ಈ ಬಗ್ಗೆ ಸದನದಲ್ಲಿ ಒತ್ತಾಯ ಕೂಡ ಮಾಡಿದ್ದೆವು. ಇವತ್ತಿನದಿವಸ ದುರುಪಯೋಗ ಆಗುತ್ತಿದೆ, mis-utilization ಆಗುತ್ತಿದೆ. ಆದ್ದರಿಂದ, ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರೆಂದು ಹೇಳಬೇಕು. ಏಕೆಂದರೆ, ಅಷ್ಟು ಪರ್ಸೆಂಟ್ ಇಷ್ಟು ಪರ್ಸೆಂಟ್ ಸಬ್ಸಿಡಿ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಸಬ್ಸಿಡಿ ಕೊಡುತ್ತಿರುವುದು ನಿಜ. ಆದರೆ, ಅದು ಎಲ್ಲಿಗೆ ಹೋಗುತ್ತದೆ? ಈ ಬಗ್ಗೆ ಮಾನ್ಯ ಸಚಿವರು ದಯವಿಟ್ಟು ಉತ್ತರ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಬಿ.ನಿಂಗಯ್ಯ:- ಮಾನ್ಯ ಸಚಿವರೆ, ಎಸ್‌ಸಿ/ಎಸ್‌ಟಿ ರೈತರಿಗೆ ಎಸ್‌ಸಿಪಿ/ಟಿಎಸ್‌ಪಿ ಹಣದಲ್ಲಿ ಕೆಲವು ಯಂತ್ರೋಪಕರಣಗಳನ್ನು ಕೊಡಲಾಗುತ್ತದೆ. ನಮ್ಮ ಎಸ್‌ಸಿ/ಎಸ್‌ಟಿ ಲೆಜಿಸ್‌ಲೇಟರ್ಸ್ ವೆಲ್‌ಫೇರ್ ಕಮಿಟಿಯಲ್ಲಿ ಈ ಬಗ್ಗೆ ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಇದರಲ್ಲಿ ಬಹಳಷ್ಟು ದುರುಪಯೋಗ ಆಗಿರತಕ್ಕಂಥದು ಗಮನಕ್ಕೆ ಬಂತು. ಆದ್ದರಿಂದ, ಅದರ ಬಗ್ಗೆ ಕೂಡ ಏನು ಕ್ರಮ ಕೈಗೊಳ್ಳುತ್ತೀರಿ ಎಂಬ ಬಗ್ಗೆ ತಾವು ಹೇಳಬೇಕು.

ಶ್ರೀ ಸಿ.ಎನ್.ಬಾಲಕೃಷ್ಣ:- ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕೃಷಿ ಸಚಿವರ ಗಮನಕ್ಕೆ ತರುವುದೇನೆಂದರೆ, poly house ಗಳನ್ನು ನಿರ್ಮಾಣ ಮಾಡತಕ್ಕಂಥದರಲ್ಲಿ ಈ ಹಿಂದೆ ತುಂಬಾ

ವ್ಯತ್ಯಾಸಗಳಾಗಿದ್ದು, ಇದರಿಂದ ಹೆಚ್ಚು ಹಣವನ್ನು ರೈತರು ಪಡೆದುಕೊಂಡು ಮೋಸ ಮಾಡಿದ್ದಾರೆ ಎಂಬುದು ತಮ್ಮ ಗಮನಕ್ಕೆ ಈಗಾಗಲೇ ಬಂದಿದೆ. ಅದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ಎಂಬ ಬಗ್ಗೆ ಹೇಳಬೇಕು. ಅದರ ಜೊತೆಗೆ ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ 42% ರೈತರಿಗೆ input subsidy ಅವರ ಅಕೌಂಟ್‌ಗೆ onlineನಲ್ಲಿ ಹೋಗಿದೆ ಎಂದು ಹೇಳಿದ್ದೀರಿ. ಆದರೆ, ನಾನು ಈಗ ಬಂದಂಥ ಸಂದರ್ಭದಲ್ಲಿ ದೊರೆತ ಮಾಹಿತಿ ಪ್ರಕಾರ ಕೆಲವು ಹೋಬಳಿಗಳಲ್ಲಿ ಇನ್ನೂ ಪೂರ್ಣಪ್ರಮಾಣದಲ್ಲಿ ಸಿಕ್ಕಿಲ್ಲ. ಬಂದೇ ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ, ಬಂದಿರತಕ್ಕಂಥ ಪ್ರಮಾಣ ಬಹಳ ಕಡಿಮೆ ಇದೆ. ಅಕೌಂಟ್ ಇದ್ದಂಥವರಿಗೆ ಪೂರ್ಣಪ್ರಮಾಣದಲ್ಲಿ online ಮೂಲಕ ಹಣ ಕೊಡಿಸತಕ್ಕಂಥದಕ್ಕೆ ದಯಮಾಡಿ ಕ್ರಮವಹಿಸಬೇಕೆಂದು ಈ ಸಂದರ್ಭದಲ್ಲಿ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಹಿಡುವಳಿ ಬಗ್ಗೆ ಮಾತನಾಡುತ್ತೇನೆ. ಹಿಡುವಳಿ ಆಧಾರದ ಮೇಲೆ ಬೆಳೆ ನೀತಿ ಮಾಡುವುದಕ್ಕೆ ಒಂದು ಪ್ಲಾನ್ ಮಾಡಿ ಹಾಗೆಯೇ ಆದಾಯ ಖಾತ್ರಿ ಬಗ್ಗೆ ಆಲೋಚನೆ ಮಾಡಿ. ಏಕೆಂದರೆ, ಬ್ಯಾಂಕ್‌ನವರ ಜೊತೆ ಮಾತನಾಡಿ ಒಂದು ಪ್ಯಾಕೇಜ್ ಪ್ಲಾನ್ ಮಾಡಿದರೆ ರೈತರು ಸಾಲ ಮನ್ನಾ ಮಾಡಿ ಎಂದಾಗಲಿ ಅಥವಾ ಇತರೇ ಯಾವುದೇ ಸಮಸ್ಯೆಗಳು ಬರುವುದಿಲ್ಲ. ಎರಡನೇ ವಿಚಾರ ಏನೆಂದರೆ, ನೈಸರ್ಗಿಕ ಮತ್ತು ಸಾವಯವ ಕೃಷಿಗೆ ತಾವು ಆಯವ್ಯಯದಲ್ಲಿ ಕೊಡತಕ್ಕಂಥ ಹಣದಲ್ಲಿ 50:50 ಮಾಡಿದರೆ ಒಳ್ಳೆಯದು. ಬಹಳ ಕಡೆ ಆಂದೋಲನ ರೂಪದಲ್ಲಿ ನಡೆಯುತ್ತಿದೆ. ಮತ್ತೆ ಈ ಎರಡು ಕೃಷಿಯಲ್ಲಿ ಯಾವುದು ಸರಿ ಇದೆ ಎಂದು ತಿಳಿದ ಮೇಲೆ ಅದಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕು. ಆದ್ದರಿಂದ, ಮೊದಲು ಈ ಎರಡನ್ನೂ ತಾವು ಮಾಡಬೇಕು. ಮತ್ತೆ ತಾವು ಬಹಳ ಚೆನ್ನಾಗಿ ಉತ್ತರ ಕೊಟ್ಟಿದ್ದೀರಿ ಹಾಗೆಯೇ implement ಕೂಡ ಮಾಡಿದ್ದೀರಿ. ಇಷ್ಟೆಲ್ಲಾ ನಡುವೆ ಕೃಷಿ ಬಿಕ್ಕಟ್ಟು ಏಕೆ ಆಗುತ್ತಿದೆ? ಆದ್ದರಿಂದ, ನಾನು ಹೇಳುವುದೇನೆಂದರೆ, ಒಂದು ಸಮಿತಿ ರಚನೆ ಮಾಡಿ ಅಲ್ಲಿ ದೊಡ್ಡಮಟ್ಟದಲ್ಲಿ ಚರ್ಚೆ ಮಾಡಿ ಒಂದು ಹೊಸ ಮಾರ್ಗವನ್ನು ಕಂಡುಹಿಡಿಯುವಂಥ ಕೆಲಸ ಆಗಬೇಕೆಂದು ಕೇಳಿಕೊಳ್ಳುತ್ತೇನೆ.

19-06-2017

ಶ್ರೀ ಲಕ್ಷಣ್ ಸಂಗಪ್ಪ ಸವದಿ:- ಮಾನ್ಯ ಅಧ್ಯಕ್ಷರೆ, ಕೃಷಿ ಇಲಾಖೆ ಮುಖಾಂತರ cane harvesting machine ಅನ್ನು ಸಬ್ಸಿಡಿ ಮುಖಾಂತರ ಕೊಟ್ಟಿದ್ದಾರೆ. ಆದರೆ, ಇದಕ್ಕೆ ಸಾರಿಗೆ ಇಲಾಖೆಯವರು road tax ಹಾಕುತ್ತಿದ್ದಾರೆ. ಆದ್ದರಿಂದ, ಆ ಯಂತ್ರಗಳಿಗೆ road tax ಹಾಕದ ರೀತಿಯಲ್ಲಿ ತಾವು ನೋಡಿಕೊಳ್ಳಬೇಕು ಹಾಗೆಯೇ ಅವರ ಜೊತೆ ಚರ್ಚೆ ಮಾಡಿ ಒಂದು ನಿರ್ಣಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, tractor ಗೆ exemption ಇದೆ. ಆದ್ದರಿಂದ cane harvesting machineಗೆ road tax ಹಾಕಿದರೆ ತಪ್ಪಾಗುತ್ತದೆ. ಆದ್ದರಿಂದ, ಅದು ಆಗದ ರೀತಿಯಲ್ಲಿ ನೀವು ನೋಡಿಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಡುವಂಥ ಸಂದರ್ಭದಲ್ಲಿ ಯಂತ್ರೋಪಕರಣಗಳ ಬಗ್ಗೆ ಮಾತನಾಡಿದರು. ಅದರಲ್ಲಿ 25 ಹೆಚ್.ಪಿ. tractor ಅನ್ನು ಎಸ್‌ಸಿಪಿ/ಟಿಎಸ್‌ಪಿ ಅನುದಾನದಲ್ಲಿ ಖರೀದಿ ಮಾಡಿ ಕೊಡುವಾಗ ಅದಕ್ಕೆ 2 ಲಕ್ಷ ರೂಪಾಯಿ ಸಬ್ಸಿಡಿ ಕೊಡುತ್ತಿದ್ದೀರಿ. ಅದು ಕೇವಲ ಅಡಿಕೆ ತೋಟ ಇದ್ದವರಿಗೆ ಮತ್ತೆ ದೊಡ್ಡ ದೊಡ್ಡ ರೈತರಿಗೆ ಅನುಕೂಲವಾಗುತ್ತದೆ ಹೊರತು ಎಸ್‌ಸಿ/ಎಸ್‌ಟಿ ಜನರಿಗೆ ಇದರಿಂದ ಏನು ಅನುಕೂಲವಾಗುವುದಿಲ್ಲ. ಆದರೆ, ಅವರಿಗೆ ಕೊಟ್ಟಂತೆ ಮಾಡಲಾಗುತ್ತದೆ. ಆದರೆ, ನಮ್ಮಲ್ಲಿ ಯಾರೂ ಸಹ ತೆಗೆದುಕೊಳ್ಳುತ್ತಿಲ್ಲ. ನಮ್ಮ ಹತ್ತಿರ ಬಂದು 2 ಲಕ್ಷ ರೂಪಾಯಿ ಸಬ್ಸಿಡಿ ಕೊಡುತ್ತೇವೆ. 25 ಹೆಚ್.ಪಿ. tractor ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ.

(ಮುಂದು)

19-06-2017/7.30/50/GG/SSD

ಶ್ರೀ ಕೆ.ಎಂ. ಶಿವಲಿಂಗೇಗೌಡ (ಮುಂದುವರೆದುದು): SCP ದುಡ್ಡು ಬೇಕಾದಷ್ಟು ಇದೆ. ಏನಾದರೂ ಮಾಡಿ 35 ಹೆಚ್.ಪಿ.ಗೋ, 40 ಹೆಚ್.ಪಿ.ಗೋ ಹೆಚ್ಚಿಸಿ. ಹೆಚ್ಚಿಸಿದಾಗ ಏನಾಗುತ್ತದೆ ಎಂದರೆ ನಿರುದ್ಯೋಗಿ ಯುವಕರು ಅದನ್ನು ತೆಗೆದುಕೊಂಡು ಬಾಡಿಗೆಗೆ ಕೊಟ್ಟು, ಅದರಿಂದ ದುಡಿದುಕೊಂಡು ತಮ್ಮ ಬಾಳನ್ನು ಹಸನು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ದಯಮಾಡಿ

ಅದನ್ನು ಮಾಡಿ ಎಂದು ಹೇಳುತ್ತೇನೆ. ಆವತ್ತಿನಿಂದ ನಾವು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ತೆಂಗಿನಮರ ಒಣಗಿ ಹೋಗಿದ್ದರ ಬಗ್ಗೆ ಬಹಳ ಹೋರಾಟ ನಡೆಸುತ್ತಿದ್ದೇವೆ. ನಾವು ಹಳ್ಳಿಗಳಿಗೆ ಹೋಗುವುದಕ್ಕೆ ಆಗುತ್ತಿಲ್ಲ. ದಯಮಾಡಿ ಈಗ ನೀವು ತೋಟಗಾರಿಕೆ ವಿಷಯದಲ್ಲಿ ಉತ್ತರ ಕೊಡಿಸದಿದ್ದರೆ ನಾನು ರಾತ್ರಿಯೆಲ್ಲ ಇಲ್ಲೇ ಇರುತ್ತೇನೆ, ಇಲ್ಲೇ ಮಲಗುತ್ತೇನೆ, ಗ್ಯಾರಂಟಿ ನಾನು ಧರಣಿ ಸತ್ಯಾಗ್ರಹ ಮಾಡುತ್ತೇನೆ. ಆದ್ದರಿಂದ ಈ ಬಗ್ಗೆ ಅಧ್ಯಕ್ಷರಾದ ನೀವು ನನಗೆ ಭರವಸೆ ಕೊಡಬೇಕು. ನನಗೆ ಗೊತ್ತು, ಕೃಷ್ಣಬೈರೇಗೌಡರದ್ದು ಆದ ಮೇಲೆ ಉತ್ತರ ಕೊಡುವುದಕ್ಕೆ ಡಿ.ಕೆ. ಶಿವಕುಮಾರ್‌ರವರು ಕುಳಿತಿದ್ದಾರೆ. ಶಾಕ್ ಹೊಡೆದ ಮೇಲೆ ಅಲ್ಲಿಗೆ ಮುಗಿಯಿತು, ಮುಂದಕ್ಕೆ ಹೋಗುವುದಕ್ಕೆ ಆಗುವುದಿಲ್ಲ. ಆದ್ದರಿಂದ ಶಾಕ್ ಹೊಡೆಯುವುದಕ್ಕೆ ಮೊದಲು ನಾವೇ ಶಾಕ್ ಹೊಡೆಸಿಕೊಂಡು ಹೋಗಿ ಅಲ್ಲಿ ಕುಳಿತುಕೊಳ್ಳುತ್ತೇವೆ. ತೆಂಗಿನ ಬೆಳೆ ವಿಷಯವಾಗಿ ನಾವು ಯಾರ್‌ಯಾರು ಪ್ರಸ್ತಾಪ ಮಾಡಿದ್ದೇವೋ ಅವರೆಲ್ಲ ಅಲ್ಲಿಗೆ ಬಂದು ಕುಳಿತುಕೊಳ್ಳುತ್ತೇವೆ.

ಶ್ರೀ ಎಂ. ಅಶೋಕ ಪಟ್ಟಣ: ಗೌಡರೆ, ಅದಕ್ಕೆ ಉತ್ತರವನ್ನು ನಾಳೆ ಗ್ಯಾರಂಟಿ ಕೊಡಿಸುತ್ತೇವೆ. ಡಿ.ಕೆ. ಶಿವಕುಮಾರ್‌ರವರದ್ದು ಉತ್ತರವಾದ ಮೇಲೆ ನೀರಾವರಿ ಬಗ್ಗೆ ಉತ್ತರ ಕೊಡುತ್ತಾರೆ, ಅಲ್ಲಿ 9.00-9.30 ಗಂಟೆ ಆಗುತ್ತದೆ. ಹಾಗಾಗಿ ನಿಮಗೆ ನಾಳೆ ಉತ್ತರ ಕೊಡಿಸುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಎಷ್ಟು ಹೊತ್ತಾದರೂ ಆಗಲಿ ನಾವು ಇರುತ್ತೇವೆ. ಆ ಸಚಿವರು ಇಲ್ಲಿಗೆ ಬರುವುದೂ ಇಲ್ಲ, ಉತ್ತರ ಕೊಡುವುದೂ ಇಲ್ಲ.

ಅಧ್ಯಕ್ಷರು: ಆಯಿತು, ಬರುತ್ತಾರೆ ಬಿಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಎಷ್ಟು ಲಕ್ಷ ತೆಂಗಿನ ಮರಗಳು ಸುಟ್ಟುಹೋಗಿವೆ ಎಂದು ತನಿಖೆ ಮಾಡಿಸಿದ್ದಾರೆ. At least ಅವರು ಇಲ್ಲಿಗೆ ಬಂದು, ಇಷ್ಟು ಮರಗಳು ಬಿದ್ದು ಹೋಗಿರುವುದು ನಿಜ, ಇಷ್ಟು ಮರಗಳು ಸುಟ್ಟು ಹೋಗಿರುವುದು ನಿಜ, ಸರ್ಕಾರದವರಾದ ನಾವಿದ್ದೇವೆ, ರೈತರು ಧೈರ್ಯಗೆಡಬೇಡಿ ಎಂದು ಇಲ್ಲಿಂದ ಒಂದು ಸಂದೇಶ ಕೊಡಿ ಎಂದರೆ ಅವರು ಇಲ್ಲಿಗೆ ಬರುವುದೇ ಇಲ್ಲವಲ್ಲ. ಈ ಬಗ್ಗೆ ನಾನು ಆವತ್ತಿನಿಂದ ಕಾಡುತ್ತಿದ್ದೇನೆ, ಆದರೂ ನೀವು

ಒಂದು ಸಂದೇಶ ಕೊಡುವುದಿಲ್ಲವಲ್ಲ. ರೈತರ ಬಗ್ಗೆ ಒಂದು ಉತ್ತರವನ್ನು ನಾವು ಇಷ್ಟೊಂದು ಕಾಡಿ-ಬೇಡಿ ತೆಗೆದುಕೊಳ್ಳಬೇಕೇ?

ಅಧ್ಯಕ್ಷರು: ಆಯಿತು, ಉತ್ತರ ಕೊಡಿಸೋಣ. ಅವರ ಕಡೆಯಿಂದಲೇ ಉತ್ತರ ಕೊಡಿಸುತ್ತೇನೆ. ಈಗ ಯಾವಗಲ್‌ರವರು.

ಶ್ರೀ ಕೆ.ಎಂ. ಶಿವಲಿಂಗೇಗೌಡ: ನಾಳೆ ಗ್ಯಾರಂಟಿ ಕೊಡಿಸುತ್ತೀರಿ ಅಲ್ಲವೇ? ನಾಳೆ ಗ್ಯಾರಂಟಿ ಅವರಿಂದಲೇ ಉತ್ತರ ಕೊಡಿಸಬೇಕು, ಇಲ್ಲದಿದ್ದರೆ ನಾವು ಇಲ್ಲೇ ಮಲಗುತ್ತೇವೆ.

ಅಧ್ಯಕ್ಷರು: ಆಯಿತು, ಕೊಡಿಸುತ್ತೇನೆ.

ಶ್ರೀ ಎಂ. ಅಶೋಕ ಪಟ್ಟಣ: ಅಧ್ಯಕ್ಷರೆ, ನಾಳೆ ಗ್ಯಾರಂಟಿ ಕೊಡಿಸುತ್ತೇವೆ.

ಶ್ರೀ ಬಿ.ಆರ್. ಯಾವಗಲ್: ಮಾನ್ಯ ಅಧ್ಯಕ್ಷರೆ, ಎಲ್ಲ ಕಾರ್ಯಕ್ರಮದ ಬಗ್ಗೆ ಹೇಳಿದ್ದು ಆಯಿತು, ಅವರು ಮಾಡುವುದನ್ನು ಹೇಳಿದ್ದು ಆಯಿತು. ಮಳೆ ಬರಿಸಲು ದಯಮಾಡಿ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳುತ್ತಿದ್ದೀರಾ ಎನ್ನುವುದನ್ನು ಹೇಳಬೇಕು. ಮಳೆಯೇ ಇಲ್ಲ, ನೀರೇ ಇಲ್ಲ ಹೀಗಿರುವಾಗ ನಿಮ್ಮ ಕೆರೆಯೂ ಉಪಯೋಗವಿಲ್ಲ, ಡ್ಯಾಂ ಉಪಯೋಗವಿಲ್ಲ.

ಅಧ್ಯಕ್ಷರು: Cloud seeding ಎಂದು ಏನೋ ಮಾಡಿದ್ದೀರಲ್ಲ, ಅದರ ಬಗ್ಗೆ ಹೇಳಿ.

ಶ್ರೀ ಎನ್.ಹೆಚ್. ಕೋನರೆಡ್ಡಿ: ಮಾನ್ಯ ಕೃಷಿ ಸಚಿವರು ಹೇಳಿದುದನ್ನೆಲ್ಲ ನಾವು ಒಪ್ಪುತ್ತೇವೆ. ಕಡೆಯದಾಗಿ ಇನ್ನೊಂದು ವಿಚಾರವೆಂದರೆ, ಎಲ್ಲ ರೈತರಿಗೆ ಮತ್ತು ರಾಜ್ಯಕ್ಕೆ ನೀವು message ಕೊಡಬೇಕೆಂದರೆ ನೀವು ದಯವಿಟ್ಟು ರೈತರ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು.

ಶ್ರೀ ಕೆ.ಎಂ. ತಿಮ್ಮರಾಯಪ್ಪ: ವಿಮೆಯನ್ನು ಕಟ್ಟಿಸಿಕೊಳ್ಳತಕ್ಕಂಥ ಕಂಪನಿಯವರು ಹೇಳಿದ ಹಾಗೆ ಕೇಂದ್ರ ಸರ್ಕಾರದವರು ಮಾನದಂಡಗಳನ್ನು ಮಾಡಿಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರು

ಆ ಕಂಪನಿಯ ಜೊತೆ ಒಡಂಬಡಿಕೆ ಮಾಡಿಕೊಂಡು ರೈತರ ಮೇಲೆ ಕೆಲವು ಮಾನದಂಡಗಳನ್ನು ಹೇರಿದ್ದಾರೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ 50:50 ಅನುಪಾತದಲ್ಲಿ premium ಹಣವನ್ನು ಕಟ್ಟುವುದರಿಂದ ಆ ಮಾನದಂಡಗಳನ್ನು ಸಡಿಲಿಕೆ ಮಾಡಲು, ಕೃಷಿ ವಿಜ್ಞಾನಿಗಳ ಸಲಹೆಯನ್ನು ಪಡೆದು ವೈಜ್ಞಾನಿಕ ರೀತಿಯಲ್ಲಿ, ಮಾನದಂಡಗಳನ್ನು ಸಡಿಲಿಕೆ ಮಾಡಲು ನಮ್ಮ ರಾಜ್ಯ ಸರ್ಕಾರ ಏಕೆ ಪ್ರಯತ್ನ ಮಾಡಬಾರದು ಎನ್ನುವುದು ಮೊದಲನೆಯದು. ಮತ್ತೊಂದು ಪ್ರಸ್ತಾವನೆ ಎಂದರೆ, ನಮ್ಮ ಭಾಗದಲ್ಲಿ ಪರಿಶಿಷ್ಟ ಜಾತಿಯವರಿಗೆ ಬೀಜದ ಕಿಟ್‌ಗಳನ್ನು ವಿತರಣೆ ಮಾಡುತ್ತಾರೆ. 20 ಕೆ.ಜಿ.ಯ ಶೇಂಗಾ ಕಿಟ್ ಎಂದು ಕೊಡುತ್ತಿದ್ದಾರೆ. ಅದರಿಂದ ಕೇವಲ 10 ಗುಂಟೆಯಲ್ಲಿ ಮಾತ್ರ ರೈತರು ಬೆಳೆಯಲು ಸಾಧ್ಯವಿದೆ. ದಯವಿಟ್ಟು ಬೀಜದ ಪ್ರಮಾಣವನ್ನು ಹೆಚ್ಚಿಗೆ ಮಾಡಿಕೊಡಿ. ಅದಕ್ಕೆ ಬೇಕಾದಷ್ಟು ಅವಕಾಶವಿದೆ, ಹಣವೂ ಇದೆ. 50 ಕೆ.ಜಿ. ಬೀಜವನ್ನು ಕೊಡುವಂಥಾದ್ದನ್ನು ಮಾಡಿ. ಆಗ ಕನಿಷ್ಟ ಒಂದೂವರೆ ಎಕರೆ ಪ್ರದೇಶದಲ್ಲಿ ಬೆಳೆಯಲು ಆ ರೈತರಿಗೆ ಅನುಕೂಲವಾಗುತ್ತದೆ. ಆ ರೀತಿಯ ಒಂದು ಮನವಿಯನ್ನು ನಿಮ್ಮ ಮುಖೇನ ನಾನು ಮಾಡುತ್ತಿದ್ದೇನೆ.

ಅಧ್ಯಕ್ಷರು: ಆಯಿತು, ಅದಕ್ಕೆಲ್ಲ ಉತ್ತರ ಕೊಡುತ್ತಾರೆ ಬಿಡಿ. ಎಲ್ಲವುಗಳಿಗೂ ಸೇರಿಸಿ ಉತ್ತರ ಕೊಟ್ಟುಬಿಡಿ.

ಶ್ರೀ ಕೃಷ್ಣಬೈರೇಗೌಡ: ಈ ಕಿಟ್‌ಗಳ ದುರುಪಯೋಗವಾಗುತ್ತಿದೆ ಎಂದು ನನಗೆ ಅನಧಿಕೃತವಾಗಿ ಮಾಹಿತಿ ಕೊಟ್ಟವರೇ ಪಾವಗಡದ ಶಾಸಕರು. ಈಗ ಹೆಚ್ಚು ಬೀಜವನ್ನು ಕೊಡಿ ಎಂದು ನೀವೇ ಹೇಳುತ್ತಿದ್ದೀರಿ. ಪಕ್ಕದ ರಾಜ್ಯದವರೆಲ್ಲ ನಮ್ಮಲ್ಲಿಂದ ತೆಗೆದುಕೊಂಡು ಹೋಗುತ್ತಿದ್ದಾರೆ, ಅದನ್ನು ಕಂಟ್ರೋಲ್ ಮಾಡಿ ಎಂದು ನೀವೇ ಹೇಳಿದವರು, ಈಗ ನೀವೇ ಹೀಗೆ ಹೇಳಿದರೆ ಹೇಗೆ?

ಶ್ರೀ ಕೆ.ಎಂ. ತಿಮ್ಮರಾಯಪ್ಪ: ನೀವು ಕೊಡುತ್ತಿರುವ 20 ಕೆ.ಜಿ. ಬೀಜದ ಕಿಟ್ 10 ಗುಂಟೆಗೆ ಸಾಲದೇ ಬರುತ್ತಿದೆ.

19-06-2017

ಶ್ರೀ ಕೃಷ್ಣಬೈರೇಗೌಡ: ದುರುಪಯೋಗವಾಗುತ್ತಿದೆ ಎಂದು ನೀವೇ ಹೇಳಿದಿರಿ ಅಲ್ಲವೇ?

ಶ್ರೀ ಕೆ.ಎಂ. ತಿಮ್ಮರಾಯಪ್ಪ: ಅದನ್ನು ನೀವು early ಯಾಗಿ ಕೊಡಿ, ಆಗ ದುರುಪಯೋಗವಾಗುವುದಿಲ್ಲ. ನೀವು ಅದನ್ನು ಜುಲೈ ತಿಂಗಳಲ್ಲಿ ಕೊಡುತ್ತೀರಿ. ಜೂನ್ ತಿಂಗಳಲ್ಲಿ ಬಿತ್ತನೆ ಮಾಡಬೇಕಾದರೆ ನೀವು ಜುಲೈ ತಿಂಗಳಲ್ಲಿ ಕೊಟ್ಟರೆ ಹೇಗೆ ಉಪಯೋಗವಾಗುತ್ತದೆ ಎಂದು ಹೇಳಿ.

ಶ್ರೀ ಕೃಷ್ಣಬೈರೇಗೌಡ: ಪರಿಶಿಷ್ಟ ವರ್ಗದವರಿಗೆ ನಾವು ಏನು ಯಂತ್ರೋಪಕರಣಗಳನ್ನು ಕೊಡುತ್ತಿದ್ದೇವೆ, ಅದು ದುರುಪಯೋಗವಾಗುತ್ತಿದೆ ಎಂದು ತಾವು ಹೇಳಿದಿರಿ. ನಿಜ, ಅದು ದುರುಪಯೋಗವಾಗುತ್ತಿದೆ. ಅಂದರೆ ಪರಿಶಿಷ್ಟ ವರ್ಗದವರ ಹೆಸರಿನಲ್ಲಿ ತೆಗೆದುಕೊಂಡು ಅದನ್ನು ಬೇರೆಯವರು ಉಪಯೋಗ ಮಾಡುತ್ತಿರುವುದೂ ಸಹ ನಿಜ. ಇದು ನಮ್ಮ ಇಲಾಖೆಯವರ ಸಹಭಾಗಿತ್ವದಿಂದ ಎಷ್ಟು ಆಗುತ್ತಿದೆ ಅಥವಾ ಇದರಿಂದ ನಮ್ಮ ಇಲಾಖೆಯ ಅಧಿಕಾರಿಗಳಿಗೆ ಎಷ್ಟು ತೊಂದರೆಯಾಗಿದೆ, ಇವೆರಡರ ಮಧ್ಯೆ ನಾನು ವಿಂಗಡಣೆ ಮಾಡುವುದು ಕಷ್ಟ. ಏಕೆಂದರೆ, ಎಷ್ಟೋ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳು, ನಿನಗ್ಯಾಕಪ್ಪಾ ಇದು ಬೇಕು, ನಿನಗೆ ಜಮೀನು ಇರುವುದೇ ಒಂದು ಎಕರೆ, ನಿನಗೆ tiller ಏಕೆ ಬೇಕು, tractor ಏಕೆ ಬೇಕು ಎಂದು ಕೇಳಿದರೆ, ಅವರ ಮೇಲೇ ದೂರುಗಳನ್ನು ಕೊಟ್ಟಿದ್ದಾರೆ. ಆಮೇಲೆ ತಮಟೆ ಚಳುವಳಿ ಮಾಡುತ್ತಾರೆ. ಚಳುವಳಿ ಮಾಡಿ ತೆಗೆದುಕೊಳ್ಳುತ್ತಾರೆ. ತೆಗೆದುಕೊಂಡ ಮೇಲೆ ಅದು ಊರಿನಲ್ಲಿರುವ ಯಾರೋ ದೊಡ್ಡವರ ಮನೆ, ಗೌಡರ ಮನೆಗೆ ಸೇರಿಕೊಳ್ಳುತ್ತದೆ. ಸೇರಿಕೊಂಡ ಮೇಲೆ ಅದೇ ಕೆಲವು ಜನ ಬಂದು, ಇವರು ದುರುಪಯೋಗ ಮಾಡಿದ್ದಾರೆ ಎಂದು ನಮ್ಮ ಅಧಿಕಾರಿಗಳ ಮೇಲೆ ದೂರು ಕೊಡುತ್ತಾರೆ. ನಿಜ ತಾವು ಹೇಳುತ್ತಿರುವುದು. ಪರಿಶಿಷ್ಟ ವರ್ಗದವರಿಗೆ ಅನುಕೂಲವಾಗಲಿ ಎಂದು ಕೊಡುತ್ತಿರುವ ಇದು ದುರದೃಷ್ಟವಶಾತ್ ಈ ರೀತಿಯಲ್ಲಿ ದುರುಪಯೋಗವಾಗುತ್ತಿದೆ. ಇದಕ್ಕೆ ಧೀರ್ಘಾವಧಿ ಕ್ರಮ ಏನು ಮಾಡುತ್ತಿದ್ದೇವೆ ಎಂದರೆ ನಾವು ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಮಾಡುತ್ತಿದ್ದೇವೆ. ಅಲ್ಲಿ ಆ ಹೋಬಳಿಗೆ ಬೇಕಾದಂಥ ಎಲ್ಲ ಯಂತ್ರೋಪಕರಣಗಳನ್ನು ಇಟ್ಟು, ರೈತರು ಅಲ್ಲಿ ಅವುಗಳನ್ನು ಬಾಡಿಗೆಗೆ ತೆಗೆದುಕೊಳ್ಳುವ ರೀತಿ ಮಾಡುತ್ತಿದ್ದೇವೆ. ಈಗಾಗಲೇ 314 ಕೇಂದ್ರಗಳನ್ನು ಮಾಡಿದ್ದೇವೆ,

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಈ ವರ್ಷದ ಆಯವ್ಯಯದಲ್ಲಿ ಇನ್ನೂ 250 ಕೇಂದ್ರಗಳನ್ನು ಮಾಡುವುದಕ್ಕೆ 127 ಕೋಟಿ ರೂಪಾಯಿಗಳನ್ನು ಪ್ರಸ್ತಾಪಿಸಿದ್ದು, ತಾವು ಇದಕ್ಕೆ ಅನುಮೋದನೆ ಕೊಟ್ಟರೆ, ಅದರಲ್ಲಿ 250 ಕೇಂದ್ರಗಳನ್ನೂ ಮಾಡುತ್ತೇವೆ ಮತ್ತು ಇನ್ನೊಂದೆರಡು ವರ್ಷಗಳಲ್ಲಿ ಎಲ್ಲ ಹೋಬಳಿಗಳಲ್ಲೂ ಮಾಡಿದರೆ, ಈ ರೀತಿ ನೇರವಾಗಿ ಯಂತ್ರೋಪಕರಣಗಳನ್ನು ಕೊಡುವುದರ ಬದಲಿಗೆ ಬಹಳ ಕಡಿಮೆ ದರದಲ್ಲಿ ಬಾಡಿಗೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. ನಾವು ಪರ್ಸಂಟೇಜ್‌ನನ್ನೇದಾರೂ ಕಡಿಮೆ ಮಾಡಿದರೆ ಇದು ಅನ್ಯಾಯ ಎಂದು ನಮ್ಮ ಮೇಲೆ ಆರೋಪ ಬರುತ್ತದೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಒಂದು ಸಲಹೆ, ಇದನ್ನು ದುರುಪಯೋಗ ಮಾಡಿದಂಥ ಫಲಾನುಭವಿ ಯಾರಿದ್ದಾನೆ, ಅವನಿಗೆ ಶಿಕ್ಷೆ ಕೊಡುವ ರೀತಿ ಮಾಡಬೇಕು. ಇಲ್ಲದಿದ್ದರೆ ಅವನಿಗೆ ಜಾಗೃತಿಯೂ ಮೂಡುವುದಿಲ್ಲ, ದುರುಪಯೋಗ ಮಾಡುತ್ತಾನೆ, ಅವನಿಗೆ ಶಿಕ್ಷೆಯಾಗಲಿ.

ಶ್ರೀ ಕೃಷ್ಣಬೈರೇಗೌಡ: ನಾನು ಅಧಿಕಾರಿಗಳಿಗೆ ಅದನ್ನೇ ಹೇಳಿದ್ದೇನೆ, ಯಾರು ದುರುಪಯೋಗ ಮಾಡಿದ್ದಾರೆ, ಮುಲಾಜಿಲ್ಲದೇ ಅವರ ಮೇಲೆ ಕೇಸ್ ಮಾಡೋಣ ಎಂದು ಹೇಳಿದ್ದೇನೆ. ಇನ್ನು Poly House ಬಗ್ಗೆ ಪ್ರಸ್ತಾಪ ಮಾಡಿದರು. ಒಟ್ಟು 2,400 Poly House, shade netಗಳನ್ನು ಕೃಷಿ ಭಾಗ್ಯ ಯೋಜನೆಯೊಳಗೆ ಮಾಡಿದ್ದಾರೆ. ಅದರಲ್ಲಿ ಏನಾಗಿದೆ ಎಂದರೆ, National Horticulture Mission rate 2011ರಲ್ಲಿ ಆಗಿದ್ದುದು, ಅದರ ಆಧಾರದ ಮೇಲೆ ನಾವು subsidy ನಿಗದಿ ಮಾಡಿದ್ದೆವು. ಮುಂದಿನ ದಿನಗಳಲ್ಲಿ ಅದರ actual market rate ಕಡಿಮೆಯಾಗಿತ್ತು. ಅದನ್ನು ಯಾರೂ ಅಧಿಕಾರಿಗಳು ಗಮನಿಸಿಲ್ಲ, higher rate ನಲ್ಲೇ SC/ST ಯವರಿಗೆ 90% subsidy ಕೊಡುತ್ತಿದ್ದೆವು. ಈ ಮಧ್ಯದಲ್ಲಿ ದುಡ್ಡು ಉಳಿತಾಯವಾಗುವಂಥ ಅವಕಾಶಗಳಿತ್ತು. ಅದನ್ನು ಗಮನಿಸಿ ನಾವು ಏನು ಮಾಡಿದ್ದೇವೆ ಎಂದರೆ ಆ rate revise ಮಾಡಿ market rateಗೆ ಹತ್ತಿರ ಇರುವ ರೀತಿ ಈಗಾಗಲೇ ನಾವು ಮಾಡಿದ್ದೇವೆ. Market rate ಎಷ್ಟು ತಗಲುತ್ತಿದೆ, ಆ ರೇಟಿಗೆ ನಮ್ಮ estimate rate ಅನ್ನು ಇಳಿಸಿದ್ದೇವೆ. ಮೊದಲು ಜಾಸ್ತಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಇದ್ದುದನ್ನು ಕಡಿಮೆ ಮಾಡಿದ್ದೇವೆ. ಇದನ್ನು ಮಾಡುವುದರೊಳಗೆ ಕೆಲವರು ದುರುಪಯೋಗ ಮಾಡಿಕೊಂಡಿದ್ದಾರೆ. ಅದರಲ್ಲಿ ರೈತರೂ ಸೇರಿದ್ದಾರೆ. ಉಳಿತಾಯವಾಗಿದ್ದನ್ನು ಎಲ್ಲರೂ ಹಂಚಿಕೆ ಮಾಡಿಕೊಂಡಿದ್ದಾರೆ. 100-200 ಪ್ರಕರಣ ಈ ರೀತಿ ಆಗಿರಬಹುದು. ಆದರೆ ಬಹುತೇಕ ರೈತರು ಇದರ ಸದುಪಯೋಗವನ್ನು ಸಹ ಮಾಡಿದ್ದಾರೆ. ಒಂದು ಸ್ವಲ್ಪ ಭಾಗ ದುರುಪಯೋಗವಾಗಿದೆ, ಇಲಾಖೆಯಿಂದ ಅದನ್ನು ತನಿಖೆ ಮಾಡಿಸುತ್ತಿದ್ದೇವೆ, ವಿಚಕ್ಷಣಾ ದಳದಿಂದ ತನಿಖೆ ಮಾಡಿಸುತ್ತಿದ್ದೇವೆ. ಎಲ್ಲಿ ಈ ರೀತಿ ದುರುಪಯೋಗವಾಗಿದೆಯೋ ಅಲ್ಲಿ ಯಾವುದೇ ಮುಲಾಜು ಇಲ್ಲದೇ ಅವರ ಮೇಲೆ ಕೇಸು ಹಾಕುತ್ತೇವೆ. ಅದಕ್ಕೆ ಏನು ಬೇಕೋ ಮಾಡೋಣ. ಈ ರೀತಿಯವು ಒಂದು ಸ್ವಲ್ಪ ಪ್ರಕರಣಗಳಾಗಿವೆ. ಹಾಗೆಂದ ಮಾತ್ರಕ್ಕೆ ಎಲ್ಲ ಕಡೆ ಆಗಿದೆ ಎಂದು ನಾವು ಹೇಳಲು ಆಗುವುದಿಲ್ಲ.

ಶ್ರೀ ಸಿ.ಎನ್.ಬಾಲಕೃಷ್ಣ : ತಾವು ಇದರ ಬಗ್ಗೆ ಗಮನ ಹರಿಸಿದ್ದೀರಿ. ಎಲ್ಲೆಲ್ಲಿ ಲೋಪವಾಗಿದೆ, ಅವರ ಮೇಲೆ ಉಗ್ರವಾದ ಕ್ರಮವಾಗಬೇಕು.

ಅಧ್ಯಕ್ಷರು: ಕ್ರಮ ಮಾಡುತ್ತೇವೆ ಎಂದು ಹೇಳಿದ್ದಾರಲ್ಲ.

ಶ್ರೀ ಕೃಷ್ಣಬೈರೇಗೌಡ: ಇನ್ನು, input subsidy ಕೆಲವರಿಗೆ ಬಂದಿಲ್ಲ ಎಂದು ಹೇಳಿದರು. ಸ್ವಲ್ಪ ಅಂದರೆ ಕೇವಲ 50-70 ಸಾವಿರ ಬಾಕಿ ಇದೆ.

ಶ್ರೀ ಕೆ.ಎಂ.ಶಿವಲಿಂಗೆಗೌಡ: ಬಾಕಿ ಇರುವುದು ಖಾತೆ ಇಲ್ಲದೇ ಇರುವುದು.

ಶ್ರೀ ಸಿ.ಎನ್.ಬಾಲಕೃಷ್ಣ : ಖಾತೆ, ಅಕೌಂಟ್ ನಂಬರ್ ಎಲ್ಲವನ್ನೂ ಕೊಟ್ಟಿದ್ದರೂ ಕೂಡ ಕೆಲವರಿಗೆ ಬಂದಿಲ್ಲ. ದಯವಿಟ್ಟು ಪೂರ್ಣ ಪ್ರಮಾಣದಲ್ಲಿ ಅವರ ಅಕೌಂಟಿಗೆ ಹೋಗುವ ರೀತಿ ಮಾಡಿ.

ಅಧ್ಯಕ್ಷರು: ಆಯಿತು, ಅಕೌಂಟಿಗೆ ಹೋಗುವ ರೀತಿ ಮಾಡುತ್ತಾರೆ. ಅದನ್ನು ಹೇಳಿದ್ದಾರೆ. ಕೃಷ್ಣಬೈರೇಗೌಡರೇ conclude ಮಾಡಿಬಿಡಿ. Sufficient reply ಆಗಿದೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಕೃಷ್ಣಬೈರೇಗೌಡ: ಯಾರು details ಕೊಟ್ಟಿದ್ದಾರೆ, ಅವರದಂತೂ payment ಆಗುತ್ತದೆ, ಅದರಲ್ಲೇನೂ ತೊಂದರೆಯಿಲ್ಲ. 95% payment ಆಗಿದೆ, 5% ಬಾಕಿ ಇರಬಹುದು. ಅದನ್ನೂ ಸಹ ಬೇಗ payment ಮಾಡಿಸುತ್ತೇವೆ, ಕಂದಾಯ ಇಲಾಖೆಯಿಂದ ಅದು ಆಗುತ್ತದೆ. ಹಿರಿಯರಾದ ಯಾವಗಲ್‌ರವರು ಮಳೆ ಬರಿಸುವ ಕಾರ್ಯಕ್ರಮವೇನಾದರೂ ಇದೆಯೇ ಎಂದು ಕೇಳಿದರು. ಸಾಮಾನ್ಯವಾಗಿ ಹಿಂದೆಯೆಲ್ಲ ಏನಾಗುತ್ತಿತ್ತು ಎಂದರೆ, ಬರಗಾಲ ಬಂದ ಮೇಲೆ ಮೋಡ ಬಿತ್ತನೆ ಕಾರ್ಯಕ್ರಮಕ್ಕೆ ವಿಚಾರ ಮಾಡುತ್ತಿದ್ದೆವು. ಆದ್ದರಿಂದ ಕಳೆದ ಎರಡು ವರ್ಷಗಳು ಬರಗಾಲ ಬಂದಿದ್ದರಿಂದ, ನಾವು ಆಯವ್ಯಯದಲ್ಲಿಯೇ ನೀರಾವರಿ ಇಲಾಖೆಯಿಂದ 30 ಕೋಟಿ ರೂಪಾಯಿಗಳನ್ನು ಮೋಡ ಬಿತ್ತನೆಗೆ, cloud seedingಗೆ ಹಣವನ್ನು ಪ್ರಸ್ತಾಪ ಮಾಡಿಕೊಂಡಿದ್ದು, ಅದಕ್ಕೆ ಈಗಾಗಲೇ ಟೆಂಡರ್ ಸಹ ಕರೆಯಲ್ಪಟ್ಟಿದೆ. ಬಹುಶ: tender open ಆಗಿರಬಹುದು, ಆಗಿಲ್ಲವೆಂದರೆ ಇನ್ನೊಂದೆರಡು ದಿನಗಳಲ್ಲೇ ಅದನ್ನು open ಮಾಡಿಸಿ, award ಮಾಡುತ್ತೇವೆ. ಇದಕ್ಕೆ 30 ಕೋಟಿ ರೂಪಾಯಿಗಳನ್ನು advance ಎಂದು ಇಟ್ಟಿದ್ದೇವೆ. ಎಲ್ಲ ಅನಾಹುತ ಆದಮೇಲೆ ಮಾಡುವುದು ಬೇಡ ಎಂದು ಹೇಳಿ ಈ ವರ್ಷ ನಾವು advance ಆಗಿಯೇ provision ಮಾಡಿಕೊಂಡಿದ್ದೇವೆ. ಅದರ work order ಇನ್ನೂ issue ಆಗಿಲ್ಲವೆಂದರೆ ಕೂಡಲೇ work order issue ಮಾಡಿಸುವಂಥ ಕೆಲಸವನ್ನೂ ಸಹ ನಾವು ಸರ್ಕಾರದಿಂದ ಮಾಡುತ್ತೇವೆ. 25 ಹೆಚ್.ಪಿ. tractor ಬಗ್ಗೆ ಪ್ರಸ್ತಾಪವಾಯಿತು. ಅದು ಏನಾಗಿದೆ ಎಂದರೆ, tractorಗಳು ಸಾಕಷ್ಟು ಇವೆ, tractor ಬದಲಿಗೆ ಯಂತ್ರಗಳಿಗೆ ಹೆಚ್ಚಿನ ಒತ್ತು ಕೊಡಿ, tractorಗಳನ್ನು ಕೊಡುವುದಕ್ಕೆ ಹೋಗಬೇಡಿ ಎಂದು ಕೇಂದ್ರ ಸರ್ಕಾರ 2011ರಲ್ಲೇ ಒಂದು ಸಲಹೆಯನ್ನು ಎಲ್ಲ ರಾಜ್ಯಗಳಿಗೆ ಕೊಟ್ಟು, ಆಗ tractor ಗಳಿಗೆ subsidy ಕೊಡುವುದು ನಿಂತು ಹೋಯಿತು.

(ಮುಂದುವರೆದಿದೆ)

ವಿಸ. 19.06.2017/7.40/51/ಎನ್.ಸಿ.ಕೆ/ವಿ.ಆರ್

19-06-2017

ಶ್ರೀ ಕೃಷ್ಣ ಬೈರೇಗೌಡ(ಮುಂದು)

ಕೇಂದ್ರ ಸರ್ಕಾರ 2011 ರಲ್ಲಿ ಒಂದು ಸಲಹೆಯನ್ನು ಎಲ್ಲ ರಾಜ್ಯಗಳಿಗೆ ಕೊಟ್ಟು ಆಗ tractors ಗೆ ಸಬ್ಸಿಡಿ ಕೊಡುವುದು ನಿಂತುಹೋಯಿತು. ನಮ್ಮ ಸರ್ಕಾರ ಬಂದ ಮೇಲೆ ಹೋಗಲಿ ದೊಡ್ಡ tractor ಇಲ್ಲದೇಹೋದರೆ ಸಣ್ಣ tractor ಗಾದರೂ ಕೊಡೋಣ ಎಂದು actually ನಾವು ಅದನ್ನು re-introduce ಮಾಡಿರುವುದು. ಕೇಂದ್ರಸರ್ಕಾರದ ಸಲಹೆ ಪ್ರಕಾರ tractors ಗಳಿಗೆ ಸಬ್ಸಿಡಿ ಕೊಡುವುದು ಬೇಡ ಎನ್ನುವುದು ಅವರ ಅಭಿಪ್ರಾಯವಾಗಿದೆ. ನಾವು mini tractors ಅನ್ನು 25 HPಗೆ ಕೊಡುತ್ತಿದ್ದೇವೆ. General ನವರಿಗೂ ಕೊಡುತ್ತೇವೆ. ಕೇವಲ SC/ST ಜನರಿಗೆ ಮಾತ್ರ ಕೊಡುವುದಿಲ್ಲ. SC/ST ಜನರಿಗೆ 2.00 ಲಕ್ಷ ರೂಪಾಯಿಗಳು ಕೊಡುತ್ತೇವೆ. General ನವರಿಗೆ ಸ್ವಲ್ಪ ಕಡಿಮೆ rate ಇದೆ. ಅವರಿಗೂ ಸಹ ಅದರಲ್ಲಿ ಕೊಡುತ್ತಿದ್ದೇವೆ. ಆಮೇಲೆ ಅವರು ತೆಂಗಿನ ವಿಷಯ ಹೇಳಿದರು. ಅವರು ಕಳೆದ ವಾರ ಪ್ರಸ್ತಾಪ ಮಾಡಿದ ಮೇಲೆ ಮಾನ್ಯ ಕಂದಾಯ ಸಚಿವರು Cabinet Sub-Committee meeting ಮಾಡಿ ಆ ಮರುದಿನವೇ meeting ಮಾಡಿ immediately ತೋಟಗಾರಿಕೆ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಎಷ್ಟು ಮರಗಳು ಈ ರೀತಿ ನಷ್ಟವಾಗಿವೆ ಅದನ್ನು ಸರ್ವೆ ಮಾಡಿ ಒಂದು ವಾರದೊಳಗೆ ಒಂದು report ಕೊಡಿ ಎಂದು ಹೇಳಿದ್ದೇವೆ. ಅದೇರೀತಿ ಸರ್ವೆ ನಡೆದಿದೆ. ಬಹುತೇಕ ಕೆಲವು ಕಡೆ ಮುಗಿದಿವೆ. ಕೆಲವು ಕಡೆ ಆಗುತ್ತಿವೆ. ಈ ವಾರದಲ್ಲಿ ಆ ಸರ್ವೆ ರಿಪೋರ್ಟ್ ತೆಗೆದುಕೊಂಡು ಕ್ಯಾಬಿನೆಟ್‌ಗೆ ಹೋಗಬೇಕಾಗುತ್ತದೆ. ನಾವು ಇಲ್ಲಿ ಏಕಾಏಕಿ ಏನೂ ಹೇಳುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದಿಂದ ಏನಾದರೂ ಬರುತ್ತದೆಯೇ ಎನ್ನುವುದನ್ನು ನಾವು ನೋಡುತ್ತೇವೆ. ಅದಲ್ಲದೆ ರಾಜ್ಯದಿಂದ ನಾವೇನು ಮಾಡಲಿಕ್ಕಾಗುತ್ತದೆ ಎನ್ನುವುದು ಇಷ್ಟು ವಿಚಾರ. Cabinet Sub-Committee ಯಲ್ಲಿ ಚರ್ಚೆ ಮಾಡಿ ಕ್ಯಾಬಿನೆಟ್‌ಗೆ ತೆಗೆದುಕೊಂಡು ಹೋಗಿ ಒಂದು ತೀರ್ಮಾನ ಮಾಡುವಂತೆ ನೀವು ಹೇಳಿದ ಮೇಲೆ ಖಂಡಿತ ಸರ್ಕಾರ ಒಂದೇ ದಿನದಲ್ಲಿ Cabinet Sub-Committee meeting ಮಾಡಿ survey ಮಾಡಿ report ಕೊಡಿ ಎಂದು instructions ಕೊಟ್ಟಿದ್ದೇವೆ. ಒಂದು sugarcane harvester ಬಗ್ಗೆ ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರು ಹೇಳಿದರು.

19-06-2017

Sugarcane harvester ಬಗ್ಗೆ ನಾವು ಸಹ Transport Department ಗೆ ಇದರ ಮೇಲೆ road tax ಮನ್ನಾ ಮಾಡಿ ಎಂದು ನಾವು recommend ಮಾಡಿದ್ದೇವೆ. ಆದರೆ ಗೊತ್ತಲ್ಲ, ಅವರದೇ ಇಲಾಖೆಯಲ್ಲಿ ಕೆಲವು ವಿಚಾರಗಳು ಇರುತ್ತವೆ. ತಮಗೂ ಗೊತ್ತಿದೆ. ನಮ್ಮ ರಾಜ್ಯದಲ್ಲಿ ಮೊದಲಬಾರಿಗೆ sugarcane harvesterಗೆ ಸಬ್ಸಿಡಿ ಕೊಟ್ಟು ಅದನ್ನು ರೈತರಿಗೆ ಬಾಡಿಗೆ ರೂಪದಲ್ಲಿ ಸಿಗುವಂತೆ ಮಾಡುತ್ತಿದ್ದೇವೆ. ಇಲ್ಲದಿದ್ದರೆ ಮಹಾರಾಷ್ಟ್ರದಿಂದ ಬರುವ labourers ವರ್ಷ, ವರ್ಷದಿಂದ ತೊಂದರೆಯಾಗುತ್ತಿರುವುದರಿಂದ ಕಳೆದ ವರ್ಷ 13 sugarcane harvester ಗಳನ್ನು ನಾವು ಸರ್ಕಾರದಿಂದ ಕೊಟ್ಟಿದ್ದೇವೆ. ಅದಕ್ಕೆ ನಾವು 40% ಸಬ್ಸಿಡಿ ಕೊಟ್ಟು ಅವರು 60% share ನಲ್ಲಿ ಮಾಡಿದೆ. ಈ ವರ್ಷವೂ ಹೆಚ್ಚು ಕೊಡುತ್ತಿದ್ದೇವೆ. ನಮ್ಮದು ಮನ್ನಾ ಮಾಡಿ ಎನ್ನುವ ಅಭಿಪ್ರಾಯ ನಿಮ್ಮ ಜೊತೆಗೆ ಇದೆ. ನೋಡೋಣ ಅದರ ಬಗ್ಗೆ Transport Department ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ನಾವು ಸಹ ರೈತರ ಪರವಾಗಿ ಶಿಫಾರಸ್ಸು ಮಾಡಿದ್ದೇವೆ. ಇಷ್ಟು ಮಾತನ್ನು ಹೇಳಿ ಮತ್ತೊಮ್ಮೆ ತಮ್ಮೆಲ್ಲರಲ್ಲಿ ಅನುಮತಿ ಕೊಡಿ ಎಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು: ಇಂಧನ ಸಚಿವರು ಉತ್ತರ ಕೊಡಿ.

ಶ್ರೀ ಜಗದೀಶ್ ಶೆಟ್ಟರ್: ಬೆಳಿಗ್ಗೆ ಪ್ರಸ್ತಾಪ ಮಾಡಿರುವ ವಿಷಯಕ್ಕೆ Home minister ಬಂದು ಮಧ್ಯಾಹ್ನ ಉತ್ತರ ಕೊಡುತ್ತೇನೆಂದು ಹೇಳಿದ್ದರು. Home Minister ಈ ಕಡೆ ಬರುವುದಕ್ಕೆ ತಯಾರಿಲ್ಲ. ಉತ್ತರ ಕೊಡಲಿಕ್ಕೂ ತಯಾರಿಲ್ಲ.

ಅಧ್ಯಕ್ಷರು: ನಾಳೆ ಉತ್ತರ ಕೊಡಿಸೋಣ.

ಶ್ರೀ ಜಗದೀಶ್ ಶೆಟ್ಟರ್: ಬೆಳಿಗ್ಗೆ ಶೂನ್ಯವೇಳೆಯಲ್ಲಿ ರಮಾನಾಥ ರೈರವರ ವಿಷಯ ಮಂಡನೆ ಮಾಡಿದ್ದೇನೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): Reply ಕೊಡುತ್ತೇವೆಂದು ಹೇಳಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಇಲ್ಲ, ಸ್ಪೀಕರ್‌ರವರು ಹೇಳಿದರು. Home Minister ರವರಿಂದ ಮಧ್ಯಾಹ್ನ ಉತ್ತರ ಕೊಡಿಸುವಂತೆ ಕೂಡ request ಮಾಡಿದೆವು.

19-06-2017

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ನಾಳೆ ಉತ್ತರ ಕೊಡಿಸೋಣ ಬಿಡಿ.

ಅಧ್ಯಕ್ಷರು: ಆಯಿತು, ನಾಳೆ ಉತ್ತರ ಕೊಡಿಸೋಣ. ಶಿವಕುಮಾರ್ ಮಾತನಾಡಿ.

ಶ್ರೀ ಎಂ.ಬಿ.ಪಾಟೀಲ್ (ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ನೀರಿನಿಂದ ವಿದ್ಯುಚ್ಛಕ್ತಿ ಬರುತ್ತದೆ. ನೀವು ನೀರಿಗೆ ಮೊದಲು ಅವಕಾಶ ಕೊಡಬೇಕು. ನೀರಿನಿಂದ ಕೃಷಿ ಬರುತ್ತದೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಪಾಟೀಲರೇ, ವಿದ್ಯುತ್ ಚಾಲನೆ ಆದಮೇಲೆ ನೀರು ಬರುತ್ತದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ನೀರಿನಿಂದ ವಿದ್ಯುತ್ ಬರುತ್ತದೆ. ನೀವು ಇಬ್ಬರು ಒಟ್ಟಿಗೆ ಸೇರಿದರೆ ಕರೆಂಟ್ ಹೊಡೆಯುತ್ತದೆ.

ಶ್ರೀ ಕೆ.ಎನ್.ರಾಜಣ್ಣ: ಸಚಿವರೆ, ರಾತ್ರಿ 7.45 ಗಂಟೆ ಆಗಿದೆ. ನೀವೇನಾದರೂ overtime ಇದ್ದಿದ್ದರೆ ಮಾಡಿಸಬಹುದಾಗಿತ್ತು. ನಮಗೆ ಇವತ್ತೇನೆಂದರೆ ಅಧ್ಯಕ್ಷರು ಮಾತ್ರ ಬಿಗಿಯಾಗಿ ಪೀಠದಲ್ಲಿ ಕುಳಿತುಬಿಟ್ಟಿದ್ದಾರೆ. ಹೋಗುತ್ತಿಲ್ಲ, ಬರುತ್ತಿಲ್ಲ. ನನಗೆ ಆಶ್ಚರ್ಯವಾಗಿದೆ. ದಯಮಾಡಿ adjourn ಮಾಡಿ ಬೆಳಿಗ್ಗೆ ತೆಗೆದುಕೊಂಡರೆ ಬಹಳ ಸಂತೋಷ. ಏನೋ ನೋಡಿ ದಯೆ ತೋರಿಸಿ.

ಅಧ್ಯಕ್ಷರು: ರಾಜಣ್ಣನವರೇ, ಇಂಧನ ಇಲಾಖೆಯೊಂದು ಮುಗಿಸೋಣ. ಆಮೇಲೆ adjourn ಮಾಡೋಣ.

ಶ್ರೀ ಪಿ.ಎಂ.ಅಶೋಕ್(ಮಾನ್ಯ ಸರ್ಕಾರಿ ಮುಖ್ಯ ಸಚೇತಕರು): ಸರ್, ಇವತ್ತು ನೀರಾವರಿ ಇಲಾಖೆಯ ಉತ್ತರ ಕೂಡ ಮುಗಿಸಬೇಕು.

ಶ್ರೀ ಸಿದ್ದರಾಮಯ್ಯ(ಮಾನ್ಯ ಮುಖ್ಯಮಂತ್ರಿಗಳು): ಇವತ್ತು ಎಷ್ಟು ಇಲಾಖೆಗಳು ಆಗುತ್ತದೋ ಅಷ್ಟು ಮಾಡಿ. ಇನ್ನು Primary Education, Irrigation ಆಮೇಲೆ Rural Development, Energy Department ಇದೆ. ಅದಕ್ಕೆ ಬಹಳ ಸಂಕ್ಷಿಪ್ತವಾಗಿ ಉತ್ತರ ಕೊಡಿ. ಕಡಿಮೆ ಅವಧಿಯಲ್ಲಿ ಎಷ್ಟು ಉತ್ತರ ಕೊಡುವುದಕ್ಕಾಗುತ್ತದೋ ಅಷ್ಟು effective ಆಗಿ ಉತ್ತರವನ್ನು ಕೊಟ್ಟುಬಿಡಿ. ಆಮೇಲೆ ಬಹಳಷ್ಟು ಬಿಲ್‌ಗಳು ಇವೆ. ನಾಳೆ ಎಲ್ಲ ಬೆಳಿಗ್ಗೆ ಎಲ್ಲರೂ ಉತ್ತರ

ಕೊಡಲಿ. ನಂತರ ಬಿಲ್‌ಗಳು ಮುಗಿಸಿಬಿಡಿ. ನಾಡಿದ್ದು ಬೆಳಿಗ್ಗೆ ವಿಧಾನಸಭೆಯಲ್ಲಿ ನಾನು ಉತ್ತರ ಕೊಡುತ್ತೇನೆ. ನನಗೆ ಉತ್ತರ ಕೊಡಲಿಕ್ಕೆ ಸಮಯವೇ ಇಲ್ಲವಲ್ಲ. ನಾಡಿದ್ದು ಬೆಳಿಗ್ಗೆ ವಿಧಾನಸಭೆಯಲ್ಲಿ ಉತ್ತರ ಕೊಡುತ್ತೇನೆ. ಮಧ್ಯಾಹ್ನದ ಮೇಲೆ ವಿಧಾನಪರಿಷತ್‌ನಲ್ಲಿ ಉತ್ತರ ಕೊಡುತ್ತೇನೆ. ನಾಳೆ ಬಿಲ್‌ಗಳು ಮತ್ತು ಉತ್ತರ ಕೊಡುವುದನ್ನು ಮುಗಿಸಿಬಿಡಿ, ಬೇರೆ ಇನ್ಯಾವುದಕ್ಕೂ ದಯಮಾಡಿ ಆಸ್ಪದ ಕೊಡಬೇಡಿ.

ಅಧ್ಯಕ್ಷರು: ಆಯಿತು. ಶಿವಕುಮಾರ್ ಉತ್ತರ ಕೊಡಿ.

ಶ್ರೀ ಕೆ.ಎನ್.ರಾಜಣ್ಣ: ಶಿವಕುಮಾರ್‌ರವರೇ, ಈ ಸಾರಿ ಬೇಸಿಗೆಯಲ್ಲಿ ಕರೆಂಟ್ ಎಲ್ಲಾ ಕಡೆ ಚೆನ್ನಾಗಿ ಕೊಟ್ಟಿದ್ದೀರಿ. ಕರೆಂಟ್ ಬಗ್ಗೆ ಯಾವುದೇ ತೊಂದರೆ ಆಗಿಲ್ಲ. ಅದರಿಂದ ನಿಮ್ಮ ಇಲಾಖೆ ಮೇಲೆ ಜಾಸ್ತಿ ಉತ್ತರ ಏನೂ ಬೇಡ. ಸಂಕ್ಷಿಪ್ತವಾಗಿ ಹೇಳಿ ಮುಗಿಸಿ 8.00 ಗಂಟೆಗಾದರೂ ಹೋಗೋಣ. ಅಲ್ಲ ಸರ್ 8.00 ಗಂಟೆಗಾದರೂ ಮುಗಿಸುವಂತೆ ಮಾಡಿ ಎಂದಷ್ಟೇ ಮನವಿ ಇನ್ನೇನಿಲ್ಲ.

ಡಾ:ಶಿವರಾಜ್ ಪಾಟೀಲ್ ಎಸ್.: ಭೂ ಸಂತ್ರಸ್ತರದ್ದು ಸ್ವಲ್ಪ ಮಾತನಾಡಿ ಸರ್. YTPS ನ ಭೂ ಸಂತ್ರಸ್ತರದ್ದು ಸ್ವಲ್ಪ ಮಾತನಾಡಿ.

(ಗೊಂದಲ)

ಶ್ರೀ ಪಿ.ಎಂ.ಅಶೋಕ್(ಮಾನ್ಯ ಸರ್ಕಾರಿ ಮುಖ್ಯ ಸಚೇತಕರು): ಬೇಡ,ಆಗುವುದಿಲ್ಲ, ಇಂಧನ ಮತ್ತು ನೀರಾವರಿ ಎರಡು ಇಲಾಖೆಗಳು ಉತ್ತರ ಇವತ್ತು ಮುಗಿಸಬೇಕು.

ಶ್ರೀ ಸಿದ್ದರಾಮಯ್ಯ(ಮಾನ್ಯ ಮುಖ್ಯಮಂತ್ರಿಗಳು): ನನ್ನ ಪ್ರಕಾರ ಇಂಧನ ಮತ್ತು Primary Education ಸಚಿವರು ಇಬ್ಬರು ಇವತ್ತು ಉತ್ತರ ಕೊಟ್ಟು ಮುಗಿಸಬೇಕು.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರ ಪೀಠದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಕೆ.ಕುಮಾರಸ್ವಾಮಿಯವರು ಉಪಸ್ಥಿತರಾದರು)

ಶ್ರೀ ಕೆ.ಎನ್.ರಾಜಣ್ಣ: 8.00 ಗಂಟೆ ಮೇಲೆ ಉತ್ತರ ಹೇಳುವುದಕ್ಕೂ mood ಇರುವುದಿಲ್ಲ. ಉತ್ತರ ಕೇಳುವುದಕ್ಕೂ mood ಇರುವುದಿಲ್ಲ. ಅದಕ್ಕೆ 8.00 ಗಂಟೆಗೆ ಮುಗಿಸಿದರೆ ನಮಗೂ ಕ್ಷೇಮ ನಿಮಗೂ ಕ್ಷೇಮ.

ಶ್ರೀ ಸಿದ್ದರಾಮಯ್ಯ: ನಿಮಗೆ ಆಮೇಲೆ mood ಶುರುವಾಗುತ್ತದೆ.

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

19-06-2017

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಬಂದಿದ್ದೇವೆ. ಎಲ್ಲ moodಗಳು unload ಆಗಿಬಿಟ್ಟಿವೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಪುಟ್ಟಣ್ಣಯ್ಯ, ಈಗ ನಿಮ್ಮ ಎಲ್ಲ moodಗಳು exhaust ಆಗಿಬಿಟ್ಟಿವೆ. ಈಗೇನು ಉಳಿದೇ ಇಲ್ಲ.

ಇಂಧನ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಸರ್ಕಾರದ ಉತ್ತರ

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ನಮ್ಮ ಹಳ್ಳಿಯಲ್ಲಿ ಒಂದು ಕಡೆ ಒಂದು ಮಾತು ಹೇಳುತ್ತಾರೆ. ` ಮುಂಗಾರು ಮಳೆಗೆ ಸಿಗಬೇಡ, ಕೊನೆ ಭಾಷಣಕಾರ ಆಗಬೇಡ` ಹಾಗೆ ಕೊನೆಗೆ ಉತ್ತರ ಹೇಳುವಾಗ ರಸ ಎಲ್ಲ ಹೋಗಿಬಿಟ್ಟಿದೆ. ಬಹಳ ಹಿಂಸೆ ಪಟ್ಟುಕೊಂಡು ಸದನದಲ್ಲಿ ಇಷ್ಟು ಜನ ಮಾನ್ಯ ಸದಸ್ಯರು ಕುಳಿತಿದ್ದಾರಲ್ಲಾ ಅವರೆಲ್ಲರಿಗೂ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಇಂಧನ ಇಲಾಖೆಯಲ್ಲಿ ಪ್ರತಿ ವರ್ಷ ಕೂಡ ನಮ್ಮ ಬಜೆಟ್ ಜಾಸ್ತಿ ಆಗುತ್ತಿದೆ. ಶ್ರೀ ಸಿದ್ದರಾಮಯ್ಯನವರು ರಾಜ್ಯದ ಮಾನ್ಯ ಮುಖ್ಯಮಂತ್ರಿ ಆದಮೇಲೆ ಮೊದಲನೆ ಬಾರಿಗೆ specific ಆಗಿ ಇಷ್ಟು ಹಣವನ್ನು ನಾನು ನಿಗದಿ ಮಾಡಿಡುತ್ತೇನೆ ಎಂದು ಹೇಳಿ ಹಣ ಇಟ್ಟುಕೊಂಡು ಬಂದಿದ್ದಾರೆ. ಮೊದಲೆಲ್ಲ ಸ್ವಲ್ಪ ಗ್ಯಾರಂಟಿ ಇರಲಿಲ್ಲ. ಎಷ್ಟು ಹಣ ಇರಬೇಕು ಮತ್ತೊಂದು ಎಂದು. ಎಷ್ಟು ರೈತರಿಗೆ ಕರೆಂಟ್ ಹೋಗಬೇಕು ಎನ್ನುವುದು. 2000-00 ಕೋಟಿ ರೂಪಾಯಿಗಳಿಂದ ಪ್ರಾರಂಭವಾಗಿದ್ದು 10 ವರ್ಷಗಳಿಂದೀಚೆಗೆ ಈಗ ಸುಮಾರು 14,000-00 ಕೋಟಿ ರೂಪಾಯಿಗಳಿಗೆ ನಿಂತಿದೆ. ಈಗ 12% ನಷ್ಟು ಹೆಚ್ಚಾಗಿದೆ. ಈ ಸಂದರ್ಭದಲ್ಲಿ ರಾಜ್ಯದ ಎಲ್ಲ ರೈತರು ಮತ್ತು ಗ್ರಾಹಕರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಅಭಿನಂದಿಸುತ್ತೇನೆ. ಪ್ರತಿಯೊಬ್ಬರೂ ಕೂಡ ವಿದ್ಯುತ್ ಮೇಲೆ ಅವಲಂಬಿಸಿದ್ದಾರೆ. ಇಡೀ ರಾಜ್ಯದ ಜನತೆ, ಎಲ್ಲಾ ಕಡೆ ವಿದ್ಯುತ್ ಇಲ್ಲವೆಂದರೆ ಏನೂ ಮಾಡಲಿಕ್ಕಾಗುವುದಿಲ್ಲ. ಆದರೆ ವಿದ್ಯುತ್ ಏನಾದರೂ supply fail ಆದರೆ ಜಪಾನ್ ಕಡೆ ಏನಾದರೂ ಹೆಚ್ಚು ಕಡಿಮೆ ಆಗಿದೆಯೇ ಎಂದು first fuse ನೋಡುತ್ತಾರಂತೆ. ಅಮೇರಿಕದಲ್ಲಿ ಏನಾದರೂ ವಿದ್ಯುತ್ fail ಆದರೆ power officeಗೆ ಫೋನ್ ಮಾಡುತ್ತಾರಂತೆ. ಆದರೆ

ನಮ್ಮಲ್ಲೇನಾದರೂ fail ಆಯಿತೆಂದರೆ ತಕ್ಷಣ ಅಕ್ಕಪಕ್ಕದ ಮನೆಯಲ್ಲಿ ನೋಡುತ್ತಾರೆ, ಇಲ್ಲವೇ ನೇರವಾಗಿ `ಅವನ್ಯಾವ ಮಂತ್ರಿನಯ್ಯ, ಈ ರೀತಿ current ಕೊಡುತ್ತಾನೆ` ಎಂದು ಆ ಇಂಧನ ಸಚಿವರನ್ನೇ ಬಯ್ಯುವುದಕ್ಕೆ ಶುರು ಮಾಡುತ್ತಾರೆ. ಅಷ್ಟು ಜನ ಜಾಗೃತರಾಗಿಬಿಟ್ಟಿದ್ದಾರೆ. ಕಳೆದ ಮೂರ್ನಾಲ್ಕು ವರ್ಷಗಳಿಂದ ದೊಡ್ಡ ಬರಗಾಲದಲ್ಲಿ ನಾವೆಲ್ಲ ತಗಲು ಹಾಕಿಕೊಂಡು ಬಿಟ್ಟಿದ್ದೇವೆ. ನಮ್ಮ ಕರ್ನಾಟಕ ರಾಜ್ಯದ ಚರಿತ್ರೆಯಲ್ಲಿ ಅತಿ ಹೆಚ್ಚು ಅಂದರೆ 139 ತಾಲ್ಲೂಕುಗಳು ಬರವೆಂದು ಘೋಷಣೆ ಆಗಿದೆ. 38% ನಮ್ಮ ಹಿರಿಯರೆಲ್ಲ hydelನಲ್ಲಿ ನೀವು power ಉತ್ಪಾದನೆ ಮಾಡಬೇಕೆಂದು ಹೇಳಿ ನಮಗೊಂದು ದೊಡ್ಡ ಶಕ್ತಿ ಕೊಟ್ಟಿದ್ದಾರೆ. ಅಂಥದ್ದು ನೀರಿಲ್ಲದೆ ನಾವೇನು ಮಾಡಲಿಕ್ಕಾಗುತ್ತಿಲ್ಲ. ಆದರೂ ಕೂಡ ದೊಡ್ಡ ಪ್ರಯತ್ನವನ್ನು ಮಾಡಿದ್ದೇವೆ. ನಮ್ಮ ಸ್ನೇಹಿತರು ಮಾತನಾಡುವಾಗ ಆ ಬಗ್ಗೆ ಹೇಳಿದ್ದಾರೆ, ಅವರನ್ನೆಲ್ಲ ನಾನು ಅಭಿನಂದಿಸುತ್ತೇನೆ. ಇಂಥ ಬರಗಾಲದಲ್ಲಿಯೂ ಮಕ್ಕಳು ವಿದ್ಯಾಭ್ಯಾಸಕ್ಕೆ ಮತ್ತು ರೈತರಿಗೆ 6-7 ಗಂಟೆಗಳ ಕಾಲ ವಿದ್ಯುತ್ ಕೊಟ್ಟಿದ್ದಾರೆಂದು ಕೆಲವರೆಲ್ಲ ಹೇಳಿ ಸರ್ಕಾರಕ್ಕೆ ಹಾಗೂ ನನಗೆ ಅಭಿನಂದಿಸಿದ್ದಾರೆ.

(ಮುಂದು)

19.06.2017 /7.50 (52) / JB-VR

ಶ್ರೀ ಡಿ.ಕೆ.ಶಿವಕುಮಾರ್ (ಮುಂದು . .): ಬೇರೆ ಕಡೆ ಕೂಡ ಅಂದರೆ ಮಾದ್ಯಮಗಳಲ್ಲಿ ಹಾಗೂ ಬೇರೆ ಬೇರೆ ಕಡೆಗಳಲ್ಲಿ ಯಾರೂ ಕೂಡ ಟೀಕೆ ಮಾಡಿಲ್ಲ. ನನ್ನ ವಿರೋಧ ಪಕ್ಷದ ಸ್ನೇಹಿತರಿಗೆ ಮತ್ತು ಎಲ್ಲಾ ರೈತರಿಗೆ, ಸಾರ್ವಜನಿಕರಿಗೇ ಕೂಡ ನಾನು ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ. ನಾನು ನನ್ನ ಪ್ರಯತ್ನವನ್ನು ಇಡೀ ಸರ್ಕಾರ 6 ಗಂಟೆ ಕರೆಂಟ್ ಕೊಡಬೇಕೆಂದು ಇತ್ತು, 7 ಗಂಟೆಯವರೆಗೂ ಸಹ ವಿಸ್ತರಿಸಿದ್ದೇವೆ. ಕೆಲವು ಕಡೆಗಳಲ್ಲಿ ಇನ್ನೂ ಬೆಂಗಳೂರಿನ ಸುತ್ತಮುತ್ತಲೂ ಅಥವಾ ಟೌನ್ ಸುತ್ತಮುತ್ತಲೂ ಟೌನ್ ಕರೆಂಟ್ ಕೊಡಬೇಕೆಂದು ಕೆಲವು ಕಡೆ 12-13 ಗಂಟೆಯವರೆಗೆ ಸಹಿತ ಹೋಗುತ್ತಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡ 20 ಗಂಟೆಗಳ ಕಾಲ ಕರೆಂಟ್ ಕೂಡ ರೈತರಿಗೆ ಸಿಗುತ್ತಿದೆ. ಅದಕ್ಕೆ technical reasons ಇದೆ. ಆದರೂ ಕೂಡ ನಾವು ಈ ಸಂದರ್ಭದಲ್ಲಿ ರೂ.9 ಸಾವಿರ ಕೋಟಿಗಳ ಹಣವನ್ನು ರೈತರಿಗೆ

ಕೊಡುತ್ತಿದ್ದೇವೆ. ಆದರೆ, ರೈತನಿಗೆ ಈ ಪವರ್ ಬೆಲೆ ಏನಿದೆ ಎನ್ನುವುದನ್ನು ಇನ್ನೂ ನಾವು ಅವರಿಗೆ ಅರ್ಥ ಮಾಡಿಸಿಕೊಡುವುದಕ್ಕಾಗುತ್ತಿಲ್ಲ. ಅದಕ್ಕೆ ಬೇಕಾದಷ್ಟು Central Government ನಿಂದ, KERC ಯಿಂದ ಕಡ್ಡಾಯವಾಗಿ ನಮಗೆ ಮೀಟರ್ ಹಾಕಿ ಎಂದು ಹೇಳುತ್ತಿದ್ದಾರೆ. ಆದರೆ, ನಾವು ಈಗ ಸಧ್ಯಕ್ಕೆ ಆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಹಂತ ಹಂತವಾಗಿ ಒಂದು stage ನಲ್ಲಿ ಜನರಿಗೆ ಯಾವ ರೀತಿ ಜಾಗೃತಿ ಮೂಡಿಸಬೇಕೆಂದು ಒಂದು ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರೆ, ನಮ್ಮ ರೈತರು ಬಹಳ ಜನ ಪ್ರತಿ ವರ್ಷ ಕೂಡ ನಮ್ಮ ಕೃಷ್ಣ ಬೈರೇಗೌಡರು ಈಗ ಮಾತನಾಡುತ್ತಿದ್ದರು. ಅವರ ತಂದೆ ಒಂದು ಕಾಲದಲ್ಲಿ ಹಿಂದೆ ನಾನು ಆ ಕಡೆಗೆ ಕುಳಿತುಕೊಂಡಾಗ ಎಂಟೂವರೆ ಗಂಟೆ reply ಮಾಡಿದರು. ಈಗ ಇವರು ಎರಡು ಗಂಟೆ reply ಮಾಡಿದರು. ಟೈಮ್ ಕೊಟ್ಟಿದ್ದರೆ ಇನ್ನೂ ಮಾಡುತ್ತಿದ್ದರೇನೋ? ಒಂದು ಸಲ ಅವರ ತಂದೆ ಎಂಟೂವರೆ ಗಂಟೆಗಳ ಕಾಲ agriculture ಮೇಲೆ reply ಮಾಡಿದ್ದರು. ಅವರು ಹೇಳುತ್ತಿದ್ದರು. ಬೇರೆ ಬೇರೆ ರಾಜ್ಯದಲ್ಲಿ power connection ಕೊಡುವುದಕ್ಕೆ ಪಕ್ಕದಲ್ಲಿ ತಮಿಳುನಾಡು ಬಾರ್ಡರ್, ಒಂದು I.P.set connection ಕೊಡಬೇಕಾದರೆ 8-9 ವರ್ಷಗಳಾಗುತ್ತದೆ. ನಮ್ಮಲ್ಲಿ ಆಗಿಲ್ಲ. ಕೆಲವು ಸ್ನೇಹಿತರು ಮಾತನಾಡುತ್ತಿದ್ದರು. Irrigation ಬಗ್ಗೆ ಹೇಳುವುದಾದರೆ ಕೆಲವರೆಲ್ಲಾ ಉತ್ತರ ಕರ್ನಾಟಕದವರು ಇದ್ದಾರೆ. ಎಲ್ಲಾ ನಮ್ಮ ಹೊಳೆಗಳಿಗೆ ಹಾಕಿಕೊಂಡಿದ್ದಾರೆ. ಹೊಳೆಯಿಂದ 10 HP ತೆಗೆದುಕೊಂಡು ಮತ್ತೆ 10 HP ಹಾಕಿಕೊಂಡು 15 ಕಿ.ಮೀ. ನೀರು ತೆಗೆದುಕೊಂಡು ಹೋಗುವಂತಹ ಒಂದು ಪದ್ದತಿಯಿದೆ. ಹಾಗೆ ESCOM ವ್ಯಾಪ್ತಿಯಲ್ಲಂತೂ ಹೆಚ್ಚು-ಕಡಿಮೆ ನಮ್ಮ ರಾಜ್ಯದಲ್ಲಿಯೇ 40% ಪವರ್ ರಾಜ್ಯಕ್ಕೆ ಒಂದು ಆದರೆ, ESCOMಗೆ 40% ಹೋಗುತ್ತಿದೆ. ಇದನ್ನು ನಾವು regularize ಮಾಡುವುದಕ್ಕೆ, ಅವರಿಗೆಲ್ಲಾ ತಿಳುವಳಿಕೆ ಹೇಳುವುದಕ್ಕೆ ಬೇಕಾದಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಅವರೆಲ್ಲಾ illegal power ಹಾಕಿಕೊಂಡಿದ್ದರು. ಸುಮಾರು 4 ಲಕ್ಷ ಚಿಲ್ಲರೆ illegal pumpsets ಇತ್ತು. ನಾನು ಬಂದಮೇಲೆ ಅದಕ್ಕೆ ಒಂದು date fix ಮಾಡಿ ನಮ್ಮ ವಿರೋಧ ಪಕ್ಷದ ನಾಯಕರೂ ಕೂಡ ಇನ್ನೂ ಒಂದೆರಡು ತಿಂಗಳುಗಳು extend ಮಾಡಿ ಎಂದು ಹೇಳಿದರು. Extend ಮಾಡಿ ನಾಲ್ಕು ಲಕ್ಷ ಚಿಲ್ಲರೆಗೆ 10 ಸಾವಿರ ರೂಪಾಯಿಗಳನ್ನು ಕೊಟ್ಟು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

register ಮಾಡಿಕೊಂಡಿದ್ದಾರೆ. ಇನ್ನೂ ಕೆಲವರು register ಮಾಡಿಕೊಳ್ಳದೇ ಇರುವವರೂ ಇದ್ದಾರೆ. ಅದರಲ್ಲಿ ನಾವು ಬಂದಮೇಲೆ 3,01,070ರಷ್ಟು ನಾವು regularize ಮಾಡಿದ್ದೇವೆ. ಇನ್ನು ಉಳಿದ 1,52,000 ವನ್ನು ನಾವು regularize ಮಾಡಬೇಕಾಗಿದೆ. ಒಬ್ಬೊಬ್ಬರ ಮೇಲೆ ಇಂತಹ IP sets regularize ಮಾಡಬೇಕಾದರೆ 50 ರಿಂದ ಒಂದೂವರೆ ಲಕ್ಷ ರೂಪಾಯಿಗಳಷ್ಟು ಖರ್ಚಾಗುತ್ತಿದೆ. ಅವರಿಗೆಲ್ಲಾ transformers, equipments ಮತ್ತೊಂದನ್ನು ಮಾಡುವುದಕ್ಕೆ ಕೂಡ ಆಗುತ್ತಿದೆ. ಅದಕ್ಕೋಸ್ಕರ 1,362 ಕೋಟಿ ರೂಪಾಯಿಗಳನ್ನು ರೈತರಿಗೋಸ್ಕರವೇ ಈ ಸಂದರ್ಭದಲ್ಲಿ ನಾವು ಇಟ್ಟಿದ್ದೇವೆ. ಅದರ ಜೊತೆಗೆ ಜನರ ಸೇವೆ ಬಹಳ ಮುಖ್ಯ. ಇಲ್ಲಿ ಬಂದಮೇಲೆ ಬಹಳ ದೊಡ್ಡ ಕ್ರಾಂತಿಕಾರಿ ಬದಲಾವಣೆಯನ್ನು ಈ ರಾಜ್ಯದಲ್ಲಿ ಮಾಡಿದ್ದೇವೆ. ಬೇಕಾದರೆ ನಿಮ್ಮ ಫೋನ್‌ನಿಂದಲೇ ಇಲ್ಲಿಂದಲೇ ನೀವು ಟ್ರೈ ಮಾಡಿ, ಏನಾದರೂ ನಿಮ್ಮ ಮನೆ ನಂಬರ್ ಕೊಡಿ. 1912 ಕ್ಕೆ ಕರೆ ಮಾಡಿ, ವಾಪಸ್ಸು 5 ನಿಮಿಷದಲ್ಲಿ ನಿಮಗೆ reply ಬರುತ್ತದೆ. ವಾಪಸ್ಸು ಆ ಇಂಜಿನಿಯರ್‌ಗೆ ಹೋಗುತ್ತದೆ. ಆ Executive Engineer ಗೆ ಹೋಗುತ್ತದೆ, ಏನಾಗಿದೆ ಸಮಸ್ಯೆ ಎಂದು ವಾಪಸ್ಸು ಬರುತ್ತದೆ. ಇದನ್ನು ನಮ್ಮ ಸರ್ಕಾರ ಬಂದಮೇಲೆ ಇಡೀ ರಾಜ್ಯದ ಉದ್ದಗಲಕ್ಕೂ ಕೂಡ ನಾವು ಇದನ್ನು ಮಾಡಿದ್ದೇವೆ. ಮಾಡಿ ಎಲ್ಲರಿಗೂ ಕೂಡ ಒಂದು ಸೇವೆಯನ್ನು ಗ್ರಾಹಕರಿಗೆ, ಏಕೆಂದರೆ ಇದು ನಮ್ಮ ಕಂಪನಿಗಳಲ್ಲಿ ಪ್ರತಿಯೊಂದು ಸಂದರ್ಭದಲ್ಲಿಯೂ ಕೂಡ ಗ್ರಾಹಕರಿಗೂ ಹಾಗೂ ಸರ್ಕಾರಕ್ಕೂ ಇರುವ ಒಂದು ದೊಡ್ಡ ಸಂಬಂಧ. ಇದನ್ನು ಬೆಳೆಸಿ ಅವರಿಗೆ ಸೇವೆ ಮಾಡುವುದಕ್ಕೆ ಒಂದು ದೊಡ್ಡ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಇನ್ನೂ ಬೇಕಾದಷ್ಟು ಮಾಡಬೇಕಾಗಿದೆ. ನಾನು ಅದರಲ್ಲಿ ಇನ್ನೂ efficient ಆಗಿ ಹೋಗಿದ್ದೇವೆಂದು ಹೇಳುವುದಿಲ್ಲ. ಆದರೆ, ಇಡೀ ರಾಷ್ಟ್ರದಲ್ಲಿ ನಮ್ಮ ರಾಜ್ಯದಲ್ಲಿ ಆಗುತ್ತಿರುವಂತಹದ್ದನ್ನು completeಆಗಿ ಗಮನಿಸಿದ್ದೇನೆ. ನಾನು ಮುಂದಕ್ಕೆ ಶಾಸಕರಿಗೂ ಕೂಡ ನಾನು ಹೇಳಿದ್ದೇನೆ. ಪ್ರತಿಯೊಬ್ಬರಿಗೆ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಪವರ್ ಹೋಗುತ್ತಿದೆ, ಯಾವ್ಯಾವ ಸ್ಟೇಷನ್‌ನಲ್ಲಿ ಎಷ್ಟೆಷ್ಟು ಪವರ್ ಬರುತ್ತಿದೆ ಎಂದು ಎಲ್ಲಾ ಶಾಸಕರುಗಳ ಫೋನ್ ನಂಬರ್‌ಗಳಿಗೆ ಪ್ರತಿ ದಿನ message ಹೋಗಬೇಕೆಂದು ಹೇಳಿದ್ದೇನೆ. ಕೆಲವರು 3 ಗಂಟೆ ಪವರ್ ಸಿಕ್ಕಿತು ಎಂದು ನಮ್ಮ ಹಳ್ಳಿಗಳಲ್ಲಿ complaint

ಹೇಳುತ್ತಾರೆ. ಕೆಲವರು 4 ಗಂಟೆ ಪವರ್ ಸಿಕ್ಕಿತು ಎಂದು ಹೇಳುತ್ತಾರೆ. ಸುಮ್ಮನೆ ಏನೋ ಒಂದು ಹೇಳುತ್ತಾರೆ. ಬೆಳಿಗ್ಗೆ-ಸಾಯಂಕಾಲ ಅಂದರೆ ಬೆಳಿಗ್ಗೆ ಹೊತ್ತು ಒಂದು time, ರಾತ್ರಿ ಹೊತ್ತು ಒಂದು time ನಾವು ಕೊಡುತ್ತಿದ್ದೇವೆ. ಏಕೆಂದರೆ, ಹಗಲು ಹೊತ್ತಿನಲ್ಲಿ direct ಆಗಿ ಪವರ್ ಕೊಡೋಣವೆಂದರೆ ಈ ನಮ್ಮ ನದಿ ತಟಗಳ ಪಕ್ಕದಲ್ಲಿ ಕೊಡಬಹುದು. ಆದರೆ, ಇಲ್ಲಿ direct ಆಗಿ ಪವರ್ ಕೊಡೋಣವೆಂದರೆ ಮೋಟರ್‌ಗಳು recharge ಆಗಬೇಕು, ಬೋರ್‌ವೆಲ್‌ಗಳು recharge ಆಗಬೇಕು. ಅದಕ್ಕೋಸ್ಕರ ನಾವು ಎರಡು ಭಾಗವಾಗಿ ಎಲ್ಲಾ ಶಾಸಕರನ್ನು consult ಮಾಡಿ ರೈತರಿಗೆ ಸಮಾಧಾನ ಮಾಡುವಂತಹ ಪ್ರಯತ್ನವನ್ನು ನಾವು ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೆ, ನಾನು ಈ ನಮ್ಮ ಇಲಾಖೆಗೆ ಬಂದಾಗ ದೊಡ್ಡ vacancies ಇತ್ತು. ಲೈನ್‌ಮ್ಯಾನ್‌ಗಳಿರಲಿಲ್ಲ, ಇಂಜಿನಿಯರ್‌ಗಳಿರಲಿಲ್ಲ. ಬಹುಶ: 30 ಸಾವಿರ vacancies ಇತ್ತು. ಹೆಚ್ಚು-ಕಡಿಮೆ 33-34 ಸಾವಿರ vacancies ಇತ್ತು. ನಾನು ಕಳೆದ ಮೂರು ವರ್ಷಗಳಲ್ಲಿ 21 ಸಾವಿರದ 516 ಜನರನ್ನು direct recruitment ಮಾಡಿದ್ದೇನೆ. ಯಾವ ಕೈಯಲ್ಲಿಯೂ ಸಹ ಒಂದು ಸಣ್ಣ ಬೆಟ್ಟನ್ನೂ ತೋರಿಸಿಕೊಳ್ಳದ ರೀತಿಯಲ್ಲಿ recruitment ಅನ್ನು ನಾವು ಮಾಡಿದ್ದೇವೆ. Engineers ಮತ್ತು ಲೈನ್‌ಮ್ಯಾನ್ recruitments ಮಾಡಿದ್ದೇವೆ. ಇನ್ನೂ 1,200 ಜನರು ಉಳಿದುಕೊಂಡಿದ್ದಾರೆ. ಅದೂ ಕೂಡ sanctioned posts ಉಳಿದಿದೆ. ಅದನ್ನೂ ಕೂಡ ಈ ವರ್ಷ ಏನಾದರೂ ಮಾಡಿ ಭರ್ತಿ ಮಾಡಬೇಕೆಂದು ಒಂದು ಕ್ರಮವನ್ನು ನಾವು ಕೈಗೊಳ್ಳುತ್ತೇವೆ. ಅದರ ಜೊತೆಗೆ ತಾಲ್ಲೂಕು ಮಟ್ಟದಲ್ಲಿ ರೈತರಿಗೆ, ನಮ್ಮ consumers ಗೂ ಹಾಗೂ ನಮ್ಮ ಇಲಾಖೆಯ ಅಧಿಕಾರಿಗಳಿಗೂ ಒಂದು ಸಂಪರ್ಕವಿರಲಿ ಎಂದು, ಏಕೆಂದರೆ transformersಗೆ ದುಡ್ಡು ತೆಗೆದುಕೊಳ್ಳುತ್ತಾರೆ, ಅದಕ್ಕೆ ದುಡ್ಡು ತೆಗೆದುಕೊಳ್ಳುತ್ತಿದ್ದಾರೆ ಎಂದು ಬೇಕಾದಷ್ಟು complaints ಇತ್ತು. ಇಲ್ಲವೆಂದು ನಾನು ಹೇಳುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಬಂದ ತಕ್ಷಣ ಇಲ್ಲ ಕಣಯ್ಯ ಒಂದು transformer bank ಮಾಡಬೇಕೆಂದು ನಮಗೆ ಆದೇಶ ಕೊಟ್ಟರು. ಪ್ರತಿ ತಾಲ್ಲೂಕಿನಲ್ಲಿ ಒಂದು ಬ್ಯಾಂಕ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. Repairs centres ಅನ್ನು ನಾವು ಸುಮಾರು 130 ತಾಲ್ಲೂಕುಗಳಲ್ಲಿ ಮಾಡಿದ್ದೇವೆ. ಇದರ ಜೊತೆಗೆ ಸುಮಾರು

6 ಸಾವಿರ ಜನರನ್ನು 165 ಕ್ಷೇತ್ರಗಳಲ್ಲಿ ಒಂದೊಂದು station ಮಟ್ಟದಲ್ಲಿ 6-6 ಜನರನ್ನು member ಕೂಡ ಮಾಡಿದ್ದೇವೆ. ಎಲ್ಲೆಲ್ಲಿ ಅವರು committee meeting ಮಾಡುತ್ತಾರೆ, ಸಂಪರ್ಕ ಮಾಡುತ್ತಾರೆ, ಮೀಟಿಂಗ್ ಮಾಡಿಕೊಂಡು ನಮ್ಮ ಗ್ರಾಹಕರ ಜೊತೆಗೆ ಇರುತ್ತಾರೆ ಅದೆಲ್ಲವನ್ನೂ ಕೂಡ whatsApp ಮಾಡಿ ಫೋಟೊ ಮಾಡಿ ನಮಗೆ ಕಳುಹಿಸಬೇಕು, ನಿಮ್ಮದು ಒಂದು ಗ್ರೂಪ್ ಮಾಡಿಕೊಳ್ಳಬೇಕು, ಏನೇನು ವಿಚಾರವೆಂದು ಗೊತ್ತಾಗಬೇಕೆಂದು ಅದಕ್ಕೂ ಕೂಡ ಒಂದು ಆದೇಶವನ್ನು ಈ ಸಂದರ್ಭದಲ್ಲಿ ಕೊಟ್ಟಿದ್ದೇನೆ. ರೈತರಿಗೆ, ಗ್ರಾಹಕರಿಗೆ ಯಾವುದೆಲ್ಲಾ ರೀತಿ ನಾವು ಸಹಾಯ ಮಾಡುವುದಕ್ಕೆ ಸಾಧ್ಯತೆಯಿದೆ, ಆ ರೀತಿಯ ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಈ ಮಧ್ಯದಲ್ಲಿ ಹೋದ ವರ್ಷ ನಮಗೆ ಮಳೆಯಿಲ್ಲ. 11 ಸಾವಿರ ಲಕ್ಷ ಮಿಲಿಯನ್ ಯೂನಿಟ್ ಕರೆಂಟ್ ನಮಗೆ ಬರಬೇಕಾಗಿತ್ತು. ಆದರೆ, ಕೇವಲ ಆರೂವರೆ ಸಾವಿರ ಮಾತ್ರ ನಾವು produce ಮಾಡುವುದಕ್ಕೆ ಆಯಿತು. ನಾಲ್ಕೂವರೆ ಸಾವಿರದಿಂದ ಐದು ಸಾವಿರದಷ್ಟು ನಮಗೆ ಕೇವಲ hydel ನಲ್ಲಿ ನಮಗೆ ಲಾಸ್ ಆಯಿತು. ಬಹಳ ದೊಡ್ಡ ಲಾಸ್ ಆಯಿತು. ಅದನ್ನು ನಾವು ಬೇರೆ ಕಡೆಯಿಂದ purchase ಮಾಡಬೇಕಾಯಿತು. ಆದರೂ ಕೂಡ ನಾವು ಈ ಸಂದರ್ಭದಲ್ಲಿ ಪ್ರಯತ್ನ ಮಾಡಿದ್ದೇವೆ. ಈ ಮಧ್ಯದಲ್ಲಿ ನಮಗೆ ಏನಾಯಿತು ಎಂದರೆ, ಕರೆಂಟ್‌ಗೆ ಬೆಲೆ ಸ್ವಲ್ಪ ಜಾಸ್ತಿಯಾಯಿತು. ಈ ಮಧ್ಯದಲ್ಲಿ ನಮ್ಮ Central Government ನ ಪಿಯೂಷ್ ಗೋಯಲ್‌ರವರು ಕೂಡ ಬೇಕಾದಷ್ಟು ಸಹಕಾರ ಕೊಟ್ಟಿದ್ದಾರೆ. ಇಲ್ಲವೆಂದು ನಾನು ಹೇಳುವುದಿಲ್ಲ. ನಮ್ಮದು ಒಂದು coal block ಇತ್ತು. ಕಾರಣಾಂತರಗಳಿಂದ ಆ coal block ವಜಾ ಆಯಿತು.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಡಿ.ಕೆ.ಶಿವಕುಮಾರ್: ಮತ್ತೆ ವಾಪಸ್ಸು ನಮಗೇನೇ central government minister ಮತ್ತು ಕೇಂದ್ರದ ಎಲ್ಲಾ ಮಂತ್ರಿಗಳು ಸಹಕಾರ ಕೊಟ್ಟರು. ಮತ್ತೆ ವಾಪಸ್ಸು ನಮ್ಮ ರಾಜ್ಯಕ್ಕೆ ಕೊಟ್ಟರು. ಅದರಿಂದ ನಮಗೆ ಏನಾಗುತ್ತಿದೆ ಎಂದರೆ, ಇದನ್ನು ನಡೆಸುವುದಕ್ಕೆ ನಮ್ಮ ಕೈಯಲ್ಲಿ ಬೇಕಾದಷ್ಟು ಅಡಚಣೆಗಳು ಉಂಟಾಗುತ್ತಿವೆ. ಮಾನ್ಯ ಜಗದೀಶ್ ಶೆಟ್ಟರ್ ಸಾಹೇಬರೇ, ಇದರಿಂದ

ವರ್ಷಕ್ಕೆ ರೂ.550 ಕೋಟಿಗಳು ಲಾಸ್ ಆಗುತ್ತಿದೆ. ರೂ.550 ಕೋಟಿಗಳು ನಮ್ಮ coal block ಏನು ಕೊಟ್ಟಿದ್ದಾರೆ, ಅದನ್ನು ನಾವು ನಡೆಸುವುದಕ್ಕೆ ಆಗದೇ, ನಮಗೆ ಬೇಕಾದಷ್ಟು technical problem ಆಗಿದೆ, ತಾವು ಕೂಡ ನನಗೆ ಅಸೆಂಬ್ಲಿಯಲ್ಲಿ ಕಳೆದ ವರ್ಷ 9 ತಿಂಗಳುಗಳ ಕಾಲ novation ಮೇಲೆ ಅವರಿಗೇ ಕೊಟ್ಟೆವು. ಆದರೆ, ಮಹಾರಾಷ್ಟ್ರ ಸರ್ಕಾರ ಅಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಕೊಡಲಿಲ್ಲ. ಬೇಕಾದಷ್ಟು ಸಮಸ್ಯೆಯಿತ್ತು. ನಾನು ಅಲ್ಲಿಗೆ ಹೋಗಿ ಮೀಟಿಂಗ್ ಮಾಡಿದೆ, ಮತ್ತೊಂದು ಮಾಡಿದೆ. ಮತ್ತೆ ಅದೆಲ್ಲಾ ಸರಿಹೋಯಿತು. ಮತ್ತೆ agreement ಮಾಡಿ tender ಕರೆದೆವು. ಟೆಂಡರ್ ಕರೆದ ತಕ್ಷಣ ಮತ್ತೆ ಕೋರ್ಟ್‌ಗೆ ಹೋಗಿ ಕೋರ್ಟ್‌ಗೆ ಹಾಕಿಬಿಟ್ಟಿದ್ದಾರೆ. ಮೊದಲಿನ central government agreement ನಲ್ಲಿ ಎರಡು clause ಇವೆ. Novationನಲ್ಲಿಯಾದರೂ ಹೋಗಬಹುದು, ಇಲ್ಲದಿದ್ದರೆ tender ನಾದರೂ ಕರೆಯಬೇಕೆಂದು ಇದೆ. ನಾವು ಟೆಂಡರ್ ಕರೆದವು. ಟೆಂಡರ್ ಕರೆದರೆ ಹೈಕೋರ್ಟ್‌ನಲ್ಲಿ ಏನು ಮಾಡಿದರು single bench ಎಂದರೆ, ಅವನು ಮೊದಲಿನಿಂದಲೂ ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗಿದ್ದಾನೆ, ನೀವು novation clause ಮಾಡಿ ಕೊಡಬೇಕೆಂದು ಅವರು ಆದೇಶ ಕೊಟ್ಟರು. ಮತ್ತೆ ನಾವು Double Bench ಗೆ ಹೋದೆವು. Double benchಗೆ ಹೋದರೆ ಇನ್ನೂ ಒಂದು strong ಆದೇಶ ಕೊಟ್ಟು, ನೀವು ಟೆಂಡರ್ ಕರೆಯುವುದಕ್ಕೆ ಸಾಧ್ಯವೇ ಇಲ್ಲ, ಅವನು ಏನು ತಪ್ಪು ಮಾಡಿದ್ದಾನೆ ಮತ್ತೆ ಅವನಿಗೇ ಟೆಂಡರ್ ಕೊಡಿ ಎಂದು ಅವರು ಆದೇಶ ಮಾಡಿದರು.

ಅಧ್ಯಕ್ಷರು: Administrative order ಗೆ ಸಹಿತ stay ಗಳು.

ಶ್ರೀ ಡಿ.ಕೆ.ಶಿವಕುಮಾರ್: Direct ಆಗಿ ನಮಗೆ ಆದೇಶವನ್ನೇ ಕೊಟ್ಟಿದ್ದಾರೆ. ಆದೇಶದ ಕಾಪಿಯನ್ನೂ ಸಹ direct ಆಗಿ ಏನು ಬಂದಿದೆ ಎಂದು ಬೇಕಾದರೆ ನಾನು detailಆಗಿ ಓದುತ್ತೇನೆ. ಸರ್ ನಾವು ಇದಕ್ಕೆ ಟೆಂಡರ್ ಮಾಡಬೇಕೋ ಏನೋ ಗೊತ್ತಿಲ್ಲ. ಟೆಂಡರ್ ಮಾಡಲಿಲ್ಲವೆಂದರೆ ಇವರು ನಮ್ಮನ್ನು ಬಿಡುವ ಆಗಿಲ್ಲ. ಇಲ್ಲವೇ novation clause ಗೆ ಕೋರ್ಟ್‌ನವರು ನಮಗೆ direction ಕೊಡುತ್ತಾರೆ. ಇದು ಸಾಧ್ಯವೇ ಇಲ್ಲವೆಂದು ಮತ್ತೆ ನಾವು ಈಗ ಸುಪ್ರೀಂಕೋರ್ಟ್‌ಗೆ ಹೋಗಿದ್ದೇವೆ. ಸುಪ್ರೀಂಕೋರ್ಟ್‌ಗೆ ಹೋಗಿ ಅಲ್ಲಿ ಪ್ರಯತ್ನ ಮಾಡುತ್ತಿದ್ದೇವೆ.

19-06-2017

ಎರಡು ವರ್ಷಗಳಿಂದ ಇದನ್ನು ನಾವು implement ಮಾಡುವುದಕ್ಕಾಗುತ್ತಿಲ್ಲ. ನಮಗೆ ಬಂದಿದೆ. ಲಾಸ್ ಆಗುತ್ತಿದೆ. ಇದನ್ನು ನಾವು Coal India ಕೈಯಲ್ಲಿ central governmentನ SECL ಎಂದು ಒಂದು ಕಂಪನಿಯಿದೆ, ಅದರಿಂದ ನಾವು ತೆಗೆದುಕೊಳ್ಳುತ್ತಿದ್ದೇವೆ. ಪ್ರತಿ ತಿಂಗಳಿಗೆ ರೂ.450 ಕೋಟಿಗಳು ಎಂದರೆ, ವರ್ಷಕ್ಕೆ ಲೆಕ್ಕ ಹಾಕಿಕೊಳ್ಳಿ, ಎಷ್ಟು ಲಾಸ್ ಆಗುತ್ತಿದೆ ಎಂದು ನೋಡಿ. ಇದರಿಂದ ನಮ್ಮ ಪವರ್ ಬೆಲೆ ಕೂಡ ಜಾಸ್ತಿಯಾಗುತ್ತಿದೆ. ಮೊನ್ನೆ ಸುಪ್ರೀಂಕೋರ್ಟ್‌ಗೆ ಹೋಗಿದ್ದೇವಿ. ಸುಪ್ರೀಂ ಕೋರ್ಟ್‌ನವರು ಮತ್ತೆ ನಮಗೆ ಏನು ಆದೇಶ ಕೊಡುತ್ತಾರೆ ಎಂದರೆ, ಇಲ್ಲವೇ ನೀವು ಒಂದು expert committee ರಚನೆ ಮಾಡಿ, ನೀವೇ ತೀರ್ಮಾನ ಮಾಡಿಕೊಂಡು ಬನ್ನಿ ಎಂದು ಹೇಳಿದರು. ಮತ್ತೆ ಒಂದು expert committee ರಚನೆ ಮಾಡಿದೆವು. Expert committee ರಚನೆ ಮಾಡಿ ಬೇರೆ ಎಲ್ಲಾ ರಾಜ್ಯಗಳಿಗೆ ಏನೇನಾಗಿದೆ, ಅದನ್ನೆಲ್ಲಾ ಕೂಡ ತೆಗೆದುಕೊಂಡಿದ್ದೇವೆ. ಬಹುಶ: ಎಲ್ಲಾ ರಾಜ್ಯದಲ್ಲಿ ಏನೇನು ಟೆಂಡರ್ ಬಂದಿದೆ, ಏನೇನು price ಬಂದಿದೆ, ನೀವು lowest price ಕಂಡುಹಿಡಿಯಿರಿ ಎಂದರು. ನಾವು lowest priceಅನ್ನು ಟೆಂಡರ್‌ನಲ್ಲಿ ಕಂಡುಹಿಡಿಯುತ್ತೇವೆಂದು ಹೇಳುತ್ತಿದ್ದೇವೆ. ಇಲ್ಲ ಆಗುವುದಿಲ್ಲ, ಬೇರೆ ಒಂದು technical committee ಮಾಡಿಕೊಂಡು ಬನ್ನಿ ಎಂದು ಹೇಳಿದರು. ಅವರನ್ನೇ ಹಾಕಿ ಒಂದು technical committee ಯನ್ನೂ ಮಾಡಿ, ಒಂದು price fix ಮಾಡಿ, ಬೇರೆ ರಾಜ್ಯಗಳಲ್ಲಿ price ಏನಿದೆ ಅದಕ್ಕಿಂತ ಕಡಿಮೆ price quote ಮಾಡಿ ಅದನ್ನು ಎತ್ತುಕೊಂಡು ಹೋಗಿ ಸುಪ್ರೀಂಕೋರ್ಟ್‌ಗೆ ಕೊಟ್ಟಿದ್ದೇವೆ. ಸುಪ್ರೀಂ ಕೋರ್ಟ್ ಏನು ಹೇಳುತ್ತದೆ ಅದಕ್ಕೆ ನಾವು ಬದ್ಧರಿದ್ದೇವೆಂದು ಹೇಳಿದ್ದೇವೆ. ನಮಗೆ ಟೆಂಡರ್ ಮಾಡುವುದಕ್ಕೂ ಅವಕಾಶ ಕೊಡುತ್ತಿಲ್ಲ. ಏಕೆಂದರೆ, ನಮಗೆ ಪ್ರತಿ ವರ್ಷ ರೂ.500 ಕೋಟಿಯಷ್ಟು ಲಾಸ್ ಆಗುತ್ತಿದೆ ಎಂದರೆ ಇದರಿಂದ ಸರ್ಕಾರಕ್ಕೆ ಬಹಳ ದೊಡ್ಡ ತೊಂದರೆಯಾಗುತ್ತಿದೆ. (ಮುಂದು . .)

ದಿ:19-6-2017-8.00(53)-ಜೆ.ಎಲ್-ಪಿ.ಎಸ್

ಶ್ರೀ ಡಿ.ಕೆ.ಶಿವಕುಮಾರ್(ಮುಂದು....) :

19-06-2017

ಸುಪ್ರೀಂ ಕೋರ್ಟ್ ಏನು ಹೇಳುತ್ತದೋ ಅದಕ್ಕೆ ನಾವು ಬದ್ಧರಿದ್ದೇವೆಂದು ಹೇಳಿದ್ದೇವೆ. ನಮಗೆ ಟೆಂಡರ್ ಮಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ. ಪ್ರತಿವರ್ಷ 500 ಕೋಟಿ ರೂ.ಗಳು ನಮಗೆ ನಷ್ಟವಾಗುತ್ತಿದೆಯೆಂದರೆ, ಸರ್ಕಾರಕ್ಕೆ ಬಹಳ ದೊಡ್ಡ ತೊಂದರೆಯಾಗುತ್ತದೆ. ಈ ಸಂದರ್ಭದಲ್ಲಿ ಎಲ್ಲಾ ಸದಸ್ಯರಿಗೆ ಮತ್ತು ನಮ್ಮ ವಿರೋಧ ಪಕ್ಷದವರಿಗೆ ವಾಸ್ತವಾಂಶವನ್ನು ಹೇಳುತ್ತಿದ್ದೇನೆ. ಏಕೆಂದರೆ ಪ್ಲಾಪ ಅವರು ಕೊಟ್ಟಿದ್ದಾರೆ ಸುಮ್ಮನೆ ಹೇಳಬಾರದು. I should congratulate Mr.Piyush Goyal. ಎಲ್ಲಾ ಸಂದರ್ಭದಲ್ಲಿಯೂ ಕೂಡ ನಮಗೆ ಎಲ್ಲಾ ರೀತಿಯ ಸಹಕಾರವನ್ನು ಕೊಡುತ್ತಿದ್ದಾರೆ. ಗೋದ್ನಾದಲ್ಲಿಯೂ ಕೂಡ ಮೈನ್ ಅಲಾಟ್ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ನಿಮ್ಮ ಕಾಲದಲ್ಲಿ ಜಾಗ ಖರೀದಿ ಮಾಡಿದ್ರಲ್ಲ ಅದಕ್ಕೆ ಹೊಸ ಕೋಲ್ ಬ್ಲಾಕ್‌ಗೆ ನಾವು ಗೋದ್ನಾಗೆ ಅರ್ಜಿ ಹಾಕಿದ್ದು, ಯಡಿಯೂರಪ್ಪರವರ ಹಾಗೂ ಶೋಭಾಕರಂದ್ಲಾಜೆರವರ ಕಾಲದಲ್ಲಿ ಗೋದ್ನಾದಲ್ಲಿ ಜಮೀನನ್ನು ಖರೀದಿ ಮಾಡಿ ಅಲ್ಲೊಂದು ಯೂನಿಟ್ ಮಾಡಬೇಕೆಂದು ಪ್ರಯತ್ನ ಮಾಡಿದ್ದರು, ನಾವು ಮಾಡುವುದಕ್ಕಾಗುವುದಿಲ್ಲ ಕೋಲ್ ಬ್ಲಾಕ್ ಕೊಡಿಯೆಂದು ಹೇಳಿದ್ದೆವು ಈಗ ಅಲ್ಲಿಯೂ ಕೂಡ ಶಿಫಾರಸ್ಸು ಮಾಡಿದ್ದಾರೆ ಬಹುಶಃ ಸಧ್ಯದಲ್ಲಿಯೇ ಅಲ್ಲಿಯೂ ಕೂಡ ಒಂದು ಕೋಲ್ ಬ್ಲಾಕ್ ಅಲಾಟ್ ಆಗುತ್ತದೆ. ಅದಕ್ಕೋಸ್ಕರ ಈ ವೇದಿಕೆಯ ಮುಖಾಂತರ ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಅಭಿನಂದಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮೊನ್ನೆ Piyush Goyal ರವರ ಒಂದು ಸ್ಟೇಟ್‌ಮೆಂಟ್ ಬಂದಿತ್ತು. Southern state ಗೆ ಇರುವ ವಿದ್ಯುತ್ ಸಪ್ಲೈಗೆ ಗ್ರಿಡ್ ಮಾಡಲು ರಾಜ್ಯ ಸರ್ಕಾರದ ಸಹಕಾರ ಸಿಗುತ್ತಿಲ್ಲವೆಂದು ಸ್ಟೇಟ್‌ಮೆಂಟ್ ಬಂದಿತ್ತು. ಉಳಿದೆಲ್ಲಾ ದಕ್ಷಿಣ ಭಾರತದ ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳ ಸಹಕಾರ ಇದೆ ನಮ್ಮ ರಾಜ್ಯದ ಸಹಕಾರ ಸಿಗುತ್ತಿಲ್ಲವೆಂದು ಒಂದು ಸ್ಟೇಟ್‌ಮೆಂಟ್ ಬಂದಿದ್ದು, ಇದರ ಬಗ್ಗೆ ಸ್ಪಷ್ಟೀಕರಣ ಕೊಡಿ.

ಶ್ರೀ ಡಿ.ಕೆ.ಶಿವಕುಮಾರ್: ಅವರು ನನಗೆ ಎಲ್ಲಾ ರೀತಿ ಸಹಕಾರ ಕೊಟ್ಟಿದ್ದಾರೆ. ರಾಜ್ಯದ ಅಸಹಕಾರ, Piyush Goyal ಅವರು ಗರಂ ಆಗಿದ್ದಾರೆಂಬ ಸ್ಟೇಟ್‌ಮೆಂಟ್ ಪತ್ರಿಕೆಯಲ್ಲಿ ಬಂತು. ಕೇಂದ್ರ ಸರ್ಕಾರ ಎಲ್ಲಾ ವಿಚಾರದಲ್ಲಿಯೂ ಬಹಳ ಮುಂದೆ ಇದೆ. ಆದರೆ 1885ರಲ್ಲಿ Central

Telegraph Act ಇದೆ. ಆ ಪ್ರಕಾರವೇ ನಾವು ಪರಿಹಾರವನ್ನು ಕೊಡಬೇಕು. ನಾನು ಪರಿಹಾರವನ್ನು ಜಾಸ್ತಿ ಮಾಡಬೇಕೆಂದು ಪ್ರಯತ್ನ ಮಾಡಿದೆ. ಕೇರಳ ಲೈನ್‌ದು ಬಹಳ ದೊಡ್ಡ ಸಮಸ್ಯೆಯಿತ್ತು. ಕೊನೆಗೆ ಇವರೆಲ್ಲಾ ಸಹಕಾರ ಕೊಟ್ಟರು ಏನೋ ಮಾಡಿ ಆ ಲೈನ್ ತೆಗೆದುಕೊಂಡು ಬಂದೆವು. ಇನ್ನೂ ಮೂರು ಲೈನ್ ಇದೆ, ಸೋಮನಹಳ್ಳಿಯಿಂದ ಧರ್ಮಪುರಿ, ತುಮಕೂರಿನಿಂದ ಧರ್ಮಪುರಿ, ಯಲಹಂಕ ಮಾರ್ಗ, ತುಮಕೂರು ಯಲಹಂಕ ಈ ನಾಲ್ಕು ಲೈನ್‌ಗಳು ಆಗುತ್ತಿಲ್ಲ. ಕಾರಣವೇನೆಂದರೆ, ಅಲ್ಲಿನ ರೈತರು ಬಿಡುತ್ತಿಲ್ಲ. ಕೇಂದ್ರ ಸರ್ಕಾರ ಕೇವಲ 15% ಮಾತ್ರ ಪರಿಹಾರ ಕೊಡಿಯೆಂದು ಹೇಳುತ್ತದೆ. ಈಗ ಯಲಹಂಕ ಸುತ್ತಮುತ್ತ ಹಾಗೂ ದೊಡ್ಡಪುರದಲ್ಲಿ ಭೂಮಿ ಬೆಲೆ ಮೂರು ಕೋಟಿ, ನಾಲ್ಕು ಕೋಟಿ, ಐದು ಕೋಟಿ ರೂ.ಗಳು ಆಗಿದೆ. Write off way ವಿಚಾರದಲ್ಲಿ ನಾನು ಸ್ಥಳೀಯ ಶಾಸಕರನ್ನು ಕರೆದು ಮಾತನಾಡಿದೆ. District court ನಲ್ಲಿ ಏನು ತೀರ್ಮಾನ ಮಾಡುತ್ತಾರೋ ಅದನ್ನು ಒಪ್ಪಿಕೊಳ್ಳುತ್ತೇವೆಂದು ಹೇಳಿದರು. District court ಹಾಗೂ ಡಿ.ಸಿ ರವರು ತೀರ್ಮಾನ ಮಾಡಿದ ನಂತರ PGCL ರವರು ಹೈಕೋರ್ಟ್‌ನಲ್ಲಿ ಹೋಗಿ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಅದಕ್ಕೆ ರೈತರು ಅವಕಾಶ ಕೊಡುತ್ತಿಲ್ಲ. ಅವನ್ಯಾರೋ ವೈರ್ ಮೇಲೆ ನೇಣು ಹಾಕಿಕೊಂಡಿರುವುದನ್ನು ನೀವೆಲ್ಲಾ ನೋಡಿದ್ದೀರಿ. ನಮಗೇನಿಲ್ಲ we are ready, ಯಾವ ರೀತಿಯಾದಂತಹ ಸಹಕಾರ ಕೊಡುವುದಕ್ಕೆ ನಾವು ತಯಾರಿದ್ದೇವೆ. ಏಕೆಂದರೆ one nation one grid ಇದಕ್ಕೆ ನಾವು ಬದ್ಧರಿದ್ದೇವೆ. ನಮ್ಮಿಂದ ತಮಿಳುನಾಡಿಗೆ ಹೋಗಬೇಕು. ಉತ್ತರ ಭಾರತದಿಂದ ಲೈನ್ ಬಂದರೆ ಎಂದರೆ ಬಹಳ ಕಡಿಮೆ ಬೆಲೆಯಲ್ಲಿ ನಮಗೆ ವಿದ್ಯುತ್ ಸಿಗುತ್ತದೆ.

ಶ್ರೀ ಬಿ.ಬಿ.ನಿಂಗಯ್ಯ: ಮಲೆನಾಡಿನ ಬಗ್ಗೆ ತಾವು ಕೇಳಿದ್ದೀರಿ, ದಯಮಾಡಿ ಮಲೆನಾಡಿಗೆ ವಿಶೇಷವಾಗಿ ಏನಾದರೊಂದು ವ್ಯವಸ್ಥೆ ಮಾಡಿ ಈ ಸಮಸ್ಯೆ ಪರಿಹಾರ ಮಾಡಿಕೊಡಿಯೆಂದು ವಿನಂತಿ ಮಾಡುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್: ಅದು ಬೇರೆ ವಿಚಾರ.

ಅಧ್ಯಕ್ಷರು: ಈ issue ಬೇರೆಯಿದೆ ಬಿಡಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

19-06-2017

ಶ್ರೀ ಡಿ.ಕೆ.ಶಿವಕುಮಾರ್: Central Government ರವರು ಒಂದು parameter ಇಟ್ಟುಕೊಂಡಿದ್ದಾರೆ. ನಮ್ಮ ರಾಜ್ಯದ ಕಾರ್ಯದರ್ಶಿಯವರೆ member ಆಗಿದ್ದಾರೆ. ನಾನು ಹಿಂದೆ ಮಂತ್ರಿಯಾಗಿದ್ದಾಗ ಸದನದಲ್ಲಿ ಒಂದು ಬಿಲ್ ಪಾಸ್ ಮಾಡಿಕೊಂಡೆ. KPTCLನಲ್ಲಿ ಇವತ್ತಿನ ವಾಸ್ತವಾಂಶದ ಮೇಲೆ ಜಾಸ್ತಿ ಪರಿಹಾರ ಕೊಡಬೇಕೆಂದು ತೀರ್ಮಾನ ಮಾಡಿದೆ. ಆದರೆ ದೆಹಲಿಗೆ ಹೋದಾಗ ನಮ್ಮ ಕಾರ್ಯದರ್ಶಿಯವರನ್ನೇ ಅಲ್ಲಿ member ಕೂಡ ಮಾಡಿಕೊಂಡಿದ್ದರು. ಬಿಹಾರ್, ಉತ್ತರ ಪ್ರದೇಶದವರೆಲ್ಲಾ ಸೇರಿ ನಿಮ್ಮ ರಾಜ್ಯ, ಕೇರಳ ರಾಜ್ಯದ ರೀತಿ ನಾವು ಕೊಡುವುದಕ್ಕೆ ಸಾಧ್ಯವೇ ಇಲ್ಲ ದಯವಿಟ್ಟು ಇದು ನಮ್ಮಿಂದ ಆಗುವುದಿಲ್ಲವೆಂದು ಹೇಳಿದರು. 15%ಗೆ ನಮ್ಮ ರೈತ ಎಲ್ಲಿ ಭೂಮಿ ಕೊಡುತ್ತಾನೆ? ಲೈನ್ ಎಷ್ಟು ಹೋಗುತ್ತದೋ ಅಷ್ಟೆಲ್ಲಾ, ಲೈನ್ ಜೊತೆಗೆ ಆ ಕಡೆ, ಈ ಕಡೆ 25-30 ಮೀಟರ್, ಈ ಕಡೆ 30 ಮೀಟರ್, ಆ ಕಡೆ ಮೀಟರ್, ನೂರು ನೂರು ಅಡಿ ಬಿಡಬೇಕು ಬಹಳ ದೊಡ್ಡ ಸಮಸ್ಯೆಯಿದೆ. ಇಲ್ಲವೆಂದರೆ ಬೇರೆ ಏನು ಸಮಸ್ಯೆಯಿಲ್ಲ. ನಾವು ಬೇಕಾದಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಈ ಮಧ್ಯದಲ್ಲಿ ಖಾಸಗಿಯವರು ಸೋಲಾರ್ ಹಾಕಿಕೊಳ್ಳುವವರು, ವಿಂಡ್ ಹಾಕಿಕೊಳ್ಳುವವರೆಲ್ಲಾ ವಿಪರೀತ ದುಡ್ಡು ಕೊಡುತ್ತಿದ್ದು, ಅವರೆಲ್ಲಾ ಅದೇ ಆಪೇಕ್ಷೆಪಡುತ್ತಿದ್ದಾರೆ. ಒಂದು ಲೈನ್ ಹಾಕಿಕೊಳ್ಳಬೇಕಾದರೆ ಎಷ್ಟು ಶ್ರಮ ಇದೆಯೆಂದರೆ ಅಷ್ಟಿಷ್ಟಲ್ಲ. ಏಕೆಂದರೆ, ಬೆಂಗಳೂರಿನ northeast ಭಾಗದಲ್ಲಿ concession ಇದೆ ಏಕೆಂದರೆ ಪವರ್ ಇಲ್ಲವೆಂದು. ನಮ್ಮಲ್ಲಿ ಬೇಕಾದಷ್ಟು ಪವರ್ ಇದೆ, sufficient ಇದೆ, self sufficient ಇದೆ ನಾನು ಬಂದನಂತರ ನನ್ನ ಕಾಲದಲ್ಲಿ I have added increase of generation capacity 7,268 MW ವಿದ್ಯುತ್ ಅನ್ನು ನಾವು add ಮಾಡಿದ್ದೇವೆ. ಸೋಲಾರ್ ವಿಷಯ ಹೇಳಬೇಕೆಂದರೆ, world Largest Park ಇದನ್ನು ಹೇಳುವುದಕ್ಕೆ ನನಗೆ ಹೆಮ್ಮೆಯೆನಿಸುತ್ತದೆ. ತ್ರಿಪಾಠಿ ಎಂಬ ಅಧಿಕಾರಿಯಿದ್ದರು ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸಬೇಕು. Piyush Goyal ಅವರ ಹೆಸರು ಹೇಳಬೇಕು. ಇದು ಇಡೀ ವಿಶ್ವದಲ್ಲಿಯೇ ಒಂದು ದೊಡ್ಡ ಪಾರ್ಕ್ ಆಗಿದೆ. 13,000 ಎಕರೆ ಪ್ರದೇಶ ಒಂದು ಎಕರೆ ಭೂಮಿಯನ್ನು ಕೂಡ ನಾನು acquisition ಮಾಡಲಿಲ್ಲ, ಒಂದು ಎಕರೆ ಕೂಡ ಖರೀದಿ ಮಾಡಲಿಲ್ಲ. ಆ ರೈತರು ಇಲ್ಲೇ

ಇದ್ದಾರೆ ಪಾವಗಡದ ಶಾಸಕರನ್ನು ಕೇಳಿ ಆ ರೈತರ ಬಳಿ ಹೋಗಿ ಇವರನ್ನು, ಎಂ.ಪಿ ರವರನ್ನು ಕೂರಿಸಿಕೊಂಡು ಮಾತನಾಡಿ 21,000 ರೂ.ಗಳ ಬಾಡಿಗೆ ಕೊಡುತ್ತೇನೆಂದು ಹೇಳಿ ಅವರನ್ನೇ ಮಾಲೀಕರನ್ನಾಗಿ ಮಾಡಿ ಅವರೆಲ್ಲರನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ನಾವು 13,000 ಎಕರೆ ಜಾಗದಲ್ಲಿ ಒಂದು ಪಾರ್ಕ್ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರ ನಮ್ಮ ಜೊತೆ ಒಪ್ಪಂದ ಮಾಡಿಕೊಂಡಿದೆ. 4.40 ಪೈಸೆಗೆ ಕೊಡುತ್ತೇವೆ, bundle power 3.30 ಪೈಸೆಗೆ ಕೊಡುತ್ತೇವೆಂದು NTPC ಜೊತೆ ನಾನು ಒಪ್ಪಂದ ಮಾಡಿಕೊಂಡಿದ್ದೇನೆ. ಒಪ್ಪಂದ ಮಾಡಿಕೊಂಡಿದ್ದು ಈಗಾಗಲೇ ಕೆಲಸ ನಡೆಯುತ್ತಿದೆ ಸದ್ಯದಲ್ಲಿ Prime Minister time ಕೊಡುತ್ತಾರೆ ಅದು ಚಾಲನೆ ಕೂಡ ಆಗುತ್ತದೆ. 2018 ನೇ ಇಸವಿಗೆ ಪವರ್ ಅಲ್ಲಿಂದ flow ಆಗುತ್ತದೆ. ಇವತ್ತು ಅಂತಹ ದೊಡ್ಡ ಪಾರ್ಕ್ ಅನ್ನು ಇಡೀ ದೇಶ ಬಂದು ನೋಡುವಂತಹ ಕೆಲಸ ಕರ್ನಾಟಕ ರಾಜ್ಯದಲ್ಲಿ ಆಗುತ್ತಿದೆ. ಒಂದು ಎಕರೆ ಭೂಮಿಯನ್ನು ಕೂಡ acquisition ಮಾಡದೆ ನಮ್ಮ ರಾಜ್ಯದಲ್ಲಿ ಆಗುತ್ತಿದೆ. ಇವರು ಇನ್ನೂ ಆರು ಸಾವಿರ ಎಕರೆ ಜಾಗ ತೆಗೆದುಕೊಳ್ಳಿಯೆಂದು ಬಂದಿದ್ದರು.

ಶ್ರೀ ಕೆ.ಎಂ.ತಿಮ್ಮರಾಯಪ್ಪ: ಅವರ ಬೇಡಿಕೆಯನ್ನು ನೀವು ಈಡೇರಿಸಲೇಬೇಕು ರೈತರೆಲ್ಲಾ ಬಂದಿದ್ದಾರೆ ಮನವಿ ಮಾಡಿದ್ದಾರೆ.

ಶ್ರೀ ಡಿ.ಕೆ.ಶಿವಕುಮಾರ್: ಅದಕ್ಕೆ ನಾನು ಸ್ವಲ್ಪ ಲಿಮಿಟ್ ಮಾಡಿದೆ. Distributed generation ಆಗಬೇಕು, ಕೇವಲ ಒಂದೇ ಕಡೆ ಹಾಕಬೇಡಿಯೆಂದು ಸುಮಾರು 120 ತಾಲ್ಲೂಕುಗಳಲ್ಲಿ, 120 ತಾಲ್ಲೂಕಿನ ಶಾಸಕರುಗಳಿಗೆ ಸಹಾಯವಾಗಲಿಯೆಂದು ಅವರವರ ಕ್ಷೇತ್ರಕ್ಕೆ 20, 20 ಮೆಗಾವ್ಯಾಟ್ ಹಂಚಿಕೆ ಮಾಡಿದ್ದೇವೆ. ಮಲೆನಾಡಿಗೆ ಆಗಿಲ್ಲ, ಬೆಂಗಳೂರು ಸುತ್ತಮುತ್ತ ಇರುವವರಿಗೆ ಆಗಿಲ್ಲ, ಟೌನ್‌ಗಳಿಗೆ ಆಗಿಲ್ಲ ಬೇರೆ ಎಲ್ಲಾ ತಾಲ್ಲೂಕುಗಳಿಗೆ ಮಾಡಿದ್ದೇವೆ 40 ತಾಲ್ಲೂಕು ಉಳಿದುಕೊಂಡಿದೆ, SECI ಅವರು ಕೂಡ ಇಡೀ ದೇಶದ ನಾಯಕರುಗಳು distributed generation ಒಳ್ಳೆ ಸ್ಕೀಮ್, generation loss ಕಡಿಮೆ ಆಗುತ್ತದೆ ಒಳ್ಳೆಯದೆಂದು ಹೇಳಿದರು. ಏಕೆಂದರೆ ಅಲ್ಲಿ infrastructure ಎಲ್ಲಾ ಕ್ರಿಯೇಟ್ ಆಗಿರುತ್ತದೆ ಅದಕ್ಕೋಸ್ಕರ ಎಂದು ಮಾಡಿದ್ದೇವೆ. ಇವತ್ತು ಒಂದು ಸಣ್ಣ ಸಭೆಯನ್ನು ಮಾಡಿದೆವು. ಇನ್ನೂ small size

ಮಾಡಿ ಎಲ್ಲೆಲ್ಲಿ ಸ್ಟೇಷನ್ ಇದೆ ಅದರ ಪಕ್ಕದಲ್ಲಿಯೇ ಅವರು ಹಾಕಿಕೊಳ್ಳಲಿ ಎಂದು ದೊಡ್ಡ ಪ್ರಯತ್ನ ಮಾಡಿದ್ದೇವೆ. ಈ ಬಗ್ಗೆ ನನಗೂ ಕೂಡ ಬಹಳ ಹೆಮ್ಮೆಯಿದೆ. Solar sector ನಲ್ಲಿ ಒಂದು ಒಳ್ಳೆಯ ಪ್ರಯತ್ನವನ್ನು ಮಾಡಿದ್ದೇವೆ. ಬಹುಶಃ ಮೊದಲೆಲ್ಲಾ ಪಾವಗಡದಲ್ಲಿ ಭೂಮಿ ಬೆಲೆ 50,000 ರೂ.ಗಳಿತ್ತು. ಈಗ ಐದು ಲಕ್ಷ ಕಡಿಮೆ ಯಾರೂ ಕೂಡ ಜಮೀನು ಕೊಡುವುದಿಲ್ಲ. ಯಾರಾದರೂ ಕೊಡುತ್ತಾರಾ? ಯಾರೂ ಕೊಡುವುದಿಲ್ಲ. ಇಡೀ ರಾಜ್ಯದಲ್ಲಿ ಈ ರೀತಿ ಆಗಿದೆ. ಎಲ್ಲೆ ಕಡೆ ಅನುಕೂಲವಾಗಲಿ ಎಂದು ಈ ರೀತಿಯಾದಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಜನ ಕೂಡ ನಮಗೆ ಸಹಕಾರ ಕೊಡುತ್ತಿದ್ದಾರೆ. ನಮ್ಮ ರೆವಿನ್ಯೂ ಇಲಾಖೆಯಲ್ಲಿ conversion ಹಾಗೂ ಬೇರೆ ಬೇರೆ ವಿಚಾರದಲ್ಲಿ ಸ್ವಲ್ಪ ವಿಳಂಬವಾಗುತ್ತಿದೆ ಅವರಿಗೆ ನಾವು extensions ಮತ್ತೊಂದು ಎಲ್ಲಾ ಸ್ವಲ್ಪ liberal ಆಗಿ ಮಾಡುತ್ತಿದ್ದೇವೆ. ಒಂದು ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಬಹುಶಃ ವರ್ಷಕ್ಕೆ, ಈ ಗ್ರಿಡ್‌ಗೆ Solar Power add ಆಗುತ್ತದೆ. Wind ನಲ್ಲಿಯೂ ಕೂಡ ಮೊದಲು 13,000 ಕೊಟ್ಟಿದ್ದರು ನಾನು ಬಂದನಂತರ ಸುಮಾರು 6,000 ಚಿಲ್ಲರೆ ಅಷ್ಟು non-plyers ವಜಾ ಮಾಡಿದ್ದೇನೆ. ಇನ್ನೊಂದು ಏಳೆಂಟು ಸಾವಿರ only senior plyers ಗೆ ಕೊಟ್ಟಿದ್ದೇನೆ. ಮೊನ್ನೆ KRED ನಿಂದ ಒಂದು ಪತ್ರ ಬಂದಿತ್ತು ಅದಕ್ಕೂ ಕೂಡ ಈಗ reply ಮಾಡುತ್ತಿದ್ದೇವೆ. ಬಹುಶಃ ಎಲ್ಲಾ problem sort out ಮಾಡುತ್ತಿದ್ದೇವೆ. ಇನ್ನೂ ಕೆಲವು 800 ಅರ್ಜಿ ಹಾಕಿದ್ದಾರೆ, ದುಡ್ಡು ಕಟ್ಟಿದ್ದಾರೆ ಸದ್ಯದಲ್ಲಿ ಆ ಸಮಸ್ಯೆಯನ್ನು ಪರಿಹರಿಸುತ್ತೇವೆ. ಯಾರ್‌ಯಾರು ಸುಮ್ಮನೆ ಇಟ್ಟುಕೊಂಡು, ತೆಗೆದುಕೊಂಡು ಹೋಗಿ ವ್ಯಾಪಾರ ಮಾಡುತ್ತಿದ್ದರು ಅಂತಹವರಿಗೆಲ್ಲಾ ಕಡಿವಾಣ ಹಾಕಿ very serious plyers ಗೆ ಮಾಡಿದ್ದೇವೆ. ಇಲ್ಲಿ ಏನು ಅರ್ಜಿಗಳನ್ನು ತೆಗೆದುಕೊಂಡಿದ್ದೇವೆ ಅಲ್ಲಿಗೆ ನಿಲ್ಲಿಸಿ ಮುಂದಕ್ಕೆ auction ಮಾಡಬೇಕೆಂದು ಚಿಂತನೆ ಮಾಡುತ್ತಿದ್ದೇವೆ. ಪಾಲಿಸಿಗೆ ಇನ್ನೂ ಸ್ವಲ್ಪ ಸಮಸ್ಯೆ ಇದೆ. ಏನೇನು RPO (Renewable Purchase Obligation) ಇದೆ ಅದನ್ನೆಲ್ಲಾ ನಾವು ರೀಚ್ ಮಾಡಿದ್ದೇವೆ. ಅದೇ ರೀತಿ ನಾವು ಸೋಲಾರ್ ನಲ್ಲಿಯೂ ಕೂಡ ಒಂದು ದೊಡ್ಡ ಹೆಜ್ಜೆಯನ್ನು ಈ ಸಂದರ್ಭದಲ್ಲಿ ಇಟ್ಟಿದ್ದೇವೆ. ವಿಂಡ್‌ನಲ್ಲಿಯೂ ಕೂಡ ಒಂದು ದೊಡ್ಡ ಹೆಜ್ಜೆಯನ್ನು ಇಟ್ಟಿದ್ದೇವೆ Hydel ನಲ್ಲಿಯೂ ಕೂಡ ರಬ್ಬರ್ ಡ್ಯಾಂ ಮಾಡುವುದಕ್ಕೆ, ಮತ್ತೊಂದು

19-06-2017

ಮಾಡುವುದಕ್ಕೆಂದು ಹೊರ ದೇಶಕ್ಕೆಲ್ಲಾ ಹೋಗಿ ವೀಕ್ಷಣೆ ಮಾಡಿ ಬಂದಿದ್ದೇನೆ. ನೀರಿನ ಸಮಸ್ಯೆ ಹೇಗಿದೆಯೆಂದರೆ, ತುಂಗಭದ್ರಾದಿಂದ ನೀರು ಬಂದು ನಮ್ಮ plant ಗಳನ್ನು ಮಾಡುವುದಕ್ಕಾಗುತ್ತಿಲ್ಲ. ನಮ್ಮ ಬಳ್ಳಾರಿ ಯೂನಿಟ್‌ನ, ಯೂನಿಟ್ ಇದ್ದರೂ ಕೂಡ ನೀರಿಲ್ಲದೆ ನಾವು start ಮಾಡುವುದಕ್ಕೆ ಆಗುತ್ತಿಲ್ಲ. ನೀರು ಬರುತ್ತಿಲ್ಲ. ಸುಮಾರು 60 ಕಿ.ಮೀ, 70 ಕಿ.ಮೀ ಎಲ್ಲಾ IP set ಗಳನ್ನು off ಮಾಡಿಸಿ ಆ ನೀರನ್ನು ಒಂದಷ್ಟು ತಂದು ಒಂದಷ್ಟು ದಿನ ಸ್ಟಾಕ್ ಮಾಡುವುದು ಈ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. Next board ಗೆ 1200 ಕೋಟಿ ರೂ.ಗಳ plan ಮಾಡಿ ಪ್ರತ್ಯೇಕ ಪೈಪ್ ಹಾಕಿಕೊಂಡು ಬಳ್ಳಾರಿಗೆ ನೀರು ತರಬೇಕೆಂದು ಪ್ರಯತ್ನ ಮಾಡಿದ್ದೇವೆ. ತುಂಗಭದ್ರಾ ನದಿಯಲ್ಲಿ ಕೃಷ್ಣಾ ನದಿಯಲ್ಲಿ ಯಾವ ರೀತಿ ಪಂಪ್‌ಸೆಟ್ ಹಾಕಿಕೊಂಡಿದ್ದಾರೆಂದು ನೀವು ಕೂಡ ನೋಡಿದ್ದೀರಿ. ಅವರನ್ನೆಲ್ಲಾ ಮುಟ್ಟುವುದಕ್ಕಾಗುವುದಿಲ್ಲ. ಮುಟ್ಟುವುದು ನೋಡಿದರೆ ನನ್ನನ್ನೇ ಸ್ವಲ್ಪ ಅಲುಗಾಡಿಸಿಬಿಡುತ್ತಾರೆ.

(ಮುಂದುವರೆದಿದೆ)

ದಿನಾಂಕ: 19-06-2017-08.10 (54) AJ/PS

ಶ್ರೀ ಡಿ.ಕೆ. ಶಿವಕುಮಾರ್ (ಮುಂದುವರೆದಿದೆ. . .)

ಉತ್ತರ ಕರ್ನಾಟಕ ಭಾಗದ ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ. ನಿಮಗೂ ಗೊತ್ತಿದೆ. ನಿಮ್ಮ ಕಡೆಯಲ್ಲಿ ಇಲ್ಲ ಬಿಡಿ. ಅವರೆಲ್ಲರೂ ಪುಣ್ಯವಂತರು. ಅವರು ಬೆಳೆಯುತ್ತಿರುವಂತಹ ಕಬ್ಬು, ಇತರೆ ಎಲ್ಲಾ ಬೆಳೆಗಳಿಗೆ ಹಣವನ್ನು ಹೆಚ್ಚಾಗಿ ಕೊಟ್ಟು ಎಲ್ಲಾ ರೀತಿಯ ಸಹಕಾರವನ್ನು ಕೊಡುತ್ತಿದ್ದೇವೆ. ಏಕೆಂದರೆ ರೈತರಿಗೆ ಒಳ್ಳೆಯದಾಗಬೇಕು. ಅವರಿಗೆ ಸಂಬಳ, promotion, pension, retirement ಇಲ್ಲ. ಹಾಗಾಗಿ ರೈತರು ಬೆಳೆಗಳನ್ನು ಬೆಳೆಯುವುದಕ್ಕೆ ಸಹಕಾರವನ್ನು ಕೊಡಬೇಕು.

ಒಬ್ಬ ಮಾನ್ಯ ಸದಸ್ಯರು : ರೈತರಿಗೆ tension ಇದ್ದೇ ಇದೆ.

19-06-2017

ಶ್ರೀ ಡಿ.ಕೆ. ಶಿವಕುಮಾರ್ : ಒಳ್ಳೆ ಕಥೆ ಆಯಿತೇ? Tension ಇದ್ದರೂ ಅವರಿಗೆ ಒಳ್ಳೆಯ ಬೆಲೆ ಸಿಗುತ್ತಿದೆ ಅಲ್ಲವೇ? ಕೆ.ಪಿ.ಟಿ.ಸಿ.ಎಲ್. ವ್ಯಾಪ್ತಿಯಲ್ಲಿ ಹೊಸ ಸ್ಟೇಷನ್‌ಗಳನ್ನು ಮಾಡುವ ಸಲುವಾಗಿ ಯಾವ್ಯಾವ ಶಾಸಕರು ಕೇಳಿದ್ದಾರೋ ಅದೆಲ್ಲವೂ ಮಾಡಬೇಕಾದರೆ technical feasibility ಬರಬೇಕು. ಒಂದು ವೇಳೆ ಇದು ಬರಲಿಲ್ಲವೆಂದರೆ ಬಹಳ ಕಷ್ಟವಾಗುತ್ತದೆ. So technical feasibility ಇರುವಂತಹ ಎಲ್ಲಾ ಕಡೆಗಳಲ್ಲೂ ಹೊಸ ಸ್ಟೇಷನ್‌ಗಳನ್ನು ಕೊಡುವುದಕ್ಕೆ add ಮಾಡಿರುತ್ತೇನೆ. ಬಹುಶ: ಸುಮಾರು ಜನರಿಗೆ ಸಿಗಬಹುದು. ಸುಮಾರು 4,000 ಚಿಲ್ಲರೆ ಕೋಟಿ ರೂ.ಗಳಷ್ಟು ಇಡೀ ರಾಜ್ಯದ ಉದ್ದಗಲ್ಲಕ್ಕೂ ಹೊಸ ಲೈನ್ ಆಳವಡಿಸುವ ಸಲುವಾಗಿ ಪ್ರಯತ್ನವನ್ನು ಮಾಡಿದ್ದೇವೆ. ಈಗ ವಿಶೇಷವಾಗಿ ಮಾದರಿ ಗ್ರಾಮಗಳನ್ನು ಮಾಡಬೇಕೆನ್ನುವ ದೃಷ್ಟಿಯಿಂದ ಚಿಂತನೆ ಮಾಡಿ ಐದೈದು ಗ್ರಾಮಗಳನ್ನು ತೆಗೆದು ಕೊಂಡಿದ್ದೇವೆ. ಹಾಗೆಯೇ Transformer ಗಳದು ಬಹಳ ದೊಡ್ಡ ಸಮಸ್ಯೆಯಿದ್ದು, ಇದನ್ನು ಬಗೆಹರಿಸಲಾಗಿದೆ. ಮುಂದಿನ ದಿನಗಳಲ್ಲಿ ಹಳೇ ಮಾದರಿಯ ಟ್ರಾನ್ಸ್‌ಫಾರ್ಮರ್‌ಗಳನ್ನು ಆಳವಡಿಸದೇ, star rated transformer ಗಳನ್ನು ಆಳವಡಿಸುವಂತೆ ಸೂಚಿಸಲಾಗಿದೆ. ಇದರಿಂದ ಸುಮಾರು ಶೇ.30ರಷ್ಟು ಪವರ್ ಉಳಿತಾಯವಾಗುತ್ತದೆ. ಸರ್ಕಾರದ ಯಾವುದೇ ಕಾರ್ಯಕ್ರಮವಿದ್ದರೂ ಸಹ ಅಂತಹ ಕಡೆಗಳಲ್ಲಿ star rated transformer ಗಳನ್ನೇ ಆಳವಡಿಸಬೇಕೆಂದು ಕಡ್ಡಾಯ ಮಾಡಲಾಗಿದೆ. ರೈತರಿಗೂ ಸಹ ಮುಂದಿನ ದಿನಗಳಲ್ಲಿ ಹೊಸ ಕಲೆಕ್ಷನ್ ಕೊಡಬೇಕಾದರೆ ಅಲ್ಲಿಯೂ ಸಹ star rated transformer ಗಳನ್ನೇ ಅಳವಡಿಸಬೇಕೆಂದು ಹೇಳಿದ್ದೇನೆ. ಇದರಿಂದ 25-30% ಪವರ್ ಉಳಿತಾಯವಾಗುತ್ತದೆ. ಹಾಗಾಗಿ ಸರ್ಕಾರದ ಯಾವುದೇ ಯೋಜನೆಗಳಿದ್ದರೂ star rated transformer ಗಳನ್ನೇ ಅಳವಡಿಸಬೇಕೆಂದು ಕಡ್ಡಾಯ ಮಾಡಿರುತ್ತೇನೆ. ಉದಾಹರಣೆಗೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಗಂಗಾ ಕಲ್ಯಾಣ ಯೋಜನೆಯಡಿ 64,000 ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ಮಂಜೂರಾತಿ ಕೊಟ್ಟಿದ್ದೇವೆ. ಇದರ ಜೊತೆಗೆ drinking water ಇತರೆ ಯೋಜನೆಗಳಿಗೂ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಹೊಸದಾಗಿ ಐ.ಪಿ., ಪಂಪ್‌ಸೆಟ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ಯೋಜನೆಗಳನ್ನು ಮಾಡಿದರೂ ಅದಕ್ಕೆಲ್ಲವೂ ಅಳವಡಿಸಿದ್ದೇವೆ. 117

ಸ್ಟೇಷನ್‌ಗಳನ್ನು ಹೊಸದಾಗಿ ಮಾಡಲಾಗಿದೆ. ಪುನ: 180 ಸ್ಟೇಷನ್‌ಗಳಿಗೆ upgrade ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಹಾಗಾಗಿ ಈ ರಾಜ್ಯದಲ್ಲಿ, ಈ ಇಲಾಖೆಯಲ್ಲಿ ಎಲ್ಲರನ್ನೂ ಸಮಾಧಾನ ಮಾಡದೇ ಇರುವುದಕ್ಕೆ ಆಗದೇ ಇರಬಹುದು. ನಾನು ನನ್ನ ಕೈಯಲ್ಲಿ ಎಷ್ಟು ಸಾಧ್ಯವೋ ಅಷ್ಟು ರೀತಿಯಲ್ಲಿ ಈ ಸರ್ಕಾರಕ್ಕೆ ಗೌರವ ಬರುವ ರೀತಿಯಲ್ಲಿ, ವರ್ಗಕ್ಕೆ ಗೌರವ ಬರುವ ರೀತಿಯಲ್ಲಿ ಮಾಡಿದ್ದೇನೆ. ಬೆಂಗಳೂರು ಸಿಟಿಯಲ್ಲಿ ಅಂದರೆ ಬಿಡದಿಯಲ್ಲಿ Gas plant ಮಾಡಬೇಕೆಂದು ಪ್ರಯತ್ನ ಮಾಡಿದೆವು. ಅದಕ್ಕೆ ಸಂಬಂಧಿಸಿದಂತೆ ಕಳೆದ ಮೂರುವರೆ ವರ್ಷಗಳಿಂದ ಕೋರ್ಟಿನಿಂದ judgement ಬಂದಿರುವುದಿಲ್ಲ. ಸುಮಾರು ಸಾರಿ ನಮ್ಮ lawyer ಗಳು ಹೋಗಿ argument ಸಹ ಮಾಡಿದ್ದಾರೆ. ಕೊನೆಗೆ emergency ಯಾಗಿ ಬೆಂಗಳೂರಿಗೆ ಏನಾದರೂ ಮಾಡಬೇಕೆಂದು, ಒಂದು ವೇಳೆ ತಕ್ಷಣವೇ ಹೆಚ್ಚು ಕಡಿಮೆ ಆದರೆ ನನ್ನನ್ನೇ ಬೈಯ್ಯುತ್ತಾರೆ. ಹಾಗಾಗಿ ಈ ಕಾರಣದಿಂದ ಯಲಹಂಕದಲ್ಲಿ 1,600 ಕೋಟಿ ರೂ.ಗಳ ಪೆಚ್ಚದಲ್ಲಿ Gas plant ಒಂದಕ್ಕೆ foundation ಸಹ ಹಾಕಿದ್ದೇವೆ. ಇನ್ನು ಒಂದು ವರ್ಷದಲ್ಲಿ ಆ ಕೆಲಸ ಆಗುತ್ತದೆ. 300 ಚಿಲ್ಲರೆ, emergency ಗ್ಯಾಸ್ ಸ್ಟೌವ್ ಹಾಗೆಯೇ ಅದು ಒಂದು ಈ ಯೂನಿಟ್ ಆಗಿರುತ್ತದೆ, ಅದನ್ನು BHEL ಕಡೆಯಿಂದ ಮಾಡಿಸುತ್ತಿದ್ದೇವೆ. ಇದೂ ಸಹ add up ಆಗುತ್ತದೆ. ನಮ್ಮ ರಾಜ್ಯದಲ್ಲಿ ಇನ್ನು ಒಂದು ವರ್ಷದಲ್ಲಿ ಎಲ್ಲಿಯೂ ಕೂಡ power shortage ಇರುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ರೀತಿಯಲ್ಲಿ ಮಾಡಿದ್ದೇವೆ. ಆದರೆ ಒಂದು ದುರ್ದೈವದ ಸಂಗತಿ ಏನೆಂದರೆ, ನಮ್ಮಲ್ಲಿ industries growth ಇಲ್ಲ. ಏಕೆಂದರೆ industries ಕಡೆಗಳಿಂದ ನಮಗೆ ಹಣ ಸಿಗಬೇಕಾಗುತ್ತದೆ. Paying customers ಇಲ್ಲ. ಸುಮಾರು ಜನರು ವಾಪಸ್ಸು open access ಗೆ ಹೋಗುತ್ತಿದ್ದಾರೆ. ಇದಕ್ಕೆ ಪಾಲಿಸಿ ಇರುವುದರಿಂದ ನಾವು ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಇಲ್ಲಿ ಒಂದೇ ಅಲ್ಲ, ಇಡೀ ದೇಶದಲ್ಲಿ industrial growth ಇಲ್ಲ. Industrial growth ಇದ್ದರೆ ನಮಗೆ ಒಳ್ಳೆಯ paying customers ದೊರಕುತ್ತಾರೆ. ಏಕೆಂದರೆ ರೈತರಿಗೆ ಸಬ್ಸಿಡಿ ರೂಪದಲ್ಲಿ ಪವರ್ ನೀಡುತ್ತೇವೆ. ಇದರ ಜೊತೆಗೆ ಬೇರೆ ಬೇರೆ consumers ಗೂ ಪವರ್ ಸಬ್ಸಿಡಿ ಕೊಡುತ್ತೇವೆ. ನಾವು ಪವರ್ ಅನ್ನು 5 ರೂ.ಗಳಿಗೆ, 4.75 ರೂ.ಗಳಿಗೆ ಪವರ್ buy

ಮಾಡುತ್ತೇವೆ. ನಮ್ಮದೇ ಆದ ಪವರ್ ಜನರೇಷನ್ ಮಾಡಬೇಕೆಂದರೂ 5 ರೂ., 4.75 ರೂ.ಗಳಿಗೆ ಕಡಿಮೆ ಜನರೇಷನ್ ಮಾಡುವುದಕ್ಕಾಗುವುದಿಲ್ಲ. NTPC ಯಲ್ಲಿ ಪವರ್ ಬರುತ್ತಿದ್ದು, ಇದು ಬಹುಶ: 6 ರೂ.ಗಳು ಆಗಬಹುದು ಎಂದು ಕಾಣುತ್ತದೆ. ದಾಮೋದರ್ ವ್ಯಾಲಿಯಿಂದ ಪವರನ್ನು 4.50ರೂ.ಗಳಿಗೆ 25 ವರ್ಷಗಳಿಗೆ ಪಡೆಯಲು ಕೇಂದ್ರ ಸರ್ಕಾರದಿಂದ ಅಗ್ರಿಮೆಂಟ್ ಮಾಡಿದ್ದೇವೆ. ಅದು ಇಲ್ಲಿಗೆ ವಾಪಸ್ಸು ಬರಬೇಕಾದರೆ ಸುಮಾರು 5 ಚಿಲ್ಲರೆ ರೂ.ಗಳಾಗುತ್ತವೆ. ಇದನ್ನು ಯಾವ ರೀತಿ ಕಡಿಮೆ ಮಾಡಬಹುದು ಎಂಬುದಕ್ಕೂ ಚಿಂತನೆ ನಡೆಯುತ್ತಿದೆ. ಏಕೆಂದರೆ; ಹಿಂದೆ ಕೆ.ಪಿ.ಸಿ.ಗೆ ಪಂಚಾಯಿತಿಗಳಿಂದ ಮತ್ತು ಮುನಿಸಿಪಾಲಿಟಿಗಳಿಂದ ಬಾಕಿ ಕೊಡುವುದೇ ಸುಮಾರು 5.0 ಕೋಟಿ ರೂ.ಗಳಿತ್ತು. ಇದಕ್ಕೆ ರಾಜ್ಯ ಸರ್ಕಾರವು ಗ್ಯಾರಂಟಿಯನ್ನು ಕೊಟ್ಟು ಸಾಲ ತೆಗೆದುಕೊಂಡು ಪಂಚಾಯಿತಿ ಮತ್ತು ಮುನಿಸಿಪಾಲಿಟಿ ಬಿಲ್ಲನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಈ ಸಾಲದ ಮೊತ್ತ ಮಾನ್ಯ ಯಡಿಯೂರಪ್ಪನವರ ಕಾಲದಲ್ಲಿ add up ಆಗಿ ಸುಮಾರು 16,000 ಕೋಟಿ ರೂ.ಗಳಿಗೆ ಹೋಗಿರುತ್ತದೆ. ವಿಧಿ ಇಲ್ಲದೇ ಹಳೆ ಬಿಲ್ಲುಗಳನ್ನು ಆದಷ್ಟು set right ಮಾಡುತ್ತಿದ್ದೇವೆ. ಒಟ್ಟಿನಲ್ಲಿ ಇದನ್ನು ಏನಾದರೂ ಮಾಡಿ ಸರಿಮಾಡಬೇಕಾಗಿದೆ. ನಮ್ಮ ಇಲಾಖೆಯಲ್ಲಿರುವ ಬೆಸ್ಕಾಂ, ಚೆಸ್ಕಾಂ ಇವುಗಳಿಗೆ Piyush Goyal ಅವರು ಸರ್ಟಿಫಿಕೇಟ್ ಅನ್ನು ಕೊಟ್ಟಿರುತ್ತಾರೆ. ಅದೇನೆಂದರೆ, ದೇಶದಲ್ಲಿ ಒಟ್ಟಾರೆ ಎಂಟರೊಳಗೆ ಮೆಸ್ಕಾಂ, ಬೆಸ್ಕಾಂ, ಹೆಸ್ಕಾಂ ಎಂಬ ಮೂರು ಕಂಪನಿಗಳಿದ್ದು, ಇದರ ಜೊತೆಗೆ ಚೆಸ್ಕಾಂ ಸೇರಿಕೊಂಡಿರುತ್ತದೆ. ಕಳೆದ ವರ್ಷದಲ್ಲಿ ಇಡೀ ದೇಶಕ್ಕೆ ಬೆಸ್ಕಾಂ No.1 ಇತ್ತು. ಆದರೆ ಈ ವರ್ಷ ಚೆಸ್ಕಾಂ ಇದೆ, ಮೆಸ್ಕಾಂ ಇದ್ದು, ಪರಿಶುದ್ಧವಾಗಿ ಮಾಡುತ್ತಿದ್ದೇವೆ. Transformer ಎಲ್ಲಿಯಾದರೂ ಸುಟ್ಟು ಹೋದರೆ ಮೂರು ದಿನಗಳೊಳಗೆ ಅಲ್ಲಿಗೆ ಅಳವಡಿಸಿಕೊಡಬೇಕು, ಇಲ್ಲದಿದ್ದರೆ ಅವರ ಸಂಬಳದಲ್ಲಿ ದುಡ್ಡು ಕಟ್ಟಿಕೊಡಬೇಕೆಂದು ಹೇಳಿದ್ದೇವೆ. ಇದಕ್ಕೆ Ombudsman ನೇಮಕ ಮಾಡಿ ಹಣ ಕಟ್ಟುವ ರೀತಿಯಲ್ಲಿ ಮಾಡುತ್ತಿದ್ದೇವೆ. ಹೊಸದಾಗಿ, ಆಧುನಿಕವಾಗಿ smart meters ಅನ್ನು ಅಳವಡಿಸುತ್ತಿದ್ದೇವೆ.

ಶ್ರೀ ಕೆ.ಜಿ. ಬೋಪಯ್ಯ : ಮೂರು ದಿವಸದಲ್ಲಿ ಆಗಿರುವುದಿಲ್ಲ. 10 ದಿವಸ ಆಗಿದ್ದೂ ಇದೆ.

19-06-2017

ಶ್ರೀ ಡಿ.ಕೆ. ಶಿವಕುಮಾರ್ : ನೀವು ಒಂದು ಕೆಲಸ ಮಾಡಿ. ಮೂರು ದಿನಗಳಲ್ಲಿ ಅವರು ಕೊಡಲಿಲ್ಲವೆಂದರೆ ಇದಕ್ಕೆ ಸಂಬಂಧಿಸಿದಂತೆ ಅವಕಾಶ ಮತ್ತು ಕಾನೂನು ಎರಡೂ ಇದೆ. District Forum ನಲ್ಲಿ ಒಬ್ಬ Ombudsman ಇದ್ದಾರೆ, ಅವರ ಹತ್ತಿರ complaint file ಮಾಡಿ. ಆಗ ಅವರು ಅವರ ಸಂಬಳದಿಂದ ದುಡ್ಡು ಕಟ್ಟಿ ಕೊಡುವಂತೆ ಮಾಡುತ್ತಾರೆ. That is law, what we have made. You please try it. ಟ್ರಾನ್ಸ್‌ಫಾರ್ಮರ್ ರಿಪೇರಿ ಮಾಡಿದ್ದೇವೆ. ಈ ವರ್ಷ ಒಂದು ಲಕ್ಷ ಟ್ರಾನ್ಸ್‌ಫಾರ್ಮರ್‌ಗೆ ಅವಕಾಶ ಕೊಟ್ಟಿದ್ದೇವೆ. ಆದರೆ ಅದನ್ನು ಸಪ್ಲೈ ಮಾಡುವುದಕ್ಕಾಗಲಿಲ್ಲ. ಕೊನೆಗೆ ಸಪ್ಲೈ ಏಕೆ ಆಗುತ್ತಿಲ್ಲ ಎನ್ನುವುದನ್ನು ನೋಡುವುದಕ್ಕೆ ನಾನೇ ಹೋಗಿದ್ದೆ. ಈಗಲೂ ಸಹ ಎಲ್ಲಾ ತಾಲ್ಲೂಕುಗಳಿಗೂ 50 ಟ್ರಾನ್ಸ್‌ಫಾರ್ಮರ್‌ಗಳನ್ನು ಕಳುಹಿಸಿಕೊಡಬೇಕೆಂದು ಇದೆ. ಇದುವರೆವಿಗೆ ಈ ಸಂಬಂಧ ಮಾನ್ಯ ಸದಸ್ಯರಾದ ರಾಜಣ್ಣ ಮತ್ತು ಎಲ್ಲಾ ಸದಸ್ಯರು ಬಂದು ನನ್ನ ಹತ್ತಿರ ಗಲಾಟೆ ಮಾಡುತ್ತಿದ್ದರು.

ಶ್ರೀ ಕೆ.ಜಿ.ಬೋಪಯ್ಯ : ಮಾನ್ಯ ಸಚಿವರೆ, ಇದರ ಜೊತೆಗೆ ನಮ್ಮ ವಿರಾಜ್‌ಪೇಟೆಯಿಂದ ಮಡಿಕೇರಿಗೆ ಪವರ್‌ಗೆ ಸಂಬಂಧಿಸಿದಂತೆ ಲೈನ್ ಎಳೆಯುವುದಕ್ಕೆ 2010 ರಲ್ಲಿ sanction ಆಗಿದ್ದು, ಟೆಂಡರ್ ಆಗಿ ಕೆಲಸಗಳು ಮುಗಿದಿರುತ್ತದೆ. ಫಾರೆಸ್ಟ್ ನವರು ಕೇವಲ ಮೂರು ಕಂಬಗಳನ್ನು ಹಾಕುವುದಕ್ಕೆ ಅವಕಾಶವನ್ನು ಕೊಡುತ್ತಿಲ್ಲ. ಇದಕ್ಕೆ ಸಂಬಂಧಿಸಿದಂತೆ calling attention ಸಹ ನೀಡಿದ್ದು, ಇದಕ್ಕೆ ಬದಲು ಮಾಡಬೇಕೆಂದು ಉತ್ತರ ಕೊಟ್ಟಿರುತ್ತೀರಿ. ಆದರೆ ಬದಲು ಮಾಡುವುದಕ್ಕೆ ಆಗುವುದಿಲ್ಲ. ಈಗಾಗಲೇ ಮುಕ್ಕಾಲು ಭಾಗ ಕೆಲಸ ಆಗಿದೆ. ಅವರು ಮೂರು ಕಂಬ ಹಾಕುವುದಕ್ಕೆ ಏಕೆ ಅವಕಾಶ ಕೊಡುತ್ತಿಲ್ಲ? ಅವರಿಗೆ ನೀವು ಹೇಳಿ. ಬ್ರಿಟಿಷ್‌ನವರ ಕಾಲದಲ್ಲಿದ್ದಂತಹ ಈಸ್ಟ್ ರೇಂಜ್ ಎಂದು. . . .

ಶ್ರೀ ಡಿ.ಕೆ. ಶಿವಕುಮಾರ್ : Don't worry, we will look into it.

ಅಧ್ಯಕ್ಷರು : ಆಯಿತು. Assurance ಕೊಟ್ಟಿದ್ದಾರಲ್ಲವೇ?

19-06-2017

ಶ್ರೀ ಡಿ.ಕೆ. ಶಿವಕುಮಾರ್ : ನಮ್ಮ ರಾಜ್ಯದಲ್ಲಿ ಅನೇಕ ಬದಲಾವಣೆಗಳನ್ನು ಮಾಡುತ್ತಿದ್ದೇವೆ. Smart Meters ಎಂದು ಮಾಡುತ್ತಿದ್ದೇವೆ. ಯಾವ ರೀತಿ smart meter facility ಯನ್ನು ಮಾಡುತ್ತಾರೆಂದು ಇಡೀ ದೇಶವೇ ನೋಡುತ್ತಿದೆ. Management system ಗೆ, Automatic control ಆಗಲಿಕ್ಕೆ ಎಲ್ಲದಕ್ಕೂ ಸಂಬಂಧಿಸಿದಂತೆ ಈಗಾಗಲೇ ಮೈಸೂರಿನಲ್ಲಿ 25,000 Consumers ಗೆ implement ಮಾಡಿದ್ದೇವೆ. ಹೆಸ್ಕಾಂ ಮತ್ತು ಬೆಸ್ಕಾಂಗೂ ಅದನ್ನು extend ಮಾಡುತ್ತಿದ್ದೇವೆ. ಬಹುಶ: ಇದರಿಂದ ಒಳ್ಳೆಯ ಹೆಸರು ಬರಬಹುದು. ಇದರಿಂದ transmission loss ಆಗುವಂತಹದ್ದು, ಕಳ್ಳತನ ಆಗುವಂತಹದ್ದು ತಡೆಯಬಹುದು ಮತ್ತು ಬಿಲ್ ಕೂಡ ಸರಿಯಾಗಿ ಬರುತ್ತದೆ. Prepaid meters . . . .

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ತಾವು Loss ಬಗ್ಗೆ ಹೇಳುವಾಗ ಎಷ್ಟು percentage ಕಡಿಮೆ ಆಗಿದೆ ಎನ್ನುವುದನ್ನು ಹೇಳಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ನಾನು ಅಧಿಕಾರಕ್ಕೆ ಬಂದ ಮೇಲೆ ಕೆ.ಪಿ.ಟಿ.ಸಿ.ಎಲ್ ವ್ಯಾಪ್ತಿ ಏನಿದೆ ಅದರಲ್ಲಿ ಹೆಚ್ಚು ಕಡಿಮೆ ಮುಕ್ಕಾಲು ಯೂನಿಟ್ ಅಷ್ಟು ಬೆನಿಫಿಟ್ ಆಗಿದೆ. ಇಂಟರ್‌ನಲ್ ಲೈನ್‌ಗಳು ಮೊದಲಿಗಿಂತಲೂ ಶೇ. 2 ರಷ್ಟು ಲಾಸ್ ಕಡಿಮೆ ಆಗಿದೆ. ಬಹುಶ: ರಾಜ್ಯದಲ್ಲಿ ನಮ್ಮ growth ಬಗ್ಗೆ ಕೇಂದ್ರ ಸರ್ಕಾರ ಮತ್ತು ಬೇರೆ ಕಡೆಗಳಲ್ಲಿ performance ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ನನ್ನ ಹತ್ತಿರ ಎಲ್ಲಾ ರೀತಿಯ ವಿವರವಾದ ಅಂಕಿಅಂಶಗಳಿದ್ದು, ಎರಡು ಗಂಟೆಗಳ ಕಾಲ ಬೇಕಾದರೂ ಮಾತನಾಡುತ್ತೇನೆ. I think, ಈ ವಿಚಾರವನ್ನು ತಮಗೆ ಹೇಳುತ್ತಿದ್ದೇನೆ. One of the best practices, ಮಾದರಿ ವಿದ್ಯುತ್ ಗ್ರಾಮ ಮಾಡಬೇಕೆನ್ನುವ ದೃಷ್ಟಿಯಿಂದಲೂ ಸಹ at least ಐದೈದು ಊರುಗಳನ್ನು ಸೆಲೆಕ್ಟ್ ಮಾಡಿಕೊಂಡು, ಅಲ್ಲಿಗೆ infrastructure ಕ್ರಿಯೆಟ್ ಮಾಡಲು ಬಜೆಟ್‌ನಲ್ಲಿ ತೋರಿಸಿದ್ದೇವೆ. 2012 ರಲ್ಲಿ 19 ಲಾಸ್ ಇತ್ತು. ಈಗ 2.21 ಕಡಿಮೆ ಆಗಿ 2016-17 ಕ್ಕೆ 17.7 ಕ್ಕೆ ನಿಂತಿದೆ. ಇದು overall loss ತೋರಿಸುತ್ತದೆ. KPTCL and HESCOM ಗಳಲ್ಲಿ ಬೇರೆ ಬೇರೆ ಇದ್ದು ವ್ಯತ್ಯಾಸ ಇರುತ್ತದೆ. ಒಟ್ಟಾರೆಯಾಗಿ ನಾನು ಹೇಳುತ್ತಿದ್ದೇನೆ. Model Sub division programme ಅನ್ನು ಸಹ ತೆಗೆದುಕೊಂಡಿದ್ದೇವೆ. Any

time payment counter ಮಾಡಿದ್ದು, ಬೆಸ್ಕಾಂ ನಲ್ಲಿ ಈಗಾಗಲೇ 215 new ATP ಗಳನ್ನು ಮಾಡಿದ್ದೇವೆ. ನಾವು ಟ್ರಾನ್ಸ್‌ಫಾರ್ಮರ್ ವಿಚಾರವನ್ನು ಮಾತನಾಡುತ್ತಿದ್ದು, ಬೆಂಗಳೂರು ಸಿಟಿಯಲ್ಲಿರುವಂತಹ ಎಲ್ಲಾ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಬೇಕೆಂದು ಕೋರ್ಟಿನಿಂದ ಆದೇಶ ಬಂತು. ಏಕೆಂದರೆ ಇದರಿಂದ ಎಲ್ಲಾ ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. I think ಬೆಂಗಳೂರು ನಗರದಲ್ಲಿರುವ ಎಲ್ಲಾ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಬೇಕೆಂದು we have decided to take it up. ಈಗಾಗಲೇ ಇದಕ್ಕೆ ಸಂಬಂಧಿಸಿದಂತೆ ಪ್ರಪೋಸಲ್ ಮಾಡಿ, ಟೆಂಡರ್ ಸಹ ಕರೆದಿದ್ದು, ಪ್ರಾರಂಭ ಕೂಡ ಮಾಡಲಾಗಿದೆ. ಹೈಕೋರ್ಟ್ ಆದೇಶ ಕೊಟ್ಟಿರುವಂತೆ ಬೆಂಗಳೂರಿನಲ್ಲಿ ಮಾಡಲಾಗಿದೆ. ಬೆಂಗಳೂರು ನಗರ ಬಹಳ ಗೌರವದಂತಹ ಸ್ಥಾನವನ್ನು ಹೊಂದಿದೆ. ಇಡೀ ವಿಶ್ವ ನಮ್ಮನ್ನು ನೋಡುತ್ತಿದೆ. ಹಾಗಾಗಿ ನಾವು ದೊಡ್ಡದಾದೊಂದು ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ ಪ್ರಿಪೇಡ್ ಮೀಟರ್‌ಗಳನ್ನು ಅಳವಡಿಸುವ ಬಗ್ಗೆಯೂ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಇವುಗಳ ಜೊತೆಗೆ ಇನ್ನೂ ಒಂದು ಹೊಸ ಹೆಜ್ಜೆಯನ್ನಿಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಮುಂದಿನ ದಿನಗಳಲ್ಲಿ electric vehicles ಬರುತ್ತವೆ. ಸ್ಕೂಟರ್, ಕಾರುಗಳು ಬೇರೆ ಎಲ್ಲವೂ ಎಲೆಕ್ಟ್ರಿಕ್‌ನಲ್ಲಿ ಬರುತ್ತವೆ. ಈ ವಾಹನಗಳನ್ನು recharge ಮಾಡುವುದಕ್ಕೆ ಸ್ಟೇಷನ್ ಗಳನ್ನು ಯಾವ ರೀತಿ ಮಾಡಬೇಕೆಂದು ಮತ್ತು ಇದಕ್ಕೆ ಸಂಬಂಧಿಸಿದಂತೆ ಪಾಲಿಸಿಯನ್ನು ಮಾಡಬೇಕೆಂದು ಹೊರಟಿದ್ದೇವೆ. Electric Vehicle ಗಳಿಗೆ ಚಾರ್ಜ್ ಮಾಡುವ ಸಲುವಾಗಿ infrastructure create ಮಾಡುವುದಕ್ಕೆ ಹೊಸ ಪಾಲಿಸಿ ಮಾಡಬೇಕೆಂದು ಹೊರಟಿದ್ದೇವೆ.

(ಮುಂದು . . .)

ವಿಸಿ::19.06.2017.08.20.(55).ಜಿಎಂ.ವಿಜಿ.

ಶ್ರೀ ಡಿ.ಕೆ.ಶಿವಕುಮಾರ್ (ಮುಂದುವರೆದುದು. . . . .):

19-06-2017

ಇಡೀ ನಮ್ಮ ದೇಶದಲ್ಲಿ ಎಲ್ಲಿಯೂ ಇದು ಪ್ರಾರಂಭವಾಗಿಲ್ಲ. ಮುಂದಕ್ಕೆ ಇದರಿಂದ ನಮಗೆ ಡೀಸೆಲ್, ಪೆಟ್ರೋಲ್ ಉಪಯೋಗ ಕಡಿಮೆಯಾಗುತ್ತದೆ, ಬೆಲೆ ಕಡಿಮೆಯಾಗುತ್ತದೆ. Electric recharge ಆಗಿರುವುದರಿಂದ ಅಷ್ಟೊಂದು costly ಆಗುವುದಿಲ್ಲ. ಹೊರಗಡೆ ದೇಶದಲ್ಲಿ ಈಗಾಗಲೇ ಬಂದಿದೆ. Pollution control ಆಗುತ್ತದೆ. ಇದಕ್ಕೆ ಅಲ್ಲಲ್ಲೇ charging ಜಾಗಗಳಾಗಬೇಕು. Electrical ಬಸ್‌ಗಳು ಸಹ ಬಂದು ಬಿಟ್ಟಿವೆ. 2020ಕ್ಕೆ ಇದನ್ನು ತರುವ ಕುರಿತು ದೊಡ್ಡ ಚಿಂತನೆ ನಡೆಯುತ್ತಿದೆ. ನಾವು ಇದರ ಬಗ್ಗೆ ಒಂದು ರಿಪೋರ್ಟ್‌ನ್ನು ಸಹ ತರಿಸಿಕೊಂಡಿದ್ದೇವೆ. ಒಂದು ಹೊಸ ಪಾಲಿಸಿ ತರುತ್ತಿದ್ದೇವೆ. ಇದಕ್ಕೆ ಬೇಕಾದಷ್ಟು stake holdersಗಳ suggestionsನ್ನೆಲ್ಲಾ ಕೇಳಬೇಕೆಂದು ತೀರ್ಮಾನ ಮಾಡಿದ್ದೇವೆ. This will be the.., ನಮ್ಮ ಕರ್ನಾಟಕದ ಈ ವರ್ಷದ ದೊಡ್ಡ ಪ್ರಾರಂಭ ಇದು. ಪ್ರಾರಂಭ ಮಾಡಬೇಕಾದರೆ ಎಲ್ಲಾದರೂ ಒಂದು ಕಡೆ ಶುರು ಆಗಬೇಕು. ನಮ್ಮ ರಾಜ್ಯದಿಂದಲೇ ಇದನ್ನು ತೆಗೆದುಕೊಳ್ಳಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಈ ಸಂಬಂಧವಾಗಿ ಅನೇಕ ಮೀಟಿಂಗ್‌ಗಳನ್ನು ಮಾಡಿದ್ದು, ಆದಷ್ಟು ಬೇಗ ಇನ್ನು 4-5 ತಿಂಗಳುಗಳಲ್ಲಿ ಈ ಪಾಲಿಸಿಯನ್ನು frame ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ನಾನು ಮಾಡುತ್ತೇನೆ. ಎಲ್ಲಾ ಶಾಸಕರೂ ಪಾರ್ಟಿ, ಪಕ್ಷ ಎನ್ನದೆ ಏನೇ suggestions ಇದ್ದರೂ ನೀಡಬೇಕೆಂದು ಕೋರುತ್ತಿದ್ದೇನೆ. ಎಲ್ಲರಿಗೂ ಒಂದು message ಹೋಗಬೇಕು, ಎಲ್ಲರಿಗೂ equal, ಕೇವಲ ಕಾಂಗ್ರೆಸ್ ಪಕ್ಷಕ್ಕೆ ಒಂದು ರೀತಿ, ಬಿಜೆಪಿ ಪಕ್ಷಕ್ಕೆ ಒಂದು ರೀತಿ ಮಾಡುವುದು ಅಧ್ಯಾವದೂ ಇಲ್ಲ. ಎಲ್ಲಾ ಗ್ರಾಹಕರೂ ಇಲ್ಲಿ ಒಂದೇ. ಎಲ್ಲರೂ ಸಹ ಚೆನ್ನಾಗಿ ರಬೇಕೆನ್ನುವುದೇ ನಮ್ಮ ಉದ್ದೇಶ. ಆದಷ್ಟು ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುವಂಥ ಕೆಲಸವನ್ನು ನಾವು ಮಾಡುತ್ತೇವೆ. ಯಾರು ಬರುತ್ತಾರೆ, ಅವರಿಗೆ ಏನೇನು ಕೊಡಬೇಕು, ಈಗಾಗಲೇ 20 ಮೆಗಾ ವ್ಯಾಟ್‌ಗಳನ್ನು irrespective ಆಗಿ ಎಲ್ಲರಿಗೂ ನಾನು ಹಂಚಿದ್ದೇನೆ. ಅವರ ಕ್ಷೇತ್ರದಲ್ಲಿ ನಾನೂ ಸಹ ನಮ್ಮ ತಾಲ್ಲೂಕಿಗೆ 20 ಮೆಗಾ ವ್ಯಾಟ್ ಮಾಡಿಸಿಕೊಂಡು ಬಂದಿದ್ದೇನಪ್ಪ ನಮ್ಮ ಮಂತ್ರಿಯಿಂದ ಎಂದು ಹೇಳಿಕೊಳ್ಳುವ ಧೈರ್ಯ ಬರಲಿ, political mileage ಅವರೂ ಕೂಡ ತೆಗೆದುಕೊಳ್ಳಲಿ ಎನ್ನುವ ದೃಷ್ಟಿಯಿಂದ ಹೊಸ ಅಧ್ಯಾಯಕ್ಕೆ ಹೋಗಿದ್ದೇವೆ. ನಮ್ಮನ್ನು ನೋಡಿ

ಇಡೀ ರಾಷ್ಟ್ರ, Karnataka is the best in solar policy ಎಂದು ನಮಗೆ ಬೇಕಾದಷ್ಟು ಜನ ಪ್ರಶಸ್ತಿಯನ್ನು, ಗೌರವವನ್ನು ಕೊಟ್ಟಿದ್ದಾರೆ. ನಾವು ಇನ್ನೂ ಅನೇಕ ವಿಚಾರಗಳಿಗೆ ಹೋಗಿದ್ದೇವೆ. Net metering ಬಗ್ಗೆ ಬೇರೆ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಹಂಚಿಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಜೊತೆಗೆ ಕೆಲವರು in timeನಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. Hydel sector, solar, wind, transmissionನಲ್ಲಿ ನಮ್ಮ ಕಂಪನಿಗಳಲ್ಲಿ, ಕೆಲವು ಆಫೀಸರ್ಸ್ ಎಲ್ಲರೂ ಒಳ್ಳೆಯ ಕೆಲಸ ಮಾಡಿದ್ದಾರೆ. ಈ ವರ್ಷದಿಂದ ಅವರನ್ನೆಲ್ಲಾ ಕರೆದು ಗೌರವ ಸೂಚಿಸಿ recognition ನೀಡಿ ಅವಾರ್ಡ್ ಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಈ ವರ್ಷದಿಂದ for all best performersಗೆ ಅವಾರ್ಡ್‌ಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಈಗಾಗಲೇ ಯಾರ್ಯಾರಿಗೆ ಕೊಡಬೇಕು, ಏನು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಅದಕ್ಕಾಗಿ KPTCL MDಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿದ್ದೇವೆ. ಅವರು ಸೆಲೆಕ್ಟ್ ಮಾಡುತ್ತಿದ್ದಾರೆ. ಎಲ್ಲರಿಗೂ encourage ಮಾಡಬೇಕು ಹಾಗೂ ಶ್ರಮ ಪಟ್ಟವನಿಗೆ ಗೌರವ ಕೊಡಬೇಕು ಎನ್ನುವ ದೃಷ್ಟಿಯಿಂದ ಅವಾರ್ಡ್‌ನ್ನು ಕೊಡುವ ಕೆಲಸವನ್ನು ಮಾಡುತ್ತಿದ್ದೇವೆ. ಈಗ ಸದ್ಯಕ್ಕೆ ಈ ರಾಜ್ಯದಲ್ಲಿ ವಿದ್ಯುತ್ ಸಮಸ್ಯೆ ಎಷ್ಟೇ ಕಷ್ಟವಿದ್ದರೂ ಸಹ manage ಮಾಡಿದ್ದೇವೆ. ಮುಂದಕ್ಕೂ ಮಾಡುತ್ತೇವೆ. ಹೆದರುವ ಅವಶ್ಯಕತೆಯಿಲ್ಲ. ನಮ್ಮ ಜನ ವಿಶ್ವಾಸವನ್ನಿಟ್ಟಿದ್ದಾರೆ, ಆ ನಂಬಿಕೆಯನ್ನು ಉಳಿಸಿಕೊಳ್ಳುವುದಕ್ಕೆ ಬಹಳ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದಕ್ಕೆ ನಿಮ್ಮ ಸಹಕಾರವೂ ಸಹ ಬೇಕು.

ಡಾ:ಎಸ್.ಶಿವರಾಜ್ ಪಾಟೀಲ್: ಸರ್, ತಮ್ಮ ಮಾತುಗಳನ್ನು ಮುಕ್ತಾಯ ಮಾಡುವುದಕ್ಕಿಂತ ಮುಂಚೆ ಒಂದು ನಿಮಿಷ ಮಾತನಾಡುತ್ತೇನೆ. ತಾವು ಬಂದ ನಂತರ ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡಿದ್ದೀರಿ. ಇದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕೆ ಮುಖ್ಯ ಕಾರಣ ನಮ್ಮ ರಾಯಚೂರು ತಾಲ್ಲೂಕಿನ ಜನರು. ಇವತ್ತು 2 plantಗಳನ್ನು ನಮ್ಮ ರಾಯಚೂರಿನಲ್ಲಿ ತಾವು ಮಾಡಿದ್ದೀರಿ. ಯಾವ ರೈತರು ಭೂಮಿಯನ್ನು ಕೊಟ್ಟಿದ್ದಾರೆ, ಅವರು ಇವತ್ತು ಬೀದಿಗೆ ಬಂದು ಊಟ, ಬಟ್ಟೆ ಇಲ್ಲದಂತೆ ತಿರುಗಾಡುತ್ತಿದ್ದಾರೆ. ಕನಿಷ್ಠ YTPS ಸಲುವಾಗಿ, ನಾನು ಶಾಸಕನಾದ ಮೇಲೆ 4

ವರ್ಷವಾಯಿತು. ಕನಿಷ್ಠ 100 ಬಾರಿ ಕೆಪಿಸಿ ಕಛೇರಿಗೆ ಹೋಗಿದ್ದೇನೆ. ತಮ್ಮ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಒಂದು ಮೀಟಿಂಗ್ ಆಯಿತು. ಎಲ್ಲಾ ಸಮಸ್ಯೆಗಳನ್ನೂ ಬಗೆಹರಿಸುತ್ತೇವೆಂದು ಹೇಳಿದಿರಿ. ಆದರೆ, ಇದುವರೆಗೂ ಸಮಸ್ಯೆಗಳು ಬಗೆಹರಿದಿಲ್ಲ. ಅಲ್ಲಿ ರೈತರು ಕೊಟ್ಟಿರುವಂಥ ಒಂದೊಂದು ಎಕರೆ ಒಂದೊಂದು ಕೋಟಿಯಷ್ಟು ಬೆಲೆ ಬಾಳುತ್ತದೆ. ರೈತರಿಗೆ 30,000 ರೂಪಾಯಿಗಳಿಂದ 60,000 ರೂಪಾಯಿಗಳವರೆಗೆ ಮಾತ್ರ ಕೊಟ್ಟಿದ್ದಾರೆ. ಆದರೂ ಇವತ್ತು 519 ಜನರಿಗೆ ನೌಕರಿ ಕೊಡಬೇಕಾಗಿತ್ತು. ಈವರೆಗೂ ನೌಕರಿ ಕೊಟ್ಟಿಲ್ಲ. ಉತ್ಪಾದನೆ ಮಾಡುವುದಕ್ಕೆ ಯಾವ್ಯಾವ ಜನರು ಸಹಕಾರ ಮಾಡಿದ್ದಾರೋ, ಅವರನ್ನೂ ತಾವು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಇದಲ್ಲದೆ, ಮತ್ತೊಂದು ವಿಚಾರವಿದೆ. ನಾವು ಮತ್ತು ನಮ್ಮ ಗ್ರಾಮೀಣ ಭಾಗದ ಶಾಸಕರು strike ಮಾಡಿದ್ದೇವೆ. ರಾಯಚೂರಿಗೆ ಹೊಂದಿಕೊಂಡಂತೆ 2 plant ಇದೆ. ನಮ್ಮಲ್ಲಿ ಬೇಸಿಗೆ ಮತ್ತು ಮಳೆಗಾಲ ಮಾತ್ರ ಇದೆ, ಚಳಿಗಾಲವೇ ಇಲ್ಲ. ವೈಟಿಪಿಎಸ್ ಮತ್ತು ಕೆಪಿಸಿ ಸಲುವಾಗಿ ಪ್ರತಿ ಬೇಸಿಗೆಯಲ್ಲಿ 47 ರಿಂದ 48 ಡಿಗ್ರಿ temperature ಬರುತ್ತದೆ. ನಾವು 24 ಗಂಟೆಗಳ ಕಾಲ ಕರೆಂಟ್ ಕೊಡಬೇಕೆಂದು ಮಂತ್ರಿಗಳಿಗೆ ಆಗ್ರಹ ಮಾಡಿದ್ದೇವೆ. ಮಂತ್ರಿಗಳ ನೇತೃತ್ವದಲ್ಲಿ ಮೀಟಿಂಗ್ ಸಹ ಮಾಡಿದ್ದಾರೆ. ಉಸ್ತುವಾರಿ ಮಂತ್ರಿಗಳು ಜನವರಿ 26ರಂದು ನಾವು 24 ಗಂಟೆ ವಿದ್ಯುತ್ ಕೊಡುತ್ತೇವೆಂದು announce ಮಾಡಿದರು. ಆದರೆ, ಇದುವರೆಗೆ ಯಾವುದೇ ಕಮ್ಮ ಕೈಗೊಂಡಿಲ್ಲ. ದಯಮಾಡಿ, ರಾಯಚೂರು ತಾಲ್ಲೂಕಿಗೊಂದು special preference ಕೊಡಬೇಕು. ಇವತ್ತು ಉತ್ಪಾದನೆಯಲ್ಲಿ ರಾಯಚೂರು ತಾಲ್ಲೂಕಿನ ಪಾತ್ರ ಹೆಚ್ಚಾಗಿದೆಯೆಂದು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಈ ನನ್ನ ಬೇಡಿಕೆಗೆ ಎಲ್ಲರೂ ಅನುಮೋದನೆ ಕೊಡಬೇಕು ಹಾಗೂ ನಮ್ಮ ವಿಚಾರಗಳಿಗೆ ಎಲ್ಲರೂ ಸಹಮತ ವ್ಯಕ್ತಪಡಿಸಬೇಕು. ಡಾ:ಶಿವರಾಜ್‌ರವರು Yermarusನಲ್ಲಿ land losersಗೆ ಕೆಲಸ ಕೊಡಬೇಕೆಂದು ಹೇಳಿದ್ದಾರೆ. ನಾವು ನೂರು ಜನರಿಗೆ ಕೊಟ್ಟಿದ್ದೇವೆ. ಸಮಸ್ಯೆ ಏನಾಗುತ್ತಿದೆಯೆಂದರೆ ಸ್ವಲ್ಪ expansion ಮಾಡುವಂಥ ಸಂದರ್ಭದಲ್ಲಿ ನಾವು ಏನು Yermarus ಗೆ ತೆಗೆದುಕೊಳ್ಳಬೇಕೆಂದು ಇದ್ದೆವೋ ಅವರೆಲ್ಲರಿಗೂ ಸಹ ಕೊಟ್ಟುಬಿಟ್ಟಿದ್ದೇವೆ. ಕೆಲವು documentations ಸರಿ ಇಲ್ಲ. ಜಮೀನು ತೆಗೆದುಕೊಂಡಾಗ

ಒಬ್ಬನ ಹೆಸರಿನಲ್ಲಿ ಜಮೀನು ಇರುತ್ತದೆ. ನೋಟಿಫೀಕೇಷನ್ ಆಯಿತೆಂದರೆ ಮತ್ತೆ ಅವರು claim ಮಾಡುವಾಗ 10 ಜನ ಅಣ್ಣ - ತಮ್ಮಂದಿರ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ. ಈಗ ಹತ್ತು ಜನರೂ ಕೆಲಸ ಕೊಡಿ ಎಂದು ಕೇಳುತ್ತಿದ್ದಾರೆ. ಇದೊಂದು ಸಮಸ್ಯೆಯಾಗಿದೆ. ಎರಡನೆಯದಾಗಿ, KIADBಯವರು ಬೇರೆ ಕಾರಣಕ್ಕಾಗಿ ಭೂಮಿ ಸ್ವಾಧೀನ ಪಡಿಸಿಕೊಂಡಿದ್ದಾರೆ. ನಮ್ಮ ಇಲಾಖೆಯ ವಿಚಾರಕ್ಕಾಗಿ ಅಲ್ಲ. ಈ ವಿಚಾರ ಶಿವರಾಜ್‌ರವರಿಗೂ ಗೊತ್ತಿದೆ. ಬೇರೆ ಉದ್ದೇಶಕ್ಕೆ ಭೂಸ್ವಾಧೀನ ಮಾಡಿಕೊಂಡಿರುವಾಗ ನಾವು ಹೇಗೆ ನೌಕರಿಗೆ ಕೊಡುವುದಕ್ಕೆ ಆಗುತ್ತದೆ? ನಮಗೆ ನೀವು ಕೆಲಸ ಕೊಡಿ ಎಂದು ಕೇಳುತ್ತಿದ್ದಾರೆ. ನಮ್ಮ Yermarus ಗೋಸ್ಕರ ನಾವು acquisition ಮಾಡಿಕೊಂಡಿದ್ದರೆ yes, we are committed, ಅದರಲ್ಲಿ ನಮ್ಮದೇನೂ ತಕರಾರಿಲ್ಲ. ನಾವು ಬೇರೆಯವರಿಗೋಸ್ಕರ acquisition ಮಾಡಿಕೊಂಡು, ಅವರೇನೂ ಮಾಡುವುದಕ್ಕಾಗುವುದಿಲ್ಲವೆಂದು ಕೊನೆಗೂ ಯಾರೋ ಬೇರೆಯವರಿಗೆ ಮಾರಿಕೊಂಡಿದ್ದಾರೆ. ಮಾರಿರುವುದನ್ನು ನೀವು ಉಪಯೋಗಿಸಿಕೊಳ್ಳುತ್ತಿರುವುದರಿಂದ ಕೊಡಿ ಎಂದು ಕೇಳುತ್ತಿದ್ದಾರೆ. ಬೇರೆ ಉದ್ದೇಶಕ್ಕಾಗಿ ಜಮೀನು ಕೊಟ್ಟಿರುವವರು ನಮ್ಮ ಬಳಿ ಕೆಲಸ ಕೇಳಿದರೆ ಆಗುತ್ತದೆಯೇ? Still ಅವರಿಗೆ ಏನಾದರೂ ಮಾಡಿ ನಾವು ಸಹಾಯ ಮಾಡುವುದಕ್ಕೆ ಸಾಧ್ಯವಾಗಬಹುದೇ, ಹಾಗಾದರೆ ಹೇಗೆ ಸಹಾಯ ಮಾಡುವುದಕ್ಕೆ ಸಾಧ್ಯ expansion ಮಾಡಬಹುದೇ? ಈಗ ಅಲ್ಲಿ ಲೇಟ್ ಆಗಿ, ಡಿಲೇ ಆಗಿ ವಿದ್ಯುತ್‌ನ cost of production 5 ರೂಪಾಯಿ 90 ಪೈಸೆ ಆಗುತ್ತಿದೆ. ನಾನು ಮತ್ತು ರಮೇಶ್‌ಕುಮಾರ್‌ರವರು ಗುಜರಾತ್‌ಗೆ ಹೋಗಿದ್ದೆವು. ಅಲ್ಲಿ ಕೇವಲ 1,000 ಜನ ಮಾತ್ರ ಕೆಲಸ ಮಾಡುತ್ತಿದ್ದಾರೆ. ಇಡೀ ಪ್ಲಾಂಟ್‌ನ್ನು ನೋಡಲು ಜನರೇ ಇಲ್ಲ. ನಮ್ಮಲ್ಲಿ 1,100 ಜನ regular employees ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಅದಕ್ಕಿಂತಲೂ ಕಡಿಮೆ capacityಯಿದೆ. ನಾವು ಅವರಿಗೆ ಸಂಬಳ ಕೊಡಬೇಕಾಗುತ್ತದೆ. ಯಾರಿಗೂ ಅಲ್ಲಿ ಹೋಗಿ ಕೆಲಸ ಮಾಡಲು ಇಷ್ಟವಿಲ್ಲ. ಎಲ್ಲರಿಗೂ ಬೆಂಗಳೂರೇ ಬೇಕಾಗಿದೆ. ಅದನ್ನೆಲ್ಲಾ ಹೇಳುತ್ತಾ ಹೋದರೆ ದೊಡ್ಡ ಸಮಸ್ಯೆಯಿದೆ. ಹೆಚ್ಚು ಚರ್ಚೆ ಬೇಡ.

ಡಾ:ಎಸ್.ಶಿವರಾಜ್ ಪಾಟೀಲ್ : ಒಂದೇ ಒಂದು ಪ್ರಶ್ನೆ ಕೇಳುತ್ತೇನೆ. ಸರ್, ತಾವು ಹೇಳುತ್ತಿದ್ದೀರಿ, ಒಬ್ಬೊಬ್ಬರು ತಮ್ಮ 30 ಎಕರೆ ಜಮೀನನ್ನು ಕೊಟ್ಟಿದ್ದಾರೆ. ತಾವು ಸ್ವಾಧೀನ

ಮಾಡಿಕೊಂಡಾಗ ಒಬ್ಬ ಯಜಮಾನ ಇದ್ದನು. ಆ ಮಕ್ಕಳೆಲ್ಲರೂ ವಯಸ್ಸಿಗೆ ಬಂದಂಥ ಹುಡುಗರೇ ಇದ್ದಾರೆ. ಈಗ compensation ಕೊಡಬೇಕಾದರೆ individual ಹುಡುಗರಿಗೆ ಕೊಟ್ಟಿದ್ದೀರಿ. ನಾವು ಕೇಳುವುದಿಷ್ಟೆ, ಯಾವ ಹುಡುಗನಿಗೆ ನೀವು ಚೆಕ್ ಕೊಟ್ಟಿದ್ದೀರೋ, ಆ ಹುಡುಗನಿಗೆ ನೀವು ನೌಕರಿಯನ್ನು ಕೊಡಿ. ಅವರು ಖಾತಾ different ಮಾಡಿಕೊಂಡಿದ್ದಾರೆ. ಯಾರೂ ಬೇರೆಯವರಿಗೆ ಮಾರಿಕೊಂಡಿಲ್ಲ. ಅವರ ಮನೆಯ ಮಕ್ಕಳು division ಆಗಬೇಕಾದರೆ ಅವರ ಹಕ್ಕಿನ ಪ್ರಕಾರ ಖಾತೆ ಮಾಡಿಸಿಕೊಂಡಿದ್ದಾರೆ. ಬೇರೆ third party ಯಾರೂ ಮಾಡಿಸಿಲ್ಲ. ತಂದೆಯವರು ಮಕ್ಕಳ ಹೆಸರಿಗೆ ಮಾಡಿದ್ದಾರೆ.

ಶ್ರೀ ಡಿ.ಕೆ.ಶಿವಕುಮಾರ್: ಆ ರೀತಿ ಬರುವುದಿಲ್ಲಪ್ಪ, ಹಾಗೆಂದು ಒಂದು ಕುಟುಂಬದಲ್ಲಿ 4 ಜನರಿಗೆ ಕೆಲಸ ಕೊಡುವುದಕ್ಕೆ ಆಗುತ್ತದೆಯೇ?

ಡಾ:ಎಸ್.ಶಿವರಾಜ್ ಪಾಟೀಲ್: ಯಾರಿಗೆ ಚೆಕ್ ಕೊಟ್ಟಿದ್ದೀರಲ್ಲವೆ. . . . ತಾವು ಚೆಕ್‌ನ್ನು ಏತಕ್ಕಾಗಿ ಕೊಟ್ಟಿದ್ದೀರಿ ಸಾರ್? ಅವನು ಭೂ ಸಂತ್ರಸ್ತ ಎಂದು ಹೇಳಿ ಅವನ ಹೆಸರಿಗೆ ಚೆಕ್ ಕೊಟ್ಟಿದ್ದೀರಿ. ಚೆಕ್ ಅವನ ಹೆಸರಿಗೆ ಕೊಟ್ಟಿದ್ದೀರೆಂದರೆ ಅವನ ಭೂಮಿ ಎಂದು ಅಲ್ಲವೆ, ಆಗ ಅದು ಅವನ ಹಕ್ಕಾಗುವುದಿಲ್ಲವೆ? ಹಾಗಾದರೆ ನೀವು ಒಂದೇ ಚೆಕ್‌ನ್ನು ಕೊಡಬೇಕಾಗಿತ್ತು. ಮಕ್ಕಳಿಗೆಲ್ಲಾ ಏತಕ್ಕಾಗಿ ಚೆಕ್ ಕೊಟ್ಟಿದ್ದೀರಿ? ನೀವು ಯಾರ ಹೆಸರಿಗೆ ಚೆಕ್ ಕೊಟ್ಟಿದ್ದೀರೋ ಅವರಿಗೆ ನೌಕರಿ ಕೊಡಿ ಎಂದು ನಾವು ಕೇಳುತ್ತಿದ್ದೇವಷ್ಟೆ. ಬೇರೆ ಏನೂ ಇಲ್ಲ. ತಾವು ಮೀಟಿಂಗ್ ಮಾಡಿದಾಗ ನೀವು ಕೊಡುವ ಲಿಸ್ಟ್ ಪ್ರಕಾರ ನೌಕರಿ ಕೊಡುತ್ತೇವೆಂದು Deputy Commissionerಗೆ authorize ಮಾಡಿದ್ದೀರಿ. Deputy Commissioner ಏನು ಲಿಸ್ಟ್ ಕಳುಹಿಸಿದ್ದಾರೆಯೋ ಅದರ ಪ್ರಕಾರ ನೌಕರಿ ಕೊಡಿ. ನಿಮ್ಮ Deputy Commissionerರವರಂತೂ ಸರ್ಕಾರದವರಲ್ಲವೆ ಸಾರ್, ಅವರು ನಮ್ಮ ಮಾತನ್ನೂ ಕೇಳುವಂತೆ ಇಲ್ಲ. Deputy Commissionerರವರು ಕೊಟ್ಟಿರುವ ಲಿಸ್ಟ್‌ನಂತೆ ನೌಕರಿ ಕೊಡಿ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ನಮ್ಮ ಲೋಕಸಭಾ ನಾಯಕರಾದ ಪಿ.ವಿ.ನಾಯಕ್‌ರವರು ನಮ್ಮ ಮುಖ್ಯಮಂತ್ರಿಗಳಿಗೆ ಹೇಳಿ, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿಯೇ

19-06-2017

ಇದಕ್ಕೇನಾದರೂ ಒಂದು ಪರಿಹಾರ ಮಾಡಬೇಕೆಂದು ಮೀಟಿಂಗ್ ಮಾಡಿದ್ದೇವೆ. ಆದರೂ ಸಹ ನಾವು lenient ಆಗಿ view ಮಾಡುತ್ತಿದ್ದೇವೆ. ಮತ್ತೆ ಇವರನ್ನೂ ಕರೆಸಿ ನಾನು ಮಾತನಾಡುತ್ತೇನೆ. 24 ಗಂಟೆಗಳ ಕಾಲ ವಿದ್ಯುತ್ ನೀಡಿ ಎಂದು ಕೇಳುತ್ತಿದ್ದಾರೆ. Let us see.

ಡಾ:ಎಸ್.ಶಿವರಾಜ್ ಪಾಟೀಲ್: ದಯಮಾಡಿ 24 ಗಂಟೆಗಳ ಕಾಲ ವಿದ್ಯುತ್ ನೀಡಿ. ದಯವಿಟ್ಟು ನಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಿ.

ಶ್ರೀ ಡಿ.ಕೆ.ಶಿವಕುಮಾರ್: 24 hours ನಾನು ನಿಮಗೆ available ಇದ್ದೇನೆ.

ಡಾ:ಎಸ್.ಶಿವರಾಜ್ ಪಾಟೀಲ್: ಮಾನ್ಯ ಸಚಿವರೆ, ಅಲ್ಲಿ ನಮಗೆ ಬಹಳ ಕಷ್ಟವಾಗುತ್ತಿದೆ, ಅದೊಂದು ನಮಗೆ ಮಾಡಿಕೊಟ್ಟು ಬಿಡಿ. ಜಿಲ್ಲಾ ಉಸ್ತುವಾರಿ ಮಂತ್ರಿಗಳೆ, ಜನವರಿ 26ರಂದು ತಾವು ಭಾಷಣದಲ್ಲಿ ಹೇಳಿದ್ದೀರಿ. ತಾವು ಸ್ವಲ್ಪ ಧ್ವನಿಗೂಡಿಸಿ, ದಯಮಾಡಿ ಮಾತನಾಡಿ ಈ ಸದನದಲ್ಲಿ ಹೇಳಿ. ತಾವು ರಾಯಚೂರಿನ ಜನರಿಗೆ ಮಾತು ಕೊಟ್ಟಿದ್ದೀರಿ.

ಅಧ್ಯಕ್ಷರು: ಡಾಕ್ಟರೆ, ತಮ್ಮ ಬೇಡಿಕೆಯನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತಾರೆ.

(ಮುಂದುವರೆದಿದೆ)

19.06.2017 / 08.30 (56) MPL-VG

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ತಾವು ಈಗ 120 ತಾಲ್ಲೂಕುಗಳಿಗೆ 20 ಮೆಗಾ ವ್ಯಾಟ್ ಕೊಟ್ಟಿರುವುದಾಗಿ ಹೇಳಿದಿರಿ. ಆದರೆ ನಮ್ಮ ಮಲೆನಾಡು ಭಾಗದಲ್ಲಿ ಕೊಟ್ಟಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್ : ಮಲೆನಾಡು ಭಾಗದಲ್ಲಿ ವಿದ್ಯುತ್ ಕೊಟ್ಟಿಲ್ಲ ಎಂದು ಹೇಳಿದೆನಲ್ಲ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಕೊಡಿ ಎಂದು ನಾನು ಕೇಳುತ್ತಿದ್ದೇನೆ. ಎರಡನೆಯದಾಗಿ, ಲೈನ್‌ಮೆನ್‌ಗಳು ಕೊರತೆ. ಮಲೆನಾಡಿನಲ್ಲಿ ಸಕಲೇಶಪುರ ತಾಲ್ಲೂಕಿನಲ್ಲಿ ಲೈನ್‌ಮೆನ್ ಹುದ್ದೆಗಳು ಖಾಲಿಯಿವೆ. ಆ ಕಡೆ ಹಾಕಿ. Section Officers, J.E ಗಳ ಹುದ್ದೆ ನನ್ನ ಕ್ಷೇತ್ರದಲ್ಲಿ ಮೂರು ಹುದ್ದೆಗಳು ಖಾಲಿಯಿವೆ. 1912 phone ಬಗ್ಗೆ ತಾವು ಹೇಳಿದಿರಿ. ನಾವು ನಿಮ್ಮ Section Officersಗೆ ಯಾವಾಗ ಫೋನ್ ಮಾಡಿದರೂ ಸಹ out of coverage area ಎಂದು ಬರುತ್ತದೆ. ಅವರು ಯಾರ ಫೋನ್ ಕೂಡ ಎತ್ತುವುದಿಲ್ಲ. ಈ ಸಾರಿ ಮಳೆ ಬಂದರೆ ಸಾವಿರಾರು ಕಂಬಳು ಬೀಳುತ್ತವೆ. ಅದಕ್ಕೆ ಲೈನ್‌ಮೆನ್‌ಗಳನ್ನು ಕೊಡಿ.

19-06-2017

ಶ್ರೀ ಡಿ.ಕೆ.ಶಿವಕುಮಾರ್ : ಒಂದು ಕೆಲಸ ಮಾಡಿ. ಅಧ್ಯಕ್ಷರು permission ಕೊಟ್ಟರೆ ನಾನು ನಿಮಗೆ ಫೋನ್ ಕೊಡುತ್ತೇನೆ. ಇಲ್ಲ ನಿಮ್ಮ ಫೋನಿನಿಂದಲೇ 1912 ಗೆ dial ಮಾಡಿ. ಎತ್ತುತ್ತಾರೋ, ಇಲ್ಲವೋ ನೋಡಿ ನೀವು. Just ಇಲ್ಲಿಂದಲೇ dial ಮಾಡಿ ನೀವು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಆಯಿತು ನೀವು ಉತ್ತರ ಹೇಳಿದ ಮೇಲೆ dial ಮಾಡುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್ : ಇಲ್ಲಿಂದಲೇ dial ಮಾಡಿ ನೀವು. I have confidence with my team.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ತಾವು ಹೇಳಿದಿರಲ್ಲ, ಆಯಿತು. ನನ್ನ ಮೊಬೈಲಿನಿಂದ ನಾನು dial ಮಾಡಿದ್ದೇನಪ್ಪ.

ಶ್ರೀ ಡಿ.ಕೆ.ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಫೋನ್ ಮಾಡಲು permission ಕೊಡಿ.

ಅಧ್ಯಕ್ಷರು : ಇಲ್ಲಿ call connect ಆಗುವುದಿಲ್ಲ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಅವರ ಮೊಬೈಲಿಗೆ ಫೋನ್ ಮಾಡಿದ್ದೇನೆ.

ಶ್ರೀ ಡಿ.ಕೆ.ಶಿವಕುಮಾರ್ : I am so confident with my officers and my team. ಅಷ್ಟು perfect ಆಗಿ ಕೆಲಸ ಮಾಡುತ್ತಿದ್ದಾರೆ. ಕೆಲವು ಕಡೆ ಮಳೆ ಇದೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ನನ್ನ ಮೊಬೈಲ್ ನಂಬರಿನಿಂದ ಅವರ ಮೊಬೈಲಿಗೆ ಕಾಲ್ ಮಾಡಿದ್ದೇನೆ.

ಶ್ರೀ ಡಿ.ಕೆ.ಶಿವಕುಮಾರ್ : ನಾನು ಒಂದು ಮಾತನ್ನು ಹೇಳುತ್ತೇನೆ. Recruitment ವಿಚಾರದಲ್ಲಿ 30 ಸಾವಿರ ಹುದ್ದೆಗಳು ಖಾಲಿ ಇದ್ದವು ಕುಮಾರಸ್ವಾಮಿಯವರೆ. 21 ಸಾವಿರ ಹುದ್ದೆಗಳನ್ನು ನಾನು ಬಂದ ಮೇಲೆ ಭರ್ತಿ ಮಾಡಿದ್ದೇನೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಮಲೆನಾಡು ಭಾಗದಲ್ಲಿ ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲವಲ್ಲ.

ಶ್ರೀ ಡಿ.ಕೆ.ಶಿವಕುಮಾರ್ : ನಿಮ್ಮ MESCOM ನಲ್ಲಿ ಎಷ್ಟು ಲೈನ್‌ಮೆನ್ ಹುದ್ದೆಗಳಿದ್ದವು ಎಲ್ಲವನ್ನೂ fill up ಮಾಡಿದ್ದೇವೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಮಲೆನಾಡು ಭಾಗಕ್ಕೆ ಕೊಡಿ. ನಮ್ಮ ಕ್ಷೇತ್ರಗಳಿಗೆ ಕೊಡಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

19-06-2017

ಶ್ರೀ ಡಿ.ಕೆ.ಶಿವಕುಮಾರ್ : You please give me a list. ಎಲ್ಲಾ ಹುದ್ದೆಗಳನ್ನು ನಾಳೆ ಸಂಜೆಯಷ್ಟು ಹೊತ್ತಿಗೆ fill up ಮಾಡುತ್ತೇನೆ. I am ready to do that. You don't worry on this point.

ಶ್ರೀ ಬಿ.ಆರ್.ಯಾವಗಲ್ : ಮಾನ್ಯ ಅಧ್ಯಕ್ಷರೆ, ಸೋಲಾರ್ ಪಾರ್ಕ್ ಪಾವಗಡ ಭಾಗದಲ್ಲಿ ತಾವು ಮಾಡಿದ್ದೀರಿ. ನಾನು ನೋಡಿಲ್ಲ. ಆದರೆ ಬಹಳ ಚೆನ್ನಾಗಿದೆ ಎಂದು ಹೇಳುತ್ತಿದ್ದರು. ಅಂತಹದನ್ನು ನಮ್ಮ ಭಾಗದಲ್ಲಿ ಬಹಳಷ್ಟು ಬೇಡಿಕೆ ಇದೆ. ಒಣ ಪ್ರದೇಶದಲ್ಲಿ ಮಳೆ ಆಗುವುದಿಲ್ಲ. ಜನರು ಬಯಸುತ್ತಾರೆ. ಅಂತಹ ಪಾರ್ಕ್‌ಗಳನ್ನು ತಾವೇನಾದರೂ ಮಾಡುತ್ತಿದ್ದೀರಾ? ಪ್ರತಿ ತಾಲ್ಲೂಕಿಗೆ ಕೊಡುತ್ತೀರಾ?

ಶ್ರೀ ಡಿ.ಕೆ.ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ನಮ್ಮ capacity ಯನ್ನು ನಾವು reach ಮಾಡಿದ್ದೇವೆ. ಎಷ್ಟು ಮಾಡಬೇಕೋ ಅಷ್ಟನ್ನು ಮಾಡಿದ್ದೇವೆ. ಮೊನ್ನೆ 40 ಕ್ಕೆ permission ಬಂದಿದೆ. ಅದನ್ನು reach ಮಾಡಿದ್ದೇವೆ. ಜಿ.ಎಸ್.ಪಾಟೀಲ್ ರವರು ಯಾವಗಲ್ ರವರ ಪಕ್ಕದ ಕ್ಷೇತ್ರದವರು ಅವರು Chairman ಇದ್ದಾರೆ. ಅವರು ಒಂದು ಸೋಲಾರ್ ಪಾರ್ಕಿಗೆ proposal ಕೊಟ್ಟಿದ್ದಾರೆ. ನಾವು Central Government ಗೆ ಬರೆದಿದ್ದೇವೆ. ನಮಗೆ power purchase ಮಾಡಲು consumers ಬೇಕು. ಎಷ್ಟು ಪಾರ್ಕ್ ಮಾಡಿಸುವುದಕ್ಕೂ ನಾವು ತಯಾರಿದ್ದೇನೆ. Power purchase ಮಾಡುವಂತಹ consumer ನನಗೆ ಬೇಕಲ್ಲವೆ? Consumers ಸಿಕ್ಕರೆ ಖಂಡಿತಾ ಎಲ್ಲಾ ತಾಲ್ಲೂಕುಗಳಿಗೂ add up ಮಾಡುವುದಕ್ಕೆ ತಯಾರಿದ್ದೇನೆ.

ಶ್ರೀ ಪಿ.ರಾಜೀವ್ : ಮಾನ್ಯ ಅಧ್ಯಕ್ಷರೆ, ಆಗಲೇ ನಾನು ಮತ್ತು ಲಕ್ಷ್ಮಣ ಸಂಗಪ್ಪ ಸವದಿಯವರು ವಿಷಯವನ್ನು ಪ್ರಸ್ತಾಪ ಮಾಡಿದ್ದೆವು. ರೈತರು 8-10 ಜನರು ಗುಂಪುಗೂಡಿಕೊಂಡು ಅವರು ಷೇರ್ ಹಾಕಿಕೊಂಡು ದೂರದಿಂದ ಪೈಪ್‌ಲೈನನ್ನು ತಂದರೆ ಒಂದು ಸಂಘವನ್ನು ಸೊಸೈಟಿ ಕಟ್ಟಕೊಂಡು 8-10 ಮೋಟಾರ್‌ಗಳನ್ನು ಕೂರಿಸಿದರೆ ಅದಕ್ಕೆ ಬಿಲ್ pay ಮಾಡಬೇಕೆಂದು ಎಲ್ಲಾ ESCOM ನವರು ಒತ್ತಾಯ ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಅದಕ್ಕಾಗಿ

ಸಂಘಗಳಿಂದ ಏನು lift irrigation ಮಾಡುತ್ತಾರೆ, ಅದನ್ನು waive off ಮಾಡಿ ಉಚಿತವಾಗಿ ವಿದ್ಯುತ್ ಕೊಡಬೇಕು ರೈತರಿಗೆ ಎಂದು ನಾನು ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ. ಇದಕ್ಕೆ ಉತ್ತರ ಕೊಡಲಿ ಮಾನ್ಯ ಸಚಿವರು.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನಿರಂತರ ಜ್ಯೋತಿ ಬಹಳ ತೊಂದರೆ ಕೊಡುತ್ತಿದೆ. ನಿರಂತರ ಜ್ಯೋತಿ ಆಗದೆ ನಾವು ಬಹಳ ಸಂಕಷ್ಟದಲ್ಲಿದ್ದೇವೆ. ಅದರ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ಮಾನ್ಯ ಸಚಿವರು ಎಲ್ಲವನ್ನು ಮಾಡಿದ್ದೀರಿ. ನಾನು ಇಲ್ಲವೆಂದು ಹೇಳುವುದಿಲ್ಲ. ಅದೊಂದು ಮಾಡಬೇಕು. ಅದರ ಜೊತೆಗೆ ನಮಗೆ 22 ಮೆಗಾ ವ್ಯಾಟ್ ವಿದ್ಯುತ್ ಕೊಡುತ್ತೇವೆಂದು ಹೇಳಿದ್ದೀರಿ ಧನ್ಯವಾದಗಳು. ಅದರ ಜೊತೆಗೆ ನೀವು ಬಹಳ ಪುಣ್ಯವಂತರು. ಏಕೆಂದರೆ ನಮ್ಮ ಅರಸೀಕೆರೆಗೆ 47 ಮೆಗಾ ವ್ಯಾಟ್ ಬೇಕಾಗುತ್ತದೆ. ಈಗ 22 ಆದರೆ ದಿನವೆಲ್ಲಾ ಬಳಸಬಹುದು. ಏಕೆಂದರೆ ಅಲ್ಲಿ ನೀರೇ ಇಲ್ಲ, ನೀರೆ ಇಲ್ಲದೆ ಎಲ್ಲಿಗೆ ನೀರು ಹಾಯಿಸುತ್ತಾರೆ? ಹಗಲು ರಾತ್ರಿ ವಿದ್ಯುತ್ ಬಳಕೆ ಮಾಡುತ್ತಿದ್ದವರು ರೈತರು. ನೀರಿಲ್ಲದೆ ಇರುವುದರಿಂದ 22 ಮೆಗಾ ವ್ಯಾಟ್ ಬೇಕಾದಷ್ಟು ಆಗುತ್ತದೆ. ಮೊದಲಿಗೆ ತಿಂಗಳಿಗೆ 42-50 ಮೆಗಾ ವ್ಯಾಟ್ ಸ್ಥಾಕಾಗುತ್ತಿರಲಿಲ್ಲ. ದಿವಸ ವಿದ್ಯುತ್ ಇಲ್ಲ, off ಎಂದು ಗಲಾಟೆ ಮಾಡುತ್ತಿದ್ದರು. ಟಿ.ಸಿ. ಗಳು ಅಲ್ಲಿ ಸುಟ್ಟವು, ಇಲ್ಲಿ ಸುಟ್ಟವು ಎನ್ನುತ್ತಿದ್ದರು. ಈಗ ಟಿ.ಸಿ. ಕೂಡಾ ಸುಡುವುದಿಲ್ಲ. ನೋಡಿ ಎಂತಹ ಪುಣ್ಯವಂತರು ನೀವು.

ಶ್ರೀ ಸಿ.ಎನ್.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಇಂಧನ ಸಚಿವರು ನೀಡಿರುವ ಉತ್ತರವನ್ನು ಸ್ವಾಗತಿಸುತ್ತೇವೆ. ಈಗ Power Grid Corporation India Ltd., ಅವರು ಕಾರಿಡಾರ್‌ಗೆ ಲೈನ್ ಎಳೆಯುವುದಕ್ಕೆ ಭೂ ಸ್ವಾಧೀನ ಪ್ರಕ್ರಿಯೆ ಇನ್ನೂ ಕೂಡಾ ಪೂರ್ಣಗೊಂಡಿಲ್ಲ. ಅದು ಪೂರ್ಣಗೊಂಡರೆ ಕಾರಿಡಾರ್ clear ಆದರೆ ವಿದ್ಯುತ್ ಸಂಪರ್ಕ ಸರಿಯಾಗಬಹುದೇನೋ, ರಾಜ್ಯಕ್ಕೆ ಅನುಕೂಲವಾಗುತ್ತದೆ. ಇದಕ್ಕೆ ಸಚಿವರು ಉತ್ತರ ಕೊಡಬೇಕು. ಎರಡನೆಯದಾಗಿ, ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ಮಾರ್ಚ್ ಅಂತ್ಯಕ್ಕೆ ನಮ್ಮ ವಿಧಾನಸಭಾ ಕ್ಷೇತ್ರದಲ್ಲಿ 1153 ಜನರಿಗೆ ಇನ್ನೂ ಕೂಡಾ ಅಧಿಕೃತವಾಗಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಲ್ಲ. ಆದರೆ ಹಣವನ್ನು ಪಾವತಿ

ಮಾಡಿದ್ದಾರೆ. ಆ ಬಗ್ಗೆ ಬಹುಶ: ನಮ್ಮ ಕ್ಷೇತ್ರ, ರಾಜ್ಯದಲ್ಲಿ ಯಾವ ರೀತಿ ಇದೆ ಎಂಬ ಬಗ್ಗೆ ಸಚಿವರು ಉತ್ತರ ನೀಡಬೇಕು ಎಂದು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ಪುಟ್ಟಣ್ಣಯ್ಯನವರೆ ನೀವು ಏನು ಕೇಳಬೇಕೋ ಕೇಳಿ ಬಿಡಿ. ನಂತರ ಸಚಿವರು ಅಷ್ಟಕ್ಕೂ ಉತ್ತರ ಕೊಡುತ್ತಾರೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ಸಚಿವರು ಬಹಳ ಚೆನ್ನಾಗಿ ಉತ್ತರವನ್ನು ಕೊಟ್ಟಿದ್ದಾರೆ. ಉತ್ಪಾದನೆ, ವಿತರಣೆ, ಆಡಳಿತ ತುಂಬಾ ಚೆನ್ನಾಗಿ ಮಾಡಿದ್ದೀರಿ. ಆದರೆ, ರೈತರಿಗೆ 7 ಗಂಟೆಗಳ ಕಾಲ ಹಗಲು ವೇಳೆಯಲ್ಲಿ ವಿದ್ಯುತ್ ಸರಬರಾಜು ಮಾಡಿ. ರಾತ್ರಿ ಹೊತ್ತಿನಲ್ಲಿ ವಿದ್ಯುತ್ ಕೊಟ್ಟರೆ ಕಷ್ಟವಾಗುತ್ತದೆ. ರಾತ್ರಿ ವೇಳೆಯಲ್ಲಿ ಹಾವುಗಳು ಓಡಾಡುತ್ತವೆ. ರೈತರಿಗೆ ಓಡಾಡಲು ಕಷ್ಟವಾಗುತ್ತದೆ. ಬೇರೆ industries ಗಳಿಗೆ ರಾತ್ರಿ ವೇಳೆಯಲ್ಲಿ ಕೊಟ್ಟರೆ ತೊಂದರೆಯಾಗುವುದಿಲ್ಲ. ಆದರೆ ರೈತರಿಗೆ ಹಗಲು ವೇಳೆಯಲ್ಲಿ ವಿದ್ಯುತ್ ಸರಬರಾಜು ಮಾಡಬೇಕು. ಎರಡನೆಯದಾಗಿ, ನಮ್ಮ ಮನೆಗಳಲ್ಲಿ ಸೋಲಾರ್ ಹಾಕಿಸಿಕೊಂಡಿದ್ದೇವೆ. ಇಡೀ ಸರ್ಕಾರಿ ನೌಕರರು ಎಷ್ಟು ಕುಟುಂಬಗಳಿವೆ, ಅವರೆಲ್ಲರೂ ಕಡ್ಡಾಯವಾಗಿ ಸೋಲಾರ್ ಹಾಕಿಸಿಕೊಳ್ಳುವುದಕ್ಕೆ plan ಮಾಡಿ ಸುಲಭವಾಗುತ್ತದೆ. ಏಕೆಂದರೆ ಉತ್ಪಾದನೆ ಮಾಡುವುದಕ್ಕೆ invest ಮಾಡುವುದಕ್ಕಿಂತಲೂ ಇದು ಬಹಳ ಅನುಕೂಲವಾಗುತ್ತದೆ. ಕಡಿಮೆ ದರದಲ್ಲಿ ಎಲ್ಲಾ ಮನೆಗಳಲ್ಲಿಯೂ ಉಪಯೋಗಿಸಬಹುದು. ಮೋಡ ಇದ್ದು ಮಳೆ ಬಂದಾಗ ಎರಡು ತಿಂಗಳು ಸಮಸ್ಯೆಯಾಗಬಹುದು. ಅದರ ಬಗ್ಗೆ ಗಮನ ಹರಿಸಬೇಕು. ಕೊನೆಯದಾಗಿ, ತಾವು Minor Irrigation ನವರು ಇದ್ದೀರಿ. ತಾವು ವಿದ್ಯುತ್ ಕೊಡುತ್ತೀರಿ. ನೀವು ನೀರನ್ನು ಎಲ್ಲಿಂದ ತಂದು ಕೊಡುತ್ತೀರಿ?

ಅಧ್ಯಕ್ಷರು : ಈಗ ವಿದ್ಯುತ್ ಬಗ್ಗೆ ಅಷ್ಟೇ ಮಾತನಾಡಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಜಂಟಿಯಾಗಿ ಮೀಟಿಂಗ್ ಮಾಡಿ ಎಂದು ಹೇಳುತ್ತಿದ್ದೇನೆ. ಜಾಸ್ತಿ ಮಾತನಾಡು ಎಂದರೂ ನಾನು ಮಾತನಾಡುವುದಿಲ್ಲ. ಜಂಟಿಯಾಗಿ plan ಮಾಡಿದರೆ ಒಳ್ಳೆಯದು. 1600 ಅಡಿಯಿಂದ ವಿದ್ಯುತ್ ಬಳಕೆ ಮಾಡಿದರೆ ಎಷ್ಟು ಖರ್ಚಾಗುತ್ತದೆ? ಅಂತರ್ಜಲ 35 ಅಡಿ, 50 ಅಡಿ, 100 ಅಡಿಯಲ್ಲಿ ಸಿಕ್ಕರೆ ವಿದ್ಯುತ್ ಎಷ್ಟು ಉಳಿತಾಯವಾಗುತ್ತದೆ? ನೀವು ಇಬ್ಬರೂ ಸೇರಿ plan

ಮಾಡಬೇಕು. ಅದೇ ಮುಖ್ಯ. ನೀರು ಹೆಚ್ಚು ಮೇಲ್ಭಾಗದಲ್ಲಿ ಸಿಕ್ಕಿದರೆ ವಿದ್ಯುತ್ ಉಳಿತಾಯ ಸಿಕ್ಕಾಪಟ್ಟೆಯಾಗುತ್ತದೆ. 1600 ಅಡಿಯಿಂದ ಎತ್ತಬೇಕಾದರೆ ಎಷ್ಟು ಬೇಕು ವಿದ್ಯುತ್? ದಯವಿಟ್ಟು ಇದರ ಬಗ್ಗೆ ಆಲೋಚನೆ ಮಾಡಿ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಅಧ್ಯಕ್ಷರೆ, ರಾತ್ರಿ ಹೊತ್ತು 3 ಫೇಸ್ ಲೈನ್ ಕೊಡುವುದರಿಂದ ರೈತರು ಮೋಟಾರ್ ಚಾಲು ಮಾಡಲು ಹೋಗುತ್ತಾರೆ. ಅಂತಹ ಸಂದರ್ಭದಲ್ಲಿ ಗಾಳಿ, ಮಳೆ ಮತ್ತೊಂದು ಕಾರಣದಿಂದ ಕಂಡಕ್ಟರ್‌ಗಳು ಹರಿದು ಬಿದ್ದಿರುವುದು ಗೊತ್ತಾಗುವುದಿಲ್ಲ. ರಾತ್ರಿ ವೇಳೆಯಲ್ಲಿ ಎಷ್ಟೋ ಜನರು ಅವುಗಳನ್ನು ತುಳಿದು ವಿದ್ಯುತ್ ತಗುಲಿ ಸತ್ತಿದ್ದಾರೆ. ಅಂತಹವರಿಗೆ ಪರಿಹಾರ ಕೊಡುತ್ತಿಲ್ಲ ಕೆ.ಇ.ಬಿ ಯಲ್ಲಿ. ಅಧಿಕಾರಿಗಳು ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ. ಅದಕ್ಕೆ ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ ವಿದ್ಯುತ್ ತಗುಲಿ ಸತ್ತಂತಹ ರೈತರಿಗೆ ಪರಿಹಾರ ಕೊಡಲು ಒಂದು ಕಟ್ಟುನಿಟ್ಟಿನ ಆದೇಶವನ್ನು ತಾವು ನೀಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮಾನ್ಯ ಅಧ್ಯಕ್ಷರೆ, ಇಂಧನ ಸಚಿವರ ಉತ್ತರವನ್ನು ಕೇಳಿ ನಮಗೂ ಕೂಡಾ ಸಂತೋಷವಾಗಿದೆ. ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಇನ್ನೊಂದು ಉಲ್ಲೇಖ ಮಾಡಿದರು. ನನ್ನ ಇಲಾಖೆಯಲ್ಲಿ ಯಾವುದೇ ಶಾಸಕರಿಗೆ, ಯಾವುದೇ ಪಕ್ಷದವರಿಗೆ ವ್ಯತ್ಯಾಸ ಮಾಡುವುದಿಲ್ಲ ಎಂದು ಹೇಳಿದ್ದರಲ್ಲ ಅದಕ್ಕೆ ನಾನೂ ಕೂಡಾ ಅವರಿಗೆ ಅಭಿನಂದನೆಗಳನ್ನು ಹೇಳುತ್ತೇನೆ. ನಾನು ನಿಮ್ಮಲ್ಲಿ ಒಂದು ವಿನಂತಿ ಮಾಡುತ್ತೇನೆ. ನಿಮ್ಮ ಬಲಗಡೆ ಕೂರುತ್ತಾರಲ್ಲ, ಅವರಿಗೂ ಸ್ವಲ್ಪ ಈ ವಿಚಾರವನ್ನು ತಿಳಿಸಿ. ಏಕೆಂದರೆ ಅಧಿಕಾರ, ಅಂತಸ್ತು ಯಾವುದೂ ಶಾಶ್ವತವಲ್ಲ. ಅದನ್ನು ನೀವು ಅರ್ಥ ಮಾಡಿಕೊಂಡಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಅದರ ಜೊತೆಗೆ ಪಿ.ರಾಜೀವ್ ರವರು ಮತ್ತು ನಾನು ಒಂದೇ ವಿಷಯವಾಗಿ ಕೇಳಿದೆವು. ಈಗೇನು ಗುಂಪು ಕಟ್ಟಿಕೊಂಡು lift irrigation ಮಾಡಿಕೊಂಡು ಹೋಗುತ್ತಿದ್ದೇವೆ. ಇಡೀ ರಾಜ್ಯದಲ್ಲಿ ಎಲ್ಲಾ ರೈತರಿಗೆ 10 ಹೆಚ್.ಪಿ ವರೆಗೆ ಉಚಿತವಾಗಿ ವಿದ್ಯುತ್ ಕೊಡುತ್ತಿದ್ದೀರಿ. ನಾವು ಸುಮಾರು 10-15 ಕಿ.ಮೀವರೆಗೆ ಪೈಪ್‌ಲೈನ್‌ಗಳನ್ನು ಏನು ಮಾಡಿಕೊಂಡು ಹೋಗುತ್ತೇವೆ ಅವರಿಗೆ ಗೊತ್ತಿದೆ ನೋಡಿದ್ದಾರೆ. ಅಲ್ಲಿ ಏನು ಮಾಡಬೇಕಾಗುತ್ತದೆಂದರೆ

19-06-2017

ನಮಗೆ ಒಬ್ಬರಿಗೆ workout ಆಗುವುದಿಲ್ಲ ಎಂದುಕೊಂಡು 8-10 ಸೇರಿ ಒಂದು ಸೊಸೈಟಿ ರಚನೆ ಮಾಡಿಕೊಂಡು ಪೈಪ್‌ಲೈನ್ ರಚನೆ ಮಾಡಿಕೊಂಡು ವಿದ್ಯುತ್ ಸರಬರಾಜು ಮಾಡಿಕೊಂಡು ನೀರು ತೆಗೆದುಕೊಂಡು ಹೋಗುತ್ತೇವೆ. ಬಹಳ ದಿನದಿಂದ ನಮ್ಮ ಭಾಗದ ಬೇಡಿಕೆ ಏನೆಂದರೆ, ಇಡೀ ರಾಜ್ಯದಲ್ಲಿ ಎಲ್ಲರಿಗೂ ಉಚಿತ ವಿದ್ಯುತ್ ಕೊಡುವ ಸಂದರ್ಭದಲ್ಲಿ ಇವರೇನು ಬಹಳ ಜನವಿಲ್ಲ. ಅದು ನಿಮ್ಮ ಕಾಲದಲ್ಲಿ ಆದರೆ ಅವರು ಇಡೀ ಜೀವನದಲ್ಲಿ ನಿಮ್ಮನ್ನು ಮರೆಯುವುದಿಲ್ಲ ಎಂಬ ಭಾವನೆ ನನಗಿದೆ. ವಿಶೇಷ ಪ್ರಕರಣ ಎಂದು ಪರಿಗಣಿಸಿ ಈ ರೈತರಿಗೆ ಉಚಿತವಾಗಿ ವಿದ್ಯುತ್ ಕೊಡುವುದರಲ್ಲಿ ನೀವು ಆಸಕ್ತಿ ವಹಿಸಬೇಕು. ಎರಡನೆಯದಾಗಿ, ನಾನು ಇನ್ನೊಂದು ಅವರನ್ನು ಕೇಳಿದ್ದೆ.

(ಮುಂದು. . .)

ದಿ:19-6-2017-8.40(57)-ಜೆ.ಎಲ್-ಸಿ.ಪಿ

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಮುಂದು....) :

ನಾನು ಇನ್ನೊಂದು ವಿಷಯವನ್ನು ಅವರಲ್ಲಿ ಕೇಳಿದ್ದೇನೆ. Self execution schemeನಲ್ಲಿ ನೀವೇನು ಮಾಡಿದ್ದೀರಿ ಅಲ್ಲಿ ವಿದ್ಯುತ್ ತೆಗೆದುಕೊಳ್ಳುವ ಸಂದರ್ಭದಲ್ಲಿ wire, conductor, coal ಇರಬಹುದು ನೀವು ಬಂದನಂತರ ನಿಮ್ಮ ಇಲಾಖೆಯಿಂದ ಟ್ರಾನ್ಸ್‌ಫಾರ್ಮರ್ ಕೊಡುತ್ತಿದ್ದೀರಿ ಇದಕ್ಕೆ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ರೈತರು ನಮಗೆ ಗುಣಮಟ್ಟದ ವಿದ್ಯುತ್ ಸಿಗುತ್ತದೆ, ಹೆಚ್ಚಿನ ವಿದ್ಯುತ್ ಸಿಗುತ್ತದೆಯೆಂದು ಈ ಸ್ಕೀಮ್‌ನಲ್ಲಿ ವಿದ್ಯುತ್ ತೆಗೆದುಕೊಳ್ಳುತ್ತಾರೆ. ಪ್ರಾರಂಭದಲ್ಲಿ 60 ಪೈಸೆಗೆ ಒಂದು ಯೂನಿಟ್ ಇದ್ದದ್ದು ಇವತ್ತು 2.60 ಪೈಸೆ ಆಗಿದೆ. ಬೇಡಿಕೆ ಮೇಲೆ ಮಾತನಾಡುವಾಗ ಈ ವಿಷಯವನ್ನು ಮಾತನಾಡಿದ್ದೇನೆ ಆಗ ನೀವು ಇರಲಿಲ್ಲ. ಈಗ ನೀವು ಇದ್ದೀರಿಯೆಂದು ಇನ್ನೊಂದು ಬಾರಿ ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ನೀವು ಪ್ರತಿ ಬಾರಿ ಹೆಚ್ಚು ಮಾಡುತ್ತಾ ಹೋದರೆ ರೈತರು ಅಲ್ಲಿ ಬದುಕುವುದು ಬಹಳ ಕಷ್ಟವಾಗುತ್ತದೆ. ಅದಕ್ಕೊಂದು cut off rate fix ಮಾಡಿ ಇನ್ನು ಮುಂದೆ ಹೆಚ್ಚು ಮಾಡುವುದಿಲ್ಲವೆಂಬ ಭರವಸೆಯನ್ನು ನಾಡಿನ ಜನರಿಗೆ ಕೊಡಿ.

ಅಧ್ಯಕ್ಷರು: OK, reply ಮಾಡಿ.

19-06-2017

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ರೈತರ ಮೇಲೆ ವಿದ್ಯುಚ್ಛಕ್ತಿ ಕೇಸಸ್ ತುಂಬಾ ಇದೆ ಇದನ್ನು ಬಹಳ ಬೇಗ ತೆಗೆಸಬೇಕು. ನಾವು ಹಿಂದೆ ಮಾಡಿದ ಮೀಟರ್ ಚಳುವಳಿ ಬಗ್ಗೆ ದಯವಿಟ್ಟು ಒಂದು sentence ಹೇಳಿ. ಇಡೀ ರಾಜ್ಯದ ಜನತೆಗೆ ಒಂದು ಸಂದೇಶ ಕೊಡಿ.

ಶ್ರೀ ಡಿ.ಕೆ.ಶಿವಕುಮಾರ್ (ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ಕುಮಾರಸ್ವಾಮಿಯವರು ಇಲ್ಲಿಲ್ಲ ಅವರು roof top ವಿಚಾರವನ್ನು ಪ್ರಸ್ತಾಪ ಮಾಡಿದ್ದರು ಇದರಲ್ಲಿ ಸ್ವಲ್ಪ ಗೊಂದಲವಿದೆ ಇಲ್ಲವೆಂದು ಹೇಳುವುದಿಲ್ಲ. Roof top ವಿಚಾರದಲ್ಲಿರುವ ಸಮಸ್ಯೆಯನ್ನು ಸಧ್ಯದಲ್ಲಿಯೇ sort out ಮಾಡುತ್ತೇವೆ. ಬಾಲಕೃಷ್ಣ ರವರು ಹೇಳಿರುವ Power Grid Corporation ಬಗ್ಗೆ ಜಗದೀಶ್ ಶೆಟ್ಟರ್‌ರವರು raise ಮಾಡಿದರು. ಅದಕ್ಕೆ ಕೇಂದ್ರ ಸರ್ಕಾರ ಪರಿಹಾರವನ್ನು ಕೊಡಬೇಕು, ರಾಜ್ಯ ಸರ್ಕಾರದ್ದು ನಾವು ಕೊಡಬಹುದು, ಕೇಂದ್ರ ಸರ್ಕಾರದವರು ಕೊಡುವುದು ಬಹಳ ಹಿಂಸೆ ಆಗುತ್ತಿದೆ. ಅದಕ್ಕೂ ಕೂಡ ಒಂದು ರೂಪವನ್ನು ಕೊಡುತ್ತಿದ್ದೇವೆ. ಏಕೆಂದರೆ, District Courtನಲ್ಲಿ pass ಮಾಡಿದ್ದಂತಹ award ಮೇಲೆ Piyush Goyal ರವರು ಹೈಕೋರ್ಟ್‌ಗೆ ಹೋಗಿದ್ದಾರೆ. District Court ಮಾಡಿರುವ ತೀರ್ಮಾನವನ್ನು ಅವರು ಒಪ್ಪಿಕೊಂಡರೆ ಐದು ನಿಮಿಷಕ್ಕೆ ನಮ್ಮ ರೈತರುಗಳೆಲ್ಲಾ ಒಪ್ಪಿಕೊಳ್ಳುತ್ತಾರೆ.

ಶ್ರೀ ಸಿ.ಎನ್.ಬಾಲಕೃಷ್ಣ: ಇದು ಬಹಳ ಮುಖ್ಯ ಎಂದು.

ಶ್ರೀ ಡಿ.ಕೆ.ಶಿವಕುಮಾರ್: ಇದು ನನಗೆ ಗೊತ್ತು. ನೀವು ಬೆಂಗಳೂರು ಪಕ್ಕ ಇದ್ದಿದ್ದರೆ ನಿಮಗೆ ಆ ಪರಿಸ್ಥಿತಿ ತಿಳಿಯುತ್ತಿತ್ತು. ಮೂರು ಕೋಟಿ, ನಾಲ್ಕು ಕೋಟಿ ರೂ.ಗಳು ಬೆಲೆ ಬಾಳುವ ಜಮೀನನ್ನು ಬಿಟ್ಟುಕೊಡುವುದು, ಪರಿಹಾರಕ್ಕಾಗಿ ಅವರೆಲ್ಲಾ ಬಡಿದಾಡುತ್ತಿದ್ದಾರೆ. ಶಿವಲಿಂಗೇಗೌಡರು ನಿರಂತರ ಜ್ಯೋತಿ ಬಗ್ಗೆ ಹೇಳಿದರು. ಇಡೀ ದೇಶದಲ್ಲಿ agriculture feeder ಎರಡೂ ಕೂಡ ಬೇರೆ ಬೇರೆ ಮಾಡಬೇಕೆಂಬ ಸಿಸ್ಟಂ ಈಗ ಬಂದಿದೆ. ಅದರಲ್ಲಿ ಇಡೀ ರಾಜ್ಯವನ್ನು ನಾವು cover ಮಾಡುತ್ತಿದ್ದೇವೆ. ಎಲ್ಲೆಲ್ಲಿ ಉಳಿದುಕೊಂಡಿದೆ ಅವೆಲ್ಲವನ್ನೂ ಕೂಡ ಮುಗಿಸುತ್ತೇವೆ.

ಶ್ರೀ ಕೆ.ಎಂ.ತಿಮ್ಮರಾಯಪ್ಪ: ನಿರಂತರ ಜ್ಯೋತಿಯಲ್ಲಿ farmers ಗೂ ಕೂಡ ಅನುಕೂಲ ಮಾಡಿಕೊಡಿ.

19-06-2017

ಶ್ರೀ ಡಿ.ಕೆ.ಶಿವಕುಮಾರ್: ಅಕ್ರಮ ಸಕ್ರಮದಲ್ಲಿ ನಾನು ಈಗಾಗಲೇ ಹೇಳಿದ್ದೇನೆ. 3,00,167 ಈಗಾಲೇ ಮುಗಿಸಿದ್ದೇವೆ, 1,52,000 ಬಾಕಿಯಿದೆ. ಅದಕ್ಕೆ ಈಗಾಗಲೇ 1362 ಕೋಟಿ ರೂ.ಗಳನ್ನು ಮೀಸಲಿಟ್ಟು ಟೆಂಡರ್ ಕರೆದು ಕೊಟ್ಟಿದ್ದೇವೆ. ಅದನ್ನು ಕೂಡ ನಾವು ಮಾಡುತ್ತೇವೆ.

ಶ್ರೀ ಸಿ.ಎನ್.ಬಾಲಕೃಷ್ಣ: ನಾವು ಕೇಳಿದರೆ ಇನ್ನೂ ನಮಗೆ ಬಜೆಟ್ ಕೊಟ್ಟಿಲ್ಲ, ಟೆಂಡರ್ ಕರೆದಿಲ್ಲವೆಂದು ಹೇಳುತ್ತಾರೆ.

ಶ್ರೀ ಡಿ.ಕೆ.ಶಿವಕುಮಾರ್: ಇಲ್ಲ, ಇಲ್ಲ ಯಾರ್ಯಾರು 1,000, 10,000 ರೂ.ಗಳನ್ನು ಕಟ್ಟಿದ್ದಾರೆ ಅವರುಗಳಿಗೆಲ್ಲಾ ನಾವು ಸಕ್ರಮ ಮಾಡುತ್ತೇವೆ.

ಶ್ರೀ ಸಿ.ಎನ್.ಬಾಲಕೃಷ್ಣ: ಆದಷ್ಟು ಬೇಗ ಮಾಡಿಸಿ.

ಶ್ರೀ ಡಿ.ಕೆ.ಶಿವಕುಮಾರ್: ಈಗಾಗಲೇ ಟೆಂಡರ್ ಕರೆದಿದ್ದೇವೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಈಗಾಗಲೇ ತೆಗೆದುಕೊಂಡಿದ್ದ ಮೀಟರ್ ರೀಡರ್ ಸಿಬ್ಬಂದಿಗಳನ್ನು ತೆಗೆದು ಹಾಕಿದ್ದೀರಿ. ಅವರಿಗೆ ಹೆಣ್ಣು ಕೊಟ್ಟು ಮದುವೆ ಮಾಡಿದ್ದಾರೆ ಈಗ ಅವರನ್ನು ಕೆಲಸದಿಂದ ತೆಗೆದು ಹಾಕಿದರೆ ಅವರ ಸಂಸಾರದ ಗತಿಯೇನು ಹೇಳೀ? ನಮ್ಮ ಅರಸೀಕೆರೆಯಲ್ಲಿ 12, 13 ಜನರನ್ನು ತೆಗೆದು ಹಾಕಿದ್ದಾರೆ. ಅವರು ಡಿಪ್ಲೋಮ್, ಐಟಿಐ ವ್ಯಾಸಂಗ ಮಾಡಿಕೊಂಡು 12,000 ರೂ.ಗಳಿಗೆ ಕೆಲಸ ಮಾಡುತ್ತಿದ್ದಾರೆ ಈಗ ಅವರನ್ನು ಅಕೌಂಟೆಂಟ್ ಕೆಲಸದಿಂದ ತೆಗೆದು ಹಾಕಿದ್ದಾರೆ ದಯವಿಟ್ಟು ಅವರಿಗೆ ಕೆಲಸ ಕೊಡಿ.

ಅಧ್ಯಕ್ಷರು: Consider ಮಾಡುತ್ತಾರೆ ಬಿಡಿ.

ಶ್ರೀ ಡಿ.ಕೆ.ಶಿವಕುಮಾರ್: ಸದಸ್ಯರು ಹೇಳುತ್ತಿರುವುದು ಒಂದು genuine problem ಆಗಿದೆ ನಾನು ಇಲ್ಲವೆಂದು ಹೇಳುವುದಿಲ್ಲ. Lift irrigation ವಿಚಾರದಲ್ಲಿ ತೆಗೆದುಕೊಂಡು ಮಾಡುವುದು. ಅದು ನಾವು KERC ರವರಿಗೆ ಹೇಳಿದ್ದೆವು, ನಿಮ್ಮ ಬಾರ್ಡರ್‌ನಲ್ಲಿ ಎರಡು ಮೂರು ಸೊಸೈಟಿಗೆ ಮೂರ್ನಾಕು ಕೋಟಿ ರೂ.ಗಳನ್ನು ಕಟ್ಟಬೇಕು. ಅವರೆಲ್ಲಾ ಬಂದು ಕೇಳಿಕೊಂಡರು. ಆ ರೇಟ್ ಅನ್ನು KERC ರವರು ಫಿಕ್ಸ್ ಮಾಡುವುದು, ಏಕೆಂದರೆ ನಾವು ಒಂದು ಲೆವೆಲ್‌ನಲ್ಲಿ ಕೊಡುತ್ತೇವೆ. ಅಲ್ಲಿಂದ ಅವರು add ಮಾಡಿಕೊಂಡು ಇನ್ನೊಂದು ಕಡೆ ಮಧ್ಯ ಪಂಪ್

ಮಾಡಿಕೊಂಡು ಎತ್ತಿಕೊಂಡು ಹೋಗುತ್ತಾರೆ ಈ ಸಮಸ್ಯೆಯಿದೆ ಅವರನ್ನು ಕರೆದು ಒಂದು ಸಭೆ ಮಾಡಿ sort out ಮಾಡುತ್ತೇನೆ. ಎ.ಎಸ್.ಪಾಟೀಲ್ ರವರು ಇಲ್ಲಿಲ್ಲ ಅವರು ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದರು. ಏನಾದರೂ ಸಮಸ್ಯೆಯಿದ್ದರೆ ಕಾಗದ ಕೊಡಿ ಅಧಿಕಾರಿಗಳನ್ನು ಕರೆದು ಇನ್ನೊಂದು ಸಭೆ ಮಾಡಿ ಸಹಕಾರ ಕೊಡುತ್ತೇನೆ. ಇಂದು ತಡವಾದರೂ ಕೂಡ ಇಷ್ಟು ಜನ ಶಾಸಕರು ನಮ್ಮ ವಿಚಾರವನ್ನು, ಚಿಂತನೆಯನ್ನು ಸರ್ಕಾರದ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಸಹಕಾರ ಕೊಟ್ಟಿದ್ದಾರೆ, ಬೆಂಬಲ ವ್ಯಕ್ತಪಡಿಸಿದ್ದಾರೆ ಅವರಿಗೆಲ್ಲಾ ಅಭಿನಂದನೆ ಸಲ್ಲಿಸುತ್ತೇನೆ. ಕಾರ್ಯದರ್ಶಿಯವರ ಮಟ್ಟದಿಂದ ಕೆಳ ಹಂತದವರೆಗೆ ಬಹಳ ಒಳ್ಳೆಯ ಅಧಿಕಾರಿಗಳು, committed officers ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಇಷ್ಟೆಲ್ಲಾ ಸಾಧನೆ ಮಾಡಬೇಕಾದರೆ ಅವರೆಲ್ಲರೂ ಕೂಡ ಸರ್ಕಾರದ success ಗೆ ಕಾರಣರಾಗಿದ್ದಾರೆ ಅವರಿಗೂ ಕೂಡ ತಮ್ಮ ಮುಖಾಂತರ ಅಭಿನಂದನೆ ಸಲ್ಲಿಸುತ್ತೇನೆ. ಜೊತೆಗೆ ನಿಮಗೂ ಅಭಿನಂದಿಸುತ್ತೇನೆ.

ಅಧ್ಯಕ್ಷರು: ಈಗ ಶಿಕ್ಷಣ ಇಲಾಖೆಯ reply ಅನ್ನು ಮುಗಿಸಿಬಿಡೋಣ.

ಶ್ರೀ ಎನ್.ಹೆಚ್.ಕೋನರೆಡ್ಡಿ: ನಾಳೆ ಬೆಳಿಗ್ಗೆ ಮಾಡೋಣ ಬಿಡಿ ಸಾರ್.

ಅಧ್ಯಕ್ಷರು: ಈಗ ಮುಗಿಸಿಬಿಡೋಣ. ಅವರೊಬ್ಬರದು reply ಆದರೆ ಮುಗಿಯಿತು.

ಶ್ರೀ ತನ್ವೀರ್ ಸೇಠ್: ಹತ್ತು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ.

ಅಧ್ಯಕ್ಷರು: ಆಯಿತು. ಸದನವನ್ನು ಮುಂದೂಡಿ ನಾಳೆ ಮುಂಜಾನೆ ಹತ್ತು ಗಂಟೆಗೆ ಸೇರುವುದು.

(ಸದನವು ರಾತ್ರಿ 8 ಗಂಟೆ 45 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 20-06-2017ರ ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

* * * * *

ತಿದ್ದುಪಡಿಯಾಗದ /Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು